ಕರ್ನಾಟಕದ ಮೇದ ಬುಡಕಟ್ಟಿನ ಸಮಾಜಶಾಸ್ತ್ರೀಯ ಅಧ್ಯಯನ

(ಚಿಕ್ಕಮಗಳೂರು ಜಿಲ್ಲೆ ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ



ಸಂಶೋಧಕರು

ಕೆ.ಉಮೇಶ್

ಮಾರ್ಗದರ್ಶಕರು

ಡಾ.ಚೆಲುವರಾಜು. ಎಂ.ಎ.ಪಿಎಚ್.ಡಿ

ಸಹ ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ, ಗಿರಿಸೀಮೆ

ಸಮಾಜ ವಿಜ್ಞಾನಗಳ ನಿಕಾಯ

ಬುಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೧೧

ಕರ್ನಾಟಕದ ಮೇದ ಬುಡಕಟ್ಟಿನ ಸಮಾಜಶಾಸ್ತ್ರೀಯ ಅಧ್ಯಯನ

(ಚಿಕ್ಕಮಗಳೂರು ಜಿಲ್ಲೆ ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ

ಸಂಶೋಧಕರು

ಕೆ. ಉಮೇಶ್

ಮಾರ್ಗದರ್ಶಕರು

ಡಾ. ಚೆಲುವರಾಜು

ಸಹಪ್ರಾಧ್ಯಾಪಕರು,

ಬುಡಕಟ್ಟು ಅಧ್ಯಯನ ವಿಭಾಗ

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

೨೦೧೧

ಸಂಶೋಧಕರ ಪ್ರಮಾಣ ಪತ್ರ

'ಕರ್ನಾಟಕದ ಮೇದ ಬುಡಕಟ್ಟಿನ ಸಮಾಜಶಾಸ್ತ್ರೀಯ ಅಧ್ಯಯನ' (ಚಿಕ್ಕಮಗಳೂರು ಜಿಲ್ಲೆ ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಸಂಶೋಧನಾ ಮಹಾಪ್ರಬಂಧವನ್ನು ಡಾ. ಚೆಲುವರಾಜು, ಸಹಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇತರೆ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ : ೧೨.೦೮.೨೦೧೧
ಸ್ಥಳ : ವಿದ್ಯಾರಣ್ಯ

ಕೆ. ಉಮೇಶ್
ಸಂಶೋಧಕರು
ಬುಡಕಟ್ಟು ಅಧ್ಯಯನ ವಿಭಾಗ

ಮಾರ್ಗದರ್ಶಕರ ದೃಢೀಕರಣ ಪತ್ರ

'ಕರ್ನಾಟಕದ ಮೇದ ಬುಡಕಟ್ಟಿನ ಸಮಾಜಶಾಸ್ತ್ರೀಯ ಅಧ್ಯಯನ' (ಚಿಕ್ಕಮಗಳೂರು ಜಿಲ್ಲೆ ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಅಡಿಯಲ್ಲಿ **ಕೆ. ಉಮೇಶ್** ಅವರು ಸಂಶೋಧನಾ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಇವರು ಸಮಾಜಶಾಸ್ತ್ರದ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : ೧೭/೮/೨೦೧೧.
ಸ್ಥಳ : ವಿದ್ಯಾರಣ್ಯ

(ಡಾ. ಚೆಲುವರಾಜು)
ಮಾರ್ಗದರ್ಶಕರು
ಬುಡಕಟ್ಟು ಅಧ್ಯಯನ ವಿಭಾಗ

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಅಧ್ಯಾಯ-ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಮಾನವನು ಮೂಲತಃ ಇತರೆ ಜೀವಿಗಳಂತೆ ಪರಿಸರಜೀವಿ. ಸಮಾಜಜೀವಿ ಎಂಬ ಮಾತನ್ನು ಸುಮಾರು ಎರಡು ಸಾವಿರ ವರ್ಷಗಳ ಹಿಂದೆಯೇ ಗ್ರೀಕ್‌ತತ್ವಜ್ಞಾನಿ ಅರಿಸ್ಟಾಟಲ್ ಹೇಳಿದ್ದರು. ಮಾನವ ಸಮಾಜಜೀವಿ ಮತ್ತು ಸಮೂಹಜೀವಿಯಾಗಿ ಸಾಮಾಜಿಕ ನಿಯಮಗಳ ಚೌಕಟ್ಟಿನಲ್ಲೇ ಬದುಕುವುದು ಆತನಿಗೆ ಅನಿವಾರ್ಯವಾಗಿತ್ತು. ಸಮೂಹದ ಸಹವಾಸದಿಂದ ಮಾತ್ರ ಮಾನವ ಮಾನವನಾಗಿ ಜೀವಿಸಬಲ್ಲ (Man can be man only among men). ಆತನ ಸಾಮಾಜಿಕ ನಡತೆ ಮತ್ತು ವ್ಯಕ್ತಿತ್ವವೆಂಬುದು ಸಮೂಹಗಳ ಕೊಡುಗೆಯಾಗಿದೆ. ಸಮುದಾಯದಿಂದ ಹೊರಹೊಮ್ಮಿರುವ ಹಲವು ಬಗೆಯ ಭಾಷೆ, ಸಂಸ್ಕೃತಿ, ಆಚಾರ-ವಿಚಾರಗಳಿಂದಾಗಿ ಸಮೂಹಗಳೊಂದಿಗೆ ತಮ್ಮನ್ನು ಗುರ್ತಿಸಿಕೊಳ್ಳಲು ವ್ಯಕ್ತಿಗಳಿಗೆ ಸಾಧ್ಯವಾಗಿದೆ. ಮಾನವರ ದೈನಂದಿನ ವ್ಯವಹಾರಗಳಲ್ಲಿ ಕಂಡುಬರುವ ಅಸಂಖ್ಯಾತ ಸಮೂಹಗಳೇ ಸಮಾಜ ಎಂಬ ಬೃಹತ್ ಸಂಸ್ಥೆಯನ್ನು ಸ್ಥಾಪಿಸಿಕೊಂಡಿದೆ. ಆದ್ದರಿಂದಲೇ ಸಮಾಜವೆಂದರೆ "ಸಮೂಹಗಳ ಸಮೂಹ" ಎಂದು ಕರೆಯಲ್ಪಟ್ಟಿದೆ.

ಮಾನವ ಶಾಸ್ತ್ರಜ್ಞರಾದ ಡಾ. ಥಾಮಸ್‌ಹೆನ್ರಿ ಹಕ್ಸಲಿಯವರ ಪ್ರಕಾರ 'ಮಾನವನು ಚಿಂಪಾಂಜಿ, ಗಿಬನ್, ಗೋರಿಲ್ಲಾ, ಓರಾಂಗುಟಾಂಗ್ ಅಥವ ಇತರೆ ವಾನರ ಸಮೂಹಕ್ಕೆ

ಮೂಲವಾದ ಪ್ರಾಣಿಯಿಂದಲೇ ವಿಕಾಸವಾಗಿದ್ದಾನೆ'[೧] ಎಂದು ಪ್ರತಿಪಾದಿಸಿದ್ದಾರೆ. ಹೋಮೋ ಏರೆಕ್ಟಸ್ ಮಾನವನ ಕೊನೆಯ ಆವೃತ್ತಿಯೇ ಇಂದಿನ ಮಾನವ. ಪ್ರಕೃತಿಯ ಚರಾಚರ ವಸ್ತುವಿನಲ್ಲೂ ದೈವತ್ವವನ್ನು ಕಂಡದ್ದು ಬುಡಕಟ್ಟುಗಳ ಭಯದಿಂದಾಗಿಯೇ ಎಂಬುದು ಸತ್ಯ. ಪ್ರಕೃತಿ ವಿಕೋಪ, ಕಾಡ್ಗಿಚ್ಚು, ಸೂರ್ಯೋದಯ, ಸೂರ್ಯಾಸ್ತ, ಗುಡುಗು, ಮಿಂಚು, ಮಳೆ, ಸಿಡಿಲು, ಭೂಕಂಪ, ಜ್ವಾಲಾಮುಖಿ ಇತ್ಯಾದಿಗಳಿಗೆ ಉತ್ತರ ಕಂಡುಕೊಳ್ಳಲಾರದೆ ಹಪಹಪಿಸಿದ ಕಾಡಿನ ವಾಸಿಗರು, ದೈವತ್ವದ ಮೊರೆ ಹೋಗಿ ನೆಮ್ಮದಿ ಕಂಡುಕೊಳ್ಳುತ್ತಿದ್ದುದರ ಬಗ್ಗೆ ಬುಡಕಟ್ಟು ಅಧ್ಯಯನಕಾರರು, ತತ್ವಜ್ಞಾನಿಗಳು ಹಾಗೂ ಮಾನವಶಾಸ್ತ್ರಜ್ಞರು ಪುಷ್ಠೀ ನೀಡುತ್ತಾರೆ. ಬೇಟೆಗಾರರು, ಪಶುಪಾಲಕರು ಹಾಗೂ ಕೃಷಿಕರಾಗಿ ಬೇರ್ಪಟ್ಟ ಗುಂಪುಗಳು ಕಾಡುಗಳಲ್ಲಿಯೇ ಗುಂಪು ಗುಂಪಾಗಿ ವಾಸಿಸುತ್ತಿದ್ದ ಆದಿಮಾನವರು, ಬೇಟೆ, ಸಾಮೂಹಿಕ ನೆಲೆ, ಸಾಮೂಹಿಕ ಹೋರಾಟ, ಸಾಮೂಹಿಕ ಆಹಾರ ಸಂಗ್ರಹಣೆ ಹೀಗೆ ಸಾಮೂಹಿಕವಾಗಿ ಸಮುದಾಯಗಳು ತೊಳಲಾಡುತ್ತಿವೆ. ಈ ರೀತಿ ಶೋಚನೀಯ ಜೀವನ ನಡೆಸುತ್ತಿರುವ ಮೇದ ಸಮುದಾಯವು ತಳಸ್ತರದಲ್ಲಿಯೇ ಗುರ್ತಿಸಲ್ಪಡುತ್ತದೆ.

ಈ ಸಮುದಾಯಕ್ಕೆ ರೂಪಿಸಿದ ವಿಶೇಷ ಯೋಜನೆಗಳು ಇಂದಿಗೂ ಸರಿಯಾಗಿ ತಲುಪುತ್ತಿಲ್ಲ. ಸುಮಾರು ೩೫–೪೦ ವರ್ಷಗಳಿಗೊಮ್ಮೆ ಬರುವ ಬಿದಿರಿನ ಕಟ್ಟೆರೋಗ ಇಡೀ ಬಿದಿರು ಕಾಡನ್ನೇ ಸಾಂಕ್ರಾಮಿಕವಾಗಿ ಆಕ್ರಮಿಸಿಕೊಂಡು ಬಿದಿರು ಮೆಳೆಗಳನ್ನು ಸಂಪೂರ್ಣವಾಗಿ ಒಣಗಿಸಿ ಬಿಡುತ್ತವೆ. ಬಿದಿರಿನ ಪುನರುತ್ಪಾದನೆಗೆ ಕನಿಷ್ಠ ೧೦ರಿಂದ ೧೨ ವರ್ಷಗಳು ಬೇಕು. ಈ ರೀತಿಯಾದಾಗ ಮೊದಲೇ ದಾರಿದ್ರ್ಯ ಸ್ಥಿತಿಯಲ್ಲಿರುವ ಮೇದರ ಸ್ಥಿತಿ ಮತ್ತಷ್ಟೂ ಅದೋಗತಿ ತಲುಪಿ ದಿಗ್ಮೂಢ ಸ್ಥಿತಿಯಲ್ಲಿರುವಂತೆ ಮಾಡುತ್ತಿದೆ.

ಕರ್ನಾಟಕ ರಾಜ್ಯಾದ್ಯಾಂತ ಮೇದ ಬುಡಕಟ್ಟುಗಳು ವಾಸಿಸುತ್ತಿದ್ದು, ಅಲಕ್ಷಿಸಲ್ಪಟ್ಟಿರುವ ಮೇದರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಶೈಕ್ಷಣಿಕ, ಇತರೆ ಅಂಶಗಳನ್ನು ಇದುವರೆಗೂ ಸಮಗ್ರವಾಗಿ ಅಭ್ಯಸಿಸಿರುವುದಿಲ್ಲ. ಸಮಾಜ ಕಾರ್ಯದ ಹಿನ್ನೆಯಲ್ಲಿ ಈ ಸಮುದಾಯವನ್ನು ಸೂಕ್ಷ್ಮವಾಗಿ ಅಭ್ಯಸಿಸುವ ಸಲುವಾಗಿ ಚಿಕ್ಕಮಗಳೂರು ಜಿಲ್ಲೆಯಾದ್ಯಾಂತ ವಾಸಿಸುತ್ತಿರುವ, ಪಶ್ಚಿಮ ಘಟ್ಟ ಶ್ರೇಣಿಗೆ ಅಂಟಿಕೊಂಡಿರುವ ಮಲೆನಾಡು ಪ್ರದೇಶಗಳ ಮೇದ ಬುಡಕಟ್ಟಿನವರನ್ನು ಅನುಲಕ್ಷಿಸಿ ವಿಮರ್ಶಾತ್ಮಕ ಅಧ್ಯಯನವನ್ನು ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ ಕೈಗೊಳ್ಳಲಾಗಿದೆ.

೧.೧ ಅಧ್ಯಯನದ ಉದ್ದೇಶ

ಕರ್ನಾಟಕದಲ್ಲಿ ವಾಸಿಸುತ್ತಿರುವ ಹಲವು ಬುಡಕಟ್ಟು ಮೇದರು ಒಂದು ಪ್ರಮುಖ ಬುಡಕಟ್ಟಾಗಿದೆ. ಈ ಬುಡಕಟ್ಟನ್ನು ಮೇದ, ಮೇದಾರಿ, ಬುರುಡ್, ಗೌರಿಗ ಮೇದಾರ, ಮೇದರು ಎಂದು ಕರೆಯಲಾಗುವುದು. ಸ್ಥಳೀಯವಾಗಿ ಮೇದರನ್ನು ಮ್ಯಾದ, ಮ್ಯಾದರ್, ಮ್ಯಾದ್ರಿ ಎಂದು ಉಲ್ಲೇಖಿಸಿರುವುದು ಮೇಲೆ ನಮೂದಿಸಿರುವ ಎಲ್ಲಾ ಬುಡಕಟ್ಟು ನಮೂನೆಗಳು

‘ಮೇದ’ ಪದ ನಾಮದೊಂದಿಗೆ ಐಕ್ಯವಾಗಿರುವುದು ಸಂಶೋಧನೆಯಿಂದ ಕಂಡುಕೊಂಡ ಸತ್ಯವಾಗಿದೆ. ತಮ್ಮ ವೃತ್ತಿ ಕಸುಬಿಗಾಗಿ ‘ಮೇದಾರಿಕೆ’ಯನ್ನು ಮಾಡಿ, ಜೀವನ ನಿರ್ವಹಣೆ ಮಾಡುವ ಮೇದ ಬುಡಕಟ್ಟು, ನೂರಕ್ಕೆ ನೂರರಷ್ಟು ಅವಲಂಬಿತವಾಗಿರುವುದು ಕಾಡಿಗೆ, ಕಾಡಿನಲ್ಲಿ ಸಿಗುವ ಹಸಿ ಬಿದಿರಿಗಾಗಿ. ಈ ಬಿದಿರಿನಿಂದ ಅನೇಕ ಗೃಹೋಪಯೋಗಿ ವಸ್ತುಗಳನ್ನು ತಯಾರಿಸಿ ಹಳ್ಳಿ, ಪೇಟೆ, ಸಂತೆಗಳಲ್ಲಿ ಮಾರಾಟ ಮಾಡುವ ಕಾಯಕ ಮೇದರದು. ಬದಲಾದ ವ್ಯವಸ್ಥೆಯಲ್ಲಿ ಅರಣ್ಯಗಳ ಮೇಲೆ ಸರ್ಕಾರದ ಸ್ವಾಮ್ಯ ಹೆಚ್ಚುತ್ತಾ ಹೋದಂತೆ, ಅರಣ್ಯ ರಕ್ಷಣಾ ಕಾಯಿದೆಗಳ ಸರಮಾಲೆಯೇ ಸೃಷ್ಟಿಯಾಯಿತು. ಅರಣ್ಯ ಸಂಪತ್ತನ್ನು ರಕ್ಷಿಸಿ ಬೆಳೆಸಬೇಕಾದ ಅವಶ್ಯಕತೆಯ ಬಗ್ಗೆ ಯಾರಿಗೂ ಯಾವುದೇ ಬಗೆಯ ಅನುಮಾನವಿಲ್ಲ ನಿಜ. ಆದರೆ ಅರಣ್ಯ ರಕ್ಷಣೆ ಎಂದರೆ ಅರಣ್ಯವಾಸಿಗಳನ್ನು ದಂಡಿಸಿ, ಅವರನ್ನು ಅರಣ್ಯದಿಂದ ದೂರ ಮಾಡುವುದು ಎನ್ನುವ ಸಿದ್ಧಾಂತಕ್ಕೆ ಯಾವ ಬುಡಕಟ್ಟು ಸಮ್ಮತಿಸುವುದಿಲ್ಲ. ಅರಣ್ಯವನ್ನು ಸರ್ಕಾರ ಸ್ವಯಂ ಆಸ್ತಿಯೆಂದು ಪರಿಗಣಿಸಿ, ಅದರ ಮೇಲೆ ತನ್ನ ಹಿಡಿತ ಸಾಧಿಸುತ್ತಾ ಹೋದಂತೆಲ್ಲ, ಕೇವಲ ಜೀವನ ನಿರ್ವಹಣೆಗಷ್ಟೆ ಅಲ್ಲ, ತಮ್ಮ ಇಡೀ ಸಾಂಸ್ಕೃತಿಕ ಬದುಕಿನ ಆಧಾರವೆಂದು ಮೂಲ ನಿವಾಸಿಗಳು ಪರಿಗಣಿಸಿದ್ದ ಅರಣ್ಯದ ಮೇಲಿನ ಅವರ ಹಕ್ಕುಗಳು ಕಳಚಿಕೊಳ್ಳತೊಡಗಿದವು.

ಬ್ರಿಟೀಷ್ ಆಳ್ವಿಕೆಯ ಅವಧಿಯಲ್ಲಂತೂ ಪಶ್ಚಿಮ ಘಟ್ಟಗಳಲ್ಲಿ ಹುಲುಸಾಗಿ ಬೆಳೆದಿದ್ದ ಹೆಚ್ಚು ಬೆಲೆ ಬಾಳುವಂತಹ ಮರಗಳ ಮಾರಣ ಹೋಮವನ್ನು ಯಾರು ತಡೆಯಲು ಸಾಧ್ಯವೇ ಇರಲಿಲ್ಲ. ಹಾಗೊಮ್ಮೆ ತಡೆಯುವ ಪ್ರಯತ್ನ ಬುಡಕಟ್ಟು ವಾಸಿಗಳಿಂದ ನಡೆದಿದ್ದರೂ, ಅವರನ್ನು ಬಂದೂಕಿನ ತುದಿಯಿಂದ ಆತಂಕಕ್ಕೀಡು ಮಾಡುತ್ತಿದ್ದರು. ಇಲ್ಲವೇ ನಿರ್ದಾಕ್ಷಿಣ್ಯವಾಗಿ ಕೊಲ್ಲುತ್ತಿದ್ದರು ಅಥವಾ ‘ಅಪರಾಧಿ ಬುಡಕಟ್ಟು’ಗಳೆಂದು ನಾಮಾಂಕಿತ ಮಾಡಿ, ಜೀವನ ಪರ್ಯಂತ ಕ್ಷುದ್ರ ಬದುಕಿಗೆ ತಳ್ಳುತ್ತಿದ್ದರು. ಸ್ವಾತಂತ್ರ್ಯ ನಂತರದಲ್ಲಿ ಸರ್ಕಾರದ ‘ಅಭಿವೃದ್ಧಿ’ ಮಂತ್ರ ಜಪದಿಂದ ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ಸಾಮಗ್ರಿಗಳು, ದೊಡ್ಡ ದೊಡ್ಡ ಮರಗಳು, ಕಾಗದದ ಕಾರ್ಖಾನೆಗೆ ಬಿದಿರು, ವೈವಿದ್ಯಮಯ ಗಣಿಗಾರಿಕೆ, ಬೃಹತ್ ತೋಟಗಳ ನಿರ್ಮಾಣ, ಕೃಷಿ ಯೋಗ್ಯ ಭೂಮಿಯನ್ನಾಗಿ ವಿಸ್ತರಿಸುವುದು, ಅಣೆಕಟ್ಟುಗಳ ನಿರ್ಮಾಣ, ರಾಷ್ಟ್ರೀಯ ಉದ್ಯಾನ ವನ, ಗೇಮ್ ಏರಿಯ (ವನ್ಯ ಜೀವಿ ತಾಣ) ರೆಸಾರ್ಟ್ ಇತ್ಯಾದಿ ಅನೇಕ ಹೆಸರುಗಳಿಂದ ಅರಣ್ಯ ಪ್ರದೇಶಗಳ ಆಕ್ರಮಣ ಮತ್ತು ನಾಶಗಳು ನಿರಂತರವಾಗಿ ಮುಂದುವರೆದವು. ಬಂಡವಾಳಶಾಹಿ ವರ್ಗ, ಅರಣ್ಯದ ಒಡೆತನ, ಅರಣ್ಯ ಉತ್ಪನ್ನಗಳನ್ನು ತಮ್ಮ ಸುಪರ್ದಿಗೆ ತಂದುಕೊಳ್ಳುವಲ್ಲಿ ಯಶಸ್ವಿಯಾದವು. ಗುತ್ತಿಗೆದಾರರು ಮತ್ತು ಸರ್ಕಾರದ ನಡುವೆ ಅನೇಕ ಒಳ ಒಪ್ಪಂದಗಳಿಂದಾಗಿ ಕಾಡಿನ ಮಕ್ಕಳ ಹೊಟ್ಟೆಯ ಮೇಲೆ ತಣ್ಣೀರು ಬಟ್ಟೆ ಹೊದಿಸುವ ಹುನ್ನಾರ ವ್ಯಾಪಕವಾಗತೊಡಗಿದವು. ಇಂತಹ ವ್ಯವಸ್ಥಿತ ಪ್ರಕ್ರಿಯೆಯಿಂದ ಅನೇಕ ಬುಡಕಟ್ಟುಗಳು ದಿಗ್ಮೂಢತೆಯಿಂದ ದಿಕ್ಕಾಪಾಲಾಗಿ ಓಡಿಹೋದವು.

ಸುರಕ್ಷಿತತೆವಿರಬಹುದೇನೋ ಎಂಬ ಭರವಸೆಯೊಂದಿಗೆ ಬೇರೆ ಪ್ರದೇಶಕ್ಕೆ ಸ್ಥಳಾಂತರಗೊಂಡರು. ಅಲ್ಲಿಯೂ ಇಂತಹದೇ ಅರಣ್ಯ ಕಾಯ್ದೆಗಳು ಬೆನ್ನುಹತ್ತುತ್ತವೆ ಎಂದು ಊಹಿಸಿರಲಿಲ್ಲ. ಬದುಕನ್ನೆಲ್ಲ ಕಳಚಿಕೊಂಡ ಅರಣ್ಯವಾಸಿ ಬುಡಕಟ್ಟುಗಳು ಹಲವು ಘಟ್ಟಗಳನ್ನು ದಾಟಿ ಕಾಡಿನ ಅಂಚಿಗೋ, ಹಳ್ಳಿಯ ಬದುಕಿಗೋ, ಪಟ್ಟಣದ ಅಂಚಿಗೋ ಆತುಕೊಳ್ಳುವ ಅನಿವಾರ್ಯತೆಯಿಂದ ಬದುಕು ಕಟ್ಟಿಕೊಳ್ಳಲು ಹಪಹಪಿಸುತ್ತಾನೆ. ಕೆಲವು ಸಮುದಾಯಗಳು ಕಾಡಿನಲ್ಲಿಯೇ ಉಳಿದು ಹಳ್ಳಿ-ಪಟ್ಟಣ ವಾಸಿಗಳಿಗಿಂತ ಭಿನ್ನ ಮತ್ತು ಪ್ರತ್ಯೇಕ ಜೀವನ ರೂಢಿಸಿಕೊಂಡು ಬದುಕುತ್ತಾ ಬಂದವು. ಇಂತಹ ಸಮುದಾಯಗಳು ಇತ್ತೀಚಿಗೆ ಕಾಡು-ನಾಡುಗಳ ಮಧ್ಯೆ ಹಾಗೂ ನಾಡುಗಳಲ್ಲಿ ವಾಸಿಸುತ್ತಿದ್ದರೂ ತಮ್ಮ ಮೂಲ ಸಂಸ್ಕೃತಿಯ ಮೌಲ್ಯಗಳನ್ನು ಜೀವಂತವಾಗಿ ಉಳಿಸಿಕೊಂಡಿರುವರು. ಇವರ ಮೇಲೆ ಪರಿವರ್ತಿತ ಸಮುದಾಯಗಳ ಸಾಂಸ್ಕೃತಿಕ ಪ್ರಭಾವವಾಗಿದ್ದರೂ ತಮ್ಮ ಮೂಲ ಸಂಸ್ಕೃತಿಯ ನೆಲೆಗಟ್ಟಿನ ಮೇಲೆಯೇ ಇವರು ಬದುಕುತ್ತಿದ್ದಾರೆ. ಇಂತಹ ಅನೇಕ ಸಮುದಾಯಗಳು ಜಗತ್ತಿನ ಎಲ್ಲಾ ದೇಶದಲ್ಲೂ ಕಂಡುಬರುತ್ತವೆ. ಭಾರತ ಬಹು ಸಂಸ್ಕೃತಿಯ, ಭಾಷೆಯ, ಧರ್ಮದ ನೆಲೆವೀಡಾಗಿದ್ದು, ದೇಶದಾದ್ಯಂತ ಸಾವಿರಾರು ಬುಡಕಟ್ಟುಗಳು ನೆಲೆಕಂಡುಕೊಂಡಿವೆ. ಈ ಬುಡಕಟ್ಟು ಸಮುದಾಯಗಳು ತಮ್ಮದೇ ಆದ ವಿಶಿಷ್ಠ ಬಗೆಯ ಭಾಷೆ ಜೀವನದ ಕ್ರಮವನ್ನು ರೂಢಿಸಿಕೊಂಡಿವೆ. ಎಲ್ಲಾ ಸಮುದಾಯಗಳ ಬದುಕು ಒಂದೇ ಎನಿಸಿದರೂ, ಆಂತರ್ಯದಲ್ಲಿ ಸಾಕಷ್ಟು ವಿಭಿನ್ನತೆ ಕಂಡುಬರುತ್ತದೆ.

, ಈ ರೀತಿಯ ವಿಶೇಷ-ವಿಚಿತ್ರತೆಗಳಿಂದ ಕೂಡಿರುವ ಬುಡಕಟ್ಟುಗಳ ವಾಸ್ತವ ಸ್ಥಿತಿ-ಗತಿಗಳನ್ನು ಸಂಶೋಧನಾತ್ಮಕ ದೃಷ್ಟಿಯಿಂದ ಅಧ್ಯಯನಿಸುವ ಜವಾಬ್ದಾರಿಯನ್ನು ಕರ್ನಾಟಕದಲ್ಲಿ ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಬುಡಕಟ್ಟು ಅಧ್ಯಯನ ವಿಭಾಗವು ನಿರ್ವಹಿಸುತ್ತಾ ಬಂದಿದೆ. ಕರ್ನಾಟಕದಲ್ಲಿ ಇದುವರೆಗೂ ಪೂರ್ಣ ಪ್ರಮಾಣದ ಬುಡಕಟ್ಟು ಸಮುದಾಯ, ಅಲಕ್ಷಿತ ಸಮುದಾಯ ಹಾಗೂ ತಳ ಸಮುದಾಯದ ಅಧ್ಯಯನ, ಅಂತರ್‌ಶಿಸ್ತೀಯ ಅಧ್ಯಯನವು ನಡೆದಿರಲಿಲ್ಲ. ಆದರೆ ಬುಡಕಟ್ಟು ಅಧ್ಯಯನ ವಿಭಾಗವು ಈ ಎಲ್ಲಾ ಕೊರತೆಗಳನ್ನು ನೀಗಿಸುವಲ್ಲಿ ಮಹತ್ವದ ಸಂಶೋಧನಾ ಹೆಜ್ಜೆ ಗುರುತುಗಳನ್ನು ಮೂಡಿಸುತ್ತಿರುವುದು ಸ್ತುತ್ಯರ್ಹವಾದುದು. ,

ಎಂ.ಎನ್. ಶ್ರೀನಿವಾಸ್‌ರವರ ಸಂಸ್ಕೃತೀಕರಣ' ಪ್ರಕ್ರಿಯೆಯ ಕಲ್ಪನೆಯಂತೆ ಮೇಲ್ವರ್ಗದ ಸಂಸ್ಕೃತಿಯ ಸೆಳವಿನಲ್ಲಿ, ಕೆಳವರ್ಗದವರ ಪಾರಂಪರಿಕ ಮೌಲ್ಯಗಳು ಕೊಚ್ಚಿ ಹೋಗುತ್ತಿವೆ. ಈ ವಿದ್ಯಾಮಾನಕ್ಕೆ ಬುಡಕಟ್ಟುಗಳೂ ಒಳಗಾಗುತ್ತಿರುವುದು ಶೋಚನೀಯ. ಕಾರಣ ಬುಡಕಟ್ಟು ಸಮುದಾಯಗಳ ಸಂಸ್ಕೃತಿಯು ಅತ್ಯಂತ ಸ್ವಾಭಾವಿಕ, ಹೆಚ್ಚು ದೀರ್ಘಕಾಲ ಬಾಳಿಕೆ ಬರುವಂತಹದು ಎಂಬ ವೆರಿಯರ್ ಎಲ್ವಿನ್‌ರ ಅಭಿಪ್ರಾಯ ಸತ್ಯ. ಬುಡಕಟ್ಟು

ಸಮುದಾಯಗಳ ಸಂಸ್ಕೃತಿಯಲ್ಲಿ ಜೀವಂತಿಕೆಯನ್ನು ವಿಸ್ತರಿಸುವುದರಿಂದ ಈ ಸಮುದಾಯಗಳು ಕಾಲಚಕ್ರದಲ್ಲಿ ಮುಳುಗಿ ಹೋಗುವುದನ್ನು ನಿಲ್ಲಿಸಬಹುದು. ಆದರೆ ಬದಲಾವಣೆ ಪ್ರಕ್ರಿಯೆ ಅನಿವಾರ್ಯವಾಗಿದ್ದು, ಸಂಸ್ಕೃತಿಯ ಕೆಲವು ಮಜಲುಗಳು ಬದಲಾಣೆಗೆ ಒಳಪಡುತ್ತಿವೆ ಎಂಬುದು ಸತ್ಯವಾದರೂ ಬುಡಕಟ್ಟಿಗರ ಮೂಲ ಮೌಲ್ಯಗಳು ಮಾತ್ರ ಗಟ್ಟಿಯಾಗಿ ನಿಂತವು.

ಕೈಗಾರೀಕರಣ ಪ್ರಕ್ರಿಯೆಯು ೧೭–೧೮ನೇ ಶತಮಾನದಲ್ಲಿ ಪ್ರವರ್ಧಮಾನ ಸ್ಥಿತಿ ತಲುಪಿತು. ಜನಸಂಖ್ಯಾ ಸ್ಫೋಟದಿಂದ ದೈನಂದಿನ ಅವಶ್ಯಕತೆಗಳ ಉತ್ಪಾದನೆ ಮತ್ತು ವಿತರಣೆಗೆ ಹೊಸ ಔದ್ಯೋಗೀಕರಣ ಮತ್ತು ಉತ್ಪಾದನಾ ತಂತ್ರಗಳನ್ನು ಕಂಡು ಹಿಡಿಯಲಾಯಿತು. ತತ್ಫಲವಾಗಿ ದೊಡ್ಡ ದೊಡ್ಡ ಯಂತ್ರೋಪಕರಣಗಳು, ಬೃಹತ್ ಪ್ರಮಾಣದ ಕಚ್ಚಾ ಪದಾರ್ಥಗಳನ್ನು ಬಳಸಿ ಮಾರುಕಟ್ಟೆಯನ್ನು ವಿಸ್ತರಿಸಿಕೊಂಡಿದ್ದು, ಪಾರಂಪರಿಕ ವೃತ್ತಿ ಕಸಬುಗಳಿಗೆ ಕೊಡಲಿ ಪೆಟ್ಟು ಬಿದ್ದಿತು. ಕಾಡಿನ ಅವಲಂಬನೆ ಕಾರ್ಖಾನೆಗಳಿಗೆ ಹೆಚ್ಚಾಗತೊಡಗಿದಂತೆ ಕಾಡಿನ ನಾಶವಾಗುತ್ತಿದ್ದಂತೆ ವಿಚಲಿತವಾಗತೊಡಗಿದರು. ಇದರಿಂದ ಬುಡಕಟ್ಟಿಗರ ವಲಸೆ ತೀವ್ರವಾಗತೊಡಗಿತು. ಇದರ ರಕ್ಷಣೆ ಮತ್ತು ಜೀವನದ ಪುನರ್ ನಿರ್ಮಾಣ ಹೆಸರಿನಲ್ಲಿ ಅನೇಕ ಸರ್ಕಾರಿ ಮತ್ತು ಸರ್ಕಾರೇತರ ಕಾರ್ಯಕ್ರಮಗಳು ಅನುಷ್ಠಾನಗೊಂಡವು. ಅಭಿವೃದ್ಧಿಯ ಜೊತೆಗೆ ಮಾನವನ ಬೌದ್ಧಿಕ ವಿಕಾಸ ಮತ್ತು ಸಾಂಸ್ಕೃತಿಕ ಅನನ್ಯತೆಯನ್ನು ಬೆಳಸಿ ಉಳಿಸುವುದು ಆಧುನಿಕತೆಯ ಮೂಲ ಮಂತ್ರವಾಗಬೇಕು.

ಮೇದರು ತಯಾರಿಸುವ ಬಿದಿರಿನ ಉತ್ಪನ್ನಗಳು ನಿತ್ಯ ಜೀವನದ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ಕೃಷಿ ಹಾಗೂ ವಾಣಿಜ್ಯದಂತಹ ಕ್ಷೇತ್ರಗಳಿಗೆ ಮಾನವನಿಗೆ ಬಹು ಉಪಯೋಗಿಯಾಗಿವೆ. ಮಾನವನ ಹುಟ್ಟಿನಿಂದ ಸಾವಿನವರೆಗೂ, ಮೇದರು ತಯಾರಿಸಿದ ಬಿದಿರಿನ ವಸ್ತುಗಳು ಹಾಗೂ ಬಿದಿರು ಬಳಕೆಯಾಗುತ್ತವೆ. ಕೆಲವು ಸಂಪ್ರದಾಯಬದ್ಧ ಸಮುದಾಯದವರು ನವಜಾತ ಶಿಶುವನ್ನು ಸಂಪ್ರದಾಯದಂತೆ ಮೊರದಲ್ಲಿ ಹಾಕುವುದರಿಂದ ಹಿಡಿದು, ಸಾವಿನ ನಂತರ ಬಿದಿರಿನ ಚಟ್ಟದವರೆಗೂ ಸಾರಣೀಕೃತ ಮೇದಾರಿಕೆಯ ಉತ್ಪನ್ನಗಳನ್ನು ಬಳಸುತ್ತಿರುವುದು ಸಾಂಸ್ಕೃತಿಕ ಅನನ್ಯತೆಯನ್ನು ಎತ್ತಿ ಹಿಡಿಯುತ್ತದೆ. ಮೇದಾರಿಕೆ ಒಂದು ಗುಡಿ ಕೈಗಾರಿಕೆಯಲ್ಲಿ ಅರಳುವ ಕರಕುಶಲ ಅಭಿವ್ಯಕ್ತಿಯಾಗಿದೆ. ಮೇದಾರರ ಕೈಯಿಂದ ತರಾವರಿ ಬಿದಿರಿನ ಉತ್ಪನ್ನಗಳು ತಯಾರಾಗುತ್ತವೆ. ಇವು ಮನಮೋಹಕವೂ, ವಿಸ್ಮಯನ್ನುಂಟು ಮಾಡುವಂತಹವು. ವಿವಿಧ ಗೃಹ ಕೈಗಾರಿಕೆಗಳು ಭಾರತದ ಹಲವಾರು ಬುಡಕಟ್ಟು ಸಮುದಾಯಗಳ ಜೀವನ ಆಶ್ರಯಗಳಾಗಿವೆ. ಇಂತಹ ಸಮುದಾಯ ಮತ್ತು ಅವರ ಬುಡಕಟ್ಟು ಕಸುಬುಗಳ ಕುರಿತಾಗಿ ಅಧ್ಯಯನಗಳು ನಡೆದಿವೆ. ಹೊಸ ತಂತ್ರಜ್ಞಾನ, ವಿಚಾರ, ಶಿಕ್ಷಣ, ಪ್ರಸಾರ ಮತ್ತು ಆಧುನೀಕತೆಯನ್ನು ಪ್ರತಿಯೊಂದು ಪಾರಂಪರಿಕ ಸಮುದಾಯಗಳೂ ಒಪ್ಪಿ ಅಳವಡಿಸಿಕೊಳ್ಳುವುದು ಅವಶ್ಯ ಮತ್ತು ಅನಿವಾರ್ಯವಾಗಿದೆ. ಏಕೆಂದರೆ ಪಾರಂಪರಿಕ ಸಮುದಾಯಗಳು ಅವುಗಳ

ಸಾಹಿತ್ಯ, ಭಾಷೆ, ಸಂಸ್ಕೃತಿ ಮತ್ತು ಚರಿತ್ರೆಯನ್ನು ಜಗತ್ತಿನ ಅನುಭವಗಳಿಗೆ ಪರಿಚಯಿಸುವುದರ ಮೂಲಕ ಅವುಗಳನ್ನು ಪೋಷಿಸಿ ಬೆಳೆಸಿಕೊಳ್ಳಬಹುದಾಗಿದೆ. ಇಲ್ಲವಾದರೆ ಭಾರತದ ಬಹುರೂಪಿ ಸಂಸ್ಕೃತಿಯ ಮೂಲವಾದ ಬುಡಕಟ್ಟು ಸಮುದಾಯದ ಅನನ್ಯ ಸಂಸ್ಕೃತಿಯ ಭಾಷ್ಪೀಕರಣದ ಬಗ್ಗೆ ಭಯ ಮೂಡುತ್ತದೆ. (ಆಧುನಿಕತೆಯ ಅಬ್ಬರದ ನಡುವೆಯೂ) ತನ್ನ ಗಟ್ಟಿ ಮೌಲ್ಯ ಹಾಗೂ (ಕುಲಕಸುಬನ್ನು ಜೀವಂತವಾಗಿರಿಸಿಕೊಂಡಿರುವ) ಮೇದರು ತಮ್ಮ ಮೇದಾರಿಕೆಯನ್ನು ಯಾವ ದಿಕ್ಕಿನಲ್ಲಿ ಕೊಂಡೋಯ್ಯುತ್ತಾರೆಂಬ ಯಕ್ಷ ಪ್ರಶ್ನೆಗೆ ಉತ್ತರ ಹುಡುಕುವ ಪ್ರಯತ್ನ ಈ ಸಂಶೋಧನೆಯಲ್ಲಿ ಅಡಕವಾಗಿ, ಇವೆಲ್ಲವುಗಳ ಜೊತೆಗೆ ಮುಖ್ಯವಾಗಿ ಗುರ್ತಿಸಲ್ಪಡುವ **ಉದ್ದೇಶ**ಗಳನ್ನು ಈ ಕೆಳಗಿನಂತೆ ನಮೂದಿಸಲಾಗಿದೆ.

೧. ಮೇದ ಬುಡಕಟ್ಟು ಸಮುದಾಯದ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ ಹಾಗೂ ರಾಜಕೀಯ ಜೀವನ ಕ್ರಮಗಳನ್ನು ಅಧ್ಯಯನ ಮಾಡುವುದು.

೨. ಮೇದ ಬುಡಕಟ್ಟು ಸಮುದಾಯದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಹಾಗೂ ರಾಜಕೀಯ ಸ್ಥಿತ್ಯಂತರಗಳನ್ನು ಅರಿಯಲು ಮೂಲ ಮಾಹಿತಿಗಳನ್ನು ಸಂಗ್ರಹಿಸುವುದು.

೩. ಮೇದರ ಸಮಕಾಲೀನ ಸಮಸ್ಯೆ-ಸವಾಲುಗಳು ಹಾಗೂ ಮೀಸಲಾತಿಯನ್ನು ತಿಳಿಯುವುದು.

೧.೨ ಅಧ್ಯಯನದ ಮಹತ್ವ

ಕರ್ನಾಟಕ ರಾಜ್ಯಾದ್ಯಂತ ಹರಡಿ ನೆಲೆಸಿರುವ ಮೇದ ಬುಡಕಟ್ಟಿನ ಕುರಿತು ಇದುವರೆಗೆ ಕೆಲವೇ ಕೆಲವು ಅಧ್ಯಯನಗಳು ನಡೆದಿವೆ. ಕೆಲವು ಅಧ್ಯಯನಗಳು ಕೇವಲ ಮಾಹಿತಿಗಾಗಿಯಷ್ಟೇ ನಡೆದಿವೆ ಎನ್ನಬಹುದು. ಸಂಶೋಧನಾತ್ಮಕ ಹುಡುಕಾಟ ಬಹಳ ಕ್ಷೀಣವೆಂದರೂ ತಪ್ಪೇನಿಲ್ಲ. ಒಟ್ಟಾರೆ ಈಗಾಗಲೇ ನಡೆದಿರುವ ಅಧ್ಯಯನಗಳು ಸುದೀರ್ಘ ವಿಶೇಷತೆಯನ್ನು ಒಳಗೊಂಡಿಲ್ಲ ಮತ್ತು ಸಮಾಜಶಾಸ್ತ್ರೀಯ ದೃಷ್ಠಿಕೋನದಲ್ಲಿ ಅಧ್ಯಯನ ಮಾಡಲಾಗಿಲ್ಲ. ಮೇದ ಸಮುದಾಯವು ವಿಶಿಷ್ಠ ಸಾಂಸ್ಕೃತಿಕ ವೃತ್ತಿ ಕಸುಬಿನ ಪರಂಪರೆಯನ್ನು ಹೊಂದಿರುವುದಾದರೂ, ಇದುವರೆಗೆ ಸತ್ಯಾಂಶಗಳ ಅಧ್ಯಯನವು ವೈಜ್ಞಾನಿಕ ನೆಲೆಗಟ್ಟಿನಲ್ಲಿ ಕ್ಷೇತ್ರಕಾರ್ಯದ ಮೂಲಕ ನಡೆದಿರುವುದು ಬಹಳ ಅಪರೂಪವೆನ್ನಬಹುದು. ಮೇದ ಬುಡಕಟ್ಟು ಪರಂಪರೆ, ಸಾಮಾಜಿಕ ಜೀವನದ ಸ್ಥಿತಿ-ಗತಿಗಳು, ಆರ್ಥಿಕ ಸ್ಥಿತಿ-ಗತಿಗಳು, ರಾಜಕೀಯ ಜೀವನದ ಸ್ವರೂಪ, ಧಾರ್ಮಿಕ ಜೀವನ, ಸಂಪ್ರದಾಯಗಳು, ಆಚರಣೆಗಳು, ನಂಬಿಕೆಗಳು ಇತ್ಯಾದಿ ವಿಷಯಗಳು ಅಧ್ಯಯದ ದೃಷ್ಠಿಯಿಂದ ಮಹತ್ವ ಪಡೆಯುತ್ತದೆ.

ಚಿಕ್ಕಮಗಳೂರು ಜಿಲ್ಲೆಯಾದ್ಯಂತ ವಿಶೇಷವಾಗಿ ಮಲೆನಾಡು ಪ್ರದೇಶದ ಸೆರಗಿನ, ಗುಡ್ಡ-ಗಾಡು ಪ್ರದೇಶ, ಕಾಡಿಗೆ ಅಂಟಿಕೊಂಡಿರುವ ಹಳ್ಳಿ ಪ್ರದೇಶಗಳಲ್ಲಿ ಮೇದರ ನೆಲೆಗಳು ಹೆಚ್ಚಾಗಿರುವುವು. ಇವರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ, ಔದ್ಯೋಗಿಕ, ಸಾಂಸ್ಕೃತಿ, ರಾಜಕೀಯ ಇತ್ಯಾದಿ ಅಂಶಗಳನ್ನು ಅಭ್ಯಸಿಸದೆ ಉಪೇಕ್ಷಿಸಲ್ಪಟ್ಟಿದ್ದರಿಂದ ವಿಶೇಷ ಬುಡಕಟ್ಟುವಿನ

ಬಗ್ಗೆ ವಾಸ್ತವಾಂಶಗಳ ಮೇಲೆ ಬೆಳಕು ಚೆಲ್ಲಲು ಈ ಸಂಶೋಧನೆ ಸಹಾಯಕವಾಗಿದೆ. ಸಾಮಾಜಿಕ ಬದಲಾವಣೆಯ ಪ್ರಕ್ರಿಯೆ ಇಡೀ ಪ್ರಪಂಚವನ್ನೇ ಆವರಿಸಿಕೊಂಡಿರುವಾಗ, ಮೇದರ ಬದುಕಿನಲ್ಲೂ ಅನೇಕ ಸ್ಥಿತ್ಯಂತರಗಳು ಕಂಡುಬರುತ್ತಿವೆ. ಇವರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ, ಶೈಕ್ಷಣಿಕ ವರ್ತುಲಗಳಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗುರ್ತಿಸುವುದರಿಂದ ಈ ಅಧ್ಯಯನದ ಮಹತ್ವ ಹೆಚ್ಚಿದೆ.

ಮೇದರ ಸಾಕ್ಷರತೆ ಪ್ರಮಾಣವೇ ಅತ್ಯಂತ ಕಡಿಮೆ ಮಟ್ಟದಲ್ಲಿದೆ. ಒಂದೆರಡು ತಲೆಮಾರಿನ ಹಿಂದಕ್ಕೆ ಹೋದರೆ ಸಾಕ್ಷರತೆ ಮತ್ತಷ್ಟೂ ಕ್ಷೀಣವಾಗಿದೆ. ಆದರೆ ಈ ವೃತ್ತಿ ಬದುಕಿನ ಕಷ್ಟಕೋಟಲೆಗೆ ಬೇಸತ್ತಿರುವ ಮೇದರು ತಾವು ಅವಿದ್ಯಾವಂತರಾಗಿದ್ದರೂ, ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸವನ್ನು ನೀಡುವ ದಾವಂತದಲ್ಲಿರುವುದು ನಾಗರೀಕ ಸಮಾಜದ ಹೆಗ್ಗುರುತಾಗಿದೆ. ಈ ಸಮುದಾಯದಲ್ಲಿ ಬಹಳಷ್ಟು ಜನರು ಕಡುಬಡವರು. ಹೀಗಾಗಿ ಆರ್ಥಿಕವಾಗಿ ಹಿಂದುಳಿದಿರುವುದರಿಂದ ಉನ್ನತ ಶಿಕ್ಷಣ ಕೊಡಿಸುವ ಸ್ಥಿತಿಯಲ್ಲಿ ಇಲ್ಲದ ಮೇದರು ತಮ್ಮ ಮಕ್ಕಳಿಗೆ ಸಾಮಾನ್ಯ ಶಿಕ್ಷಣವನ್ನು ಕೊಡಿಸುತ್ತಿದ್ದಾರೆ. ಚಿಕ್ಕಮಗಳೂರು ಜಿಲ್ಲೆಗೆ ಸಮೀಪ ಮಂಗಳೂರು, ಹಾಸನ, ಶಿವಮೊಗ್ಗ, ಉಡಪಿ ಜಿಲ್ಲೆಗಳಿದ್ದು, ಈ ಜಿಲ್ಲೆಗಳಲ್ಲಿ ಪ್ರತಿಷ್ಠಿತ ಕಾಲೇಜುಗಳಿದ್ದರೂ ಇಲ್ಲಿ ಮೇದರ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿರುವುದು ತೀರಾ ಕಡಿಮೆ. ಇದಕ್ಕೆ ಏನು ಕಾರಣಗಳು ಎಂಬುದನ್ನು ತಿಳಿಯುವ ನಿಟ್ಟಿನಲ್ಲಿ ಈ ಸಂಶೋಧನೆಯು ಮಹತ್ವದ್ದಾಗಿದೆ.

ಮೇದರ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳು ಗ್ರಾಮ ಮತ್ತು ನಗರಗಳಲ್ಲಿ ಒಂದೇ ರೀತಿ ಇರುವುದಿಲ್ಲ. ಮೇದರ ಓಣಿಗಳಲ್ಲಿ ಸಂಪ್ರದಾಯಗಳು ಇನ್ನೂ ಹೆಪ್ಪುಗಟ್ಟಿವೆ. ಇವರ ಆಚಾರ–ವಿಚಾರ, ನಂಬಿಕೆ, ಆಚರಣೆಗಳು ಮುಕ್ಕಾಗದಂತೆ ಸಾಂಗವಾಗಿ ನಡೆಯುತ್ತಿದೆ. ಬಲಿ ದೇವತೆಗಳ ಆರಾಧನೆ ವಿಶೇಷವಾಗಿ ನಡೆದಿವೆ. ಅದೇ ಮೇದರು ಪಟ್ಟಣ ವಾಸಿಗಳಾಗಿರುವವರೂ ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಬದುಕನ್ನು ನಡೆಸುತ್ತಿದ್ದರೂ, ಮೇದರ ಓಣಿಯ ಬದುಕಿನಿಂದ ಪ್ರಭಾವಿತರಾಗಿರುವುದು ಕಾಣಬಹುದು. ತಮ್ಮ ಆಚರಣೆಯ ಮೂಲ ಸೆಲೆಗೆ ಒಳಗಾಗಿರುವ ಮೇದರು ಹಳ್ಳಿ, ಪಟ್ಟಣಗಳಿಂದ ಏಕೆ? ಸಾಮ್ಯ ಹಾಗೂ ಭಿನ್ನವಾಗಿದ್ದಾರೆಂದು ಅಧ್ಯಯನಿಸಲು ಈ ಅಧ್ಯಯನ ಮಹತ್ವದ್ದಾಗಿದೆ.

ಮೇದರ ಸಂಸ್ಕೃತಿಯ ಮೇಲೆ ಬೇರೆ ಬೇರೆ ಸಂಸ್ಕೃತಿಗಳ ಪ್ರಭಾವ, ಶಿಕ್ಷಣ, ವೈಚಾರಿಕತೆ, ಆಧುನೀಕರಣ, ಸಾರಿಗೆ–ಸಂಪರ್ಕ ಸಾಧನಗಳ ಅಭಿವೃದ್ಧಿ, ಕೃಷಿ ಚಟುವಟಿಕೆ ಮುಂತಾದವು ಇವರ ಬದುಕಿನಲ್ಲಿ ಒಟ್ಟಾರೆ ಬದಲಾವಣೆ ತರುತ್ತಿದ್ದು, ಅದರ ದಿಕ್ಕು ದೆಸೆಗಳನ್ನು ಅಭ್ಯಸಿಸಲು ಈ ಅಧ್ಯಯನ ಮಹತ್ವದ್ದಾಗಿದೆ ಎಂದೇ ಹೇಳಬಹುದು.

[illegible]

೧.೩ ಅಧ್ಯಯನದ ವ್ಯಾಪ್ತಿ

ಮೇದ ಸಮುದಾಯವನ್ನು ಕುರಿತ ನನ್ನ ಅಧ್ಯಯನದ ಭೌಗೋಳಿಕ ವ್ಯಾಪ್ತಿಯನ್ನು ಚಿಕ್ಕಮಗಳೂರು ಜಿಲ್ಲೆಗೆ ಸೀಮಿತಗೊಳಿಸಲಾಗಿದೆ. ಚಿಕ್ಕಮಗಳೂರು ಜಿಲ್ಲೆಯಾಚೆಯ ಮೇದ ಸಮುದಾಯದ ಕೆಲವು ಸಾಮಾಜಿಕ, ಸಾಂಸ್ಕೃತಿಕ ಅಂಶಗಳನ್ನು ಗ್ರಹಿಸಲಾಗಿದೆ. ಮೇದರ ಸಾಂಸ್ಕೃತಿಕ ಅಧ್ಯಯನದ ಸಂದರ್ಭದಲ್ಲಿ ಕರ್ನಾಟಕದ ಮೇದರಿಗೂ, ನೆರೆಯ ಆಂಧ್ರದ ತೆಲುಗು ಮೇದರಿಗೂ, ತಮಿಳು ನಾಡಿನ ಸೇಲಂ ಮೇದರಿಗೂ, ಮಹಾರಾಷ್ಟ್ರದ ಮೇದರೊಂದಿಗೆ ಆಚರಣೆಯಲ್ಲಿ ಕೆಲವು ವಿಭಿನ್ನತೆಗಳಿರುವುದು ಕಂಡುಬರುವುದು ಸಹಜವೆನಿಸಿದರೂ, ಕರ್ನಾಟಕದ ಮೇದರು ತೆಲುಗು ಹಾಗೂ ಮಹಾರಾಷ್ಟ್ರದ ಮೇದರೊಂದಿಗೆ ವೈವಾಹಿಕ ಸಂಬಂಧವನ್ನು ಹೊಂದುತ್ತಿರುವುದು ವ್ಯಾಪಕವಾಗುತ್ತಿದೆ.

ಕರ್ನಾಟಕದ ದಾವಣಗೆರೆ, ಹಾವೇರಿ, ಬಳ್ಳಾರಿ, ವಿಜಾಪುರ, ರಾಯಚೂರು, ಗುಲ್ಬರ್ಗಾ, ಕೊಪ್ಪಳ, ಧಾರವಾಡ, ಮೈಸೂರು, ತುಮಕೂರು, ಚಿಕ್ಕಮಗಳೂರು ಇತ್ಯಾದಿ ಜಿಲ್ಲೆಗಳ ಮೇದರ ಅಭಿಪ್ರಾಯದಂತೆ, ಅವರ ಬುಡಕಟ್ಟು ನಂಬಿಕೆಯಂತೆ, ಕುಲಾಚಾರದನ್ವಯ ಕುಲ-ಬಳಿ-ಬೆಡಗಿನ ಆಧಾರದ ಮೇಲೆ ವಿವಾಹಗಳು ಏರ್ಪಡುತ್ತಿವೆ. ಅವರವರ ಪ್ರಾದೇಶಿಕ ಆಚರಣೆಗಳಲ್ಲಿ ವ್ಯತ್ಯಾಸವಿರಬಹುದಾದರೂ ವೃತ್ತಿ ಕುಲಕಸುಬು, ಜೀವನ ಕ್ರಮ, ಆಚಾರ-ವಿಚಾರ, ಕುಲ ದೇವರು, ಮೂಲಪುರುಷ, ದಂತ-ಪುರಾಣಗಳು, ಸಾಂಸ್ಕೃತಿಕ ವೀರರು ಎಲ್ಲವೂ ಒಂದೇಯಾಗಿ ಕಂಡುಬರುವುದರಿಂದ ಎಲ್ಲಾ ಮೇದರ ನಡುವೆ ಸಾಮ್ಯತೆ ಇದೆ ಎನ್ನುತ್ತಾರೆ. ಕರ್ನಾಟಕದಲ್ಲಿ ಮೇದರು ಶಿವಮೊಗ್ಗ, ಮೈಸೂರು, ಮಂಡ್ಯ, ಹಾಸನ, ಬೆಂಗಳೂರು ಗ್ರಾಮಾಂತರ, ದಾವಣಗೆರೆ, ಬಳ್ಳಾರಿ, ಧಾರವಾಡ, ಗುಲ್ಬರ್ಗಾ, ಚಿತ್ರದುರ್ಗ, ಮಡಿಕೇರಿ, ಚಾಮರಾಜನಗರ, ಚಿಕ್ಕಮಗಳೂರು, ಹಾಸನ ಹೀಗೆ ಕರ್ನಾಟಕದ ಉದ್ದಗಲಕ್ಕೂ ಮೇದರ ನೆಲೆಗಳಿವೆ. ಉಡುಪಿ ಹಾಗೂ ಮಂಗಳೂರಿನಲ್ಲಿ ಮೇದರ ನೆಲೆಗಳು ಅತ್ಯಂತ ಕ್ಷೀಣ.

ಮೇದರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ, ರಾಜಕೀಯ, ಜನಸಂಖ್ಯೆ, ಮೇದರ ವೃತ್ತಿ ಕಸುಬು ಇದಕ್ಕೆ ಸಂಬಂಧಿಸಿದ ಸವಾಲುಗಳು ಮತ್ತು ಸೌಲಭ್ಯಗಳನ್ನು ಕುರಿತ ಅಧ್ಯಯನವನ್ನು ಚಿಕ್ಕಮಗಳೂರು ಜಿಲ್ಲೆಗೆ ಮಿತಗೊಳಿಸಲಾಗಿದೆ. ಇತ್ತೀಚಿನವರೆಗೆ ವ್ಯಾಪಕ ಅಲೆಮಾರಿಗಳಾಗಿದ್ದ ಮೇದರಲ್ಲಿ ಇಂದು ಸ್ವಲ್ಪ ಮಟ್ಟಿಗೆ ಅಲೆಮಾರಿತನ ಕಾಣಬಹುದು. ಹಳ್ಳಿ ಅಂಚಿನಲ್ಲಿರುವ ಮೇದರ ನೆಲೆಗಳು ಗುಡ್ಡದ ಸಮೀಪ ಗುಡಾರಗಳನ್ನು ಕಟ್ಟಿಕೊಂಡು ಬಿದಿರಿನ ವೃತ್ತಿ ಮಾಡಿಕೊಂಡು ಬರುವವರೂ ಇದ್ದಾರೆ. ಪಟ್ಟಣದಿಂದ ಬಿದಿರು ಕಾಡಿನ ಸಮೀಪದ ಹಳ್ಳಿಗಳಿಗೂ ತಾತ್ಕಾಲಿಕ ವಲಸೆ ಹೋಗುವ ಪರಿಪಾಠವಿದೆ. ಕೆಲವು ಕುಟುಂಬದವರು ಕರ್ನಾಟಕದಿಂದ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ರಾಜಸ್ಥಾನಗಳಿಗೂ ಕುಲಕಸುಬು ಮತ್ತು ಡಿಪೋಗಳನ್ನು ನಡೆಸಲು ಹೋಗುವವರಿದ್ದಾರೆ. ರಾಜ್ಯದ ಒಳಗೇ ಒಂದು ಜಿಲ್ಲೆಯಿಂದ

ಮತ್ತೊಂದು ಜಿಲ್ಲೆಗೆ ಬಿದಿರಿನ ಪೂರೈಕೆ, ಪೋಲ್ಸ್, ಅಡಿಕೆ ಮರ, ಚಪ್ಪಡಿ ಕಲ್ಲು, ಮಂಗಳೂರು ಹಂಚು, ಬಂಡೆ ಇತ್ಯಾದಿಗಳ ಲಭ್ಯತೆಗಳ ಆಧಾರದ ಮೇಲೆ ವಲಸೆ ಹೋಗುವ ಪರಿಪಾಠ ಮೇದರಲ್ಲಿ ಕಂಡುಬರುತ್ತದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಕನ್ನಡ, ತೆಲುಗು, ತಮಿಳು ಹಾಗೂ ಮಳಯಾಳಂ ಭಾಷೆ ಮಾತನಾಡುವ ಮೇದರಿದ್ದು, ಇವರ ನಡುವೆ ಅನೇಕ ಸಾಮ್ಯತೆ ಹಾಗೂ ಭಿನ್ನತೆಗಳನ್ನು ಕಾಣಬಹುದಾಗಿದೆ. ಆಲ್ದೂರು, ಚಿಕ್ಕಮಗಳೂರು, ಮಡೇನೇರಲು, ತೋರಣಮಾವು ಇತ್ಯಾದಿ ಪ್ರದೇಶಗಳಲ್ಲಿರುವ ಮೇದರು ಉತ್ತರ ಕರ್ನಾಟಕದ ದಾವಣಗೆರೆ, ಹಾವೇರಿ, ಚಿತ್ರದುರ್ಗ ಮತ್ತಿನ್ನಿತರ ಮೇದರೊಂದಿಗೆ ವೈವಾಹಿಕ ಸಂಬಂಧವನ್ನು ಹೊಸದಾಗಿ ಹೊಂದುತ್ತಿರುವುದು ಚಿಕ್ಕಮಗಳೂರು ಜಿಲ್ಲೆಯಲ್ಲಿ ವಾಸವಿರುವ ಮೇದರ ನೆಲೆಗಳನ್ನು ಸಮಗ್ರವಾಗಿ ಅಭ್ಯಸಿಸಲಾಗಿ, ಇಡೀ ಕರ್ನಾಟಕದ ಮೇದರ ಅಧ್ಯಯನಕ್ಕೆ ಅತ್ಯುತ್ತಮ ಮಾದರಿಯೆಂದೂ ಹಾಗೂ ಮೇದರ ಸೂಕ್ಷ್ಮಾಧ್ಯಯನ (Micro study) ಸಾಧ್ಯವೆಂದು ಅಭಿಪ್ರಾಯಿಸಿ ಮಾಹಿತಿ ಸಂಗ್ರಹಣೆ ಮಾಡಲಾಗಿದೆ. ಹೆಚ್ಚಿನ ಮಾಹಿತಿ ಸಂಗ್ರಹಣೆಗಾಗಿ ಅಧ್ಯಯನ ವ್ಯಾಪ್ತಿಯ ಭೌಗೋಳಿಕ ಗಡಿದಾಟಿರುವುದು ಇಲ್ಲಿ ಅನಿವಾರ್ಯವಾಗಿದೆ. ಇದರಿಂದ ಅಗತ್ಯವಿದ್ದಲ್ಲಿ ತೌಲನಿಕ ವಿಶ್ಲೇಷಣೆ ಮಾಡಲು ಸಹಕಾರಿಯಾಗಿದೆ.

೧.೪ ಅಧ್ಯಯನದ ವಿಧಾನ

ಕರ್ನಾಕಟದ ಮೇದ ಬುಡಕಟ್ಟಿನ ಅಧ್ಯಯನವನ್ನು ಸಮಾಜಶಾಸ್ತ್ರೀಯ ನೆಲೆಯಲ್ಲಿ ಮಾಡಲಾಗಿದೆ. ಇದು ಮೇದರ ಸಮಗ್ರ ಅಧ್ಯಯನವೆಂದರೂ ತಪ್ಪಾಗಲಾರದು. ಕಾರಣ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಈ ಎಲ್ಲಾ ಅಂಶಗಳು ಒಂದು ಜನಾಂಗದ, ದೇಶದ ಅಮೂಲಾಗ್ರ ಅಂಶಗಳನ್ನು ಒಳಗೊಳ್ಳುತ್ತವೆ. ಹಾಗಾಗಿ ಜನಸಂಖ್ಯೆಯ ದೃಷ್ಟಿಯಿಂದ ಆಯ್ಕೆಗೊಂಡು ಸಂಶೋಧನಾ ವ್ಯಾಪ್ತಿ ಸೀಮಿತವೆನಿಸಬಹುದಾದರೂ, ಸಂಶೋಧನೆಯ ಒಳಹುಗಳಲ್ಲಿ ಸಮಗ್ರ, ಪರಿಮಾಣಾತ್ಮಕ ಅಂಶಗಳು ಒಳಗೊಳ್ಳುತ್ತವೆ. ಚಿಕ್ಕಮಗಳೂರು ಜಿಲ್ಲಾ ಮೇದ ಬುಡಕಟ್ಟಿನ ಆಚರಣೆಗಳನ್ನು ಗಮನದಲ್ಲಿಟ್ಟುಕೊಂಡು ವಾರ್ಷಿಕ ಆವರ್ತನೆಗಳಾದ ಜನನದಿಂದ ಸಾವಿನ ಸಂಸ್ಕಾರದವರೆಗಿನ ಎಲ್ಲಾ ಆಚಾರ ಪದ್ಧತಿಗಳನ್ನು ನೇರವಾಗಿ ಆಕರಗಳನ್ನು ಬಳಸಿಕೊಂಡು ಛಾಯಾಚಿತ್ರಗಳ ಸಮೇತ ವಿಪುಲವಾಗಿ ಮಾಹಿತಿಗಳನ್ನು ಸಂಗ್ರಹಿಸಿ ದಾಖಲಿಸಿದೆ. ಕೌಟುಂಬಿಕ ಮಾಹಿತಿಗಳನ್ನು ಕುಟುಂಬದ ಯಜಮಾನನಿಂದ ಪಡೆದು ದಾಖಲಿಸಿದರೆ, ಸಂಶೋಧನೆಗೆ ಪೂರಕವಾದ ಪರಿಮಾಣಾತ್ಮಕ ಮಾಹಿತಿಗಳನ್ನು ಅನುಭವಿ ಮೇದರ ವಕ್ತೃಗಳಿಂದ ಸಂದರ್ಶನ ಅನುಸೂಚಿ ಮೂಲಕ ಪಡೆದು ದಾಖಲಿಸಿಕೊಳ್ಳಲಾಗಿದೆ. ಮೇದರ ಆಚಾರ-ವಿಚಾರ, ಸಂಪ್ರದಾಯ-ಪರಂಪರೆ, ಋತುಮತಿ ಶಾಸ್ತ್ರ, ವಿವಾಹ-ಜನನ, ಸೀಮಂತೋತ್ಸವ, ನಾಮಕರಣ-ತೊಟ್ಟಿಲುಶಾಸ್ತ್ರ, ನಂಬಿಕೆ-ನಿಷೇದ,

ಕುಲಾಚಾರಗಳು, ಆಚರಣೆಗಳು, ಪದ್ಧತಿಗಳು, ಶಾಸ್ತ್ರಗಳು ಇತ್ಯಾದಿ ಅನೇಕ ಅಂಶಗಳನ್ನು ಪ್ರತ್ಯೇಕವಾಗಿ ಕಾಯ್ದುಕೊಂಡು ಬಂದಿರುವ ಮೇದರ ಸಂಸ್ಕೃತಿ-ಸಂಸ್ಕಾರಗಳನ್ನು ನೇರವಾಗಿ ಗಮನಿಸಿ ದಾಖಲಿಸಲಾಗಿದೆ. ಅನೇಕ ಸಂದರ್ಭದ ಆಚರಣೆಗಳ ಸಂಪ್ರದಾಯದ ಹಾಡುಗಳನ್ನು ನಂಬಿಕೆ, ನಿಷೇದ ಮತ್ತು ಚಿಕಿತ್ಸೆಗಳನ್ನು ಅನುಭವಿಗಳಿಂದ ಕೇಳಿ ಧ್ವನಿಸುರಳಿಗಳಲ್ಲಿ ದಾಖಲಿಸಲಾಗಿದೆ. ೧೨ನೇ ಶತಮಾನದ ಕಾಯಕಯೋಗಿ ಬಸವಣ್ಣನವರ ತತ್ವಾದರ್ಶಗಳಿಗೆ ಮಾರುಹೋಗಿ, ಬದುಕಿನ ಶುದ್ಧ ಸಂಸ್ಕಾರಗಳಿಗೆ ಒಳಗಾದ ಮೇದ ಸಮುದಾಯದ ಮಹಾಪುರುಷನಾದ ಶ್ರೀ ಕೇತೇಶ್ವರರ ಜೀವನ ಕಥನದ ಮಾಹಿತಿಗಳನ್ನು ಕಲೆಹಾಕಲಾಗಿದೆ.

ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಕ್ಷೇತ್ರಗಳಲ್ಲಿನ ಜೀವನ ಕ್ರಮಗಳನ್ನು ಸಮಗ್ರವಾಗಿ ಪಡೆಯಲಾಗಿದೆ. ಆರ್ಥಿಕ, ರಾಜಕೀಯ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಆದ ಬದಲಾವಣೆಗಳಷ್ಟು ಪ್ರಮಾಣದಲ್ಲಿ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಕ್ಷೇತ್ರದಲ್ಲಿ ಬದಲಾವಣೆಗಳು ಗಮನಾರ್ಹವಾಗಿಲ್ಲದಿರುವ ಬಗ್ಗೆ ಗಮನಹರಿಸಲಾಗಿದೆ. ಈ ಕುರಿತಂತೆ ಸಂದರ್ಶನ ಅನುಸೂಚಿಯನ್ನು ಬಳಸಿ ಮಾಹಿತಿಗಳನ್ನು ಕ್ರಮಬದ್ಧಗೊಳಿಸಲಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಗುಡಿಕೈಗಾರಿಕೆಗಳಲ್ಲಿ ಪ್ರಮುಖವಾಗಿರುವ ಮೇದಾರಿಕೆಯ ಸ್ಥಿತಿ-ಗತಿಗಳನ್ನು ಅವಲೋಕಿಸಲಾಗಿದೆ. ಇಡೀ ಪ್ರಪಂಚ 'ಜಾಗತಿಕ ಗ್ರಾಮ' ಎಂಬ ಉಕ್ತಿ ಇಂದು ಎಲ್ಲೆಡೆ ಉಲಿಯುತ್ತಿರುವಾಗ, ಜಾಗತೀಕರಣದ ಪ್ರಭಾವ ಇಂತಹ ಬುಡಕಟ್ಟು ಸಂಸ್ಕೃತಿಯನ್ನು ಹಿಡಿದಿಡುವ ಸಾಂಪ್ರದಾಯಿಕ ವೃತ್ತಿಗಳ ಮೇಲೆ ಹೇಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಪ್ರಭಾವಿಸಿದೆ ಎಂಬುದನ್ನು ಚರ್ಚಿಸಿ ಮಾಹಿತಿಗಳನ್ನು ದಾಖಲಿಸಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯಾದ್ಯಂತ ಮೇದ ಸಮುದಾಯದ ಪ್ರತಿ ಕುಟುಂಬದ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಿ ಕ್ಷೇತ್ರಕಾರ್ಯ ಮಾಹಿತಿ ಪಟ್ಟಿಯಲ್ಲಿ ದಾಖಲಿಸಿ, ಕೋಷ್ಟಕಗಳ ಮೂಲಕ ಪ್ರಸ್ತುತಪಡಿಸಿದೆ. ಕೋಷ್ಟಕಗಳ ಮಾಹಿತಿಗಳನ್ನು ಅವಶ್ಯವೆನಿಸಿದ ಕಡೆಗಳಲ್ಲಿ ಉಲ್ಲೇಖಿಸಲಾಗಿದೆ. ನನ್ನ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡ ಪ್ರತ್ಯಕ್ಷ ಅನುಭವಗಳನ್ನು ಇಲ್ಲಿ ಮಂಡಿಸಿದ್ದೇನೆ. ಸಾಧ್ಯವಾದ ಕಡೆ ವಕ್ತೃಗಳ ಹೆಸರುಗಳನ್ನು ನಮೂದಿಸಿದ್ದೇನೆ. ಮಾಹಿತಿ ಸಂಗ್ರಹಣೆಗೆ ಪ್ರಾಥಮಿಕ ಮಾಹಿತಿ ಸಂಗ್ರಹಣೆಯ ವಿಧಾನವನ್ನು ಬಳಸಿರುವೆನು. ಈ ಕಾರಣದಿಂದ ಮಹಾಪ್ರಬಂಧದಲ್ಲಿ ಅಡಿಟಿಪ್ಪಣಿಗಳು ವಿರಳವಾಗಿವೆ. ಚಿಕ್ಕಮಗಳೂರು ಜಿಲ್ಲೆಯ ಸಮಗ್ರ ಮೇದ ಬುಡಕಟ್ಟಿನ ಅಂಕಿ ಅಂಶಗಳು ನನ್ನ ಅಧ್ಯಯನದಿಂದ ದೊರೆಯುತ್ತದೆ. ಅಗತ್ಯಕ್ಕಾನುಸಾರ ಕೋಷ್ಟಕಗಳನ್ನು ರಚಿಸಿ, ಸವಿವರಗಳನ್ನು ಬಳಸಿಕೊಂಡು ಪ್ರೌಢ ಪ್ರಬಂಧದ ಗುಣಾತ್ಮಕತೆ ಹೆಚ್ಚಿಸಲು ಪ್ರಯತ್ನಿಸಿದ್ದೇನೆ. ಕಾಡಿನ ಉತ್ಪನ್ನವಾದ ಬಿದಿರನ್ನು ಆಶ್ರಯಿಸಿ ಬದುಕುವ ಮೇದರ ಸಮಸ್ಯೆಗಳು ಹಲವಾರು. ಮಲೆನಾಡಿನಂತಹ ದುರ್ಗಮ ಪ್ರದೇಶದಲ್ಲಿ, ಹಚ್ಚಹಸಿರಿನ ನಿತ್ಯಹರಿದ್ವರ್ಣ ಕಾಡನ್ನು ನೆನಪಿಸುವ

ಕಾಡಿನ ನಡುವೆ ಬದುಕನ್ನು ಕಟ್ಟಿಕೊಂಡಿರುವ ಮೇದರ ಜೀವನದ ಪ್ರತ್ಯಕ್ಷ ಚಿತ್ರಣವನ್ನು ನನಗೆ ಲಭ್ಯ ಮಾಹಿತಿಗಳ ಆಧಾರದಲ್ಲಿ ಪ್ರಸ್ತುತಪಡಿಸುತ್ತಿದ್ದೇನೆ.

ಮೇದರು ಸಾಮಾನ್ಯವಾಗಿ ಗುಂಪಾಗಿ ಬದುಕುವ ಸಮುದಾಯವಾಗಿದ್ದು ಕೇರಿ, ಬೀದಿ, ಓಣಿ, ಹಟ್ಟಿಗಳಲ್ಲಿ ವಾಸಿಸುವ ಪ್ರವೃತ್ತಿ ಹೊಂದಿದ್ದಾರೆ. ಇವರ ವೃತ್ತಿ-ಪ್ರವೃತ್ತಿಗಳಲ್ಲಿ ಏಕಸಾಮ್ಯತೆ ಕಾಣಬಹುದು. ಚಿಕ್ಕಮಗಳೂರು ಜಿಲ್ಲೆಯಲ್ಲಿ ವಾಸಿಸುವ ಮೇದರಲ್ಲೂ ಇಂತಹ ಏಕತಾನತೆಯನ್ನು ಕಾಣಬಹುದು. ಸಮತಟ್ಟಾದ ಪ್ರದೇಶಕ್ಕಿಂತಲೂ ಗುಡ್ಡ-ಗಾಡು ಪ್ರದೇಶಗಳಲ್ಲಿಯೇ ಇವರ ನೆಲೆಗಳು ಹೆಚ್ಚಾಗಿ ಕಂಡುಬಂದು, ಪ್ರಶ್ನಾವಳಿಗಳು ಪ್ರಯೋಜನಕ್ಕೆ ಬಾರದ್ದರಿಂದ, ಸಂದರ್ಶನ ಅನುಸೂಚಿ, ಸಹಭಾಗಿತ್ವ ಅವಲೋಕನ ವಿಧಾನ, ಚಾರಿತ್ರಿಕ ವಿಧಾನ, ಸಂಖ್ಯಾಶಾಸ್ತ್ರೀಯ ವಿಧಾನ, ತುಲನಾತ್ಮಕ ವಿಧಾನಗಳ ಮೂಲಕ ಸಮಗ್ರ ಮಾಹಿತಿಗಳನ್ನು ದಾಖಲಿಸುವ ಪ್ರಯತ್ನ ಮಾಡಲಾಯಿತು. ವಕ್ತೃಗಳು ಮುಗ್ಧತೆಯಿಂದ ಮಾಹಿತಿಗಳನ್ನು ಎಳೆಎಳೆಯಾಗಿ ಬಿಡಿಸುತ್ತಿದ್ದರು. ತಮ್ಮ ಬದುಕಿನ ಚಿತ್ರಣವನ್ನು ಅನಾವರಣಗೊಳಿಸುತ್ತಿದ್ದರು.

ಯಾವ ರಾಗದ್ವೇಷ, ಪೂರ್ವಾಗ್ರಹ ಪೀಡನೆಗಳಿಗೆ ಒಳಗಾಗದೆ, ಜನ್ಮ ವೃತ್ತಾಂತಗಳನ್ನು ಮುಕ್ತವಾಗಿ ಹೇಳುತ್ತಿದ್ದರು. ದಾಖಲು ಪರಿಕರಗಳೊಂದಿಗೆ ಸಹಕರಿಸುತ್ತಿದ್ದ ಮೇದರ ಬದುಕು ತೆರೆದ ಸತ್ಯವಾಗಿತ್ತು. ಇದು ಮಾಹಿತಿಗಳ ಸಂಗ್ರಹಣೆಗೆ ಮುಕ್ತ ವಾತಾವರಣವಾಗಿದ್ದು, ಗೌಪ್ಯ ಮಾಹಿತಿಗಳಾವುವು ಇಲ್ಲವೆಂದೇ ಭಾವಿಸಬಹುದಾಗಿದೆ. ಮೇದರು ಇಂದಿಗೂ ತಮ್ಮ ಬೇಡಿಕೆಗಳನ್ನು ಹಕ್ಕೊತ್ತಾಯದ ಮೂಲಕ ಪ್ರತಿಭಟಿಸಿ ಕೇಳುವ ಪ್ರವೃತ್ತಿಯವರಾಗಿಲ್ಲ. ಈ ಉದ್ದೇಶಕ್ಕಾಗಿ ಸಂಘಟಿಸಿ ಹೋರಾಡುವ ಛಾತಿ ಇಲ್ಲವೆಂದೇ ಹೇಳಬಹುದು. ಸಂಘಟನಾತ್ಮಕ ಶಕ್ತಿಯ ಕೊರತೆ ಎದ್ದು ಕಾಣುತ್ತಿದ್ದುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಕೊಳ್ಳಲಾಗಿತ್ತು.

ಸಂಶೋಧನಾ ತಂತ್ರಗಳು

೧. ವಿವರಣಾತ್ಮಕ ಸಂಶೋಧನೆ

ಚಿಕ್ಕಮಗಳೂರು ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಕನ್ನಡ, ತೆಲುಗು, ತಮಿಳು ಹಾಗೂ ಮಳಯಾಳಂ ಭಾಷಿಕ ಮೇದರನ್ನು ಅಮೂಲಾಗ್ರವಾಗಿ ಅಧ್ಯಯನಿಸುವ ಉದ್ದೇಶದಿಂದ ವಿವರಣಾತ್ಮಕ ಸಂಶೋಧನೆಯನ್ನು ಕೈಗೊಳ್ಳಲಾಗಿದೆ. ಒಂದು ಪ್ರದೇಶ ಅಥವ ಒಂದು ಸನ್ನಿವೇಶದಲ್ಲಿ ಕಂಡುಬರುವ ನೈಜಪರಿಸ್ಥಿತಿಯ ವಾಸ್ತವ ಚಿತ್ರಣವನ್ನು ಅರಿಯುವ ಉದ್ದೇಶದಿಂದ ಈ ಕ್ರಮವನ್ನು ಅಳವಡಿಸಿಕೊಳ್ಳಲಾಗಿದೆ.

೨. ಮನೆ-ಮನೆ ಸಮೀಕ್ಷೆ

ಮೇದ ಸಮುದಾಯದ ನಿಖರ ಹಾಗೂ ನಿಷ್ಪಕ್ಷವಾದ ವಾಸ್ತವಾಂಶಗಳನ್ನು ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ ತಿಳಿಯಲು ಸೂಕ್ತ ಮಾಹಿತಿ ಸಂಗ್ರಹಿಸುವ ಉದ್ದೇಶದಿಂದ ಪ್ರಶ್ನಾವಳಿಯನ್ನು ರಚಿಸಿ, ಕುಟುಂಬದ ಗಾತ್ರ, ವೈವಾಹಿಕ ಅಂತಸ್ತು, ಲಿಂಗ, ವಯಸ್ಸು, ಶಿಕ್ಷಣ, ಭಾಷೆ.

ಧರ್ಮ ಇತ್ಯಾದಿ ಅನೇಕ ಅಂಶಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಪಡೆಯಲಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಒಟ್ಟು ೩೭೩ ಮೇದ ಕುಟುಂಬಗಳೆಲ್ಲವನ್ನು ಸಮೀಕ್ಷಿಸಲಾಯಿತು.

೩. ಸಂಗತಿ ಅಧ್ಯಯನ ವಿಧಾನ

ಕರ್ನಾಟಕ ರಾಜ್ಯಾದ್ಯಂತ ಹರಡಿರುವ ಮೇದರನ್ನು ಅಭ್ಯಸಿಸುವ ದೃಷ್ಟಿಯಿಂದ ವಿವಿಧ ಪ್ರದೇಶಗಳಲ್ಲಿ ವಾಸಿಸುತ್ತಿರುವ ೬೦ ವಕ್ತೃಗಳನ್ನು ಆಯ್ಕೆಮಾಡಿಕೊಂಡು, ವಿವರಣಾತ್ಮಕ ಮಾಹಿತಿಗಳನ್ನು ಪಡೆಯುವ ಉದ್ದೇಶದಿಂದ ರಚಿಸಿಕೊಂಡಿದ್ದ ಪ್ರತ್ಯೇಕ ವಿಸ್ತೃತ ಪ್ರಶ್ನಾವಳಿ ಅನುಸೂಚಿಯನ್ನು ತಯಾರಿಸಿಕೊಂಡು ಮಾಹಿತಿ ಪಡೆದುಕೊಳ್ಳಲಾಯಿತು. ಪ್ರಸ್ತುತ ಸಂಶೋಧನೆಯಲ್ಲಿ ಈ ಮಾಹಿತಿಗಳನ್ನು ವಿಫುಲವಾಗಿ ಬಳಸಿಕೊಳ್ಳಲಾಗಿದೆ.

೪. ಸಂದರ್ಶನ

ಚಿಕ್ಕಮಗಳೂರು ಜಿಲ್ಲೆಯಾದ್ಯಂತ ವಾಸಿಸುತ್ತಿರುವ ಮೇದ ಬುಡಕಟ್ಟಿನ ವಕ್ತೃಗಳನ್ನು ಸಂದರ್ಶಿಸುವ ಸಲುವಾಗಿ ಸಂದರ್ಶನ ಕೈಪಿಡಿಯ ಸಹಾಯದಿಂದ ತಯಾರಿಸಿಕೊಂಡ ಸಂದರ್ಶನ ಅನುಸೂಚಿಯನ್ನು ಬಳಸಿಕೊಳ್ಳಲಾಯಿತು. ಮುಖಾಮುಖಿ ನೇರ ಸಂದರ್ಶನದಲ್ಲಿ ಪ್ರಸ್ತುತ ಸಂಶೋಧನೆಗೆ ಸಂಬಂಧಿಸಿದ ಹಲವಾರು ಮಾಹಿತಿಗಳನ್ನು ಸಂಗ್ರಹಿಸಿಕೊಳ್ಳುವುದರ ಜೊತೆಗೆ ಕುತೂಹಲಕ್ಕಾಗಿ ಅಗತ್ಯ ಮಾಹಿತಿಗಳನ್ನು ಪಡೆದುಕೊಳ್ಳಲಾಗಿದೆ.

೫. ಪ್ರತ್ಯಕ್ಷ ಸಹಭಾಗಿ ಅವಲೋಕನ

ಪ್ರಸ್ತುತ ಸಂಶೋಧನೆ ಉದ್ದೇಶವನ್ನು ಮೇದ ಸಮುದಾಯದ ಸದಸ್ಯರಿಗೆ ವಿವರಿಸಿ, ಅವರ ಅನುಮತಿಯೊಡನೆ ಸಹಕಾರವನ್ನು ಪಡೆದು, ಕೆಲವು ಜೀವನಾವರ್ತನ ಆಚರಣೆ ಸಂಸ್ಕಾರ ಚಟುವಟಿಕೆಗಳನ್ನು ಅವರೊಂದಿಗೆ ಇದ್ದು, ಪ್ರತೇಕ್ಷವಾಘಿ ವೀಕ್ಷಿಸಿ ದಾಖಲಿಸಿಕೊಂಡು ಇವುಗಳನ್ನು ಸಂಶೋಧನೆಯಲ್ಲಿ ಬಳಸಿಕೊಂಡು ಸಂಶೋಧನಾ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಲು ಉಪಯೋಗಿಸಿಕೊಳ್ಳಲಾಗಿದೆ.

೧.೫ ಭಾರತದಲ್ಲಿ ಬುಡಕಟ್ಟು ಸಮುದಾಯಗಳ ಅಧ್ಯಯನ

ಆದಿಮ ಜನಾಂಗಗಳು, ಮೂಲವಾಸಿಗಳು ಅಥವಾ ಬುಡಕಟ್ಟು ಜನಾಂಗಗಳೆಂದು ಕರೆಯಲಾಗುತ್ತಿರುವ ಜನಾಂಗಗಳ ಅಧ್ಯಯನ ನೂರಾರು ವರ್ಷಗಳಿಂದ ನಡೆಯುತ್ತಲೇ ಇದೆ. ಬುಡಕಟ್ಟುಗಳ ಶ್ರೇಯೋಭಿವೃದ್ಧಿಗೆ ಯಾವ ಮಾನದಂಡ ಸರಿಹೊಂದಬಹುದೆಂಬ ಜಿಜ್ಞಾಸೆ ಇಂದಿಗೂ ವಿದ್ವಾಂಸರ ನಡುವೆ ನಡೆದಿದೆ. ಬುಡಕಟ್ಟು ವಾಸಿಗಳನ್ನು 'ಮುಖ್ಯವಾಹಿನಿ'ಗೆ ತರಬೇಕು. ಖಂಡಿತವಾಗಿಯೂ ಗಿರಿಜನರನ್ನು 'ವಸ್ತುಸಂಗ್ರಹಾಲಯ'ದ ಮಾದರಿಗಳನ್ನಾಗಿ ಮಾಡಬಾರದು ಎಂಬ ದನಿ ಒಂದೆಡೆಯಾದರೆ, ಅವರ ಪಾಡಿಗೆ ಅವರನ್ನು ಬದುಕಲು ಬಿಡಿ ಎನ್ನುವ ನೀತಿ ಇನ್ನೊಂದು ಕಡೆ. ೧೯೫೬ ಫೆಬ್ರವರಿ ತಿಂಗಳಲ್ಲಿ ಶಾಸನ ಸಭೆಯಲ್ಲಿ

ಪ್ರತ್ಯೇಕೀಕರಣಗೊಂಡು ಬುಡಕಟ್ಟು ಪ್ರದೇಶಗಳ ಕುರಿತಾದಂತೆ ಚರ್ಚೆಯಲ್ಲಿ ಇಂಡಿಯಾದ ಆದಿಮ ಜನರನ್ನು 'ಅನಾಗರಿಕ' ಮತ್ತು 'ಬರ್ಬರತ್ವ'ದ ವ್ಯವಸ್ಥೆಯೊಳಗಡೆ ಇರಬಯಿಸಿದ ಮಾನವಶಾಸ್ತ್ರಜ್ಞರ ಮೇಲೆ ಹಲವಾರು ಸದಸ್ಯರು ಹರಿಹಾಯ್ದದ್ದನ್ನು ಶ್ರೇಷ್ಠ ಮಾನವಶಾಸ್ತ್ರಜ್ಞ, ಬುಡಕಟ್ಟು ಸಂಶೋಧನಾಕಾರ ವೆರಿಯರ್ ಎಲ್ವಿನ್ ನೆನಪಿಸುತ್ತಾರೆ. 'ಬಸ್ತಾರ್' ಪ್ರದೇಶದ ಆದಿವಾಸಿಗಳಾಗಿದ್ದ 'ಗೊಂಡರು' ವಾಸಿಸುತ್ತಿದ್ದ ಮಧ್ಯ ಪ್ರದೇಶದ ಕಾಡಿಗೆ ಹೊಕ್ಕಿದ ಡಾ. ವೆರಿಯರ್ ಎಲ್ವಿನ್ ತಮ್ಮ ಅಂತ್ಯದವರೆಗೂ ಆದಿವಾಸಿಗಳ ಸಾಕ್ಷಿ ಪ್ರಜ್ಞೆಯಂತೆ ಬದುಕಿದ್ದವರು. ಆದಿವಾಸಿಗಳ ದುಃಖದುಮ್ಮಾನಗಳ ಭಾಗವಾಗಿಯೇ ಬೆಳೆದ ಎಲ್ವಿನ್ ಅವರನ್ನು ಕುರಿತು ಸದಾ ಚಿಂತಿಸುತ್ತಾರೆ. ಆದಿವಾಸಿಗಳನ್ನು 'ಅಭಿವೃದ್ಧಿ' ಪಡಿಸಬೇಕು ಎಂದು ರೂಪಿಸಲ್ಪಟ್ಟ ನೆಹರುರವರ ಪಂಚಶೀಲ ತತ್ವಗಳ ಹಿಂದೆ ಎಲ್ವಿನ್‌ರ ಚಿಂತನೆಗಳ ನೇರ ಪ್ರಭಾವವಿದೆ.

ಇಡೀ ಪ್ರಪಂಚದ ಬುಡಕಟ್ಟು ಸಮುದಾಯಗಳ ಅಧ್ಯಯನವನ್ನು ನೋಡಿದಾಗ ಸುಮಾರು ೧೬ನೇ ಶತಮಾನದಲ್ಲಿ ಪ್ರಪಂಚದ ದೇಶಗಳಲ್ಲಿರುವ ಬುಡಕಟ್ಟು ಸಮುದಾಯಗಳನ್ನು ಕುರಿತಾದ ಅಧ್ಯಯನ ಪ್ರಾರಂಭವಾಯಿತು. ನಮ್ಮ ದೇಶದಲ್ಲಿ ೧೮ನೇ ಶತಮಾನದ ಕೊನೆಗೆ ಅದೂ ಕೂಡ ವಸಹಾತುಶಾಹಿ ಹಿನ್ನೆಲೆಯಲ್ಲಿ ಬುಡಕಟ್ಟು ಸಮುದಾಯಗಳನ್ನು ಕುರಿತಾದ ಅಧ್ಯಯನ ಪ್ರಾರಂಭವಾಯಿತು. ಭಾರತದ ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿಗಳು, ಕ್ರೈಸ್ತ ಪಾದ್ರಿಗಳು ಬುಡಕಟ್ಟು ಸಮುದಾಯಗಳ ಅಧ್ಯಯನವನ್ನು ಮಾಡಿದರು. ಅಂತಹವರಲ್ಲಿ ಇಂಗ್ಲೇಂಡಿನಿಂದ ಕ್ರೈಸ್ತ ಧರ್ಮದ ಪ್ರಚಾರಕ್ಕೆ ಪಾದ್ರಿಯಾಗಿ ಭಾರತಕ್ಕೆ ಬಂದ ವೆರಿಯರ್ ಎಲ್ವಿನ್‌ರವರು ಪ್ರಮುಖರಾಗಿದ್ದಾರೆ. ಇವರು ಭಾರತದ ಮಧ್ಯವಲಯಕ್ಕೆ ಸೇರಿದ ಬುಡಕಟ್ಟುಗಳಾದ ಮಲಿಯಾ, ಮುಲಿಯಾ, ಸವೋರ್ದ, ಅಗೇರಿಯಾ, ಬೈಗಾ, ಗೊಂಡಾ ಈ ಬುಡಕಟ್ಟುಗಳ ಬಗ್ಗೆ ಅಧ್ಯಯನ ಮಾಡಿ 'Philosophy of NEFA' ಎಂಬ ಕೃತಿಯನ್ನು ಬರೆದಿದ್ದಾರೆ.

ಅಲಕ್ಷಿತ ವಿಷಯಗಳ ಅಧ್ಯಯನವು ಈ ನಂಬಿಕೆಗಳನ್ನು ಪ್ರಶ್ನಿಸುತ್ತದೆ. ಬುಡಕಟ್ಟು ಜಾತಿ ಅಥವಾ ಇಂತಹ ಇತರ ಗುಂಪುಗಳನ್ನು ಚಾರಿತ್ರಿಕವೆಂದೇ ಪರಿಗಣಿಸುತ್ತದೆ. ಬೆಟ್ಟಗಳಲ್ಲಿ ವಾಸಮಾಡುವ ಬುಡಕಟ್ಟುಗಳು ಕಾಡಿನ ಮೇಲೆ ತಮಗಿದ್ದ ಅಧಿಕಾರಗಳನ್ನು ಕಳೆದುಕೊಂಡಾಗ ಅವರನ್ನು ಕೇವಲ ಪ್ರಕೃತಿಯ ಶಿಶುಗಳು ಎಂದು ನೋಡುವುದು ಸಾಧ್ಯವಿಲ್ಲ. ಏಕೆಂದರೆ ಹೊಸದಾಗಿ ಬಂದ ಕಾನೂನುಗಳು ಬುಡಕಟ್ಟುಗಳಿಗೂ, ಪ್ರಕೃತಿಗೂ ಇದ್ದ ಸಂಬಂಧವನ್ನು ನಾಶಮಾಡಿದವು. ಹೊಸ ಕಾನೂನುಗಳು ಕಾಡನ್ನು ಬುಡಕಟ್ಟುಗಳ ವಾಸಸ್ಥಳವೆಂದು ಪರಿಗಣಿಸದೆ, ವಾಣಿಜ್ಯ ಉತ್ಪನ್ನಗಳ ಮೂಲವೆಂದು ಪರಿಗಣಿಸಿದವು. ಇಂತಹ ಸಂದರ್ಭದಲ್ಲಿ ಕಾಡಿನಲ್ಲಿದ್ದ ಬುಡಕಟ್ಟುಗಳು ಆಧುನಿಕ ಪ್ರಬಲ ಸಂಸ್ಥೆಗಳೊಂದಿಗೆ 'ಒಪ್ಪಂದ'ಗಳನ್ನು ಮಾಡಿಕೊಳ್ಳಬೇಕಾಯಿತು. ಕಾಡಿನ ನೆಲೆ ತಪ್ಪಿ, ಕಾನೂನಿನ ಮುಷ್ಠಿಯಲ್ಲಿ ಸಿಲುಕಿದ ಬುಡಕಟ್ಟುಗಳ ಅಧ್ಯಯನದ ಜಾಡನ್ನು ತಿಳಿಸುತ್ತಾರೆ.

ಬುಡಕಟ್ಟುಗಳೆಂದು ಕರೆಸಿಕೊಳ್ಳುವ ಆದಿವಾಸಿಗಳು ಭಾರತದಾದ್ಯಂತ ಪಸರಿಸಿದ್ದಾರೆ. ಎಲ್ಲಾ ರಾಜ್ಯಗಳ ಬೆಟ್ಟ-ಗುಡ್ಡ, ಕಾಡು-ಮೇಡು, ಗಿರಿ-ಶಿಖರ, ಕಣಿವೆ-ಕಾನನ ಹಾಗೂ ಕರಾವಳಿ ಪ್ರದೇಶಗಳು ಇನ್ನಿತರೆ ದುರ್ಗಮ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಬುಡಕಟ್ಟುಗಳನ್ನು ಅಧ್ಯಯನ ವ್ಯಾಪ್ತಿಗೆ ಒಳಪಡಿಸುವುದು ಕಷ್ಟಸಾಧ್ಯ. ಆದಿವಾಸಿಗಳ ಭಾಷೆ, ವಿಶಿಷ್ಟ ಸಂಸ್ಕೃತಿ ಮತ್ತು ಆಚರಣೆ, ಪದ್ಧತಿ, ವಿಧಿ-ನಿಷೇದ ಇತ್ಯಾದಿಗಳಿಂದ ಅವರೊಂದಿಗೆ ಬೆರೆತು ಅಧ್ಯಯನ ಮಾಡುವುದು ತುಂಬಾ ಕಷ್ಟ. ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದ ಅನೇಕ ಬುಡಕಟ್ಟುಗಳ ಅಧ್ಯಯನವನ್ನು ದೇಶ-ವಿದೇಶಗಳ ವಿದ್ವಾಂಸರಿಂದ ನಡೆದಿತ್ತು. ಆದರೆ ಯಾವುದೇ ಬುಡಕಟ್ಟಿನ ಸಮಗ್ರ ಅಧ್ಯಯನವಾಗಿರಲಿಲ್ಲ. ಈ ಬುಡಕಟ್ಟುಗಳ ಅಧ್ಯಯನಕ್ಕೆ ವಿದೇಶಿ ವಿದ್ವಾಂಸರು ತೋರಿಸಿದ ಆಸಕ್ತಿಯಿಂದಾಗಿ ಭಾರತೀಯ ವಿದ್ವಾಂಸರು ಬುಡಕಟ್ಟುಗಳ ಅಧ್ಯಯನ ಕುರಿತು ಆಸಕ್ತಿ ಬೆಳೆಸಿಕೊಂಡರು. ಸ್ವಾತಂತ್ರ್ಯ ನಂತರ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ವಿಶ್ವವಿದ್ಯಾಲಯಗಳು, ಖಾಸಗಿ ಸಂಘಸಂಸ್ಥೆಗಳು ಬುಡಕಟ್ಟು ಅಧ್ಯಯನಕ್ಕೆ ಹೆಚ್ಚಿನ ಆಸಕ್ತಿ ತೋರಿದವು.

ಆರ್ಯರ ಆಗಮನದೊಂದಿಗೆ ದಸ್ಯು, ದಾಸರು ಅಥವಾ ಬುಡಕಟ್ಟುಗಳೊಂದಿಗೆ ಯುದ್ಧವಾಗಿ ಸೋತ ಬುಡಕಟ್ಟುಗಳು ದಿಕ್ಕಾಪಾಲಾಗಿ ಕಾಡು ಸೇರಿಕೊಂಡರೆಂದು ಇತಿಹಾಸಕಾರರು ಅಭಿಪ್ರಾಯಿಸುತ್ತಾರೆ. ಬ್ರಿಟೀಷ್ ವಿದ್ವಾಂಸರು ಆಡಳಿತಗಾರರು, ಮಿಷನರಿಗಳು ಆನಂತರ ಬ್ರಿಟೀಷ್ ಹಾಗೂ ಭಾರತೀಯ ಮಾನವಶಾಸ್ತ್ರಜ್ಞರಿಂದ ವಿಶೇಷ ಗಮನಹರಿಸಿದ ಬುಡಕಟ್ಟುಗಳ ಅಧ್ಯಯನಗಳು ೨೦ನೇ ಶತಮಾನದ ನಲವತ್ತರ ದಶಕದ ಅಂತ್ಯದವರೆಗೂ ಮುಂದುವರೆದವು. ಸ್ವಾತಂತ್ರ್ಯ ನಂತರ ಅಮೆರಿಕಾದ ಮಾನವಶಾಸ್ತ್ರಜ್ಞರು ಹಾಗೂ ಭಾರತೀಯ ಮಾನವಶಾಸ್ತ್ರಜ್ಞರ ನಡುವೆ ಸಂಪರ್ಕ ಹೆಚ್ಚಿತು. ಬುಡಕಟ್ಟು ಅಧ್ಯಯನಗಳಲ್ಲಿ ವಿಶ್ಲೇಷಣಾತ್ಮಕವಾದ ಹಾಗೂ ಕ್ರಿಯಾತ್ಮಕವಾದ ಮಾರ್ಗ ಕಂಡುಬಂದಿತು. ಇದರ ಪರಿಣಾಮವಾಗಿ ಬುಡಕಟ್ಟು ಸಮುದಾಯಗಳನ್ನು ಅಂತರ್‌ಶಿಸ್ತೀಯ ಸಂಬಂಧದ ದೃಷ್ಟಿಯಿಂದ ಅಧ್ಯಯನ ಮಾಡಲು ಪ್ರಾರಂಭಿಸಲಾಯಿತು.

ಆದಿವಾಸಿ ಸಮುದಾಗಳ ಬಗ್ಗೆ ಆಳವಾದ ಅಧ್ಯಯನವನ್ನು ನಡೆಸಿ ಹಲವಾರು ಗ್ರಂಥಗಳನ್ನು ಪ್ರಕಟಿಸಿದ ಶ್ರೇಯಸ್ಸು ಮಾನವಶಾಸ್ತ್ರಜ್ಞರಿಗೆ ಸಲ್ಲುತ್ತದೆ. ಇ. ಥರ್‌ಸ್ಟನ್, ವೆರಿಯರ್ ಎಲ್ವಿನ್, ಆರ್.ಎನ್. ಸಕ್ಸೇನಾ, ಜಿ.ಎಸ್. ಘುರ್ಯೆ, ಫೇರ್‌ಚೈಲ್ಡ್, ಎ.ಎ.ಡಿ. ಲೂಯಿಸ್, ಕೆ. ರಂಗಾಚಾರಿ, ಎಲ್.ಕೆ. ಅನಂತಕೃಷ್ಣ ಅಯ್ಯರ್, ಹೆಚ್.ವಿ. ನಂಜುಂಡಯ್ಯ, ಡಾ. ಡಿ.ಎನ್. ಮಜುಂದಾರ್ ಮುಂತಾದ ಮಾನವಶಾಸ್ತ್ರಜ್ಞರು ಆದಿವಾಸಿ ಸಮುದಾಯ ಹಾಗೂ ಸಂಸ್ಕೃತಿಗಳ ಬಗ್ಗೆ ಅಧ್ಯಯನ ನಡೆಸಿ ಶ್ರೇಷ್ಟ ಗ್ರಂಥಗಳನ್ನು ರಚಿಸಿದ್ದಾರೆ. ೧೯೦೯ರಲ್ಲಿ ಇ. ಥರ್‌ಸ್ಟನ್ ಮತ್ತು ಕೆ. ರಂಗಾಚಾರಿಯವರು ಬರೆದ Caste and Tribes of southern India ಎಂಬ ಏಳು ಸಂಪುಟಗಳು ದಕ್ಷಿಣ ಭಾರತದ ಅನೇಕ ಬುಡಕಟ್ಟುಗಳ ಸಂಕ್ಷಿಪ್ತ ವಿವರಣೆಗಳನ್ನು ಒಳಗೊಂಡ ಉತ್ತಮ ಕೃತಿಗಳಾಗಿವೆ.,

ರಾಷ್ಟ್ರೀಯ ಅಲೆಮಾರಿ, ಅರೆ ಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟುಗಳ ಆಯೋಗದ ಒಂದು ಅಂದಾಜಿನ ಪ್ರಕಾರ ಭಾರತದ ೨೮ ರಾಜ್ಯಗಳಲ್ಲಿ ಮತ್ತು ೫ ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಟ್ಟು ೭೪೯ ಅಲೆಮಾರಿ ಸಮುದಾಯಗಳು ಅಸ್ತಿತ್ವದಲ್ಲಿದ್ದು ಸುಮಾರು ೧೦ ಕೋಟಿ ಜನಸಂಖ್ಯೆಯನ್ನು ಹೊಂದಿದೆ. ಇವುಗಳಲ್ಲಿ ಮಹಾರಾಷ್ಟ್ರ ರಾಜ್ಯದಲ್ಲಿ ಅತ್ಯದಿಕ ಅಂದರೆ ೭೩ ಅಲೆಮಾರಿ ಸಮುದಾಯಗಳು ಇದ್ದರೆ, ೨ನೇ ಸ್ಥಾನ ೫೬ ಅಲೆಮಾರಿಗಳನ್ನು ಹೊಂದಿದ್ದ ಕರ್ನಾಟಕ ರಾಜ್ಯಕ್ಕೆ ಸಲ್ಲುತ್ತದೆ. ಆದರೆ ಭಾರತದ ಸಂವಿಧಾನದ ಮೀಸಲಾತಿಯಲ್ಲಿ ಈ ಸಮುದಾಯಗಳು ಪರಿಶಿಷ್ಟರ ಮತ್ತು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಹಲವೆಡೆ ಹಂಚಿ ಹೋಗಿವೆ. ಸ್ವತಂತ್ರ ಭಾರತದಲ್ಲಿ ಅಲೆಮಾರಿ, ಅರೆಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟುಗಳನ್ನು ಸಂವಿಧಾನ ಬದ್ಧವಾಗಿ ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳಲ್ಲಿ ಇರಿಸಲಾಗಿದೆ. ಮುಕ್ತಗೊಳಿಸಿ ೪೮೯ ಸಮುದಾಯಗಳಲ್ಲಿ ೨೩೫ ಪ.ಜಾತಿ, ೪೭ ಪ.ಪಂ ಮತ್ತು ೨೦೭ ಸಮುದಾಯಗಳನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಇಡಲಾಗಿದೆ. ೨೬೬ ಅಲೆಮಾರಿ ಸಮುದಾಯಗಳಲ್ಲಿ ೬೫ ಪ.ಜಾತಿ, ೩೦ ಪ.ಪಂ ಮತ್ತು ೧೬೫ ಸಮುದಾಯಗಳನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಇಡಲಾಗಿದೆ.

೧೯೯೧ರ ಜನಗನತಿಯ ಪ್ರಕಾರ ಭಾರತದ ಬುಡಕಟ್ಟು ಸಂಖ್ಯೆ ೬,೭೭,೫೮,೩೮೦ ಇತ್ತು ಮತ್ತು ದೇಶದ ಒಟ್ಟು ಜನಸಂಖ್ಯೆಯಲ್ಲಿ ಬುಡಕಟ್ಟಿನವರು ಶೇ.೮.೦೮ರಷ್ಟು ಇದ್ದರು. ಇದರಲ್ಲಿ ೨೯.೬೦%ರಷ್ಟು ಜನ ಸಾಕ್ಷರರಿದ್ದರು. ಈಗ ೧೦ ಕೋಟಿ ದಾಟಿರುತ್ತಾರೆ. ಪರಿಶಿಷ್ಟ ಜನಾಂಗಗಳ ಒಟ್ಟು ಸಂಖ್ಯೆಯು ಬಹಳಷ್ಟಿದ್ದರೂ ಅವುಗಳಲ್ಲಿ ಏಳು ಪ್ರಧಾನವಾದ ಬುಡಕಟ್ಟು ಸಮೂಹಗಳಿವೆ. ಅವು ಗೊಂಡರು, ಸಂತಾಲರು, ಬಿಲ್ಲರು, ಒರಾಯನ್ನರು, ಖೊಂಡರು, ಮುಂಡರು ಮತ್ತು ಕಚಡಿಗಳು.

ಬ್ರಿಟೀಷ್ ಆಡಳಿತ ಅವಧಿಯಲ್ಲಿ ಆದಿವಾಸಿ ಕಲ್ಯಾಣವನ್ನು ವಿಶೇಷ ಕಾಳಜಿಯಿಂದ ಸರ್ಕಾರೇತರ ಸಂಸ್ಥೆಗಳು ನಿಗವಹಿಸಿದ್ದರೂ, ಆ ಸೇವೆ ಏಕರೂಪವಾಗಿರಲಿಲ್ಲ. ಹಾಗೂ ಅದರ ಕ್ಷೇತ್ರ ವ್ಯಾಪ್ತಿ ವಿಸ್ತಾರವಾಗಿರಲಿಲ್ಲ. ಕ್ರಿಸ್ತೀಯ ನಿಯೋಗಗಳು ಧಾರ್ಮಿಕ ಶ್ರದ್ಧಾ ಉದ್ದೇಶ ಹೊಂದಿದ್ದವು. ಮೊಟ್ಟ ಮೊದಲಿಗೆ ಶಾಲೆ, ಆಸ್ಪತ್ರೆ ತೆರೆದರು. ಕ್ರಿಸ್ತೀಯರಾಗಿ ಮತಾಂತರ ಹೊಂದಿದ ಆದಿವಾಸಿಗಳಿಗೆ ಆರ್ಥಿಕ ನೆರವು, ಉನ್ನತ ಶಿಕ್ಷಣಕ್ಕೆ ತಗಲುವ ವೆಚ್ಚ (ಶುಲ್ಕ), ಯೋಗ್ಯ ನೌಕರಿ ದೊರಕಿಸಿ ಕೊಡುವಲ್ಲಿ ಸಹಾಯ ಮುಂತಾದ ವಿಶೇಷ ಸೌಕರ್ಯಗಳನ್ನು ಕೊಟ್ಟರು. ಹೊರ ದೇಶದ ಅನೇಕ ಮಾನವಶಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು, ಆಡಳಿತಾಧಿಕಾರಿಗಳು ವಿಶೇಷವಾದ ಅಧ್ಯಯನಗಳನ್ನು ಆದಿವಾಸಿಗಳ ಮೇಲೆ ಮಾಡಿದರು. ೧೯೨೦ರ ವರೆಗೆ ಕ್ರಿಸ್ತೀಯ ನಿಯೋಗಗಳು ಈ ಕ್ಷೇತ್ರದಲ್ಲಿ ಕೆಲಸ ಮಾಡಿದವು. ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ ಕೆಲವು ವಿಧಾಯಕ ಕಾರ್ಯಕರ್ತರು ಮತ್ತು ಸರ್ವೆಂಟ್ಸ್ ಆಫ್ ಇಂಡಿಯಾ

ಸೊಸೈಟಿಯ ಸದಸ್ಯರು ಆದಿವಾಸಿಗಳ ಸ್ಥಿತಿಗತಿಗಳ ಬಗ್ಗೆ ಆಸಕ್ತಿ ವಹಿಸಲು ಪ್ರಾರಂಭಿಸಿದರು. ಎ.ವಿ. ಠಕ್ಕರ್‌ಬಾಬಾ ಎಂಬುವವರು ಇದರಲ್ಲಿ ಅತಿ ಪ್ರಮುಖರು. ಗಾಂಧೀವಾದಿ ಅನೇಕ ಕಾರ್ಯಕರ್ತರು ಪಶ್ಚಿಮ ಭಾರತ, ಮಧ್ಯಪ್ರಾಂತ ಮತ್ತು ರಾಜಪುತಾನಾಗಳಲ್ಲಿ ಆದಿವಾಸಿಗಳಿಗಾಗಿ ಕಾರ್ಯ ಚಟುವಟಿಕೆಗಳನ್ನು ನಡೆಸಿದರು.

ಭಾರತದಲ್ಲಿ ೧೯೫೦ರಿಂದ ಇದುವರೆಗೆ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಅನುಚ್ಛೇದ ೩೪೨ (೧) ಹಾಗೂ (೨)ರ ಪ್ರಕಾರ ಸೇರಿರುವ ಬುಡಕಟ್ಟುಗಳ ಸಂಖ್ಯೆ ೬೩೬. ಇನ್ನು ಈ ಸಂಖ್ಯೆಯಲ್ಲಿ ವೃದ್ಧಿಯಾಗುವ ಸಂಭವವಿದೆ. ಕಾರಣ ಇನ್ನು ಹಲವಾರು ಸಮುದಾಯಗಳು ಈ ಪಟ್ಟಿಗೆ ಸೇರಲು ಅರ್ಹವಾಗಿವೆ.

೧೯೯೧ರ ಜನಗಣತಿ ಪ್ರಕಾರ ವಿಶ್ವದಲ್ಲಿ ಭಾರತವು ಅತಿ ಹೆಚ್ಚು ಬುಡಕಟ್ಟು ಜನಸಂಖ್ಯೆಯನ್ನು ಹೊಂದಿದ ದೇಶವಾಗಿದೆ. ಭಾರತದಲ್ಲಿನ ಒಟ್ಟು ಬುಡಕಟ್ಟು ಜನಸಂಖ್ಯೆಯು ಫ್ರಾನ್ಸ್, ಬ್ರಿಟನ್ ಮತ್ತು ಆಸ್ಟ್ರೇಲಿಯಾದ ನಾಲ್ಕು ಪಟ್ಟು ಜನಸಂಖ್ಯೆಯಷ್ಟಾಗುತ್ತಾರೆ. ಭಾರತದಲ್ಲಿರುವ ಎಲ್ಲಾ ಬುಡಕಟ್ಟು ಜನರು ಒಂದು ರಾಜ್ಯದ ಸರಾಸರಿ ಜನಸಂಖ್ಯೆಯಷ್ಟಾಗುತ್ತಾರೆ. ಭಾರತದಲ್ಲಿ ೨೦೦೧ರ ಜನಗಣತಿಯ ಪ್ರಕಾರ ಒಟ್ಟು ಬುಡಕಟ್ಟು ಜನಸಂಖ್ಯೆ ೮೪೩ ಮಿಲಿಯನ್ (೮,೪೩,೨೬,೨೪೦) ಆಗಿರುತ್ತದೆ. ಕೆ.ಎಸ್. ಸಿಂಗ್‌ರವರು ೪೬೧ ಬುಡಕಟ್ಟು ಸಮುದಾಯಗಳನ್ನು ಗುರ್ತಿಸಿದ್ದಾರೆ. ಇವುಗಳಲ್ಲಿ ಅನೇಕವು ಬಸವಳಿದಿವೆ. ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇ. ೮.೪೮ರಷ್ಟು ಜನರು ಇದ್ದಾರೆ.

ಪ್ರಪಂಚದ ಬುಡಕಟ್ಟುಗಳನ್ನು ನಿಖರವಾಗಿ ವ್ಯಾಖ್ಯಾನಿಸುವುದು ಕಷ್ಟ ಸಾಧ್ಯ. ಕಾರಣ ಸರ್ಕಾರದ ಮಾನದಂಡದ ಪ್ರಕಾರ ತೀರ್ಮಾನಿಸಿ ತನ್ನ ಅಧಿಕೃತ ಪಟ್ಟಿಯಲ್ಲಿ ಸೇರಿಸಿಕೊಂಡವರನ್ನು ಪರಿಶಿಷ್ಟ ಪಂಗಡ ಎನ್ನುವುದಾದರೆ, ಈ ಪಟ್ಟಿಯಲ್ಲಿ ತಮ್ಮ ಜಾತಿ/ಪಂಗಡಗಳ ನಮೂದನೆಗೆ ಅನೇಕ ರಾಜಕೀಯ ಪ್ರೇರಿತ ಒತ್ತಡಗಳು, ಹೋರಾಟಗಳು, ಹಿಂಸೆ, ಘರ್ಷಣೆ ಇತ್ಯಾದಿ ವರ್ತನೆಗಳಿಂದ ಪಟ್ಟಿಯಲ್ಲಿ ಸ್ಥಾನ ಪಡೆದು ಪರಿಶಿಷ್ಟರ ಎಲ್ಲಾ ಸೌಲಭ್ಯಗಳನ್ನು ತಮ್ಮದಾಗಿಸಿಕೊಳ್ಳಬಯಸುವ ಹುನ್ನಾರ ಎಲ್ಲೆಡೆ ಕಂಡುಬರುತ್ತಿದೆ. ಭಾರತದಲ್ಲಂತೂ ಈ ಮಾತು ಸತ್ಯ. ಭಾರತದ ಬಹುತೇಕ ರಾಜ್ಯಗಳಲ್ಲಿ ಇಂದಿಗೂ ಪರಿಶಿಷ್ಟರ ಪಟ್ಟಿಗೆ ಸೇರ್ಪಡೆಗೊಳ್ಳಬಯಸುವ ಆದರೆ ಪರಿಶಿಷ್ಟ ಪಂಗಡದ ದಟ್ಟ ಲಕ್ಷಣಗಳು ಕಂಡುಬರದಿದ್ದರೂ, ಒತ್ತಡದ ಮರ್ಜಿಗೆ ಒಳಗಾಗಿಸುವ ಹುನ್ನಾರ ಸಾರ್ವತ್ರಿಕವಾಗುತ್ತಿದೆ. ಈ ರೀತಿಯ ವರ್ತನೆಗಳಿಂದ ನಿಜವಾಗಿ ಯಾರಿಗೆ ಪರಿಶಿಷ್ಟರ ಸೌಲಭ್ಯ ಲಭ್ಯವಾಗಬೇಕೋ ಅವರು ವಂಚಿತರಾಗಿ ಬಲಿಪಶುಗಳಾಗಬೇಕಾಗುತ್ತದೆ. ಮೇಲುಗೈ ಸಾಧಿಸಿರುವ ಅಥವಾ ನವ ಪರಿಶಿಷ್ಟಪಂಗಡ(Neo Tribe)ದವರ ಎದುರು ವಾಸ್ತವಾಗಿ ಅವಕಾಶ ವಂಚಿತ ಪರಿಶಿಷ್ಟಪಂಗಡದವರು ಅಲ್ಪಸಂಖ್ಯಾತರಂತಾಗಿ, ದನಿಕಳೆದುಕೊಂಡು ಪುನಃ ಎರಡನೇ ದರ್ಜೆಯ ಪ್ರಜೆಗಳಾಗಿ ಬದುಕಬೇಕಾದಂತಹ ಪರಿಸ್ಥಿತಿ ಭಾರತದಲ್ಲಿ

ಕಂಡುಬರುತ್ತದೆ. ಅಂದರೆ 'ಉಳ್ಳವರ ಸ್ವತ್ತಾಗುವ' ಬಲಪ್ರಯೋಗ ಪ್ರಕ್ರಿಯೆ ನಡೆಯುತ್ತಲೇ ಇದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಬುಡಕಟ್ಟು ಯಾರೆಂದು ಗುರುತಿಸಲು ಸರ್ಕಾರದ ಮಾನದಂಡಕ್ಕಿಂತ ಈ ಕುರಿತಾಗಿ ವ್ಯಾಖ್ಯಾನ ಕೊಡುವ ವಿದ್ವಾಂಸರ ಹೇಳಿಕೆಗಳು ಇಲ್ಲಿ ಮುಖ್ಯವಾಗುತ್ತದೆ.

ಯಾವ ಜನ ಗತಕಾಲದಿಂದಲೂ ನಿಸರ್ಗದ ಮಡಿಲಿನಲ್ಲಿ ಸುಖವಾಗಿ ಬದುಕಲು ಬಯಸುವುದೋ, ಪ್ರಕೃತಿ ಜನ್ಯ ಉತ್ಪನ್ನಗಳನ್ನೇ ಭಕ್ಷಿಸಲು ಯತ್ನಿಸುವುದೋ, ತನ್ನದೇಯಾದ ಒಂದು ವಿಶಿಷ್ಟ ರೀತಿಯ ಜೀವನ ವಿಧಾನದಿಂದ ಜೀವಿಸುವ ಆಶಯವನ್ನು ಹೊಂದಿ ಆ ರೀತಿಯಲ್ಲಿಯೇ ಜೀವನ ನಡೆಸುವುದೋ ಆ ಜನರಿಗೆ ಆದಿವಾಸಿ ಅಥವ ಬುಡಕಟ್ಟು ಜನ ಎಂದು ಕರೆಯುವರು.

೧.೬ ಕರ್ನಾಟಕದಲ್ಲಿ ಬುಡಕಟ್ಟು ಸಮುದಾಯಗಳ ಅಧ್ಯಯನ

ಕರ್ನಾಟಕದಲ್ಲಿ ಮೊದಲಿಗೆ ೧೯೦೩ರಲ್ಲಿ ಕರ್ನಾಟಕದ ಬುಡಕಟ್ಟುಗಳನ್ನು ಕುರಿತಾದ ಅಧ್ಯಯನ ಪ್ರಾರಂಭವಾಯಿತು. ಶ್ರೀ. ಹೆಚ್.ವಿ. ನಂಜುಂಡಯ್ಯನವರು ಮೈಸೂರಿನಲ್ಲಿರುವ ಬುಡಕಟ್ಟುಗಳನ್ನು ಕುರಿತು ಅಧ್ಯಯನ ಮಾಡಿದರು. ಆನಂತರ ಅನಂತಕೃಷ್ಣ ಅಯ್ಯರ್‌ರವರು ಇದನ್ನು ಮುಂದುವರೆಸಿಕೊಂಡು ಹೋದರು. ಇವರು `The Mysore Tribes and caste' ಎಂಬ ಗ್ರಂಥವನ್ನು ೪ ಸಂಪುಟಗಳಲ್ಲಿ ಹೊರತಂದಿದ್ದಾರೆ. ೧೯೦೩ರಲ್ಲಿ ಎ.ಎ.ಡಿ. ಲೂಯಿಸ್‌ರವರು ತಮ್ಮ Tribes of Mysore ಎಂಬ ಕೃತಿಯಲ್ಲಿ ಮೈಸೂರಿನಲ್ಲಿ ೨೭ ಬುಡಕಟ್ಟುಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಇದಲ್ಲದೆ ಎಡ್ಗರ್ ಥರ್ಸ್ಟನ್ ಮತ್ತು ಕೆ. ರಂಗಾಚಾರಿಯವರು `Caste and Tribes of south India' ಎಂಬ ೭ ಸಂಪುಟುಗಳ ಗ್ರಂಥಗಳನ್ನು ಪ್ರಕಟಿಸಿ ಪ.ಜಾತಿ, ಪ.ಪಂಗಡಗಳ ಕುರಿತ ವಿವರಣೆಗಳನ್ನು ನೀಡಿದ್ದಾರೆ. Anthropological survey of India ಎಂಬ ಸಂಸ್ಥೆಯು ಕರ್ನಾಟಕದಲ್ಲಿ ಇರುವ ಕೆಲವು ಪರಿಶಿಷ್ಟ ಬುಡಕಟ್ಟುಗಳನ್ನು ಪರಿಚಯ ಮಾಡಿಕೊಡುವ ಕಿರು ಪುಸ್ತಕಗಳನ್ನು ಹೊರತಂದಿದೆ. ಹಾಗೆಯೇ ಎಲ್.ಜಿ. ಹಾವನೂರ್‌ರವರು ಸಿದ್ಧಪಡಿಸಿರುವ Karnataka Backward class commission report -1975 (ಕಹಿಂತ ಆ ವರದಿ-೧೯೭೫)ರಲ್ಲಿ ಹಿಂದುಳಿದ ವರ್ಗಗಳು ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಅಭಿವೃದ್ಧಿಯನ್ನು ಕೈಗೊಳ್ಳಲು ಸಲಹೆಗಳನ್ನು ನೀಡಿದ್ದಾರೆ. ಅವರಿಗೆ ಉತ್ತಮ ಸೌಲಭ್ಯಗಳನ್ನು ಕಲ್ಪಿಸಿಕೊಡುವ ಕುರಿತು ವಿವರಿಸಿದ್ದಾರೆ. ೧೯೦೧ರಲ್ಲಿ ಪ್ರಕಟವಾದ Madras census Report-1907ರಲ್ಲಿ ಮೈಸೂರು ಜಿಲ್ಲೆಯ ಎಲ್ಲಾ ಜಾತಿ ಮತ್ತು ಬುಡಕಟ್ಟುಗಳ ಬಗ್ಗೆ ಮಾಹಿತಿಗಳಿವೆ. ೧೯೨೬ರಲ್ಲಿ ಸೈಯದ್ ಸಿರಜ್-ಉಲ್-ಹಸನ್‌ರವರ `The caste and Tribe of Nizams dominion' ಎಂಬ ಗ್ರಂಥದಲ್ಲಿ ಹೈದ್ರಾಬಾದ್ ಕರ್ನಾಟಕದ ಅನೇಕ ಜಾತಿ ಮತ್ತು ಬುಡಕಟ್ಟುಗಳ ಪರಿಚಯುವಿದೆ.

ಕರ್ನಾಟಕ ಬುಡಕಟ್ಟುಗಳ ಬಗ್ಗೆ ಇ. ಥರ್ಸ್ಟನ್‌ರವರು Ethnographic notes an southern India, Caste and Tribes of southern India, (1906 No 1,7) ಸಿ. ಹಯವದನರಾವ್‌ರವರು Mysore caste and Tribes (೪ನೇ ಸಂಪುಟ) ಎಲ್. ಅನಂತಕೃಷ್ಣ ಅಯ್ಯರ್‌ರವರು The coorg Tribes and castes-1941 ಎಂಬ ಕೃತಿಗಳಲ್ಲಿ ವಿವರಗಳನ್ನು ನೀಡಿದ್ದಾರೆ. ಈ ಮೇಲಿನ ಬರಹಗಳ ಮೇಲೆ ಕೆಲವು ಜಾತಿ ಮತ್ತು ಬುಡಕಟ್ಟುಗಳ ಪರಿಚಯ ದೊರೆಯುತ್ತದೆ. ಇವು ೧೯ನೇ ಶತಮಾನದ ಆರಂಭದಿಂದ ೨೦ನೇ ಶತಮಾನದ ಮಧ್ಯಭಾಗದ ಸ್ಥಿತಿಗತಿಗಳನ್ನು ತಿಳಿಸುತ್ತವೆ.

ಬಾಂಬೆ, ಹೈದ್ರಾಬಾದ್, ಮದ್ರಾಸ್ ರಾಜ್ಯಗಳಿಂದ ಹಲವು ಪ್ರದೇಶಗಳು ನವೆಂಬರ್ ೧.೧೯೫೬ರಂದು ಭಾಷಾವಾರು ಪ್ರಾಂತ ರಚನೆಯಿಂದಾಗಿ ಕನ್ನಡ ನಾಡಿಗೆ ಕೂಡಿಕೊಂಡವು. ನಂತರ ಆ ಪ್ರದೇಶಗಳಲ್ಲಿಯ ಹಲವು ಜಾತಿಗಳು ಹಾಗೂ ಬುಡಕಟ್ಟುಗಳು ಕನ್ನಡ ನಾಡಿಗೆ ಕೂಡಿಕೊಂಡು ಪ್ರಾದೇಶಿಕ ಮಿತಿಗಳೊಂದಿಗೆ ೧೯೫೬ರ The scheduled castes and scheduled Tribes (Modification) order ಪ್ರಕಾರ ಮೇ ೧.೧೯೬೦ರಿಂದ ಮೀಸಲಾತಿ ಪಡೆಯಲು ಅರ್ಹವಾದವು. The scheduled castes and scheduled Tribes (Amendment) Act-1976 (No. 108 of 1976 dated 18th sept. 1976)ರ ಪ್ರಕಾರ ಕರ್ನಾಟಕದಲ್ಲಿ ೪೯ ಬುಡಕಟ್ಟುಗಳು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿದವು. ಕಮ್ಮಾರ, ಕಣಿಯನ್, ಕಣ್ವನ್, ಕುರುಬ, ಮರಾಠ, ಮರಾಟಿ ಬುಡಕಟ್ಟುಗಳ ಪ್ರಾದೇಶಿಕ ಮಿತಿಯನ್ನು ಸಡಿಲಿಸದೆ ಉಳಿದವುಗಳ ಪ್ರಾದೇಶಿಕ ಮಿತಿಯನ್ನು ಸಡಿಲಿಸಿ ಕರ್ನಾಟಕ ರಾಜ್ಯಾದ್ಯಂತ ವಿಸ್ತರಿಲಾಯಿತು. The constitution (schduled Tribes) orders (Second Amendment) Act-1991 (no. 39 of 1991)ರ ಪ್ರಕಾರ ನಾಯಕ ಬುಡಕಟ್ಟುವಿನೊಂದಿಗೆ ಅದರ ಸಮಾನಾಂತರ ಪದಗಳಾಗಿ ಅದೇ ಸಮುದಾಯದ ನಾಯ್ಕ(Naik), ನಾಯಕ್(Nayak), ಬೇಡ(Beda), ಬೇಡರ್(Bedar) ಮತ್ತು ವಾಲ್ಮೀಕಿ(Valmiki) ಪದಗಳು ಸೇರಿದವು. ಆದಾಗ್ಯೂ ೧೯ನೇ ಏಪ್ರೀಲ್ ೧೯೯೧ರಿಂದ ಮೀಸಲಾತಿ ಪಡೆಯಲು ಅರ್ಹವಾದವು. ಸಿದ್ಧಿ ಜನಾಂಗವು ಕರ್ನಾಟಕದ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರ್ಪಡೆಗೊಳ್ಳುವುದರೊಂದಿಗೆ ಒಟ್ಟು ೫೦ ಬುಡಕಟ್ಟುಗಳಿವೆ. ೧೯೯೪ರಲ್ಲಿ ಕನ್ನಡ ವಿಶ್ವವಿದ್ಯಾಲಯ, ಹಂಪಿಯಲ್ಲಿ ಆರಂಭಗೊಂಡ ಬುಡಕಟ್ಟು ಅಧ್ಯಯನ ವಿಭಾಗವು ಕರ್ನಾಟಕದ ಬುಡಕಟ್ಟುಗಳನ್ನು ಕುರಿತು ವಿಶೇಷವಾಗಿ ಅಧ್ಯಯನ ಮಾಡುತ್ತಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಉಪಸಂಸ್ಕೃತಿ ಅಧ್ಯಯನ ಮಾಲೆಯಲ್ಲಿ ಬುಡಕಟ್ಟುಗಳ ಬಗ್ಗೆ ಅನೇಕ ಗ್ರಂಥಗಳನ್ನು ಹೊರತಂದಿವೆ. ಈ ಎಲ್ಲಾ ಗ್ರಂಥಗಳು ಕರ್ನಾಟಕದ ಬುಡಕಟ್ಟುಗಳ ಬಗ್ಗೆ ಬೆಳಕು ಚೆಲ್ಲುತ್ತವೆ. ಕನ್ನಡ ವಿಶ್ವವಿದ್ಯಾಲಯದ ಮೂಲ ಧ್ಯೇಯವೆನಿಸಿದ ದೇಸಿ ಸಂಸ್ಕೃತಿ ಹುಡುಕಾಟದ ಧೋರಣೆಗೆ ಪೂರಕವಾಗಿ ಡಾ. ಕೆ.ಎಂ.

ಮೈತ್ರಿಯವರ 'ಬುಡಕಟ್ಟು ಕುಲಕಸುಬು'ಗಳು ಕರ್ನಾಟಕದ ೪೯ ಬುಡಕಟ್ಟುಗಳ ಸಂಕ್ಷಿಪ್ತ ಮಾಹಿತಿಯೊಂದಿಗೆ, ಅವರ ವೃತ್ತಿ ಕಸುಬುಗಳನ್ನು ಪರಿಚಯಿಸುತ್ತದೆ. ಇದರಲ್ಲಿ ಮೇದ ಬುಡಕಟ್ಟಿನ ಬಗ್ಗೆಯೂ ಸಂಕ್ಷಿಪ್ತ ಮಾಹಿತಿ ಲಭ್ಯವಾಗುತ್ತದೆ. (ಪು-೧೮೨) ಬುಡಕಟ್ಟು ಜನಾಂಗದ ವೈಶಿಷ್ಟ್ಯಗಳನ್ನು ಅವರ ಸಾಮಾಜಿಕ ಹಾಗೂ ಸಾಂಸ್ಕೃತಿಕ ನೆಲೆಗಳನ್ನು ವೈಜ್ಞಾನಿಕ ತಳಹದಿಯ ಮೇಲೆ ಗುರುತಿಸುವ, ಸಂಶೋಧಿಸುವ, ಅಧ್ಯಯನಿಸುವ ಜವಾಬ್ದಾರಿಯನ್ನು ಬುಡಕಟ್ಟು ಅಧ್ಯಯನ ವಿಭಾಗದಿಂದ ಸಾಧ್ಯವಾಗುತ್ತಿದ್ದು, ಕರ್ನಾಟಕದ ಎಲ್ಲಾ ವಿಶ್ವವಿದ್ಯಾನಿಲಯಗಳ ಮಾನವಿಕ ವಿಜ್ಞಾನಗಳ ವಿಭಾಗಗಳಿಂದ ವಿಶೇಷ ಆಸ್ಥೆವಹಿಸಿ, ಬುಡಕಟ್ಟುಗಳ ಸಮಗ್ರ ಅಧ್ಯಯನ ಇಲ್ಲವೇ ಬೇರೆ ಬೇರೆ ಮಜಲುಗಳಲ್ಲಿ ಅಧ್ಯಯನಿಸುವ ಪ್ರಯತ್ನ ತೀವ್ರತರವಾಗುತ್ತಿರುವುದು ಆಶಾದಾಯಕವೆನಿಸುತ್ತದೆ.

ಹೊಸ ಹೊಳವುಗಳು ಅನೇಕ ಅವ್ಯಕ್ತ ಸಂಗತಿಗಳು ಬಾಹ್ಯ ಪ್ರಪಂಚದಲ್ಲಿ ತೆರೆದುಕೊಳ್ಳುತ್ತಿರುವುದು, ಜ್ಞಾನರಾಶಿಗೆ ಸೇರ್ಪಡೆಯಾಗುತ್ತಿರುವುದು, ಸಂಶೋಧನೆಯ ಸಕ್ರಿಯತೆಯನ್ನು ತೋರಿಸುತ್ತದೆ. ಕರ್ನಾಟಕದ ಬುಡಕಟ್ಟು ಸಮುದಾಯಗಳಿಗೆ ಅವರ ಪಾರಂಪರಿಕ ಮತ್ತು ಭೌಗೋಳಿಕ ಹಾಗೂ ಪರಿಸರ ಮೌಲ್ಯಗಳನ್ನು ರೂಪಿಸಿಕೊಡಲಾರವು. ಏಕೆಂದರೆ ಬುಡಕಟ್ಟು ಸಮುದಾಯಗಳಿಗೆ ಆಧುನಿಕ ಪ್ರಪಂಚದ ಅರ್ಥವಾಗದ ನಾಗರಿಕ ಜಾತ್ರೆಯ ದಿಬ್ಬಣಕ್ಕಿಂತ ತಮ್ಮ ಮೂಲ ಸಂಸ್ಕೃತಿಯ ಆಚರಣೆ ಮತ್ತು ನಂಬಿಕೆ ಮುಖ್ಯ. ಇದರಿಂದಾಗಿ ಕರ್ನಾಟಕ ರಾಜ್ಯದ ಅಭಿವೃದ್ಧಿಯ ನೀತಿಯನ್ನು ಇಲ್ಲಿಯ ಬುಡಕಟ್ಟುಗಳು ಒಪ್ಪಿಕೊಳ್ಳಲಾರವು. ಯಾವುದೇ ಯೋಜನೆಗಳು ಜನಮಾನಸದಲ್ಲಿ ಅಭಿವೃದ್ಧಿ ಪರಿಕಲ್ಪನೆ ಅರ್ಥೈಸಿ, ಸಹನಡಿಗೆ ಹಾಕದವರೆಗೂ ಒತ್ತಾಯದ ಹೇರುವಿಕೆ ಅಭಿವೃದ್ಧಿಗೆ ಹಿನ್ನೆಡೆಯಾಗುತ್ತದೆ ಎಂಬುದನ್ನು ಯೋಜನಾಕಾರರು ಅರ್ಥ ಮಾಡಿಕೊಳ್ಳಬೇಕು. ಬುಡಕಟ್ಟುಗಳಿಗೆ ಬೇಕಾದುದನ್ನು ನೀಡಬೇಕೇ ಹೊರತು, ನಮ್ಮಿಷ್ಟದಂತೆ ಕೊಡುವುದು ಎಷ್ಟೋ ವೇಳೆ ಅವರಿಗೆ ಬೇಡವಾಗಿರ ಬಹುದೆಂಬುದನ್ನು ಪ್ರಭುತ್ವ ಅರ್ಥಮಾಡಿಕೊಳ್ಳದೇ ಹೋಗಬಹುದು.

ಕರ್ನಾಟಕದಲ್ಲಿರುವ ನಾನಾ ಆದಿವಾಸಿ ಬುಡಕಟ್ಟುಗಳು ಅಲೆಮಾರಿ, ಅರೆಅಲೆಮಾರಿ ಸಮುದಾಯಗಳ ಅಧ್ಯಯನದಿಂದ, ಅವರ ಪುನರ್‌ವಸತಿ, ಆಹಾರ ಪದ್ಧತಿ, ಔಷದೋಪಚಾರಗಳು, ಮಹಿಳೆಯರ ಆರೋಗ್ಯ ಸುಧಾರಣೆಗಳು, ಕೆಲ ಸಮುದಾಯಗಳ ಸ್ಥಿತ್ಯಂತರಗಳು, ಬುಡಕಟ್ಟುಗಳ ಅಭಿವೃದ್ಧಿ ಮತ್ತು ಮೂಲಭೂತ ಹಕ್ಕುಗಳು, ಬುಡಕಟ್ಟುಗಳ ಪುನರ್‌ವ್ಯಾಖ್ಯಾನ, ನಂಬಿಕೆಗಳು, ಸಾಂಸ್ಕೃತಿಕ ಆಚರಣೆಗಳು, ಕಲ್ಯಾಣ ಕಾರ್ಯಕ್ರಮಗಳು, ಸಾಮಾಜಿಕ ಸ್ಥಿತಿಗತಿಗಳು, ಕರಕುಶಲತೆಗಳು, ಅವರ ಪರಿವರ್ತನೆಯ ಹಾದಿ, ಜೀವನ ಕ್ರಮ, ಬುಡಕಟ್ಟುಗಳ ವೈವಾಹಿಕ ಪದ್ಧತಿ, ಆಧುನೀಕತೆಯ ಜೀವನ ಶೈಲಿಯಿಂದ ಬುಡಕಟ್ಟು ಸಂಸ್ಕೃತಿ, ಆಚಾರ, ವಿಚಾರ, ಸಂಪ್ರದಾಯ ಇತ್ಯಾದಿ ಅನೇಕ ಸಮಗ್ರ ಮಾಹಿತಿಗಳನ್ನು ವಿವಿಧ ಮಜಲುಗಳಲ್ಲಿ

ಅನಾವರಣಗೊಳಿಸುವ ಪ್ರಯತ್ನವನ್ನು ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗ ಪೂರ್ಣ ಪ್ರಮಾಣದಲ್ಲಿ ಸಂಶೋಧನಾ ಚಟುವಟಿಕೆಯನ್ನು ಕೈಗೊಂಡಿದ್ದು, ನಾಡಿನಾದ್ಯಂತ ಇರುವ ಇಂತಹ ಬುಡಕಟ್ಟುಗಳ ಮೇಲೆ ಕ್ಷ-ಕಿರಣ ಬೀರುತ್ತಿದೆ.

೧.೭ ಕರ್ನಾಟಕದಲ್ಲಿ ಮೇದರ ನೆಲೆಗಳು ಮತ್ತು ಜನಸಂಖ್ಯೆ

ದಿನಾಂಕ ೧೫.೦೬.೨೦೦೩ರಂದು ಕರ್ನಾಟಕದಲ್ಲಿ ೫೦ ಬುಡಕಟ್ಟುಗಳನ್ನು ಸಂವಿಧಾನಾತ್ಮಕವಾಗಿ ಗುರ್ತಿಸಲ್ಪಟ್ಟಿದೆ. ಕರ್ನಾಟಕ ರಾಜ್ಯದ ಪರಿಶಿಷ್ಟ ವರ್ಗದ ಪಟ್ಟಿಯ ಕ್ರಮಸಂಖ್ಯೆ ૩೭ರಲ್ಲಿ ಮೇದ, ಮೇದಾರಿ, ಬುರುಡ್, ಗೌರಿಗ ಸಮಾನಾರ್ಥ ಪರ್ಯಾಯ ಪದಗಳು ಪರಿಶಿಷ್ಟದಲ್ಲಿದೆ. ಪ್ರಾದೇಶಿಕವಾಗಿ ಬಿದಿರಿನ ಉದ್ಯೋಗವನ್ನು ಮಾಡುವವರನ್ನು ಮೇದಾರ (Medara), ಮೇದರು (Medaru), ಬುರುಡ (Buruda), ಮಿಯಾದಾರ (Miyadara), ಮ್ಯಾದಾರ (Myadara), ಮೇದರೆ (Medare), ಮೇದ (Meda), ಬಿದರು (Bidaru), ಮಿದರು (Midaru), ಮೇದರ್ (Medar), ಮೇದರಿ (Medari), ಗೌರಿಗ (Gauriga), ಗವರಿಗ (Gavariga), ಬುಡ್ಡರ್ (Buddar) ಎಂಬ ಹೆಸರುಗಳಿಂದಲೂ ಕರೆಯಲಾಗುತ್ತಿದೆ.

ಮೇದ ಸಮುದಾಯವನ್ನು ೧೯೫೬ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಪರಿಷ್ಕೃತ ಆದೇಶದ ಪರಿಶಿಷ್ಟ III, ಭಾಗ VIIIರ ಮೈಸೂರು ರಾಜ್ಯದ ಪಟ್ಟಿಯ ಕ್ರಮಸಂಖ್ಯೆ (೭), ೫ರ ಪ್ರಕಾರ ಕೊಡಗು ಜಿಲ್ಲೆಗೆ ಸೀಮಿಗೊಂಡಂತೆ ಬುಡಕಟ್ಟು ಪಟ್ಟಿಗೆ ಸೇರಿಸಲಾಗಿದೆ. ಇದರ ಪ್ರಾದೇಶಿಕ ಮಿತಿಯನ್ನು ೨೭.೦೭.೧೯೭೭ರಂದು ಸಡಿಲಿಸಿ ಇಡೀ ಕರ್ನಾಟಕಕ್ಕೆ ವಿಸ್ತರಿಸಲಾಯಿತು. ಆದರೆ ಈ ಬುಡಕಟ್ಟಿನ ಪರ್ಯಾಯ ಪದಗಳ್ಯಾವುವೂ ಈ ಪಟ್ಟಿಯಲ್ಲಿ ಸೇರಿಸಲ್ಪಟ್ಟಿರಲಿಲ್ಲ. ಮೇದರನ್ನೇ ಪ್ರತಿನಿಧಿಸುವ ಪದಗಳಾದ ಮೇದರ್, ಮೇದರಿ, ಗೌರಿಗ, ಬುರುಡ ಮತ್ತು ಬುಡ್ಡರ್ ಪದಗಳನ್ನು ಮೇದ ಪದದ ಪರ್ಯಾಯ ಪದಗಳೆಂದು ಪರಿಗಣಿಸಿ ಆ ಎಲ್ಲಾ ಪದಗಳಿಗೂ ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಕರ್ನಾಟಕ ಸರ್ಕಾರ ೨೯.೧೧.೧೯೭೭ರಿಂದ ಒಂದು ವರ್ಷದ ಮಟ್ಟಿಗೆ ಕಲ್ಪಿಸಿ ಮೊಟಕುಗೊಳಿಸಿತು. ಜೊತೆಗೆ ೦೧.೧೨.೧೯೭೮; ೨೮.೧೧.೧೯೮೪; ೦೭.೧೧.೧೯೮೭; ೦೫.೧೨.೧೯೯೧ ಮತ್ತು ೧೯.೧೦.೧೯೯೫ ದಿನಾಂಕಗಳಂದು ಈ ಬುಡಕಟ್ಟಿನ ಪರ್ಯಾಯ ಪದಗಳನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು ಕರ್ನಾಟಕ ಸರ್ಕಾರ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವುದು. ದಿನಾಂಕ ೦೮.೦೧.೨೦೦૩ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆದೇಶ (ತಿದ್ದುಪಡಿ) ಕಾಯ್ದೆ ೨೦೦೨ರ ಅಧಿನಿಯಮದಲ್ಲಿ ಗೌರಿಗ, ಮೇದಾರಿ ಮತ್ತು ಬುರುಡ್ ಇವುಗಳನ್ನು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರ್ಪಡೆಗೊಳಿಸಲಾಯಿತು. ೧೮೮೧, ೧೯૩೦, ೧೯೮೧ರ ಜನಗಣತಿ ಪ್ರಕಾರ ಮೇದರ ಜನಸಂಖ್ಯೆ ದಾಖಲಾಗಿರುವುದು ಕಂಡುಬರುತ್ತದೆ. ೧೯೭೧ರ ಜನಗಣತಿಯಲ್ಲಿ ಮೇದರ ಜನಸಂಖ್ಯೆ ૩೨೫ ಎಂದು ನಮೂದಾಗಿದೆ. ೧೯೮೧ರ ಜನಗಣತಿ

[illegible]

ಪ್ರಕಾರ ಮೇದರ ಜನಸಂಖ್ಯೆ ೧೮,೬೮೪ ಎಂದು ದಾಖಲಾಗಿರುವುದು. ೧೯೭೧ ಹಾಗೂ ೧೯೮೧ರ ಜನಗಣತಿಯ ಮೇದರ ಅಂಕಿ ಅಂಶಗಳಲ್ಲಿ ಅಜಗಜಾಂತರ ವ್ಯತ್ಯಾಸವಾಗಲು ಮುಖ್ಯ ಕಾರಣ ಈ ಬುಡಕಟ್ಟಿನ ಪ್ರಾದೇಶಿಕ ಮಿತಿಯ ವ್ಯತ್ಯಾಸಗಳು. ೨೦೦೧ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿ ಮೇದ, ಮೇದಾರಿ, ಬುರುಡ್ ಹಾಗೂ ಗೌರಿಗರ ಜನಸಂಖ್ಯೆ ೩೭೩೭೧ ಇದ್ದು ಇದರಲ್ಲಿ ೧೮೭೭೮ ಪುರುಷರು ಹಾಗೂ ೧೮೫೯೩ ಮಹಿಳೆಯರಿದ್ದಾರೆ. ಇವರಲ್ಲಿ ಶೇ.೬೧.೧೮ರಷ್ಟು ಮೇದರು ನಗರವಾಸಿಗಳಾಗಿದ್ದು, ಶೇ.೩೮.೮೨ರಷ್ಟು ಮೇದರು ಗ್ರಾಮೀಣ ವಾಸಿಗಳಾಗಿದ್ದಾರೆ. ಇವರಲ್ಲಿ ೬೪%ಕ್ಕೂ ಹೆಚ್ಚು ಜನ ನಗರವಾಸಿಗಳಾಗಿದ್ದಾರೆ.

"ಮೇದರ ಹಿಂದಿನ ನೆಲೆಗಳು ಮುಂಬೈ ಅದಿಪತ್ಯ, ಮಧ್ಯಭಾರತ ಸಂಸ್ಥಾನ ಮತ್ತು ಬೆರಾರ್, ನಿಜಾಮ ಸಂಸ್ಥಾನ, ಮೈಸೂರು ಆಗಿದೆ. ಪ್ರಸ್ತುತ ಭಾರತದ ಬಿಹಾರ ಧನಬಾಗ, ಮಾದೇಪುರ, ಮಧುಬನಿ, ಪೂರ್ಣೀಯ, ಸಹರ್ಸಾ ಸಮಸ್ತಿಪುರ, ವೈಶಾಲಿ, ಕರ್ನಾಟಕರಾಜ್ಯ, ಪಶ್ಚಿಮ ಬಂಗಾಳದ ಮುರ್ಷಿದಾಬಾದ್, ಕೇರಳ ಕಣ್ಣನ್ನೂರು, ಎರ್ನಾಕುಲಂ, ಆಂಧ್ರಪ್ರದೇಶ, ಗುಜರಾತ್‌ನ ಡಂಗ್ಸ್, ಜಮ್ಮುಕಾಶ್ಮಿರದ ಜಮ್ಮು, ಮಹಾರಾಷ್ಟ್ರ, ತಮಿಳುನಾಡಿನಲ್ಲಿ ಕಂಡುಬರುತ್ತವೆ."[೪] ಕನ್ನಡ ವಿ.ವಿ. ಬುಡಕಟ್ಟು ಅಧ್ಯಯನ ವಿಭಾಗದ ಡಾ. ಕೆ.ಎಂ. ಮೇತ್ರಿಯವರು ಯುಜಿಸಿಯ ಸ್ಯಾಪ್ ಕಾರ್ಯಕ್ರಮದ ಅಂಗವಾಗಿ 'ಕರ್ನಾಟಕದ ಬುಡಕಟ್ಟುಗಳ ವಿಸ್ತೃತ ಅಧ್ಯಯನ ಮತ್ತು ಮೌಲ್ಯಮಾಪನ'ದಲ್ಲಿ ಮೇದ ಬುಡಕಟ್ಟಿನ ಬಗ್ಗೆ ತಮ್ಮ ಅಂತಿಮ ವರದಿಯಲ್ಲಿ ಈ ಕೆಳಕಂಡಂತೆ ಕರ್ನಾಟಕದಲ್ಲಿ ಮೇದರ ನೆಲೆ ಹಾಗೂ ಜನಸಂಖ್ಯೆಯನ್ನು ವಿವರಿಸಿದ್ದಾರೆ.

ಕರ್ನಾಟಕ ರಾಜ್ಯದಾದ್ಯಂತ ಮೇದರ ನೆಲೆಗಳಿವೆ. ಅತ್ಯಧಿಕ ಜನಸಂಖ್ಯೆ ಹೊಂದಿರುವ ಜಿಲ್ಲೆಗಳೆಂದರೆ ಗುಲ್ಬರ್ಗ (೩೫೩೪), ಮೈಸೂರು (೩೩೪೯), ಶಿವಮೊಗ್ಗ (೩೧೪೯), ಬೆಂಗಳೂರು ಗ್ರಾಮಾಂತರ (೨೯೭೧), ದಾವಣಗೆರೆ (೨೪೧೮), ಮಂಡ್ಯ (೨೧೫೫) ಸಮಾರು ೨೦೦೦ದ ಆಜುಬಾಜಿನಲ್ಲಿರುವ ಜಿಲ್ಲೆಗಳೆಂದರೆ ಚಿಕ್ಕಮಗಳೂರು, ಬಳ್ಳಾರಿ, ಬೆಂಗಳೂರು ನಗರ ಬೆಳಗಾವಿ, ಧಾರವಾಡ, ಹಾಸನ, ಕೋಲಾರ ೧೦೦೦ ಜನಸಂಖ್ಯೆಯ ಹತ್ತಿರವಿರುವ ಜಿಲ್ಲೆಗಳೆಂದರೆ ತುಮಕೂರು, ಚಾಮರಾಜನಗರ, ಚಿತ್ರದುರ್ಗ, ಹಾವೇರಿ, ಕೊಡಗು, ರಾಯಚೂರು. ೫೦೦ರ ಒಳಗಿರುವ ಜಿಲ್ಲೆಗಳೆಂದರೆ ಬಾಗಲಕೋಟೆ, ಬೀದರ್, ದಕ್ಷಿಣಕನ್ನಡ, ಗದಗ, ಕೊಪ್ಪಳ, ಉತ್ತರಕನ್ನಡ. ೧೦೦ರ ಜನಸಂಖ್ಯೆಯ ಗಡಿಯಲ್ಲಿರುವ ಜಿಲ್ಲೆಗಳೆಂದರೆ ಬಿಜಾಪುರ, ಉಡುಪಿ. ಜನಗಣತಿಯ ಪೂರ್ಣ ಮಾಹಿತಿಗಳನ್ನು ಮುಂದಿನ ಪಟ್ಟಿ ಹಾಗೂ ನಕ್ಷೆಯಲ್ಲಿ ವಿವರಿಸಲಾಗಿದೆ.

ಆಂಧ್ರ, ತಮಿಳನಾಡುಗಳಿಂದ ಬಂದ 'ಮೇದರು' ಕರ್ನಾಟಕದ ಬಹುತೇಕ ಸ್ಥಳಗಳಲ್ಲಿ ನೆಲೆಸಿದ್ದಾರೆ. ಅಂತೆಯೇ ಈ ವಲಸಿಗರಾಗಿ ಬಂದ 'ಮೇದ'ರೊಡನೆ ಕರ್ನಾಟಕದ ಅನೇಕ ಕಡೆ ವಾಸಿಸುತ್ತಿದ್ದ ಸ್ಥಳೀಯ ಕನ್ನಡಿಗ ಮೇದರನ್ನು ಕಾಣುತ್ತೇವೆ. ಸೇಲಂ ಮತ್ತು ಪಲ್ಲಿ

ಮೇದರು, ತೆಲುಗು ಮೇದರುಗಳು ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಧಾರವಾಡ, ಗುಲ್ಬರ್ಗಾ, ಸಾಗರ, ರಾಯಚೂರುಗಳಲ್ಲಿ ಹೆಚ್ಚಾಗಿದ್ದಾರೆ. ಕನ್ನಡ ಮೇದರು ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ಹಾಸನ ತುಮಕೂರು, ತಿಪಟೂರು, ಅರಸೀಕೆರೆ, ಚನ್ನಗಿರಿ, ಸಾಗರ, ಶಿಕಾರಿಪುರ, ಚಳ್ಳಕೆರೆ, ಆಯನೂರು, ಆಲ್ದೂರು, ಮಾಗಡಿ, ದುರ್ವಿಗೆರೆ ಹಾಗೂ ಅನೇಕ ಹಳ್ಳಿಗಾಡುಗಳಲ್ಲಿಯೂ ನೆಲೆಸಿದ್ದಾರೆ. ೧೯೦೧ರಲ್ಲಿ ಸಿಗುವ ಮಾಹಿತಿಯಂತೆ 'ಮೇದ'ರು ಹಿಂದೆ ಶಿವಮೊಗ್ಗ, ಕಡೂರು ಮತ್ತು ಮೈಸೂರಿನ ಹಳ್ಳಿಗಳಲ್ಲಿ ಹೆಚ್ಚು ನೆಲೆಸಿದ್ದರು. ಆದರೆ ಈಗ ಕರ್ನಾಟಕದ ಬಹುತೇಕ ಪೇಟೆಗಳಲ್ಲಿ ಇವರ ನೆಲೆಗಳನ್ನು ಕಾಣಬಹುದು.

ಲಕ್ಕವಳ್ಳಿ, ಅಜ್ಜಂಪುರ, ತರೀಕೆರೆ, ನರಸಿಂಹರಾಜಪುರದ ಹಳ್ಳಿಗಳಲ್ಲೂ ಇವರು ಇದ್ದಾರೆ. ಆಲ್ದೂರು, ರಾಣಿಬೆನ್ನೂರು, ಹಿತ್ಲೂರು, ಹುಣಸೀಕೊಪ್ಪ, ಗಾಂಧಿನಗರ, ಇಟ್ಟಿಗೆಹಳ್ಳಿ, ತಿಮ್ಲಾಪುರ, ಚನ್ನಪಟ್ಟಣ, ಕೋಲಾರ, ಸಿಂಧನೂರು, ಮುಳಬಾಗಿಲು, ಚಿಂತಾಮಣಿ, ಶಿಡ್ಲಘಟ್ಟ, ಗೌರಿಬಿದನೂರು, ಬಂಗಾರಪೇಟೆ, ರಾಮನಗರ, ಹೆಚ್.ಡಿ.ಕೋಟೆ, ಮಾಲೂರು, ಮದ್ದೂರು, ಹೊಸಪೇಟೆ, ಕುಣಿಗಲ್, ಗುಬ್ಬಿ, ಮಡಿಕೇರಿ, ಮಾರಂಬಳ್ಳಿ, ಅತ್ತಿಬೈಲು, ಹೊನ್ನಾಳಿ, ಮಲೆಬೆನ್ನೂರು, ಹರಿಹರ, ಮೈಸೂರು, ಮಂಡ್ಯ, ದಾವಣಗೆರೆ, ಬಳ್ಳಾರಿ, ಗಂಗಾವತಿ, ಕಂಪ್ಲಿ, ಕೊಟ್ಟೂರು, ಹರಪನಹಳ್ಳಿ, ಚಾಮರಾಜನಗರ, ಹಿರೇಕೆರೂರು, ಹಗರಿಬೊಮ್ಮನಹಳ್ಳಿ, ಸೊರಬನಹಳ್ಳಿ, ಸೊಂಡೂರು, ನಂಜನಗೂಡು, ಹಿರೇಇಳಗೋಳು (ಸೊರಬ ತಾಲೂಕು), ಕಾನಗೋಡು (ಸಿದ್ಧಾಪುರ), ಹುಣಸೂರು, ಬಂಕಾಪುರ, ಶಿಗ್ಗಾಂವ್, ಲಕ್ಷ್ಮೇಶ್ವರ್, ಬ್ಯಾಡಗಿ ಈ ಪ್ರದೇಶಗಳಲ್ಲಿ ಮತ್ತು ಹಳ್ಳಿಗಾಡುಗಳಲ್ಲಿ ಮೇದರ ನೆಲೆಗಳನ್ನು ಕಾಣಬಹುದು.

ಮೇದರು ವಾಸಿಸುವ ಪ್ರದೇಶದ ಭೌಗೋಳಿಕ ಪರಿಸರವೆಂದರೆ ಕಾಡಿನಿಂದ ಆವೃತವಾದ ಬೆಟ್ಟ-ಗುಡ್ಡ ಪ್ರದೇಶಗಳು. ಇಲ್ಲಿ ದಟ್ಟವಾದ ಕಾಡುಗಳಿರುವುದಿಲ್ಲ. ವಿಸ್ತಾರವಾದ ಗುಡ್ಡ, ತಪ್ಪಲು ಪ್ರದೇಶಗಳಲ್ಲಿ ಬಿದಿರು ದಟ್ಟವಾಗಿ ಬೆಳೆಯುತ್ತದೆ. ಉದಾಹರಣೆಗೆ ಚಿಕ್ಕಮಗಳೂರು ಜಿಲ್ಲೆಯ ಭದ್ರಾ, ಕುದುರೆಮುಖ ಹಾಗೂ ಮುತ್ತೋಡಿ ಕಾಡುಗಳಲ್ಲಿ ಕಿರು ಬಿದಿರು ಸುಮಾರು ೩೫ರಿಂದ ೪೦ ಸೆಂ.ಮೀ ಸುತ್ತಳತೆ ದಪ್ಪ ಹಾಗೂ ೫೫ರಿಂದ ೬೦ ಅಡಿ ಉದ್ದದ ಬೆಳವಣಿಗೆಯನ್ನು ಪಡೆಯುತ್ತವೆ. ಬಹುಶಃ ಈ ರೀತಿಯ ಹುಲುಸಾಗಿ ಬೆಳೆಯಲು ಅಲ್ಲಿಯ ಪ್ರಾಕೃತಿಕ ಕಾರಣಗಳೇ ಆಗಿವೆ. ನೀರಿನ ಸರಲುವಿಗೆ ಆತುಕೊಂಡ ಪ್ರದೇಶದ ಬಿದಿರು ಮತ್ತಷ್ಟೂ ದಷ್ಟಪುಷ್ಟವಾಗಿ ಬೆಳೆದು, ಮೇದರ ಕಸುಬಿಗೆ ಅನುಕೂಲವಾಗುತ್ತದೆ. ಆದ್ದರಿಂದ ಬಿದಿರು ಕಡಿಯಲು ಗುಡ್ಡಗಳಿಗೆ ಹೋದ ಮೇದರು ಸಾಮಾನ್ಯವಾಗಿ ಇಂತಹ ಪ್ರದೇಶಗಳಲ್ಲಿ ಹುಲುಸಾಗಿ ಬೆಳೆದಿರಬಹುದುದಾದ ಕಿರು ಬಿದಿರುಗಳನ್ನೇ ಹೆಚ್ಚಾಗಿ ಚುನಾಯಿಸುತ್ತಾರೆ. ಮಲೆನಾಡಿನ ಹಾಗೂ ಪಶ್ಚಿಮ ಘಟ್ಟಗಳ ಶ್ರೇಣಿಯಲ್ಲಿ ಬೆಳೆದಿರುವ ಬಿದಿರು, ಕರ್ನಾಟಕ ರಾಜ್ಯದ ಬಯಲು ಪ್ರದೇಶದ ಬಹುತೇಕ ಮೇದರ ನೆಲೆಗಳಿಗೆ ರವಾನಿಸಲ್ಪಡುತ್ತದೆ. ಇಂತಹ ಮಲೆನಾಡು ಪ್ರದೇಶಗಳಲ್ಲಿ

[illegible]

ತಾತ್ಕಾಲಿಕವಾಗಿ ವಾಸಿಸಲು ಶೆಡ್‌ಗಳನ್ನು ನಿರ್ಮಾಣ ಮಾಡಿಕೊಂಡು ಮೇದಾರಿಕೆ ವೃತ್ತಿಯನ್ನು ಮಾಡುತ್ತಿದ್ದರು. ಆಗುಂಬೆ ಬೆಟ್ಟ ಪರಿಸರ, ವಳಕುಂಜದ ಬೆಟ್ಟ, ಧರ್ಮಸ್ಥಳದಿಂದ ಬಲ್ಲಾಳರಾಯನ ದುರ್ಗಬೆಟ್ಟ ಸಾಲುಗಳು ಹಾಗೂ ಕುದುರೆಮುಖ, ಇಡುಗುಂಜಿ, ಹೊರನಾಡು, ಶೃಂಗೇರಿ, ಕಳಸ, ಬಾಳೆಹೊನ್ನೂರು ಸೇರಿದಂತೆ ಸಿರಸಿ, ಸಿದ್ಧಾಪುರ, ದಾಂಡೇಲಿ ಮುಂತಾದ ಕಾಡು ಪ್ರದೇಶಗಳಲ್ಲಿ ಮೇದರು ವಾಸಿಸುತ್ತಿದ್ದರು.

ಜಿಲ್ಲಾವಾರು ಮೇದರ ಜನಸಂಖ್ಯೆ (೨೦೦೧)

ಕ್ರ.ಸಂ	ಜಿಲ್ಲೆ	ಒಟ್ಟು	ಪುರುಷ	ಮಹಿಳೆ
೦೧	ಬಾಗಲಕೋಟೆ	೩೪೪	೧೭೪	೧೭೦
೦೨	ಬೆಂಗಳೂರು (ಗ್ರಾ)	೨,೯೯೧	೧,೩೭೪	೧,೩೧೭
೦೩	ಬೆಂಗಳೂರು (ನ)	೧,೬೫೫	೮೩೯	೮೧೬
೦೪	ಬಳ್ಳಾರಿ	೧,೭೬೪	೮೯೦	೮೭೪
೦೫	ಬೆಳಗಾವಿ	೧,೮೮೫	೯೨೩	೯೬೨
೦೬	ಬೀದರ್	೪೪೭	೨೩೦	೨೧೭
೦೭	ಬಿಜಾಪುರ	೦೮೧	೪೨	೩೯
೦೮	ಚಾಮರಾಜನಗರ	೯೦೨	೪೬೮	೪೩೪
೦೯	ಚಿಕ್ಕಮಗಳೂರು	೧,೭೫೩	೯೦೩	೮೫೦
೧೦	ಚಿತ್ರದುರ್ಗ	೯೧೨	೪೪೮	೪೬೪
೧೧	ದಕ್ಷಿಣಕನ್ನಡ	೨೬೮	೧೩೩	೧೫೩
೧೨	ದಾವಣಗೆರೆ	೨,೪೧೮	೧,೨೩೩	೧,೧೮೫
೧೩	ಧಾರವಾಡ	೧,೯೪೨	೯೭೦	೯೭೨
೧೪	ಗದಗ	೩೧೩	೧೪೨	೧೭೧
೧೫	ಗುಲ್ಬರ್ಗ	೩,೫೩೪	೧,೭೫೦	೧,೭೮೪
೧೬	ಹಾಸನ	೧,೭೯೮	೯೨೬	೮೭೨
೧೭	ಹಾವೇರಿ	೯೨೩	೪೭೧	೪೫೨
೧೮	ಕೊಡಗು	೮೦೩	೪೦೧	೪೦೨
೧೯	ಕೋಲಾರ	೧,೫೮೨	೭೭೩	೮೦೯
೨೦	ಕೊಪ್ಪಳ	೨೪೫	೧೧೪	೧೩೧

೨೧	ಮಂಡ್ಯ	೨,೧೫೫	೧,೦೭೯	೧,೦೭೬
೨೨	ಮೈಸೂರು	೩,೩೪೯	೧,೬೧೨	೧,೫೪೭
೨೩	ರಾಯಚೂರು	೧,೧೩೧	೪೪೮	೪೩೭
೨೪	ಶಿವಮೊಗ್ಗ	೩,೧೫೯	೧,೬೧೨	೧,೫೪೭
೨೫	ತುಮಕೂರು	೧,೧೩೧	೫೪೫	೫೮೬
೨೬	ಉಡುಪಿ	೮೧	೩೮	೪೩
೨೭	ಉತ್ತರಕನ್ನಡ	೩೩೩	೧೫೮	೧೭೫
	ಒಟ್ಟು	**೩೭,೩೭೧**	**೧೮,೭೭೮**	**೧೮,೫೯೩**

ಭಾರತ ಜನಗಣತಿ/೨೦೦೧ * ಉದೃತ : ಕೆ. ಎಂ. ಮೇತ್ರಿ

ಕರ್ನಾಟಕ ರಾಜ್ಯದ ಪ್ರಮುಖ ಮೇದ ಮುಖಂಡರುಗಳು ಮಾಜಿ ಶಾಸಕರಾದ ಹೆಚ್.ಡಿ. ಬಸವರಾಜು, ದಾವಣಗೆರೆಯ ಚಂದ್ರಶೇಖರ್, ಸೋಮಣ್ಣ, ಹಾವೇರಿಯ ನಾಗರಾಜ್, ಕಾರವಾರದ ನಾಗರಾಜ್, ಚಿಕ್ಕಮಗಳೂರಿನ ರಾಜಮ್ಮ, ಮಹೇಶ್ ಶೆಟ್ಟಿಕೊಪ್ಪ, ಆ.ಗ. ಮಂಜಣ್ಣ, ಧರ್ಮರಾಜು, ಪೈಲ್ವಾನ್ ಕೃಷ್ಣಪ್ಪ ಬಿಜಾಪುರದ ಡಾ.ಚಂದ್ರಶೇಖರರವರು, ಹುಬ್ಬಳ್ಳಿಯ ತಿಪ್ಪಣ್ಣ ಶಿರಹಟ್ಟಿ ಇವರ ಅಂದಾಜಿನಂತೆ ಮೇದರ ಒಟ್ಟು ಸಂಖ್ಯೆ ಒಂದುವರೆ ಲಕ್ಷ ದಾಟುತ್ತದೆ. ಇದು ಜಿಲ್ಲಾವಾರು ಮೇದರಿಂದ ನಡೆಸಿದ ಆಂತರಿಕ ಸಮೀಕ್ಷೆ ಎಂದು ತಿಳಿಸುತ್ತಾರೆ. ಒಟ್ಟಾರೆ ಜಾತಿವಾರು ಜನಗಣತಿ ಮಾಡಿದಾಗ ಮಾತ್ರ ಸಮರ್ಪಕ ಮಾಹಿತಿ ಲಭ್ಯವಾಗಬಹುದು.

೧.೮ ಮೇದ ಬುಡಕಟ್ಟಿನ ಪೂರ್ವಾಧ್ಯಯನ

ಮೇದ ಬುಡಕಟ್ಟಿವಿನ ಪೂರ್ವಾಧ್ಯಯನಗಳು ಇತ್ತೀಚೆಗೆ ಹೆಚ್ಚುತ್ತಿವೆ. ವಿವಿಧ ಮಜಲುಗಳಲ್ಲಿ ಮೇದರನ್ನು ಅಧ್ಯಯಿಸಲಾಗುತ್ತಿದೆ. ಥರ್ಸ್ಟನ್.ಇ.ಕೆ. ಅವರು The caste and Tribes of southern india- Vol 5 ರಲ್ಲಿ ಮೇದ ಸಮುದಾಯದ ಬಗ್ಗೆ ವಿವರಣೆ ನೀಡಿದ್ದಾರೆ. ಅನಂತಕೃಷ್ಣ ಅಯ್ಯರ್‌ರವರು The Mysore Tribes and castes ಹಾಗೂ the castes and Tribes nizam's Dominion ನಲ್ಲಿ ಈ ಬುಡಕಟ್ಟನ್ನು ಮೇದಾರ್, ಬುರುಡ ಎಂದು ಹೆಸರಿಸಿ ಪರಿಚಯಿಸಲಾಗಿದೆ. The scheduled Tribes: K.S.Singh, Karnataka state Ga getteer part-1 The scheduled Tribes-Bombay. The Ethnographical survey of Mysore. ಮುಂತಾದ ವರದಿಗಳಲ್ಲಿ ಹಾಗೂ ಗೆಜೆಟಿಯರ್‌ಗಳಲ್ಲಿ 'ಮೇದ' ಮತ್ತು ಸಮಾನವಾದ ಇತರ ಹೆಸರುಗಳನ್ನು ನಮೂದಿಸಿ ಪರಿಚಯಿಸಲಾಗಿದೆ. ಇದಲ್ಲದೆ ಮೇದರ ಅಧ್ಯಯನ ಕುರಿತು "ಮೇದರು" ಎಂಬ ಶೀರ್ಷಿಕೆಯಡಿಯಲ್ಲಿ ಡಾ.ಡಿ.ಆರ್.ಪಾಂಡುರಂಗ ಅವರ ದೀರ್ಘ ಲೇಖನ. ಡಾ.ಎಚ್.ಜೆ.ಲಕ್ಕಪ್ಪಗೌಡ ಅವರ ಪ್ರಧಾನ ಸಂಪಾದಕತ್ವದ 'ಕರ್ನಾಟಕ ಬುಡಕಟ್ಟುಗಳು' ಸಂಪುಟ–೨ರಲ್ಲಿದೆ. ಡಾ.ಪಾಂಡುರಂಗ ಅವರು ಮೇದರ ಸೃಷ್ಟಿಪುರಾಣ,

ಬುಡಕಟ್ಟಿನ ಮೂಲ ಪ್ರಸಾರ ನೆಲೆಗಳು, ಕುಲ ಚಿಹ್ನೆಗಳು, ವಿವಾಹ, ಆರಾಧನೆ, ಆಚರಣೆ, ನಂಬಿಕೆ, ಧಾರ್ಮಿಕ ವಿಧಿ–ವಿಧಾನಗಳು ಸೇರಿದಂತೆ ಮೇದರ ಸಂಸ್ಕೃತಿಯನ್ನು ಕುರಿತಂತೆ ಪರಿಚಯಿಸಿದ್ದಾರೆ.

ಶ್ರೀನಿವಾಸ.ಎನ್. ಅವರು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಮೇದರು ಮತ್ತು ಕೊರಚರು: ವೃತ್ತಿ ಪದಕೋಶ ಎಂಬ ತಮ್ಮ ಸಂಪ್ರಬಂಧದಲ್ಲಿ ಮೇದರು ತಯಾರಿಸುವ ಕೆಲವು ವಸ್ತುಗಳ ವಿವರಣೆಯನ್ನು ನೀಡಿರುವರು.

ಕಡ್ಲಬಾಳು ಪನ್ನಂಗಧರ ಅವರು ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ 'ಮೇದರ ಸಂಸ್ಕೃತಿ ಮತ್ತು ವಾಣಿಜ್ಯ ಅಧ್ಯಯನ' ಮಹಾಪ್ರಬಂಧವು. ಮೊದಲ ಮಹಾಪ್ರಬಂಧವಾಗಿದ್ದು, ಮೇದರ ಸಂಸ್ಕೃತಿ ಹಾಗೂ ವಾಣಿಜ್ಯ ಅಂಶಗಳಿಗೆ ಗಮನಹರಿಸಿದ್ದಾರೆ.

ಈರಪ್ಪ ಅಂಬ್ಲಯ್ಯ ಅವರು ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ "ಜಾಗತೀಕರಣ ಸಂದರ್ಭದಲ್ಲಿ ಬುಡಕಟ್ಟುಗಳ ಸಮಾಜೋ–ಆರ್ಥಿಕ ಸ್ಥಿತಿಗತಿಗಳು" (ಸುರಪುರ ತಾಲೂಕಿನ ಬೇಡ ಮತ್ತು ಮೇದ ಬುಡಕಟ್ಟುಗಳನ್ನು ಪರಿಗಣಿಸಿ) ಎಂಬ ಪ್ರಬಂಧದಲ್ಲಿ ಮೇದ ಸಮುದಾಯ ಆಧುನಿಕ ಮುಖಾಮುಖಿಯಾಗಿ ಬುಡಕಟ್ಟು ಲಕ್ಷಣಗಳು ಕರಗುತ್ತಾ 'ಜಾತಿ' ಪದರಗಳು ಹೇಗೆ ಬಿಂಬಿತವಾಗುತ್ತಿವೆ ಎಂಬ ಅಂಶಗಳನ್ನು ವಿವರಿಸಿದ್ದಾರೆ.

ಡಾ. ಕೆ. ಎಂ. ಮೇತ್ರಿ, ಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ ಇವರ 'ಬುಡಕಟ್ಟು ಕುಲಕಸುಗಳು" ಎಂಬ ಕೃತಿ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿಯಿಂದ ಪ್ರಕಟಿಸಲ್ಪಟ್ಟಿದೆ. ಈ ಕೃತಿಯಲ್ಲಿ 'ಮೇದ'ರ ಸಮಾನಾರ್ಥಕ ಪದಗಳು, ಮೀಸಲಾತಿ, ಕುಲಕಸುಬು, ಸಾಕ್ಷರತೆ ಇತ್ಯಾದಿಗಳ ಪರಿಚಯಾತ್ಮಕ ವಿವರಣೆ ಪುಟ–೧೮೩ರಲ್ಲಿ ಕಾಣಬಹುದು. ಎಸ್. ವೈ. ತಿಮ್ಮಾರೆಡ್ಡಿಯವರು 'ಕುಲಕಸಬುಗಳು ಮತ್ತು ಆಧುನಿಕತೆ (ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ) ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಪ್ರೌಢ ಪ್ರಬಂಧದಲ್ಲಿ 'ಮೇದಾರಿಕೆ'ಗೆ ಸಂಬಂಧಿಸಿದಂತೆ ಸ್ಥೂಲ ವಿವರಣೆಯಿದೆ.

ಡಾ.ಕರೀಗೌಡ ಬೀಚನಹಳ್ಳಿ ಅವರ ಸಂಪಾದಕತ್ವದ ಕರಕುಶಲ ಕಲೆಗಳು ವಿಶ್ವಕೋಶ–೨ರಲ್ಲಿ ಎನ್.ಹುಚ್ಚಪ್ಪ ಮಾಸ್ತರ ಅವರು ಬಿದಿರು ಮತ್ತು ಬೆತ್ತ ಎಂಬ ದೀರ್ಘವಾದ ಲೇಖನವನ್ನು ಬರೆದಿದ್ದಾರೆ. ಈ ಲೇಖನದಲ್ಲಿ ಇವರು ಬಿದಿರನ್ನು ಕುರಿತು ಸಸ್ಯಶಾಸ್ತ್ರೀಯ ದೃಷ್ಟಿಯಿಂದ ವಿವರಣೆಯನ್ನು ನೀಡಿರುವರು. ಮತ್ತು ಬಿದಿರು ಬೆತ್ತದ ಕರಕುಶಲ ಕಲೆಯನ್ನು ಕುರಿತು ಪರಿಚಯಿಸಿರುವರು. ಭೀಮಣ್ಣ ಬೋನ್ಹಾಳ ಅವರ ಸಂಪಾದಕತ್ವದ ಕಾಯಕ ಗೌರವ ಶಿವಶರಣ ಮೇದಾರ ಕೇತಯ್ಯ ಸ್ಮಾರಕ ಸಂಪುಟದಲ್ಲಿ ಡಾ.ಸಿದ್ಧಯ್ಯ ಪುರಾಣಿಕ, ಡಾ.ಸಿಂಪಿಲಿಂಗಣ್ಣ ಮುಂತಾದ ೧೪ ಜನ ಪ್ರಮುಖ ಲೇಖಕರು ಮೇದಾರ ಕೇತಯ್ಯನನ್ನು ಕುರಿತಾಗಿ ಹೇಳಿದ್ದಾರೆ. ಇದಲ್ಲದೆ. ಅನೇಕ ಕಡೆ ಮೇದಾರ ಕೇತಯ್ಯನ ಕುರಿತಂತೆ ನಾಟಕ,

ಕಿರುಪುಸ್ತಕ, ವಚನಗಳಿವೆ ಈ ಸಮುದಾಯದ ಪವಾಡ ಪುರುಷನಾದ ಹನುಮಂತಜ್ಜನ ಬಗೆಗೆ ಪುಸ್ತಕಗಳು ಮುದ್ರಣಗೊಂಡಿವೆ. ಹುಬ್ಬಳ್ಳಿಯಿಂದ ವೈ.ಕೆ.ಹಳೆಪೇಟೆಯವರ ಸಂಪಾದಕತ್ವದಲ್ಲಿ 'ಮೇದ ಘರ್ಜನೆ' ಮಂಡ್ಯದಿಂದ ಆನಂದ ಪರಾಂಡೆಯವರ ನೇತೃತ್ವದ 'ಕೇತೇಶ್ವರ ವಾಣಿ' ಚಾಮರಾಜನಗರದಿಂದ ಆರ್.ಚಿಕ್ಕಸಿದ್ಧಯ್ಯ ಸಂಪಾದಕತ್ವದಲ್ಲಿ 'ಮೇದ ತರಂಗ' ಚಿಕ್ಕಮಗಳೂರಿಂದ ರಾಜೇಶ್‌ರವರ ಸಂಪಾದಕತ್ವದಲ್ಲಿ 'ಅಕ್ಷರ ತೋರಣ'–ಈ ಎಲ್ಲಾ ಮೇದ ಬುಡಕಟ್ಟುವಿನ ಅನುಭವಿ ದೂರದೃಷ್ಟಿ ವ್ಯಕ್ತಿಗಳು ಮೇದರ ಬದುಕು, ಸ್ಥಿತಿಗತಿಗಳನ್ನು ಕೇಂದ್ರಿಕರಿಸಿಕೊಂಡು ಪತ್ರಿಕೆಗಳನ್ನು ಹೊರತಂದಿದ್ದಾರೆ.

ಇದುವರೆಗೆ ಮೇದರ ಅಧ್ಯಯನಗಳು, ಅವರ ಕೆಲವೇ ಭಾಗಗಳಿಗೆ ಸೀಮಿತವಾಗಿ ನಡೆದಿವೆ. ಸಮಾಜಶಾಸ್ತ್ರೀಯ ನೆಲೆಗಟ್ಟಿನಲ್ಲಿ ಮೇದ ಬುಡಕಟ್ಟನ್ನು ಅಭ್ಯಸಿಸುವುದು ಅನಿವಾರ್ಯವಾಗಿದ್ದು, ಪ್ರಸ್ತುತ ಆಧುನಿಕ ಜಗತ್ತಿನ ಕ್ಷಿಪ್ರ ಬದಲಾವಣೆಯಲ್ಲಿ ಜಾಗತೀಕರಣ ಪ್ರಭಾವವು ಅನೇಕ ಮಜುಲುಗಳಲ್ಲಿ ಸ್ಥಿತ್ಯಂತರಗಳನ್ನು ತಂದಿರುವುದನ್ನು ಪ್ರಾದೇಶಿಕ ಮಿತಿಯೊಳಗೆ ಅತ್ಯಂತ ಸೂಕ್ಷ್ಮವಾಗಿ ಅಭ್ಯಸಿಸುವ ಉದ್ದೇಶ ಹೊಂದಲಾಗಿದೆ.

ಮಲೆನಾಡು ಪ್ರದೇಶದಿಂದ ದಟ್ಟವಾಗಿದ್ದು, ನಿತ್ಯಹರಿದ್ವರ್ಣದ ಕಾಡುಗಳಿಂದ, ಮಳೆಕಾಡು, ಬಿದಿರು ಕಾಡುಗಳನ್ನು ಎತ್ತೇಚ್ಛವಾಗಿ ಹೊಂದಿದ್ದು, ಅನೇಕ 'ನದಿಜನ್ಮ ಭೂಮಿ'ಯಾಗಿದ್ದು ಅನೇಕ ತೊರೆಗಳು, ಜಲಪಾತಗಳು, ಪರ್ವತ ಶಿಖರಗಳು, ವೈವಿದ್ಯ ಬೆಳೆಗಳನ್ನು ಹೊಂದಿರುವ ಚಿಕ್ಕಮಗಳೂರು ಜಿಲ್ಲೆಯೊಳಗೆ ಕಾಡಿನ ಹತ್ತಿರದ ಹಳ್ಳಿಗಳು, ಪಟ್ಟಣ, ನಗರಗಳಲ್ಲಿ ವಾಸಿಸುತ್ತಿರುವ ಮೇದರ ಬದುಕಿನ ಕ್ಷಾ-ಕಿರಣ ಅಧ್ಯಯನ ಇದಾಗಿದೆ.

೧.೯ ಚಿಕ್ಕಮಗಳೂರು ಜಿಲ್ಲೆಯ ಭೌಗೋಳಿಕ ಹಿನ್ನೆಲೆ ಮತ್ತು ಬುಡಕಟ್ಟುಗಳು

ವಿಶಾಲ ಕರ್ನಾಟಕದ ೨೮ ಜಿಲ್ಲೆಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯೂ ಒಂದಾಗಿದೆ. ಇದು ರಾಜ್ಯದ ದಕ್ಷಿಣ ಭಾಗದ ಮಧ್ಯದಲ್ಲಿದ್ದು ಪಶ್ಚಿಮಕ್ಕೆ ಹಬ್ಬಿಕೊಂಡಿದೆ. ಈ ಜಿಲ್ಲೆಯನ್ನು ೭ ತಾಲೂಕುಗಳಾಗಿ ವಿಂಗಡಿಸಲಾಗಿದೆ. ಕರ್ನಾಟಕದ ಮೈಸೂರು ವಿಭಾಗದಲ್ಲಿ ಚಿಕ್ಕಮಗಳೂರು ಜಿಲ್ಲೆಯನ್ನು ಗುರ್ತಿಸಿದ್ದು, ಇದರಲ್ಲಿ ಚಿಕ್ಕಮಗಳೂರು ಉಪ-ವಿಭಾಗ ಹಾಗೂ ತರೀಕೆರೆ ಉಪ-ವಿಭಾಗಳನ್ನಾಗಿ ವಿಭಜಿಸಲಾಗಿದೆ. ಚಿಕ್ಕಮಗಳೂರು ಉಪ-ವಿಭಾಗದಲ್ಲಿ ನಾಲ್ಕು ತಾಲೂಕುಗಳಾದ ಚಿಕ್ಕಮಗಳೂರು, ಕೊಪ್ಪ, ಶೃಂಗೇರಿ ಹಾಗೂ ಮೂಡಿಗೆರೆಯನ್ನು ಮತ್ತು ತರೀಕೆರೆ ಉಪ-ವಿಭಾಗದಲ್ಲಿ ತರೀಕೆರೆ, ಕಡೂರು ಹಾಗೂ ನರಸಿಂಹರಾಜಪುರ ತಾಲೂಕುಗಳನ್ನು ಗುರ್ತಿಸಿ ಕಂದಾಯ ಆಡಳಿತವನ್ನು ನಿರ್ವಹಿಸಲಾಗುತ್ತಿದೆ. ೨೦೦೧ರ ಜನಗಣತಿ ಪ್ರಕಾರ ಚಿಕ್ಕಮಗಳೂರು ಜಿಲ್ಲೆಯು ೧೧,೪೯,೧೦೪ ಜನಸಂಖ್ಯೆಯನ್ನು ಹೊಂದಿತ್ತು.

ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಕಾಫಿಯನ್ನು ಬೆಳೆಸಿದ ರಾಜ್ಯ ಕರ್ನಾಟಕ. ಅದರಲ್ಲೂ ಚಿಕ್ಕಮಗಳೂರು. ಅನೇಕ ನದಿ ಮೂಲಗಳು ಈ ಜಿಲ್ಲೆಯ ಬೃಹತ್ ಗುಡ್ಡ-

[illegible]

ಪರ್ವತಗಳ ಅಡಿಯಿಂದ ಜನ್ಮ ತಾಳಿವೆ. ಉದಾಹರಣೆಗೆ ತುಂಗಾ, ಭದ್ರಾ, ನೇತ್ರಾವತಿ ಇತ್ಯಾದಿ. ಕರ್ನಾಟಕದ ಅತ್ಯಂತ ಎತ್ತರದ ಶಿಖರವೆಂದರೆ ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಮುಳ್ಳಯ್ಯನ ಗಿರಿ. ಮನಮೋಹಕ ಪ್ರವಾಸಿ ತಾಣಗಳು, ಪರ್ವತ ಶ್ರೇಣಿಗಳು, ಜಲಪಾತ, ಪಕ್ಷಿಧಾಮಗಳು, ರಾಷ್ಟ್ರೀಯ ಉದ್ಯಾನವನ, ಅಭಯಾರಣ್ಯಗಳು, ನಿತ್ಯ ಹರಿದ್ವರ್ಣದ ಕಾಡುಗಳು, ವಿಶಿಷ್ಟ ಬಗೆಯ ಜೀವರಾಶಿಗಳು, ಜೈವಿಕ ಕಾಡುಗಳನ್ನು ಕೆಮ್ಮಣ್ಣುಗುಂಡಿ, ಭದ್ರಾ ಅಭಯಾರಣ್ಯ, ಕುದುರೆಮುಖ ರಾಷ್ಟ್ರೀಯ ಉದ್ಯಾನವನ, ಮಾಣಿಕ್ಯಧಾರ, ಹೆಬ್ಬೆ ಹಾಗೂ ಕಲ್ಲತ್ತಗಿರಿ ಜಲಪಾತಗಳು ಕಣ್ಮನ ಸೆಳೆಯುತ್ತವೆ. ಹೊಯ್ಸಳ ಕಾಲದ ಪ್ರಸಿದ್ಧ ದೇವಾಲಯ ತರೀಕೆರೆ ತಾಲೂಕಿನ ಅಮೃತಾಪುರದಲ್ಲಿದೆ.

ಹೆಸರೇ ಸೂಚಿಸುವಂತೆ ಸಖರಾಯಪಟ್ಟಣದ ರುಕ್ಮಾಂಗದ ಎಂಬ ಮುಖಂಡ ತನ್ನ ಕಿರಿ ಮಗಳಿಗೆ ಉಡುಗೊರೆಯಾಗಿ ನೀಡಿದ ಪಟ್ಟಣವಾದ್ದರಿಂದ ಇದಕ್ಕೆ 'ಚಿಕ್ಕಮಗಳೂರು' ಎಂದು ಹೆಸರು ಬಂದಿದೆ ಎಂದು ತಿಳಿಯಬಹುದು. ಹಾಗೆಯೇ ಈತನ ಹಿರಿಯ ಮಗಳಿಗೆ, ಚಿಕ್ಕಮಗಳೂರಿನಿಂದ ೫ ಕಿ.ಮಿ. ದೂರದಲ್ಲಿರುವ 'ಹಿರೇಮಗಳೂರು' ಉಡುಗೊರೆಯಾಗಿ ನೀಡಿದ್ದರಿಂದ, ಹಿರೇಮಗಳೂರು ಹೆಸರು ಬಂದಿದೆ ಎಂಬ ಪ್ರತೀತಿ ಇದೆ.

ಹೊಯ್ಸಳ ಆಳ್ವಿಕೆಗಾರರು ಚಿಕ್ಕಮಗಳೂರಿನಲ್ಲಿ ತಮ್ಮ ಆರಂಭಿಕ ದಿನಗಳನ್ನು ಕಳೆದಿರುವರು. ಸೊಸೆ ಊರು ಎಂಬ ಪ್ರದೇಶ ಈಗ 'ಅಂಗಡಿ' ಎಂದು ಕರೆಯಲ್ಪಡುವ ಇದು ಮೂಡಗೆರೆ ತಾಲೂಕಿನಲ್ಲಿ ಕಂಡುಬರುತ್ತದೆ. ಈ ಪ್ರದೇಶದಲ್ಲಿ ಹೊಯ್ಸಳ ಪ್ರಭು 'ಸಳ' ಹುಲಿಯೊಂದನ್ನು ಕೊಂದನೆಂದು ಪ್ರತೀತ ಇದೆ. ಇತಿಹಾಸಜ್ಞರಲ್ಲೇ ಈ ವಿಚಾರವಾಗಿ ಜಿಜ್ಞಾಸೆಯಿದೆ. ಜಾನಪದೀಯ ದೃಷ್ಟಿಯಿಂದಲೂ ಇದನ್ನು ವಿವರಿಸುವ ಪ್ರಯತ್ನ ಮಾಡಲಾಗಿದೆ. ಹೊಯ್ಸಳ ದೊರೆಗಳಲ್ಲಿ ಒಬ್ಬರಾದ ಪ್ರಖ್ಯಾತ ೨ನೇ ವೀರ ಬಲ್ಲಾಳ (ಕ್ರಿ.ಶ. ೧೧೭೩–೧೨೨೦)ನು ತರೀಕೆರೆ ತಾಲೂಕಿನ ಅಮೃತಪುರದಲ್ಲಿ ಶ್ರೀ ಅಮೃತೇಶ್ವರ ದೇವಾಲಯ ನಿರ್ಮಿಸಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಇವುಗಳಿಂದ ಹೊಯ್ಸಳ ರಾಜರುಗಳು ಚಿಕ್ಕಮಗಳೂರು ಜಿಲ್ಲೆಯನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿರುವುದು ಸ್ಪಷ್ಟವಾಗುತ್ತದೆ.

ಕ್ರಿ.ಶ. ೧೬೭೦ರಲ್ಲಿ ಬಾಬಬುಡನ್‌ರವರು ತಮ್ಮ ಮೆಕ್ಕಾ ಪ್ರವಾಸ ಮುಗಿಸಿ ಭಾರತಕ್ಕೆ ಮರಳುವಾಗ ೭ ಕಾಫಿ ಬೀಜಗಳನ್ನು ತನ್ನ ಹೊಟ್ಟೆಯ ಸುತ್ತ ಮುಚ್ಚಿಟ್ಟುಕೊಂಡು ತಂದು, ಚಿಕ್ಕಮಗಳೂರು ಕಾಡಿನಲ್ಲಿ ನೆಟ್ಟು ಬೆಳೆದದ್ದೇ ಇಂದು ಅದು ಪ್ರಖ್ಯಾತ 'ಬಾಬಬುಡನ್‌ಗಿರಿ' ಎಂದು ಹೆಸರಾಯಿತು. ಅಂದರೆ ಅರೇಬಿಯಾದಿಂದ 'ಅರೇಬಿಕಾ ಕಾಫಿ' ಚಿಕ್ಕಮಗಳೂರಿಗೆ ಬಂದು ಕಾಫಿ ನಾಡೆಂದು ಪ್ರಸಿದ್ಧಿಗೆ ಬಂದಂತೆ ತಿಳಿದು ಬರುತ್ತದೆ. ಕರ್ನಾಟಕದ ರಾಜಧಾನಿ ಬೆಂಗಳೂರಿಂದ ೨೫೧ ಕಿ.ಮೀ ದೂರದಲ್ಲಿ ಚಿಕ್ಕಮಗಳೂರಿದೆ. ಪೂರ್ವದಿಂದ ಪಶ್ಚಿಮದವರೆಗೆ ೧೩೮.೪ ಕಿಮೀ ಹಾಗೂ ಉತ್ತರದಿಂದ ದಕ್ಷಿಣದವರೆಗೆ ೮೮.೫ ಕಿ.ಮೀ ವಿಸ್ತೀರ್ಣ ಹೊಂದಿದ್ದು

ಒಟ್ಟು ವಿಸ್ತೀರ್ಣ ೭೨೦೧ ಚ.ಕಿ.ಮೀ. ಹೊಂದಿದೆ. ಚಿಕ್ಕಮಗಳೂರು ಜಿಲ್ಲೆಯ ಶೇ.೩೦ ಭಾಗವು ಅರಣ್ಯ ಪ್ರದೇಶದಿಂದ ಮುಚ್ಚಿದೆ. ಚಿಕ್ಕಮಗಳೂರು ಜಿಲ್ಲೆಯ ನೆರೆಯ ಜಿಲ್ಲೆಗಳು–ಉತ್ತರಕ್ಕೆ ಶಿವಮೊಗ್ಗ ಜಿಲ್ಲೆ, ಈಶಾನ್ಯ ಭಾಗದಲ್ಲಿ ದಾವಣಗೆರೆ ಜಿಲ್ಲೆ, ಪೂರ್ವಕ್ಕೆ ತುಮಕೂರು ಹಾಗೂ ಚಿತ್ರದುರ್ಗ ಜಿಲ್ಲೆಗಳು, ದಕ್ಷಿಣದಲ್ಲಿ ಹಾಸನ ಜಿಲ್ಲೆ, ನೈರುತ್ಯ ದಿಕ್ಕಿನಲ್ಲಿ ದಕ್ಷಿಣಕನ್ನಡ ಹಾಗೂ ಉಡುಪಿ ಜಿಲ್ಲೆಗಳಿವೆ. ಭದ್ರಾ, ತುಂಗಾ, ಹೇಮಾವತಿ, ನೇತ್ರಾವತಿ ಹಾಗೂ ವೇದಾವತಿ ನದಿಗಳು ವರ್ಷವಿಡೀ ತುಂಬಿ ಹರಿಯುತ್ತವೆ. ಚಿಕ್ಕಮಗಳೂರು ಜಿಲ್ಲೆ ಕಬ್ಬಿಣ, ಮ್ಯಾಗನೀಸ್ ಮತ್ತು ಗ್ರ್ಯಾನೈಟ್ ನಿಕ್ಷೇಪಗಳಿಂದ ಶ್ರೀಮಂತವಾಗಿದೆ. ಬಾಬಬುಡನ್‌ಗಿರಿ ಪ್ರದೇಶದಲ್ಲಿ ಕಪ್ಪುಮಣ್ಣು, ಜಿಲ್ಲೆಯ ದಕ್ಷಿಣ ಭಾಗದಲ್ಲಿ ಕೆಂಪು ಮತ್ತು ರೇವೆ ಮಣ್ಣು ಕಂಡುಬರುತ್ತದೆ. ಪಶ್ಚಿಮಘಟ್ಟ ಸೆರಗು ಜಿಲ್ಲೆಗೆ ಆತುಕೊಂಡಿದೆ.

೨೦೧೧ರ ಜನಗಣತಿ ಪ್ರಕಾರ ಚಿಕ್ಕಮಗಳೂರು ಜಿಲ್ಲೆಯಲ್ಲಿ ೧೧,೩೯,೧೦೪ ಜನಸಂಖ್ಯೆಯಿದ್ದು, ಇದರಲ್ಲಿ ೬,೫೪,೨೭೫ ಪುರುಷರು, ೫,೬೪,೮೨೯ ಮಹಿಳೆಯರಿದ್ದಾರೆ. ಶೇ.೮೧ರಷ್ಟು ಜನರು ಗ್ರಾಮಾಂತರ ಪ್ರದೇಶದಲ್ಲಿ ವಾಸಿಸುತ್ತಿದ್ದು, ಶೇ.೧೯ರಷ್ಟು ಜನರು ನಗರವಾಸಿಗಳಾಗಿದ್ದಾರೆ. ಅತ್ಯಂತ ಕಡಿಮೆ ಜನಸಂಖ್ಯೆ ಶೃಂಗೇರಿ ತಾಲೂಕಿನಲ್ಲಿ, ಅತ್ಯಂತ ಹೆಚ್ಚು ಜನಸಂಖ್ಯೆ ಚಿಕ್ಕಮಗಳೂರು ತಾಲೂಕಿನಲ್ಲಿ ಕಂಡುಬರುತ್ತಾರೆ.

ಚಿಕ್ಕಮಗಳೂರು ಜಿಲ್ಲೆಗೆ ಆರ್ಥಿಕ ಆಧಾರ ಕೃಷಿ. ಕಾಫಿ ಮುಖ್ಯ ವಾಣಿಜ್ಯ ಬೆಳೆಯಾಗಿದೆ. ಮಳೆಗಾಲ, ಚಳಿಗಾಲ ಮತ್ತು ಬೇಸಿಗೆ ಕಾಲಗಳಲ್ಲಿ ವಿವಿಧ ಬೆಳೆಗಳನ್ನು ಸಮೃದ್ಧವಾಗಿ ಬೆಳೆಯಲಾಗುತ್ತದೆ. ಪ್ರಮುಖ ವಾಣಿಜ್ಯ ಹಾಗೂ ಆಹಾರ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಭತ್ತ, ರಾಗಿ, ಬಿಳಿಜೋಳ, ಮೆಕ್ಕೆಜೋಳ, ಕಡ್ಲೆಕಾಳು, ಹೆಸರುಕಾಳು, ಹುರುಳಿ, ಹುಚ್ಚೆಳ್ಳು, ಅವರೆಕಾಯಿ ಹಾಗೂ ಎಣ್ಣೆ ಬೀಜಗಳಾದ ಶೇಂಗಾ, ಸಾಸಿವೆ, ಸೂರ್ಯಕಾಂತಿ, ಹರಳುಬೀಜ ಮತ್ತು ವಾಣಿಜ್ಯ ಬೆಳೆಗಳಾದ ಕಬ್ಬು, ಹತ್ತಿ ಮತ್ತು ಹೊಗೆ ಸೊಪ್ಪು ಬೆಳೆಯಲಾಗುತ್ತಿದೆ. ತೋಟದ ಬೆಳೆಗಳಲ್ಲಿ ಕಾಫಿ ಅಡಿಕೆ, ಕಾಳು ಮೆಣಸು, ಬಾಳೆ, ಏಲಕ್ಕಿ, ಕಿತ್ತಳೆ, ಲವಂಗ, ವೆನಿಲ್ಲಾ, ದಾಲ್ಚಿನ್ನಿ, ಕೋಕೋ ಇತ್ಯಾದಿ ಬೆಳೆಗಳನ್ನು ಇತ್ತೀಚಿನ ದಿನಗಳಲ್ಲಿ ಎತೇಚ್ಛವಾಗಿ ಬೆಳೆಯಲಾಗುತ್ತಿದೆ. ಇತ್ತೀಚಿನ ದಶಕಗಳಿಂದ ಎಲ್ಲಾ ವಿವಿಧ ತರಕಾರಿ, ಕಾಯಿಪಲ್ಯೆಗಳನ್ನು ಎತೇಚ್ಛವಾಗಿ ಬೆಳೆಯಲಾಗುತ್ತಿದೆ

ಈ ಜಿಲ್ಲೆಯು ಮಲೆನಾಡಿನ ಸೌಂದರ್ಯ ಶ್ರೀಮಂತಿಕೆಯನ್ನು ಉಳಿಸಿಕೊಂಡಿದೆ. ನಿತ್ಯಹರಿದ್ವರ್ಣದ ಕಾಡುಗಳೆನಿಸಿದ ಪಶ್ಚಿಮ ಘಟ್ಟದ ಅರಣ್ಯಗಳು ಪ್ರಪಂಚದಲ್ಲಿಯೇ ಅಪರೂಪ ಸಸ್ಯರಾಶಿಗಳನ್ನು ಪಡೆದುದಾಗಿದೆ. ಜೀವ ಜಗತ್ತಿನ ಎಲ್ಲಾ ವಿಸ್ಮಯಗಳನ್ನು ಪ್ರತಿಬಿಂಬಿಸುವ ತಾಣವಾಗಿದೆ ಎಂದು ವಿದ್ವಾಂಸರು ತಿಳಿಸಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ಪ್ರಾಕೃತಿಕ ರಚನಾ ವಿನ್ಯಾಸ ಅಮೋಘವಾದುದು. ಮಳೆ ಕಾಡುಗಳು ಎತೇಚ್ಛವಾಗಿ ಕಂಡುಬರುತ್ತವೆ. ಚಿಕ್ಕಮಗಳೂರು,

[illegible]

ಮೂಡಿಗೆರೆ, ಶೃಂಗೇರಿ, ಕೊಪ್ಪ, ನರಸಿಂಹರಾಜಪುರ ತಾಲೂಕುಗಳು ಮಲೆನಾಡು ಪ್ರದೇಶಗಳು. ತರೀಕೆರೆ ಅರೆಮಲೆನಾಡು ಹಾಗೂ ಕಡೂರು ಬಯಲು ಸೀಮೆಯಾಗಿರುವುದು ಕಾಣಬಹುದು. ಜಿಲ್ಲೆಯಲ್ಲಿ ಸಾಮಾನ್ಯ ಸರಾಸರಿ ೧೯೨೫ ಮಿ.ಮೀಟರ್ ಮಳೆ ಬೀಳುತ್ತದೆ.

ಸಂಶೋಧನೆಯ ಸಮಸ್ಯೆಯ ಹೇಳಿಕೆ

ಪ್ರಸ್ತುತ ಅಧ್ಯಯನವು "ಕರ್ನಾಟಕದ ಮೇದ ಬುಡಕಟ್ಟಿನ ಸಮಾಜಶಾಸ್ತ್ರೀಯ ಅಧ್ಯಯನ"–ಚಿಕ್ಕಮಗಳೂರು ಜಿಲ್ಲೆ ಅನುಲಕ್ಷಿಸಿ ಕುರಿತಾಗಿದ್ದು, ಚಿಕ್ಕಮಗಳೂರು ಜಿಲ್ಲೆಯಾದ್ಯಂತ ವಾಸವಿರುವ ಮೇದರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಸ್ಥಿತಿಗತಿಗಳ ಸಮಗ್ರ ಅಧ್ಯಯನವನ್ನು ಸಮಾಜಶಾಸ್ತ್ರೀಯ ನೆಲೆಗಟ್ಟಿನಲ್ಲಿ ಅಭ್ಯಸಿಸುವುದಾಗಿದೆ.

ಅಧ್ಯಯನದ ಜನಸಂಖ್ಯೆ ಮತ್ತು ಮಾದರಿ

ಪ್ರಸ್ತುತ ಸಂಶೋಧನೆಗಾಗಿ 'ಕರ್ನಾಟಕದ ಮೇದರು ಒಂದು ಸಮಾಜಶಾಸ್ತ್ರೀಯ ಅಧ್ಯಯನ' ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಮೇದರನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಮುಖ್ಯವಾಗಿ ಮೇದರು ಮಲೆನಾಡಿನ ಮಳೆಕಾಡುಗಳಿಗೆ ಆತುಕೊಂಡಿರುವ ಪ್ರದೇಶಗಳಲ್ಲಿ ನೆಲೆಸಿರುವುದು ಕಂಡುಬರುತ್ತದೆ. ೨೦೦೧ರ ಜನಗಣತಿ ಪ್ರಕಾರ ಚಿಕ್ಕಮಗಳೂರು ಜಿಲ್ಲೆಯಲ್ಲಿ ವಾಸವಿರುವ ಮೇದರ ಒಟ್ಟು ಸಂಖ್ಯೆ ೧೭೫೩ ಇದರಲ್ಲಿ ೮೯೪ ಪುರುಷರು, ೮೫೯ ಸ್ತ್ರೀಯರೆಂದು ದಾಖಲಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ವಾಸವಿರುವ ಮೇದರು ಶೇ.೩೩.೩೮ ಎಂದು ದಾಖಲೆ ತಿಳಿಸುತ್ತದೆ. ಕರ್ನಾಟಕದಲ್ಲಿ ೨೦೦೧ರ ಜನಗಣತಿಯಂತೆ ಒಟ್ಟು ೩೭,೩೭೧ ಜನಸಂಖ್ಯೆ ಕಂಡುಬರುತ್ತದೆ. ಇದರಲ್ಲಿ ಪುರುಷರು ೧೮,೭೭೮ ಹಾಗೂ ಸ್ತ್ರೀಯರು ಸರಾಸರಿ ೫೦:೫೦ರ ಅನುಪಾತದಲ್ಲಿರುವುದು ತಿಳಿಯಬಹುದು.

ಸಂಶೋಧನೆಗಾಗಿ ಆಯ್ಕೆ ಮಾಡಿಕೊಂಡ ಚಿಕ್ಕಮಗಳೂರು ಜಿಲ್ಲೆಯಲ್ಲಿ ನರಸಿಂಹರಾಜಪುರ, ಮೂಡಿಗೆರೆ, ಚಿಕ್ಕಮಗಳೂರು, ತರೀಕೆರೆ ತಾಲೂಕುಗಳಲ್ಲಿ ಮಾತ್ರ ಮೇದರ ನೆಲೆಗಳಿವೆ. ಶೃಂಗೇರಿ, ಕೊಪ್ಪ ಹಾಗೂ ಕಡೂರು ತಾಲೂಕುಗಳಲ್ಲಿ ಮೇದರ ನೆಲೆಗಳಿಲ್ಲ. ಚಿಕ್ಕಮಗಳೂರು ಜಿಲ್ಲೆಯ ಸಮಗ್ರ ಅಧ್ಯಯನ ಕೈಗೊಂಡ ಕಾರಣದಿಂದಾಗಿ ಮೇದರು ವಾಸವಿರುವ ಎಲ್ಲಾ ನೆಲೆಗಳ ಸೂಕ್ಷ್ಮ ಮತ್ತು ಸಮಗ್ರ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಚಿಕ್ಕಮಗಳೂರು ಜಿಲ್ಲೆ ಪ್ರಾಕೃತಿಕ, ಸಾಂಸ್ಕೃತಿಕ, ತೋಟಗಾರಿಕೆ ಬೆಳೆ, ರಾಜಕೀಯ ಇತ್ಯಾದಿ ಕಾರಣಗಳಿಂದಾಗಿ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಗಮನ ಸೆಳೆದಿದೆ. ಈ ಜಿಲ್ಲೆಯಲ್ಲಿ ಹಿಂದೂ, ಮುಸ್ಲಿಂ, ಜೈನ, ಬೌದ್ಧ, ಕ್ರೈಸ್ತ ಧರ್ಮಕ್ಕೆ ಸೇರಿದ ಸಮುದಾಯಗಳನ್ನು ಕಾಣಬಹುದಾಗಿದೆ. ಜಿಲ್ಲೆಯಲ್ಲಿ ಪ್ರಮುಖ ಭಾಷೆಗಳನ್ನಾಡುವ ಜನರು ಇದ್ದಾರೆ. ಇಷ್ಟೇ ಅಲ್ಲದೆ ಜಿಲ್ಲೆಯ ಅರಣ್ಯ ಪ್ರದೇಶ ಹಾಗೂ ಬಯಲು ಪ್ರದೇಶಗಳಲ್ಲಿ ಅನೇಕ ಬುಡಕಟ್ಟುಗಳೂ ವಾಸಿಸುತ್ತಿವೆ. ಉದಾಹರಣೆಗೆ

ಆದಿಯನ್, ಬವಾಚ, ಭಿಲ್‌ಗರಾಸಿಯಾ, ಗೊಂಡ್, ಗೌಡ್ಲು, ಹಕ್ಕಿಪಿಕ್ಕಿ, ಹಸಲರು, ಇರುಳರು, ಜೇನುಕುರುಬ, ಕಾಡುಕುರುಬ, ಕಾಥೋಡಿ, ಕಟ್ಟುನಾಯಕನ್, ಕೊರಗರು, ಮಲೈಕುಡಿ, ಮಲೇಯಕಂಡಿ, ಮಾಲೇರು, ಮೇದ, ನಾಯಕ, ಪಳ್ಳಿಯಾನ್, ಪಣಿಯನ್, ಶೋಲಗ, ಮರಾಠಿ, ಹಸಲರು ಮುಂತಾದ ಬುಡಕಟ್ಟುಗಳು ಚಿಕ್ಕಮಗಳೂರಿನಾದ್ಯಂತ ಕಂಡು ಬರುತ್ತಾರೆ. ಒಟ್ಟಿನಲ್ಲಿ ಈ ಜಿಲ್ಲೆಯು ಅನೇಕ ಭಿನ್ನತೆ ಹಾಗೂ ವೈವಿಧ್ಯತೆಗಳನ್ನು ಹೊಂದಿದ್ದು ಅಧ್ಯಯನಕ್ಕೆ ಯೋಗ್ಯವಾಗಿದೆ.

ನನ್ನ ಸಂಶೋಧನೆಯ ಭೌಗೋಳಿಕ ವ್ಯಾಪ್ತಿ ಚಿಕ್ಕಮಗಳೂರು ಜಿಲ್ಲೆ. ನನ್ನ ಕ್ಷೇತ್ರಕಾರ್ಯದ ಮೂಲಕ ಪಡೆದ ದತ್ತಾಂಶಗಳನ್ನು, ಸಾರಣೀಕರಣಗೊಳಿಸಿ ಕೋಷ್ಟಕಗಳ ಮೂಲಕ ವಿವರಿಸಿದ್ದೇನೆ. ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ, ಚಿಕ್ಕಮಗಳೂರು, ಮೂಡಿಗೆರೆ ಹಾಗೂ ನರಸಿಂಹರಾಜಪುರದೆಲ್ಲೆಡೆ ಮೇದರ ನೆಲೆಗಳಿವೆ. ಮೇದರ ಕೇರಿ, ಹಟ್ಟಿ, ಬೀದಿ ಎಂಬ ಹೆಸರಿನ ಪ್ರತ್ಯೇಕ ನೆಲೆಗಳಲ್ಲಿ ವಾಸಗೊಂಡಿದ್ದಾರೆ. ಬೇರೆ ಬೇರೆ ಹಿಂದುಳಿದ ಜಾತಿ, ವರ್ಗಗಳ ಜೊತೆಗೆ ವಾಸಿಸುತ್ತಿರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಹೊಸ ನೆಲೆಗಳು ಊರಿನ ಅಂಚಿನಲ್ಲಿದ್ದು, ಗುಡ್ಡದಿಂದ ಬಿದಿರುಗಳನ್ನು ಸಾಗಿಸಲು ಅನುಕೂಲಕರವಾಗಿದೆ. ಚಿಕ್ಕಮಗಳೂರು ಜಿಲ್ಲೆಯಾದ್ಯಂತ ೩೭೩ ಮೇದರ ಕುಟುಂಬಗಳು ವಾಸವಿದ್ದು, ಒಟ್ಟು ೧೮೪೮ ಜನಸಂಖ್ಯೆಯನ್ನು ಹೊಂದಿದೆ. ತರೀಕೆರೆ ತಾಲೂಕಿನಲ್ಲಿ ಅತ್ಯಧಿಕ ಜನಸಂಖ್ಯೆಯಿದ್ದು, ನಂತರ ಮೂಡಿಗೆರೆ, ನರಸಿಂಹರಾಜಪುರ ಹಾಗೂ ಚಿಕ್ಕಮಗಳೂರು ತಾಲೂಕಗಳಲ್ಲಿ ಅನುಕ್ರಮವಾಗಿ ಜನಸಂಖ್ಯೆ ಇಳಿತ ಕಾಣಬಹುದು.

ತಾಲೂಕುವಾರು ಇವರ ನೆಲೆಗಳನ್ನು ಹೇಳುವುದಾದರೆ, ತರೀಕೆರೆ ತಾಲೂಕಿನಲ್ಲಿ ಒಟ್ಟು ೧೪೬ ಕುಟುಂಬಗಳಿದ್ದು ಒಟ್ಟು ಜನಸಂಖ್ಯೆ ೮೨೭ ಇದೆ. ಇದರಲ್ಲಿ ೪೩೩ ಪುರುಷರು, ೩೯೪ ಮಹಿಳೆಯರಿದ್ದಾರೆ. ತರೀಕೆರೆ ತಾಲೂಕಿನ ತರೀಕೆರೆ (ತಿಮ್ಮಯ್ಯನಬೀದಿ), ಜಯಪುರ, ತಣಿಗೆಬೈಲು, ರಂಗೇನಹಳ್ಳಿ, ಅಜ್ಜಂಪುರ, ಮಂಡರವಳ್ಳಿ, ಬಾವಿಕೆರೆ, ಲಕ್ಕವಳ್ಳಿ, ಎ.ರಂಗಾಪುರ, ಕೋಡಿಕ್ಯಾಂಪ್ ಹಾಗೂ ಉಪ್ಪಾರಬೀರನಹಳ್ಳಿ ಇಲ್ಲಿ ಮೇದರ ನೆಲೆಗಳಿವೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೆಚ್ಚು ಸಾಕ್ಷರತೆ ಹೊಂದಿರುವರ ತಾಲೂಕು ನರಸಿಂಹರಾಜಪುರ ಇಲ್ಲಿ ಶೇ.೭೦%ರಷ್ಟು ಮೇದರು ಸಾಕ್ಷರತೆ ಹೊಂದಿದ್ದಾರೆ. ತರೀಕೆರೆ ತಾಲೂಕು ಶೇ.೪೫.೮೨%ರಷ್ಟು ಹೊಂದಿದೆ. ಚಿಕ್ಕಮಗಳೂರು ತಾಲೂಕಿನಲ್ಲಿ ೪೨ ಕುಟುಂಬಗಳಿದ್ದು, ೨೨೭ ಜನಸಂಖ್ಯೆ ಹೊಂದಿದೆ. ಇದರಲ್ಲಿ ೧೧೩ ಗಂಡಸರು, ೧೧೪ ಹೆಂಗಸರು ಸರಿ ಪ್ರಮಾಣವನ್ನು ಕಾಣಬಹುದು. ಚಿಕ್ಕಮಗಳೂರು ತಾಲೂಕಿನ ಸಾಕ್ಷರತೆ ಶೇ.೪೬.೩೭% ಆಗಿದೆ. ಚಿಕ್ಕಮಗಳೂರು, ರಾಮನಹಳ್ಳಿ ಹಾಗೂ ಅರಳುಗುಪ್ಪೆ ಮಾತ್ರ ಮೇದರ ನೆಲೆಗಳು. ನರಸಿಂಹರಾಜಪುರ ಅತಿಹೆಚ್ಚು ಸಾಕ್ಷರತೆ ಹೊಂದಿರುವ ಹಾಗೂ ಶೇ.೮೦% ಭಾಗ ಭದ್ರಾ ಜಲಾಶಯದ ಹಿನ್ನೀರಿನಿಂದ

ಆವೃತವಾಗಿರುವ, ಪ್ರಕೃತಿ ರಮಣೀಯ ಹಾಗೂ ಊರಿಗೆ ಸಮೀಪದಲ್ಲೇ ಭದ್ರಾ ಅಭಯಾರಣ್ಯವಿರುವ ಈ ತಾಲೂಕಿನಲ್ಲಿ ೬೨ ಕುಟುಂಬಗಳು ವಾಸವಿದ್ದು, ೨೭೦ ಜನ ಸಂಖ್ಯೆ ಹೊಂದಿದೆ. ೧೩೯ ಪುರುಷರು ಹಾಗೂ ೧೩೧ ಮಹಿಳೆಯರನ್ನು ಹೊಂದಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲೇ ವಿಶೇಷವೆನಿಸಿದ ಕನ್ನಡ, ತೆಲುಗು, ಮಳಯಾಳಂ ಮೇದರು ವಾಸಿಸುತ್ತಿದ್ದಾರೆ.

ನರಸಿಂಹರಾಜಪುರ, ಶೆಟ್ಟಿಕೊಪ್ಪ, ಲಿಂಗಾಪುರ, ಬಾಳೆಹೊನ್ನೂರಿನಲ್ಲಿ ಮೇದರ ನೆಲೆಗಳಿವೆ. ಚಿಕ್ಕಮಗಳೂರು ಜಿಲ್ಲೆಯಲ್ಲೇ ಅತ್ಯಧಿಕ ಮೇದರ ನೆಲೆಗಳಿರುವುದು ಮೂಡಿಗೆರೆ ತಾಲೂಕಿನಲ್ಲಿ ೧೬ ಹಳ್ಳಿಗಳಲ್ಲಿ ಮೇದರಿದ್ದಾರೆ. ಇವರೆಲ್ಲರೂ ದುರ್ಗಮ ಪ್ರದೇಶದ ಕಾಡು, ಹಳ್ಳಿಗಳಲ್ಲಿ ವಾಸವಾಗಿದ್ದು, ಮೇದಾರಿಕೆ ಹಾಗೂ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದಾರೆ. ಒಟ್ಟು ೧೨೩ ಕುಟುಂಬಗಳಿದ್ದು, ೫೨೪ ಜನಸಂಖ್ಯೆ ಹೊಂದಿದೆ. ಈ ತಾಲೂಕಿನ ಮೇದ ನೆಲೆಗಳಾದ ಆಲ್ದೂರು, ಹಲಸಿನಮನೆ, ಜನ್ನಾಪುರ, ತೋರಣಮಾವು, ಮಡೇನೇರಲು, ಮೂಡಿಗೆರೆ, ದಾಸರಹಳ್ಳಿ, ಬಣಕಲ್, ಗುಡ್ಡಟ್ಟಿ, ಬಿಳಗುಳ, ಬಿಳಗುಳ ಆಶ್ರಯ ಕಾಲೋನಿ ಹಾಗೂ ಬಾನಳ್ಳಿಗಳಲ್ಲಿ ಮೇದರು ವಾಸಿಸುತ್ತಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ಮೇದರ ಕುಟುಂಬಗಳು, ಜನಸಂಖ್ಯೆ, ಪುರುಷರು, ಸಾಕ್ಷರತೆ ಒಳಗೊಂಡಂತೆ ಹಲವು ವಿಷಯಗಳನ್ನು ಕೋಷ್ಟಕದ ಮೂಲಕ ಹೇಳಲಾಗಿದೆ. ಕೋಷ್ಟಕ ೧, ೨ನ್ನು ನೋಡಿರಿ. ಹೆಚ್ಚಿನ ಕೋಷ್ಟಕಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ತಾಲೂಕುವಾರು ಮೇದ ಜನಸಂಖ್ಯೆ ಮತ್ತು ಕುಟುಂಬಗಳ ಮಾಹಿತಿ ಕೋಷ್ಟಕ – ೧

ಕ್ರಸಂ	ತಾಲೂಕು	ಗಂಡು	ಹೆಣ್ಣು	ಒಟ್ಟು	ಒಟ್ಟು ಕುಟುಂಬ
೦೧	ತರೀಕೆರೆ	೪೩೩	೩೯೪	೮೨೭	೧೪೬
೦೨	ಚಿಕ್ಕಮಗಳೂರು	೧೧೩	೧೧೪	೨೨೭	೪೨
೦೩	ಮೂಡಿಗೆರೆ	೨೪೮	೨೭೬	೫೨೪	೧೨೩
೦೪	ನರಸಿಂಹರಾಜಪುರ	೧೩೯	೧೩೧	೨೭೦	೬೨
	ಒಟ್ಟು	೯೩೩	೯೧೫	೧೮೪೮	೩೭೩

ಚಿಕ್ಕಮಗಳೂರು ಜಿಲ್ಲೆಯ ತಾಲೂಕುವಾರು ಮೇದ ಶೇಕಡಾವಾರು ಜನಸಂಖ್ಯೆ ಮತ್ತು ಕುಟುಂಬಗಳ ಮಾಹಿತಿ ಕೋಷ್ಟಕ–೨

ಕ್ರಸಂ	ತಾಲೂಕು	ಗಂಡು	ಹೆಣ್ಣು	ಒಟ್ಟು	ಒಟ್ಟು ಕುಟುಂಬ
೦೧	ತರೀಕೆರೆ	೪೩೩ ೪೬.೪೦	೩೯೪ ೪೩.೦೬	೮೨೭ ೪೪.೭೫	೧೪೬ ೩೯.೧೪
೦೨	ಚಿಕ್ಕಮಗಳೂರು	೧೧೩ ೧೨.೧೧	೧೪೪ ೧೨.೪೫	೨೨೭ ೧೨.೨೮	೪೨ ೧೧.೨೬
೦೩	ಮೂಡಿಗೆರೆ	೨೪೮ ೨೬.೫೮	೨೭೬ ೩೦.೧೬	೫೨೪ ೨೮.೩೫	೧೨೩ ೩೨.೯೭
೦೪	ಎನ್.ಆರ್.ಪುರ	೧೩೯ ೧೪.೮೯	೧೩೧ ೧೪.೩೧	೨೭೦ ೧೪.೬೧	೬೨ ೧೬.೬೨
ಒಟ್ಟು		೯೩೩ ೯೯.೯೮ ೧೦೦%	೯೧೫ ೯೯.೯೮ ೧೦೦%	೧೮೪೮ ೯೯.೯೯ ೧೦೦%	೩೭೩ ೯೯.೯೯ ೧೦೦%

ಅಡಿ ಟಿಪ್ಪಣಿಗಳು

೦೧. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ಮಿಸ್ಸಿಂಗ್ ಲಿಂಕ್, ಅಕ್ಷರಪ್ರಕಾಶನ, ಪುಟ-೬

೦೨. ಡಾ.ಬೋರಲಿಂಗಯ್ಯ ಹಿ.ಚಿ., ಬುಡಕಟ್ಟು ದೈವಾರಾಧನೆ, ಪುಟ-೧೯,೨೦ ನಿರ್ದೇಶಕರು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೦

೦೩. ಅದೇ-ಪುಟ-೨೪

೦೪. ಡಾ. ಮೇತ್ರಿ ಕೆ.ಎಂ., -'ಬುಡಕಟ್ಟು ಕುಲಕಸುಬುಗಳು' ಪುಟ-೧೮೩, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೨

೦೫. ಪ್ರಭಾಕರ ಎ.ಎಸ್., 'ಬುಡಕಟ್ಟು ಅಧ್ಯಯನ ಸ್ಥಿತ್ಯಂತರಗಳು' ಪುಟ-೧೫೭, ಸಿದಾರ್ಥ ಪ್ರಕಾಶನ, ಹೊಸಪೇಟೆ, ಬಳ್ಳಾರಿ, ಜಿಲ್ಲೆ

ಅಧ್ಯಾಯ : ಎರಡು

ಮೇದರ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ ಹಾಗೂ ರಾಜಕೀಯ ಜೀವನ ಕ್ರಮಗಳು

ಅಧ್ಯಾಯ–ಎರಡು

ಮೇದರ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ ಹಾಗೂ ರಾಜಕೀಯ ಜೀವನ ಕ್ರಮಗಳು

೨.೧ ಸಾಮಾಜಿಕ ಜೀವನ

ಅತ್ಯಂತ ನವೀನ ವಿಜ್ಞಾನವೆನಿಸಿಕೊಂಡಿರುವ ಸಮಾಜಶಾಸ್ತ್ರವು ಸಮಾಜವಿಜ್ಞಾನಿಗಳ ಸಮೂಹದಲ್ಲಿ ವಿಶಿಷ್ಟ ಸ್ಥಾನ ಪಡೆದುಕೊಂಡಿದೆ. ಈ ಶಾಸ್ತ್ರ ಮನುಷ್ಯನ ಸಮಾಜ, ಸಾಮಾಜಿಕ ಚಟುವಟಿಕೆಗಳ ಅಧ್ಯಯನ ಮಾಡುತ್ತದೆ. ಅದು ಮಾನವ ಸಮಾಜದ ವಿಶಿಷ್ಟತೆ, ಪ್ರಾಣಿ ಪ್ರಪಂಚದಿಂದ ಮಾನವ ಸಮಾಜವು ಭಿನ್ನವಾಗಿರುವ ಬಗ್ಗೆ ಅದರ ಉತ್ಪತ್ತಿ, ವಿಕಾಸ, ರಚನೆ, ಮತ್ತು ಕಾರ್ಯ ಮುಂತಾದ ವಿಷಯಗಳನ್ನು ವೈಜ್ಞಾನಿಕವಾಗಿ ಅಭ್ಯಸಿಸುತ್ತದೆ. ಮಾನವನ ಸಮೂಹ ಜೀವನದ ರೀತಿ–ನೀತಿಗಳನ್ನು ವಿಶ್ಲೇಷಿಸುವುದರೊಂದಿಗೆ ಸಾಮಾಜಿಕ ಬಂಧನದ ಸೂತ್ರಗಳನ್ನು ಅದು ಅಭ್ಯಸಿಸುವುದು. ಮಾನವ ಮತ್ತು ಆತನ ಸಮಾಜದ ನಡುವಿನ ಸಂಬಂಧದ ಮೇಲೆ ವಿಶೇಷ ಒತ್ತು ನೀಡುತ್ತದೆ. ಮಾನವನ ಸಾಮಾಜಿಕ ವರ್ತನೆ, ಅಂತಃಕ್ರಿಯೆಗಳ ಅಭ್ಯಾಸ, ಮಾನವನ ಸಂಬಂಧಗಳು ವಿಶಿಷ್ಟ ರೂಪಗಳು, ವಿವಿಧತೆ, ನಮೂನೆಗಳನ್ನು ಕುರಿತು ಅಭ್ಯಸಿಸುತ್ತದೆ. ಸಾಮಾಜಿಕ ಸಂಬಂಧಗಳು ನಿರ್ಮಿಸುವ ಚಿಕ್ಕ ಹಾಗೂ ಅತಿ ದೊಡ್ಡ ವ್ಯವಸ್ಥೆಗಳ ಲಕ್ಷಣಗಳನ್ನು ವಿವರಿಸುತ್ತದೆ. ಬದಲಾಗುತ್ತಿರುವ ಪರಿಸ್ಥಿತಿಗಳಿಗೆ

ತಕ್ಕಂತೆ ಸಾಮಾಜಿಕ ಸಂಬಂಧಗಳು ಹೇಗೆ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸುತ್ತದೆ ಎಂಬುದನ್ನು ಸಹ ಸಮಾಜಶಾಸ್ತ್ರ ಒಳಗೊಂಡಿರುತ್ತದೆ. ಸಾಮಾಜಿಕ ಜೀವನದ ಸ್ಥಿರತೆ ಮತ್ತು ಪರಿವರ್ತನೆಯ ಅಂಶಗಳನ್ನು ಅಭ್ಯಸಿಸುವುದರ ಜೊತೆಗೆ ಮನುಷ್ಯನ ಜೀವನದ ಮೇಲೆ ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ವೈಜ್ಞಾನಿಕ ಹಾಗೂ ತಾಂತ್ರಿಕ ಅಂಶಗಳು ಬೀರುವ ಪ್ರಭಾವವನ್ನು ಅರಿಯಲು ಪ್ರಯತ್ನಿಸುತ್ತದೆ. ಮಾನವ ಜೀವನದ ಯಜಮಾನಿಕೆಯನ್ನು ವಹಿಸಿರುವ ಸಂಸ್ಕೃತಿಯ ವೈಶಿಷ್ಟ್ಯತೆ ಮತ್ತು ಪ್ರಾಮುಖ್ಯತೆಯನ್ನು ಅಧ್ಯಯನ ಮಾಡುವುದು.

ಹೀಗೆ ಮಾನವ ಸಮಾಜದ ವಿದ್ಯಾಮಾನಗಳಿಗೆ ಹಿಡಿದ ಕೈಗನ್ನಡಿಯಂತೆ ಸಾಮಾಜಿಕ ಅಧ್ಯಯನದ ಜಾಡು ವಿಸ್ತರಿಸುತ್ತಾ ಹೋಗುತ್ತದೆ. ಮಾನವ ಬದುಕಿಗೆ ಆತುಕೊಂಡಿರುವ ಬದುಕಿನ ಎಲ್ಲಾ ಮಜಲುಗಳನ್ನು ಸಮಗ್ರವಾಗಿ ಒಳಗೊಂಡಿರುವ ವಿಸ್ತೃತ ಅಧ್ಯಯನವೇ ಸಾಮಾಜಿಕ ಅಧ್ಯಯನವೆನ್ನಬಹುದು. ಇದರಲ್ಲಿ ಸಾಮಾಜಿಕ ಜೀವನ ಅತ್ಯಂತ ಪ್ರಮುಖವಾದುದು. ಕಾರಣ ವ್ಯಕ್ತಿ ತನ್ನ ಹುಟ್ಟಿನಿಂದ ಸಾವಿನವರೆಗೆ ಸಮಾಜದೊಂದಿಗೆ ಪ್ರತಿನಿತ್ಯ ತನ್ನ ಸಂಬಂಧವನ್ನು ಬಲಗೊಳಿಸಿಕೊಳ್ಳುತ್ತಲೇ ಇರುತ್ತಾನೆ.

೨.೧.೧ ಮೇದ ಬುಡಕಟ್ಟಿನ ಪದನಿಷ್ಪತ್ತಿ ಮತ್ತು ಪೌರಾಣಿಕ ಹಿನ್ನೆಲೆ

'ಮೇದ' ಎಂದರೆ ಬಿದಿರಿನಿಂದ ಚಾಪೆ, ಬುಟ್ಟಿ ಮೊದಲಾದವುಗಳನ್ನು ಮಾಡುವವನು ಎಂದು ಕನ್ನಡ ರತ್ನಕೋಶ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ತಿಳಿಸುತ್ತದೆ. ಮೇದ (Meda) ಎಂದರೆ ಮೇದರ, ಮೇದಾರ-ಬಿದಿರಿನಿಂದ ಬುಟ್ಟಿ, ಮೊರ, ಚಾಪೆಯನ್ನು ತಯಾರಿಸುವವನು. ಅಥವಾ ಚಪಕಾರಕ, ವಂಶಚ್ಛೇದಿ (A man who plaits baskets, mats etc of bamboo splits. A man of the basket-maker castes) ಎಂದು ಫರ್ಡಿನೆಂಟ್ ಕಿಟೆಲ್ ಅವರು ತಮ್ಮ ಕನ್ನಡ-ಇಂಗ್ಲೀಷ್ ನಿಘಂಟುವಿನಲ್ಲಿ ಹೇಳಿದ್ದಾರೆ. ಪುಟ ಸಂಖ್ಯೆ ೧೨೫೫. ಮುಂದುವರೆದು ಮೇದಾರ=ಮೇದ, ಮೇದಾರವಳು, ಮೇದಸಿ ಎಂದು ತಿಳಿಸುತ್ತ. ಮೇದಾರ ಹಾಗೂ ಮೇದ ಎರಡೂ ಸಮಾನಾರ್ಥಕ ಪದ ಎಂದು ವಿವರಿಸಿದ್ದಾರೆ. ಮೇದ, ಮೇದರ ಎಂದರೆ ಬಿದಿರಿನಿಂದ ಮೊರ, ಬುಟ್ಟಿ ಮಾಡುವವ ಎಂದು ಪಿ.ಸಿ.ಎಸ್ ಕನ್ನಡ-ಕನ್ನಡ ಶಬ್ದಾರ್ಥ ಕೋಶದಲ್ಲಿ ವಿವರವಿದೆ.

ಮೇದರು ಎಂದರೆ ಬಿದಿರಿನಿಂದ ಸಮುದಾಯ ಉಪಯೋಗಿ ಉತ್ಪನ್ನಗಳನ್ನು ಮಾಡುವವರು ಎಂದು ಅರ್ಥೈಸಬಹುದು. ಬಿದಿರಿನಿಂದ ಮೊರ, ಬುಟ್ಟಿ, ತೊಟ್ಟಲು, ಚಾಪೆ ಇತ್ಯಾದಿಗಳನ್ನು ತಯಾರಿಸುವ ಮೂಲ ಕಸುಬುದಾರರೇ ಮೇದರು. ಬಿದಿರಿನ ಕೆಲಸ ಮಾಡುವವರೆಲ್ಲ ಮೇದರಲ್ಲ. ಕೊರಚ, ಕೊರಮ, ಇರುಳರು, ಹಸಲರು, ಗೌಡ್ಲು, ಕುಣಬಿ ಇತ್ಯಾದಿ ಪಂಗಡದವರೂ ಬುಟ್ಟಿ ಹೆಣೆಯುತ್ತಾರೆ. ಆದರೆ ಮೇದರು ತಯಾರಿಸುವ ಬಿದಿರಿನ ಉತ್ಪನ್ನಗಳು ವಿಭಿನ್ನವಾಗಿರುತ್ತವೆ. ಆದ್ದರಿಂದ ಚಪಕಾರಕ ವೃತ್ತಿ ಈ ಸಮುದಾಯದ ಅನನ್ಯತೆ.

ಕಾರಣ 'ಮೇದರೊಳಲ್ಲದೇ ವಂಶ ಚ್ಛೇದಂ ಗಾರುಡಿದೊಳಲ್ಲ' ಎಂದು ಸೂಕ್ತಿ ಸುಧಾವರಣದಲ್ಲಿ ವ್ಯಾಕರಣಕಾರ ಕೇಶಿರಾಜನ ತಂದೆ ಮಲ್ಲಿಕಾರ್ಜುನ ಹೇಳಿರುವುದು ಕಂಡುಬರುತ್ತದೆ.

ಮೇದ, ಮೇದಾರಿ, ಮೇದಾರ್ಲು, ಗೌರಿಗ, ಬುರುಡ, ಮ್ಯಾದಾರ್, ಮೇದರ್, ಮಿಯಾದಾರ, ಮೇದಾರ, ಮೇದರು ಮುಂತಾದ ಹೆಸರುಗಳ ಮೂಲ **"ಮಕರಿಗ"** ಎಂಬ ಶಬ್ದ. ಈ ಶಬ್ದದ ಅರ್ಥ **"ಬಿದಿರಿನ ಸೀಳು"** ಎಂದು ಇವರ ಮೂಲ ವಾಸಸ್ಥಾನ ಆಂಧ್ರಪ್ರದೇಶದಲ್ಲಿರುವ ಮಹೇಂದ್ರ ಪರ್ವತವೆಂದು ಪ್ರತೀತಿ ಇದೆ. ಇವರು ಪಾರ್ವತಿ (ಗೌರಿ)ಗೆ ಬೇಕಾದ ಮೊರ ತಯಾರಿಸಲು ಜನ್ಮ ತಾಳಿದವರಾದ್ದರಿಂದ ಗೌರಿಗ, ಗವರಿಗ (ಗೌರಿಯ ಮಕ್ಕಳು) ಎಂದು ಕರೆಯಲ್ಪಟ್ಟರು. ಮೇದ ಸಮುದಾಯವನ್ನು ೧೯೫೬ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಪರಿಷ್ಕೃತ ಆದೇಶದ ಪರಿಶಿಷ್ಟ ೩, ಭಾಗ ೮ರ ಮೈಸೂರು ರಾಜ್ಯದ ಪಟ್ಟಿಯ ಕ್ರಮಸಂಖ್ಯೆ (೭), ೫ರ ಪ್ರಕಾರ ಕೊಡಗು ಜಿಲ್ಲೆಗೆ ಸೀಮಿತಗೊಂಡಂತೆ ಬುಡಕಟ್ಟು ಪಟ್ಟಿಗೆ ಸೇರಿಸಲಾಗಿದೆ.

ಇದರ ಪ್ರಾದೇಶಿಕ ಮಿತಿಯನ್ನು ೨೭.೭.೧೯೭೭ರಂದು ಸಡಿಲಿಸಿ ಕರ್ನಾಟಕಕ್ಕೆ ವಿಸ್ತರಿಸಲಾಯಿತು. ಆದರೆ ಈ ಬುಡಕಟ್ಟಿನ ಪರ್ಯಾಯ ಪದಗಳ್ಯಾವುವೂ ಈ ಪಟ್ಟಿಯಲ್ಲಿ ಸೇರಿಸಲ್ಪಟ್ಟಿರಲಿಲ್ಲ. ಮೇದರನ್ನೇ ಪ್ರತಿನಿಧಿಸುವ ಮೇದರ್, ಮೇದರಿ, ಗೌರಿಗ, ಬುರುಡ ಮತ್ತು ಬುಡ್ಡರ್ ಪದಗಳನ್ನು ಮೇದ ಪದದ ಪರ್ಯಾಯ ಪದಗಳೆಂದು ಪರಿಗಣಿಸಿ ಆ ಎಲ್ಲಾ ಪದಗಳಿಗೂ ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಕರ್ನಾಟಕ ಸರ್ಕಾರ ೨೯.೧೧.೧೯೭೭ರಿಂದ ಒಂದು ವರ್ಷದ ಮಟ್ಟಿಗೆ ಕಲ್ಪಿಸಿ ಮೊಟಕುಗೊಳಿಸಿತು. ಜೊತೆಗೆ ೧.೧೨.೧೯೭೮; ೨೮.೧೧.೧೯೮೪; ೦೭.೧೧.೧೯೮೭; ೦೫.೧೨.೧೯೯೧ ಮತ್ತು ೧೯.೧೦.೧೯೯೫ ಗಳಂದು ಈ ಬುಡಕಟ್ಟಿನ ಪರ್ಯಾಯ ಪದಗಳನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು ಕರ್ನಾಟಕ ಸರ್ಕಾರ, ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವುದನ್ನು ಡಾ.ಕೆ.ಎಂ.ಮೈತ್ರಿಯವರು ದಾಖಲಿಸಿರುತ್ತಾರೆ. ದಿನಾಂಕ: ೨೭.೦೩.೧೯೮೦ರಂತೆ ಭಾರತದ ರಾಷ್ಟ್ರಪತಿಗಳಿಂದ ಅಧಿಕೃತವಾಗಿ ಅನುಮೋದಿಸಲ್ಪಟ್ಟ ಪರಿಶಿಷ್ಟ ಜಾತಿ/ವರ್ಗಗಳ ಕರ್ನಾಟಕ ರಾಜ್ಯದ ಸಮಾನಾಂತರ ಪರ್ಯಾಯ ಮತ್ತು ಉಪಜಾತಿಗಳ ಪಟ್ಟಿ (ಸರ್ಕಾರಿ ಆದೇಶ ಸಂಖ್ಯೆ: ಎಸ್.ಡಬ್ಲೂ.ಎಲ್. ೨೮೫ ಎಸ್.ಎ.ಡಿ. ೭೮ ಬೆಂಗಳೂರು, ದಿನಾಂಕ:೨೭.೦೩.೧೯೮೦)ಯ ಕರ್ನಾಟಕ ರಾಜ್ಯದ ಪರಿಶಿಷ್ಟ ವರ್ಗದ ಪಟ್ಟಿಯ ಕ್ರಮ ಸಂಖ್ಯೆ ಕರ್ನಾಟಕ ರಾಜ್ಯದ ಪರಿಶಿಷ್ಟ ವರ್ಗದ ಪಟ್ಟಿಯ ಕ್ರಮ ಸಂಖ್ಯೆ ೩೭ರಲ್ಲಿ ಮೇದ, ಗೌರಿಗ, ಮೇದಾರಿ ಹಾಗೂ ಬುರುಡ್ ಇವು ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿವೆ. ೨೦೦೩ರಿಂದ ಮೇದಾರಿ, ಗೌರಿಗ ಮತ್ತು ಬುರುಡ್ ಸಮುದಾಯಗಳು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿದವು. ೨೦೦೫ರಲ್ಲಿ 'ಮೇದಾರ' ಸಮಪದ ಪರಿಶಿಷ್ಟ ಪಟ್ಟಿಗೆ ಸೇರಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಕೈತಪ್ಪಿರುವ ಈ ಆಶಯ

ಕೈಗೂಡುವ ನಿರೀಕ್ಷೆಯಲ್ಲಿ 'ಮೇದಾರ'ರಿದ್ದಾರೆ. ಮೇದ'ರ, ಮೇದಾ'ರ, ಮೇದ'ರು ಎಂಬ ಪದಗಳು ಸ್ವಾಮಿ ನಿಷ್ಠೆ ಸೂಚಕತೆ (ಅಪಾಸ್ಟ ಪಿಯಸ್)ಯನ್ನು ಸೂಚಿಸುವುದಿದ್ದು, ಕಂದಾಯ ಇಲಾಖೆಯ ನಮೂನೆಗಳಲ್ಲಿ ತಪ್ಪಾಗಿ ಬರೆಯುವ ವಾಡಿಕೆಯಿಂದ ಹಾಗೂ ಎಲ್ಲಾ ಜನಾಂಗದವರು ಬಳಸುವಂತೆ ಬುಡಕಟ್ಟಿನವರು ಸಂಬೋಧನೆಯಲ್ಲಿ ಬಹುವಚನ ಸೂಚಕವಾಗಿ ಮೇದರ, ಮೇದಾರ, ಮೇದರು ಎಂಬುದಾಗಿ ಬಳಸುವುದು, ಪ್ರದೇಶಾತೀತವಾಗಿ ವಾಡಿಕೆಯಲ್ಲಿರುವುದು ಸಂಶೋಧನೆಯಿಂದ ದೃಢಪಟ್ಟಿದೆ. ಕರ್ನಾಟಕದಲ್ಲಿ ಕನ್ನಡ ಮತ್ತು ತೆಲುಗು ಮಾತನಾಡುವ ಮೇದರು ಹೆಚ್ಚಿದ್ದಾರೆ. ಆದರೆ ವಿಶೇಷವೆಂದರೆ ನನ್ನ ಸಂಶೋಧನಾ ಕ್ಷೇತ್ರ ಚಿಕ್ಕಮಗಳೂರಿನಲ್ಲಿ ತೆಲುಗು, ಕನ್ನಡ, ತಮಿಳು ಹಾಗೂ ಮಲಯಾಳಂ ಭಾಷೆ ಮಾತನಾಡುವ ಮೇದರಿದ್ದಾರೆ. ಬೀದರ್, ಬೆಳಗಾವಿ ಮತ್ತು ಬಿಜಾಪುರ ಜಿಲ್ಲೆಗಳ ಮೇದರು ಮರಾಠಿ ಮಾತನಾಡುತ್ತಾರೆ. ಸೇಲಂನಿಂದ ಬಂದ ಪಲ್ಲಿ (ಪಳ್ಳಿ) ಮೇದರು ತಮಿಳು ಭಾಷಿಕ ಮೇದರು. ಕರ್ನಾಟಕದಲ್ಲಿ ಮುಖ್ಯವಾಗಿ ಕನ್ನಡ ಮೇದರು ಮತ್ತು ತೆಲುಗು ಮೇದರು ಎಂಬುದಾಗಿ ಭಾಷಾವಾರು ವಿಂಗಡಣೆ ಮಾಡಿದ್ದಾರೆ.

ಮೇದರ ಸೃಷ್ಟಿ ಪುರಾಣಗಳು

ಮೇದರು ಮೂಲತಃ ಕಾಡಿನ ಮೂಲದ ಸಂಸ್ಕೃತಿಯನ್ನು ತನ್ನೊಡಲಲ್ಲಿ ಪೋಷಿಸಿಕೊಂಡು ನಿಸರ್ಗಮಯವಾಗಿ ಬದುಕುತ್ತಿದ್ದಾರೆ. ಸಾಹಿತ್ಯ, ಸಂಸ್ಕೃತಿಯ ದೃಷ್ಟಿಯಿಂದ ಅವರ ಸೃಷ್ಟಿ ಪುರಾಣಗಳು ಮಹತ್ವ ಪೂರ್ಣವಾಗಿವೆ. ಪುರಾಣಗಳು ಮೇದರ ಹುಟ್ಟಿಗೆ ಸಂಬಂಧಿಸಿದವುಗಳಾಗಿವೆ. ಬುಡಕಟ್ಟು ಕಸುಬಿಗೂ, ಪುರಾಣಗಳಿಗೂ ಏಕತಾನತೆಯನ್ನು ಕಾಣಬಹುದು. ಮೇದರ ಬದುಕು ನೀತಿಯುತ ಮೌಲ್ಯಗಳಿಂದ ಇಂದಿಗೂ ಮುಂದುವರಿಯುತ್ತಿರುವುದಕ್ಕೆ ಸೃಷ್ಟಿ ಪುರಾಣಗಳೇ ಕಾರಣವಾಗಿದೆ. ಯಾವುದೇ ಸಮುದಾಯದ ಅಧ್ಯಯನಕ್ಕೆ ಆ ಸಮುದಾಯದ ಸೃಷ್ಟಿ ಪುರಾಣಗಳು ಹಾಗೂ ಐತಿಹಾಸಿಕ ಪರಂಪರೆಗಳು ಅಧ್ಯಯನದ ಜಾಡನ್ನು ಗಟ್ಟಿಗೊಳಿಸುತ್ತದೆ. ಮೇದರಲ್ಲಿ ಬಲವಾಗಿ ರೂಢಿಗತವಾಗಿರುವ ಸೃಷ್ಟಿ ಪುರಾಣಗಳಿಂದಾಗಿ, ಮೇದರು ಸಾಂಸ್ಕೃತಿಕವಾಗಿ ಹೆಚ್ಚು ದೃಢತೆ ಸಾಧಿಸಿದ್ದಾರೆ. ಯಾವುದೇ ಜನಾಂಗವು ತಮ್ಮ ಮೂಲದ ಬಗ್ಗೆ ಹೇಳುವಾಗ ತನ್ನ ಮೂಲವು ಶಿವ, ವಿಷ್ಣು, ಬ್ರಹ್ಮ ಮತ್ತು ಶ್ರೇಷ್ಠ ಮಹಾಮುನಿಗಳಿಂದ (ಪ್ರವರ) ಅಥವಾ ಪ್ರಸಿದ್ಧ ರಾಜ-ಮಹಾರಾಜ ಮುಂತಾದ ಉನ್ನತ ಕುಲೋತ್ಪನ್ನರಿಂದ ಆಗಿದೆಯೆಂದು ತಮ್ಮದೇ ಆದ ಪೌರಾಣಿಕ ಕಥೆಯನ್ನು ಅಭಿಮಾನ, ಗೌರವದಿಂದ ಹೇಳುವುದು ಕಂಡುಬರುತ್ತದೆ. ಮೇದರಲ್ಲೂ ಇತಿಹಾಸಕ್ಕಿಂತ ಸೃಷ್ಟಿ ಪುರಾಣಗಳೇ ಹೆಚ್ಚಿವೆ. ಮೇದರ ಮೂಲವನ್ನು ಕುರಿತು ಅಧ್ಯಯನ ಮಾಡಿದಾಗ ಮೇದರು ಶಿವ, ಪಾರ್ವತಿಯರನ್ನು ಕೇಂದ್ರಿಕರಿಸಿಕೊಂಡು ಪುರಾಣ (Myth)ಗಳತ್ತ ಗಮನ ಸೆಳೆಯುತ್ತಾರೆ.

ಪುರಾಣ ಒಂದು : "ಮಹಾಭಾರತದಲ್ಲಿ ಬರುವ ನೀತಿಶಾಸ್ತ್ರ ಪ್ರವೀಣನಾದ ವಿಧುರನ ಮೂಲದವರು ಮೇದರು. ವಿಧುರ ಎಂದರೆ ಬಿದಿರು ಎಂದು ಮೇದರು ಹೇಳುತ್ತಾರೆ. ಬಿದಿರು ಮೇದರ ಕಸುಬಿನ ಮುಖ್ಯ ಕಚ್ಚಾ ವಸ್ತುವಾಗಿದೆ. ವಿಧುರ ಮತ್ತು ಬಿದಿರು ಪದಗಳು ಧ್ವನಿ ಸಾಮ್ಯವನ್ನು ಹೊಂದಿದ್ದು ಹೋಲಿಕೆಯನ್ನು ಕಾಣುತ್ತೇವೆ. ಆದ್ದರಿಂದಲೇ ಮೇದರು ವಿಧುರನ ವಂಶಕ್ಕೆ ಸೇರಿದವರೆಂದು ಹೇಳುತ್ತಾರೆ."[೫]

ಪುರಾಣ ಎರಡು : ಗಿರಿಜಾಕಲ್ಯಾಣದ ನಂತರ ಪಾರ್ವತಿ ಒಮ್ಮೆ ಗೌರಿವ್ರತವನ್ನು ಮಾಡಿ ದೇವತಾ ಮುತ್ತೈದೆಯರಿಗೆ ಬಾಗಿನ ಕೊಡಬೇಕೆಂದು ಬಯಸಿದಳು. ಬಾಗಿನ ಕೊಡಲು ಪಾರ್ವತಿಗೆ ಮೊರ ಬೇಕಾಗಿತ್ತು. ಮೊರ ಎಲ್ಲಿಯೂ ದೊರೆಯದೇ ಹೋದಾಗ ಪಾರ್ವತಿ ಶಿವನನ್ನು ಕೇಳಿದಳು ಶಿವನು ತನ್ನ ವಾಹನವಾದ ನಂದಿಗೆ ಬಿದಿರಿನಿಂದ ಮೊರ ಹೆಣೆಯುವ ಕವರಿಗ (ಗವರಿಗ)ನನ್ನು ಸೃಷ್ಟಿಸಲು ಹೇಳಿದ. ಆಗ ವೃಷಭ ಮೆಲಕು ಹಾಕಲು ಮೇದರ ಪೂರ್ವಿಕ ಹುಟ್ಟುತ್ತಾನೆ. ಪಾರ್ವತಿಯ ಕೋರಿಕೆಯನ್ನು ನಂದಿ ಮೇದನಿಗೆ ತಿಳಿಸಿದ. ಮೇದನು ಶಿವ ಮತ್ತು ನಂದಿಯರ ಆಜ್ಞೆಯಂತೆ ಶಿವನ ಶಂಕರಾಭರಣದೊಂದಿಗೆ ಭೂಲೋಕಕ್ಕೆ ಬಂದನು. ಒಂದು ಬೆಟ್ಟದಲ್ಲಿ ತಾನು ತಂದ ಶಿವನ ಕೊರಳಿನ ಹಾವನ್ನು ತಲೆಕೆಳಗಾಗಿ ನೆಟ್ಟನು. ಹಾವು ಬಿದಿರಾಗಿ ಬೆಳೆಯುತ್ತಾ ಒಂದು ಹತ್ತಾಗಿ, ಹತ್ತು ನೂರಾಗಿ, ಬಿದಿರಿನ ಮೆಳೆಗಳು ಬೆಳೆದು ನಿಂತವು.

ಮೇದನು ತನ್ನ ಕುಶಲತೆಯಿಂದ ಬಿದಿರನ್ನು ಸವರಿ ಹದವಾಗಿ ಸೀಳಿ ಸುಂದರವಾದ ಮೊರವನ್ನು ಮಾಡಿ ಪಾರ್ವತಿಗೆ ಅರ್ಪಿಸಿದ. ಮೇದ ಪುನಃ ಭೂಲೋಕಕ್ಕೆ ಬಂದು ಬಿದಿರಿನ ಮೆಳೆಗಳಿದ್ದ ಬೆಟ್ಟದಲ್ಲಿ ತನ್ನ ಚಪಕಾರಕ ವೃತ್ತಿಯಲ್ಲಿ ಮುಂದುವರಿದನು. ಇವನ ವಂಶಜರೇ ತಾವು ಎಂದು ಮೇದರು ಹೇಳುವರು. ಅಂತೆಯೇ ಬಿದಿರಿನ ಬುಡ ಹಾವಿನ ತಲೆಯನ್ನು ಮತ್ತು ತುದಿ ಹಾವಿನ ಬಾಲವನ್ನು ಹೋಲುತ್ತದೆ ಎಂದು ಮೇದರು ಬಿದಿರನ್ನು ತೋರಿಸಿ ಈ ಕಥೆಯನ್ನು ಸಮರ್ಥಿಸಿಕೊಳ್ಳುತ್ತಾರೆ.

ಪುರಾಣ ಮೂರು : ಮೇದರು ತಾವು ಮಹೇಂದ್ರ ಪರ್ವತದಿಂದ ಬಂದ ಶಿವಗಣದ ವಂಶಜರು ಎನ್ನುವುದಕ್ಕೆ ಇನ್ನೊಂದು ಸೃಷ್ಠಿ ಪುರಾಣ ಶಿವನ ಮಾವನಾದ ದಕ್ಷನು ಒಂದು ಮಹಾಯಜ್ಞವನ್ನು ಮಾಡಲು ಸಕಲ ಸಿದ್ಧತೆ ನಡೆಸಿದ್ದನು. ತನ್ನ ಅಳಿಯ, ಮಗಳನ್ನು ಎದುರುಗೊಳ್ಳಲು ದಕ್ಷನು ಕೈಲಾಸಕ್ಕೆ ಬಂದಿದ್ದನು. ಧ್ಯಾನಸಕ್ತನಾದ ಶಿವನಿಗೆ, ಮಾವನ ಆಗಮನ ತಿಳಿಯದ್ದು ದಕ್ಷ ತಪ್ಪು ತಿಳಿದು ವಾಪಸ್ಸಾದನು. ಯಜ್ಞ ನಡೆಯುತ್ತಿರುವಾಗ ಆಹ್ವಾನವಿಲ್ಲದೆಯೂ ಶಿವನ ಮಾತು ಮುರಿದು ತಂದೆಯ ಯಜ್ಞಕಾರ್ಯದಲ್ಲಿ ಪಾರ್ವತಿ ಭಾಗವಹಿಸಿದಳು. ಯಾರೂ ಆಧರಿಸದಿದ್ದಾಗ ಪಾರ್ವತಿ ಕಣ್ಣೀರಿಟ್ಟಳು ಆಗ ಭೂಮಿ ಬಿರಿದು ಬಾಯಿ ಬಿಟ್ಟಿತು. ದುಃಖಿತ ಪಾರ್ವತಿ ಈ ಬಿರಿದ ಕಂದಕದಲ್ಲಿ ಹಾರಿ ಆತ್ಮಾಹುತಿ ಮಾಡಿಕೊಳ್ಳುತ್ತಾಳೆ.

[illegible]

ಮುಂದೊಂದು ಕಾಲದಲ್ಲಿ ಪಾರ್ವತಿ ಹಿಮವಂತರಾಜನ ಮಗಳಾಗಿ ಜನಿಸಿದಳು. ಆಗ ಶಿವನು ಅಲ್ಲಿಗೆ ಬಂದು ಪಾರ್ವತಿಯ ಜನ್ಮವೃತ್ತಾಂತವನ್ನು ತಿಳಿಸಿ ಪುನಃ ಅವಳನ್ನೇ ಮದುವೆಯಾಗುತ್ತಾನೆ. ಹೀಗೆಯೇ ಒಂದು ದಿವಸ ಶಿವ-ಪಾರ್ವತಿಯರು ಆನಂದಿಂದ ಕುಳಿತಿದ್ದರು. ಪಾರ್ವತಿಯು ಶಿವನನ್ನು ತಮ್ಮ ಗಿರಿಜಾಕಲ್ಯಾಣದ ವೃತ್ತಾಂತಕ್ಕೆ ಕಾರಣ ಕೇಳಿದಳು. ಆಗ ಶಿವನು ನೀನು ನನ್ನ ಆಜ್ಞೆಯನ್ನು ಮೀರಿ ತವರು ಮನೆಗೆ ಹೋದೆ. ನಿನ್ನ ತವರು ಮನೆಯ ಮೇಲಿನ ಅತಿಯಾದ ವ್ಯಾಮೋಹವೇ ಇದಕ್ಕೆ ಕಾರಣವೆಂದು ಹೇಳಿದನು. ನಿನಗಿರುವ ತವರಿನ ವ್ಯಾಮೋಹ ಹೊರಟು ಹೋಗಲು ವ್ರತವನ್ನು ಮಾಡಿ ಮುತ್ತೈದೆಯರಿಗೆ ಮೊರದಲ್ಲಿ ಬಾಗಿನ ಕೊಡಬೇಕೆಂದು ತಿಳಿಸಿದ. ಅದಕ್ಕೆ ಪಾರ್ವತಿಯು ವ್ರತವನ್ನು ಮಾಡಿ ಬಾಗಿನ ಕೊಡಲು ಚಿನ್ನದ ಮೊರಗಳನ್ನು ಮಾಡಿಸುತ್ತಾಳೆ. ಚಿನ್ನದ ಮೊರಕ್ಕೆ ಮೂಲೆ ಹೆಣಿಗೆ ಮತ್ತು ಕಟ್ಟು ಇರುವುದಿಲ್ಲ. ಆದ್ದರಿಂದ ಅವು ಬಾಗಿನ ಕೊಡಲು ಶ್ರೇಷ್ಠವಲ್ಲ ಎಂದು ನಾರದ ಸೂಚಿಸುತ್ತಾನೆ.

ಕಂಗಾಲಾದ ಪಾರ್ವತಿ ಶಿವನಲ್ಲಿ ಮೊರೆಹೊಕ್ಕಳು. ಶಿವನು ತನ್ನ ಕೊರಳಿನ ಶಂಕರಾಭರಣವನ್ನು ತೆಗೆದು ಭೂಲೋಕಕ್ಕೆ ಎಸೆದನು. ಭೂಮಿಯ ಕಡೆ ತಲೆಕೆಳಗಾಗಿ ಬಂದ ನಾಗಸರ್ಪವು ಮಹೇಂದ್ರ ಪರ್ವತದಲ್ಲಿ ನೆಟ್ಟು ಬಿದಿರಾಗಿ ಬೆಳೆಯಿತು. ಶಿವನ ಆಜ್ಞೆಯಂತೆ ಗಣಪತಿಯು ಗಣ ಸಮೂಹದೊಂದಿಗೆ ಮಾನವ ರೂಪದಲ್ಲಿ ಭೂಲೋಕಕ್ಕೆ ಬಂದು, ಮಹೇಂದ್ರ ಪರ್ವತದಲ್ಲಿ ಬೆಳೆದಿದ್ದ ಬಿದಿರನ್ನು ಶಿವನು ಕೊಟ್ಟ ತ್ರಿಶೂಲ ಮತ್ತು ಗದೆಗಳನ್ನು ಕತ್ತಿ, ಕೊರಡು ಹಾಗೂ ಅಂಬುಗಳನ್ನಾಗಿ ಬಳಸಿ, ಬಿದಿರಿನಿಂದ ಹೆಣಿಗೆ ಮತ್ತು ಕಟ್ಟು ಹಾಕಿ ಮೂಲೆ ತಿರುವಿದ ಮೊರ ಹೆಣೆದು ಪಾರ್ವತಿಗೆ ಕೊಡುತ್ತಾರೆ. ಗಣಪತಿಯು ಗಣ ಸಮೂಹದೊಂದಿಗೆ ಬಿದಿರಿನ ಕಸುಬಾದ ಚಪಕಾರಕ ವೃತ್ತಿಯಲ್ಲಿಯೇ ಮುಂದುವರೆಯುತ್ತಾರೆ. ಮುಂದೆ ಈ ಗಣ ಸಮೂಹ, ಗಂಧರ್ವ ಕನ್ಯೆಯರನ್ನು ಮದುವೆಯಾಗಿ ಮಕ್ಕಳನ್ನು ಸಹ ಪಡೆಯುತ್ತಾರೆ. ಕೆಲವು ಸಂವತ್ಸರಗಳ ನಂತರ ಶಿವನು ತನ್ನ ಗಣ ಸಮೂಹಗಳನ್ನು ಹಿಂತಿರುಗಿಸಿ ಕೈಲಾಸಕ್ಕೆ ಕರೆಸಿಕೊಳ್ಳುತ್ತಾನೆ. ಈ ಗಣ ಸಮೂಹ ತಮ್ಮ ಸತಿಸುತರನ್ನು ಜೊತೆಯಲ್ಲಿ ಕೈಲಾಸಕ್ಕೆ ಕರೆದುಕೊಂಡು ಹೋಗದಾದರು. ನೀವುಗಳು ಇಲ್ಲಿಯೇ ಇದ್ದು ಈ ಚಪಕಾರಕ ವೃತ್ತಿಯನ್ನೇ ಕುಲಕಸುಬಾಗಿಸಿಕೊಂಡು ಜೀವನ ಸಾಗಿಸಿರಿ ಎಂದು ಗಣ ಸಮೂಹವು ತಮ್ಮ ಸತಿಸುತರಿಗೆ ಹೇಳಿದರು. ಶಿವನ ವಂಶಜರಾದ ನೀವು ಮಹೇಂದ್ರಾಚಲದ ಮಹೇಂದ್ರರು. ಭೂಮಿಯ ಮೇಲಿನ ಬಿದಿರು ನಿಮ್ಮ ಸ್ವತ್ತು. ನಿಮ್ಮ ಕುಶಲತೆಯಿಂದ ತಯಾರಿಸುವ ಬಿದಿರಿನ ವಸ್ತುಗಳು ಪೂಜಾರ್ಹವೂ ಮತ್ತು ಅನೇಕ ಮಂಗಳ ಕಾರ್ಯದಲ್ಲಿ ಬಳಸುವಂತಾಗಲಿ ಎಂದು ಹೇಳಿ ಸಮಸ್ತ ಗಣ ಸಮೂಹವು ಕೈಲಾಸಕ್ಕೆ ತೆರಳಿತು. ಈ ವಂಶಜರೇ ಮೇದರು ಎಂದು ಕರೆಯಲ್ಪಡುತ್ತಾರೆ.

ಪುರಾಣ ನಾಲ್ಕು : ಒಮ್ಮೆ ಶಿವ-ಪಾರ್ವತಿಯರು ನಂದಿ ಮೇಲೆ ಭೂಮಾರ್ಗವಾಗಿ ಹೊರಟಿದ್ದರು. ಆಗ ಭೂಲೋಕದಲ್ಲಿ ಭೀಕರ ಕ್ಷಾಮ ಬಂದಿತ್ತು. ಮೇದರಿಗೆ ಕಸುಬು ಮಾಡಲು ಬಿದಿರು ಸಿಗದಾಯಿತು. ಆಹಾರದ ಅಭಾವದಿಂದ ಎಳೆಬಿದಿರು ತಂದು ಬೇಯಿಸಿ ತಿನ್ನುತ್ತಿರುತ್ತಾರೆ. ನನ್ನ ಮಕ್ಕಳಾದ ಗೌರಿಗರಿಗೆ ಈ ಗತಿ ಬರಬಾರದಿತ್ತೇಂದು ಪಾರ್ವತಿಯು ದುಃಖಿಸುತ್ತಾಳೆ. ಇವರಿಗೆ ಏನಾದರೂ ದಾರಿ ತೋರಿಸಬೇಕೆಂದು ಶಿವನಲ್ಲಿ ಮೊರೆಯಿಡುತ್ತಾಳೆ. ಶಿವನು ಪಾರ್ವತಿಯೊಂದಿಗೆ ಮೇದರ ಮುಂದೆ ಪ್ರತ್ಯಕ್ಷನಾದ. ಮಕ್ಕಳೇ ನಿಮಗೆ ಏನು ಬೇಕು ಕೇಳಿ ನಿಮಗೊಂದು ವರಕೊಡುತ್ತೇನೆ ಎಂದನು. ಆಗ ಮೇದರು ದೇವಾ ನಮಗೆ ಕಸುಬು ಮಾಡಲು ಹಸಿ ಬಿದಿರು ಸಿಗದಾಗಿದೆ. ಹೊಟ್ಟೆಗೆ ಒಂದು ಗುಟುಕು ಗಂಜಿಗೂ ಗತಿ ಇಲ್ಲದಾಗಿದೆ. ಅದನ್ನು ಕರುಣಿಸಿದರೆ ಸಾಕು ಎಂದು ಬೇಡಿಕೊಂಡರು. ಆಗ ಶಿವನು ತಥಾಸ್ತು ಎಂದು ಹೇಳಿ ಶಿವ-ಪಾರ್ವತಿಯರು ಅದೃಶ್ಯರಾದರು. ಶಿವನು ಭೂಮಿಯ ಮೇಲೆ ಪ್ರತ್ಯಕ್ಷನಾದ ಪ್ರದೇಶವೇ ಈಗಿನ ಆಂಧ್ರಪ್ರದೇಶದ ಸೀಕಾಕುಲಂ ಜಿಲ್ಲೆಯ ಮಹೇಂದ್ರ ಪರ್ವತ. ಈಗಲೂ ಅಲ್ಲಿ ಹಳೆಯ ಬೆಟ್ಟದಲ್ಲಿ ಒಂದು ಪುರಾತನ ಶಿವಾಲಯವಿದೆ. ಈ ಮಹೇಂದ್ರ ಪರ್ವತದಿಂದ ನಾವು ಬಂದವರಾಗಿದ್ದರಿಂದ ನಮ್ಮನ್ನು ಮಹೇಂದ್ರರು, ಮಹೇದರು, ಮೇಂದರು, ಮೇದರು, ಮೇದ ಎಂದು ಉಚ್ಚಾರಣೆಯಲ್ಲಿ ಆದ ಬದಲಾವಣೆಯನ್ನು ಈ ಸಮುದಾಯದ ಹಿರಿಯರು ಮತ್ತು ಅನುಭವಿಗಳಾದ ಪ್ರೊ.ಬಿ.ಆರ್.ಸುರಪುರ ಅವರು ಹೇಳುವರು.

ಪುರಾಣ ಐದು : ಮೇದರು ತಾವು ದೈಹಿಕವಾಗಿ ಕಬ್ಬಿಣದಷ್ಟೇ ಗಟ್ಟಿಗರು ಎಂದು ಹೇಳುತ್ತಾರೆ. ನಮ್ಮ ದೈಹಿಕ ಗಟ್ಟಿತನಕ್ಕೆ ಕಾರಣವೆಂದರೆ ನಮ್ಮ ಪೂರ್ವಜರು ಕೈಲಾಸದ ಕಬ್ಬಿಣದ ಕಡಲೆಯಿಂದ ಹುಟ್ಟಿ ಬಂದವರು ಎಂದು ತಮ್ಮ ಹಿನ್ನೆಲೆಯನ್ನು ಕುರಿತಾಗಿ ಈ ಕಥೆಯನ್ನು ಹೇಳುತ್ತಾರೆ. ಒಮ್ಮೆ ಶಿವನು ತನ್ನ ಸನ್ನಿಧಿಯಲ್ಲಿ ಶಿವಗಣಗಳೊಂದಿಗೆ ಆನಂದಮಯನಾಗಿ ಕುಳಿತುಕೊಂಡಿರುತ್ತಾನೆ. ಶಿವನ ವಾಹನವಾದ ನಂದಿಯು ಕಡಲೆಯನ್ನು ತಿಂದು ಮೆಲಕು ಹಾಕುತ್ತಿದ್ದ, ಅದೇ ಸಮಯಕ್ಕೆ ಪಾರ್ವತಿಯು ತನಗೆ ಬಾಗಿನ ಕೊಡಲು ಮೊರ ಬೇಕಾಗಿದೆ ಎಂದು ಶಿವನಲ್ಲಿ ಬೇಡುತ್ತಾಳೆ. ತಕ್ಷಣವೇ ಶಿವನು ಚಪಕಾರಕ ವೃತ್ತಿಯಿಂದ ಮೊರವನ್ನು ತಯಾರಿಸಬಲ್ಲ ಒರ್ವ ಗಟ್ಟಿ ಪುರುಷನನ್ನು ಸೃಷ್ಟಿಸಲು ನಂದಿಗೆ ಹೇಳಿದನು. ನಂದಿಯು ಕಬ್ಬಿಣದ ಕಡಲೆಯಿಂದ ಮೆಲುಕು ಹಾಕಲು ನಂದಿಯ ಬಾಯಿಂದ ಕಬ್ಬಿಣದ ಕಡಲೆಯೊಂದು ಜಾರಿಬಿದ್ದು ಅದರಿಂದ ಕಬ್ಬಿಣದಷ್ಟೇ ಗಟ್ಟಿಗನಾದ ಒಬ್ಬ ವ್ಯಕ್ತಿಯು ಜನಿಸುತ್ತಾನೆ. ನಂದಿಯ ಬಾಯಿಂದ ಜನಿಸಿದ ಗಟ್ಟಿ ಮೈಕಟ್ಟು ಹೊಂದಿದ ಈ ಪುರುಷನಿಗೆ ಶಿವ ತನ್ನ ತ್ರಿಶೂಲ ಮತ್ತು ಗದೆಗಳನ್ನು ಕೊಟ್ಟು ನೀನು ಭೂಲೋಕಕ್ಕೆ ಹೋಗಿ ಬಿದಿರಿನಿಂದ ಪಾರ್ವತಿಗೆ ಬೇಕಾದ ಮೊರವನ್ನು ತಯಾರಿಸು ಎಂದು ಆಜ್ಞೆ ಮಾಡಿದನು.

ಶಿವನ ಅಪ್ಪಣೆಯಂತೆ ಮೇದರ ಮೂಲ ಪುರುಷ ಮಹೇಂದ್ರ ಪರ್ವತಕ್ಕೆ ಬಂದ. ತನ್ನ ಕುಶಲತೆಯಿಂದ ಬಿದಿರನ್ನು ಹದಗೊಳಿಸಿ ಸುಂದವಾದ ಮೊರವನ್ನು ತಯಾರಿಸಿದ. ಪಾರ್ವತಿಯು ಇದೇ ಮೊರವನ್ನು ದೇವತಾ ಮುತ್ತೈದೆಯರಿಗೆ ಬಾಗಿನ ಕೊಡಲು ಉಪಯೋಗಿಸಿದಳು. ಬಾಗಿನ ಮೊರವನ್ನು ಕಂಡ ದೇವತೆಗಳು ಹರ್ಷಿತರಾಗಿ ಮೊರವನ್ನು ತಯಾರಿಸಿದವರು ಯಾರು? ಎಂದು ಕೇಳುತ್ತಾರೆ. ಮೇದನ ಕುಶಲತೆಯನ್ನು ಮೆಚ್ಚಿ ದೇವತೆಗಳು ಮುತ್ತು, ರತ್ನಗಳನ್ನು ಕೊಟ್ಟರು. ಅವುಗಳ ಬೆಲೆಯನ್ನು ಅರಿಯದ ಈ ಮೇದನು ಅವುಗಳನ್ನು ಅಲ್ಲಿಯೇ ಬಿಟ್ಟು ಹೋಗುತ್ತಾನೆ. ಇದರಿಂದ ಕೋಪಗೊಂಡ ದೇವತೆಗಳು ಇವನ ವಂಶಜರಿಗೆ ತಮ್ಮ ಕಸುಬಿನ ಪ್ರತಿಫಲದಿಂದ ಸಿರಿಸಂಪತ್ತು ದೊರೆಯದಾಗಲಿ ಇವರಿಗೆ ಹಿಡಿಗೂಳು ಮಾತ್ರ ಗತಿಯಾಗಲಿ ಎಂದು ಶಪಿಸಿದರು. ಆದ್ದರಿಂದ ನಾವು ಸಿರಿವಂತರಾಗುವುದಿಲ್ಲ. ಆದರೆ ದುಡಿದು ತಿನ್ನಲು ಆರೋಗ್ಯಯುತವಾದ ಗಟ್ಟಿತನದ ಮೈಕಟ್ಟು ಹೊಂದಿರುವುದಾಗಿ ಹೆಮ್ಮೆಯಿಂದ ಹೇಳುವರು.

ಪುರಾಣ ಆರು : ಕುಲಕಸುಬಾದ ಬಿದಿರಿನ ಕೆಲಸವನ್ನು ಆಶ್ರಯಿಸಿದ ಮೇದರೂ ಎಂದೂ ಶ್ರೀಮಂತರಾಗುವುದಿಲ್ಲ. ಆದರೆ, ಇವರು ಕುಲಕಸುಬನ್ನು ನಂಬಿದರೆ ಊಟ ಮತ್ತು ಬಟ್ಟೆಗೆ ಕೊರತೆ ಆಗುವುದಿಲ್ಲ ಎಂದು ಇವರ ನಂಬಿಕೆ. ಈ ಕುರಿತಾಗಿ ಒಂದು ಕಥೆ ಹೀಗಿದೆ. ಬಾಗಿನ ಕೊಡಲು ಪಾರ್ವತಿಗೆ ಬೇಕಾದ ಬಿದಿರಿನ ಮೊರ ಹೆಣೆದು ಕೊಡಲು ಗಣ ಸಮೂಹ ಮಹೇಂದ್ರ ಪರ್ವತಕ್ಕೆ ಬರುತ್ತಾರೆ. ಬಂದ ಕೆಲಸ ಮುಗಿದ ನಂತರ ಇವರು ಬಿದಿರಿನ ಕೆಲಸವನ್ನೇ ಕಸುಬಾಗಿಸಿಕೊಂಡು ಭೂಮಿಯ ಮೇಲೆ ಸುಖವಾಗಿದ್ದರು.

ಇವರಲ್ಲಿ ಇನ್ನೂ ಕೆಲವರು ಮದ್ಯ, ಮಾಂಸ ಭಕ್ಷಿಸುತ್ತಾ ಅತಿ ಸುಖಿಗಳಾಗಿದ್ದರು. ಕೆಲವು ವರ್ಷಗಳ ನಂತರ ಇವರನ್ನು ನೋಡಿಕೊಂಡು ಹೋಗಲು ಶಿವನು ಮಾರುವೇಷದಲ್ಲಿ ಭೂಲೋಕಕ್ಕೆ ಬರುತ್ತಾನೆ. ಜಂಗಮ ವೇಷಧಾರಿಯಾದ ಶಿವನನ್ನು ಮೇದರು ಯಾರೂ ಗುರುತಿಸುವುದಿಲ್ಲ. ಸೋಜಿಗನಾದ ಶಿವನು, ನಾನು ನಿಮ್ಮ ಶಿವ ಬಂದಿದ್ದೇನೆ. ಕೈಲಾಸಕ್ಕೆ ಹೋಗೋಣ ನಡೆಯಿರಿ ಎಂದನು. ಅದರಲ್ಲಿ ಕೆಲವರು ಶಿವನ ಕರೆಗೆ ಓಗೊಟ್ಟು ಹೊರಟು ನಿಂತರು. ಇಲ್ಲಿಯೇ ನಾವು ಸುಖವಾಗಿದ್ದೇವೆ ಆದ್ದರಿಂದ ನಾವು ಕೈಲಾಸಕ್ಕೆ ಬರುವುದಿಲ್ಲ ಎಂದು ಕೆಲವರು ಹೇಳಿದರು. ಈ ಮಾತು ಕೇಳಿ ಶಿವನಿಗೆ ಕೋಪ ಬರುತ್ತದೆ. ನನ್ನಂತೆಯೇ ಸಾತ್ವಿಕರಾಗಿದ್ದು ನನ್ನ ಹಿಂದೆ ಕೈಲಾಸಕ್ಕೆ ಹೊರಟು ನಿಂತ ನೀವು ಮಾತ್ರ ನನ್ನ ಮಕ್ಕಳು. ಮದ್ಯ, ಮಾಂಸ ಕುಡಿದು ತಿಂದು ತಾಮಸಿಗರಾದ ಅವರು ಗೌರಿಯ ಮಕ್ಕಳು. ಅವರಿಗೆ ಈ ಭೂಮಿಯ ಮೇಲೆ ಕುಲಕಸುಬು ಒಂದೇ ಗತಿಯಾಗಲಿ, ಅವರಿಗೆ ಹಿಡಿಗೂಳು ದೊರೆಯುವಂತಾಗಲಿ ಎಂದು ಶಪಿಸಿದನು. ಆದ್ದರಿಂದ ಕುಲಕಸುಬನ್ನೇ ಆಶ್ರಯಿಸಿದ ಮೇದರು ಶ್ರೀಮಂತರಾಗುವುದಿಲ್ಲ ಎಂದು ಮೇದರು ನಂಬುತ್ತಾರೆ.

ವಕ್ತೃಗಳು: ಅ.ಗ.ಮಂಜಯ್ಯ ಆಲ್ದೂರು, ಶೆಟ್ಟಿಕೊಪ್ಪ ಮಹೇಶ, ನರಸಿಂಹರಾಜಪುರ, ರಾಜಮ್ಮ ಗುಡ್ಡಟ್ಟಿ, ಎಂ.ಚಂದ್ರಶೇಖರ್ ದಾವಣಗೆರೆ, ರಾಮಯ್ಯ ಬೆಂಗಳೂರು ಹಾಗೂ ಚಿಕ್ಕಮಗಳೂ, ಶಿವಮೊಗ್ಗ ಜಿಲ್ಲೆಯ ಮೇದರು ದಾವಣಗೆರೆ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳ ಮೇದರು ಈ ರೀತಿಯೇ ಸೃಷ್ಟಿ ಪುರಾಣಗಳನ್ನು ಹೇಳುತ್ತಾರೆ. ಇಂತಹ ಸೃಷ್ಠಿ ಪುರಾಣಗಳು ಮೇದರಲ್ಲಿ ಭಾವನಾತ್ಮಕ ತನ್ಮಯತೆಯನ್ನು ಮೂಡಿಸುತ್ತದೆ. ತನ್ನ ಕುಲಕಸುಬು, ಮೂಲ ಪುರುಷ ಕುಲಕಸುಬಿನ ಜೀವನ, ನಂಬಿರುವ ಆರಾಧ್ಯ ದೈವ, ಕಾಡು-ಬಿದಿರು-ಕುಲಸಲಕರಣೆಗಳು, ಸಂಬಂಧಗಳು ಇತ್ಯಾದಿಗಳನ್ನು ಅನನ್ಯಗೊಳಿಸುತ್ತದೆ.

೨.೧.೨ ಕುಲ-ಗೋತ್ರ-ಬೆಡಗು

ಬುಡಕಟ್ಟುಗಳಲ್ಲಿ ವಿವಾಹವು ಸಾಂಪ್ರದಾಯಿಕವಾಗಿರುವುದರ ಜೊತೆಗೆ ಬಹಳ ಕ್ರಮಬದ್ಧವಾಗಿಯೂ ಇದೆ. ವಿವಾಹದ ಬಗೆಗಿನ ವಿಧಿ-ವಿಧಾನಗಳನ್ನು ಮತ್ತು ನಿಯಮಗಳನ್ನು ವಿವಾಹದ ಎರಡೂ ಪಕ್ಷದವರೂ ಅನುಸರಿಸಲೇ ಬೇಕಾಗುವುದು. ಅಂತೆಯೇ ಜೀವನ ಸಂಗಾತಿಗಳನ್ನು ಆಯ್ಕೆಮಾಡುವಾಗಲೂ ರೂಢಿ-ಸಂಪ್ರದಾಯಗಳನ್ನು ಮಾನ್ಯ ಮಾಡುವುದು ಅಗತ್ಯವಾಗಿದೆ. ಕೆ.ಎಮ್.ಕಪಾಡಿಯಾರವರು ಹೇಳುವಂತೆ ವಿವಾಹದ ಸಂಗಾತಿಗಳ ಆಯ್ಕೆಗೆ ಸಂಬಂಧಿಸಿದಂತೆ ಆಯ್ಕೆಯ ಕ್ಷೇತ್ರ, ಆಯ್ಕೆಯ ಅರ್ಹವಾದ ಪಕ್ಷಗಳು ಮತ್ತು ಆಯ್ಕೆಯ ಆಧಾರ ಇವೆಲ್ಲವುಗಳೂ ನಿಯಮಗಳಿಗೆ ಒಳಪಟ್ಟಿವೆ. ಇವುಗಳಲ್ಲಿ ಮುಖ್ಯವಾದುವುಗಳೆಂದರೆ ಒಳಪಂಗಡ ವಿವಾಹ ಹಾಗೂ ಹೊರಪಂಗಡ ವಿವಾಹದ ನಿಯಮಗಳು. ಒಳಪಂಗಡ ವಿವಾಹ ಪ್ರಕಾರ ವಿವಾಹಾಸಕ್ತ ವ್ಯಕ್ತಿಯು ತನ್ನ ಜೀವನ ಸಂಗಾತಿಯನ್ನು ತನ್ನ ಸಮೂಹ ಅಥವಾ ಪಂಗಡದೊಳಗೆಯೇ ಆಯ್ಕೆ ಮಾಡಬೇಕಾಗುವುದು. ಇದು ಪಂಗಡದೊಳಗಡೆಯೇ ನಡೆಯುವ ವಿವಾಹ.

ಕರ್ನಾಟಕದ ಮೇದರಲ್ಲಿ ಈ ರೀತಿಯ ಒಳಪಂಗಡ (Endogamy) ವಿವಾಹವನ್ನು ಕಟ್ಟುನಿಟ್ಟಾಗಿ ಪಾಲಿಸುವರು. ಮೇದ, ಮೇದಾರಿ, ಬುರುಡ್, ಗೌರಿಗ, ಮೇದಾರ ಈ ಸಮಾನಾರ್ಥಕ ಪದಗಳ ನಡುವೆ ಸಮನ್ವಯತೆ ತರುವ ಕಾರಣಕ್ಕಾಗಿ ವಿವಾಹದ ಭೌಗೋಳಿಕ ವ್ಯಾಪ್ತಿಯನ್ನು ವಿಸ್ತರಿಸುವ ಸಲುವಾಗಿ ಮೇದರ ಒಳಗೆ ವಿವಾಹಗಳು ನಡೆಯಬೇಕೆಂಬ ಅಭಿಲಾಷೆ ಮುಕ್ತ ಮನಸ್ಸಿನ ಕೆಲವು ಮೇದರದ್ದಾಗಿದೆ. ಈ ಕಾರಣದಿಂದ ಅನೇಕ ವಿವಾಹಗಳೂ ಆಗಿವೆ. ಈ ನಿಟ್ಟಿನಲ್ಲಿ ಉಳಿದ ಮೇದರಲ್ಲಿ ಸಂಚಲನವುಂಟಾಗಿದೆ.

ಹಿಂದೂಗಳಲ್ಲಿ ಹೊರಪಂಗಡ ವಿವಾಹದ ನಿಯಮವು ಮೂರು ಬಗೆಯ ವಿವಾಹಗಳನ್ನು ನಿಷೇಧಿಸಿರುತ್ತದೆ. ಅವು ಸಗೋತ್ರ ವಿವಾಹ, ಸಪ್ರವರ ವಿವಾಹ ಮತ್ತು ಸಪಿಂಡ ವಿವಾಹ. ಒಂದೇ ಗೋತ್ರಕ್ಕೆ ಸಂಬಂಧಿಸಿದವರಲ್ಲಿ ವಿವಾಹವನ್ನು ನಿಷೇಧಿಸಲಾಗಿದೆ. 'ಗೋತ್ರ' ಎಂಬುದು ಕುಲ ಅಥವಾ ಕುಟುಂಬದ ಮೂಲವನ್ನು ತಿಳಿಸುವಂತಾಗಿದೆ. ಹಾಗೆಯೇ 'ಸಪ್ರವರ' ಎಂಬುದು

ಕುಟುಂಬ ಅಥವಾ ಗೋತ್ರಕ್ಕೆ ಸಂಬಂಧಿಸಿದ ಅಂಶವಾಗಿದೆ. ಪೂರ್ವಜರ ಅಥವಾ ಋಷಿ ಮೂಲದವರೇ ಸಪ್ರವರದವರು. ಪೂರ್ವಜರ ಸ್ಮರಣೆಯನ್ನು ಸೂಚಿಸುವುದೇ ಪ್ರವರ. ಒಂದೇ ಪ್ರವರವನ್ನು ಹೇಳುವವರು 'ಸಪ್ರವರ'ದವರಾಗುತ್ತಾರೆ. ಇವರಲ್ಲಿ ಪರಸ್ಪರ ವಿವಾಹವಾಗುವುದು ನಿಷೇಧವಿದೆ. ಆದರೆ ಡಾ.ಆಲ್ಟೇಕರ್ ಮತ್ತು ಡಾಂಗ ಅವರುಗಳ ಪ್ರಕಾರ ಬಹಳ ಪುರಾತನ ಕಾಲದಲ್ಲಿ ಸಗೋತ್ರ ಮತ್ತು ಸಪ್ರವರ ವಿವಾಹಗಳು ನಿಷೇಧಿತವಾಗಿರಲಿಲ್ಲ. ಆದರೆ ಧರ್ಮಸೂತ್ರಗಳ ಕಾಲದಿಂದ ಅವು ನಿಷೇಧಿಸಲ್ಪಟ್ಟವು. ಅದೇ ರೀತಿ ಹಿಂದೂಗಳಲ್ಲಿ ಒಂದೇ ಪಂಗಡಕ್ಕೆ ಸೇರಿದ ಸಪಿಂಡಿಗಳು ಪರಸ್ಪರ ವಿವಾಹವಾಗುವಂತಿಲ್ಲ. ಸಪಿಂಡ ಎಂಬುದು ಒಂದೇ ವಂಶಾವಳಿಯನ್ನು ಸೂಚಿಸುವುದು. *ಸ್ಮೃತಿಕಾರ ಬೃಹಸ್ಪತಿಯ ಪ್ರಕಾರ ತಾಯಿಯ ಕಡೆಯಿಂದ ೫ ತಲೆಮಾರುಗಳಿಗೆ ಸೇರಿದ ವ್ಯಕ್ತಿಗಳು ಒಂದೇ ವಂಶಾವಳಿಯನ್ನು ಹೊಂದಿರುವ 'ಸಪಿಂಡ' ಸಮೂಹವಾಗಿದ್ದು ಅವರುಗಳು ಪರಸ್ಪರ ವಿವಾಹವಾಗುವಂತಿಲ್ಲ*[೧]

ಪ್ರಾಚೀನ ಕಾಲದ ಬುಡಕಟ್ಟುಗಳು ಅರಣ್ಯಗಳಲ್ಲಿ ವಾಸವಿದ್ದು, ತಮ್ಮ ದೈನಂದಿನ ಬದುಕಿಗಾಗಿ ಆಶ್ರಯಿಸಿಕೊಂಡಿದ್ದ ಕಾಡಿನ ಚರಾಚರ ವಸ್ತುಗಳೇ ಅವರ ಬದುಕಿನ ಅವಿಭಾಜ್ಯ ಅಂಗವಾಗಿದ್ದವು. ಅವು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಬುಡಕಟ್ಟು ವಾಸಿಗರನ್ನು ಪ್ರಭಾವಿಸಿದ್ದವು. ಉದಾಹರಣೆಗೆ ಗುಡ್ಡ–ಬೆಟ್ಟ, ನದಿ–ತೊರೆ, ಪ್ರಾಣಿ–ಪಕ್ಷಿ, ಬಂಡೆ–ಕಲ್ಲು, ಗಿಡ–ಮರ–ಬಳ್ಳಿ ಇವುಗಳನ್ನೆ ತಮ್ಮ ಗುಂಪಿನ ಚಿಹ್ನೆಯಾಗಿಯೂ ಗೌರವದ ಸಂಕೇತಗಳಾದವು. ಕಾಲಕ್ರಮೇಣ ಇವೇ ಕುಲದ ಚಿಹ್ನೆಗಳಾಗಿರಬೇಕು. ಈ ಚಿಹ್ನೆಗಳನ್ನೇ ಆರಾಧಿಸುವ ಪದ್ಧತಿ ಬೆಳೆದು ಬಂದಿರಬಹುದು. ಇದು ದ್ರಾವಿಡ ಸಂಸ್ಕೃತಿಯಾಗಿದೆ. ಕುಲದ ಚಿಹ್ನೆಯನ್ನು ಇಂಗ್ಲೀಷ್‌ನಲ್ಲಿ `Totem' ಎಂದು ಕರೆಯುತ್ತಾರೆ.

ಸಮಾಜಶಾಸ್ತ್ರೀಯ ಶಬ್ದಾರ್ಥಮಂಜರಿಯಲ್ಲಿ `Totemism' ನ್ನು 'ಕುಲದೇವತಾವಾದ' ಎಂದು ಅರ್ಥೈಸಿದೆ. ಟೋಟಮಿಸಂ ಎಂಬುದನ್ನು ಕೆಲವರು ಕುಲದೇವತಾರಾಧನೆ ಎಂದು ತಪ್ಪಾಗಿ ಭಾವಿಸಿಕೊಂಡಿದ್ದಾರೆ. ಆಯಾ ಕುಲಸ್ಥರು ನಂಬಿಕೊಂಡು ಬಂದ ಯಾವುದೇ ಪ್ರಾಣಿಯೋ, ಸಸ್ಯವೋ ಟೋಟಮಿಸಂ ಆಗುತ್ತದೆಯೋ ಹೊರತು, ಅವರ ಕುಲದೇವತೆಯಾದ ಒಂದು ಸಾಂಪ್ರದಾಯಿಕ ನಿರ್ದಿಷ್ಟ ದೇವರ ಪೂಜೆ, ಆರಾಧನೆ ಆಗುವುದಿಲ್ಲ. ಕುಲ ಚಿಹ್ನೆ ಆರಾಧನೆ ಸರ್ವಸಾಮಾನ್ಯವಾಗಿ ಒಂದು ಬಾಂಧವ್ಯಾಧಾರಿತ ಪದ್ಧತಿ ಎಂಬ ವಿವರಣೆಯು ಪ್ರಾಕೃತಿಕ ಸಂಪನ್ಮೂಲಗಳನ್ನು ತಿಳಿಸುತ್ತದೆ. ಕುಲದ ಗೌರವವನ್ನು ಈ ಚಿಹ್ನೆಗಳು ಕಾಪಾಡುವುದರಿಂದ ಈ ಚಿಹ್ನೆಗಳಿಗೆ ನಿಷ್ಠೆ ತೋರುತ್ತಾರೆ. ಯಾವುದೇ ಕಾರಣಕ್ಕೂ ಈ ಚಿಹ್ನೆಗಳಿಗೆ ಘಾಸಿಯಾಗದಂತೆ ನಿಗಾವಹಿಸುತ್ತಾರೆ. ವಿಶೇಷ ಗೌರವ ಸೂಚಿಸುತ್ತಾರೆ. ಮೇದರಲ್ಲಿ ಕುಲದ ಚಿಹ್ನೆಯಾಗಿ ಕತ್ತಿ, ಕೊರಡು, ಅಂಬು, ಬಿದಿರು, ಬಿದಿರಿನ ಉತ್ಪನ್ನಗಳನ್ನು ತಮ್ಮ ಕುಲದ ಚಿಹ್ನೆಯೆಂದು ಭಾವಿಸುತ್ತಾರೆ.

“ತೆಲುಗು ಮೇದರು ತಮ್ಮ ಕುಲ ಚಿಹ್ನೆಗಳನ್ನು ಹೀಗೆ ಹೇಳುತ್ತಾರೆ ಪರ್ವತ, ಪುತ್ತ (ಹುತ್ತ), ಕೊಂಡ (ಬೆಟ್ಟ), ಜವಾದಿ (ಪುನುಗುಬೆಕ್ಕು), ನಂದಿಕಟ್ಟು (ಎತ್ತಿನಮುಖ), ಕಂದಿಕಟ್ಟು (ಬೇಳೆಸಾರು), ಕೊಟ್ಟಕುಂಡ (ಹೊಸಮಡಿಕೆ), ಪೊರಟಿ (ಹಕ್ಕಿ), ನವ್ವುಳ್ (ಎಳ್ಳು), ಸೆನಗಪಾತ್ರ (ಕಡ್ಲೆಬೇಳೆ), ಸಂದ (ಚಂದ), ನೀಲ (ನೀಲಹರಳ), ಸಿರಿಗಿರಿ (ಬೆಟ್ಟ), ಪತ್ತು (ಗಂಡು), ನಾಗಿನ್ನದು (ಹಾವು), ಪಿಲೀಕ್ಯಾಟ್, ಕೋಬ”[೨] ಎಂಬ ಬೆಡಗುಗಳಿವೆ. ಕರ್ನಾಟಕದಾದ್ಯಂತ ಹರಡಿರುವ ಕನ್ನಡ ಮೇದರಲ್ಲಿ ನಾಯಕರು, ಗೌಡ್ರು, ಮಾದೇಶರು, ಹಾಲ್ದಾರು, ಮಳೆಗಲ್ಲರು, ಮುಸಿಕಿನ ಬೀಡು, ಹುಲಿ ಮತ್ತು ಸೂರ್ಯ–ಚಂದ್ರದವರು ಹೀಗೆ ತಮ್ಮ ಕುಲ–ಬೆಡಗು–ಗೋತ್ರಗಳನ್ನು ಹೊಂದಿದ್ದಾರೆ. ಆಯಾಗೋತ್ರದವರು ಮಾತ್ರ ಅಣ್ಣ–ತಮ್ಮಂದಿರಾಗಿ ಉಳಿದೆಲ್ಲ ಕುಲ–ಬೆಡಗಿನೊಂದಿಗೆ ವಿವಾಹ ಸಂಬಂಧ ಹೊಂದಬಹುದು. ಕರ್ನಾಟಕದಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಈ ಬೆಡಗಿನವರು ಕಂಡುಬರುತ್ತಾರೆ.

ಹಾಗೆಯೇ ತೆಲುಗು ಭಾಷಿಕ ಮೇದರುಗಳಲ್ಲಿ ಈ ಕೆಳಗಿನ ಗೋತ್ರಗಳಿವೆ. ‘ಎಕ್ಕಮವಾಲು, ಕಾನಿಕಿರಮವಾಲು, ಕಂಕೆವಾಲು, ಹೇರಕಂಕೆವಾಲು, ನೆಲಕಂಕೆವಾಲು, ದಮನೆವಾಲು, ಮೇದರವಾಲು, ಕೋಲೆವಾಲು, ಪೋಲಿ ಕುಂದೀದರವಾಲು, ದೇಲಕೋಸಿ, ನಲಕೋಸಿ, ಬಾಗಿಲುವಾಲು, ಸೀಲೆವಾಲು, ಪೊಂಬೀಡಿವಾಲು, ಪೊದಲವಾಲು, ಉರೆವಾಲು, ಕಂಚಂವಾಲು, ಪುಂಟಪರಿದಿವಾಲು, ತಂಬೇವಾಲು, ತಂಬಟವಾಲು, ಕಣಿಗರವಾಲು, ತಮನವಾಲು, ಕಾಂಗೆವಾಲು ಮುಂತಾದ ಗೋತ್ರಗಳಿವೆ.

ಚಿಕ್ಕಮಗಳೂರು ಜಿಲ್ಲಾ ಕ್ಷೇತ್ರಾಧ್ಯಯನದಲ್ಲಿ ಕಂಡುಬಂದ ಕುಲ–ಗೋತ್ರ–ಬೆಡಗುಗಳ ವಿವರ ಈ ಕೆಳಕಂಡಂತಿದೆ. ಗೋತ್ರ–ಬೆಡಗುಗಳನ್ನು ಹೆಚ್ಚಾಗಿ ಬಳಸುವುದಿಲ್ಲ. ಬದಲಿಗೆ ಕುಲ, ಕುಲಾಚಾರದ ಬಗ್ಗೆ ಮಾತ್ರ ವಿಶೇಷ ಆಸಕ್ತಿವಹಿಸುತ್ತಾರೆ. ತರೀಕೆರೆ ಮತ್ತು ನರಸಿಂಹರಾಜಪುರ ತಾಲೂಕಿನ ಕನ್ನಡ ಮೇದರಲ್ಲಿ ಕಸ್ಲೆ, ಕುರುಬಗುಲ, ದವಳೆ, ಕಕ್ಕೆಕುಲ (ಕಕ್‌ಕುಲ, ಕಚ್‌ಕುಲ, ಕತ್‌ಗುಲ), ಉಡುಗುಲ, ಸತ್ತೆಕುಲ, ಹಾಲುಗುಲ, ಚಾಯಿನ್ನರು ಎಂಬ ಪ್ರಮುಖ ಕುಲಗಳಿವೆ. ಸತ್ತೆಕುಲ ಹಾಗೂ ಚಾಯಿನ್ನರು ಅಣ್ಣ–ತಮ್ಮಂದಿರಾಗುವುದರಿಂದ ಇವರಲ್ಲಿ ಪರಸ್ಪರ ವಿವಾಹಗಳಿಲ್ಲ. ಹಿಂದೆ ಕುರುಬಗುಲ ಹಾಗೂ ಹಾಲುಗುಲದವರು ಅಣ್ಣ–ತಮ್ಮಂದಿರಾಗಿದ್ದರು. ಆದಾಗ್ಯೂ ಕಟ್ಟೆ ಸಂಸ್ಕೃತಿಯ ಈ ಮೇದರು ಪಟ್ಟಣಕಟ್ಟೆ, ನಗರಕಟ್ಟೆ, ಚಿಕ್ಕನಾಯನಹಳ್ಳಿ ಕಟ್ಟೆ, ಗರುಡನಗಿರಿ ಕಟ್ಟೆ, ಅಮಾನಿಕಟ್ಟೆ, ದುರ್ವಿಗೆರೆ ಇತ್ಯಾದಿಗಳನ್ನು ಹೆಸರಿಸಿ, ಅಲ್ಲಿನ ಕುಲಬಾಂದವರಿಂದ ಕುಲ ವಿವರಣೆ ಪಡೆದು ಈ ಹಿಂದಿನ ವಿವಾಹ ಒಪ್ಪಿಗೆಗಳು, ಸಾಧಕ–ಬಾಧಕಗಳು ವಿಚಾರಿಸಿಕೊಂಡು ವಿವಾಹವನ್ನೇರ್ಪಡಿಸುತ್ತಾರೆ. ಕಟ್ಟೆಯ ಯಜಮಾನ, ಬುದ್ಧಿವಂತ, ಗೌಡ ಎಂಬ ಸ್ಥಾನಗಳು ‘ಕುಲ’ದಿಂದಲೇ ಗುರ್ತಿಸಲ್ಪಡುತ್ತದೆ. ಯಾವುದೇ ವಿವಾಹ, ಸಂಸ್ಕಾರ, ವ್ಯಾಜ್ಯ ತೀರ್ಮಾನಗಳಿಗೆ ಈ ಕುಲದ ಗಣ್ಯರೇ ಬೇಕು.

ತರೀಕೆರೆ, ಮೂಡಿಗೆರೆ, ನರಸಿಂಹರಾಜಪುರ ಹಾಗೂ ಚಿಕ್ಕಮಗಳೂರು ತಾಲೂಕಿನಲ್ಲಿರುವ ತೆಲುಗು ಭಾಷಿಕ ಮೇದರೆಲ್ಲರೂ ಒಂದೇ ಬುಡಕಟ್ಟಿಗೆ ಸಂಬಂಧಿಸಿದವರಾಗಿದ್ದರು. ಇವರ ಕುಲ-ಗೋತ್ರ-ಬೆಡಗುಗಳು ಈ ರೀತಿ ಇವೆ. ತಮಿಳ್ಳೈನೆವಾಲು, ಕಣಿಗೆಳ್ಳೈನೆವಾಲು, ಮಿಥಗವಾಲು, ಕಂಚಮೋಲು, ಎಕ್ಕಮೋಲು, ಬೋರುನವಾಲು, ಕಾಂಗೇವಾಲು, ಪಾಂತಕೊಟ್ಟವಾಲು, ಪೋತರವಾಲು, ಹೇರಕಂಕೇವಾಲು, ದಮನೆವಾಲು, ಉರೇವಾಲು, ಕಂಚಂವಾಲು, ವಾಸಂವಾಲು ಹೀಗೆ ತಮ್ಮನ್ನು ಈ ಬೆಡಗುಗಳಲ್ಲಿ ಗುರ್ತಿಸಿಕೊಳ್ಳುವ ಮೇದರು ಕರ್ನಾಟಕದಲ್ಲಿ ನೆಲೆಸಿರುವ ತೆಲುಗು ಮೇದರೊಂದಿಗೆ ವೈವಾಹಿಕ ಸಂಬಂಧ ಹೊಂದುವರು. ಚಿಕ್ಕಮಗಳೂರು ತೆಲಗು ಮೇದರು ಹಾಗೂ ಮೂಡಿಗೆರೆಯ ಕನ್ನಡ ಮೇದರ ನಡುವೆ ಇತ್ತೀಚೆಗೆ ವೈವಾಹಿಕ ಸಂಬಂಧ ಹೊಂದಿರುವುದು ಅಧ್ಯಯನದಿಂದ ತಿಳಿದುಬಂದಿದೆ. ತಮಿಳ್ಳೈನೆವಾಲು ಬೆಡಗು ಚಿಕ್ಕಮಗಳೂರಿನಲ್ಲಿ ಗೌಡ ಅಥವ ಪಟೇಲ ಸ್ಥಾನವನ್ನು ಪಡೆದಿದ್ದಾರೆ. ಇವರಲ್ಲಿ ಎಕ್ಕಮೋಲು, ತಮಿಳ್ಳೈನೆವಾಲು ಹಾಗೂ ಬೋರುನವಾಲು ಒಂದೇ ಗೋತ್ರದವರಾಗಿದ್ದು, ಅಣ್ಣ-ತಮ್ಮಂದಿರಾಗುವುದರಿಂದ ಇವರಲ್ಲಿ ವೈವಾಹಿಕ ಸಂಬಂಧ ನಿಷಿದ್ಧವಾಗಿದೆ.

ಮೂಡಿಗೆರೆಯ ಕನ್ನಡ ಮೇದರು, ಹಾಲುಗುಲ, ಹಾವ್‌ಗುಲ, ಕಕ್ಕುಲ, ಕಚ್‌ಗುಲ, ಬೆಣ್ಣೆಕುಲ, ಬೆಳ್ಳಿಕುಲ, ನಾಗರಕುಲ, ಉಡುಗುಲ, ಮುತ್ತುಗಕುಲ ಎಂಬ ಬೆಡಗುಗಳನ್ನು ಹೊಂದಿವೆ. ಆಯಾ ಬೆಡಗಿನವರು ಅಣ್ಣ-ತಮ್ಮಂದಿರಾಗಿದ್ದು ಬೇರೆ ಬೆಡಗಿನವರ ಜೊತೆ ವೈವಾಹಿಕ ಸಂಬಂಧ ಹೊಂದಲು ಅಭ್ಯಂತರವಿಲ್ಲವೆಂದು ಮೇದ ಮುಖಂಡರಾದ ಅ. ಗ. ಮಂಜಯ್ಯನವರು ತಿಳಿಸುತ್ತಾರೆ.

ತರೀಕೆರೆಯ ಲಕ್ಕವಳ್ಳಿ ಸಮೀಪ ಉಪ್ಪಾರ ಬೀರನಹಳ್ಳಿಯಲ್ಲಿ ವಾಸವಿರುವ ಳಳ ಕುಟುಂಬ ತಮಿಳು ಮೇದರು ಯಾವುದೇ ಬೆಡಗುಗಳಿಲ್ಲದೆ ತಮಿಳನಾಡಿನಲ್ಲಿ ಕೊರವರ್ ಎಂದು ಕರೆಯಲ್ಪಡುತ್ತಾರೆ. ಅವರೊಂದಿಗೆ ಇವರ ವೈವಾಹಿಕ ಸಂಬಂಧವನ್ನು ಹೊಂದುತ್ತಾರೆ. ಒಂದೇ ನೆಲೆಯಲ್ಲಿ ಇವರ ವಾಸಸ್ಥಾನಗಳಿದ್ದು, ನವಗ್ರಾಮದವರಾಗಿದ್ದು, ಇವರೆಲ್ಲರೂ ೭ ದಶಕಗಳ ಹಿಂದೆ 'ಲಕ್ಕವಳ್ಳಿ ಡ್ಯಾಂ' ನಿರ್ಮಾಣ ಕಾರ್ಯಕ್ಕೆ ಬಂದವರಾಗಿದ್ದಾರೆ.

ನರಸಿಂಹರಾಜಪುರ ತಾಲೂಕು ಬಾಳೆಹೊನ್ನೂರಿನಲ್ಲಿ ೩ ಮಳಯಾಳಿ ಮೇದರು ನೆಲೆಗೊಂಡಿದ್ದು, ಇವರಲ್ಲೂ ಕುಲ-ಬಳಿ-ಬೆಡಗುಗಳ ವಿಂಗಡಣೆ ಕಾಣುವುದಿಲ್ಲ. ಕೇರಳದಲ್ಲಿ 'ಕವರರ್' ಎಂದು ಗುರ್ತಿಸಲ್ಪಟ್ಟು ಕೇರಳದ ಕವರರ್ ಜೊತೆಗೆ ವೈವಾಹಿಕ ಸಂಬಂಧವನ್ನು ಹೊಂದುವರು. ಕಾಫಿ ಎಸ್ಟೇಟಿನ ಕೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ.

೨.೧.೩ ಕುಟುಂಬ ಪದ್ಧತಿ

ಕುಟುಂಬವು ಅತ್ಯಂತ ಸರಳವಾದ ಹಾಗೂ ಸೂಕ್ಷ್ಮವಾದ ಸಮಾಜವಿದ್ದಂತೆ. ಅದು ಮಾನವನ ಸಾಮಾಜಿಕ ಜೀವನದ ತಳಹದಿಯಾಗಿದೆ. ಕುಟುಂಬವೇ ಮಗುವಿನ ಪ್ರಪ್ರಥಮ

ಸಾಮಾಜಿಕ ಪರಿಸರ ಹಾಗೂ ಸಮೂಹ. ನವಜಾತ ಶಿಶುವಿಗೆ ಸಂಸ್ಕಾರ ನೀಡುವುದು, ಶಿಕ್ಷಣ ಕೊಡುವುದು ಅವನನ್ನು ಸಮಾಜದ ಜವಾಬ್ದಾರಿಯುತ ಪ್ರಜೆಯನ್ನಾಗಿ ಮಾಡುವುದು ಕುಟುಂಬ. ನಮ್ಮ ಸಾಮಾಜಿಕ ಜೀವನಕ್ಕೆ ಒಂದು ನೆಲೆಯನ್ನು ಮತ್ತು ಸ್ಥಿರತೆಯನ್ನು ಕೊಡುವುದು ಕುಟುಂಬ. ಉಳಿದೆಲ್ಲಾ ಸಂಸ್ಥೆಗಳಿಗಿಂತಲೂ ಅದು ಹೆಚ್ಚು ಶಾಶ್ವತವೂ, ಪ್ರಭಾವಿಯೂ ಆಗಿದೆ. ಮಾನವನ ಲೈಂಗಿಕ ತೃಪ್ತಿ, ಸಂತಾನಾಭಿಲಾಷೆ, ನವಜಾತ ಶಿಶುವಿನ ಬಹುದೀರ್ಘವಾದ ಅಸಹಾಯಕ ಸ್ಥಿತಿ, ಸ್ತ್ರೀ–ಪುರುಷರ ಪರಸ್ಪರ ಅವಲಂಬನೆ ಹಾಗೂ ಮಾನವನ ಅಸ್ತಿತ್ವಕ್ಕೆ ತೀರಾ ಅಗತ್ಯವಾದ ಆರ್ಥಿಕ ಬೇಡಿಕೆಗಳ ಪೂರೈಕೆ ಇವು ಕುಟುಂಬದ ಸಾರ್ವತ್ರಿಕರಣಕ್ಕೆ ಕಾರಣವಾಗಿದೆ.

"ಭಾರತ ದೇಶವನ್ನು ಅವಿಭಕ್ತ ಕುಟುಂಬಗಳ ದೇಶವೆಂದು ವರ್ಣಿಸಲಾಗುತ್ತಿತ್ತು. ಇತ್ತೀಚೆಗೆ ಮೂಲ ಕುಟುಂಬ ಮತ್ತು ವಿಸ್ತೃತ ಕುಟುಂಬಗಳ ನಡುವೆ ಭೇದವನ್ನು ಗುರ್ತಿಸಲಾಗುತ್ತದೆ. ಮೂಲ ಕುಟುಂಬವೆಂದರೆ ವಿವಾಹಿತ ದಂಪತಿ ಮತ್ತು ಮಕ್ಕಳು. ವಿಸ್ತೃತ ಕುಟುಂಬವೆನ್ನುವುದು ಅದೇ ಗೋತ್ರದ ಎರಡು, ಮೂರು ಮತ್ತು ಇನ್ನೂ ಹೆಚ್ಚು ತಲೆಮಾರಿನವರು ಸೇರುವ ದೊಡ್ಡ ತಂಡವಾಗಿದೆ. ಇದು ಅವಿಭಕ್ತ ಕುಟುಂಬವೆಂದರೂ ಸರಿಯೇ"[೩]

ಪ್ರಸ್ತುತ ಸಂಶೋಧನೆಯ ದೃಷ್ಟಿಯಿಂದ ಮೇದ ಬುಡಕಟ್ಟಿನವರ ಸಾಮಾಜಿಕ ಸ್ಥಿತಿಗತಿಯನ್ನು ತಿಳಿಯಲು ಅವರು ಹೊಂದಿರುವ ಕುಟುಂಬದ ವಿಧವನ್ನು ತಿಳಿಯುವುದು ಮುಖ್ಯವಾಗಿದೆ. ಸಂಶೋಧನಾ ಕ್ಷೇತ್ರದಲ್ಲಿ ದತ್ತಾಂಶಗಳ ಆಧಾರದ ಮೇಲೆ ಈ ಕೆಳಕಂಡ ಕೋಷ್ಠಕವನ್ನು ತಯಾರಿಸಿ ವಿವರಿಸಲಾಗಿದೆ.

ಕ್ರ.ಸಂ	ಕುಟುಂಬ ಪದ್ಧತಿ	ಆವೃತ್ತಿ	ಶೇಕಡಾವಾರು
೧	ಅವಿಭಕ್ತ ಕುಟುಂಬ	೨೫	೬.೭೦%
೨	ವಿಭಕ್ತ ಕುಟುಂಬ	೩೪೮	೯೩.೨೯%
೩	ಅಣು ಕುಟುಂಬ	೦೦	೦.೦೦%
ಒಟ್ಟು		೩೭೩	೧೦೦%

ಮೇಲಿನ ಕೋಷ್ಠಕದ ಅಂಕಿ ಅಂಶಗಳನ್ನು ಗಮನಿಸಿದರೆ ಶೇ೯೩.೨೯ರಷ್ಟು ಕುಟುಂಬಗಳು ವಿಭಕ್ತ ಕುಟುಂಬಗಳಾಗಿದ್ದು, ಶೇ.೬.೭೦ರಷ್ಟು ಮಾತ್ರ ಅವಿಭಕ್ತ ಕುಟುಂಬಗಳಿವೆ. ಅಣು ಕುಟುಂಬಗಳು ಇಲ್ಲವೇ ಇಲ್ಲ. ಆಧುನಿಕ ಬದಲಾದ ವ್ಯವಸ್ಥೆಯಲ್ಲಿ ವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚಾಗಿರುವುದಕ್ಕೆ ಈ ಕೋಷ್ಠಕ ಸಾಕ್ಷಿ. ಮೇದ ಸಮುದಾಯದವರಲ್ಲಿ ವಿಭಕ್ತ ಕುಟುಂಬ ಪದ್ಧತಿಯಿರುವುದು ತಿಳಿದುಬರುತ್ತದೆ. ಹಾಗೆಯೇ ಪಿತೃಪ್ರಧಾನ ಕುಟುಂಬ ವ್ಯವಸ್ಥೆ ಸರ್ವೇಸಾಮಾನ್ಯವಾಗಿದೆ.

೨.೨.೧ ಮೇದ ಮಹಿಳೆಯರ ಸ್ಥಾನಮಾನಗಳು

"ಜೈವಿಕ ಆಧಾರದ ಮೇಲೆ, ಲಿಂಗಭೇದದ ನೆಲೆಯಲ್ಲಿ ಮಾನವ ಜನಾಂಗವನ್ನು 'ಸ್ತ್ರೀಯರು' ಮತ್ತು 'ಪುರುಷರು' ಎಂದು ವರ್ಗೀಕರಿಸಲಾಗಿದೆ. ಸ್ತ್ರೀ-ಪುರುಷ ಪಾತ್ರಗಳು, ಕರ್ತವ್ಯಗಳು, ಹೊಣೆಗಾರಿಕೆಗಳು, ಅಂತಸ್ತುಗಳು, ನಿಯಮಗಳು ಯಾವುದೇ ಸಮಾಜದಲ್ಲಾದರೂ ಸಮಾನವಾಗಿರಲು ಸಾಧ್ಯವಾಗಿಲ್ಲ. 'ಸ್ತ್ರೀ ಶೋಷಣೆ' ಇನ್ನೂ ಜೀವಂತವಿದೆ. ಪುರುಷರ ಪ್ರಾಬಲ್ಯತೆ ಮತ್ತು ಸ್ತ್ರೀಯರ ವರ್ಗ ಒಂದು ದುರ್ಬಲ ವರ್ಗ ಮತ್ತು ಈ ದುರ್ಬಲತೆ ಪುರುಷರ ಸೃಷ್ಟಿ"[೪] 'ಎಲ್ಲಿ ಸ್ತ್ರೀಯರನ್ನು ಪೂಜ್ಯತೆಯಿಂದ ಕಾಣಲಾಗುತ್ತಿದಿಯೋ ಅಲ್ಲಿ ದೇವತೆಗಳೂ ಸುಪ್ರಸನ್ನರಾಗಿರುತ್ತಾರೆ' ಎಂದು ಹೇಳಿದ ಮನು "ಸ್ತ್ರೀಯರು ಸ್ವಾತಂತ್ರ್ಯಕ್ಕೆ ಅರ್ಹರಲ್ಲ" ಎಂಬ ಹೇಳಿಕೆ ವಿಚಿತ್ರವಾಗಿದೆ. ಸ್ತ್ರೀಯರು ಹೊಂದಿರುವ ಸ್ಥಾನ-ಮಾನವೆಂಬುದು ಯಾವುದೇ ಸಮಾಜದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಮತ್ತು ನಾಗರೀಕತೆಯ ಮುನ್ನಡೆಯನ್ನು ಅಳೆಯುವ ಮಾನದಂಡವಿದ್ದಂತೆ ಎನ್ನಬಹುದು.

ಮೇದ ಬುಡಕಟ್ಟು ಪುರುಷ ಪ್ರಧಾನ ವ್ಯವಸ್ಥೆಯಿಂದ ಕೂಡಿದ್ದರೂ, ಪುರುಷ ದಬ್ಬಾಳಿಕೆಯ ಮನೋಭಾವ ಮೇದರಲ್ಲಿ ಇಲ್ಲವೆಂದೇ ಹೇಳಬಹುದು. ಸಾತ್ವಿಕ ನೆಲೆಗಟ್ಟಿನ, ಬಹಳ ಕಷ್ಟ ಜೀವಿಗಳಾದ ಮೇದರಲ್ಲಿ ಪುರುಷರು-ಸ್ತ್ರೀಯರು ಒಟ್ಟಿಗೆ ದುಡಿಯುವವರಾಗಿದ್ದಾರೆ. ಕಷ್ಟ-ಕಾರ್ಪಣ್ಯಗಳನ್ನು ಒಟ್ಟಿಗೇ ಎದುರಿಸುವವರಾಗಿದ್ದು, ಬದುಕನ್ನು ಹಂಚಿಕೊಳ್ಳುವ, ಕೊಟ್ಟು-ತೆಗೆದುಕೊಳ್ಳುವ ಪ್ರವೃತ್ತಿ ಮೇದರಲ್ಲಿ ಹೆಚ್ಚೆಂದು ತಿಳಿದುಬರುತ್ತದೆ. ಕೌಟುಂಬಿಕ, ಆರ್ಥಿಕ ನಿರ್ಣಯಗಳನ್ನು ತೆಗೆದುಕೊಳ್ಳುವಾಗ ಮಹಿಳೆಯರ ಅಭಿಪ್ರಾಯಗಳನ್ನು ಕೇಳಲಾಗುತ್ತದೆ ಎಂದು ವಕ್ತೃಗಳು ಅಭಿಪ್ರಾಯಿಸಿದ್ದಾರೆ. ಮಹಿಳೆಯರಿಗೆ ಉತ್ತಮ ಸ್ಥಾನಮಾನವು ಮೇದ ಬುಡಕಟ್ಟಿನಲ್ಲಿ ಲಭ್ಯವಾಗಿದೆ. ಮಹಿಳಾ ಸಾಕ್ಷರತೆಯ ಪ್ರಮಾಣವೂ ಹೆಚ್ಚುತ್ತಿರುವುದಕ್ಕೆ ಸಾಕ್ಷಿಯಾಗಿದೆ. ವಿವಾಹದಂತಹ ಪ್ರಮುಖ ನಿರ್ಧಾರ ತೆಗೆದುಕೊಳ್ಳುವಾಗ ಮಹಿಳೆಯರ ಅಭಿಪ್ರಾಯ ತೆಗೆದುಕೊಳ್ಳಲಾಗುತ್ತದೆ. ಪುರುಷರಂತೆ ಸ್ತ್ರೀ ಶಿಕ್ಷಣಕ್ಕೆ ಮೇದ ಕುಟುಂಬಗಳು ಒತ್ತು ನೀಡುತ್ತಿದೆ. ಮಹಿಳೆಯರ ಅಂತಸ್ತು-ಸ್ಥಾನಮಾನ ವೃದ್ಧಿಯಾಗುತ್ತಿರುವುದು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೨.೧.೪ ವೈವಾಹಿಕ ಜೀವನ

ವಿವಾಹವೆಂಬುದು ಕೇವಲ ಸ್ತ್ರೀ-ಪುರುಷರ ಸಮಾಗಮವಲ್ಲ. ಲೈಂಗಿಕ ಜೀವನಕ್ಕಾಗಿ ಅವರಿಗೆ ನೀಡಿದ ಪರವಾನಿಗೆಯೂ ಅಲ್ಲ. ಅದು ಮಾನವನ ಸಮೂಹ ಜೀವನದ ಅನಿವಾರ್ಯತೆ. ಪುರುಷತ್ವದ ಪರಿಪೂರ್ಣತೆಗಾಗಿ ಹಾಗೂ ಸ್ತ್ರೀತ್ವದ ಸಾರ್ಥಕತೆಗಾಗಿ ಅದು ಅಗತ್ಯ. ವಿವಾಹವು ಗಂಡು ಹೆಣ್ಣುಗಳ ನಡುವಿನ ದೈಹಿಕ, ಮಾನಸಿಕ, ನೈತಿಕ ಹಾಗೂ ಧಾರ್ಮಿಕ ಸ್ವರೂಪದ ನಂಟು. ವಿವಾಹವು ಸಾಮಾಜಿಕವಾಗಿ ಬಹಳ ಪ್ರಾಮುಖ್ಯತೆ ಗಳಿಸಿರುವ ಸಂಸ್ಥೆ. ಮಾನವನ ಲೈಂಗಿಕ ಸ್ವಚ್ಛಂದತೆಯನ್ನು ನಿವಾರಣೆ ಮಾಡಿ ಆತನ ಲೈಂಗಿಕ ಬಯಕೆಯ

ಪೂರೈಕೆಗೆ ಕ್ರಮಬದ್ಧವಾದ ವ್ಯವಸ್ಥೆಯೊಂದನ್ನು ನಿರ್ಮಿಸಲೋಸುಗ ವಿವಾಹ ಹುಟ್ಟಿಕೊಂಡಿತು. ವಿವಾಹ ವಯಸ್ಸು, ಸಂಗಾತಿಗಳ ಆಯ್ಕೆಯ ಕ್ರಮ. ವಿವಾಹ ಸಂಬಂಧದ ಸ್ವರೂಪ, ವಿವಾಹವೊಂದರ ಮುಖಾಂತರ ಸಂಗಾತಿಗಳಾಗುವವರ ಸಂಖ್ಯೆ, ವಿವಾಹದ ವಿಧಗಳು, ವಿವಾಹ ವಿಚ್ಛೇದನ, ಲೈಂಗಿಕ ಜೀವನಕ್ಕೆ ಸಂಬಂಧಿಸಿದ ನಿಯಮಗಳು, ವಿಧುರ ಹಾಗೂ ವಿಧವಾ ವಿವಾಹದ ಸಾಧ್ಯತೆ. ಇಂತಹ ಅಂಶಗಳು ಒಂದೊಂದು ಕಡೆ ಒಂದೊಂದು ತೆರನಾಗಿದೆ. ವಿವಾಹಕ್ಕೆ ಸಂಬಂಧಿಸಿದ ಹಲವಾರು ನಿಯಮಗಳೂ ಕೂಡ ಸಾಕಷ್ಟು ವೈವಿಧ್ಯಮಯವಾದವುಗಳು.

ಪಂಗಡದೊಳಗೆ ವಿವಾಹವಾಗಬೇಕೆನ್ನುವ 'ಒಳ ಪಂಗಡ ವಿವಾಹ' (Endogamy) ಪಂಗಡದ ಹೊರಗಡೆಯೇ ವಿವಾಹವಾಗಬೇಕೆನ್ನುವ ಹೊರ ಪಂಗಡ ವಿವಾಹ (Exogamy) ಮತ್ತು ಅತ್ಯಂತ ಸಮೀಪ ಬಂಧುಗಳೊಂದಿಗೆ ಲೈಂಗಿಕ ಹಾಗೂ ವಿವಾಹ ಸಂಬಂಧವನ್ನು ಹೊಂದಿರಬಾರದೆನ್ನುವ "ಅಗಮ್ಯಗಮನ ನಿಷೇಧ"ವಿದ್ದರೂ ಇವು ಸಮೂಹದಿಂದ ಸಮೂಹಕ್ಕೆ ಬೇರೆಯಾಗುವುದು. ಮಾನವನ ಲೈಂಗಿಕ ಜೀವನವನ್ನು ಹಾಗೂ ಲೈಂಗಿಕ ಸಂಬಂಧಗಳನ್ನು ನಿಯಂತ್ರಿಸುವುದಕ್ಕಾಗಿ ಸಮಾಜ ಸ್ಥಾಪಿಸಿದ ಆರೋಗ್ಯಕರ ಸಂಸ್ಥೆಯೇ ವಿವಾಹ. ವಿವಾಹವು ಸಾಮಾನ್ಯ ಅರ್ಥದಲ್ಲಿ ಸಂತಾನಾಪೇಕ್ಷೆಯುಳ್ಳ ಗಂಡು-ಹೆಣ್ಣುಗಳ ನಡುವೆ ಏರ್ಪಟ್ಟ ನಂಟು. ಗಂಡು-ಹೆಣ್ಣುಗಳ ನಡುವಿನ ಕರಾರು, ಲೈಂಗಿಕ ಜೀವನ ನಡೆಸಲು ಮಾನವನಿಗೆ ನೀಡಲಾಗಿರುವ ಪರವಾನಿಗೆ ಎಂಬುದಾಗಿ ಕರೆಯಬಹುದಾದರೂ, ಇದೊಂದು ಪವಿತ್ರವಾದ ಧಾರ್ಮಿಕ ವಿಧಿಯೆಂದೇ ಅರ್ಥೈಸಲಾಗುತ್ತಿದೆ. ಲೈಂಗಿಕ ಅಪೇಕ್ಷೆಯ ತೃಪ್ತಿಗಾಗಿ ಮನುಷ್ಯ ಅನಾದಿಕಾಲದಿಂದಲೂ ಒಂದಿಲ್ಲೊಂದು ತಂತ್ರವನ್ನು ಬಳಸುತ್ತಾ ಬಂದಿದ್ದಾನೆ.

ಪಶುಸದೃಶ್ಯ ವರ್ತನೆಯಿಂದ ಲೈಂಗಿಕ ಸ್ವೇಚ್ಛಾಚಾರದಿಂದ, ಗುಂಪು ವಿವಾಹ, ರಾಕ್ಷಸ, ಪೈಶಾಚಿಕ ವಿವಾಹದ ರೀತಿಯಲ್ಲೂ ದೇಹ ತೃಷೆ ನೀಗಿಸಿಕೊಳ್ಳುತ್ತಿದ್ದ ಮಾನವ ತನ್ನ ವರ್ತನೆಯ ಬಗೆಯೇ ಅಸಹ್ಯ ಮೂಡಿ ವಿವಾಹ ಸಂಹಿತೆಯನ್ನು ಇತ್ತೀಚೆಗೆ ಒಪ್ಪಿತ ರೀತಿಯಲ್ಲಿ ಸರಿಪಡಿಸಿಕೊಂಡಿರುತ್ತಾನೆ. ವೆಸ್ಟರ್‌ಮಾರ್ಕ್ ಅಭಿಪ್ರಾಯಿಸಿರುವಂತೆ, ಕುಟುಂಬವು ವಿವಾಹವನ್ನು ಆಧರಿಸಿದೆ ಎನ್ನುವುದಕ್ಕಿಂತ ವಿವಾಹವು ಕುಟುಂಬದಲ್ಲಿ ಬೇರೂರಿದೆ ಎನ್ನುವುದು ಹೆಚ್ಚು ಸೂಕ್ತವಾದುದು ಎಂಬ ಮಾತು ಎರಡೂ ಸಂಸ್ಥೆಗಳೂ ಗಟ್ಟಿಯಾಗಲು ಪರಸ್ಪರ ವಿವಾಹ ಮತ್ತು ಕುಟುಂಬಗಳು ಜವಾಬ್ದಾರಿಯಾಗುತ್ತವೆ.

ಒಳಬಾಂದವ್ಯ ವಿವಾಹ ಪದ್ಧತಿ ಹೊಂದಿರುವ ಮೇದರು ರಕ್ತ ಪಾವಿತ್ರ್ಯತೆಗೆ ಆಧ್ಯತೆ ನೀಡುವುದಾಗಿದ್ದು ಅಂತರ್ಜಾತಿ, ಅಂತರ್‌ಮತೀಯ ವಿವಾಹಗಳನ್ನು ಒಪ್ಪಿಕೊಂಡಿರುವುದಿಲ್ಲ. ಆಗೊಮ್ಮೆ ಅಂತಹ ವಿವಾಹಗಳು ಸಂಭವಿಸಿದರೂ, ಸಮಾಜದ ಮನ್ನಣೆಗಳಿಸಿಕೊಳ್ಳುವುದಿಲ್ಲ. ಈ ವಿಚಾರವಾಗಿ ಕುಟುಂಬದೊಳಗೆ ಮೆದುಧೋರಣೆ ಹೊಂದುವುದಾದರೂ, ಸಮುದಾಯದವರ ಕಾಕದೃಷ್ಟಿಯಿಂದ ಲಘು ಪ್ರತಿಭಟನೆ ಮಾಡುವುದನ್ನು ಮುಂದುವರೆಸುತ್ತಾರೆ.

- **ಹೆಣ್ಣು ನೋಡುವ ಶಾಸ್ತ್ರ**

ಮೇದರಲ್ಲಿ ವಿವಾಹ ಪ್ರಕ್ರಿಯೆಗೆ ಸಂಬಂಧಿಸಿದಂತೆ ಹೆಣ್ಣನ್ನು ನೋಡುವ ಪದ್ಧತಿ ಚಿಕ್ಕಮಗಳೂರು, ಹಾಸನ, ದಾವಣಗೆರೆ, ಹಾವೇರಿ, ಗುಲ್ಬರ್ಗಾ, ಹುಬ್ಬಳ್ಳಿ-ಧಾರವಾಡ ಮುಂತಾದ ಕಡೆ ಇದೆ. ಆಯಾ ಸಮುದಾಯದ ಮುಖಂಡರೊಂದಿಗೆ ಮುತ್ತೈದೆಯರು ಹೆಣ್ಣನ್ನು ನೋಡಲು ಹೋಗುತ್ತಾರೆ. ಮದುವೆಯಾಗುವ ಹುಡುಗ ಈ ಸಮೂಹದೊಂದಿಗೆ ಹೋಗುವಂತಿಲ್ಲ. ಈ ಗುಂಪಿನಲ್ಲಿ ೫ ಅಥವಾ ೯ ಜನ ಇರಬೇಕೆಂಬ ನಿಯಮ ಪಾಲಿಸುತ್ತಾರೆ. ಹೆಣ್ಣಿನ ಮನೆಯ ಯಜಮಾನರಿಗೆ ವರ್ತಮಾನ ತಿಳಿಸಲಾಗಿ, ಆತ ತನ್ನ ಸಮುದಾಯದ ಮುಖಂಡರು, ನೆಂಟರಿಸ್ಟರಿಗೆ ವಿಷಯ ತಿಳಿಸುತ್ತಾನೆ. ಹೆಣ್ಣು ನೋಡುವುದಕ್ಕಾಗಿ ಬಂದಿರುವ ವಿಷಯವನ್ನು ಮತ್ತೊಮ್ಮೆ ಸಭಿಕರ ಮುಂದೆ ಘೋಷಿಸುತ್ತಾರೆ. ಇದಕ್ಕಿಂತ ಪೂರ್ವದಲ್ಲಿ ಹೆಣ್ಣು ನೋಡಲು ಬಂದಿರುವ ತಂಡದ ಮುತ್ತೈದೆಯರು ಹೆಣ್ಣು, ತಂದೆ, ತಾಯಿ, ಮನೆ, ಸಂಬಂಧ ಇತ್ಯಾದಿ ವಿವರಗಳನ್ನು ಕಲೆಹಾಕುವರು. ಹೆಣ್ಣಿನ ಕಡೆಯವರ ಅಭಿಪ್ರಾಯ ತಿಳಿದು ಒಪ್ಪಿಗೆ ಸೂಚಿಸುವಂತಿದ್ದರೆ ಗಂಡಿನ ಮನೆತನ ನೋಡಲು ಬರಲು ಆಹ್ವಾನಿಸುತ್ತಾರೆ. ಪರಸ್ಪರ ನೋಡಿಯಾದ ಮೇಲೆ ನಿಶ್ಚಿತಾರ್ಥದ ದಿನದ ಬಗ್ಗೆ ಪರಸ್ಪರರು ಬ್ರಾಹ್ಮಣ ಪುರೋಹಿತರ (ಭಟ್ರು ಮನೆ)ನ್ನು ಕೇಳಿ ದಿನಾಂಕವನ್ನು ಗೊತ್ತುಪಡಿಸುತ್ತಾರೆ. ಲಘು ಉಪಹಾರ ಹಾಗೂ ಪಾನೀಯದಿಂದ ಹೆಣ್ಣಿನ ಕಡೆಯವರು ಗಂಡಿನ ಕಡೆಯವರಿಗೆ ಸತ್ಕರಿಸಿ ಬೀಳ್ಕೊಡುತ್ತಾರೆ.

- **ಕನ್ಯೆ ನಿಶ್ಚಿತಾರ್ಥ**

ಕನ್ಯೆಯು ಗೊತ್ತಾದ ಮೇಲೆ ವೀಳ್ಯೆಶಾಸ್ತ್ರ ನಡೆಯುತ್ತದೆ. ಇದೇ 'ಕನ್ಯೆ ನಿಶ್ಚಿತಾರ್ಥ'. ಕುಲದ ಗೌಡರು, ಬುದ್ಧಿವಂತರು, ಕುಲಸ್ತರೊಂದಿಗೆ ೫ ಮುತ್ತೈದೆಯರು ಹೆಣ್ಣಿನ ಮನೆಗೆ ಗೊತ್ತಾದ ದಿನದಂದು ಮದುವೆಯ ಹುಡುಗನೊಂದಿಗೆ ತೆರಳುತ್ತಾರೆ. ಅಂದು ಸಂಭ್ರಮದ ದಿನ. ನಿಶ್ಚಿತಾರ್ಥವು ಸಮಾಜದ ಮುಖಂಡರ ನೇತೃತ್ವದಲ್ಲಿ ನಡೆಯುತ್ತದೆ. ಹೆಣ್ಣಿನ ಮನೆಯ ಪಡಸಾಲೆಯಲ್ಲಿ ಪೂರ್ವಾಭಿಮುಖವಾಗಿ ಕಳಸ ಊಡಿ ಅದರ ಮುಂಭಾಗದಲ್ಲಿ ಕರಿಯ ಕಂಬಳಿ ಹಾಸಿ, ಗಂಡಿನ ಕಡೆಯವರೆಲ್ಲರೂ ಕುಳಿತುಕೊಳ್ಳುವರು. ಗಂಡಿನ ಕಡೆಯವರು ಹೆಣ್ಣಿಗೆ ಸೀರೆ, ಕುಪ್ಪಸ, ಹಣ್ಣು, ಹೂ, ಎಲೆ, ಅಡಿಕೆ ಇತ್ಯಾದಿಗಳನ್ನು ತಂದಿರುವರು. ಸಮುದಾಯದವರೆಲ್ಲರಿಗೂ ವಿಭೂತಿ ಹಚ್ಚಿ ಅಕ್ಷತೆ ಇಡುವರು. ಗಂಡು-ಹೆಣ್ಣಿನ ಕಡೆಯ ಮುಖಂಡರು, ಗೌಡರು, ಬುದ್ಧಿವಂತರು ಹಾಗೂ ಕುಲಸ್ಥರೆಲ್ಲರೂ ಸೇರಿರುವಾಗ ಕುಲದ ಗೌಡನು ಕಳಸ ಪೂಜಿಸಿ ಪರಸ್ಪರರಿಂದ ಒಪ್ಪಿಗೆ ಪಡೆದು ಕುಲದ ದೈವಕ್ಕೆ ಕೈಮುಗಿದು ಇಂತಹ ಕುಲದವರು ಈ ಕುಲದೊಂದಿಗೆ ವಿವಾಹ ಮಾಡಿಕೊಡಲು ಒಪ್ಪಿರುತ್ತಾರೆ ಎಂದು ದೈವಕ್ಕೆ ಮೊರೆಯಿಡುತ್ತಾರೆ.

[illegible]

[illegible]

ಆನಂತರ ಕ್ರಮವಾಗಿ ಹೆಣ್ಣಿನ ತಂದೆ ಇಲ್ಲವೇ ಹಿರಿಯ ಸಹೋದರರಿಂದ ವಾಗ್ದಾನ ಮಾಡಿಸಿದ ನಂತರ ಗಂಡಿನ ತಂದೆಯಿಂದ ವಾಗ್ದಾನ ಮಾಡಿಸಲಾಗುತ್ತದೆ. ಪರಸ್ಪರರು ವೀಳ್ಯೆಯನ್ನು ಬದಲಾಯಿಸಿ ಕೊಳ್ಳುತ್ತಾರೆ. ವೀಳ್ಯೆಯನ್ನು ಬದಲಾಯಿಸಿಕೊಂಡ ನಂತರ ಕುಲಸ್ತರ ಬಾಯಿಗೆ ಸಕ್ಕರೆ ಹಾಕುವರು. ಹೆಣ್ಣಿಗೆ ಉಡಿತುಂಬಿ ಗಂಡು-ಹೆಣ್ಣನ್ನು ಜೋಡಿಯಾಗಿ ಕೂರಿಸಿ, ಅಕ್ಷತೆ ಹಾಕಿ ಕಳಸ ಬೆಳಗುವರು. ಇತ್ತೀಚೆಗೆ ಬೆಳೆದು ಬಂದಿರುವಂತೆ ಪರಸ್ಪರರು ಉಂಗುರ ಹಾಕುವರು. ವಿವಾಹದ ಸಿದ್ಧತೆ, ವಿವಾಹದ ಪರಿಯ ಬಗ್ಗೆ ಮಾತನಾಡುತ್ತಾರೆ. ವಧು ದಕ್ಷಿಣೆ (ತೆರ) ಹಾಗೂ ವರದಕ್ಷಿಣೆಯ ಬಗ್ಗೆ ಮಾತನಾಡಿಕೊಳ್ಳುತ್ತಾರೆ. ಈ ರೀತಿ ವಿವಾಹಕ್ಕೆ ಸಂಬಂಧಿಸಿದ ಮಾತುಕತೆ, ಚರ್ಚೆಯೊಂದಿಗೆ ಕೊಡುವ-ಬಿಡುವ ಅಂಶಗಳೆಲ್ಲ ಪೂರ್ಣಗೊಂಡ ಮೇಲೆ ಲಘು ಉಪಹಾರ ಸೇವಿಸಿ ಗಂಡು-ಹೆಣ್ಣಿನ ಕಡೆಯವರು ಒಟ್ಟಿಗೇ ಬ್ರಾಹ್ಮಣ ಪುರೋಹಿತರ ಮನೆಗೆ ತೆರಳಿ ವಿವಾಹ ದಿನಾಂಕವನ್ನು ನಿಶ್ಚಯಿಸುತ್ತಾರೆ. ನಂತರ ಸಮುದಾಯದ ಎಲ್ಲರಿಗೂ ಮದುವೆ ದಿನಾಂಕವನ್ನು ಪ್ರಕಟಿಸಿದ ನಂತರ ಸಿಹಿ ಊಟ ಮಾಡಲಾಗುವುದು.

- **ಮದುವೆ ಚಪ್ಪರ**

ಮೇದರಲ್ಲಿ ಮನೆಯ ಮುಂದೆಯೇ ಚಪ್ಪರ ಹಾಕಿಸಿ ವಿವಾಹ ಮಾಡಬೇಕೆನ್ನುವುದು ಸಂಪ್ರದಾಯ. ಸುಮಾರು ಮೂರು ದಶಕಗಳ ಹಿಂದೆ ವಿವಾಹವು ಮನೆಯ ಮುಂದಿನ ಚಪ್ಪರಲ್ಲಿಯೇ ನಡೆಯಬೇಕಿತ್ತು. ಮನೆ ಮುಂದೆ ಧಾರೆ ಎರೆದರೆ ಶ್ರೇಯಸ್ಸು ಎಂಬ ಅಚಲ ನಂಬಿಕೆ ಇದ್ದದ್ದು ಇಂದು ಬದಲಾಗಿದೆ. ಹೆಣ್ಣು ಮತ್ತು ಗಂಡಿನ ಮನೆಯ ಮುಂದೆ ಮದುವೆ ಹಿಂದಿನ ದಿನ ಕುಲಸ್ತರೆಲ್ಲ ಸೇರಿ (ಚಪ್ಪರ) ಹಾಕುತ್ತಾರೆ. ಹೆಣ್ಣಿನ ಮನೆಯ ಚಪ್ಪರದ ವೈಶಿಷ್ಟ್ಯತೆಗೆ '೧೨ ಕಂಬ, ೧೨ ಕುಂಬ' ಎಂಬ ಮಾತಿದೆ. ೧೨ ಕಂಬದ ಚಪ್ಪರವನ್ನು ಆಯಾ ಪ್ರಕಾರವೇ ಹಾಕಲಾಗುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಅದು ಕಡಿಮೆ ಸರಿ ಸಂಖ್ಯೆ ೧೦ ಇಲ್ಲವೆ, ೦೮, ೦೬, ೦೪ ಕಂಬದ ಚಪ್ಪರ ಹಾಕುತ್ತಾರೆ. ಹೆಣ್ಣಿನ ಮನೆಯ ಮುಂಭಾಗದ ಬಲಭಾಗದ 'ಜೇಷ್ಠಕಂಬ' ನೆಡಲು ತೆಗೆದ ಗುಂಡಿಗೆ ಗೋಮೂತ್ರ, ಶುದ್ಧ ನೀರು ಹಾಕಿ ಹಣ್ಣು-ಕಾಯಿ ಪೂಜೆ ಮಾಡಿ, ಎಲ್ಲವೂ ಸುಸೂತ್ರವಾಗಿ ನೆರವೇರಲಿ ಎಂದು ಮನೆ ದೈವಕ್ಕೆ ಕೋರಿಕೊಳ್ಳುತ್ತಾರೆ. 'ಜೇಷ್ಠಕಂಬ'ವನ್ನು ಹೆಣ್ಣಿನ ಹಿರಿಯ ಮಾವ ನೆಡುತ್ತಾನೆ. ನೆಡುವಾಗ ತಲೆಗೆ ರುಮಾಲು ಸುತ್ತಿಕೊಂಡಿರಬೇಕು.

ಕಂಬ ನೆಟ್ಟ ಮೇಲೆ, ಆ ಕಂಬಕ್ಕೆ ಹಾಲು ವಸರುವ ಹಸಿಗಿಡವನ್ನು(ಅತ್ತಿ, ಕರಿಬಸರಿ, ಹಲಸು ಯಾವುದಾದರೊಂದು) ಕಟ್ಟುತ್ತಾರೆ. ಅದೇ ಕಂಬಕ್ಕೆ ಉಡಿ ಸಾಮಾನನ್ನು ಹೊಸ ವಸ್ತ್ರದಲ್ಲಿ ಕಟ್ಟಿ ಪೂಜಿಸುತ್ತಾರೆ. ನಂತರ ಉಳಿದ ಕಂಬಗಳೆಲ್ಲವನ್ನು ನೆಟ್ಟು ಚಪ್ಪರ ಹಾಕುತ್ತಾರೆ. ಚಪ್ಪರದ ಹೊದಿಕೆಗೆ ಪಿತ್ರಾರ್ಜಿ ಸೊಪ್ಪು ಶ್ರೇಷ್ಠ. ಎಲ್ಲಾ ಕಂಬಗಳಿಗೂ ತೆಂಗಿನ ಗರಿ ಹಾಗೂ

ಮಾವಿನ ಸೊಪ್ಪಿನಿಂದ ಶೃಂಗರಿಸುತ್ತಾರೆ. ಎಳನೀರು, ಹಲಸಿನ ಕಾಯಿಗಳನ್ನು ಚಪ್ಪರದಲ್ಲಿ ನೇತಾಡುವಂತೆ ಕಟ್ಟುತ್ತಾರೆ. ಹೀಗೆ ಚಪ್ಪರ ಹಾಕಿದ ನೆಂಟರಿಸ್ಟರಿಗೆ ದಕ್ಷಿಣೆಯಿಟ್ಟು ಸತ್ಕರಿಸಿ ಉಪಚರಿಸುತ್ತಾರೆ. ಮಾಂಗಲ್ಯ ಧಾರಣೆಯಾದ ಒಂಬತ್ತನೆಯ ದಿನ ಚಪ್ಪರವನ್ನು ಬಿಚ್ಚುತ್ತಾರೆ. ಆದರೆ ಮೊದಲು ಪೂಜಿಸಿದ 'ಜೇಷ್ಠಕಂಬ'ವನ್ನು ನವ ವಧು-ವರರೇ ಪೂಜಿಸಿ ಕೀಳಬೇಕು. ಅದೇ ದಿನ ರಾತ್ರಿ ಮನೆ ದೇವರ ಪೂಜೆ ನಡೆಯುತ್ತದೆ.

ಹಾಗೆಯೇ ಮದುಮಗನ ಮನೆಯ ಮುಂದಿನ ಚಪ್ಪರವನ್ನು ಸಹ ಕುಲಸ್ತರೆಲ್ಲ ಸೇರಿ ಹಾಕುತ್ತಾರೆ. ಕನಿಷ್ಟ ನಾಲ್ಕು ಕಂಬದ ಚಪ್ಪರ ಇರಬೇಕು. ಇಲ್ಲಿಯೂ ಕಂಬ ಪೂಜೆ ನೆರವೇರುತ್ತದೆ. ಮನೆ ದೈವವನ್ನು (ಮಂದೆವ್ರು) ವಿಶೇಷವಾಗಿ ಪೂಜಿಸಲಾಗುತ್ತದೆ. ಬಂಧು-ಬಳಗದವರಿಗೆ ಲಘು ಉಪಹಾರ, ಕಾಫಿಯ ವ್ಯವಸ್ಥೆ ಮಾಡಲಾಗುತ್ತದೆ.

- **ಬೀಗರನ್ನು ಎದುರುಗೊಳ್ಳುವುದು**

ಮದುವೆಯ ಹಿಂದಿನ ದಿನ ಮದುಮಗನ ಜೊತೆ ಗಂಡಿನ ಕಡೆಯವರೆಲ್ಲ ದಿಬ್ಬಣದೊಂದಿಗೆ ಬಿಡದಿ ಮನೆಯಲ್ಲಿ ಉಳಿಯುತ್ತಾರೆ. ಸಾಮಾನ್ಯ ಬಿಡದಿ ಮನೆ ಮೇದರ ಮನೆ ಹೊರತುಪಡಿಸಿ ಬೇರೆ ಜನಾಂಗ (ದೇವಾಂಗ, ಕುರುಬ, ಉಪ್ಪಾರ, ಲಿಂಗಾಯತ, ಒಕ್ಕಲಿಗ ಇತ್ಯಾದಿ)ದವರ ಮನೆಯಲ್ಲಿ ತಾತ್ಕಾಲಿಕವಾಗಿ ತಂಗುವ ವ್ಯವಸ್ಥೆ ಮಾಡಿರುತ್ತಾರೆ. ಹೆಣ್ಣಿನ ಕಡೆಯ ಮುತ್ತೈದೆಯರು ಮತ್ತು ಬಂಧು-ಬಳಗದವರು ಕಳಸದೊಂದಿಗೆ ಗಂಡು ಉಳಿದಿರುವ ಬಿಡದಿ ಮನೆಗೆ ವಾದ್ಯಗೋಷ್ಠಿಯೊಂದಿಗೆ ಬರುತ್ತಾರೆ. ಉತ್ಸಾಹ, ಲಗುಬಗೆಯಿಂದ ಗಂಡಿನ ಕಡೆಯವರನ್ನು ಎದುರುಗೊಳ್ಳುತ್ತಾರೆ. ಗಂಡಿನ ಕಡೆಯವರೆಲ್ಲರನ್ನೂ ಪ್ರೀತಿಯಿಂದ ಮಾತನಾಡಿಸಿ, ಕುಶಲೋಪರಿ ವಿಚಾರಿಸಿ ಹೆಣ್ಣಿನ ಕಡೆಯವರು ಗಂಡಿನ ಕಡೆಯ ಗಂಡಸರು ಮತ್ತು ಹೆಂಗಸರೆಲ್ಲರಿಗೂ ವಿಭೂತಿ ಧಾರಣೆ ಹಾಗೂ ಅಕ್ಷತೆ ಹಚ್ಚುತ್ತಾರೆ. ಮದುಮಗನಿಗೂ ವಿಭೂತಿ, ಕುಂಕುಮ ಹಚ್ಚಿ ಗಂಡಿನ ಕಡೆಯ ಕಳಸಕ್ಕೆ ಹೆಣ್ಣಿನ ಕಡೆಯ ಕಳಸವನ್ನು ಮೂರು ಅಥವಾ ಐದು ಮುತ್ತೈದೆಯರು ಪೂಜಿಸುವರು. ಆ ನಂತರ ಆ ಊರಿನ ದೇವಸ್ಥಾನಕ್ಕೆ ಗಂಡಿನ ದಿಬ್ಬಣವನ್ನು ಕರೆದುಕೊಂಡು ಬರುತ್ತಾರೆ. ಅಲ್ಲಿಯೂ ಪೂಜೆ ಸಲ್ಲಿಸಿದ ನಂತರ ರಾತ್ರಿಯ ಬೀಗರೂಟ ನಡೆಯುವುದು.

- **ಲಗ್ನಕಟ್ಟುವ ಶಾಸ್ತ್ರ ಹಾಗೂ ಕಟ್ಟೆ ಸಂಸ್ಕೃತಿ**

ಲಗ್ನಕಟ್ಟುವ ಶಾಸ್ತ್ರ ಮೇದರ ವಿಶೇಷ ಅನನ್ಯತೆ. ಇದಕ್ಕಿಂತ ಪೂರ್ವದಲ್ಲಿ 'ಗಂಡು ಮಾಡುವ ಶಾಸ್ತ್ರ' ನಡೆಯುತ್ತದೆ. ಕುಲಸ್ತರು, ಗೌಡರು, ಬುದ್ಧಿವಂತರು ಹಾಗೂ ಮುದ್ರೆಕಾರರು ಪ್ರಮುಖ ಪಾತ್ರ ವಹಿಸುತ್ತಾರೆ. ಮದುವೆ ಮನೆಯಲ್ಲಿ ಅಕ್ಕಿಯಲ್ಲಿ ಆಕರ್ಷಕ ಹಸೆ ಬರೆದು ಅದರ ಸುತ್ತಲೂ ರಂಗೋಲಿ ಬಿಡಿಸುತ್ತಾರೆ. ಹಸೆಯ ಮಧ್ಯಭಾಗದಲ್ಲಿ ೫೧ ಸೇರು ಅಕ್ಕಿಯನ್ನು

ಹಾಕುತ್ತಾರೆ. ಅಕ್ಕಿ ರಾಶಿಯ ತುದಿಯಲ್ಲಿ ಕಳಸ ಊಡುತ್ತಾರೆ ಅಥವ ಬಿದಿರಿನ ಮೂಲೆಗೆರಸಿಯಲ್ಲಿ ಅಕ್ಕಿ ತುಂಬುವರು. ಕುಲದ ಮುಖಂಡ ರಾಶಿಪೂಜೆ ಮಾಡಿ ನಂತರ ತಮ್ಮ 'ಕಟ್ಟೆ ಸಂಸ್ಕೃತಿ' ಪ್ರಕಾರ ೫ ಕಟ್ಟೆಗಳಿಗೆ 'ವೀಳ್ಯೆತಿದ್ದಿ' ಇಡುತ್ತಾರೆ. ಈ ರೀತಿ ವೀಳ್ಯೆತಿದ್ದೇವಿನಲ್ಲಿ ಹಸಿರು ವೀಳ್ಯೇವು, ಹಿರಿವೀಳ್ಯೇವು ಎಂದು ವಿಭಾಗಿಸುತ್ತಾರೆ. ಗೌಡ, ಬುದ್ಧಿವಂತರಿಗೆ ಹಿರಿವಿಳ್ಯೇವು, ಮುದ್ರೆಕಾರರು ಮತ್ತು ಇತರೆ ಕಟ್ಟೆಗರಿಗೆ ಹಸಿರು ವಿಳ್ಯೇವು ಎಂದು ಪ್ರತ್ಯೇಕವಾಗಿ ತೆಗೆದಿರುಸುತ್ತದೆ. ಈ 'ಕಟ್ಟೆ ಸಂಸ್ಕೃತಿ' ಮೇದ ಬುಡಕಟ್ಟುವಿನ ವಿಶೇಷ ಆಚರಣೆ. ಚಿಕ್ಕಮಗಳೂರು ಜಿಲ್ಲೆಯ ಕನ್ನಡ ಮೇದರು 'ಕಟ್ಟೆ' ಸಂಪ್ರದಾಯವನ್ನು ಇಂದಿಗೂ ಫಲಪ್ರದವಾಗಿ ಮುಂದುವರಿಸಿಕೊಂಡು ಬಂದಿದ್ದಾರೆ.

ಅಂದರೆ ಒಂದು ಕಟ್ಟೆಯಲ್ಲಿ ಯಾವ್ಯಾವ ಊರುಗಳು ಬರುತ್ತವೆ. ಅಲ್ಲಿನ ವೈವಾಹಿಕ ಸಂಬಂಧಗಳು ಹೇಗಿರಬೇಕು. ಕಟ್ಟೆಯವರನ್ನು ಹೇಗೆ ನಿಯಂತ್ರಿಸಬೇಕು ಎಂಬುದೇ ಈ ಕಟ್ಟೆಯ ಮೂಲ ಆಶಯವಾಗಿದೆ. ಪ್ರತಿ ಕಟ್ಟೆಯಲ್ಲೂ 'ಗೌಡ', 'ಬುದ್ಧಿವಂತ' ಎಂಬ ಸ್ಥಾನೀಯ ವ್ಯಕ್ತಿಗಳಿರುತ್ತಾರೆ. ೫ ಕಟ್ಟೆಗಳಿದ್ದು ಈ ರೀತಿ ವಿವರಿಸಬಹುದು. ಉದಾಹರಣೆಗೆ ನಗರ ಕಟ್ಟೆ (ದುರ್ವಿಗೆರೆ (ದಾವಣಗೆರೆ ಜಿಲ್ಲೆ), ಅಜ್ಜಂಪುರ ಕಟ್ಟೆ (ತರೀಕೆರೆ, ಲಕ್ಕವಳ್ಳಿ, ನರಸಿಂಹರಾಜಪುರ), ಪಟ್ಟಣ ಕಟ್ಟೆ (ಹಾಸನ ಜಿಲ್ಲೆ, ಮಂಡ್ಯ ಜಿಲ್ಲೆ), ಗರುಡನಗಿರಿಕಟ್ಟೆ, ಚಿಕ್ಕನಾಯಕನಹಳ್ಳಿಕಟ್ಟೆ, ಅಮಾನಿಕಟ್ಟೆ ಈ ರೀತಿಯಾಗಿದ್ದು ಇದು ಕುಲ-ಬೆಡಗು-ಬಳಿಗಳ ಆಧಾರದ ಮೇಲೆ ನಿಂತಿರುತ್ತದೆ. ಹೀಗೆ ಕಟ್ಟೆಗಳಿಗೆ ಗೌರವ ಕೊಡುವ ಕಾರಣಕ್ಕಾಗಿ ೫ ಕಟ್ಟೆಗಳಿಗೂ ವೀಳ್ಯೆ ತಿದ್ದುವುದು ವಾಡಿಕೆ. ಆಗೊಮ್ಮೆ ವೀಳ್ಯೆ ತಿದ್ದುವುದರಲ್ಲಿ ಸ್ವಲ್ಪ ವ್ಯತ್ಯಾಸವಾದರೂ, ಕಟ್ಟೆಗೆ ತೋರುವ ಅಗೌರವವೆಂದು ಬಗೆಯುತ್ತಾರೆ.

ಇದೇ ಸಂದರ್ಭದಲ್ಲಿ ಎಲ್ಲಾ ಕಟ್ಟೆಯ ಮುತ್ತೈದೆಯರಿಗೆ ಕಂಕಣ ಕಟ್ಟುವ ಶಾಸ್ತ್ರ ನಡೆಯುತ್ತದೆ. ಆಗೊಮ್ಮೆ ಬುಡಕಟ್ಟಿನ ನಿಯಮ ಬಾಹಿರವಾಗಿ ಯಾರಾದರೂ ವರ್ತಿಸಿದ್ದ ಪಕ್ಷದಲ್ಲಿ ಕಂಕಣ ಕಟ್ಟುವಲ್ಲಿ ಮೀನಾಮೇಷ ಎಣಿಸಲಾಗುತ್ತದೆ. ಆಗ ಲಘು ಪ್ರತಿಭಟನೆಯೂ ಆಗುತ್ತದೆ. ಎಷ್ಟೋ ಸಂದರ್ಭದಲ್ಲಿ ಮದುವೆ ಚಿಕ್ಕ ಘರ್ಷಣೆಯಲ್ಲಿ ಆರಂಭಗೊಳ್ಳುವುದು ಈ 'ಕಂಕಣ ಕಟ್ಟುವ ಶಾಸ್ತ್ರ'ದಲ್ಲಿಯೇ. ಈ ರೀತಿ ಕಂಕಣ ಕಟ್ಟುವ ಶಾಸ್ತ್ರ ಮುಗಿಯುತ್ತಿದ್ದಂತೆ ಇದರೊಂದಿಗೆ **"ಗಣಿಗೆಗೆ ಅಕ್ಕಿ ಹಾಕುವ ಶಾಸ್ತ್ರ"** ನಡೆಯುತ್ತದೆ. ಸುಮಾರು ೧೫ ಸೇರಿನ ಬಿದಿರಿನ ಗೂಡೆಗೆ ಶೃಂಗಾರ ಮಾಡಿ, ಹಸೆ ಬರೆದು ಮಾವಿನ ಚಿಕ್ಕ ತೋರಣ ಕಟ್ಟಿ, ಕಂಕಣಕಟ್ಟಿ ಪೂಜಿಸುತ್ತಾರೆ. ಇದಕ್ಕೆ ಮುತ್ತೈದೆಯರೆಲ್ಲ ಸೇರಿ ಅಕ್ಕಿ ತುಂಬುತ್ತಾರೆ.

ಈ ರೀತಿ ಅಕ್ಕಿ ತುಂಬುವ ಮಹಿಳೆಯರಿಗೆ ಹೆಣ್ಣಿನ ಕಡೆಯವರು ಮಡ್ಲಕ್ಕಿ ತುಂಬುತ್ತಾರೆ. ತುಂಬಿದ ಗೂಡೆಯ ಅಕ್ಕಿಯನ್ನು ಒಂದು ತಿಂಗಳವರೆಗೆ ತೆರೆಯದೆ ವಿಶೇಷ ಪೂಜೆ ಮಾಡಿ ತೆಗೆದಿರಿಸಿರುತ್ತಾರೆ. ಶ್ರಾವಣದ ಮೊದಲ ವಾರ ಅಥವಾ ವಿವಾಹವಾದ ಒಂದು ತಿಂಗಳ

ನಂತರ ಈ ಗೂಡೆಯ ಅಕ್ಕಿಯಿಂದ ವಿವಿಧ ಖಾದ್ಯ ತಯಾರಿಸಿ, ಗಂಡು-ಹೆಣ್ಣು ಒಟ್ಟಿಗೇ ತಟ್ಟೆಯಿಲ್ಲದ ನೆಲದ ಮೇಲೆ ಬಡಿಸಿದ ಆಹಾರವನ್ನು ಊಟ ಮಾಡಬೇಕು. ಇದರ ಅರ್ಥ ಎಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ಗಂಡ-ಹೆಂಡತಿ ಬದುಕಿಗೆ ಬೆನ್ನು ಮಾಡದೆ ಸಹಜೀವನ ಮಾಡುವುದರ ಸಂಕೇತವಾಗಿದೆ. ೫ ಕಟ್ಟೆಯ ಮುಖಂಡರನ್ನು ಒಬ್ಬರನ್ನಾಗಿ ಕರೆದು ಅವರಿಗೂ ಕಂಕಣ ಕಟ್ಟಿ, ಹೊಸ ಬಟ್ಟೆಯೊಂದಿಗೆ ಕಟ್ಟೆಯ ಗೌರವವನ್ನು ಕಾಪಾಡಲಾಗುತ್ತದೆ.

ಒಟ್ಟಿನಲ್ಲಿ ೫ ಕಟ್ಟೆಯ ಎಲ್ಲಾ ಕುಲಬಾಂದವರೂ ಸೇರಿ ಈ ವಿವಾಹವನ್ನು ಸಾಕ್ಷೀಕರಿಸುತ್ತಾರೆ. ಈ ರೀತಿಯ ಶಾಸ್ತ್ರ ಮುಗಿಯುವ ವೇಳೆಗೆ ಸರಿಸುಮಾರು ರಾತ್ರಿ ೧೨ ಗಂಟೆ ಸಂದಿರುತ್ತದೆ. ಆಗ ವಧು-ವರರ ಕಡೆಯ ಮುಖಂಡರು ಹಾಗೂ ಕಂಕಣ ಕಟ್ಟಿಸಿಕೊಂಡ ಮುತ್ತೈದೆಯರು ಉಡಿ ಪದಾರ್ಥ, ದೀಪಗಳೊಂದಿಗೆ ಕಳಸ, ಲಗ್ನಪತ್ರಿಕೆ, ಕಾಯಿ-ಹಣ್ಣು, ವಸ್ತ್ರದೊಂದಿಗೆ ಪುರೋಹಿತನ ಮನೆಗೆ ತೆರಳುತ್ತಾರೆ. ಪುರೋಹಿತ ಕಳಸವನ್ನು ಎದುರಿಗಿರಿಸಿಕೊಂಡು ಕಂಕಣ ಕಟ್ಟಿಕೊಂಡ ಮುತ್ತೈದೆಯರು ಹಾಗೂ ಕಟ್ಟೆಯ ಯಜಮಾನರಲ್ಲಿ ಮದುವೆ ಪ್ರಸ್ತಾಪ ಪುನಃ ಉಚ್ಚರಿಸಿ, ಒಪ್ಪಿಗೆ ಪಡೆದ ನಂತರ ವಿವಾಹ ಫಲಪ್ರದವಾಗಲು ಕುಲದೇವತೆ ಹಾಗೂ ಸಕಲ ದೇವಾನುದೇವತೆಗಳಲ್ಲಿ ಕೋರಿಕೊಳ್ಳುತ್ತಾರೆ. ಲಗ್ನದಕ್ಕಿಯನ್ನು ಹೊಸ ವಸ್ತ್ರದಲ್ಲಿ ಕಟ್ಟಿ ೨ ಗಂಟುಗಳನ್ನು ಪ್ರತ್ಯೇಕವಾಗಿ ಪೂಜಿಸಿ ಕೊಡುತ್ತಾರೆ. ವಿವಾಹ ಸಂದರ್ಭದಲ್ಲಿ ಲಗ್ನದಕ್ಕಿಯನ್ನು ಇರಿಸಲಾಗುವುದು. ಪುರೋಹಿತನ ಮನೆಯಿಂದ ದೀಪ ಆರದಂತೆ ಎಚ್ಚರಿಕೆವಹಿಸಿ ಮದುವೆ ಮಂಟಪಕ್ಕೆ ತರಬೇಕು.

- **ಎಣ್ಣೆಯ ಶಾಸ್ತ್ರ**

ಬೆಳಗಿನ ಜಾವ ಸುಮಾರು ೪ ಗಂಟೆಗೆ ಎಣ್ಣೆಶಾಸ್ತ್ರ ಆರಂಭಿಸಲಾಗುವುದು. ಮದುವೆ ಮಂಟಪ ಅಥವ ಚಪ್ಪರದ ಕೆಳಗೆ ಗೋಮಯದಿಂದ ಶುದ್ಧಗೊಳಿಸಿದ ಜಾಗದಲ್ಲಿ ಹಸೆ ಬರೆದು ಹಸೆಪೂಜೆ ಮಾಡಿ ಮದುಮಗಳನ್ನು ಹಸೆ ಮೇಲೆ ಕೂರಿಸುವರು. ಇಬ್ಬರು ಮುತ್ತೈದೆಯರು ಮೂರು ಪುರುಷರು ಮದುಮಗಳ ತಲೆಗೆ ಎಣ್ಣೆ ಹಾಕಿ ಮುಖ, ಕೈ ಮತ್ತು ಕಾಲಿಗೆ ಹರಳೆಣ್ಣೆ ಲೇಪಿಸಿ ಅರಿಶಿನವನ್ನು ಹಚ್ಚಲಾಗುತ್ತದೆ.

ಈ ರೀತಿ ಮೂರು ಸಾರಿ ಪುನರಾವರ್ತನೆಯಾದ ನಂತರ ಸೇಸೆ (ಶಾಸಕ್ಕಿ) ಇಟ್ಟು ಆರತಿ ಬೆಳಗಲಾಗುತ್ತದೆ. ನಂತರ ಮದುಮಗಳೊಂದಿಗೆ ಸೋದರ ಮಾವ ಕೂತುಕೊಂಡು ಅವರ ನಾಲ್ಕು ಬದಿಯಲ್ಲಿ ಗಂಗೆ ತುಂಬಿದ ೪ ಅರಣಿಗಡಿಗೆಗಳನ್ನು ಇಟ್ಟು ಇನ್ನೊಂದು ಅರಣಿಗಡಿಗೆಯಲ್ಲಿ ದಾರದ ಉಂಡೆಯನ್ನು ಹಾಕಿಟ್ಟು, ನಾಲ್ಕು ಅರಣಿಗಡಿಗಳಿಗೆ ಒಟ್ಟು ೫ ಸುತ್ತು ಸುರಿಗಿ ದಾರವನ್ನು ಸುತ್ತುತ್ತಾರೆ. ನಂತರ ಎಣ್ಣೆ ಸ್ನಾನವನ್ನು ಉಟ್ಟ ಬಟ್ಟೆ ಮೇಲೆಯೇ ಮಾಡಿಸುತ್ತಾರೆ. ನೀರನ್ನು ಒಯ್ಯುವ ಅರಣಿಗಡಿಗೆಯ ಬಾಯಲ್ಲಿ ಮಾವಿನ ಸೊಪ್ಪನ್ನು ಸಿಕ್ಕಿಸಿಕೊಂಡಿರುತ್ತಾರೆ.

ಪುನಃ ೫ ಜನ ಮಲ್ನೀರನ್ನು ಒಯ್ಯುವರು. ಎಣ್ಣೆ ಜಿಡ್ಡು ಹೋಗುವಂತೆ ಸೋಪು, ಸೀಗೆಪುಡಿ ಬಳಸುವರು. ಈ ರೀತಿ ಸ್ನಾನ ಮಾಡಿಸುವಾಗ ಮದುಮಗಳ ಮೇಲೆ ಸೋದರ ಮಾವ ಬಾಗಿದ ಭಂಗಿಯಲ್ಲಿ ಸುರಿಗಿ ನೀರು ೫ ಸಾರಿ ಹಾಕಿಸಿಕೊಳ್ಳಬೇಕು. ಹಾಗೆಯೇ ಸೊಸೆಯು ಮಾವನಿಗೂ ಈ ಭಂಗಿಯಲ್ಲಿಯೇ ನೀರನ್ನು ಹಾಕಿಸಿಕೊಳ್ಳಬೇಕು. ಇದೇ ರೀತಿ ಮದುಮಗನಿಗೂ ಹಸೆಯ ಮೇಲೆ ಕೂರಿಸಿ ಅರಿಶಿನ ಎಣ್ಣೆ ಲೇಪನವನ್ನು ಮಾಡಲಾಗುತ್ತದೆ. ಮದುಮಗನೊಂದಿಗೆ ಸೋದರತ್ತೆ ಮಲನೀರಿಗೆ ಕೂರಬೇಕು. ಸುರಿಗೆ ನೀರನ್ನು ೫ ಜನರು ಸುರಿಯುತ್ತಾರೆ. ನಂತರ ಒಕಳಿ ನೀರನ್ನು ನಿವಾಳಿಸಿ ತೆಗೆದ ನಂತರ ಬಟ್ಟೆ ಬದಲಿಸಿ ಹೊಸಬಟ್ಟೆಯನ್ನು ಧರಿಸಿಕೊಂಡು ಮದುಮಗ, ಮದುಮಗಳು ಗಂಗೆ ಪೂಜೆಗೆ ತಯಾರಾಗುತ್ತಾರೆ.

- **ಗಂಗೆ ತರುವುದು**

ಮೇದರಲ್ಲಿ ಗಂಗೆ ಪೂಜೆ ಇಲ್ಲದೆ ಯಾವುದೇ ದೇವತಾಕಾರ್ಯಗಳು ನಡೆಯುವುದಿಲ್ಲ. ತೆರೆದ ಬಾವಿ ಗಂಗೆ ಪೂಜೆಗೆ ಶ್ರೇಷ್ಠ. ಐದು ಜನ ಮುತ್ತೈದೆಯರೊಂದಿಗೆ ೫ ಅರಣಿಗಡಿಗೆ ಹಾಗೂ ಕಳಸದೊಂದಿಗೆ ಇತರೆ ಕುಲಸ್ತರೊಡಗೂಡಿ ವಾದ್ಯದೊಂದಿಗೆ ಗಂಗೆ ಪೂಜೆಗೆ ತೆರಳುತ್ತಾರೆ. ಬಾವಿಕಟ್ಟೆಯ ಎದುರು ಸ್ವಚ್ಛಗೊಳಿಸಿ ಕಂಬಳಿ ಹಾಸಿ ೫ ಅರಣಿಗಡಿಗೆಗಳನ್ನು ಕ್ರಮವಾಗಿ ಜೋಡಿಸಿಟ್ಟು ಬಾವಿಯ ಶುದ್ಧಗಂಗೆಯನ್ನು ತುಂಬುತ್ತಾರೆ. ಅದರೊಳಗೆ ಮೂರು ಮೂರು ವೀಳ್ಯದೆಲೆಗಳನ್ನು, ತೆಂಗಿನ ಕಾಯಿಯನ್ನು ಇರಿಸುತ್ತಾರೆ.

ಒಂದು ವೀಳ್ಯದೆಲೆ ಮೇಲೆ ಸಗಣಿಯ ಗಣಪನನ್ನು ಮಾಡಿ ಅದರ ತುದಿಗೆ ಗರಿಕೆ ಹುಲ್ಲನ್ನು ಸಿಕ್ಕಿಸುತ್ತಾರೆ. ಚಿಗಳಿ ತಮಟ, ಅಕ್ಕಿ ತಮಟ, ಹೆಸರು ಹಾಗೂ ಕಡ್ಲೆಕಾಳು ನೈವೇಧ್ಯ ಮಾಡುವರು. ಬಂದವರೆಲ್ಲರಿಗೂ ವಿಭೂತಿ, ಕುಂಕುಮ, ಅಕ್ಷತೆ ಹಚ್ಚುತ್ತಾರೆ. ವಾದ್ಯದೊಂದಿಗೆ ಗಂಗಾ ಪೂಜೆ ನೆರವೇರುತ್ತದೆ. ೫ ಮುತ್ತೈದೆಯರಿಗೆ ಉಡಿ ತುಂಬಿ ಸೋದರತ್ತೆ ನಮಸ್ಕರಿಸಿ ಮೊದಲು ಗಂಗಾಗಡಿಗೆಯನ್ನು ಹೊತ್ತುಕೊಳ್ಳುತ್ತಾಳೆ. ಉಳಿದ ಮುತ್ತೈದೆಯರು ಗಂಗಾಗಡಿಗೆಗಳನ್ನು ಹೊತ್ತುಕೊಂಡು ಹೊರಡುತ್ತಾರೆ. ಸಾಮಾನ್ಯವಾಗಿ ಗಂಗೆ ಹೊತ್ತವರ ಮೇಲೆ ದೇವರು ಬರುತ್ತದೆ. ಅದನ್ನು ಇಳಿಸಿ ಸಮಾಧಾನ ಮಾಡಲು ತೆಂಗಿನಕಾಯಿ ಒಡೆಯುವುದು, ಇಲ್ಲವೆ ಲಿಂಬೆಹಣ್ಣು ನೀವಾಳಿಸುವುದು, ಕಪ್ಪು-ಕೆಂಪು ನೀರು ಚೆಲ್ಲುವುದುರೊಂದಿಗೆ ಗಂಗೆಯನ್ನು ಬರಮಾಡಿಕೊಳ್ಳುತ್ತಾರೆ.

- **ಧಾರೆಮುಹೂರ್ತ**

ದೇವಸ್ಥಾನ ಇಲ್ಲವೇ ಬಿಡಿದಿ ಮನೆಯಲ್ಲಿ ಬಿಟ್ಟಿರುವ ವರ ಮಂಟಪದಲ್ಲಿರುವ ವಧು ವಿವಾಹಕ್ಕೆ ಸಿದ್ಧರಾಗುತ್ತಾರೆ. ಬಿಳಿಯ ಬಟ್ಟೆ ಧರಿಸಿದ ವರ, ಬಾಸಿಂಗವನ್ನು ಕಟ್ಟಿಕೊಂಡು ಛತ್ರಿಯ ನೆರಳಿನಲ್ಲಿ, ಕಳಸ, ಮುತ್ತೈದೆಯರು ಬಂಧುಗಳೊಂದಿಗೆ ವಾದ್ಯ ಸಮೇತ ಮದುವೆ ಮಂಟಪಕ್ಕೆ ಹತ್ತಿರವಿರುವಾಗ ಹೆಣ್ಣಿನ ಕಡೆಯವರು ಎದುರುಗೊಳ್ಳುತ್ತಾರೆ. ಪರಸ್ಪರ ಕಳಸಗಳನ್ನು

ಪೂಜಿಸಿಕೊಳ್ಳುತ್ತಾರೆ. ನವ ವರನನ್ನು ಕುರ್ಚಿಯ ಮೇಲೆ ಕೂರಿಸಿ, ನಾದಿನಿ ಅಥವ ಮೈದುನ ಗಂಡಿನ ಕಾಲನ್ನು ಹರಿವಾಣದಲ್ಲಿಟ್ಟು ತೊಳೆಯುತ್ತಾರೆ. ಪಾದಪೂಜೆ ನೆರವೇರಿಸಿದ ಸಂದರ್ಭದಲ್ಲಿ ಬಂಗಾರದ ಉಂಗುರ ಉಡುಗೊರೆಯಾಗಿ ನೀಡುವ ಪದ್ಧತಿಯಿದೆ. ಈ ರೀತಿ ಪೂಜಿಸಿದ ನಂತರ ಹೆಣ್ಣಿನವರು ನೀಡಿದ ಹೊಸ ಚಪ್ಪಲಿ (ಜೋಡು) ಮೆಟ್ಟಿಕೊಂಡು ಮದುವೆ ಮಂಟಪಕ್ಕೆ ಬರುತ್ತಾನೆ. ಇತ್ತ ಮದುಮಗಳನ್ನು ಸಿಂಗರಿಸಿ ಮುತ್ತೈದೆಯರೆಲ್ಲ ಸೇರಿ ಸರಕಿನ ಕುಕ್ಕೆಯೊಂದಿಗೆ ಧಾರೆ ಮುಹೂರ್ತದ ಬಳಿ ಬರುತ್ತಾರೆ.

ಗಂಡು ಮತ್ತು ಹೆಣ್ಣಿನ ಕಡೆಯ ಪೂಜಾ ಸಾಮಗ್ರಿಗಳನ್ನೆಲ್ಲ ಹೊಂದಿಸಿಟ್ಟುಕೊಂಡು ಪುರೋಹಿತರು ಮುಹೂರ್ತದ ಸಮಯದೊಳಗೆ ವಿವಾಹಕ್ಕೆ ಸಂಬಂಧಿಸಿದ ಪೂಜೆ–ಪುನಸ್ಕಾರಗಳನ್ನು ಮಾಡುತ್ತಾರೆ. ಲಗ್ನ ಕಟ್ಟಿಸಿದ ಗಂಟುಗಳನ್ನು ಬಿಚ್ಚಿ ಪೂಜಾ ಸಾಮಗ್ರಿಗಳು ಮತ್ತು 'ವಿವಾಹ ತಾಳಿ'ಯೊಂದಿಗೆ ಇರಿಸುವನು. ವಧು–ವರರನ್ನು ಜೊತೆಗೆ ಕೂರಿಸಿ ಗಂಗೆಯ ಕಲಶ ಪ್ರತಿಷ್ಠಾಪನೆ ಮಾಡಿ ಗಂಗೆ ಪೂಜೆ ಮಾಡಿಸುತ್ತಾನೆ. ಮದುಮಕ್ಕಳಿಗೆ ಅಡ್ಡಲಾಗಿ ಬಿಳಿಯ ಪರದೆಯನ್ನು ಹಿಡಿದಿರುತ್ತಾರೆ. ವಧು–ವರರಿಂದ ಪರಸ್ಪರರ ತಲೆಯ ಮೇಲೆ ಅಕ್ಕಿ ಹಾಕಿಸುವನು. ಮಾಂಗಲ್ಯ ಪೂಜೆ ಮಾಡಿಸಿ ಫಲ ದಾನ ಕೊಡಿಸುತ್ತಾನೆ. ಮದುವೆಗೆ ಆಗಮಿಸಿರುವ ಎಲ್ಲಾ ಬಾಂಧವರಿಂದ ಮಾಂಗಲ್ಯ ಸ್ಪರ್ಶ ಮಾಡಿಸಿದ ನಂತರ ವಧು–ವರರಿಗೆ ಪರಸ್ಪರ ಅರಿಶಿನ ಕಂಕಣ ಕಟ್ಟಿಸಿ ಮಂತ್ರ ಹೇಳಿ ಮಾಂಗಲ್ಯ ಧಾರಣೆಯನ್ನು ಮಾಡಿಸುತ್ತಾನೆ. ಕಟ್ಟಿದ ತಾಳಿಗೆ ಗಂಡು ಅರಿಶಿನ, ಕುಂಕುಮ ಹಚ್ಚಿ ಊದು ಬತ್ತಿ ಬೆಳಗುತ್ತಾನೆ. ಹೆಣ್ಣಿನ ಕಡೆಯವರು ಹೆಣ್ಣನ್ನು ಧಾರೆ ಎರೆದುಕೊಡುವರು. ತದ ನಂತರ ೩ ಬ್ರಹ್ಮಗಂಟು ಹಾಕಿ ಫಲದಾನ, ಸಪ್ತಪದಿ ಮತ್ತು ಆರುಂಧತಿ ದರ್ಶನ ಹಾಗೂ ಪೂಜೆ ಮಾಡಿಸುತ್ತಾನೆ. ನಂತರ ವಿವಾಹ ಮುಹೂರ್ತದಲ್ಲಿ ಭಾಗವಹಿಸಿದ ಸತಿ–ಪತಿಗಳು ಇನ್ನಿತರರು ಹಾಲಿನ ಧಾರೆ ಎರೆದು ಸೇಸೆ ಹಾಕಿ ಆಶೀರ್ವದಿಸುತ್ತಾರೆ. ಇದರೊಂದಿಗೆ ವಿವಾಹ ಮುಕ್ತಾಯವಾಗುತ್ತದೆ.

- **ಮೊಳೆ ಹೊಡೆಯುವ ಶಾಸ್ತ್ರ**

ಇದು ಬುಡಕಟ್ಟುಗಳಲ್ಲಿರುವ ಬಲವಾದ ನಂಬಿಕೆ. ಮೊಳೆ ಬಂಧಿಸಲು ಇರುವ ವಸ್ತು. ವಿವಾಹವಾದ ಸ್ತ್ರೀ ತನ್ನ ಗಂಡನ ಗೃಹಪ್ರವೇಶ ಮಾಡುವ ಶಾಸ್ತ್ರವಾಗಿದೆ. ನವ ವಿವಾಹಿತರು ವಿವಾಹದ ನಂತರದ ವಾಪಸ್ಸಾದಾಗ, ಗಂಡಿನ ಮನೆ ಪ್ರವೇಶವಾಗುವಾಗ ಈ ಶಾಸ್ತ್ರ ವಿಶೇಷವಾದುದಾಗಿದೆ. ಊರಿನ 'ಪುರದೇವತೆ'ಯ ಗುಡಿಯಲ್ಲಿ ಪೂಜೆಯನ್ನು ನೆರವೇರಿಸಿ ಅಲ್ಲಿಂದ ಸರಕಿನ ಕುಕ್ಕೆ, ಕಳಸದೊಂದಿಗೆ ಹೆಣ್ಣಿನ ಕಡೆಯ ಕೆಲವರೊಂದಿಗೆ ಮೆರವಣಿಗೆ ಬರಲಾಗುವುದು. ಗಂಡಿನ ಮನೆ ಬಾಗಿಲ ಬಳಿ ಬಂದಾಗ ಗಂಡು–ಹೆಣ್ಣಿಗೆ ಅರಿಶಿನ ಕೆಂಪು ನೀರಿನ ದೃಷ್ಟಿ ತೆಗೆಯಲಾಗುವುದು. ಮುಖ್ಯ ಬಾಗಿಲ ಹೊಸ್ತಿಲಿಗೆ ಪೂಜೆ ಸಲ್ಲಿಸಿ ಪಂಚಲೋಹದ ಇಲ್ಲವೇ ತಾಮ್ರದ ಬಿಲ್ಲೆಯೊಂದನ್ನು ಹೊಸ್ತಿಲ ಮೇಲಿಟ್ಟು, ನವ ವಧು

[illegible]

ತನ್ನ ಕಾಲಿನ ಹೆಬ್ಬೆರಳು-ತೋರಬೆರಳಿನ ಸಂದಿಯಲ್ಲಿ ಕಾಣುವಂತೆ ಮೆಟ್ಟಬೇಕು. ಒಂದು ಪಂಚಲೋಹದ ಹೊಸ ಮೊಳೆಯನ್ನು ಆ ಬೆರಳುಗಳ ಸಂದಿಯಿಂದ ತೂರಿಸಿ ಬಿಲ್ಲೆಗೆ ತಾಗಿದಾಗ ಒಂದೆರಡು ಸಣ್ಣ ಪೆಟ್ಟು ಮೊಳೆಗೆ ಬಡಿದು ಕಾಲನ್ನು ತೆಗೆಸಿ ಬಿಲ್ಲೆಯನ್ನು ಮೊಳೆಯಿಂದ ಬಂಧಿಸಬೇಕು. ನಂತರ ಅದೇ ಹೊಸ್ತಿಲಿನ ಮೇಲೆ ಒಂದು ಸೇರು ಅಕ್ಕಿಯಿಟ್ಟು ಅದರ ಮೇಲೆ ಎಲೆ, ಅಡಿಕೆ ಇಟ್ಟು ಪೂಜಿಸಿದ ನಂತರ ಮದುಮಗಳು ತನ್ನ ಬಲಗಾಲಿನಿಂದ ಒದ್ದು ಪಡಸಾಲೆ ತುಂಬೆಲ್ಲ ಅಕ್ಕಿ ಚೆಲ್ಲುವಂತೆ ಮಾಡಿ ತಾನು ಮನೆಯೊಳಗೆ ಪ್ರವೇಶಿಸಬೇಕು.

ಇದು ಅಧಿಕೃತ ಪ್ರವೇಶವೆಂದೂ, ಅಕ್ಕಿ ಚೆಲ್ಲುವುದು ಧಾನ್ಯ ಸಮೃದ್ಧಿ ಸಂಕೇತವೆಂದೂ, ಮೊಳೆ ಹೊಡೆಯುವುದು ಸ್ಥಿರ ದಾಂಪತ್ಯದ ಸೂಚನೆಯೆಂದು ತಿಳಿಯಬಹುದಾಗಿದೆ. ವಿವಾಹ ಮುಗಿದ ಒಂಬತ್ತು, ಹದಿನಾರನೇ ದಿನ ಇಲ್ಲವೇ ಮೂರನೇ ತಿಂಗಳು ತುಂಬುತ್ತಲೇ ಪದ್ಧತಿ ಪ್ರಕಾರ ಸೋಬಾನ ಕಾರ್ಯಮಾಡಿಕೊಳ್ಳುತ್ತಾರೆ. ಇದನ್ನೂ ಪುರೋಹಿತರಿಂದ ಕೇಳಿಸಿ ದಿನಾಂಕ ಗೊತ್ತುಪಡಿಸಿಕೊಳ್ಳುವರು. ಇದೊಂದು ಕಾಮತೃಷೆ ಪ್ರಧಾನವಲ್ಲದ ಧಾರ್ಮಿಕ ವಿಧಿಯೆಂದು ಮೇದರು ನಂಬಿದ್ದಾರೆ.

- **ಬಯಕೆ ಶಾಸ್ತ್ರ**

ಇದನ್ನು ಸೀಮಂತೋತ್ಸವ ಎಂದೂ ಕರೆಯುವರು. ಹೆಸರೇ ಸೂಚಿಸುವಂತೆ ಹೆಣ್ಣಿಗೆ ಬಯಕೆ ಶಾಸ್ತ್ರ ಮಾಡಿ, ಅವಳ ಮಡಿಲಿನಲ್ಲಿ ಆರೋಗ್ಯಕರ ಮಗುವಿನ ನಿರೀಕ್ಷೆಯ ಜೊತೆಗೆ ಜನನ ಪ್ರಕ್ರಿಯೆ ಸುಗಮವಾಗಲಿ ಎಂದು ಹಾರೈಸುವ ಶುಭಗಳಿಗೆಯ ಶುಭಸಮಾರಾಂಭ. ಹೆಣ್ಣು ದಾಂಪತ್ಯದೊಂದಿಗೆ ಹೆಣ್ತನ ರುಜುವಾತಿಗೆ ಗರ್ಭವತಿಯಾದಾಗಲೇ ಸಮುದಾಯ ಅಥವಾ ಕುಟುಂಬ ಸಂತೃಪ್ತಿ ಹೊಂದುವುದು. ವಿವಾಹದ ಉದ್ದೇಶಗಳಲ್ಲಿ ಮಕ್ಕಳನ್ನು ಪಡೆಯುವುದು ಅತೀ ಮುಖ್ಯ. ಎಲ್ಲಾ ಪುರುಷಾರ್ಥಗಳ ಮೂಲವೂ ಸ್ತ್ರೀಯೇ ಆಗಿದ್ದಾಳೆ ಎಂಬುದು ಇಲ್ಲಿ ಗಣನೀಯ. ತಂದೆಯಾಗುವ-ತಾಯಿಯಾಗುವ ಬಯಕೆ ಮನುಷ್ಯ ಸಹಜವಾದುದು. ಇದನ್ನೊಂದು ಮೂಲ ಪ್ರವೃತ್ತಿ (Parental Instinct) ಎಂಬುದಾಗಿಯೂ ಮನಃಶಾಸ್ತ್ರಜ್ಞರು ಪರಿಗಣಿಸುತ್ತಾರೆ. ಸಂತಾನದ ಎಳೆಯನ್ನು ಕಡಿಯಬಾರದು (ಪ್ರಜಾತಂತುಂ ಮಾವ್ಯವಚ್ಛೇತ್ಸೀ) ಎಂಬುದು ಉಪನಿಷತ್ತಿನ ಆದೇಶಗಳಲ್ಲೊಂದು.

ಇದು ನಿಸರ್ಗ ಸಿದ್ಧವಾದ ನಿಯಮ ಕೂಡ ಹೌದು. ಸಂತಾನ ಕ್ರಿಯೆ ಜೀವನದ ಮುಖ್ಯ ಲಕ್ಷಣಗಳಲ್ಲಿ ಒಂದು. ಈ ಹಿಂದಿನಂತೆ ಪಿತೃಋಣವನ್ನು ತೀರಿಸಲು ವಿವಾಹವಾಗಿ ಪುತ್ರನನ್ನು ಪಡೆಯುವುದು ಹಿಂದುವಾದವನಿಗೆ ಅನಿವಾರ್ಯವೆಂದು ತಿಳಿಯಲಾಗಿತ್ತು ('ಅಪುತ್ರಸ್ಯ ಗತಿನಾಸ್ತಿ'). ಸಪ್ತಪದಿ ವಿಧಿಯಂತೆ ೫ನೇ ಹೆಜ್ಜೆಯನ್ನಿಟ್ಟು ಮಕ್ಕಳನ್ನು ಪಡೆ (ಪ್ರಜಾಭ್ಯಃ ಪಂಚಪದೀಭವ) ಎಂಬುದಾಗಿದೆ. ವಿವಾಹದ ನಂತರ ಪತಿಯ ಗೃಹ ಪ್ರವೇಶವಾದ ದಿನದಿಂದು ರಾತ್ರಿ ಪತಿ-ಪತ್ನಿಯರು ಕೂಡಿ ಧ್ರುವ ನಕ್ಷತ್ರ ಮತ್ತು ಸಪ್ತ ಋಷಿಮಂಡಲವನ್ನು

ನೋಡುವಾಗ ಪತ್ನಿಯಾದವಳು 'ನನ್ನ ಗಂಡ ಬಹುಕಾಲ ಬಾಳಲಿ, ನನಗೆ ಮಕ್ಕಳಾಗಲಿ' (ಜೀವ ಪತ್ನೀ ಪ್ರಜಾಂ ವಿಂದೇನು) ಎಂದು ಉಚ್ಛರಿಸಿಯೇ ಗಂಡನೊಡನೆ ಮಾತನಾಡಬೇಕೆಂದು ವಿಧಿಸಲಾಗಿದೆ.

ಹೊಸಮನೆಗೆ ಕಾಲಿಟ್ಟಕೂಡಲೇ ವರನು ವಧುವಿನ ಕೈಹಿಡಿದು "ಸುಖವಾಗಿ ಬಾಳು, ಮಕ್ಕಳನ್ನು ಪಡೆ, ಎಚ್ಚರದಿಂದ ಈ ಮನೆಯನ್ನು ಆಳು" ಎಂದು ಹೇಳುತ್ತಾನೆ. ಈ ಮೇಲಿನ ನಂಬಿಕೆಗಳೆಲ್ಲವೂ ಇತ್ತೀಚಿನ ಪುರೋಹಿತರ ಮಧ್ಯಸ್ಥಿಕೆಯಲ್ಲಿ ನಡೆಯುವ ಸಾಮಾನ್ಯ ಎಲ್ಲಾ ಮದುವೆಯಂತೆ, ಮೇದರಲ್ಲಿಯೂ ಈ ಉಕ್ತಿಗಳ ಪಠಣದೊಂದಿಗೆ ವಿವಾಹ ವಿಧಿಗಳಲ್ಲಿ ಈ ಅಂಶಗಳನ್ನು ಉಚ್ಛರಿಸಲಾಗುತ್ತಿದೆ. ಆದರೆ ಪುರೋಹಿತರು ಪ್ರವೇಶಿಸುವ ಮೊದಲು ಮೇದರ ಆಚರಣೆಗಳೆಲ್ಲವೂ 'ಶುದ್ಧ ಬುಡಕಟ್ಟು' ಸಂಪ್ರದಾಯದಂತೆ ನೆರವೇರಿಸಲ್ಪಡುತ್ತದೆ. ಗರ್ಭವತಿಯಾದ ಹೆಣ್ಣು, ತನ್ನ ಗಂಡನ ಮನೆಯಲ್ಲಿರುವಾಗಲೇ ಈ ಸೀಮಂತ ಕಾರ್ಯ ನಡೆಯುತ್ತದೆ. ಸಾಮಾನ್ಯವಾಗಿ ಗರ್ಭಿಣಿ ಏಳು, ಎಂಟು ಮತ್ತು ಒಂಬತ್ತು ತಿಂಗಳು ತುಂಬುವ ಮೊದಲು ಸೀಮಂತ ಕಾರ್ಯಮಾಡುವರು. ಹೆಣ್ಣಿಗೋ ತನ್ನ ಚೊಚ್ಚಲ ಹೆರಿಗೆ ತನ್ನ ತವರೂರಲ್ಲೇ ಆಗಬೇಕೆಂಬ ಹೆಬ್ಬಯಿಕೆ ಇರುತ್ತದೆ. ಈ ಸಮಾರಂಭ ಹೆಣ್ಣಿನ ಜೀವನದ ಪರಿಪೂರ್ಣತೆ ಮತ್ತು ಧನ್ಯತೆಯನ್ನು ಹೊರಹೊಮ್ಮಿಸುತ್ತದೆ.

ಬಯಕೆ ಶಾಸ್ತ್ರದ ದಿನ ಮದುವೆಯ ದಿಬ್ಬಣದಂತೆಯೇ ತವರೂರಿನವರು, ಬಂಧುಗಳು, ಮುತ್ತೈದೆಯರು ಇತರೆ ಪರಿವಾರದೊಂದಿಗೆ ಮಗಳ ಮನೆಗೆ ಬರುತ್ತಾರೆ. ಬಯಕೆ ಶಾಸ್ತ್ರದ ವಿವಿಧ ವಸ್ತುಗಳು, ಪೂಜಾ ಸಾಮಗ್ರಿಗಳು, ರವಿಕೆ, ಸೀರೆ ಸೀಮಂತಕ್ಕಾಗಿ ವಿವಿಧ ಸಿಹಿ ತಿಂಡಿಗಳು ಇತ್ಯಾದಿಗಳನ್ನು ಹೊಂದಿಸಿಕೊಳ್ಳಲಾಗುವುದು. ಮುತ್ತೈದೆಯರಿಗೆಲ್ಲ ಹಸಿರು ಬಳೆ ತೊಡಸಿ, ತಲೆಗೆ ಹರಳೆಣ್ಣೆ ಹಚ್ಚಿ, ಕೆನ್ನೆಗೆ ಅರಿಶಿನ ಬಳಿದು, ಹೂ ಮುಡಿಸಿ ಕಂಕಣ ಕಟ್ಟಲಾಗುತ್ತದೆ. ಗರ್ಭಿಣಿಯನ್ನು ಶೃಂಗರಿಸಿ ಆರತಿಗೆ ಕೂರಿಸುವರು. ಮೊದಲಿಗೆ ತವರಿನವರು ಆರತಿ ಬೆಳಗಿ ಶಾಸಕ್ಕಿ ಇಡುವರು. ಉಡಿ ತುಂಬಿ, ಹೊಸ ಬಟ್ಟೆಯನ್ನು ಉಡುಗೊರೆಯಾಗಿ ನೀಡುವರು. ಸಂದರ್ಭೋಚಿತವಾಗಿ ಸಂಪ್ರದಾಯದ ಹಾಡುಗಳನ್ನು ಹಾಡುವರು.

ಸಂಜೆ ಆರತಿ ಮುಗಿದ ಮೇಲೆ ಸಂಬಂಧಿಕರಿಗೆಲ್ಲ ಸಿಹಿ ಊಟದ ವ್ಯವಸ್ಥೆ ಮಾಡುವರು. ಈ ಊಟದ ಖರ್ಚನ್ನೆಲ್ಲ ತವರಿನವರೇ ನಿಭಾಯಿಸುವರು. ಆನಂತರ ಗರ್ಭಿಣಿ ಸ್ತ್ರೀ ಎಲ್ಲರ ಕಾಲಿಗೆ ಎರಗಿ, ಆಶೀರ್ವಾದ ಪಡೆದು ನಂತರ ಊರಿನ ದೇವತೆ, ಮನೆ ದೇವರು, ಅತ್ತೆ-ಮಾವಂದಿರು ಹಾಗೂ ಹಿರಿಯೆಲ್ಲರ ಆಶೀರ್ವಾದ ಪಡೆದು ಊರಿನವರೊಂದಿಗೆ ತವರಿನವರೊಂದಿಗೆ ಊರಿಗೆ ತೆರಳಲಾಗುತ್ತದೆ. ಗಂಡ ತನ್ನ ಹೆಂಡತಿಯೊಂದಿಗೆ ಪ್ರಯಾಣಿಸದಿರುವ ನಿರ್ಬಂಧವಿದೆ.

"ಸಾಮಾನ್ಯವಾಗಿ ಬಸುರಿಯಾದ ೭ ಅಥವಾ ೯ನೇ ತಿಂಗಳಲ್ಲಿ ಸೀಮಂತದ ಆಚರಣೆ ಮಾಡುತ್ತಾರೆ. ಹುಡುಗಿ ಮೊದಲನೇ ಸಾರಿ ಬಸುರಿಯಾದಾಗ ತಾಯಿ-ತಂದೆಯಿಂದ ಹಣ್ಣು-

ಹೂಗಳನ್ನು ಬಸುರಿಗೆ ಕಳುಹಿಸಿಕೊಡುತ್ತಾರೆ. ಗಂಡನ ಮನೆಯಲ್ಲಿ ಸೀಮಂತದ ಆಚರಣೆ ನಡೆಸುತ್ತಾರೆ. ಸೀಮಂತದ ದಿವಸ ೧೦ ತಟ್ಟೆಗಳಲ್ಲಿ ಹಣ್ಣು, ಹೂ ವಿವಿಧ ತಿಂಡಿಗಳನ್ನು ಅಣಿ ಮಾಡಿಕೊಡುತ್ತಾರೆ. ೨ ತಟ್ಟೆಗಳಲ್ಲಿ ೫ ಬಗೆಯ ಹಣ್ಣುಗಳನ್ನು ತರುತ್ತಾರೆ. ಉಳಿದ ತಟ್ಟೆಗಳಲ್ಲಿ ಸಿಹಿ ಹಾಗೂ ಖಾರದ ತಿಂಡಿಗಳನ್ನು ಸಿದ್ಧಪಡಿಸುತ್ತಾರೆ. ಹಿಂದೆ ಸೀಮಂತಕ್ಕೆ ಲಾಡು, ಅತಿರಸ, ಹೋಳಿಗೆ, ಕಜ್ಜಾಯ, ಎಳ್ಳುಂಡೆ, ಕರ್ಜಿಕಾಯಿ, ಕಡ್ಲೆಉಂಡೆ, ಚಕ್ಕುಲಿ, ಅವಲಕ್ಕಿ, ವಡೆ, ಪುರಿ ಉಂಡೆಗಳನ್ನು ಮಾಡುತ್ತಿದ್ದರು. ಈಗ ಹೆಚ್ಚಾಗಿ ಅಂಗಡಿಯಿಂದ ತರುತ್ತಾರೆ”[೫]

ಸಾಮಾನ್ಯವಾಗಿ ಗರ್ಭಿಣಿ ಬಗ್ಗೆ ವಿಶೇಷ ಕಾಳಜಿ ಮಾಡಲಾಗುತ್ತದೆ. ದಿನನಿತ್ಯ ದೇವರಲ್ಲಿ ಪ್ರಾರ್ಥನೆ ಮಾಡಬೇಕು. ಮನೆದೇವರ ಪೂಜೆ ಮಾಡಬೇಕು. ಗೋಧೂಳಿ ಸಮಯದಲ್ಲಿ ಮನೆಯಿಂದ ಆಚೆ ಬರಬಾರದು, ಕೆಟ್ಟ ಸುದ್ದಿಗಳನ್ನು ಮಾತನಾಡವುದಾಗಲಿ ಅಥವ ಕೇಳುವುದಾಗಲಿ ಇರಬಾರದು. ಏಕಾಂಗಿಯಾಗಿರುವುದಕ್ಕಿಂತ ತಾಯಿ ಇಲ್ಲವೇ ಅಕ್ಕ–ತಂಗಿಯರ ಸಂಗಡ ಮಾತನಾಡಬೇಕು. ಅಮವಾಸ್ಯೆ ಮತ್ತು ಹುಣ್ಣಿಮೆ ದಿನಗಳಲ್ಲಿ ಎಚ್ಚರವಹಿಸಬೇಕೆಂದು ತಿಳಿಸುತ್ತಾರೆ.

- **ಜನನ**

ಹೆರಿಗೆ ಬೇನೆ ಕಾಣಿಸಿಕೊಂಡಾಗ ಮನೆದೇವರಿಗೆ ಮೊದಲು ಪೂಜೆ ಮಾಡಿ ಹೆರಿಗೆ ಸುಖವಾಗಲೆಂದು ಅರಿಕೆ ಮಾಡಿಕೊಳ್ಳುತ್ತಾರೆ. ಮನೆಯ ಹಿರಿಯರ ಕಾಲಿಗೆ ನಮಸ್ಕರಿಸಿ ಆಶೀರ್ವಾದ ಪಡೆಯುತ್ತಾಳೆ. ಆಗ ಧೈರ್ಯದ ಮಾತುಗಳನ್ನಾಡುತ್ತಾರೆ. ಎಂತಹ ಸಂದರ್ಭದಲ್ಲೂ ನಾವಿದ್ದೇವೆ. ಎಲ್ಲವೂ ಸುಸೂತ್ರವಾಗಿ ಮನೆದೇವರು ನಡೆಸಿಕೊಡುತ್ತಾನೆ. ಮನದಲ್ಲಿ ದೇವರನ್ನು ನೆನಪಿಸಿಕೋ ಎನ್ನುವ ಮಾತುಗಳು ಆಗಾಗ ಹೊರಹೊಮ್ಮುತ್ತಿರುತ್ತವೆ. ಕ್ಷಣಕ್ಷಣಕ್ಕೂ ಹೊಟ್ಟೆ ಜಗ್ಗಿದ ಅನುಭವವಾಗುತ್ತಲೇ, ಅನುಭವಸ್ಥ ವಯೋವೃದ್ಧ ಸ್ತ್ರೀಯರನ್ನು ಹೆರಿಗೆ ಮಾಡಿಸುವ ಸೂಲಗಿತ್ತಿಯರನ್ನಾಗಿ ಕರೆಸಿಕೊಳ್ಳುವರು.

ಬಿಳಿ ಅರಿವೆ, ಹರಳೆಣ್ಣೆ, ಕತ್ತಿ, ಚಾಕು ಇತ್ಯಾದಿ ಚಿಕ್ಕಪುಟ್ಟ ವಸ್ತುಗಳನ್ನು ತೆಗೆದಿರಿಸಿಕೊಳ್ಳುವರು. ಜೀರಿಗೆ ಕಷಾಯವನ್ನು ಅನಿಮಾ ರೀತಿ ಕೊಡುವರು. ಮಗುವಿನ ತಲೆಯ ಭಾಗ ಗರ್ಭನಾಳದ ಅಭಿಮುಖವಾಗಿದೆ ಎಂಬುದನ್ನು ಖಾತರಿಪಡಿಸಿಕೊಂಡ ಸೂಲಗಿತ್ತಿಯರು ಹೆರಿಗೆ ಶೇ.೧೦೦ರಷ್ಟು ಸುರಕ್ಷಿತವಾಗುತ್ತದೆ ಎಂದು ತನ್ನೊಂದಿಗಿರುವ ಇತರೆ ಹೆಂಗಸರೊಂದಿಗೆ ಗಟ್ಟಿಯಾಗಿ ಮಾತನಾಡುತ್ತಾರೆ. ಕಾರಣ ಇದು ಗರ್ಭಿಣಿ ಸ್ತ್ರೀಗೆ ಗೊತ್ತಾಗಿ ಮನಸ್ಸು ಹದವಾಗಲಿ ಎಂದು, ಪದೇ ಪದೇ ನೋವನ್ನು ಅನುಭವಿಸಿದ ಗರ್ಭಿಣಿ ನವಜಾತು ಶಿಶುವಿಗೆ ಜನ್ಮ ನೀಡುತ್ತಲೇ ಆ ನೋವಿನಲ್ಲೂ ಅತೀವ ಸಂತಸ ಪಟ್ಟು ಇಡೀ ದೇಹವೇ ಹಗುರವಾದ ಅನುಭವ ಪಟ್ಟುಕೊಳ್ಳುತ್ತಾಳೆ. ಮಗುವಿನ ಹೊಕ್ಕಳು ಬಳ್ಳಿಯನ್ನು ತಾಯಿಯಿಂದ

ಪ್ರತ್ಯೇಕಿಸಿ, ತಾಯಿಯ ಮಾಸು (ಪ್ಲಸೆಂಟಾ) ಹಾಗೂ ಕತ್ತರಿಸಿದ ಹೊಕ್ಕಳು ಬಳ್ಳಿಯನ್ನು ತಂಪಿರುವ ಮರದ ಕೆಳಗೆ ಗುಂಡಿ ತೆಗೆದು, ಮಡಿಕೆಯೊಳಗೆ ಅದನ್ನೆಲ್ಲ ಹಾಕಿ ಅದರ ಬಾಯಿಗೆ ಕಲ್ಲಿನ ತೆಳು ಚಪ್ಪಡಿಯನ್ನಿಟ್ಟು ಯಾವ ಪ್ರಾಣಿಗಳೂ ಮುಟ್ಟದ ಹಾಗೆ ಊಳುತ್ತಾರೆ. ಮಗುವನ್ನು ಶುಚಿಗೊಳಿಸಿದ ನಂತರ ತಟ್ಟೆ ಬಡಿದು ಅಕ್ಕಪಕ್ಕದ ಮನೆಯವರಿಗೆ ಕೇಳುವಂತೆ 'ಸುಖಕರ ಹೆರಿಗೆಯಾಯಿತು' ಎಂದು ಕೂಗುತ್ತಾರೆ. ತಾಯಿಯ ಸೊಂಟಕ್ಕೆ ಬಿಗಿ ಕಟ್ಟುತ್ತಾರೆ. ಸಹಜ ಹೆರಿಗೆ ನಂತರ ಸ್ತ್ರೀಯು ಅಂಗಾತ ಕಾಲಿನ ಮೇಲೆ ಕಾಲು ಇಳೆ ಬಿಟ್ಟು ಮಲಗುವ ವಾಡಿಕೆ ಇದೆ. ಮಗುವಿಗೆ ದೃಷ್ಟಿ ಬೊಟ್ಟಿಗಾಗಿ ಕಾಡಿಗೆ ಹಚ್ಚುತ್ತಾರೆ. ಬಟ್ಟಲಿನಲ್ಲಿ ಜೇನು ಮಿಶ್ರಿತ ಹಾಲನ್ನು ಹತ್ತಿಯಲ್ಲಿ ಅದ್ದಿ ಆಗಾಗ್ಗೆ ಮಗುವಿಗೆ ಹಾಲುಣಿಸುತ್ತಾರೆ. ಮಗುವನ್ನು ಆದಷ್ಟು ಬೆಚ್ಚಗಿಡುತ್ತಾರೆ. ಮಗು ಮಲಗಿರುವಾಗ ತಲೆಯ ಬಳಿ ಅಂಬನ್ನು, ಕಾಲಿನ ಬಳಿ ಪೊರಕೆಯನ್ನು ಇಡುತ್ತಾರೆ. ಮನೆಯ ಮುಂಭಾಗದ ಬಾಗಿಲಿನ ಮೇಲ್ಭಾಗದ ಸೂರಿನಲ್ಲಿ ಕತ್ತಿಯನ್ನು ಸಿಕ್ಕಿಸುತ್ತಾರೆ. ಇದರ ಅರ್ಥ ಯಾವ ದೆವ್ವ, ಭೂತಗಳು ಮನೆ ಪ್ರವೇಶಿಸದಿರಲಿ ಎಂಬ ನಂಬಿಕೆಯಿದೆ.

- **ಬಾಣಂತನ**

ಮೇದರಲ್ಲಿ ಗರ್ಭಿಣಿ, ಹೆರಿಗೆ, ಬಾಣಂತನವೆಂಬುದು ವಿವಾಹದ ನಂತರದ ವಾರ್ಷಿಕ ಆವರ್ತದಂತೆ. ಕುಟುಂಬಕ್ಕೆ ಹೊಸ ಸದಸ್ಯನ ಆಗಮನದ ಖುಷಿಯಲ್ಲಿ ಸದಸ್ಯರೆಲ್ಲರೂ ಒಂದಲ್ಲ ಒಂದು ಚಟುವಟಿಕೆಯಲ್ಲಿ ತಲ್ಲೀನರಾಗಿರುತ್ತಾರೆ. ಬಾಣಂತಿ ಮನೆ ಬೆಳಗ್ಗಿನಿಂದಲೂ ಸಂಜೆವರೆಗೆ ವಿವಿಧ ರೀತಿಯ ಕೆಲಸಕಾರ್ಯಗಳು ನಡೆದೇ ಇರುತ್ತವೆ. ಆಗೊಮ್ಮೆ ಬೀಗರ ಮನೆಯವರು ನಿರ್ದೇಶನ ನೀಡುವವರಾಗಿದ್ದರಂತೂ ಬಾಣಂತನದ ಕಾಳಜಿ ಮತ್ತಷ್ಟೂ ಜಾಸ್ತಿಯೆಂದೇ ಹೇಳಬೇಕು. ಬಾಣಂತನ ಮಾಡುವುದೆಂದರೆ ಅನುಭವವೇ ಬೇಕು. ಆ ಮನೆ 'ಅನುಭವದ ನರ್ಸಿಂಗ್ ಹೋಂ' ಆಗಿರುತ್ತದೆ. ಮಗು ಮತ್ತು ಬಾಣಂತಿಯನ್ನು ವಿವಿಧ ರೀತಿಯಿಂದ ಉಪಚರಿಸುವುದು ಕಾಣುತ್ತೇವೆ.

ಬಾಣಂತಿಗೆ ಬಿಸಿಬಿಸಿ ನೀರಿನ ಸ್ನಾನ ಮಾಡಿಸಿ, ತಲೆಗೂದಲನ್ನು ಲೋಬಾನದ ಹೊಗೆಯಲ್ಲಿ ಒಣಗಿಸಲಾಗುವುದು. ಇನ್ನೊಂದು ದಿನ ಬೆಳ್ಳುಳ್ಳಿ ಸಿಪ್ಪೆ ಹೊಗೆ ಕೊಡಲಾಗುವುದು. ತಲೆಗೆ ಬೆಚ್ಚನೆಯ ಬಟ್ಟೆ, ಕಿವಿಗೆ ಬೆಳ್ಳುಳ್ಳಿ ಚಚ್ಚಿದ ಹತ್ತಿಯನ್ನು ಇಟ್ಟು, ಕಾಲಿಗೆ ಚಪ್ಪಲಿ ಧರಿಸುವರು. ಚಪ್ಪಲಿ ಮನೆಯ ಒಳಗೆ ಧರಿಸಬಾರದೆಂಬ ನಿಷೇಧವಿದ್ದರೂ, ಬಾಣಂತಿ ವಿಚಾರದಲ್ಲಿ ಹೊರತಾಗಿರುತ್ತದೆ. ಬಾಣಂತಿಯ ಆಹಾರ ಮೂರು ದಿನಗಳವರೆಗೆ ಲಘುವಾಗಿರುವುದು. ಸುಲಭದಲ್ಲಿ ಜೀರ್ಣವಾಗುವ ಆಹಾರದ ಜೊತೆಗೆ ಬ್ರೆಡ್ಡು, ಕಾಫಿ, ರವೆಗಂಜಿ, ಉರಿ ಅಕ್ಕಿಗಂಜಿ, ಶ್ಯಾವಿಗೆ ಬಸಿದು ಹಾಲು, ತುಪ್ಪ ಮಿಶ್ರಿಣ ನೀಡುವರು. ಸಾಕಷ್ಟು ಹಾಲು ಕುಡಿಯಲು ಕೊಡುವರು. ತನ್ನ ಮಗುವಿಗೆ ಎತ್ತೇಚ್ಛ ಹಾಲು ನೀಡಲು ಪೌಷ್ಠಿಕ ಯುಕ್ತ ಆಹಾರವನ್ನು

ಕೊಡುವರು. ಕಾಲ ಕಾಲಕ್ಕೆ ಸಮತೋಲಾತ್ಮಕ ಶುಚಿ ಹಾಗೂ ರುಚಿಕಟ್ಟಾದ ಆಹಾರ ನೀಡುವರು. ಚಟ್ನಿಪುಡಿ, ಬೆಳ್ಳುಳ್ಳಿ ಚಟ್ನಿ, ಒಣಕೊಬ್ಬರಿ ಚಟ್ನಿ, ಬೇಳೆಕಟ್ಟು, ಮೆಣಸಿನ ಸಾರು, ಬಿಸಿಬಿಸಿ ಅನ್ನಕ್ಕೆ ತುಪ್ಪ, ಕಾಳು ಮೆಣಸಿನ ಪುಡಿ ಮಿಶ್ರಣ ಮಾಡಿ ನೀಡುವರು.

ದನಿಯ ಮತ್ತು ಕಾಳು ಮೆಣಸನ್ನು ಹೆಚ್ಚಾಗಿ ಬಳಸುವರು. ಬಜೆ ಯಾವಾಗಲು ನೀಡುತ್ತಾರೆ. ಮಲಬದ್ಧತೆ ಸಾಮಾನ್ಯವಾಗಿದ್ದು, ಅದರ ನಿಯಂತ್ರಣವನ್ನು ಆಹಾರದ ಮೂಲಕವೇ ನೀಗಿಸುವರು. ತಾಯಿಯ ಎದೆ ಹಾಲು ಮಗುವಿಗೆ ಸರ್ವಶ್ರೇಷ್ಠವೆಂದು ಭಾವಿಸುತ್ತಾರೆ. ೨ ವರ್ಷಕ್ಕೆ ಕಡಿಮೆಯಿಲ್ಲದಂತೆ ಮಗುವಿಗೆ ಹಾಲನ್ನು ನೀಡುತ್ತಾರೆ. ಮಕ್ಕಳ ಆರೋಗ್ಯಕ್ಕೆ ಎದೆ ಹಾಲೇ ಮದ್ದು ಎಂಬ ತಿಳುವಳಿಕೆ ಬಾಣಂತಿಯರಲ್ಲಿದೆ. ಮಗುವಿಗೆ ೧೫ ದಿನಗಳಿಗೊಮ್ಮೆ ಖಾರ ಹಾಕುತ್ತಾರೆ. ಇದೊಂದು ಲೇಹ. ಜಾಯಿಕಾಯಿ, ಬಜೆ, ಸದಾಪು, ಕರಿತುಳಸಿ, ನಂಜಿನಕೊರಡು, ಕಾಳುಮೆಣಸು ಇವುಗಳನ್ನು ಕಲ್ಲಿನ ಮೇಲೆ ಒಂದನಿ ಹಾಲು ಬಿಟ್ಟು ತೇಯ್ದು ಮಾಡಿದ ಲೇಹವನ್ನು ಒಂದು ಹನಿ ಜೇನುತುಪ್ಪದೊಂದಿಗೆ ಮಗುವಿನ ನಾಲಿಗೆಗೆ ಚೀಪಿಸಬೇಕು. ಇದು ಶೀತವನ್ನು ತಡೆಗಟ್ಟುವುದುರ ಜೊತೆಗೆ ಕಫ, ಅಸ್ತಮ ಬರದಂತೆ ಮುನ್ನೆಚ್ಚರಿಕೆ ವಿಧಾನವಾಗಿದೆ. ಒಂದು ತಿಂಗಳವರೆಗೆ ನಂಜಿನ ಪದಾರ್ಥ ನೀಡುವುದನ್ನು ನಿಯಂತ್ರಿಸುತ್ತಾರೆ. ಹನ್ನೊಂದು ದಿನದ ನಂತರ ಕುರಿಕಾಲಿನ ಸೂಪ್, ಕೋಳಿ, ಮೊಟ್ಟೆ, ನಂಜಲ್ಲದ ಮೀನು ಇತ್ಯಾದಿ ನೀಡುವರು.

ಬಾಣಂತಿ ಕಾದಾರಿದ ನೀರನ್ನೇ ಕುಡಿಯಬೇಕು. ಮನೆಯಿಂದಾಚೆ ಹೋಗಬೇಕಾದಾಗ ಕೈಯಲ್ಲಿ ಅಂಬನ್ನು ಹಿಡಿದುಕೊಂಡು ಹೋಗಬೇಕು. ಮನೆಯ ಹೊರಗಿನಿಂದ ಒಳಗೆ ಬರುವಾಗ ತನ್ನ ಎದೆ ಹಾಲನ್ನು ಗೋಡೆಗೆ ಹಿಂಡಬೇಕು. ಮಗುವಿನ ತಲೆ ಕಾಲುದಸೆಯಲ್ಲಿ ಪೊರಕೆ-ಅಂಬನ್ನು ತಪ್ಪದೇ ಇಡಬೇಕು. ಗಾಳಿ, ಬೆಳಕು ಸರಾಗವಾಗಿರಬೇಕು. ಸೊಳ್ಳೆ, ತಿಗಣೆ, ಚಿಗಟ, ಹುಣ್ಣೆಗಳಿಂದ ರಕ್ಷಿಸುವುದು. ಮಗುವಿನ ಸ್ನಾನದ ನಂತರ ಲೋಬಾನದ ಹೊಗೆಕೊಟ್ಟು ಜೋಳಿಗೆಯಲ್ಲಿ ಮಲಗಿಸುವುದು ಹೀಗೆ ಬಾಣಂತಿ ಮತ್ತು ಮಗುವಿನ ಆರೈಕೆ ನಡೆಯುತ್ತದೆ. ೯ ಅಥವಾ ೧೧ನೇ ದಿನಕ್ಕೆ ಹುಟ್ಟಿನ ಸೂತಕ ತೆಗೆದುಕೊಳ್ಳುತ್ತಾರೆ.

೨.೧.೫ ಮೇದ ಮಹಿಳೆ

ತನ್ನ ಕುಲಕಸುಬಿನ ಜೊತೆಗೆ ಕೃಷಿ ಹಾಗೂ ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿರುವ ಮೇದ ಮಹಿಳೆಯರು ವಿವಿಧ ಸ್ತರಗಳಲ್ಲಿ ತನ್ನ ಪಾತ್ರಗಳನ್ನು ನಿರ್ವಹಿಸುತ್ತಿದ್ದು, ಉತ್ಪಾದನಾ ಚಟುವಟಿಕೆಯಲ್ಲಿ ಪುರುಷರಂತೆ ಸಕ್ರಿಯವಾಗಿರುವುದು ಕಂಡುಬರುತ್ತದೆ. ಸೂರ್ಯೋದಯದಿಂದ ಆರಂಭವಾಗುವ ಗೃಹಕೃತಗಳು, ಕುಲಕಸುಬಿನೊಂದಿಗೆ ಮುಕ್ತವಾಗುತ್ತದೆ. ರಾತ್ರಿ ಬಹಳ ಹೊತ್ತಿನವರೆಗೂ ಮೇದರ ಹಟ್ಟಿಯ ಮಹಿಳೆಯರು ಗುಂಪಾಗಿ ಸೇರಿ ಬಿದಿರಿನ ಕೆಲಸವನ್ನು ನಿರ್ವಹಿಸುವ ಪದ್ಧತಿ ಬಹಳ ಹಿಂದಿನಿಂದಲೂ ರೂಢಿಸಿಕೊಂದು ಬಂದಿದ್ದಾರೆ. ಆರ್ಥಿಕ

ಜೀವನದಲ್ಲಿ ಆಕೆಗೆ ವಿಶಿಷ್ಟವಾದ ಸ್ಥಾನ ನೀಡಲಾಗಿದೆ. ಆದಿವಾಸಿ ಜೀವನದ ಸಮಾನತೆಯ ಅಂಶಗಳು ಸಂಪೂರ್ಣ ಕಣ್ಮರೆಯಾಗಿಲ್ಲ. ಆದಿವಾಸಿ ಮತ್ತು ಕೆಳಜಾತಿಗೆ ಸೇರಿದ ವಿಶಿಷ್ಟ ಜನಸಮುದಾಯಗಳಲ್ಲಿ ಮಾತೃ ಪ್ರಾಧಾನ್ಯತೆ ಇದೆ. ಇಲ್ಲವೆ ಅದು ಸಂಕೇತ ಮಟ್ಟದಲ್ಲಾದರೂ ಇದೆ ಎಂದು ಭಾವಿಸಲಾಗಿದೆ.

ವೈದಿಕ ಪರಂಪರೆಯ ಶಾಪದಿಂದಾಗಿ ಮಡಿ–ಮೈಲಿಗೆಯ ಧಾತುವಿನ ಸ್ಪರ್ಶದಿಂದಾಗಿ ದಲಿತೇತರ ಮಹಿಳಾ ವರ್ಗವು ಕೀಳಾಗಿ ಕಾಣಲ್ಪಟ್ಟಿದೆ. ಆದರೆ ಆದಿವಾಸಿಗರಲ್ಲಿ ಗಣ ವ್ಯವಸ್ಥೆಯ ಕಾಲಘಟ್ಟದಲ್ಲಿ ಪುರಷ–ಸ್ತ್ರೀ ಎಂಬ ಭೇದ–ಭಾವವಿಲ್ಲದೆ, ಸಮಾನತೆಯ ಸಮಾಜವಿದ್ದುದರಿಂದ, ಪುರುಷನಂತೆ ಸ್ತ್ರೀಯು ಸಮುದಾಯದ ಮುಂಚೂಣಿಯಲ್ಲಿ ಇರುತ್ತಿದ್ದಳು. ದುಡಿಮೆಯ ಪ್ರಕ್ರಿಯೆಯು ನಿಯಮಕ್ಕೊಳಪಟ್ಟರಿದ ಕಾಲದಲ್ಲಿ ಸಮಾನತೆ ಸರ್ವೇಸಾಮಾನ್ಯವಾಗಿತ್ತು. ಆದರೆ ದುಡಿಮೆ ಪ್ರಕ್ರಿಯೆ ನಿಯಮಕ್ಕೊಳಪಟ್ಟಿರುವ ಪ್ರಸ್ತುತ ಕಾಲಘಟ್ಟದಲ್ಲಿ ಮೇದಾರಿಕೆಯಲ್ಲಿ ತೊಡಗಿರುವ ಮೇದ ಮಹಿಳೆಯರ ಸ್ಥಾನಮಾನದಲ್ಲಿ ವೈಪರಿತ್ಯಗಳಾಗದಿರುವುದು, ಬಹುಶಃ ಆದಿವಾಸಿ ಸಮಸಮಾಜದ 'ಸಮಾನತೆ' ಕಲ್ಪನೆ ಪ್ರಕಟಿತ ರೂಪ ಪಡೆದಿದೆ ಎಂಬುದು ಸಂಶೋಧನೆಯಿಂದ ದೃಢಪಟ್ಟಿದೆ.

ಮೇದ ಮಹಿಳೆಯರ ಸಾಕ್ಷರತೆ, ಆಸ್ತಿಪಾಲು, ಅಧಿಕಾರ, ನೀತಿ–ನಿರ್ಧಾರ, ಸಾರ್ವತ್ರಿಕವಾಗಿ ಪಾಲ್ಗೊಳ್ಳುವಿಕೆ, ಇತರೆ ಅಂಶಗಳೊಂದಿಗೆ ಇವರ ಸ್ಥಿತಿಗತಿಗಳನ್ನು ಅವಲೋಕಿಸಿ, ವರ್ತಮಾನದ ಸಮಸ್ಯೆ–ಸವಾಲುಗಳಿಗೆ ಯಾವ ರೀತಿಯಾಗಿ ಅವರು ಎದುರಾಗುತ್ತಿದ್ದಾರೆಂಬ ಅಂಶಗಳನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ. ಪುರುಷ ಪ್ರಾಧಾನ್ಯತೆ ಇದ್ದರೂ, ಅದು ಪ್ರಬಲವಾಗಿಲ್ಲದಿರುವುದು ದೃಢಪಟ್ಟಿದೆ. ಮಹಿಳೆಯರಿಗೆ ಕೆಲವು ವಿಷಯಗಳಲ್ಲಿ ನಿರ್ಬಂಧ ಇವೆಯಾದರು, ಹಲವು ಅಂಶಗಳಲ್ಲಿ ಮಹಿಳೆ–ಪುರುಷನ ಸರಿಸಮಾನವಾಗಿರುವುದು ಕಂಡುಬಂದಿದೆ.

ಆಸ್ತಿಹಕ್ಕು, ಪುರುಷಾಳ್ವಿಕೆ ಬಗ್ಗೆ ಮೇದ ಮಹಿಳೆಯರು ಗಂಭೀರವಾಗಿ ಪರಿಗಣಿಸಿಲ್ಲ. ಕೂಡು ಕುಟುಂಬ ಪದ್ಧತಿಯಂತೆ ನೆಮ್ಮದಿ ಜೀವನ, ತೃಪ್ತಿದಾಯಕ ಬದುಕು, ಕುಲಕಸುಬಿನಿಂದ ತಮ್ಮ ಕೈ ಸೇರುವ ಆದಾಯ, ಕುಟುಂಬದ ನಿರ್ಣಾಯಕ ನಿರ್ಧಾರದಲ್ಲಿ ಪಾಲ್ಗೊಳ್ಳುವಿಕೆ, ಪುರುಷ ದರ್ಪವಿಲ್ಲದಿರುವುದು, ವರದಕ್ಷಿಣೆ ಕಿರುಕುಳವಿಲ್ಲದಿರುವುದು, ಕುಟುಂಬದ ಸದಸ್ಯರೊಂದಿಗಿನ ಹೊಂದಾಣಿಕೆಯ ಬದುಕು ಇವೇ ಮುಂತಾದ ಅಂಶಗಳಿಂದ 'ತೃಪ್ತಿದಾಯಕ' ಬದುಕಿನಿಂದ ಮೇದ ಮಹಿಳೆಯರು ಕನಿಷ್ಟ ಆದಾಯದಲ್ಲೇ ಗರಿಷ್ಟ ತೃಪ್ತಿಯನ್ನು ಪಡೆಯುತ್ತಿರುವುದು ಕಂಡುಕೊಳ್ಳಲಾಗಿದೆ. ಸಾಲಬಾದೆ ಉರುಳಾಗದಿರುವುದು ಗ್ರಹಿಸಲಾಗಿದೆ. ನಿಮ್ಮಲ್ಲಿರುವ ಚರ ಮತ್ತು ಸ್ಥಿರ ಆಸ್ತಿಗಳಾವುವು? ಎಂದು ಪ್ರಶ್ನಿಸಿದರೆ ತಮ್ಮ ವೃತ್ತಿಕಸುಬಿನ ಹತಾರಗಳಾದ 'ಕತ್ತಿ–ಕೊರಡು–ಅಂಬು'ಗಳನ್ನು ತೋರಿಸುತ್ತಾರೆ. ಬಹುಶಃ ಈ ಹತಾರಗಳಿಂದಾಗಿ ಮೂಲ ವೃತ್ತಿ ಗಟ್ಟಗೊಳಿಸಿ 'ಸಮಾನತೆಯ ತತ್ವ'ವನ್ನು ಮುಂದುವರಿಸಿದೆ. ಶೇ.೯೦ರಷ್ಟು ಮೇದರು

[illegible]

ಮೇದಾರಿಕೆಯನ್ನು ಇಂದಿಗೂ ಅವಲಂಭಿಸಿರುವ ಕುಟುಂಬಗಳಲ್ಲಿ 'ನಾವು' ಎನ್ನುವ ಭಾವನೆ ಹೆಚ್ಚಿರುವುದು ಗಮನಿಸಲಾಗಿದೆ. ತಳ ಸಮುದಾಯಕ್ಕೆ ರಾಜಕೀಯ ಮೀಸಲಾತಿ ಅನ್ವಯ ಮಹಿಳೆಯರಿಗೆ ಈ ಸೌಲಭ್ಯ ಹೆಚ್ಚಿದ್ದರೂ ಅವರ ಸ್ಥಾನದಲ್ಲಿ ಆಕೆಯ ಗಂಡ, ತಂದೆ, ಸಹೋದರ, ಇತರೆ ಪುರುಷರು ಭಾಗವಹಿಸುತ್ತಿರುವುದು ಕಂಡುಬಂದಿದೆ.

ಮೇದರಲ್ಲೂ ಈ ಪ್ರಕ್ರಿಯೆ ಕಾಣಬಹುದು. ಇದಕ್ಕೆ ಕಾರಣ ಮೇದ ಮಹಿಳೆಯರು ಇನ್ನೂ ರಾಜಕೀಯವಾಗಿ ನುರಿಯದಿರುವುದು, ಸಾಕ್ಷರತಾ ಪ್ರಮಾಣ ಕಡಿಮೆ ಇರುವುದಾಗಿದೆ. ಮೀಸಲಾತಿಯಿಂದ ರಾಜಕೀಯ ಪ್ರತಿನಿಧೀಕರಣ ದೊರೆತರು ಆಡಳಿತಾತ್ಮಕವಾಗಿ ಅನುಭವ ಸಾಲದ್ದರಿಂದ, ರಬ್ಬರ್‌ಸ್ಟ್ಯಾಂಪ್‌ನಂತಾಗಿ ರಾಜಕೀಯ ದಾಳವಾಗುತ್ತಿರುವುದು ಸಮೀಕ್ಷೆಯಿಂದ ಅರಿಯಲಾಗಿದೆ. ಧಾರ್ಮಿಕ ಆಚರಣೆಗಳಲ್ಲಿ ಮೇದ ಸಮುದಾಯದ ಮಹಿಳೆಯರು ಪುರುಷರಂತೆ ಮುಂದಿದ್ದಾರೆ. ಮೈಲಿಗೆ, ಮುಟ್ಟು, ಸೂತಕ ಇತ್ಯಾದಿಗಳನ್ನು ಅರಿತ ಮಹಿಳೆಯರು ಧಾರ್ಮಿಕ ವಿಧಿ-ವಿಧಾನಗಳಿಂದ ಅನತಿ ದೂರದಲ್ಲಿಯೇ ಇರುತ್ತಾರೆ. ದೈವ-ದೇವರುಗಳ ಆಚರಣೆಯಲ್ಲಿ ಪುರುಷರಂತೆ ಸ್ತ್ರೀಯರು ಪಾಲ್ಗೊಳ್ಳುತ್ತಾರೆ. ಅಮವಾಸ್ಯೆ ಪೂಜೆ, ಹಿರಿಯರ ಪೂಜೆ, ಚೌಡಿ ಪೂಜೆ, ದೇವಿರಮ್ಮ ಆರತಿ, ಗಂಗೆ ಪೂಜೆ, ದೇವರ ಉತ್ಸವ ಇತರೆ ಧಾರ್ಮಿಕ ಆಚರಣೆಗಳಲಿ ಸ್ತ್ರೀ-ಪುರುಷರು ಸಮಾನವಾಗಿ ಭಾಗವಹಿಸುತ್ತಾರೆ. ದಿನ-ಕೂಳು, ಶವ ಪೂಜೆ, ಸಮಾಧಿ ಪೂಜೆಗಳಿಗೆ ಸ್ತ್ರೀಯರನ್ನು ನಿರ್ಬಂಧಿಸುವುದಿಲ್ಲ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ವಾಸಿಸುತ್ತಿರುವ ಮೇದ ಮಹಿಳೆಯರ ಸ್ಥಾನಮಾನವನ್ನು ತಿಳಿಯುವ ದೃಷ್ಟಿಯಿಂದ, ಮಹಿಳೆಯರು ತೆಗೆದುಕೊಳ್ಳುವ ನಿರ್ಣಯಗಳನ್ನು ಈ ಕೆಳಕಂಡಂತೆ ಸಮೀಕ್ಷೆಯಿಂದ ಪಡೆಯಲಾಗಿದೆ. ೯೧೫ ಮಹಿಳೆಯರು ಸಮೀಕ್ಷಾ ಅವಧಿಯಲ್ಲಿದ್ದು, ವಿವಾಹವಾಗ ಬಯಸುವ ಹೆಣ್ಣಿನ ಅಭಿಪ್ರಾಯವನ್ನು ಶೇ.೬೨.೫೪ರಷ್ಟು, ಕುಟುಂಬದಲ್ಲಿನ ವಿವಾಹವನ್ನು ಗೊತ್ತುಪಡಿಸುವಲ್ಲಿ ಶೇ.೨೬.೮೫ರಷ್ಟು, ಕುಟುಂಬದ ಚಿರಾಸ್ತಿ ಮತ್ತು ಚರಾಸ್ತಿ ಖರೀದಿಯ ವಿಷಯದಲ್ಲಿ ಶೇ.೨೩.೯೮ರಷ್ಟು, ಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಿ ಶೇ.೨೪.೪೭ರಷ್ಟು, ಸಾಲವನ್ನು ಮಾಡುವಾಗ ಶೇ.೬೬.೩೭ರಷ್ಟು ಉಳಿತಾಯದ ತೀರ್ಮಾನ ತೆಗೆದುಕೊಳ್ಳುವಾಗ ಶೇ.೨೨.೪೮ರಷ್ಟು, ರಾಜಕೀಯ ಪ್ರತಿನಿಧೀಕರಣ ನಿರ್ಣಯಿಸುವಾಗ ಶೇ.೩೨.೯೭ರಷ್ಟು ಹಾಗೂ ಕುಟುಂಬದ ಒಟ್ಟು ತೀರ್ಮಾನ ತೆಗೆದುಕೊಳ್ಳುವಾಗ ಶೇ.೨೧.೩೬ರಷ್ಟು ಮಹಿಳೆಯರು ನಿರ್ಣಯಿಸುತ್ತಾರೆ ಎಂದು ಸಮೀಕ್ಷಾ ವರದಿ ತಿಳಿಸುತ್ತದೆ. ಮೇದ ಬುಡಕಟ್ಟಿನ ಮಹಿಳೆಯರಲ್ಲಿ ಸಾಕಷ್ಟು ನಿರ್ಣಯ ಸ್ವಾತಂತ್ರವಿರುವುದು ಕಂಡುಬಂದು, ಇತ್ತೀಚಿನ ದಿನಗಳಲ್ಲಿ ಬುಡಕಟ್ಟು ಮಹಿಳೆಯರಿಗೆ ರಾಜಕೀಯವಾಗಿ ಪ್ರತಿನಿಧಿಸುವ ಅವಕಾಶ ಕಾನೂನಿನಿಂದ ನೀಡಲ್ಪಟ್ಟಿದ್ದು, ಚುನಾವಣೆಯಲ್ಲಿ ಮಹಿಳೆಯರು ಸ್ಪರ್ಧಿಸಲು ಪುರುಷರು ಸಮ್ಮತಿಸುತ್ತಿರುವುದು ಸಂಶೋಧನೆಯಿಂದ ತಿಳಿದುಬಂದಿದೆ. **(ಹೆಚ್ಚಿನ ಮಾಹಿತಿಗಾಗಿ ಕೋಷ್ಟಕ-೭ನ್ನು ಗಮನಿಸುವುದು)**

[illegible]

೨.೧.೬ ಆಹಾರ ಪದ್ಧತಿ

ಬುಡಕಟ್ಟು ಜನರಲ್ಲಿ ಆಹಾರ ಸಂಗ್ರಹಣೆ ಒಂದು ಬದುಕಿನ ಭಾಗವಾಗಿತ್ತು. ಹಣ್ಣು-ಹಂಪಲು, ಗೆಡ್ಡೆ-ಗೆಣಸು, ಜೇನುತುಪ್ಪ, ಸೀಗೆಕಾಯಿ, ಮುರುಗಿನಹುಳಿ, ಕಲ್ಲುಹೂ, ಮೇಣ, ನೆಲ್ಲಿಕಾಯಿ ಇನ್ನಿತರ ಅರಣ್ಯ ಹುಟ್ಟುವಳಿಗಳನ್ನು ಸಂಗ್ರಹಿಸುವುದು, ಮೀನು ಹಿಡಿಯುವುದು, ಬೇಟೆಯಾಡುವುದು ಮತ್ತು ಬೇಸಾಯ ಅವರ ಮುಖ್ಯ ಕಸುಬುಗಳಾಗಿದ್ದವು. ಮೇದರಲ್ಲೂ ಅನುಚಾನವಾಗಿ ಮೂಡಿಬಂದ ಆಹಾರ ಪದ್ಧತಿಗಳಿದ್ದಾವೆ. ವರ್ಷಕ್ಕೊಮ್ಮೆಯಾದರೂ ಗೆಡ್ಡೆ-ಗೆಣಸು, ಮರಗೆಸ, ನೆಲಗೆಸ, ಮರಗೆಣಸು, ಬೆಣ್ಣೆಗೆಣಸು, ಬೆಲಗಣಸು, ಸಿಹಿಗೆಣಸು, ನುಗ್ಗೆಸೊಪ್ಪು, ಸೀಗೆಸೊಪ್ಪು, ಬೇರಣಬೆ, ಕಲ್ಲಣಬೆ, ಮಾಡಹಾಗಲಕಾಯಿ, ಹಲಸಿನಗುಜ್ಜಿ ಇತ್ಯಾದಿಗಳನ್ನು ತಿನ್ನುವ ರೂಢಿ ಇಟ್ಟುಕೊಂಡಿದ್ದಾರೆ. ಸಸ್ಯಹಾರಕ್ಕಿಂತ ಮಾಂಸಹಾರ ಭೋಜನವೆಂದರೆ ಮೇದರಿಗೆ ಸ್ವಾದಿಷ್ಟ. ಕರ್ನಾಟಕದಾದ್ಯಂತ ವಾಸಿಸುತ್ತಿರುವ ಮೇದರ ಆಹಾರ ಪದ್ಧತಿ ವಿಭಿನ್ನವಾಗಿದೆ. ಆಯಾ ಪ್ರದೇಶದ ಮುಖ್ಯ ಆಹಾರ ಬೆಳೆಗಳಿಗೆ ಅನುಗುಣವಾಗಿದೆ. ಉತ್ತರ ಕರ್ನಾಟಕ, ಮಧ್ಯ ಕರ್ನಾಟಕ, ಹೈದ್ರಾಬಾದ-ಕರ್ನಾಟಕ, ಕರಾವಳಿ ಕರ್ನಾಟಕ, ದಕ್ಷಿಣ ಕರ್ನಾಟಕ ಹೀಗೆ ಕ್ರಮವಾಗಿ ಜೋಳ, ರಾಗಿ, ಅಕ್ಕಿ, ಗೋಧಿ, ನವಣೆ, ಸಜ್ಜೆ ಇತ್ಯಾದಿಗಳನ್ನು ಬಳಸುತ್ತಾರೆ. ಅನೇಕ ರೀತಿಯ ಕಾಯಿಪಲ್ಲೆಗಳನ್ನು ಬಳಸುತ್ತಾರೆ. ಕಾಳು-ಕಡಿಗಳನ್ನು ಉತ್ತರ ಕರ್ನಾಟಕದವರು ಹೆಚ್ಚಾಗಿ ಬಳಸುವರು.

'ವರ್ಷದಲ್ಲಿ ಹಿಂದುಗಳು ಆಚರಿಸುವ ಯುಗಾದಿಯಿಂದ ಶಿವರಾತ್ರಿವರೆಗಿನ ಎಲ್ಲಾ ಹಬ್ಬಗಳನ್ನು ಆಚರಿಸುವರು. ಸಾಮಾನ್ಯವಾಗಿ ಹಬ್ಬದ ಮಾರನೆ ದಿನ ಅಥವಾ ಮಂಗಳವಾರ, ಶುಕ್ರವಾರದಂದು ಕಹಿ ಅಥವಾ ಕರಿ ಮಾಡುತ್ತಾರೆ. ಕರಿಯ ದಿನ ಮಾಂಸದ ವಿಶೇಷ ಅಡಿಗೆ ಮಾಡುತ್ತಾರೆ. ಮಾಂಸ ಆಹಾರದಲ್ಲಿ ಕೆಲವು ಪ್ರಾಣಿಗಳನ್ನು ಮಾತ್ರ ತಿನ್ನುತ್ತಾರೆ. ಕೋಳಿ, ಕುರಿ, ಮೇಕೆ, ಮೀನು, ಮೊಲ, ಜಿಂಕೆ, ಬರ್ಕ, ಕಾಡುಕೋಳಿ, ಆಮೆಯನ್ನು ಪ್ರದೇಶಾನುಸಾರ ತಿನ್ನುತ್ತಾರೆ.[೬] ಚಿಕ್ಕಮಗಳೂರು ಜಿಲ್ಲೆಯ ಮೇದರು ಕುರಿ, ಕೋಳಿ, ಮೀನನ್ನು ಎತ್ತೇಚ್ಛವಾಗಿ ಬಳಸುತ್ತಾರೆ. ವಿಶೇಷ ಮಾಂಸದ ಅಡುಗೆ ಮಾಡುವಾಗ ಹುರುಮಾಂಸ, ಮಸಾಲೆಸಾರು, ಕೈಮಾ, ಬತ್ತಿದ ಮೀನು, ಹುರಿದ ಮೀನು, ಹುರಿದ ಕೋಳಿ, ತುಪ್ಪದ ಅನ್ನ, ಅಕ್ಕಿ ಕಡಬು, ಅಕ್ಕಿ ರೊಟ್ಟಿ, ಚಪಾತಿ, ಬೇಯಿಸಿದ ಮೊಟ್ಟೆ ಇತ್ಯಾದಿಗಳು ಖಾದ್ಯವಾಗಿರುತ್ತವೆ. ಬಳಸದೆ ಹೆಚ್ಚುವರಿ ಮಾಂಸವನ್ನು ಉರುಕಲು ಮಾಡಿ ಮಾರನೆ ದಿನ ಉಪಯೋಗಿಸುತ್ತಾರೆ. ಕುರಿಯ ತಲೆ-ಕಾಲುಗಳನ್ನು ಹಿಂದಿನ ದಿನವೇ ಸುಟ್ಟು, ನೀರು ತಾಗಿಸದೆ ಒಣ ಬಟ್ಟೆಯಲ್ಲಿ ಸುತ್ತಿಟ್ಟಿದ್ದನ್ನು ಉಪಯೋಗಿಸುತ್ತಾರೆ.

ಮಕ್ಕಳಿಗೆ, ವೃದ್ಧರಿಗೆ, ಬಾಣಂತಿಯರಿಗೆ, ಗರ್ಭಿಣಿಯರಿಗೆ ಮಾಂಸದ ವಿಶೇಷ ಭಾಗಗಳನ್ನು ಪ್ರತ್ಯೇಕವಾಗಿ ಹುರಿದು ತಿನ್ನಲು ಕೊಡುತ್ತಾರೆ. ಮಕ್ಕಳಿಗೆ ಇಷ್ಟವಾಗುವ ಕಿವಿಚೊಟ್ಟೆ, ಮಿದುಳು,

[illegible]

ಹೀರಿ, ನೆಣದ ತುಂಡುಗಳನ್ನು ಕೊಡುವರು. ಊಟದ ಸಮಯದಲ್ಲೂ ಆಯ್ದ ಮಾಂಸವನ್ನು ಮಕ್ಕಳಿಗೆ ತಿನ್ನಿಸುವರು. ತರೀಕೆರೆ, ದುರ್ವಿಗೆರೆ, ನರಸಿಂಹರಾಜಪುರದ ಮೇದರಲ್ಲಿ ಪ್ರತಿ ಮಂಗಳವಾರ ಇಲ್ಲವೇ ಅಮವಾಸ್ಯೆಯಂದು ತಾವು ಪೂಜಿಸುವ ಚೌಡಿಗೆ 'ಕೋಳಿಬಲಿ'ಯನ್ನು ನೀಡುವ ವಾಡಿಕೆ ಇದೆ. ಸಾಮೂಹಿಕವಾಗಿ ಚೌಡಿಪೂಜೆ ಮಾಡುವಾಗ 'ಚೌಡಿಪೀಠ' ಇರುವ ಮನೆಯ ಪಡಸಾಲೆಯಲ್ಲೇ ಗಂಡು ಕುರಿ (ಟಗರು) ಕಡಿದು ಬಲಿಕೊಟ್ಟು, ದೇವರು ಆಹಾವನೆಯಾದ ಗಣಮಗ ಆ ಕುರಿಯ ರಕ್ತವನ್ನು ಗಹಗಹಿಸಿ ಕುಡಿಯುತ್ತಾನೆ. ತೃಪ್ತಿಯಾದ ಮೇಲೆ ಕುರಿಗಳನ್ನು ತೆಗೆದುಕೊಂಡು ಹೋಗಲು ಸನ್ನೆ ಮಾಡುತ್ತಾನೆ. ಈ ಕುರಿಯನ್ನು ಹಸಗೆ ಮಾಡಿ ಸಾಮೂಹಿಕ ಮಾಂಸ ಭೋಜನ ಮಾಡುತ್ತಾರೆ. ಸಾಮಾನ್ಯವಾಗಿ ಧರ್ಮಸ್ಥಳ ಮಂಜುನಾಥೇಶ್ವರನ ಒಕ್ಕಲಿನವರು ಸೋಮವಾರದಂದು ಮಾಂಸಹಾರ ಭೋಜನ ಮಾಡುವುದಿಲ್ಲ. ಹಾಗೆಯೇ ಕೆಲವರು ಶನಿವಾರ, ಭಾನುವಾರ ವಾರ ಆಚರಿಸುತ್ತಾರೆ. ಮಲೆನಾಡಿನ ಹೆಂಗಸರು ಮರಗೆಣಸಿನ ಹಪ್ಪಳ, ಮರಗೆಣಿಸಿನ ಸೀಳು, ಸಬ್ಬಕ್ಕಿ ಹಪ್ಪಳ, ಹೋಯ್ಯಪ್ಪ, ಅಕ್ಕಿ ಹಪ್ಪಳ, ಹುರುಳಿ ಹಪ್ಪಳ, ಸಂಡಿಗೆ, ಅಕ್ಕಿ, ಶ್ಯಾವಿಗೆ, ಉಪ್ಪಿನ ನೆಲ್ಲಿ, ಅಪ್ಪೆಮಿಡಿ, ಬಿದಿರಿನ ಕಳಲೆ, ಮಜ್ಜಿಗೆ ಮೆಣಸಿನಕಾಯಿ ಇತ್ಯಾದಿಗಳನ್ನು ತಯಾರಿಸಿ ಉಪಯೋಗಿಸುತ್ತಾರೆ.

ಹಿಂದೆ ಶಿಕಾರಿಗೆ ಹೋದಾಗ ದೊಡ್ಡ ಶಿಕಾರಿ ಜಿಂಕೆ, ಸಾರಂಗ ಕಡವೆಗಳೇನಾದರು ಶಿಕಾರಿಯಾದರೆ ಬಳಸಿ ಉಳಿದ ಹೆಚ್ಚುವರಿ ಎಲುಬಿಲ್ಲದ ಮಾಂಸವನ್ನು ತುಂಡರಿಸಿ, ಒಣಗಿಸಿ ಡಬ್ಬಿಯಲ್ಲಿಟ್ಟುಕೊಳ್ಳುತ್ತಿದ್ದರು. ಹಾಗೆಯೇ 'ಸೀರೆಬೇಟೆ' ಭದ್ರಾ ಹಿನ್ನೀರಿನಲ್ಲಿ ಬೇಸಿಗೆ ಕಾಲದ ಕತ್ತಲಲ್ಲಿ, ನೀರಿನ ಅಂಚಿನಲ್ಲಿ ಸೀರೆಯ ತುದಿಯಲ್ಲಿರುವರು ಬಿಗಿಯಾಗಿ ಹಿಡಿದು ನೀರಿನಲ್ಲಿ ಸೀರೆ ಕೊಯ್ಯುವ ಶಿಕಾರಿ ಮೂಲಕ ಸೊಸಲು (ಸಣ್ಣ) ಮೀನು ಹಿಡಿಯುವರು. ಈ ರೀತಿಯ ಶಿಕಾರಿಯಲ್ಲಿ ನರಸಿಂಹರಾಜಪುರದ ಮೇದರು ನಿಷ್ಣಾತರು.

ಇವರು ಹೆಚ್ಚುವರಿ ಹಿಡಿದ ಮೀನನ್ನು ಒಣಗಿಸಿ ಅಗತ್ಯಕ್ಕನುಗುಣವಾಗಿ ಬಳಸುವರು. 'ಮಳಲಿ ಮೀನು' ಹಿಡಿಯುವುದರಲ್ಲಿ 'ಗೋರಿ' ಅಥವಾ 'ಗೋರು' (ಬಿದಿರಿನ ಅರ್ಧ ತೊಟ್ಟಿಲಾಕಾರದ ಉದ್ದನೆ ಬುಟ್ಟಿ)ಯನ್ನು ತೆಳು ನೀರಿನಲ್ಲಿ ಹರಡಿ ಅದರೊಳಗೆ 'ಕುನ್ನಿಸೊಪ್ಪ'ನ್ನು ಹಾಕಿ ಗೋರಿಯ ಬಾಯಿಗೆ ಎದುರು ಭಾಗದಲ್ಲಿ ಅಡ್ಡ ಉದ್ದನೆಯ ಹಲಗೆಗಳನ್ನಿಟ್ಟು ನೀರಿನೊಳಗಿಂದ ಸಣ್ಣ ತಡಿಕೆಗಳಿಂದ ನೀರನ್ನು ಕೊಚ್ಚುವ ಮೂಲಕ ಈ ಮೀನುಗಳನ್ನು ಹಿಡಿಯುವ ಮೇದರ ಬೇಟೆ ಸಂಸ್ಕೃತಿ ಅನನ್ಯವಾದುದು. ಈ ಮೀನಿನ ಖಾದ್ಯ ಅಪರಿಮಿತ ರುಚಿ ಎಂದು ತಿಳಿಸುತ್ತಾರೆ. ಬೀಡುಬಲೆ, ಗೋರುಬಲೆಯಿಂದ ಕೆರೆ, ಭದ್ರಾ ಹಿನ್ನೀರಿನ ಗುಂಡಿಗೆಗಳಲ್ಲಿ ಮೀನು ಶಿಕಾರಿ ಮಾಡುತ್ತಾರೆ. ಸಾಮಾನ್ಯವಾಗಿ ದುರ್ವಿಗೆರೆ, ತರೀಕೆರೆ, ನರಸಿಂಹರಾಜಪುರ, ದಾನವಾಡಿ, ಲಿಂಗಾಪುರ, ಆಲ್ದೂರು, ತಿಪ್ಪೇಘಟ್ಟ, ಅಜ್ಜಂಪುರ, ಕೊಂಡಬಾಗಿಲುಗಳಲ್ಲಿ ವಾಸವಿರುವ ಮೇದರು ಕಾಡು ಮೊಲ ಶಿಕಾರಿಯಲ್ಲಿ ಸಿದ್ಧ ಹಸ್ತರು.

‘ಸೋಬೇಟೆ’ ಮಾಡುವಾಗ ೬,೮,೧೦ ಹೂಡಿನ ಸೆಣಬಿನ ಬಲೆಯಿಂದ ಮೊಲಗಳನ್ನು ಹಿಡಿದು ಮಾಂಸ ಹಂಚಿಕೊಂಡು ಅಡಿಗೆ ತಯಾರಿಸಿ ಊಟಮಾಡುವ ಸಂಸ್ಕೃತಿ ಮೇದರಲ್ಲಿದೆ. ಇತ್ತೀಚಿನ ದಿನಗಳಲ್ಲಿ ಈ ಬೇಟೆಯನ್ನು ಕಡಿಮೆ ಮಾಡಿದ್ದಾರೆ. ಇದು ಹಗಲು ವೇಳೆ ನಡೆಸುವ ಶಿಕಾರಿಯಾದರೆ, ರಾತ್ರಿ ವೇಳೆಯಲ್ಲಿ ಅಂತಹದೇ ೪,೬,೮ ಹೂಡಿನ ಸೆಣಬಿನ ಬಲೆಯನ್ನು ಕೂಡು ರಸ್ತೆಯಲ್ಲಿ ಬಿಟ್ಟು ಆ ಬಲೆಯ ತುದಿಗೆ ಗಿಲಿಕಿ ಅಥವ ಡಬ್ಬದೊಳಗೆ ಸಣ್ಣ ಕಲ್ಲುಗಳನ್ನು ಇಳಿಬಿಟ್ಟು ಮರಸಿನೊಳಗೆ ಸದ್ದು ಮಾಡದೆ ಕುಳಿತುಕೊಳ್ಳುತ್ತಾರೆ. ಮೊಲ ಬಲೆಯೊಳಗೆ ಬಿದ್ದ ಕೂಡಲೇ ಗಿಲಿಕಿ ಸದ್ದು ಮಾಡಿದಾಗ ತಕ್ಷಣವೇ ಮೊಲವನ್ನು ಹಿಡಿದುಕೊಳ್ಳಲಾಗುತ್ತದೆ. ಈ ಶಿಕಾರಿಯನ್ನು ಮಾಡುತ್ತಿದ್ದವರು ‘ಆದ್ರೆ ಶಿಕಾರಿ, ಇಲ್ಲ ಬಿಕಾರಿ’ ಎಂದು ಹೇಳುತ್ತಿರುತ್ತಾರೆ. ಹಿರಿಕಿರಿಯರೆಲ್ಲರೂ ‘ಸೋಬೇಟೆ’ಗೆ ಹೋಗುವುದರಿಂದ ಕಿರಿಯ ತಲೆಮಾರಿನವರಿಗೂ ‘ಬೇಟೆ ಸಂಸ್ಕೃತಿ’ ಪರಿಚಯವಾಗುತ್ತಿತ್ತು. ಮೊಲದ ಸಾರಿಗೆ ಅಕ್ಕಿಕಡುಬು ಅಥವ ಅಕ್ಕಿರೊಟ್ಟಿ ಹೊಂದಾಣಿಕೆಯಾಗುತ್ತದೆಂದು ನರಸಿಂಹರಾಜಪುರದ ಹಿರಿಯರಾದ ಈರಪ್ಪನವರು ಅಭಿಪ್ರಾಯಿಸುತ್ತಾರೆ. ಇತ್ತೀಚೆಗೆ ‘ತಂತಿಬಲೆ’ಯೊಂದಿಗೆ ಮೊಲ ಶಿಕಾರಿ ಮಾಡುತ್ತಾರೆ. **(ಮೇದರ ಶಿಕಾರಿ ಛಾಯಾಚಿತ್ರಗಳನ್ನು ಅಳವಡಿಸಲಾಗಿದೆ)**

೨.೧.೭ ಆರೋಗ್ಯ

ಮೇದರು ತಮಗೆ ಬರುವ ರೋಗ-ರುಜಿನಗಳಿಗೆ ಸ್ವತಃ ತಾವೇ ವೈದ್ಯೋಪಚಾರಗಳನ್ನು ಮಾಡಿಕೊಳ್ಳುತ್ತಿದ್ದರು. ಕಾಡಿನೊಂದಿಗೆ ಅನನ್ಯ ಸಂಬಂಧವಿದ್ದ ಇವರು ನೈಸರ್ಗಿಕವಾಗಿ ಆರೋಗ್ಯವಂತರಾಗಿದ್ದಿರಬಹುದು. ಇಂದಿಗೂ ಹಿರಿಯ ತಲೆಮಾರಿನ ಮೇದರು ತಮ್ಮ ಹಿರಿಯರು ಯಾವ್ಯಾವ ರೋಗಕ್ಕೆ ಯಾವ ರೀತಿಯ ವನಸ್ಪತಿಗಳನ್ನು ಬಳಸುತ್ತಿದ್ದರು, ವೈದ್ಯೋಪಚಾರದ ರೀತಿ ಹೇಗಿತ್ತು ಮುಂತಾಗಿ ತಿಳಿಸುತ್ತಾರೆ. ಇತ್ತೀಚೆಗೆ ಅವರ ವೈದ್ಯಪದ್ಧತಿ ನೇಪತ್ಯಕ್ಕೆ ಸರಿದಿದೆ. ಆಧುನಿಕ ಔಷದಾಲಯಗಳು, ಚಿಕಿತ್ಸೆಗಳಿಗೆ ಮಾರು ಹೋಗುತ್ತಿದ್ದಾರೆ. ಕಾಡಿನಂಚಿನ ಗ್ರಾಮಗಳಲ್ಲಿ ವಾಸಿಸುತ್ತಿರುವ ಮೇದರು ಹಳ್ಳ, ತೊರೆಗಳಲ್ಲಿ ಸದಾ ನೀರಿನ ಸೌಲಭ್ಯವಿರುವುದರಿಂದ ಶೌಚ್ಯಕ್ಕೆ ನೈಸರ್ಗಿಕವಾಗಿ ಬಯಲನ್ನೇ ಆಶ್ರಯಿಸಿರುತ್ತಾರೆ.

ಇನ್ನು ಊರು ಅಥವಾ ಊರಿನ ಹತ್ತಿರದಲ್ಲಿ ವಾಸಿಸುವ ಮೇದರು ಆಧುನಿಕ ಮನೆಗಳನ್ನು ನಿರ್ಮಿಸಿಕೊಂಡಿರುವವರು. ಸರ್ಕಾರದಿಂದ ನೀಡಿರುವ ಶೌಚಾಲಯಗಳ ಸೌಲಭ್ಯಗಳನ್ನು ಪಡೆದು ಉಪಯೋಗಿಸುತ್ತಿರುವುದರಿಂದ ರೋಗ-ರುಜಿನಗಳು ತೀರ ಕಡಿಮೆಯೆಂದು ತಿಳಿದುಬಂದಿದೆ. ಆದರೆ ಸ್ನಾನಗೃಹದ ನೀರು, ಮತ್ತು ಕೆಲವೊಮ್ಮೆ ಸ್ನಾನಗೃದಲ್ಲಿಯೇ ಮೂತ್ರ ವಿಸರ್ಜಿಸಿದ ಬಚ್ಚಲು ನೀರೆಲ್ಲ ಮನೆಯ ಮುಂಭಾಗದ ತೆರೆದ ಚರಂಡಿಗೆ ಶೇಖರಣೆಯಾಗಿ ಅದು ಸರಿಯಾಗಿ ಹರಿಯದೆ ಗುಂಪು ಮನೆಗಳಲ್ಲಿ ವಾಸಿಸುವ ಮೇದರು ಈ ಕಾರಣಕ್ಕಾಗಿ ಪರಸ್ಪರ ಶಪಿಸಿಕೊಳ್ಳುತ್ತಿರುತ್ತಾರೆ, ಇದು ನೊಣ, ಸೊಳ್ಳೆ, ನುಸಿಗಳ ಬೆಳವಣಿಗೆಗೆ

ಆವಾಸಸ್ಥಾನವಾಗುತ್ತಿದ್ದು, ಇದರಿಂದ ಮಲೇರಿಯಾ, ಕಾಲರಾ ರೋಗಗಳು ಹರಡುವ ಭೀತಿ ಕಂಡುಕೊಳ್ಳಲಾಯಿತು. ಕ್ಷೇತ್ರಕಾರ್ಯದ ಸಮೀಕ್ಷೆ ಪ್ರಕಾರ ಇಂದು ಮೇದರಲ್ಲಿ ಹೆರಿಗೆಯಲ್ಲಿ ಮಕ್ಕಳು ಸಾಯುವ ಪ್ರಮಾಣ ಕಡಿಮೆಯಾಗಿದೆ. ಆದಗ್ಯೂ ಹಿಂದಿನ ಪದ್ಧತಿಯಂತೆ ಮನೆಯಲ್ಲಿಯೇ ಹೆರಿಗೆ ಮಾಡಿಸಿಕೊಳ್ಳುವುದು ಶೇ.೧೦ರಷ್ಟು ಇದ್ದು, ಶೇ.೯೦ರಷ್ಟು ಭಾಗ ಹೆರಿಗೆಗಳು ಆಸ್ಪತ್ರೆಗಳಲ್ಲಿ ನಡೆಸಲಾಗುತ್ತಿದೆ. ಇದರಿಂದ ಬಾಣಂತಿ ಮತ್ತು ಮಗುವಿನ ಆರೋಗ್ಯ ಹೆಚ್ಚಿದ್ದು, ಸಾವಿನ ಪ್ರಮಾಣ ತಗ್ಗಿದೆ. ಮಕ್ಕಳ ಮತ್ತು ವೃದ್ಧರ ವಯೋಮಾನದ ಜನಸಂಖ್ಯೆ ಪ್ರಮಾಣ (೦–೪ ಮತ್ತು ೬೦ ವರ್ಷ ಮೇಲ್ಪಟ್ಟವರ)ವನ್ನು ನೋಡಿದಾಗ ಮರಣ ಪ್ರಮಾಣ ಕಡಿಮೆಯಾಗಿ, ಜೀವನಾವಧಿಯೂ ವಿಸ್ತರಿಸುವುದು ಕಂಡುಬಂದಿದೆ.

ಹಿರಿಯರು ೭೦ ವರ್ಷ ಮೇಲ್ಪಟ್ಟೇ ಬಾಳುತ್ತಾರೆ. ಮೇದರು ಕುಡಿತ, ಬೀಡಿ ಸೇದುವುದು, ತಂಬಾಕು ಸೇವನೆ ಇತ್ಯಾದಿ ಚಟಗಳನ್ನು ಅಂಟಿಸಿಕೊಂಡಿದ್ದರೂ, ರೋಗಾವಸ್ಥೆಗೆ ಬರುವಷ್ಟು ಮಟ್ಟಕ್ಕೆ ಇವುಗಳ ಸೇವನೆ ಮಾಡುವುದಿಲ್ಲ. ಆದರೆ ಇತ್ತೀಚಿನ ಯುವಜನಾಂಗ ಸ್ಟಾರ್, ವಿಮಲ್, ಮಧು, ಕುಡಿತದಂತಹ ದುಶ್ಚಟಗಳನ್ನು ಅಂಟಿಸಿಕೊಂಡಿರುವುದು ಸಮೀಕ್ಷೆಯಿಂದ ತಿಳಿದು ಬಂತು. ಯುವಕರಲ್ಲಿ ಬೀಡಿ–ಸಿಗರೇಟು ಸೇವನೆ ಅಷ್ಟಾಗಿ ಕಂಡಬರದಿದ್ದರೂ, ದೈಹಿಕ ಶ್ರಮವಹಿಸುವ ಯುವಕರು ಹಾಗೂ ಮಧ್ಯವಯಸ್ಕರು ಮಿತಕುಡುಕರಾಗಿರುವುದನ್ನು ಮುಕ್ತವಾಗಿ ಒಪ್ಪಿಕೊಳ್ಳುತ್ತಾರೆ.

ದುಡಿದು ದುಡಿದು ಬಸವಳಿದ ಮೇದರು ದೈಹಿಕವಾಗಿ ಕೃಶರಾದವರಂತೆ ಕಾಣುತ್ತಾರೆ. ನಿಸ್ತೇಜ ಕಣ್ಣುಗಳು, ರಕ್ತಹೀನತೆಯಿಂದ ಪುರುಷ ಹಾಗೂ ಸ್ತ್ರೀಯರು ಬಳಸುತ್ತಿದ್ದಾರೆ. ಮಹಿಳೆಯರಲ್ಲಿ ಗರ್ಭಕೋಶದ ನಾನಾ ತೊಂದರೆಗಳು, ಬಿಳಿಸೆರಗು, ರಕ್ತ ಹೋಗುವ ಕಾಯಿಲೆಗಳ ಬಗ್ಗೆ ತುಂಬಾ ಸಂಕೋಚದಿಂದಲೇ ತಿಳಿಸುತ್ತಾರೆ. ಏಡ್ಸ್ ಮತ್ತು ಇತರೆ ಗುಹ್ಯರೋಗಗಳನ್ನು ಹೊಂದಿರುವವರು ಒಬ್ಬರೂ ಸಮೀಕ್ಷೆಯಿಂದ ದೊರೆತಿಲ್ಲ. ಕಜ್ಜಿ, ಇಸುಬು, ಹುಳುಕಡ್ಡಿಯಂತಹ ಚರ್ಮರೋಗಗಳೂ ಹಿಂದೆ ಇದ್ದವೆಂದೂ, ಈಗ ಅವೆಲ್ಲ ಇಲ್ಲ ಎನ್ನುತ್ತಾರೆ. ಕಾರಣ ಕೇಳಿದಾಗ ನೀರಿನ ಲಭ್ಯತೆ ಚೆನ್ನಾಗಿದ್ದು ವಾರದಲ್ಲಿ ೪ ದಿನ ಸ್ನಾನ, ಶುಭ್ರಬಟ್ಟೆ, ಉತ್ತಮ ಆಹಾರ ಸೇವಿಸುವುದಾಗಿ ತಿಳಿಸುತ್ತಾರೆ. ತಮ್ಮ ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುತ್ತಾರೆ. ಪ್ರತಿ ಸೋಮವಾರದಂದು ಗೋಮಯದಿಂದ ಸಾರಿಸಿ ರಂಗೋಲಿ ಬಿಟ್ಟು ಅಂಗಳ ಕಂಗೊಳಿಸುವಂತೆ ಮಾಡುತ್ತಾರೆ.ಹಬ್ಬ–ಹರಿದಿನಗಳಲ್ಲಿ ಶುಭ್ರತೆ–ಸ್ವಚ್ಛತೆಗೆ ಎಲ್ಲಿಲ್ಲದ ಮಹತ್ವ ನೀಡುತ್ತಾರೆ.

ಮೇದರ ನಾಟಿವೈದ್ಯ, ಮನೆವೈದ್ಯ ಮತ್ತು ಅಲ್ಪಸ್ವಲ್ಪ ಗೊತ್ತಿರುವ ವೈದ್ಯಪದ್ಧತಿ ಸಮೀಕ್ಷೆಯಿಂದ ತಿಳಿಯಲಾಯಿತು. ಬಾಯಿಹಲ್ಲಿನ ಹುಳುಕು, ನಾಯಿ ಕಡಿತ, ಸುಟ್ಟುಗಾಯ, ಶೀತ, ನೆಗಡಿ, ಹೊಟ್ಟೆನೋವು, ಬಟ್ಟೆ ಜಾರುವುದು, ಹೊಟ್ಟೆಹುಳು, ಗಾಯ, ಇಸುಬು, ಕೈಕಾಲು

[illegible]

ಉರಿ, ಕೈಕಾಲು ಮುರಿತ, ಕಜ್ಜಿ, ಸರ್ಪಸುತ್ತು, ಹೊಟ್ಟೆಗೆ ಮದ್ದು ಹಾಕಿದ್ದರೆ, ಹಾವು ಕಡಿತ, ಹೆಣ್ಣು ಮಕ್ಕಳ ಬಿಳಿಸೆರಗು, ಕಿವಿ ಸೋರುವುದು, ಸಕ್ಕರೆಕಾಯಿಲೆ, ಜ್ವರ, ಎದೆನೋವು, ಕಫಾ, ಪಾರ್ಶ್ವವಾಯು ಇತ್ಯಾದಿ ಚಿಕ್ಕಪುಟ್ಟ ಕಾಯಿಲೆಗಳಿಗೆ ಗಿಡಮೂಲಿಕೆ ಔಷದೋಪಚಾರ ಮಾಡುತ್ತಾರೆ. ಕೈಗೆ ಸಿಕ್ಕ ಎಲೆ, ಗಿಡ, ಚಿಗುರು, ತೊಗಟೆ, ಕಾಂಡ, ಬೇರು, ಹಾಲು, ರಸ ಇತ್ಯಾದಿ ಪ್ರಕೃತಿಯಲ್ಲಿ ಸಿಗುವ ವಸ್ತುಗಳನ್ನು ಬಳಸುತ್ತಾರೆ.

ಇದಲ್ಲದೆ ಗುಲಗಂಜಿ, ಬಿಳಿಎಕ್ಕಾ, ಉತ್ತರಾಣಿ, ಹೊಂಗೆ, ಲೋಳೆಸರ, ಬಿಳಿದಾಸವಾಳ, ಕಣಗಲೆ, ಅಶ್ವಥ, ಗರಿಕೆ, ಆಡುಮುಟ್ಟದ ಗಿಡ, ಮೆಣಸು, ಜೀರಿಗೆ, ಲವಂಗ, ಜಾಜಿಕಾಯಿ, ಕಾಡುಜೀರಿಗೆ, ಜೀರಿ ಮೆಣಸು, ಶುಂಠಿ, ಅರಿಶಿನ, ಜಾಪತ್ರೆ, ಬೇವಿನಸೊಪ್ಪು, ತುಂಬೆ, ನಂದಬಟ್ಟಲು, ಸಾಗವಾನಿ ಎಲೆ, ಬಜೆ ಇತ್ಯಾದಿಗಳನ್ನು ಬಳಸಿ ವಿವಿಧ ರೋಗ-ರುಜಿನಗಳಿಗೆ ಔಷದೋಪಚಾರ ಮಾಡಿ ಶಮನಗೊಳಿಸುವ ಮನೆ ಮದ್ದು ಹಿರಿಯರಿಂದ ಬಳವಳಿಯಾಗಿ ಬಂದಿರುವುದನ್ನು ಮೇದರು ತಿಳಿಸುತ್ತಾರೆ.

ಮಕ್ಕಳಿಗೆ ಕಾಲು ಧೂಳು ಆಗಿದೆಯೆಂದು ಸಾಸಿವೆ, ಉಪ್ಪು ಪೊರಕೆಯ ಒಂದು ಎಸಳನ್ನು ನೀವಾಳಿಸುವುದು, ಹೊಟ್ಟೆ ನೋವಿಗೆ ರಂಚು ಹಾಕುವುದು (ಹಿತ್ತಾಳೆ ಕಟ್ಟೆಯಲ್ಲಿ ಗೋವಿನ ಸಗಣಿಯನ್ನು ಕಲಸಿ, ಹಿತ್ತಾಳೆ ಲೋಟದಲ್ಲಿ ಜಗಮಗಿಸುವ ಕೆಂಡವನ್ನು ಹಾಕಿ, ರೋಗಿಯ ತಲೆಯಿಂದ ಕಾಲಿನವರೆಗೆ ಮೂರು ಬಾರಿ ನಿವಾಳಿಸಿ, ತಟ್ಟೆಯಲ್ಲಿ ಬೋರಲಾಗಿ ಹಾಕಿದಾಗ ತಟ್ಟೆಲೋಟ ಒಂದಕ್ಕೊಂದು ಬಿಗಿಯಾದಷ್ಟೂ ಹೊಟ್ಟೆನೋವು ಬೇಗ ಹೋಗುತ್ತದೆ ಎಂದು ತಿಳಿದು, ರಂಚುಹಾಕಿದ ಮಹಿಳೆ ತನ್ನ ಎಡಗಾಲಿನ ಹೆಬ್ಬೆರಳಿನಿಂದ ತಟ್ಟೆಯಲ್ಲಿರುವ ಸಗಣಿ ನೀರನ್ನು ರೋಗಿಯ ಹೊಟ್ಟೆಗೆ ತಾಗಿಸುತ್ತಾರೆ.) ಜ್ವರ ಬಂದು, ವಿಪರೀತ ಹಟ ಮಾಡುತ್ತಿದ್ದರೆ ಸುಡಿಕೆ ಹಾಕುವುದು (ಹಣತೆಯ ಜ್ವಾಲೆಯಲ್ಲಿ ಕರಿಬಳೆಚೂರಿನ ತುದಿಯನ್ನು ಸುಟ್ಟು ಹಣೆಯ ಪಕ್ಕ ಕುತ್ತಿಗೆಯ ಹಿಂಭಾಗ, ಅಂಗೈ ಮತ್ತು ಪಾದವನ್ನು ಚುಟುಕಾಗಿ ಸುಡುವುದಾಗಿದೆ) ಗೆಡ್ಡೆ-ಗೆಣಸು, ಕಾಡು ಪ್ರಾಣಿಯ ಮಾಂಸ, ಮೀನು, ಕುರಿ, ಕೋಳಿ, ಮೊಟ್ಟೆ ಇತ್ಯಾದಿಗಳನ್ನು ಎತ್ತೇಚ್ಛವಾಗಿ ಬಳಸುತ್ತಾರೆ ಹಾಗೂ ಇವುಗಳ ಸೇವನೆಯಿಂದ ಆರೋಗ್ಯ ವರ್ಧಿಸುತ್ತದೆಂದು ತಿಳಿಸುತ್ತಾರೆ.

೨.೧.೮ ಶಿಕ್ಷಣ ಹಾಗೂ ಸಾಮಾಜಿಕ ಅಂತಸ್ತು

ಭಾರತೀಯ ಆದಿವಾಸಿಗಳಲ್ಲಿ ಶೇ.೮೦ಕ್ಕೂ ಅಧಿಕ ಮಂದಿ ಅನಕ್ಷರಸ್ಥರಾಗಿದ್ದಾರೆ. ಒಂದೊಂದು ಪಂಗಡವೂ ತನ್ನದೆ ಆದ ಆಡುಭಾಷೆಯನ್ನು ಹೊಂದಿದ್ದು, ಇತರೆ ಭಾಷೆಗಳನ್ನು ಅರಿಯದೇ ಇರುವ ಸ್ಥಿತಿಯೂ ಕೆಲವು ಸಮಸ್ಯೆಗಳಿಗೆ ಕಾರಣವಾಗಿದೆ. ಆದಿವಾಸಿಗಳ ಆಡುಭಾಷೆಗೆ ಲಿಪಿ ಇಲ್ಲದೇ ಇರುವುದರಿಂದ ಮತ್ತು ಇಂತಹ ಆಡುವ ಭಾಷೆಗಳ ಸಂಖ್ಯೆ ಹೆಚ್ಚಿರುವುದರಿಂದ ಅವರ ಶೈಕ್ಷಣಿಕ ಸ್ಥಿತಿಯನ್ನು ಸುಧಾರಿಸುವಲ್ಲಿ ಭಾರಿ ಅಡಚಣೆ ಉಂಟಾಗಿದೆ.

ಶಿಕ್ಷಣವು ಸಮಾಜದ ಮೂಲಭೂತ ಚಟುವಟಿಕೆಗಳಲ್ಲಿ ಪ್ರಮುಖವಾಗಿದೆ. ಶಿಕ್ಷಣವು ವ್ಯಕ್ತಿಯ, ವ್ಯಕ್ತಿತ್ವದ ಸಂವರ್ಧನೆಗೆ ಎಷ್ಟು ಅವಶ್ಯಕವೋ, ಸಮಾಜದ ಸ್ಥಿರತೆಗೆ, ಭದ್ರತೆಗೆ, ಐಕ್ಯಮತ್ಯದ ಸ್ಥಾಪನೆಗೆ ಅಷ್ಟೇ ಅಗತ್ಯವಾದುದು. ಈ ಅಂಶವನ್ನು ಗಮನಿಸಿದಾಗ ಮೇದ ಸಮುದಾಯದ ಇತ್ತೀಚಿನ ನೆಲೆಗೊಂಡ ಬದುಕಿನಲ್ಲಿ ಶಿಕ್ಷಣದ ಪ್ರಭಾವ ಹೆಚ್ಚುತ್ತಿರುವುದು ಕಾಣಬಹುದಾಗಿದೆ. ಕರ್ನಾಟಕ ರಾಜ್ಯದಲ್ಲಿರುವ ಮೇದರ ಸಾಕ್ಷರತೆ ಪ್ರಮಾಣ ೬೬.೨೬% ಇದರಲ್ಲಿ ೬೧.೭೨% ಜನರು ನಗರಗಳಲ್ಲಿದ್ದಾರೆ. ನನ್ನ ಅಧ್ಯಯನ ಕ್ಷೇತ್ರವಾದ ಚಿಕ್ಕಮಗಳೂರು ಜಿಲ್ಲೆಯಲ್ಲಿ ನೆಲೆಗೊಂಡಿರುವ ಮೇದರನ್ನು ಅಧ್ಯಯನಕ್ಕೊಳಪಡಿಸಿದಾಗ ಈ ಕೆಳಗಿನ ಅಂಶಗಳು ತಿಳಿದುಬಂದವು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ವಾಸಿಸುತ್ತಿರುವ ಒಟ್ಟು ಮೇದರ ಸರಾಸರಿ ಸಾಕ್ಷರತೆ ಶೇ೫೨.೦೨. ರಾಜ್ಯ ಸಾಕ್ಷರತ ಪ್ರಮಾಣಕ್ಕಿಂತ ಕಡಿಮೆ ಇದ್ದರೂ ಇತ್ತೀಚಿನ ದಿನಗಳಲ್ಲಿ ಪುರುಷ ಹಾಗೂ ಸ್ತ್ರೀಯರ ಸಾಕ್ಷರತೆಯ ಪ್ರಮಾಣ ಹೆಚ್ಚುತ್ತಿದೆ. ತರೀಕೆರೆ ತಾಲೂಕಿನಲ್ಲಿ ೪೫.೮೨%ರಷ್ಟಿದ್ದರೆ, ನರಸಿಂಹರಾಜಪುರ ತಾಲೂಕಿನಲ್ಲಿ ೭೦%ರಷ್ಟು ಶಿಕ್ಷಣವಿದೆ. ಮೂಡಿಗೆರೆ ತಾಲೂಕಿನಲ್ಲಿ ಶೇ೫೪.೭೭% ಹಾಗೂ ಚಿಕ್ಕಮಗಳೂರು ತಾಲೂಕಿನಲ್ಲಿ ಶೇ೪೬.೩೭%ರಷ್ಟು ಶಿಕ್ಷಣವಿರುವುದನ್ನು ಕಾಣಬಹುದು. ಮೂಡಿಗೆರೆ ತಾಲೂಕಿನಲ್ಲಿ ೦೭ ಸ್ನಾತಕೊತ್ತರ ಪದವಿಧರರಲ್ಲಿ ಎಂ.ಎ.ಎಂಟೆಕ್, ಎಂ.ಬಿಎ. ಪದವಿಧರರಿದ್ದು, ಒಬ್ಬ ಮಹಿಳೆ ಎಂಬಿಬಿಎಸ್, ಎಂಡಿ ಪದವಿಧರೆಯಾಗಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರಾಥಮಿಕ ಶಿಕ್ಷಣ ಶೇ೨೨.೫೯% ಪ್ರೌಢಶಿಕ್ಷಣ ಶೇ.೧೭.೨೩% ಪದವಿಪೂರ್ವ ಶಿಕ್ಷಣ, ಶೇ.೭.೧೧% ಪದವಿ ಶಿಕ್ಷಣ, ಶೇ.೨.೪೦% ಸ್ನಾತಕೋತ್ತರ ಪದವಿ ಶೇ.೦.೬೦, ಇತರೆ ಐ.ಟಿ.ಐ, ನರ್ಸಿಂಗ್, ಡಿಪ್ಲೋಮ, ಟಿ.ಸಿ.ಹೆಚ್ ಶೇ.೨.೦೭%ರಷ್ಟು ಶಿಕ್ಷಿತರು ಕಂಡುಬರುತ್ತಾರೆ. ಒಟ್ಟು ೧೮೨೮ ಜನಸಂಖ್ಯೆಯಲ್ಲಿ ೯೫೧ ಜನರು ಶಿಕ್ಷಿತರಾಗಿರುವುದು. ಇತ್ತೀಚೆಗೆ ಶಿಕ್ಷಣದ ಒಲವು ಮೇದರಲ್ಲಿ ಹೆಚ್ಚುತ್ತಿರುವುದು ಕಾಣುತ್ತೇವೆ. ಒಟ್ಟಾರೆ ಮೇದ ಬುಡಕಟ್ಟಿನಲ್ಲಿ ಇಂತಹ ಸಾಕ್ಷರತೆಯ ಬೆಳವಣಿಗೆಯನ್ನು ಕಾಣಬಹುದಾಗಿದೆ.

ಶಿಕ್ಷಣಕ್ಕೂ, ಉದ್ಯೋಗಕ್ಕೂ ಸಂಬಂಧವಿರುವುದು ಕಾಣುತ್ತೇವೆ. ಸುಮಾರು ೭೨ ನೌಕರರು ಸರ್ಕಾರಿ ಹುದ್ದೆಯಲ್ಲಿರುವುದು ತಿಳಿದು ಬಂದಿದೆ. ಪ್ರಾಥಮಿಕ ಶಿಕ್ಷಣದಲ್ಲಿ ಅಧಿಕ ಜನರಿದ್ದು ಮುಂದುವರಿದಂತೆ, ಉನ್ನತ ಶಿಕ್ಷಣಕ್ಕೆ ಬರುತ್ತಿದ್ದಂತೆ ಇವರ ಸರಾಸರಿ ಸಂಖ್ಯೆ ಕ್ಷೀಣಗೊಂಡಿದೆ. ಚಿಕ್ಕಮಗಳೂರು ಜಿಲ್ಲೆಯ ಒಟ್ಟು ಸಾಕ್ಷರತೆ ಮೇದರಲ್ಲಿ ಶೇ.೫೦.೫೬ರಷ್ಟು ಸ್ತ್ರೀ ಶಿಕ್ಷಣವಿದ್ದರೆ, ಶೇ.೪೯.೪೩ರಷ್ಟು ಪುರುಷರ ಶಿಕ್ಷಣವಿದೆ. ಪುರುಷರಿಗಿಂತ ಸ್ತ್ರೀ ಶಿಕ್ಷಣ ಮುಂದಿರುವುದು ಸ್ಪಷ್ಟವಾಗುತ್ತದೆ. ಅಲ್ಲದೆ ತಾಂತ್ರಿಕ ಶಿಕ್ಷಣದಲ್ಲೂ ಸ್ತ್ರೀಯರು ಮುಂದಿರುವುದು ಅಧ್ಯಯನದಿಂದ ತಿಳಿದುಬರುತ್ತದೆ. **(ಹೆಚ್ಚಿನ ಮಾಹಿತಿಗಾಗಿ ಕೋಷ್ಟಕ--೫ ಮತ್ತು ೬ನ್ನು ಗಮನಿಸುವುದು)**

ಒಂದು ನಿರ್ದಿಷ್ಟ ಸಮಾಜದಲ್ಲಿ ಒಂದು ನಿಗಧಿತ ಕಾಲದಲ್ಲಿ ವ್ಯಕ್ತಿಯೋರ್ವನು ಹೊಂದಿರುವ ವಿಶಿಷ್ಟ ಸ್ಥಾನವೇ ಸಾಮಾಜಿಕ ಅಂತಸ್ತು. ಅಂತಸ್ತು ಎಂಬುದು ಸಮೂಹ ಅಥವಾ ಸಮಾಜವೊಂದರಲ್ಲಿನ ಒಂದು ಸ್ಥಾನವನ್ನು ಸೂಚಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಒಂದು ಪ್ರತ್ಯೇಕ ಗುರುತು, ಅಸ್ತಿತ್ವ ಅಥವಾ ಸ್ಥಾನವೆಂಬುದಿರುತ್ತದೆ. ಆತ ತನ್ನ ಸ್ಥಾನವಸ್ಥೆಗೆ ತಕ್ಕಂತೆ ವರ್ತಿಸುವ ಪ್ರಯತ್ನ ಮಾಡುತ್ತಾನೆ. ಇಂತಹ ವರ್ತನೆಗಳಿಂದ ಅಂತಸ್ತು ಲಭಿಸುತ್ತದೆ. ಇದನ್ನೇ ಸಾಮಾಜಿಕ ಅಂತಸ್ತು ಎಂದು ಕರೆಯಲಾಗಿದೆ. ಅಂತಸ್ತು ಎಂಬುದು ಮೌಲ್ಯೀಕವಾಗಿ ತಟಸ್ಥವಾದುದು. ಸಾಮಾನ್ಯ ಅರ್ಥದಲ್ಲಿ ಬಳಸಲ್ಪಡುವಾಗ ಈ ಪದದೊಂದಿಗೆ 'ಉಚ್ಛ', 'ನೀಚ' ಎಂಬ ಭಾವನೆಗಳು ಸೇರಿಕೊಂಡಿವೆ.

ಆದರೆ ಸಮಾಜಶಾಸ್ತ್ರೀಯ ದೃಷ್ಟಿಯಲ್ಲಿ ಪ್ರತಿಯೊಂದು ವ್ಯವಸ್ಥೆ ಅಥವಾ ಉಪ ವ್ಯವಸ್ಥೆಯಲ್ಲಿನ ಪ್ರತಿಯೊಂದು ಸ್ಥಾನಕ್ಕೂ ನಿರಪೇಕ್ಷ ಭಾವನೆಯಿಂದ 'ಅಂತಸ್ತು' ಎನ್ನುತ್ತೇವೆ. ಕರ್ನಾಟದಲ್ಲಿರುವ ಮೇದರ ಅಂತಸ್ತು ಧಾರ್ಮಿಕ, ಸಾಂಸ್ಕೃತಿಕ ದೃಷ್ಟಿಕೋನದಿಂದ ನೋಡಿದರೆ ಶ್ರೇಷ್ಟವೆಂದೂ ಆರ್ಥಿಕ, ರಾಜಕೀಯ ದೃಷ್ಟಿಯಿಂದ ಸಾಮಾನ್ಯವೆಂದೂ ತಿಳಿಯಬಹುದು. ತಮ್ಮ ಅಂತಸ್ತನ್ನು ಹೆಚ್ಚಿಸಕೊಳ್ಳಬೆಂಬ ಹೆಬ್ಬಯಕೆ ಮೇದರಲ್ಲಿದೆ. ಇವೆಲ್ಲಕ್ಕೂ ಮೂಲಮಂತ್ರವೆಂಬಂತೆ ಶಿಕ್ಷಣ ಕ್ಷೇತ್ರದಲ್ಲಿ ಪ್ರಗತಿ ಹೊಂದುವುದೇ ಅತೀ ಜರೂರಾಗಬೇಕೆಂದು ಜನಾಂಗದ ಪ್ರಜ್ಞಾವಂತರು ತಮ್ಮ ಪ್ರತ್ಯೇಕ ಸಭೆ-ಸಮಾರಂಭಗಳಲ್ಲಿ ಕರೆ ನೀಡುತ್ತಿದ್ದಾರೆ. ಆರೋಪಿತ ಅಂತಸ್ತು ಪ್ರಕಾರ ಮೇದಾರಿಕೆ ಮಾಡುವರು ಅತ್ಯಂತ ಹಿಂದುಳಿದ ಬುಡಕಟ್ಟಿನವರು. ರಸ್ತೆ ಬದಿಯಲ್ಲಿ ಬಿದಿರಿನ ಉತ್ಪನ್ನ, ಬಿದಿರು, ಚಪ್ಪಡಿ, ಹೆಂಚು ಮಾರುವವರು, ಹಳ್ಳಿಹಳ್ಳಿ ಸುತ್ತುವರು ಎಂಬ ಅಸಡ್ಡೆ ಸಾರ್ವಜನಿಕರಲ್ಲಿದೆ. ಇಂದಿನ ಶಕ್ತಿ ರಾಜಕಾರಣದಲ್ಲಿ ಒತ್ತಡದ ಗುಂಪಾಗಿ ದನಿ ಕಳೆದುಕೊಂಡು ಚದುರಿ ಹೋಗಿರುವ ಕ್ಷೀಣ ಸಂಖ್ಯೆಯಲ್ಲಿರುವ ಮೇದರನ್ನು ಗಂಭೀರವಾಗಿ ಪರಿಗಣಿಸದಿರುವುದು ಕಾಣುತ್ತೇವೆ. ಮೇದರಲ್ಲಿ ದೈನೇಸಿತನವಿದೆ. ಸಾತ್ವಿಕ ಸ್ವಭಾವದ ಮೇದರಲ್ಲಿ ಆಕ್ರಮಣಕಾರಕ ಮನೋಭಾವ ಹೊಮ್ಮುವುದು ತೀರ ವಿರಳ. 'ಸಾಧಿತ ಅಂತಸ್ತಿ'ಗಾಗಿ ಹಪಹಪಿಸುವ ಮೇದರು ಅತ್ಯಂತ ಶ್ರಮ ಜೀವಿಗಳು. ಶಿಕ್ಷಣ ಬೇಡವೆಂದು ಯಾರೊಬ್ಬ ಮೇದರನು ನನ್ನ ಸಂಶೋಧನಾ ಕಾರ್ಯ ಸಂದರ್ಭದಲ್ಲಿ ತಿಳಿಸಲಿಲ್ಲ.

ಈ ವೃತ್ತಿಯಿಂದ ಇತ್ತೀಚಿನ ಜಾಗತೀಕರಣದ ಸಂದರ್ಭದಲ್ಲಿ ದಿಗ್ಮೂಢರಾದವರಂತಾಗಿ, ವೃತ್ತಿ ಬದಲಾವಣೆಯಿಂದ ಬದುಕು ಸುಂದರಗೊಳಿಸಿಕೊಳ್ಳಬಹುದೆಂಬ ದೂರದ ನಿರೀಕ್ಷೆಯಿದೆ. ಒಟ್ಟಾರೆ ಸಮಾಜ ದೃಷ್ಟಿಯಿಂದ ಮಹತ್ತರವಾದ ಸಾಮಾಜಿಕ ಅಂತಸ್ತು ಇಲ್ಲವೆಂಬುದು ಗಮನಿಸಬಹುದು. ಆದಾಗ್ಯೂ ತಮ್ಮದೇ ಆದ ವೈಶಿಷ್ಟ್ಯಪೂರ್ಣ ಸಾಮಾಜಿಕ ಹಿನ್ನೆಲೆಯನ್ನು ಮೇದ ಬುಡಕಟ್ಟು ಹೊಂದಿದೆ. ಇದರಿಂದಾಗಿ ತನ್ನನ್ನು ಇತರ ಸಮುದಾಯಗಳಿಗಿಂತ ಭಿನ್ನ ಎಂದು ಗುರುತಿಸಿಕೊಂಡಿರುತ್ತದೆ. ಈ ಸಮುದಾಯ ತನ್ನದೇ ಆದ ಸಾಮಾಜಿಕ ಭಾವನೆಗಳು,

ಹೋಲಿಕೆ, ಸಮಾನ ಸಂಪ್ರದಾಯಗಳು, ಸಮಾನ ಚಿಂತನೆ ಮತ್ತು ಸಾಮೂಹಿಕ ಭಾವನೆಯನ್ನು ಹೊಂದಿರುತ್ತದೆ. ತಮ್ಮದೇ ಆದ ಪ್ರತ್ಯೇಕ ಕೌಟುಂಬಿಕ, ವೈವಾಹಿಕ, ಸಾಂಪ್ರದಾಯಿಕ ವ್ಯವಸ್ಥೆಯನ್ನು ಹೊಂದಿದೆ. ಮೇದರು ತಮ್ಮ ಕೌಟುಂಬಿಕ ಬದುಕಿನಲ್ಲಿ ಸ್ತ್ರೀಯರನ್ನು ಕೀಳಾಗಿ ಕಾಣದೆ, ಪುರುಷ ಸಮಾನವಾಗಿ ಕಾಣುವ ಸಾಮಾಜಿಕ ಸಂಬಂಧ ಕಾಣಬಹುದು. ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಿದ್ದರೂ, ಸ್ತ್ರೀಯರನ್ನು ಕೀಳಾಗಿ ಕಾಣದಿರುವುದು ಬುಡಕಟ್ಟು ಸಂಸ್ಕೃತಿಯ ಪ್ರತೀಕವೇ ಆಗಿದೆ. ಕೌಟುಂಬಿಕ ವ್ಯವಸ್ಥೆಯಲ್ಲಿ ಹಿರಿ-ಕಿರಿಯರಿಗೆ ಅವರವರ ಸ್ಥಾನಮಾನಕ್ಕೆ ತಕ್ಕಂತಹ ಅಂತಸ್ತನ್ನು ಮೊದಲಿನಿಂದಲೂ ನೀಡಲಾಗುತ್ತಿದೆ. ಕಟ್ಟೆ ಸಂಸ್ಕೃತಿಯ ಹಿನ್ನೆಲೆಯಲ್ಲಿ ಗೌಡ, ಪಟೇಲ, ಬುದ್ಧಿವಂತ ಇವು ಕುಲದ ಉನ್ನತ ಗೌರವ ಸ್ಥಾನಗಳು. ಇವುಗಳಿಗೆ 'ಸಾಂಪ್ರದಾಯಿಕ ಅಂತಸ್ತು' ಮೊದಲಿನಿಂದಲೂ ನೀಡುವ ಹಾಗೆ ಇಂದಿಗೂ ಅದೇ ಪ್ರವೃತ್ತಿ ಮುಂದುವರಿಯುತ್ತಿದೆ. ಯಾವುದೇ ಕಾರಣಕ್ಕೂ ಆ ಅಂತಸ್ತಿಗೆ ಚ್ಯುತಿ ಬಾರದಂತೆ ಸಮುದಾಯ ಎಚ್ಚರಿಕೆ ವಹಿಸುತ್ತದೆ. ಸ್ತ್ರೀ ಗೌರವವನ್ನು ಕಾಪಾಡುತ್ತದೆ.

ಅನೈತಿಕತೆ, ವ್ಯಭಿಚಾರ ಮೇದ ಕುಟುಂಬಗಳಲ್ಲಿ ಅತ್ಯಂತ ವಿರಳ. ಸಾಮಾಜಿಕ ಬದ್ಧತೆಗಾಗಿ ಇಡೀ ಮೇದ ಸಮುದಾಯ ಎದುರು ನೋಡುತ್ತದೆ. ಬಾಹ್ಯ ಸಮುದಾಯಗಳಿಂದ ಸಾಮಾಜಿಕ ಅಂತಸ್ತನ್ನು ನಿರೀಕ್ಷಿಸುವುದಕ್ಕಿಂತಲೂ, ಸಮುದಾಯದ ಒಳಗೇ ಅಂತಹ ಅಂತಸ್ತನ್ನು ನಿರೀಕ್ಷಿಸುತ್ತದೆ. ತಾವು ಶೈವ ಹಾಗೂ ವೈಷ್ಣವ ಪರಂಪರೆಗಳೆರಡನ್ನೂ ಆಚರಣೆಯಲ್ಲಿಟ್ಟುಕೊಂಡು ಬುಡಕಟ್ಟು ಸಂಸ್ಕೃತಿಯನ್ನು ಚಾಚು ತಪ್ಪದೇ ನೆರವೇರಿಸಿಕೊಂಡು ಬರುತ್ತಿರುವುದರಿಂದ 'ತೃಪ್ತಿ' ಮೇದರಲ್ಲಿ ಮನೆ ಮಾಡಿದೆ. ಆಧುನಿಕ ಶಿಷ್ಟಾಚಾರಗಳೂ ಮೇದರಲ್ಲಿ ಕಾಣಬಹುದು. 'ಡಿಪೋ ಸಂಸ್ಕೃತಿ'ಯನ್ನು ಹೊಂದಿರುವ ಮೇದರು ಆರ್ಥಿಕವಾಗಿ, ಕುಲಕಸುಬು ಮಾಡುವ ಮೇದರಗಿಂತ ಉನ್ನತ ಸ್ಥಾನದಲ್ಲಿದ್ದಾರೆ. ಆರ್ಥಿಕ ಸ್ಥಾನಮಾನಗಳು, ಉನ್ನತ ಅಂತಸ್ತನ್ನು ಅಳೆಯುವ ಅಳತೆಗೋಲಾಗಿರುವುದು ಸ್ಪಷ್ಟವಾಗುತ್ತದೆ. ಹಾಗೆಯೇ ಮೇದ ಸಮುದಾಯದ ಸರ್ಕಾರಿ ನೌಕರರು ಉನ್ನತ ಅಂತಸ್ತು, ಗೌರವಾಧರಗಳನ್ನು ಹೊಂದಿದ್ದಾರೆ.

ಅತಿ ಹೆಚ್ಚು ಶಿಕ್ಷಿತರು, ಸರ್ಕಾರಿ, ಅರೆ ಸರ್ಕಾರಿ, ಖಾಸಗಿ ಸಂಸ್ಥೆಗಳಲ್ಲಿ ನೌಕರಿಯಲ್ಲಿರುವ ಮೇದರ ಅಂತಸ್ತು ಹೆಚ್ಚೆಂದೇ ಭಾವಿಸಲಾಗುವುದು. ಇತ್ತೀಚಿನ ದಿನಗಳಲ್ಲಿ ಬೇರೆಲ್ಲಾ ಸಮುದಾಯಗಳಲ್ಲಿ ಆಗುತ್ತಿರುವಂತೆ ಮೇದ ಸಮುದಾಯದಲ್ಲೂ ಹಲವಾರು ರೀತಿಯ ಬದಲಾವಣೆಗಳು ಸಂಭವಿಸುತ್ತಿವೆ. ಆಧುನಿಕವಾದ ಸಾಮಾಜಿಕ ಬದುಕಿನಲ್ಲಿ ಹಲವಾರು ಕಾರಣಗಳಿಂದ ಬದಲಾವಣೆಗಳಾಗುತ್ತಿದ್ದು, ಮೇದರಲ್ಲೂ ಈ ಬದಲಾವಣೆಯಾಗುತ್ತಿದೆ. ಇದಕ್ಕನುಗುಣವಾಗಿ ಸಾಮಾಜಿಕ ಅಂತಸ್ತಿನಲ್ಲೂ ಬದಲಾವಣೆಗಳಾಗುತ್ತಿವೆ. ಕುಟುಂಬ, ಕೃಷಿ, ಕೌಟುಂಬಿಕ ತೀರ್ಮಾನಗಳು, ವಿವಾಹ, ಆಸ್ತಿ ಇತ್ಯಾದಿ ಅಂಶಗಳನ್ನು ಚರ್ಚಿಸುವಾಗ, ತೀರ್ಮಾನ ತೆಗೆದುಕೊಳ್ಳುವಾಗ ಸ್ತ್ರೀಯರ ಅಭಿಪ್ರಾಯವನ್ನು ಕೇಳಲಾಗುವುದು. 'ಸ್ತ್ರೀಯ

[illegible]

ಅಂತಸ್ತು' ಉಚ್ಛಮಟ್ಟದಲ್ಲಿರುವುದು ಕಾಣಬಹುದು. ಯಾವುದೇ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿಶೇಷ ಆದ್ಯತೆ ಮುತ್ತೈದೆ ಸ್ತ್ರೀಯರಿಗಿದೆ. ಸ್ತ್ರೀಯರಿಗೆ ಕಂಕಣ ಕಟ್ಟಿದರೆ ಸ್ತ್ರೀಯ ಸ್ಥಾನಮಾನ ಮತ್ತು ಅಂತಸ್ತು ಅತೀ ಹೆಚ್ಚೆಂದು ಕಲ್ಪಿಸಲಾಗುತ್ತದೆ. ಗೌಡ, ಪಟೇಲ, ಬುದ್ಧಿವಂತರಿಗೆ ಉನ್ನತ ಅಂತಸ್ತು ಸಲ್ಲುತ್ತದೆ.

ಯಾವುದೇ ಮುಖ್ಯ ನಿರ್ಧಾರಗಳನ್ನು ಸಮುದಾಯದಲ್ಲಿ ತೆಗೆದುಕೊಳ್ಳುವಾಗ, ಇದಕ್ಕೆ ಈ ಮುಖಂಡರುಗಳೇ ಮುಖ್ಯ ಸ್ಥಾನ ಅಲಂಕರಿಸುತ್ತಾರೆ. ಕ್ರಿಯಾವಿಧಿ, ಸಂಸ್ಕಾರ, ಸಂಪ್ರದಾಯಗಳು, ಆಚರಣೆ, ರೂಢಿಗಳು ಇತ್ಯಾದಿಗಳಲ್ಲಿ ಗೌಡ, ಬುದ್ಧಿವಂತ, ಪಟೇಲ ಹಾಗೂ ಮುದ್ರೆಕಾರರು ಪ್ರಮುಖ ಪಾತ್ರ ವಹಿಸುವುದರಿಂದ ಇವರಿಗೆ ಮುಖ್ಯ ಗೌರವ ಸಲ್ಲುವುದು. ಸ್ತ್ರೀ–ಪುರುಷರೀರ್ವರಿಗೂ ಸಮಾನ ಅಂತಸ್ತು ಕಾಣಬಹುದು.

ಹೀಗೆ ಸಾಮಾಜಿಕ ಅಂತಸ್ತಿನಲ್ಲಿ ವ್ಯಕ್ತಿಯ 'ಹಕ್ಕು' ಮತ್ತು 'ಕರ್ತವ್ಯ'ಗಳು ಅಪೇಕ್ಷಣೀಯವಾಗಿರುತ್ತದೆ. ತನ್ನ ದೈನಂದಿನ ಜೀವನದ ವಿವಿಧ ಕರ್ತವ್ಯಗಳನ್ನು ತನ್ನ ಅಂತಸ್ತಿಗೆ ಅನುಗುಣವಾಗಿ ವ್ಯಕ್ತಗೊಳಿಸಬೇಕಿರುತ್ತದೆ. ಅಂತಸ್ತನ್ನು ವಿವಿಧ ಪದರಗಳಲ್ಲಿ ಕಾಣಲಾಗುತ್ತದೆ. ಅವು ವಿವಾಹಿತ–ಅವಿವಾಹಿತ, ಉದ್ಯೋಗಿ–ನಿರುದ್ಯೋಗಿ, ಗಂಡು–ಹೆಣ್ಣು, ಶಿಕ್ಷಿತ–ಅಶಿಕ್ಷಿತ, ಜಮೀನ್ದಾರ–ಕೃಷಿಕೂಲಿ, ರಾಜಕೀಯ ಮುಂದಾಳು–ಸಾಮಾನ್ಯ ಕಾರ್ಯಕರ್ತ, ಡಿಪೋ ಹೊಂದಿದವನು–ಚಪಕಾರಕ ವೃತ್ತಿ ಮಾಡುವನು, ಆರ್ಥಿಕ ಆದಾಯ ಹೆಚ್ಚಿರುವುದು–ಇಲ್ಲದಿರುವುದು, ಸಾಲಹೆಚ್ಚು–ಸಾಲ ಇಲ್ಲ, ಹೆಚ್ಚು ಜಮೀನು–ಕಡಿಮೆ ಜಮೀನು, ಗೌಡ, ಬುದ್ಧಿವಂತ–ಅಲ್ಲದವನು ಹೀಗೆ ಅನೇಕ ಅಂಶಗಳಲ್ಲಿ ಸಾಮಾಜಿಕ ಅಂತಸ್ತನ್ನು ಕಂಡುಕೊಳ್ಳಲಾಗುವುದು. ಸಾಮಾಜಿಕ ಅಂತಸ್ತನ್ನು ಅಳೆಯಲು ಯಾವುದೇ ಬಾಹ್ಯ ಹಾಗೂ ಆಂತರಿಕ ಮಾಪಕಗಳಿಲ್ಲವಾದರೂ ಮಾನಸಿಕ ಅಳತೆಗೋಲು ಆಯಾ ವ್ಯಕ್ತಿ, ಪ್ರದೇಶ, ವೃತ್ತಿಗನುಗುಣವಾಗಿ ಅಳೆಯಲಾಗುತ್ತದೆ. ಇದು ಮೇದರಲ್ಲಿ ಸರ್ವಸಾಮಾನ್ಯವಾಗಿ ಕಾಣಬಹುದು.

೨.೧೯ ನ್ಯಾಯಪದ್ಧತಿ

ಮಾನವ ಸಮಾಜವು ನಿರಾತಂಕವಾಗಿ ಸಾಗಬೇಕಾದರೆ ಮತ್ತು ಸುಗಮವಾಗಿ ಕಾರ್ಯವೆಸಗಬೇಕಾದರೆ ಸಮಾಜದಲ್ಲಿ ಏಕತೆ, ಸಮಾನತೆ ಮತ್ತು ಕ್ರಮಬದ್ಧತೆ ಇರಬೇಕಾದುದು ತೀರ ಅಗತ್ಯ. ಸಮಾಜದ ಸದಸ್ಯರ ಉದ್ದೇಶ ಪೂರ್ವಕ ಪ್ರಯತ್ನದಿಂದ ಮಾತ್ರ ಇದು ಸಾಧ್ಯ. ಸಮಾಜ ಸ್ಥಾಪಿತ ನಿಯಮಗಳಿಗೆ ಅನುಸಾರವಾಗಿ ಎಲ್ಲರೂ ನಡೆದುಕೊಳ್ಳುವುದರಿಂದ ಸಮಾಜದಲ್ಲಿ ಸ್ಥಿರತೆ ಮತ್ತು ಐಕ್ಯಮತ್ಯ ನೆಲೆಸಲು ಸಾಧ್ಯ. ಸ್ವಾರ್ಥಸಾಧಕ ಬಯಕೆಗಳಿಗಿಂತಲೂ ಸಾಮಾಜಿಕ ನಿಯಮಗಳಿಗೆ ಬದ್ಧವಾಗಿ ನಡೆದುಕೊಳ್ಳುವುದು ಮುಖ್ಯ. ವ್ಯಕ್ತಿಗತ ಸಂತೃಪ್ತಿಗಿಂತಲೂ ಸಮೂಹದ ಅಥವಾ ಸಮಾಜದ ಏಳಿಗೆ ಹಾಗೂ ಕಲ್ಯಾಣ ಪ್ರಧಾನವಾದುದು. ಈ ಕಾರಣಕ್ಕಾಗಿ ಸಮಾಜವು ವ್ಯಕ್ತಿಗಳ ಮೇಲೆ ತನ್ನ ವರ್ಚಸ್ಸನ್ನು ಬೀರುತ್ತಾ ನಿಯಂತ್ರಣವನ್ನು ಸಾಧಿಸುತ್ತದೆ.

ಸಮಾಜ ಸಮ್ಮತ ನಡವಳಿಕೆಗೆ ಅನುಗುಣವಾಗಿ ವ್ಯಕ್ತಿಗಳನ್ನು ಪರಿವರ್ತಿಸುವಂತೆ ನ್ಯಾಯಪಂಚಾಯತಿಗಳು ಕೆಲಸ ಮಾಡುತ್ತವೆ. ಇದು ಕೇವಲ ಧರ್ಮದ ರಕ್ಷಕ ವ್ಯವಸ್ಥೆಯಾಗಿ ಕೆಲಸ ಮಾಡದೆ ಸಾಮಾಜಿಕ ನ್ಯಾಯಕ್ಕಾಗಿಯೂ ಕಾರ್ಯನಿರ್ವಹಿಸುತ್ತದೆ. ಮೇದರಲ್ಲಿ ತಮ್ಮ ಸಮುದಾಯಕ್ಕೆ ಮಾತ್ರ ಮೀಸಲಾದ ಪಂಚಾಯ್ತಿ ವ್ಯವಸ್ಥೆ ಇದೆ.

"ಮೇದರ ಒಳಾಡಳಿತ ವ್ಯವಸ್ಥೆ ಪ್ರದೇಶಾನುಸಾರವಾಗಿ ರೂಪಗೊಂಡಿರುತ್ತದೆ. ಈ ರೀತಿ ಆಡಳಿತ ವ್ಯವಸ್ಥೆಗೆ ಸಮುದಾಯದಲ್ಲಿ ಹಿರಿಯನಾದವನನ್ನು ಆಯ್ಕೆ ಮಾಡುತ್ತಾರೆ. ಸಮುದಾಯದ ಮುಖಂಡರೆಲ್ಲ ಸೇರಿ ಯಜಮಾನನ್ನು ಆಯ್ಕೆ ಮಾಡಿದರೆ ಅದೇ ಸಭೆಯಲ್ಲಿ ಯಜಮಾನ ತನಗೆ ಸಹಾಯಕರಾಗುವ ತಿಳುವಳಿಕೆಯುಳ್ಳ ಹಿರಿಯರನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಅವನಿಗೆ 'ಒತ್ತಿನ ಯಜಮಾನ' ಎನ್ನುತ್ತಾರೆ. ಸೇಲಂ ಮೇದರಲ್ಲಿ ಗೌಡ, ಬುದ್ಧಿವಂತ, ದೊಡ್ಡ ಮನುಷ್ಯ ಎಂಬ ಮುಖಂಡರನ್ನು ಆರಿಸುತ್ತಾರೆ. ಹಿರಿಯ ಅಥವಾ ಗೌಡನಿಗೆ ಪೇಟಕಟ್ಟಿ ಹಾರ ಹಾಕಿ ಹಿರಿತನದ ಸ್ಥಾನವನ್ನು ಬಿಟ್ಟುಕೊಡುತ್ತಾರೆ.

ವಿವಾಹದ ಸಂದರ್ಭದಲ್ಲಿ ಸಮುದಾಯದ ಒಳಜಗಳಗಳಲ್ಲಿ, ಬೇರೆ ಜಾತಿಯ ಸಂಬಂಧಗಳಾದಲ್ಲಿ ಸಾವಿನ ಸಂದರ್ಭಗಳಲ್ಲಿ ನ್ಯಾಯಾಡಳಿತ ನಡೆಸುವರು. ಪಂಚಾಯತಿ ನಡೆಸಿ ತಾವೇ ನ್ಯಾಯ ತೀರ್ಮಾನ ಮಾಡುತ್ತಾರೆ. ಜಗಳ, ಹಾದರ, ಕಳ್ಳತನ, ದರೋಡೆಗಳಾದರೂ ಜಾತಿಯವರು ವಿಧಿಸಿದ ಶಿಕ್ಷೆಯನ್ನು ಒಪ್ಪಿಕೊಳ್ಳಲೇಬೇಕು"[೭]

ಮೇದರಲ್ಲಿ ಕಟ್ಟೆ ಪಂಚಾಯತಿ ಇದೆ. ತಮ್ಮಲ್ಲಿನ ಅಂತಃಕಲಹಗಳನ್ನು ಬಗೆಹರಿಸುವ ಪರಿಪಾತವಿದೆ. ಗೌಡ, ಪಟೇಲ, ಬುದ್ಧಿವಂತ, ಯಜಮಾನರು ಮೇದರಲ್ಲೇ ಬೇರೆ ಬೇರೆ ಬೆಡಗು-ಕುಲದಿಂದ ಆಯ್ಕೆಗೊಂಡಿರುತ್ತಾರೆ. ಕುಟುಂಬ ವ್ಯಾಜ್ಯ, ವಿವಾಹ, ಆಸ್ತಿ, ಜಮೀನು, ಸಂಬಂಧ, ಅನೈತಿಕತೆ ಮುಂತಾದ ವಿಷಯಗಳಲ್ಲಿ ಪರಿಣಿತಿಹೊಂದಿದವರ ರೀತಿ ನ್ಯಾಯಕಟ್ಟೆಯಲ್ಲಿ ತೀರ್ಮಾನಗಳು ಹೊರಬೀಳುತ್ತವೆ. ವಿವಾಹ ಸಂಬಂಧಗಳು ಕುದುರುವುದೇ ಈ ಮುಖ್ಯಸ್ಥರ ಸಮ್ಮುಖದಲ್ಲಿ. ವಿವಾಹ ಗಟ್ಟಿಯಾಯಿತೆಂದು ವೀಳ್ಯೆ ಬದಲಿಸಿಕೊಂಡರೆ, ಮದುವೆ ಮುರಿಯಲು ಇವರು ಬಿಡುವುದಿಲ್ಲ. ಅನೈತಿಕ ಸಂಬಂಧಗಳಿದ್ದರೆ ನ್ಯಾಯ ಪಂಚಾಯ್ತಿಯಲ್ಲೇ ತೀರ್ಮಾನವಾಗಬೇಕು.

ವಿಧುವೆ-ವಿಧುರ ವಿವಾಹ ಬಾಹ್ಯ ಸಂಬಂಧ ಹೊಂದಿದ್ದರೆ, ಕಟ್ಟೆ ತೀರ್ಮಾನದಂತೆ ಒಪ್ಪಿಕೊಳ್ಳಬೇಕು. ಕೆಳಜಾತಿಯವರೊಂದಿಗೆ ಒಡನಾಡಿತನ, ಸಹಭೋಜನ ಇತ್ಯಾದಿಗಳನ್ನು ಸಮುದಾಯ ಒಪ್ಪುವುದಿಲ್ಲ. ಮೆಟ್ಟನ್ನು (ಪಾದರಕ್ಷೆ) ಕೈಯಿಂದ ಹಿಡಿದು ಅಥವಾ ಹೊಡೆದರೆ ಮಹಾಪಾರಾಧವೆನ್ನಲಾಗುವುದು. ತಕ್ಷಣವೇ ಪಂಚಾಯತಿ ಕರೆದು ಸಮುದಾಯದಿಂದ ಬಹಿಷ್ಕಾರ ಹಾಕುವರು. ಈ ಬಹಿಷ್ಕಾರ ಒಂದು ತಿಂಗಳು ನಡೆಯಬಹುದು. ಈ ಅವಧಿಯಲ್ಲಿ ಯಾವುದೇ ಶುಭ-ಅಶುಭ ಸಮಾರಂಭಗಳು ನಡೆದರೂ ಬಹಿಷ್ಕಾರಕ್ಕೆ ಒಳಗಾದವರು. ಈ ಸಮಾರಂಭದಲ್ಲಿ ಭಾಗವಹಿಸುವ ಹಾಗಿಲ್ಲ. ಕೆಲವೊಮ್ಮೆ ಹಟ್ಟಿ ಬಹಿಷ್ಕಾರ, ಊರು ಬಹಿಷ್ಕಾರ,

[illegible]

ಬುಡಕಟ್ಟು ಬಹಿಷ್ಕಾರ ಇತ್ಯಾದಿಯಾಗಿ ತೀವ್ರಗೊಳ್ಳುತ್ತದೆ. ಲಕ್ಕವಳ್ಳಿ, ತರೀಕೆರೆ, ನರಸಿಂಹರಾಜಪುರದ ಮೇದರಲ್ಲಿ ಇಂತಹ ಬಹಿಷ್ಕಾರವಿದ್ದು, ಪುನಃ ಮುಖಂಡರ ತೀರ್ಮಾನದಂತೆ ದೇವರಿಗೆ ೫೦೧ ಅಥವಾ ೧೦೦೧ ರೂಪಾಯಿಗಳ ಕಾಣಿಕೆ ಹಾಕಿ, ಮಹಾಮಂಗಳಾರತಿ ಮಾಡಿಸಿ, ಕುಲಸ್ಥರಿಗೆ ಕುರಿ ಊಟ ಹಾಕಿಸಿದ್ದ ಪ್ರಕರಣಗಳನ್ನು ನೆನಪಿಸಿಕೊಳ್ಳುತ್ತಾರೆ. ಹಿಂದೆ 'ಕೂಡಿಕೆ' ಪದ್ಧತಿ ವ್ಯಾಪಕವಾಗಿತ್ತು. ವಿಧುರ-ವಿಧವೆ ವಿವಾಹವಾಗಲು ಇಚ್ಛಿಸಿದ್ದಲ್ಲಿ ಮುಖಂಡರ ನೇತೃತ್ವದಲ್ಲಿ 'ಸಂಜೆ ವಿವಾಹ'ಗಳು ನಡೆಯುತ್ತಲಿದ್ದವು. ಇದನ್ನು 'ಒಳಗುಧಾರೆ' ಎಂದು ಕರೆಯಲಾಗುತ್ತಿತ್ತು. ವ್ಯಭಿಚಾರ, ಕುಲಭ್ರಷ್ಟತೆ, ದಂಪತಿಗಳ ಭಿನ್ನಾಭಿಪ್ರಾಯಗಳಿದ್ದಾಗಲೂ ಮುಖಂಡರು ಪೂರ್ವಪರಗಳನ್ನು ವಿಚಾರಿಸಿ ವಿಚ್ಛೇದನಕ್ಕೂ ಮುಂದಾಗುತ್ತಿದ್ದರು.

ಬುಡಕಟ್ಟಿನ ಕಟ್ಟುಪಾಡುಗಳನ್ನು ಸಮಾಜ ಒಪ್ಪಿತ ರೀತಿಯಲ್ಲಿ ನಡೆಯಬೇಕು. ಆಗೊಮ್ಮೆ ಸಮುದಾಯಕ್ಕೆ ಚ್ಯುತಿ ಬಂದಿದೆಯೆಂದು ಮುಖಂಡರು ಭಾವಿಸಿದರೆ ನ್ಯಾಯಪಂಚಾಯತಿ ಕರೆದು ತಪ್ಪಿತಸ್ಥರಿಗೆ ಶಿಕ್ಷೆ, ತಪ್ಪುಕಾಣಿಕೆ ಹಾಕಿ ಸರಿದಾರಿಗೆ ಬರುವಂತೆ ಮಾಡಿ ಪುನಃ ಸಮುದಾಯದ ಒಡನಾಡಿಯಾಗಿ ಮುಂದುವರೆಯುವಂತೆ ಮಾಡುವುದಾಗಿದೆ. ಚಿಕ್ಕಮಗಳೂರು ಜಿಲ್ಲೆಯಾದ್ಯಂತ ಮೇದರಲ್ಲಿ ಇಂತಹ ಕುಲಪಂಚಾಯ್ತಿ, ನ್ಯಾಯಪಂಚಾಯ್ತಿ ವ್ಯವಸ್ಥೆಗಳ ಸೆಲೆಗಳು ಕಾಣುತ್ತೇವೆ.

೨.೧.೧೦ ಇತರೆ ಸಮುದಾಯಗಳೊಂದಿಗೆ ಮೇದ ಸಮುದಾಯದ ಸಾಮರಸ್ಯ

ಮಾನವನು ಮೂಲಭೂತವಾಗಿ ಸಮೂಹ ಜೀವಿ. ಆತನು ಯಾವಾಗಲೂ ಸಮೂಹ, ಸಂಘ, ಸಮುದಾಯ ಮತ್ತು ಸಮಾಜದಲ್ಲಿ ವಾಸಿಸುತ್ತಾನೆ. ಮಾನವನ ಜೀವನ ಮತ್ತು ಸಮಾಜ ಇವು ಪರಸ್ಪರ ಹಾಸುಹೊಕ್ಕಾಗಿದೆ. ಸಮಾಜದ ಹೊರತಾಗಿ ಮಾನವನೆಂದಿಗೂ ಮಾನವನಂತೆ ಮನುಷ್ಯ ಸಹಜ ಗುಣಗಳಿಂದ ಬದುಕಲಾರ. ವ್ಯಕ್ತಿ ಸಾಮಾಜೀಕರಣಗೊಳ್ಳಲು ಸಮುದಾಯ, ಸಮಾಜ ಅತ್ಯಂತ ಅವಶ್ಯಕವಾದುದು. ಸಮಾಜವು ಮಾನವರ ಅಂತರಂಗ-ಬಹಿರಂಗಗಳನ್ನು ಆವರಿಸಿಕೊಂಡಿದೆ. ಆದ್ದರಿಂದ ಮಹಾದಾರ್ಶನಿಕ ಅರಿಸ್ಟಾಟಲ್‌ನು "ಮಾನವನು ಸಮೂಹ ಜೀವಿಯಾಗಿರುವನು" ಎಂದು ತಿಳಿಸಿರುವುದು, ಸಾಂಘಿಕ ನಡಾವಳಿಗಳು ಮನುಷ್ಯನನ್ನು ಒಂದುಗೂಡಿಸಲು ಪ್ರಯತ್ನಿಸುತ್ತದೆ ಎಂಬುದು ತೆರೆದ ಸತ್ಯವಾಗಿದೆ.

ಜಾನ್‌ಲಾಕ್ ಎಂಬ ಚಿಂತನಾಕಾರನ ಪ್ರಕಾರ 'ನೈಸರ್ಗಿಕ ಸ್ಥಿತಿಯಲ್ಲಿಯೂ ಮಾನವನು ಸಮೂಹ ಪ್ರಿಯತೆಯ ಗುಣಗಳನ್ನು ಹೊಂದಿದ್ದ. ಆದರೆ ಆತನು ಯಾವುದೇ ಬಗೆಯ ನೀತಿ-ನಿಯಮಾವಳಿಗಳ ಕಟ್ಟು-ಪಾಡುಗಳಿಗೆ ಸಿಲುಕದೆ ಸ್ವತಂತ್ರ ಜೀವನವನ್ನು ನಡೆಸುತ್ತಿದ್ದ. ಅಂತಹ ಜೀನವವು ಶಾಂತಿ ಸೌಹಾರ್ದತೆ, ಸಹಾಯ ಮತ್ತು ರಕ್ಷಣೆ (Peace good will, mutual assistance and preservation)ಗಳಿಂದ ಕೂಡಿತ್ತು' ಎಂಬುದಾಗಿ ತಿಳಿಸುತ್ತ ಬುಡಕಟ್ಟು ವಾಸಿಗಳ ಬದುಕಿನ ಮಗ್ಗುಲನ್ನು ಪರಿಚಯಿಸುತ್ತಾರೆ.

ಮೇದ ಬುಡಕಟ್ಟಿನವರು ವಾಸಿಸುತ್ತಿದ್ದ ಪ್ರದೇಶದ ಭೌಗೋಳಿಕ ಪ್ರದೇಶವೆಂದರೆ ಕಾಡಿನಿಂದ ಆವೃತ್ತವಾದ ಬೆಟ್ಟ-ಗುಡ್ಡ ಪ್ರದೇಶಗಳು ಇಲ್ಲಿ ಹೆಚ್ಚಾಗಿ ದಟ್ಟವಾದ ಕಾಡುಗಳಿರುವುದಿಲ್ಲ. ವಿಸ್ತಾರವಾದ ಗುಡ್ಡದ ತಪ್ಪಲು ಪ್ರದೇಶಗಳಲ್ಲಿ ಬಿದಿರು ದಟ್ಟವಾಗಿ ಬೆಳೆಯುತ್ತದೆ. ಅಂತೆಯೇ ಮಲೆನಾಡು ಸೀಮೆಯ ಸರಹದ್ದು ಹಾಗೂ ಕಾಡಿನ ಪ್ರದೇಶಗಳಲ್ಲಿಯೂ ಬಿದಿರು ಬೆಳೆಯುತ್ತದೆ. ಮಲೆನಾಡಿನ ಪ್ರದೇಶಗಳು ಪ್ರಕೃತಿ ರಮ್ಯತೆಯಿಂದ ಕೂಡಿವೆ. ಆ ಪ್ರದೇಶಗಳಲ್ಲಿ ಮಳೆಯು ಸಮೃದ್ಧವಾಗಿ ಆಗುವುದರಿಂದ ಬಿದಿರು ಹೆಚ್ಚಾಗಿ ಬೆಳೆಯುತ್ತದೆ. ಪಶ್ಚಿಮ ಘಟ್ಟಗಳಲ್ಲಿನ ಹೆಚ್ಚು ಪ್ರದೇಶಗಳು ಕಾಡಿನಿಂದ ಆವೃತ್ತವಾಗಿದ್ದು ಅಲ್ಲಲ್ಲಿ ಬಿದಿರಿನ ಮೆಳೆಗಳು ಕಾಣಸಿಗುತ್ತವೆ. ಶ್ರೇಷ್ಠ ಕತೆಗಾರ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ತಮ್ಮ 'ಜುಗಾರಿ ಕ್ರಾಸ್' ಕಥಾ ಸಂಕಲನದಲ್ಲಿ 'ಮೇದರಹಳ್ಳಿಯ ಅವಸಾನ'ವನ್ನು ಬಹಳ ಸುಂದವಾಗಿ ಚಿತ್ರಿಸಿದ್ದಾರೆ.

ಅಂತಹ ದಟ್ಟವಾದ ಕಾಡಿನೊಳಗೇ ಅಥವಾ ಕಾಡಿನಿಂದ ಆಚೆಯ ಬಯಲು ಇಲ್ಲವೇ ಹತ್ತಿರದ ಹಳ್ಳಿಗಳಲ್ಲಿ ವಾಸಿಸುತ್ತಿದ್ದ ಮೇದರು, ಅರಣ್ಯ ಇಲಾಖೆಯವರ ಉಪಟಳದಿಂದ ಹಾಗೂ ತಮ್ಮ ಉತ್ಪನ್ನಗಳಿಗೆ ಮಾರುಕಟ್ಟೆ ಕಂಡುಕೊಳ್ಳುವ ಸಲುವಾಗಿ ದೊಡ್ಡ ಹಳ್ಳಿಗಳಿಗೋ, ಹತ್ತಿರದ ಪಟ್ಟಣ, ನಗರಗಳ ಹೊರವಲಯದಲ್ಲಿ ತಾತ್ಕಾಲಿಕ ಬಿದಿರಿನ ಶೆಡ್‌ಗಳನ್ನು ನಿರ್ಮಾಣ ಮಾಡಿಕೊಂಡು ವ್ಯಾಪಾರ ಮಾಡಲು ಶುರುಮಾಡಿದರು. ಎಷ್ಟೋ ದಿನಗಳ ಕಾಲ ತಾತ್ಕಾಲಿಕ ವಲಸಿಗರಾಗಿ ಗುಡ್ಡದ ಸಮೀಪದ ಹಳ್ಳಿಗಳಿಗೆ ಹೋಗಿ ಬಿದಿರಿನ ಲಭ್ಯತೆಯಿರುವವರೆವಿಗೂ ಕುಲಕಸುಬು ಮಾಡಿ ಪುನಃ ವಾಪಸ್ಸಾಗುತ್ತಿದ್ದ ಮೇದರ ಸಂಖ್ಯೆ ಇತ್ತೀಚಿಗೆ ಕಡಿಮೆಯಾಗುತ್ತಿದೆ. ಹೀಗೆ ಜನಸಮುದಾಯಕ್ಕೆ ಹತ್ತಿರ ನೆಲೆಸಿರುವ ಮೇದರು ಪಟ್ಟಣ ಮತ್ತು ನಗರದಲ್ಲಿ ತಮ್ಮ ಬಿದಿರಿನಿಂದ ತಯಾರಿಸಿದ ಮೊರ, ಬುಟ್ಟಿ, ಚಾಪೆ, ತೊಟ್ಟಿಲು ಇತ್ಯಾದಿ ವಸ್ತುಗಳನ್ನು ಮಾರಾಟ ಮಾಡುವಾಗ, ಸಾರ್ವಜನಿಕರ ಸಂಪರ್ಕ ವೃದ್ಧಿಯಾಗುತ್ತದೆ.

ರೈತರು, ಬಳಕೆದಾರರು, ಮದುವೆ, ಮುಂಜಿ, ಸಾವು, ಗೃಹ ನಿರ್ಮಾಣ, ಹಬ್ಬ-ಹರಿದಿನಗಳು, ಸಾಂಸ್ಕೃತಿಕ ಆಚರಣೆಗಳು ಇತ್ಯಾದಿಗಳ ಬಳಕೆಗಾಗಿ ಮೇದಾರಿಕೆಯ ವಸ್ತುಗಳನ್ನು ಬಳಸುವವರು ಅಗತ್ಯವಾಗಿ ಮೇದರೊಂದಿಗೆ ವ್ಯಾಪಾರ ಸಂಬಂಧ ಇರಿಸಿಕೊಳ್ಳಲೇ ಬೇಕಾಗುತ್ತದೆ. ಇದು ಸಾರ್ವಜನಿಕ ಸಂಪರ್ಕಕ್ಕೆ ರಹದಾರಿಯಾಗುತ್ತದೆ. ವಿವಿಧ ಭಾಷಿಕ ಜನಾಂಗದವರ ಒಡನಾಟ, ವ್ಯವಹಾರಗಳು ಅಂತರ್‌ಕ್ರಿಯೆಯನ್ನು ಏರ್ಪಡಿಸಿ ತಮ್ಮ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ ಇತರೆ ಚಟುವಟಿಕೆಗಳಲ್ಲಿ ಭಾಗವಹಿಸಲು ಆಮಂತ್ರಣ ದೊರೆಯುತ್ತದೆ. ಈ ರೀತಿಯ ಪ್ರಕ್ರಿಯೆಗಳಿಂದ ಸಾರ್ವಜನಿಕರೊಂದಿಗೆ ಹೆಚ್ಚು ಹೊಂದಾಣಿಕೆಯಿಂದ ಸಾಂಘಿಕ ಜೀವನ ನಡೆಸಲು ಅವಕಾಶ ನೀಡುತ್ತದೆ. ಭಾರತ ದೇಶ ಹಲವು ಧರ್ಮಗಳ, ಸಾವಿರಾರು ಜಾತಿಯ, ನೂರಾರು ಭಾಷೆಯ, ವೈವಿಧ್ಯತೆಯ ನೆಲೆವೀಡು. ಒಂದೊಂದು ಪ್ರದೇಶದಲ್ಲಿ ಕೆಲವಾರು ಸಮುದಾಯದವರು ವಾಸಿಸುತ್ತಾರೆ. ಕರಾವಳಿ,

ಮಲೆನಾಡು, ಬಯಲುಸೀಮೆ ಹೀಗೆ ಭೌಗೋಳಿಕ ಹಿನ್ನೆಲೆಯಲ್ಲಿ ಬೇರೆ ಬೇರೆ ಭಾಷಿಕರು ವಾಸಿಸುತ್ತಾ ತಮ್ಮ ಬದುಕನ್ನು ಕಟ್ಟಿಕೊಂಡಿರುತ್ತಾರೆ. ಹಾಗೆಯೇ ಮಲೆನಾಡಿನ ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಕ್ಕಲಿಗ, ಲಿಂಗಾಯಿತ, ಬ್ರಾಹ್ಮಣರು, ಕುರುಬ, ಉಪ್ಪಾರ, ದೇವಾಂಗ, ಮಡಿವಾಳ, ಗಾಣಿಗ, ಅಕ್ಕಸಾಲಿಗ, ಕಮ್ಮಾರ, ಬಡಿಗ, ಸಿಂಪಿಗ, ಗೌಂಡರ್, ಬೆಸ್ತರು, ತೆಲುಗರು, ತಮಿಳರು, ಕೊಂಕಣಿಯರು, ಮರಾಠಿ, ಹೊಲೆಯರು, ಮಾದಿಗರು, ಕೊರಚ, ಕೊರಮ, ಗೊಲ್ಲರು, ಆದಿಜಾಂಬವ, ಭೋವಿ, ಶೈವರು, ಮುಸ್ಲಿಂ, ಕ್ರಿಶ್ಚಿಯನ್ ಹೀಗೆ ಅನೇಕ ಸಮುದಾಯಗಳ ಜೊತೆಗೆ ಬುಡಕಟ್ಟುಗಳಾದ ಗೌಡ್ಲು, ಹಸಲರು, ಮರಾಠಿ, ಮಾಲೇರು, ನಾಯಕರು ಮುಂತಾದವರು ವಾಸವಿದ್ದಾರೆ.

ಈ ಸಮುದಾಯಗಳ ಜೊತೆಗೆ ಪ್ರತ್ಯಕ್ಷ ಹಾಗೂ ಪರೋಕ್ಷ ಒಡನಾಟ ಮೇದರಿಗಿದೆ. ಬಿದಿರನ್ನು ತರಲು ಕಾಡಿಗೆ ಹೋದಾಗ ಬುಡಕಟ್ಟಿಗರಾದ ಗೌಡ್ಲು, ಹಸಲರು ಭೇಟಿಯಾಗುವರು. ಗೌಡ್ಲು, ಹಸಲರೂ ಬಿದಿರಿನಿಂದ ಬುಟ್ಟಿಗಳನ್ನು ಮಾಡುವರು. ಆದರೆ ಹೆಚ್ಚಾಗಿ ಕಾಡಿನ ಸುಂದರ ಪರಿಸರದಲ್ಲೇ ಅವರು ವಾಸಮಾಡುತ್ತಿದ್ದು, ಬುಡಕಟ್ಟು ಎನ್ನುವ ತನ್ಮಯತೆಯಿಂದ ಇವರ ಒಡನಾಟವಿರುವುದು. ಮರಾಠಿ ಮತ್ತು ನಾಯಕ ಬುಡಕಟ್ಟಿನವರು ಸಹ ಮೇದರೊಂದಿಗೆ ಆರೋಗ್ಯಕರ ಸಂಬಂಧ ಹೊಂದಿರುವರು. ಮೂಡಿಗೆರೆ ಹಾಗೂ ಕೊಪ್ಪದಲ್ಲಿ ಲ್ಯಾಂಪ್ಸ್ ಸೊಸೈಟಿಯಿದ್ದು ಕೊಪ್ಪ, ಶೃಂಗೇರಿ, ನರಸಿಂಹರಾಜಪುರ ತಾಲೂಕಿನಲ್ಲಿ ವಾಸಿಸುತ್ತಿರುವ ಬುಡಕಟ್ಟುಗಳು ಕೊಪ್ಪದಲ್ಲಿರುವ ಲ್ಯಾಂಪ್ಸ್ ಸೊಸೈಟಿ ಮಿತಿಯಲ್ಲಿ ಬರುತ್ತಾರೆ. ಹದಿನೆಂಟು ವರ್ಷ ಮೇಲ್ಪಟ್ಟವರೆಲ್ಲರು ಈ ಸೊಸೈಟಿಯ ಸದಸ್ಯರಾಗಲು ಅರ್ಹತೆ ಹೊಂದುವರು. ಪ್ರಸ್ತುತ ೩೬೮೮ ಸದಸ್ಯರನ್ನು ಹೊಂದಿದೆ. ಚಿಕ್ಕಮಗಳೂರು, ಕಡೂರು, ಮೂಡಿಗೆರೆ ತಾಲೂಕುಗಳನ್ನು ಒಳಗೊಂಡು ಮೂಡಿಗೆರೆ ಲ್ಯಾಂಪ್ಸ್ ಸೊಸೈಟಿ ಅಸ್ತಿತ್ವದಲ್ಲಿದೆ. ಹೀಗೆ ಕರ್ನಾಟಕದಲ್ಲಿ ೨೩ ಲ್ಯಾಂಪ್ಸ್ ಸೊಸೈಟಿಯಿದ್ದು ರಾಜ್ಯಮಟ್ಟದಲ್ಲಿ ಲ್ಯಾಂಪ್ಸ್ ಫೆಡರೇಶನ್ ಹೊಂದಿದ್ದು, ಬುಡಕಟ್ಟುಗಳ ಅಭಿವೃದ್ಧಿ ಬಗ್ಗೆ ಚಿಂತಿಸುತ್ತದೆ.

ಮೇದರ ಕೇರಿಯಲ್ಲಿಯೇ ವಾಸವಿರುವ ಇತರ ಜಾತಿಯವರು ಅಥವ ಮೇದರ ಕೇರಿಯ ಆಜುಬಾಜಿನಲ್ಲಿರುವವರು ಯಾವ ಕಿರಿಕಿರಿಯಿಲ್ಲದೆ ಬದುಕುವರು. ತಮ್ಮ ವೃತ್ತಿಗಷ್ಟೇ ಅಂಟಿಕೊಂಡ ಮೇದರು ಬೇರೆ ಜಾತಿಯವರನ್ನು ಬಹಳ ಕಾಳಜಿವಹಿಸುತ್ತಾರೆ. ಸಹೋದರತೆಯ ಬಾಂಧವ್ಯದಷ್ಟೇ ಮಹತ್ವವನ್ನು ನೀಡುತ್ತಾರೆ. **ಬೇಟೆ** (ಕುರಿ) ಪಾಲನ್ನು ಎಲ್ಲರೂ ಹಂಚಿಕೊಳ್ಳುವರು. ಹಬ್ಬ-ಹರಿದಿನಗಳಲ್ಲಿ ನೆರೆಹೊರೆಯ ಬೇರೆ ಬೇರೆ ಸಮುದಾಯದವರನ್ನೂ ಆಮಂತ್ರಿಸುವರು. ಮುಕ್ತ ಮನಸ್ಸಿನ ಮೇದರು ಸರಳರು, ನಿಗರ್ವಿಗಳು ಹಾಗೂ ಹೊಂದಾಣಿಕೆ ಸ್ವಭಾವದವರಾಗಿದ್ದಾರೆ. ಆಧುನಿಕ ಕೃಷಿ ಬರುವುದಕ್ಕಿಂತ ಮೊದಲು ಸಾಂಪ್ರದಾಯಿಕ ಕೃಷಿ ನಿರತ ಗ್ರಾಮಂತರ ಪ್ರದೇಶದ ಕೃಷಿಕರು ಇತ್ತೀಚೆಗೆ ಮೇದಾರಿಕೆಯ ಉತ್ಪನ್ನಗಳನ್ನು ಹೆಚ್ಚಾಗಿ

ಬಳಸುತ್ತಿಲ್ಲವಾದರೂ, ಆ ತಲೆಮಾರಿನ ಹಿರಿಯ ವ್ಯಕ್ತಿಗಳು ಹಾಗೂ ಮೇದರ ಹಿರಿಯ ತಲೆಮಾರಿನ ಜೊತೆಗೆ ಪ್ರೀತಿ–ವಿಶ್ವಾಸ ಉಳಿಸಿಕೊಂಡಿರುವುದು ಅನ್ಯ ಜನಾಂಗದವರೊಂದಿಗೆ ಹೊಂದಿರುವ ಅನನ್ಯ ಸಂಬಂಧದ ದ್ಯೋತಕವಾಗಿದೆ. ಬಿದಿರಿನ ಪದಾರ್ಥಗಳನ್ನು ಪಡೆದ ರೈತರು ಪ್ರತಿಯಾಗಿ ಒಕ್ಕಲಾಟವಾದಾಗ ಭತ್ತ, ಅಕ್ಕಿ, ಬೆಲ್ಲ, ಅಡಿಕೆ ಇತ್ಯಾದಿಗಳನ್ನು ಮನೆಗೇ ತಲುಪಿಸುತ್ತಿದ್ದದ್ದು ಕೃಷಿಕರ ಶ್ರದ್ಧೆ ತಿಳಿಸುತ್ತದೆ.

ಈ ರೀತಿ ಬಾಂಧವ್ಯ, ಒಡನಾಟತನ ಅನ್ಯ ಜನಾಂಗದವರೊಂದಿಗಿರುವುದು ಕಾಣಬಹುದು. ಮೇದರು ತಮಗೆ ಬೇಕಾದ ಸೇವೆಗಳನ್ನು ಚಿಪ್ಪಿಗರು (ಸಿಂಪಿಗರು), ಬಳೆಗಾರ, ಮಡಿವಾಳ, ಕ್ಷೌರಿಕ, ಬಡಿಗ, ಅಕ್ಕಸಾಲಿಗ, ಕಮ್ಮಾರ, ಮಾದಾರ, ಛಲವಾದಿ, ಲಿಂಗಾಯಿತ (ಐನೋರು) ಬ್ರಾಹ್ಮಣ (ಪುರೋಹಿತ), ಕುಂಬಾರ, ಒಕ್ಕಲಿಗ, ವೈಶ್ಯ (ವ್ಯಾಪಾರ), ಮುಸ್ಲಿಂರು, ಕ್ರಿಶ್ಚಿಯನ್ನರು ಹೀಗೆ ಹಲವಾರು ಧರ್ಮ, ಜಾತಿ, ಸಮುದಾಯಗಳೊಂದಿಗೆ ಒಂದಿಲ್ಲೊಂದು ಕಾರಣಕ್ಕಾಗಿ ಪ್ರೀತಿ–ವಿಶ್ವಾಸದ ಬಾಂದವ್ಯವನ್ನು ಹೊಂದಿರುತ್ತಾರೆ. ಯಾವುದೇ ಸುಖ–ದುಃಖದ ಕಾರ್ಯಕ್ರಮದಲ್ಲಿ ಎಲ್ಲಾ ಜಾತಿಯವರೂ ಬಂಧುಗಳಂತೆ ಬಂದು ಹೋಗುತ್ತಾರೆ. ಬೇರೆ ಬೇರೆ ಸಮುದಾಯದವರ ಸುಖ–ದುಃಖದಲ್ಲಿ ಇವರೂ ಭಾಗಿಯಾಗುತ್ತಾರೆ.

ಅರಣ್ಯ ಇಲಾಖೆಯವರು ಮೇದರಿಗೆ ಕಿರುಕುಳ ಕೊಡುತ್ತಿದ್ದರೆ ಬೇರೆ ಜನಾಂಗದವರೇ ಮೇದರನ್ನು ಬೆಂಬಲಿಸುತ್ತಾರೆ. ಒಟ್ಟಾರೆ ಮೇದರು ಬೇರೆ ಬೇರೆ ಬುಡಕಟ್ಟು ಸಮುದಾಯದೊಂದಿಗೆ ಅನ್ಯೋನ್ಯವಾಗಿ ಬಾಳ್ವೆ ಮಾಡುತ್ತಿದ್ದು, ಊರಿನ ಅಂಚಿನಲ್ಲಿದ್ದವರು, ಊರು, ಪಟ್ಟಣ, ನಗರ ಬೆಳೆದಂತೆ ಕೇರಿ ಊರಿನೊಳಗೆ ಬರುತ್ತಾ ಬೇರೆ ಬೇರೆ ಸಮುದಾಯಗಳು ಮೇದರ ಕೇರಿಯನ್ನು ಸುತ್ತುವರೆದು ಎಲ್ಲರೊಂದಿಗೆ ಪ್ರೀತಿ–ವಿಶ್ವಾಸ–ಸಹಕಾರದಿಂದ ಹೊಂದಾಣಿಕೆಯ ಜೀವನ ನಡೆಸುತ್ತಿದ್ದಾರೆ. ನನ್ನ ಕ್ಷೇತ್ರಕಾರ್ಯದಲ್ಲಿ ಮೇದರ ಎಲ್ಲಾ ನೆಲೆಗಳಲ್ಲೂ ಇಂತಹ ಅಂಶಗಳು ವ್ಯಕ್ತವಾಗಿವೆ. ತರೀಕೆರೆ ತಾಲೂಕಿನಲ್ಲಿ ಕೊರಚ, ಕೊರಮರು ಮೇದರೊಂದಿಗೆ ಪ್ರೀತಿ–ವಿಶ್ವಾಸದಿಂದಿದ್ದಾರೆ. ಕಾಡಿನಿಂದ ಬಿದಿರನ್ನು ತಂದು ಮೇದರಿಗೆ ಪೂರೈಸುತ್ತಾರೆ. ತುರ್ತು ಇದ್ದಾಗ ಮೇದರು ಅವರಿಂದ ಬಿದಿರನ್ನು ಸಾಲವಾಗಿ ಪಡೆಯುತ್ತಾರೆ. ವೃತ್ತಿ ಸಂಬಂಧ ಕೊಡುಕೊಳ್ಳುವಿಕೆ ಎ.ರಂಗಾಪುರದಲ್ಲಿ ಹೆಚ್ಚಿರುವುದು ಕಂಡುಕೊಳ್ಳಲಾಯಿತು.

೨.೨ ಸಾಂಸ್ಕೃತಿಕ ಜೀವನ

ಮಾನವನು ಸಂಘಜೀವಿ ಮಾತ್ರವಲ್ಲ, ಸಾಂಸ್ಕೃತಿಕ ಜೀವಿಯೂ ಹೌದು. ಆತನ ವ್ಯಕ್ತಿತ್ವವು ಬೆಳವಣಿಗೆ ಹೊಂದುವುದೂ ಕೂಡ ಸಾಂಸ್ಕೃತಿಕ ಪರಿಸರದಲ್ಲಿ. ಆತನ ಆಂತರಿಕ ಶಕ್ತಿ, ಸಾಮರ್ಥ್ಯಗಳು ಬಹಿರಂಗವಾಗಿ ಪ್ರಕಟವಾಗಲು ವೇದಿಕೆಯನ್ನು ನಿರ್ಮಿಸಿಕೊಡುವುದೂ ಸಂಸ್ಕೃತಿ. ಮಾನವ ಸಮುದಾಯಗಳು ಹಲವಾರು ಸಾಂಸ್ಕೃತಿಕ, ಧಾರ್ಮಿಕ, ಆಚಾರ–ವಿಚಾರಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿರುತ್ತದೆ. ಅವರ ಸಂಸ್ಕೃತಿ, ಧಾರ್ಮಿಕ

[illegible]

ಹಿನ್ನೆಲೆ, ಕಲೆ, ಆರಾಧನೆ, ಕ್ರೀಡೆಗಳು ಮತ್ತು ಹಬ್ಬಗಳ ನಡುವೆ ಅವಿನಾಭಾವ ಸಂಬಂಧಗಳಿರುತ್ತವೆ. ಕರ್ನಾಟಕವು ಐತಿಹಾಸಿಕವಾಗಿ ಹಲವಾರು ಧರ್ಮ, ಪರಂಪರೆಗಳ ತಾಣವಾಗಿದ್ದು, ಇದರ ಸಾಂಸ್ಕೃತಿಕ ಪರಂಪರೆ ಮತ್ತು ಭೌಗೋಳಿಕ ಹಿನ್ನೆಲೆಯು ಇಲ್ಲಿನ ವೈವಿಧ್ಯಮಯ ಕಲೆ, ಆರಾಧನೆಗಳಿಗೆ ಕಾರಣವಾಗಿದೆ.

ಕರ್ನಾಟಕದ ಮೇದ ಬುಡಕಟ್ಟಿನ ಸಂಸ್ಕೃತಿ ವಿಶಿಷ್ಟವಾದುದು. ಅವರ ನಂಬಿಕೆ-ನಿಷೇಧಗಳು, ಆಚರಣೆಗಳು, ರೂಢಿ ಸಂಪ್ರದಾಯಗಳು, ಕಲೆ, ಹಬ್ಬ-ಹರಿದಿನ, ಲೋಕಾಚಾರಗಳು ಇತ್ಯಾದಿ ಇಂದಿನ ವೈಜ್ಞಾನಿಕ ಯುಗದಲ್ಲಿ ಪ್ರಶ್ನಾರ್ಹವಾದ ಕೆಲವೊಂದು ಆಚರಣೆಗಳನ್ನು ಇವರು ಮುಂದುವರಿಸಿಕೊಂಡು ಹೋಗುತ್ತಿರುವುದು ಅವರಿಗೆ ಪರಂಪರೆ, ಸಂಸ್ಕೃತಿಯ ಬಗೆಗೆ ಇರುವ ಅಪಾರ ಶ್ರದ್ಧೆ-ಗೌರವವನ್ನು ಸೂಚಿಸುತ್ತದೆ.

೨.೨.೧ ನಂಬಿಕೆಗಳು ಮತ್ತು ವಿಧಿ-ನಿಷೇಧಗಳು

ನಂಬಿಕೆಗಳು ಬದುಕಿನ ಆಸರೆಗಳು. ದಿನನಿತ್ಯದ ಬದುಕಿನಲ್ಲಿ ಈ ನಂಬಿಕೆಗಳು ಹಾಸುಹೊಕ್ಕಾಗಿರುತ್ತದೆ. ಸಾಮಾಜಿಕ ಮೌಲ್ಯಗಳಿಗೂ ಜನರ ಸಾಮಾಜಿಕ ಬದುಕಿಗೂ ಸಂಬಂಧವಿದೆ. ತಲತಲಾಂತರದಿಂದ ಬಂದ ನಂಬಿಕೆಗಳು ಇಂದಿಗೂ ಬದಲಾವಣೆಗಳೊಂದಿಗೆ ಮುಂದುವರಿಯುತ್ತಲೇ ಇದೆ. ನಂಬಿಕೆಯ ಭರವಸೆಯಿಂದ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯ. ನಂಬಿಕೆಗಳು ವಂಶಪಾರಂಪರ್ಯವೂ ಆಗಿರುತ್ತದೆ. ಪ್ರಾಚೀನ ನಂಬಿಕೆಗಳು ತುಸು ಮೌಢ್ಯವನ್ನು ಹೊಂದಿರುವುದಾದರೂ ವಿಜ್ಞಾನದೊಂದಿಗೆ ಹೆಚ್ಚು ಘರ್ಷಣೆಗೆ ಬೀಳುವುದಿಲ್ಲ. ಇವೆರಡೂ ತನ್ನ ಪಥದಲ್ಲಿಯೇ ಮುಂದುವರಿಯುತ್ತದೆ. ಕೇವಲ ಬೌದ್ಧಿಕ ಕಸರತ್ತಿಗಾಗಿ ಪರಸ್ಪರ ಜಳಪಿಸುವಿಕೆ ಕಾಣಬಹುದೇ ವಿನಃ ಸಂಘರ್ಷ ನಿರಂತರವಾಗಿರುವುದಿಲ್ಲ. ನಂಬಿಕೆಗಳು ವಿಜ್ಞಾನದ ಪ್ರಭೆಯಲ್ಲಿ ಮಸುಕಾಗುವುದಂತೂ ಸತ್ಯ. ಮೇದರಲ್ಲೂ ಎಲ್ಲಾ ಸಮುದಾಯಗಳಲ್ಲಿರುವಂತೆ ಕೌಟುಂಬಿಕ, ಧಾರ್ಮಿಕ, ಸಾಂಸ್ಕೃತಿಕ, ಆಹಾರ-ವಿಹಾರ ಇತ್ಯಾದಿ ಅಂಶಗಳಲ್ಲಿ ಅನೇಕ ನಂಬಿಕೆ-ನಿಷೇದಗಳನ್ನು ಕಾಣಬಹುದು. ಅವುಗಳೆಂದರೆ

ಚಪಕಾರಕ ವೃತ್ತಿ ನಮಗೆ ಬಂದಿರುವ ಬಳುವಳಿ

ಬಿದಿರನ್ನು ಸೀಳಿ ಬಾಳ್ವೆ ಮಾಡುವುದು ಮೇದರ ವಂಶಕ್ಕೆ ಕೊಡುಗೆಯಾಗಿ ಬಂದಿದೆ ಎನ್ನುತ್ತಾರೆ. ಶಿವ-ಪಾರ್ವತಿಯರು ಆಶೀರ್ವದಿಸಿ ಈ ವೃತ್ತಿಯನ್ನು ದಯಪಾಲಿಸಿದ್ದಾರೆಂದು ತಿಳಿಸುವರು.

ಎಷ್ಟೇ ದುಡಿದರೂ ನಾವು ಶ್ರೀಮಂತರಾಗುವುದಿಲ್ಲ

ಸುಂದರವಾದ ಬಾಗಿನ ಮರವನ್ನು ಕಂಡು ಹರ್ಷಿತರಾದ ದೇವತಾ ಮುತ್ತೈದೆಯರು ಮೇದನ ಕುಶಲತೆಯನ್ನು ಮೆಚ್ಚಿ ಮುತ್ತು-ರತ್ನಗಳನ್ನು ಕೊಟ್ಟರು. ಅವುಗಳ ಬೆಲೆಯನ್ನು

ಅರಿಯದ ಮೇದರು, ಅವುಗಳನ್ನು ಅಲ್ಲಿಯೇ ಬಿಟ್ಟು ಹೋಗುತ್ತಾನೆ. ಇದರಿಂದ ಕೋಪಗೊಂಡ ದೇವತೆಗಳು ಇವನ ವಂಶಜರಿಗೆ ತಮ್ಮ ಕುಲಕಸುಬಿನ ಪ್ರತಿಫಲದಿಂದ ಸಿರಿ-ಸಂಪತ್ತು ದೊರೆಯದಾಗಲಿ, ಇವರಿಗೆ ಹಿಡಿಗೂಳು ಮಾತ್ರ ಗತಿಯಾಗಲಿ ಎಂದು ಶಪಿಸಿದರು. ಈ ಶಾಪವೇ ಇಂದಿಗೂ ಮೇದರು ಎಷ್ಟೆ ದುಡಿದರೂ ಶ್ರೀಮಂತರಾಗುವುದಿಲ್ಲವೆಂದು ತಿಳಿಯುತ್ತಾರೆ.

ಎಳಬಿ ಹಬ್ಬದಲ್ಲಿ ಹತಾರ ಪೂಜೆ ಮಾಡಬೇಕು

ಕಿರು ಬಿದಿರು ಮೊಳಕೆಯೊಡೆದು ಕಳಲೆಯಾಗಿ ಸುಮಾರು ೨೫-೩೦ ಅಡಿ ಎತ್ತರಕ್ಕೆ ಬೆಳೆದಾಗ, ಅದು ಬಲಿಯುತ್ತದೆ. ಸುಮಾರು ೫-೬ ತಿಂಗಳು ಬಲಿತ ಈ ಬಿದಿರೇ ಎಳಬಿಯಾಗಿ, ಮೇದಾರಿಕೆಗೆ ಈ ಬಿದಿರು ಸಿದ್ಧವಾಗುತ್ತದೆ. ಇಂತಹ ಬಿದಿರನ್ನು ಕಡೆಯುವ ಮೊದಲು ಮೇದರ ಸಂಸ್ಕೃತಿಯಂತೆ ಮೇದರ ಹಟ್ಟಿಯ ಯಜಮಾನ ತನ್ನ ಮನೆಯಲ್ಲಿಯೇ ಮೇದರ ಕುಲಕಸುಬಿನ ಹತಾರಗಳನ್ನು ಪೂಜಿಸಿ, ಮಾರನೆ ದಿನ ಕುಲಸ್ತರಿಗೆ ತಮ್ಮ ಹತಾರಗಳನ್ನು ನೀಡುತ್ತಾನೆ. ನಂತರ ಕಾಡಿನ ಬಿದಿರು ಹಿಂಡಿಲೊಂದಕ್ಕೆ ಪೂಜಿಸಿ, ಬಿದಿರನ್ನು ಕಡಿಯುವರು.

ದೆಬ್ಬೆ ಸಿಬಿರು ನಾಟಬಾರದು

ಕರಕುಶಲತೆಯಲ್ಲಿ ಪ್ರಾವಿಣ್ಯ ಇರದವನು ಅಥವಾ ಅಜಾಗರೂಕತೆಯಿಂದ ಬಿದಿರಿನ ಕೆಲಸ ಮಾಡುವವನಿಗೆ ದೆಬ್ಬೆ ಸಿಬಿರು ನಾಟುತ್ತದೆ. ವೃತ್ತಿ ಕೌಶಲ್ಯದಲ್ಲಿ ಏಕಾಗ್ರತೆ ವಹಿಸಬೇಕೆಂಬ ಆಶಯವಾಗಿದೆ.

ಕತ್ತಿಕೊರಡು ಅಂಬು ನಮಸ್ಕರಿಸಿಯೇ ಕುಲಕಸುಬು ಆರಂಭಿಸಬೇಕು

ಬದುಕಿನ ಮೂಲಾಧಾರವಾದ ಮೇದಾರಿಕೆಯನ್ನು ಆರಂಭಿಸುವಾಗ ದೈವಸದೃಶ್ಯವಾದ ಹತಾರಗಳನ್ನು ನಮಸ್ಕರಿಸಿ ಕೆಲಸ ಆರಂಭಿಸಬೇಕು ಎಂಬ ನಂಬಿಕೆ ಈಗಲೂ ಇದೆ.

ಮೊರವನ್ನು ದಾಟಬಾರದು

ಮೊರದಾಟಿದರೆ ಮುಷ್ಠ ಮಾಡಿದಂತಾಗಿ ವ್ಯಾಪಾರ ಕುಸಿಯುತ್ತದೆ ಎಂಬ ನಂಬಿಕೆ ಮೇದರುಗಳಲ್ಲಿದೆ.

ಇವುಗಳ ಜೊತೆಗೆ ಈ ಕೆಳಕಂಡ ಅನೇಕ ನಂಬಿಕೆ-ನಿಷೇಧಗಳನ್ನು ಕಾಣಬಹುದು.

* ಮೇದರು ಗೌರಿ ಮಕ್ಕಳು
* ಗೌರಿಗೆ ಬಾಗಿನ ಮೊರ ತಯಾರಿಸಲು, ಸೃಷ್ಟಿಯಾದವರೇ ನಾವು
* ಎಷ್ಟೇ ದುಡಿದರೂ ನಾವು ಶ್ರೀಮಂತರಾಗುವುದಿಲ್ಲ
* ಚಪಕಾರಕ ವೃತ್ತಿ ನಮಗೆ ಬಂದಿರುವ ಬಳುವಳಿ

[illegible]

* ಕುಲದೇವತೆ, ಕುಲಾಧಿದೇವತೆ ಶ್ರೇಷ್ಠ
* ಕುಲದೇವತೆ ರಕ್ತ ಬಲಿಯನ್ನೇ ಹೆಚ್ಚು ಬೇಡುವಳು
* ಕುಲದೇವತೆಗೆ ಮುಟ್ಟುಚಟ್ಟು ಆಗಬಾರದು
* ಕುಲದೇವತೆಗೆ ಪರದೆ ಬಿಡಬೇಕು
* ಕುಲದೇವತೆಯನ್ನು ಪ್ರತ್ಯೇಕವಾಗಿ ಪೂಜಿಸಬೇಕು
* ಮಂಗಳವಾರ, ಶುಕ್ರವಾರ ಕುಲದವಾರ
* ಸೋಮವಾರ ಮಂಜುನಾಥಸ್ವಾಮಿ ವಾರ
* ಸೋಮವಾರ ಮಾಂಸಭೋಜನ ನಿಷಿದ್ಧ
* ಹಂದಿ ಮಾಂಸ ತಿನ್ನಬಾರದು
* ಮಾಂಸದಡಿಗೆ ಕೊಟ್ಟಿಗೆ ಒಲೆಯಲ್ಲಿ ಮಾಡಬೇಕು
* ಚೌಡಿ ಪೂಜೆಗೆ ಕೊಯ್ದ ಕೋಳಿಯ ಅಡುಗೆ ನಡು ಮನೆಯಲ್ಲೇ ಮಾಡಬೇಕು
* ಚೌಡಿಗೆ ನಾಲ್ಕು ಕಾಲು ಬ್ಯಾಟೆ ಮನೆಯೊಳಗೇ ಕಡೀಬೇಕು
* ಚೌಡಿ ನಮ್ಮನ್ನು ಕಾಪಾಡುತ್ತಾಳೆ
* ಚೌಡಿ ಇದ್ರೆ ಭೂತ-ಪ್ರೇತ ಹೊಸ್ತಿಲು ಪ್ರವೇಶಿಸದು
* ಎಳಬಿ ಹಬ್ಬ ಮಾಡದೆ ಬಿದಿರು ಕಡಿಬಾರದು
* ಎಳಬಿ ಹಬ್ಬದಲ್ಲಿ ಹತಾರ ಪೂಜೆ ಮಾಡಬೇಕು
* ಬಿದಿರು ಹಿಂಡಲಿಗೆ ಪೂಜೆ ಮಾಡಬೇಕು
* ಚೌಡಿಗೆ ಕೋಳಿ ತಲೆಗಳೇ ಆಭರಣ
* ಚೌಡಿಗೆ ನೀವಾಳಿಸಿದ ಹಣ್ಣು ನಾಲ್ಕು ದಿಕ್ಕಿಗೂ ಎಸೆಯಬೇಕು
* ಚೌಡಿ ಪೂಜಿಸಿ ಹಿಂದಕ್ಕೆ ತಿರುಗಿ ನೋಡಬಾರದು
* ಕೇರಿಯ ಹೊರಗೆ ಮುಷ್ಠ ಮಾಡಿಸಬೇಕು
* ಮುಟ್ಟುಚಟ್ಟು ಆದಾಗ ತಪ್ಪು ಕಾಣಿಕೆ ಕಟ್ಟಬೇಕು
* ನೇವೇದ್ಯ ಮಾಡದೆ ಒಂದಗಳೂ ತಿನ್ನಬಾರದು
* ಉಪವಾಸ ಮಾಡಿ ವೃತ ಮಾಡಬೇಕು
* ಗಂಗೆ ಪೂಜೆ ಇಲ್ದೆ ಪೂಜೆ ಪುನಸ್ಕಾರ ಇಲ್ಲ
* ಗಂಗೆ ಹೊತ್ಕೊಂಡೋರಿಗೆ ದೇವರು ಬರಬೇಕು
* ದೇವರಿಗೆ ದೃಷ್ಟಿ ನೀವಾಳಿಸಲು ಅರಿಶಿನ-ಕುಂಕುಮ ನೀರು ಚೆಲ್ಲಬೇಕು
* ಶುಭ ಸಮಾರಂಭದಲ್ಲಿ ದಾಸಯ್ಯ (ಮುದ್ರಕಾರ)ನಿಗೆ ಎಡೆ ನೀಡಬೇಕು
* ಮುದ್ರೆಕಾರರು ವರ್ಷಕ್ಕೊಮ್ಮೆ ವೇಷಧರಿಸಿ ಭಿಕ್ಷೆ ಎತ್ತಬೇಕು

* ಮುಟ್ಟಾದ ಹೆಂಗಸು ಮೂರು ದಿನ ಒಳಗೆ ಹೋಗಬಾರದು
* ಯಾವುದೇ ಶುಭ ಸಮಾರಂಭಕ್ಕೆ ಮುಟ್ಟಾದವರು ಹೋಗಬಾರದು
* ಮುತ್ತೈದೆತನ ಶ್ರೇಷ್ಠ
* ಕೋರು ಹುಡುಗರೇ ದೇವರು ಹೊರಬೇಕು
* ಬಂಜೆಯರ ಎದುರಿಗೆ ಹಾಲುಣಿಸಬಾರದು
* ಕೆಟ್ಟ ಕಣ್ಣಿನವಳು ಹಾಳುಗೆಡವುತ್ತಾಳೆ
* ಮಗು–ಬಾಣಂತಿ ತಲೆದೆಸೆಯಲ್ಲಿ ಅಂಬಿಡಬೇಕು
* ಮಗು–ಬಾಣಂತಿ ಕಾಲದೆಸೆಯಲ್ಲಿ ಹಿಡಿ (ಪೊರಕೆ) ಇಡಬೇಕು
* ಮನೆಯ ಸೂರಿಗೆ ಪಪ್ಪಾಸ್‌ಕಳ್ಳಿ ಮುಳ್ಳು ಕಟ್ಟಿದರೆ ದೆವ್ವ ಬರೊಲ್ಲ
* ಮನೆಯ ಸೂರಿಗೆ ಕತ್ತಿ ಸಿಕ್ಕಿಸಬೇಕು
* ರಾತ್ರಿ ಹೊತ್ತು ಹಾವಿಗೆ ಬಳ್ಳಿ ಅನ್ನಬೇಕು
* ಮಕ್ಕಳು ರಚ್ಚೆ ಮಾಡಿದ್ರೆ ರಂಚು ಹಾಕಬೇಕು
* ಸುಡುಕೆ ಹಾಕಿದ್ರೆ ಮೈಬಿಸಿ ಕಡಿಮೆ ಆಗ್ತದೆ
* ಮಗುವಿಗೆ ದೃಷ್ಟಿ ಬೊಟ್ಟು ಕಾಡಿಗೆ ಹಚ್ಚಿದ್ರೆ ದೃಷ್ಟಿ ಬೀಳೊಲ್ಲ
* ಹಸಿ ಮೈ ಮದ್ಲಿಂಗ ಸ್ಮಶಾನ ಕಡೆ ಹೋಗಬಾರದು
* ಅಮಂಗಲ ಕಾರ್ಯಕ್ಕೆ ವಿಧವೆಯರಿರಬೇಕು
* ಶುಭ ಕಾರ್ಯಕ್ಕೆ ಮುತ್ತೈದೆಯರಿರಬೇಕು
* ಕಂಕಣ ಕಟ್ಲಿಲ್ಲ ಅಂದ್ರೆ ಅಪಮೌಲ್ಯ ಎಂದರ್ಥ
* ದೇವರ ಮಂಡ್ಲಕ್ಕೆ ಹಾಕುದ್ರೆ ರೋಗ ನಿವಾರಣೆ ಆಯ್ತೆಂದೆ ಅರ್ಥ
* ಕಟ್ಲೆಕಾಯಿ ಕಟ್ಟುದ್ರೆ ಶಕ್ತಿ ದೇವತೆ ವಾಸಿಸುತ್ತೆ
* ತೊಟ್ಲುಕಾಯಿ ಬಿತ್ತು ಅಂದ್ರೆ ಗಂಡು ಮಗು ಆಗುತ್ತೆ
* ಎರಡು ಸುಳಿ ಇತ್ತು ಅಂದ್ರೆ ಎರಡು ಮದುವೆ ಆಗುತ್ತೆ
* ನಾಲಿಗೆ ಮೇಲೆ ಮಚ್ಚೆ ಇದ್ರೆ ಹೇಳ್ದಂಗೆ ಆಗುತ್ತೆ
* ಮೇದರಿಗೆ ಹಾವು–ಹುಳ ಕಾಟ ಆಗ್ಬಾರ್ದು ಅಂತ ದೇವರೆ ಹೇಳಿದ್ದಾನೆ
* ಮನೆ ಮೇಲೆ ಕಾಗೆ ಕೂಗಿದ್ರೆ ನೆಂಟ್ರು ಬರ್ತಾರೆ
* ಕೆಂಡ ಜಗಮಗಸಿದರೆ ಸಿಹಿ ಸುದ್ದಿ ಎಂದರ್ಥ
* ಎಡಗಣ್ಣು ಅದುರಿದರೆ ಕೆಟ್ಟ ಸುದ್ದಿ ಕೇಳ್ತೀನಿ
* ಎಡಗೈ ಕಡತ ಬಂದರೆ ಕೆಟ್ಟ ಸುದ್ದಿ ಕೇಳ್ತೀನಿ
* ಬಲ ಅಂಗೈ ಕರೆತ ಬಂದರೆ ಅದೇಷ್ಟ

* ಒಂಟಿ ಸೀನು ಸೀನಿದ್ರೆ ಅಪಶಕುನ
* ಶುಭ ಮಾತನಾಡುವಾಗ ಹಲ್ಲಿ ಲೋಚಗುಟ್ಟಿದರೆ ಅಪಶಕುನ
* ಒಂಟಿ ಬ್ರಾಹಣ, ವಿಧವೆ, ವಿಧುರ, ಹೆಣದ ಚಟ್ಟ, ಖಾಲಿಕೊಡ, ಬಹಿರ್ದೆಸೆಗೋದವರು ಎದುರು ಬಂದರೆ ಅಪಶಕುನ
* ಬೆಕ್ಕು ಎಡದಿಂದ ಬಲಕ್ಕೆ ಹೋದರೆ ಅಪಶಕುನ
* ಊಟ ಮಾಡುವಾಗ ತುತ್ತು ಜಾರಿ ಕೆಳಗೆ ಬಿದ್ದರೆ ಅಪಶಕುನ
* ಆಕಾಶಕ್ಕೆ ಮುಖವಿಟ್ಟು ರಾತ್ರಿ ವೇಳೆ ನಾಯಿ ಬೊಗಳಿದರೆ ದೆವ್ವ ನೋಡಿತೆಂದು ಅರ್ಥ
* ಅನ್ನ ತಿನ್ನುವಾಗ ನೆತ್ತಿಗೇರಿದರೆ ಅನಿಷ್ಟ ಎಂದು ಅರ್ಥ
* ದೆಬ್ಬೆ ಸಿಬುರು ನಾಟಬಾರದು
* ಮೊರವನ್ನು ದಾಟಬಾರದು
* ಕತ್ತಿ, ಕೊರಡು, ಅಂಬು ನಮಸ್ಕರಿಸಿಯೇ ಬಿದಿರು ಕೆಲಸ ಮಾಡಬೇಕು
* ಮೇದರು ಮೊರದಲ್ಲಿ ಬಾಗಿನ ಕೊಡಬಾರದು
* ಮಗುವನ್ನು ತೊಟ್ಟಿಲಲ್ಲಿ ತೂಗಬಾರದು
* ಮನೆಯ ಹೊರಗೆ ಊಟ ಮಾಡಬಾರದು
* ಮಾಂಸಾಹಾರ ನಿರ್ಜನ ಪ್ರದೇಶದಲ್ಲಿ ತಿನ್ನಬಾರದು ಪೀಡೆ, ಪಿಶಾಚಿ ಪೀಡನೆ
* ಮನೆಯ ಹೊರಗೆ ಊಟ ಮಾಡುವಾಗ ತುತ್ತನ್ನು ನೀವಾಳಿಸಿ ಎಸೆಯಬೇಕು
* ಮಾಂಸ–ಮೀನಿನ ಸಾರು ಒಂದು ಕಡೆಯಿಂದ ಇನ್ನೊಂದೆಡೆ ತೆಗೆದುಕೊಂಡು ಹೋಗುವಾಗ ಒಣ ಮೆಣಸಿನಕಾಯಿ, ಇದ್ದಿಲು ಚೂರು ಹಾಕಿಕೊಂಡು ಹೋಗಬೇಕು
* ಅಮವಾಸ್ಯೆ ದಿನ ಮಕ್ಕಳು ಹುಟ್ಟಿದರೆ ಅಶುಭ
* ಏಳನೇ ತಿಂಗಳಿಗೆ ಮಗು ಜನಿಸಬಾರದು
* ತೊನ್ನಿದ್ದವರು ಸತ್ತರೆ ಶವದ ಜೊತೆಗೆ ಉಪ್ಪು ಹಾಕಿ ಬೋರಲು ಹುಗಿಯಬೇಕು
* ಮಳೆ ಬರದಿದ್ದರೆ, ತೊನ್ನಿಂದ ಸತ್ತ ದೇಹವನ್ನು ಹೊರತೆಗೆದು ಸುಡಬೇಕು
* ಭೀಮಂತ್ಸೆ, ಕೋರು ಮಕ್ಕಳು ಸತ್ತರೆ ಸುಡಬೇಕು
* ಗರ್ಭಿಣಿ ಮೇಲೆ ಹಕ್ಕಿ ನೆರಳು ಬೀಳಬಾರದು
* ಗರ್ಭಿಣಿ ಹೆಂಡತಿ ಇದ್ದರೆ ಗಂಡ ಶವದ ಗುಂಡಿಗೆ ಮಣ್ಣಾಕಬಾರದು
* ಮುಟ್ಟಿನ ಬಟ್ಟೆ ಅಗಸರಿಗೆ ಹಾಕಬೇಕು
* ಸೂತಕ ತೆಗೆಯದೆ ಕೊಡ ಮುಟ್ಟುವಂತಿಲ್ಲ (ಗಂಗೆ)
* ಮನೆಯಲ್ಲಿ ಗಾಳಿ ಇರುವೆ ಜಾಸ್ತಿಯಾದರೆ ಅದೃಷ್ಟ
* ಕನ್ನಡಿ ಒಡೆದರೆ ಬದುಕು ಒಡೆಯುತ್ತದೆಂಬ ನಂಬಿಕೆ

* ಅಮ್ಮ (ಡಡಾರ)ನಿಗೆ ಶುದ್ಧ ಪೂಜೆ ಮಾಡಬೇಕು
* ಮಾರಿಹಬ್ಬದಲ್ಲಿ ಬೇವಿನ ಉಡುಗೆ ಹಾಕಲು ಅರಕೆ ಮಾಡಿಕೊಳ್ಳುವರು
* ಕೆಲಸ ನೆರವೇರಿದರೆ ೨ ಅಥವ ೪ ಕಾಲಿನ ಬೇಟೆ ದೇವರಿಗೆ ಅರ್ಪಿಸುವರು
* ಎಲ್ಲದನ್ನೂ ಸುಸೂತ್ರವಾಗಿ ನಡೆಸಿಕೊಂಡು ಬಾ ನನ್ನ ದೇವರೆ (ಅರಿಕೆ)
* ಕೆಟ್ಟ ದಿನಗಳಲ್ಲಿ ಸತ್ತರೆ ಸತ್ತ ದೋಷದಿಂದ ಮನೆ ಬಿಡಬೇಕು
* ಅಪ್ಪ ತೀರಿದರೆ ಹಿರಿಯ ಮಗ ತಲೆ ಕೊಡಬೇಕು
* ಅಮ್ಮ ತೀರಿದರೆ ಕಿರಿಯ ಮಗ ತಲೆ ಕೊಡಬೇಕು
* ಹೆಂಡತಿ ಗರ್ಭವತಿಯಿದ್ದರೆ ಗಂಡು ಮಕ್ಕಳು ತಲೆಕೊಡಬಾರದು
* ಕಾಡುದೇವತೆಗಳನ್ನು ನೆನೆದು ಬಿದಿರು ಕಡಿಯಬೇಕು
* ಹೆಣ ಹೂಳುವಾಗ ದಕ್ಷಿಣಕ್ಕೆ ತಲೆ ಬರಬೇಕು
* ಮೂರುದಿನ ಕೂಳಿಗೆ ಬೆಡಗಿನ ಅಣ್ಣ-ತಮ್ಮಂದಿರು ಇರಬೇಕು
* ಆಕಸ್ಮಿಕ ಸಾವಿನ ವ್ಯಕ್ತಿಯ ಚಿತೆಗೆ ಕೆಂಪು ಹುಂಜ ನೀವಾಳಿಸಿ ಬಿಡಬೇಕು
* ಮನೆಯ ಸೂತಕ ಹೋಗಲು ಪುಣ್ಯಾಹ ಮಾಡಿಸಬೇಕು

೨.೨.೨ ಆಚರಣೆಗಳು, ಸಂಪ್ರದಾಯಗಳು ಹಾಗೂ ಹಬ್ಬಹರಿದಿನಗಳು

ಮೇದರ ಆಚರಣೆ ಮತ್ತು ಸಂಪ್ರದಾಯಗಳು ವಿಭಿನ್ನ ಹಾಗೂ ವಿಶಿಷ್ಟವಾಗಿವೆ. ಇವು ಹುಟ್ಟಿನಿಂದ ಸಾವಿನವರೆಗಿನ ಆವರ್ತನೆಗಳಾಗಿವೆ. ಹಿರಿಯ ಅಜ್ಜಿಯರು ಮನೆಯ ಪ್ರತ್ಯೇಕ ಕೋಣೆಯಲ್ಲಿ ಸಹಜ ಹೆರಿಗೆ ಮಾಡಿಸುವರು. ಕರಳು ಬಳ್ಳಿ ಕತ್ತರಿಸುವ ಮುನ್ನ ಮನೆ ದೇವರಿಗೆ ನಮಸ್ಕರಿಸಿ, ಎಲ್ಲರಿಗೂ ಒಳ್ಳೆಯದಾಗಲಿ ಎಂದು ಬೇಡುವರು. ಕತ್ತರಿಸಿದ ಹೊಕ್ಕಳು ಬಳ್ಳಿ, ಮಾಸನ್ನು ಮಡಕೆಯಲ್ಲಿ ಹಾಕಿ ತಂಪು ಜಾಗದಲ್ಲಿ ಹುಗಿಯುತ್ತಾರೆ. ಮೂರನೇ ದಿನದಂದು ಹೂಳಿದ ಮಡಕೆಗೆ ಹಾಲು, ನೀರು ಬಿಟ್ಟು ಪೂಜಿಸುತ್ತಾರೆ. ಯಾವ ತೊಂದರೆ ತಾಪತ್ರಯ ನೀಡದೆ ಪಂಚಭೂತಗಳಲ್ಲಿ ಲೀನವಾಗು ಎಂದು ಸ್ಮರಿಸುತ್ತಾರೆ. ಒಂಬತ್ತನೇ ದಿನ ಗೋಮೂತ್ರ ಹಾಕಿ ಶುದ್ಧ ಪಡಿಸುತ್ತಾರೆ.

ಈಚಿನ ದಿನಗಳಲ್ಲಿ ಭಟ್ಟರ ಮನೆಯಿಂದ ಪುಣ್ಯಾಹದ ನೀರನ್ನು ತಂದು ಮನೆಯ ಕೊಟ್ಟಿಗೆ, ದೇವರ ಮನೆ, ಅಟ್ಟ ಹೀಗೆ ಎಲ್ಲಾ ಕಡೆ ಚಿಮುಕಿಸುತ್ತಾರೆ. ೧೧ನೇ ದಿನ ಮನೆಯನ್ನು ಸಾರಿಸಿ ಶುದ್ಧಮಾಡಿ ಮಾವು, ಹಲಸಿನ ಸೊಪ್ಪು ಕಟ್ಟುತ್ತಾರೆ. ಮುತ್ತೈದೆಯರು ಬಾಣಂತಿಗೆ ನೀರು ಹೊಯ್ಯುತ್ತಾರೆ. ನಾಮಕರಣದವರೆಗೂ ಮಗುವನ್ನು ಮೊರದಲ್ಲಿ ಮಲಗಿಸುತ್ತಾರೆ. ಮಗುವಿನ ಜನ್ಮರಾಶಿ, ತಿಥಿ, ಗಳಿಗೆಯನ್ನು ಪುರೋಹಿತರಿಂದ ಜಾತಕ ಬರೆಯಿಸುವ ಪರಿಪಾಠವಿದೆ. ಆಧುನಿಕ ಹೆಸರುಗಳನ್ನು ಕರೆಯುವ ಹೆಸರಾದರೂ ಹುಟ್ಟಿದ ಹೆಸರಾಗಿ ಕುಲದ ದೇವರು ಇಲ್ಲವೇ ತಾತ ಮುತ್ತಜ್ಜಿ ಹೆಸರನ್ನು ಮಗುವಿನ ತಂದೆ ತನ್ನ ಮಗುವಿನ ಕಿವಿಯಲ್ಲಿ

ಉಸುರುವನು. ಹೆರಿಗೆ ಆದಾಗ ಭಟ್ಟಿ ಸರಿಯಬಾರದು ಎಂದು ನಡುವಿಗೆ ನಡುಪಟ್ಟಿಯನ್ನು ಕಟ್ಟಿ ಕಿವಿಗೆ ಹತ್ತಿ ಇಟ್ಟು, ತಲೆಗೆ ಬೆಚ್ಚನೆಯ ವಸ್ತ್ರ ಬಿಗಿಯುತ್ತಾರೆ. ಬೆಚ್ಚನೆಯ ಉಡುಗೆ, ತಾಯಿ ಮತ್ತು ಮಗು ಇಬ್ಬರಿಗೂ ಹಾಕುತ್ತಾರೆ. ಬಾಣಂತಿ ಕೋಣೆಗೆ ಎಲ್ಲರಿಗೂ ಪ್ರವೇಶವಿರುವುದಿಲ್ಲ. ತಾಯಿ ಮಗುವಿಗೆ ಹಾಲುಣಿಸುವಾಗ, ಬಾಣಂತಿ ಊಟ ಮಾಡುವಾಗ 'ಕಾಲುಧೂಳು' ಆಗುತ್ತದೆಂದು ಎಚ್ಚರವಹಿಸುತ್ತಾರೆ. ನಾಮಕರಣಕ್ಕೆ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳುವರು. ಹೊಸ ಬಿದಿರಿನ ತೊಟ್ಟಿಲಿಗೆ ಸಿಂಗಾರ ಮಾಡುವರು. ಅಟ್ಟದ ಅಡ್ಡ ಬೆಲಗಿನಿಂದ ಇಳಿಬಿಟ್ಟ ಹಗ್ಗಕ್ಕೆ ಬಣ್ಣದ ಸೀರೆ ಇಳೆಬಿಟ್ಟು, ತೊಟ್ಟಿಲನ್ನು ಬಣ್ಣಬಣ್ಣದ ವಸ್ತ್ರಗಳಿಂದ ಅಲಂಕರಿಸುವರು. ತೊಟ್ಟಲಿನ ಒಳಾಯಕ್ಕೆ ಸರಿಯಾಗಿ ಹೊಸ ಹಾಸಿಗೆಯೊಂದನ್ನು ಹೊಲಿದು ತರುತ್ತಾರೆ. ಮನೆ ಮುಂಭಾಗ ಸಗಣಿಯಿಂದ ಸಾರಿಸಿ ಒಪ್ಪಓರಣವಾಗಿಟ್ಟುಕೊಂಡು ಹಸಿರು ಚಪ್ಪರ ಹಾಕಿರುತ್ತಾರೆ.

ಮನೆ ದೇವರಿಗೆ ಮೊದಲ ಪೂಜೆ ನಡೆಯುತ್ತದೆ. ಬಾಣಂತಿ ಮಗುವಿಗೆ ಹೊಸ ಬಟ್ಟೆ ಹಾಕಿರುತ್ತಾರೆ. 'ತೊಟ್ಟಿಲ ಪೂಜೆ' ಮಾಡಿ ಮಗುವನ್ನು ಮೊದಲು ಸೋದರತ್ತೆ ತೊಟ್ಟಿಲಿನ ಎಡಬದಿಯಿಂದ ಮಗುವಿನ ಹುಟ್ಟಿದ ಹೆಸರನ್ನು ಮಗುವಿನ ಕಿವಿ ಹತ್ತಿರ ಕೂಗುತ್ತಾ, ಬಿಸಾಕ್ತಿನಿ...ಬಿಸಾಕ್ತಿನಿ...ಬಿಸಾಕ್ತಿನಿ ಎಂದು ಮೂರು ಸಾರಿ ಹೇಳಿ ಪುನಃ ಸೋದರತ್ತೆ ಕೈಗೆ ಮಗುವನ್ನು ತೊಟ್ಟಿಲಿನ ಕೆಳಗಿನಿಂದ ನೀಡಬೇಕು. ಈ ಪ್ರಕ್ರಿಯೆ ಮೂರು ಬಾರಿ ನಡೆದ ಮೇಲೆ ಕುಲಸ್ಥರ ಸಮ್ಮುಖದಲ್ಲಿ ಮಗುವನ್ನು ತೊಟ್ಟಿಲಿಗೆ ಹಾಕುತ್ತಾರೆ. ಮುತ್ತೈದೆಯರು ಸಂದರ್ಭಕ್ಕೆ ತಕ್ಕಂತೆ ಸೋಬಾನೆ ಹಾಡುಗಳನ್ನು ಹಾಡುತ್ತಾರೆ. ವೀಳ್ಯದೆಲೆ ಮರ್ಯಾದೆ ಎಲ್ಲರಿಗೂ ನಡೆಯುತ್ತದೆ. ಹೂ, ಅರಿಶಿನ, ಕುಂಕುಮ ನೀಡಿ ಮುತ್ತೈದೆಯರನ್ನು ಉಪಚರಿಸಲಾಗುತ್ತದೆ. ಸಿಹಿಯನ್ನು ಹಂಚಲಾಗುತ್ತದೆ. ಮಗುವಿಗೆ ಮುಯ್ಯಿ ಮಾಡಲಾಗುತ್ತದೆ. ನೆಂಟರಿಸ್ಟರಿಗೆಲ್ಲ ಊಟದ ವ್ಯವಸ್ಥೆ ಮಾಡಲಾಗುತ್ತದೆ.

ಮಗುವಿಗೆ ಒಂದು ವರ್ಷ ತುಂಬುವುದರೊಳಗೆ ಅಥವ ನೆತ್ತಿ ನಿಂತ ಮೇಲೆ 'ಜವಳ ಕಾರ್ಯ' ಮಾಡಲಾಗುತ್ತದೆ. ಹುಟ್ಟಿದ ಮಗುವಿಗೆ ಮೊಟ್ಟಮೊದಲ ಕೂದಲು ಕತ್ತರಿಸುವ ಕಾರ್ಯ. ಜವಳವನ್ನು ತಮ್ಮ ಮಂದೇವರಲ್ಲಿ (ಮನೆ ದೇವರು) ತೆಗೆಸುವುದು ವಾಡಿಕೆ. ತಮ್ಮ ಹತ್ತಿರದ ಬಂಧುಗಳೆಲ್ಲರಿಗೂ ಆಹ್ವಾನ ನೀಡಿ ಮನೆ ದೇವರಲ್ಲಿ ತೆರಳುವರು. ಹಾಗಲ ಮನೆ ಸಿದ್ದೇಶ್ವರ, ಎಂಜೆರೆ ಭೈರವೇಶ್ವರ, ಸಗನಿರಂಗನಾಥಸ್ವಾಮಿ, ರಾಮೇಶ್ವರ, ಚಾಮುಂಡೇಶ್ವರಿ (ಸೇಲಂ), ವಗ್ರಳ್ಳಿ ರಂಗನಾಥಸ್ವಾಮಿ, ಕದಲಿ ರಂಗನಾಥಸ್ವಾಮಿ, ಸಾದ್ರಳ್ಳಿ ರಂಗನಾಥಸ್ವಾಮಿ, ಮರಳಸಿದ್ದೇಶ್ವರ, ಅರಿಸೀಕೆರೆ ಶಂಕರೇಶ್ವರ, ಮಾಳಮ್ಮ, ಗಿರಿರಂಗನಾಥಸ್ವಾಮಿ ಈ ದೇವಾನುದೇವತೆಗಳು ಚಿಕ್ಕಮಗಳೂರು ಜಿಲ್ಲೆಯಲ್ಲಿ ವಾಸವಿರುವ ಮೇದರ ಮನೆ ದೇವರುಗಳಾಗಿವೆ. 'ಜವಳ ಕಾರ್ಯ'ಕ್ಕೆ ಈ ದೇವಸ್ಥಾನಗಳಿಗೆ ತೆರಳುವರು. ಪೂಜಾರಿ ಎಲೆಗತ್ರಿ ಮುಟ್ಟಿಸಿ, ಅಣುಕು

ಜವಳ ಮಾಡಿದ ನಂತರ ಸೋದರ ಮಾವ ಮೊದಲಿಗೆ ಕತ್ತರಿಯಿಂದ ಮುಂಗೂದಲನ್ನು ಸಾಂಕೇತಿಕವಾಗಿ ಕತ್ತರಿಸಿದ ಮೇಲೆ ಕ್ಷೌರಿಕನು ಜವಳ ತೆಗೆಯುವನು. ತವರಿನವರು ಮಗು, ಮಗಳು ಮತ್ತು ಅಳಿಯನಿಗೆ ಹೊಸ ಬಟ್ಟೆ ಉಡುಗೊರೆಯಾಗಿ ನೀಡುವರು. ಕೆಲವರು ಪ್ರಾಣಿಬಲಿ ನೀಡಿದರೆ ಕೆಲವರು ಶಾಖಾಹಾರ ನೇವೇದ್ಯ ಮಾಡಿ ಬಂದವರಿಗೆ ಊಟೋಪಚಾರ ಮಾಡುವರು.

ಮಗುವಿನ ಬಾಲಗ್ರಹ ದೋಷ ಮಗುವಿನಲ್ಲಿ ಸಾಮಾನ್ಯವಾಗಿ ಬರುವುದಾಗಿದೆ. ಮೇದರು ಇದನ್ನು ಭೂತ ಚೇಷ್ಟೆಯೆಂದು ತಿಳಿಯುವರು. ಒಂದು ವರ್ಷ ತುಂಬುವುದರೊಳಗೆ ಮಗುವಿನ ವಿಚಿತ್ರ ವರ್ತನೆಯನ್ನು ಹಿರಿಯ ಹೆಂಗಸರು ಗುರ್ತಿಸುವರು. ಸಾಸಿವೆ, ಉಪ್ಪು ಮತ್ತು ಪೊರಕೆಯ ಒಂದು ಎಸಳನ್ನು ಎಡಗೈಯಲ್ಲಿ ಹಿಡಿದುಕೊಂಡು ಮಗುವಿನ ತಲೆಯಿಂದ ಕಾಲಿನವರೆಗೆ ಮೂರು ಸಾರಿ ನೀವಾಳಿಸಿ ಅದನ್ನು ತೂತೂ ಎಂದು ಉಗಿದು, ಉರಿಯುವ ಒಲೆಗೆ ಹಾಕಿ ಮಗುವಿನ ತಲೆಯಿಂದ ಕಾಲಿನವರೆಗೆ ಕೈಯಿಂದ ನೀವಾಳಿಸಿ ಕಾಲಿನ ಬಳಿ ಲಡಕೆ ಮುರಿಯುವರು. ಹೊಕ್ಕಳ ಮೇಲೆ ಹರಳೆಣ್ಣೆ ಹಚ್ಚಿದ ವೀಳ್ಯೆದೆಲೆ ಬಿಸಿ ಮಾಡಿ ಹಾಕುವುದು. ನೆತ್ತಿ ಉರುಬುವುದು, ಬಜೆ ತೇಯ್ದು ನೆಕ್ಕಿಸುವುದು, ಬೋರಾಲಾಗಿ ಮಲಗಿಸಿ ತಟ್ಟುವುದು, ದೇವರಿಗೆ ಮುಡಿಪು ಕಟ್ಟುವುದು, ರಂಚು ಹಾಕುವುದು, ಕೆಂಡ ತೆಗೆಯುವುದು ಇವೆಲ್ಲ ಆದ ಮೇಲೆ ಬಾಲಗ್ರಹ ನಿವಾರಣೆಗೆ ತಯಾರು ಮಾಡಿಕೊಳ್ಳುವರು. ಗುಪ್ತವಾಗಿ ಸ್ಮಶಾನ ಜಾಗದಿಂದ ಮಣ್ಣನ್ನು ತಂದು ಹದಗೊಳಿಸಿ ಮನುಷ್ಯನ ಆಕಾರ ಮಾಡಿ ಹರಿದು ಹೋದ ಹಳೇ ಮೊರದಲ್ಲಿ ಮಲಗಿಸುತ್ತಾರೆ.

ಐದು ಧಾನ್ಯ, ಐದು ವಿಧದ ಹೂ, ಕೆಂಪನ್ನ, ಕಪ್ಪನ್ನದ ೫ ಮುದ್ದೆ, ತುಂಡರಿಸಿದ ಎರಡು ಹೋಳು ನಿಂಬೆಹಣ್ಣು, ಒಂದು ಕೋಳಿ ಮೊಟ್ಟೆ, ಅರಿಶಿನ, ಕುಂಕುಮದಿಂದ ಮಣ್ಣಿನ ಗೊಂಬೆಯನ್ನು ವಿಕಾರವಾಗಿ ಬಳಿದು ಆ ಮೊರವನ್ನು ಮಗುವಿಗೆ ಮೂರು ಸಾರಿ ನೀವಾಳಿಸಿ, ಗೋಧೂಳಿ ಸಮಯದಲ್ಲಿ ಮೂರು ಜಾಗ ಕೂಡುವ ಜಾಗದಲ್ಲಿ ಅದನ್ನು ಇಟ್ಟು ಒಂದು ಉರುಯುವ ಪಂಜಿಟ್ಟು ಕೇರಿ ಕಡೆಗೆ ಮೂರು ಸಾರಿ ಕತ್ತಿಯಿಂದ ಕೊರೆದು ಇಷ್ಟಕ್ಕೇ ನಿನ್ನ ಆಟ ಬಿಟ್ಟು ಬಿಡು, ಏನೂ ತಿಳಿಯದ ಮಕ್ಕಳಿಗೆ ಕಾಟಕೊಟ್ಟು ಹಾಳಾಗ್ಬೇಡ. ಎಂದು ಬೈದು ಮೂರು ಸಾರಿ ಉಗುಳಿ ತಿರುಗಿ ನೋಡದೆ ಊರಿನ ಕಡೆ ಯಜಮಾನ ಬರುತ್ತಾನೆ. ಪ್ರೇತಾತ್ಮದ ಕಾಟವೆಂದೇ ಭಾವಿಸುತ್ತಾರೆ.

ಕನ್ನಡಿಗ ಮೇದರಲ್ಲಿ ಮೈನೆರೆದಾಗ ಸೋದರ ಮಾವನು ಸೊಪ್ಪಾಕುವ ಪದ್ಧತಿಯಿದೆ. ಇದರರ್ಥ ಒಂದು ಚಿಕ್ಕ ಬಿದಿರಿನ ಜೋಪಡಿ ಕಟ್ಟುತ್ತಾನೆ. ಒಬ್ಬರು ಮಲಗಬಹುದಾದ ಈ ಜೋಪಡಿಗೆ ಹಲಸಿನ ಸೊಪ್ಪು, ಪಿತ್ರಾರ್ಜಿಸೊಪ್ಪು ಹಾಗೂ ಬಸುರಿ ಮರದ ಸೊಪ್ಪಿನಿಂದ ಹೊದಿಕೆ ಮಾಡುತ್ತಾನೆ. ೧೧ನೇ ದಿನದವರೆಗೂ ಅವಳಿಗೆ ಊಟ ಉಪಚಾರ ಎಲ್ಲವೂ

[illegible]

ಅಲ್ಲಿಯೇ ನಡೆಯಬೇಕು. ೧೨ನೇ ದಿವಸ ೯ ಜನ ಮುತ್ತೈದೆಯರು ಬಂದು ನೀರು ಕಾಯಿಸುತ್ತಾರೆ. ನೀರಿನ ಗುಡಾಣಕ್ಕೆ ಬೇವಿನ ಸೊಪ್ಪು, ಹಲಸಿನ ಎಲೆ ಹಾಕುತ್ತಾರೆ. ಮನೆಯ ಹಿಂಭಾಗದ ಗುಡಿಸಲಿಗೂ ಈ ಸೊಪ್ಪನ್ನು ಹಾಕುತ್ತಾರೆ. ಈ ರೀತಿ ಮಾಡಿದರೆ ಗಾಳಿ, ಭೂತಗಳ ಉಪದ್ರವ ಹಸಿಮೈಗೆ ತಾಗುವುದಿಲ್ಲವೆಂದು ನಂಬುತ್ತಾರೆ. ಅನಂತರ ಮುತ್ತೈದೆಯರು ಎಳ್ಳೆಣ್ಣೆ ಹಚ್ಚಿ ಸ್ನಾನ ಮಾಡಿಸುತ್ತಾರೆ. ಈ ರೀತಿಯ ಸೊಪ್ಪಿನ ಸ್ನಾನವಾದ್ದರಿಂದ ಹುಡುಗಿಗೆ ಶೀತ, ಕೆಮ್ಮು ಉಂಟಾಗುವುದಿಲ್ಲವೆಂಬ ನಂಬಿಕೆಯೂ ಇವರಲ್ಲಿದೆ. ಈಚೆಗೆ ಪುರೋಹಿತ, ಭಟ್ಟರು ಒಂದು ಪುಣ್ಯಾಹವನ್ನು ಮಾಡಿಸಿ ಸೂತಕ ನೀಗಿಸುವ ಪದ್ಧತಿ ರೂಡಿಗೆ ಬಂದಿದೆ. ಹಿಂದೆ ಗೋಮಯದಿಂದ ಸಾರಿಸಿಬಿಟ್ಟರೆ ಸ್ಥಳ ಶುದ್ಧಿಯಾಗುತ್ತಿತ್ತು.

ಚಿಕ್ಕಮಗಳೂರು ಜಿಲ್ಲೆಯ ಮೇದರಲ್ಲಿ ಮೇಲಿನ ವಿವರಣೆಗಳೆಲ್ಲವೂ ಕಂಡುಬರುತ್ತವೆ. ಸೊಪ್ಪಿನ ಗುಡಿಸಲು ಹಾಕುವ ಪದ್ಧತಿ ಇತ್ತೀಚೆಗೆ ಕಡಿಮೆಯಾಗುತ್ತಾ ಸಾಂಕೇತಿವಾಗಿ ಆಲದ ಎಲೆ, ಮುತ್ತುಗದ ಎಲೆ, ಹಲಸಿನ ಎಲೆ, ಮಾವಿನ ಸೊಪ್ಪು, ಬಸರಿ ಸೊಪ್ಪಿನ ಟಿಸಿಲುಗಳನ್ನು ನೆರೆದ ಹುಡುಗಿಗಾಗಿ ಕಟ್ಟೆಯ ಮೇಲೆ ಸುತ್ತಿರುವ ಬಿದಿರಿನ ಕಣಜಕ್ಕೆ ಸಿಕ್ಕಿರಿಸುತ್ತಾರೆ. ೫ ದಿನ ಮುತ್ತೈದೆಯರು ನೀರನ್ನು ಎರೆಯುತ್ತಾರೆ. ೫ ದಿನಗಳವರೆಗೆ ದಿನಂಪ್ರತಿ ೫ ಮುತ್ತೈದೆಯರು ಆರತಿ ಬೆಳಗುತ್ತಾರೆ. ಎಲೆ, ಅಡಿಕೆ, ಅಕ್ಕಿ, ೫ ತರಹದ ಫಲ, ಚಿಗಳಿ ತಮಟ ಇಟ್ಟುಕೊಂಡು, ನೆರೆದ ಹುಡುಗಿಗೆ ಮಡಿಲು (ಉಡಿ) ತುಂಬುತ್ತಾರೆ. ಮೂರು ದಿನ ಹುಡುಗಿಗೆ ಪ್ರತ್ಯೇಕವಾದ ತಟ್ಟೆ-ಲೋಟ-ಚೊಂಬು ನೀಡಿರುತ್ತಾರೆ. ೩೦ ವರ್ಷಗಳ ಹಿಂದೆ ನರಸಿಂಹರಾಜಪುರ, ಲಕ್ಕವಳ್ಳಿ, ತರೀಕೆರೆಯ ಮೇದರಲ್ಲಿ ಲಕ್ಕಿಸೊಪ್ಪಿನ ಜೋಪಡಿ ಹಾಕುವ ಪದ್ಧತಿ ಇತ್ತೆಂದು ತಿಳಿದು ಬರುತ್ತದೆ. ಮೈನೆರೆದವಳನ್ನು ಬಾಣಂತಿ ಆರೈಕೆಯಂತೆ ನೋಡಿಕೊಳ್ಳಲಾಗುವುದು. ಶ್ಯಾವಿಗೆ ಬಸಿದು, ಹಾಲು, ತುಪ್ಪ ಬೆರೆಸಿ ತಿನ್ನಲು ನೀಡುವರು. ಮೆಂತ್ಯೆ ಬೇಯಿಸಿ, ಬಾಳೆಹಣ್ಣು, ತುಪ್ಪ, ಅರಿಸಿನ ಬೆರೆಸಿದ ಕಿಚಡಿ ಮಾಡಿ ತಿನ್ನಿಸುವುದು. ಇದು ದೇಹದ ತಾಪಮಾನ ತಗ್ಗಿಸಿ, ದೇಹದ ಸಮತೋಲನೆಗೆ ಸಹಕರಿಸುತ್ತದೆ ಎನ್ನುವರು.

ಹಾಗೆಯೇ ಮೆಂತೆ ಮುದ್ದೆ, ತುಪ್ಪ ಕೊಡುವರು. ೧೧ನೇ ದಿನಕ್ಕೆ ಸೂತಕ ತೆಗೆದುಕೊಳ್ಳುವರು. ಮನೆಗೆ ಸುಣ್ಣ ಬಣ್ಣ ಬಳಿದು ಐನೋರು ಅಥವ ಭಟ್ಟರಿಂದ ತಂದ ಪುಣ್ಯಾಹದ ನೀರನ್ನು ಚಿಮುಕಿಸುವರು. ಮನೆ ದೇವರಿಗೆ ಮೊದಲ ಪೂಜೆ ನೆರವೇರಿಸುವರು. ೧೧ನೇ ದಿನಕ್ಕೆ 'ಮರಮುಟ್ಟಿಸೋ ಕಾರ್ಯ'-ಅಂದರೆ ಹೆಣ್ಣಾದವಳನ್ನು ಕೂರಿಸುತ್ತಾರೆ. ಆಕೆಯನ್ನು ಸಿಂಗರಿಸಿ, ಗಂಗೆಪೂಜೆ ಮಾಡಿಸುತ್ತಾರೆ. ಆಗ ಸಗಣಿಯ ಗಣಪನಿಗೆ ಗರಿಕೆ ಸಿಕ್ಕಿಸಿ, ಗಂಗೆಪೂಜೆ ಕಟ್ಟೆ (ಬಾವಿ, ನಲ್ಲಿ) ಬಳಿ ಮೂರು ಮಿತಿಗೆ ತಮಟ, ನೆನೆಸಿದ ಕಡ್ಲೆಕಾಳು, ಹೆಸರುಕಾಳು, ಅರಶಿನ, ಕುಂಕುಮ, ತೆಂಗಿನಕಾಯಿ, ಹೂ, ಕರ್ಪೂರದಿಂದ ಕಳಸ ಬೆಳಗಿ ಕಳಸಕ್ಕೆ ಹೊಸ ವಸ್ತ್ರ ತೊಡಿಸಿ, ಹೆಣ್ಣಿನಿಂದ ಪೂಜೆ ಮಾಡಿಸಿ ನಂತರ ಮನೆಯಲ್ಲಿ

ಮನೆದೇವರಿಗೆ ಪೂಜಿಸಿ, ಕೂರಿಸುತ್ತಾರೆ. ಅಕ್ಕಪಕ್ಕದವರು, ಸಂಬಂಧಿಕರೆಲ್ಲ ಸೇರಿ ಸೋಬಾನೆ ಗೀತೆ ಹಾಡುತ್ತಾರೆ. ಭಾಗವಹಿಸಿದ ನೆಂಟಪ್ಪರಿಗೆಲ್ಲ ವೀಳ್ಯ ಮರ್ಯಾದೆ ಮಾಡಲಾಗುತ್ತದೆ. ಶಕ್ತಿಗೆ ಅನುಸಾರ ಮುಯ್ಯಿ ಮಾಡುತ್ತಾರೆ, ತಾಯಿಯ ತವರಿನವರು ಬಂಗಾರ, ವಸ್ತ್ರ ಉಡುಗೊರೆಯಾಗಿ ನೀಡುತ್ತಾರೆ. ಸಂಜೆ ಊಟೋಪಚಾರ ನೆರವೇರುತ್ತದೆ.

- **ಮುದ್ರೆ ಹಾಕುವುದು**

ಮೇದ ಬುಡಕಟ್ಟಿನಲ್ಲಿ ಗೌಡ, ಬುದ್ಧಿವಂತ, ಪಟೇಲ ಹಾಗೂ ಮುದ್ರೆಕಾರರು ಮುಖ್ಯ ಪಾತ್ರವಹಿಸುತ್ತಾರೆ. ಇವರೆಲ್ಲರೂ ಮೇದರಲ್ಲೇ ಒಂದೊಂದು ಬೆಡಗನ್ನು ಪ್ರತಿನಿಧಿಸುತ್ತಾರೆ. ಮುದ್ರೆಕಾರರು ಹಾಲುಗುಲದವರಾಗಿರುತ್ತಾರೆ. ಹಾಲುಗುಲದ ಯಾರಾದರು ಒಬ್ಬ ದಾಸಪ್ಪ ಆಗಬೇಕು. ಈತನೇ ಮುದ್ರೆಕಾರನೂ ಹೌದು. ಪ್ರತಿ ಮಂಗಳವಾರ ಇಲ್ಲವೇ ದೀಪಾವಳಿ, ದಸರ, ಯುಗಾದಿ ಹಬ್ಬದ ದಿನಗಳಲ್ಲಿ ವಠಾರದ ಮನೆಗಳಲ್ಲಿ ದಾಸಯ್ಯ ಭಿಕ್ಷೆ ಬೇಡಬೇಕು. ಮದುವೆ ಸಂದರ್ಭದಲ್ಲಿ ಈ ದಾಸಯ್ಯ ಒಕ್ಕಲು ಮೇದರ ಮದುವೆಗೆ ವಿಶೇಷ ವ್ಯಕ್ತಿಯಾಗಿ ಆಹ್ವಾನಿಸಲ್ಪಡುತ್ತಾನೆ. ಅಂದು ದಾಸಯ್ಯನಿಗೆ ಕರಿಯ ಕಂಬಳಿ ಮೇಲೆ ಕೂರಿಸಿ, ಆತನ ಶಂಖ, ಜಾಗಟೆ, ಜೋಳಿಗೆಯನ್ನು ಕುಡಿ ಬಾಳೆ ಎಲೆ ಮೇಲಿಟ್ಟು, ಅವುಗಳಿಗೆ ವಿಭೂತಿ, ಗಂಧ, ಅಕ್ಷತೆಕಾಳು, ಅರಿಶಿನ ಕುಂಕುಮ ಲೇಪಿಸಿ, ಗೌರವದಿಂದ ಪೂಜಿಸಲಾಗುತ್ತದೆ. ಮದುವಣಿಗನಿಗೆ ಮುದ್ರೆ ಹಾಕಿಸಲಾಗುತ್ತದೆ. ಮುದ್ರೆಗೆಂದು ಮೀಸಲಾದ ಲೋಹದ ಸಿಕ್ಕಾವನ್ನು ಬೆಂಕಿಯಲ್ಲಿ ಕಾಯಿಸಿ, ಗಂಡಿನ ಎರಡೂ ಭುಜಗಳಿಗೆ ಮುದ್ರೆ ಹಾಕುವರು, ನಂತರ ಅದರ ಮೇಲೆ ದೂಳತವನ್ನು ಆಪ್ರೋಕ್ಷಿಸುವರು.

ಮುದ್ರೆಕಾರನ ಕಾಲಿಗೆ ಎರಗಿದಾಗ, ಮುದ್ರೆಕಾರ ಗಂಡಿನ ತಲೆಯ ಮೇಲೆ ಕೈ ಇಟ್ಟು, ನಿನ್ನ ಬದುಕು ಹಸನಾಗಲಿ, ದೇವ, ಗುರು, ಪಿತೃ ಋಣಗಳನ್ನು ಸಮರ್ಥಕವಾಗಿ ಪೂರೈಸು. ಗೃಹಸ್ಥಾಶ್ರಮ ಸುಖವಾಗಲಿ ಎಂದು ಹಾರೈಸಿ, 'ಶುಭ ಅಕ್ಕಿ' ಕಾಳನ್ನು ಎರಚುವನು. ಮಕ್ಕಳಿಗೆ ಮುದ್ರೆ ಹಾಕಿಸಿ, ಬುಡಕಟ್ಟು ಸಂಸ್ಕಾರಕ್ಕೆ ಒಳಗಾಗಿಸಲಾಗುವುದು. ಬಹುಶ; ಎಲ್ಲಾ ಜಾತಿಗಳಲ್ಲಿ, ಧರ್ಮಗಳಲ್ಲಿ ಈ ತೆರನಾದ ವಿವಿಧ ಸಂಸ್ಕಾರಗಳನ್ನು ಕಾಣಬಹುದು.

- **ಸಾವು**

ಸಾವಿನ ನಂತರದ ಶವ ಸಂಸ್ಕಾರ ಮೇದರಲ್ಲಿ ಸಾಂಪ್ರದಾಯಿಕವಾಗಿದೆ. ಸಾವಿನ ಮುನ್ಸೂಚನೆಯಿಂದ ವ್ಯಕ್ತಿಯನ್ನು ಹೊರಹಾಕುವುದಿಲ್ಲ. ಇನ್ನೇನು ದೊಡ್ಡ ಜೀವ ಹೋಗಿ ಸಣ್ಣ ಜೀವ ಇದೆ (ಸಾವು ಸಮೀಪಿಸುವುದನ್ನು ಈ ರೀತಿ ಮೇದರು ಉಚ್ಚರಿಸುತ್ತಾರೆ) ಅನ್ನುವಾಗ ಸಂಬಂಧಿಕರು, ನೆಂಟರಿಸ್ಟರಿಗೆ ಸುದ್ದಿ ತಲುಪಿಸಲಾಗುತ್ತದೆ. ಎಲ್ಲರೂ ಬಂದು ಆ ವ್ಯಕ್ತಿಯ ಬಾಯಿಗೆ ಹಾಲು-ನೀರು ಬಿಡುತ್ತಾರೆ. ಶರಾಬು ಹಾಕುವ ಸಂಸ್ಕೃತಿ ಇಲ್ಲ.

ಸಾವು ಸಂಭವಿಸಿದ ತಕ್ಷಣವೇ ಕಣ್ಣುಗಳನ್ನು ಮುಚ್ಚಿ, ಕಾಲುಗಳನ್ನು ಮಡಚುತ್ತಾರೆ. ದಕ್ಷಿಣ–ಉತ್ತರ ದಿಕ್ಕಿನಲ್ಲಿ ಮಂಚದ ಮೇಲೆ ಹೆಣ ಮಲಗಿಸಿ, ದೊಡ್ಡ ಹಣತೆಯೊಂದನ್ನು ತಲೆದಸೆಯಲ್ಲಿಟ್ಟಿರುತ್ತಾರೆ. ಅರಶಿನ, ಕುಂಕುಮ ಹಚ್ಚಿ, ಮೊದಲ ಪೂಜೆ ಮಾಡಿರುತ್ತಾರೆ. ಮೂಗಿಗೆ ಹತ್ತಿಯ ಉಂಡೆಗಳನ್ನು ಇರಿಸುತ್ತಾರೆ. ಗೌಡ, ಪಟೇಲ, ಬುದ್ಧಿವಂತರು, ನೆಂಟರಿಷ್ಟರು ಎಲ್ಲರೂ ಸೇರುತ್ತಾರೆ. ಸಂಬಂಧಿಕರಿಗೆ ಸುದ್ದಿ ಮುಟ್ಟಿಸಿ, ಅವರು ಬರುವವರೆಗೂ ಕಾಯುತ್ತಾರೆ.

ಗಂಡಸು ಸತ್ತರೆ, ಆತನ ಬೀಗರ ಮನೆಯವರು ಶವಸಂಸ್ಕಾರದ ಖರ್ಚನ್ನು ನೋಡಿಕೊಳ್ಳಬೇಕು. ಬಿಳಿಬಟ್ಟೆ, ಕೂಳಿನ ಮಡಿಕೆ, ಪೂಜಾ ಸಾಮಗ್ರಿಗಳು, ಮಂಡಕ್ಕಿ, ಹೂ, ಹಗ್ಗ, ಸೀರೆ, ಕುಪ್ಪಸದ ಬಟ್ಟೆ ಇತ್ಯಾದಿಗಳನ್ನು ತರುತ್ತಾರೆ. ಸಾವಿನ ಮನೆಯ ಸೌದೆ ಅಥವ ಗಳುಗಳನ್ನು ಬಳಸದೆ, ಅನ್ಯಬೆಡಗಿನವರ ಮನೆಯಿಂದ ಸಿದಿಗೆ ಕಟ್ಟಲು ಬಿದಿರನ್ನು ತಂದು, ೮ ಅಡಿ ೨ ಬಿದರಿನ ತುಂಡಿಗೆ, ೨೧/೨ ಮೊಳದ ೧೬ ಜೋಡಿ ಅಡ್ಡ ಪಟ್ಟಿ ಸೀಳುಗಳನ್ನು ಮಾಡಿ, ಸಿದಿಗೆ ತಯಾರು ಮಾಡಿಕೊಳ್ಳಲಾಗುವುದು. ಮನೆಯ ಮುಂದೆ 'ಕೊಳ್ಳಿಹಾಕಿ'ದ ಬೆಂಕಿಯಲ್ಲೇ 'ಕೂಳಿನ ಅನ್ನ' ಬೇಯಿಸಿಕೊಂಡು ತ್ರಿಭುಜಾಕೃತಿ ಕೋಲನ್ನು ಕಟ್ಟಿ ಚಟ್ಟವನ್ನು ಮೂರು ದಾರದಿಂದ ಬಂದಿಸಿ, ಹಳದಿ ಅನ್ನವನ್ನು ಇರಿಸಲಾಗುತ್ತದೆ. ಶವವನ್ನು ಬಿಸಿನೀರಿನಿಂದ ಸ್ವಚ್ಛಗೊಳಿಸಿ, ಹೊಸಬಟ್ಟೆ ತೊಡಿಸಿ ದಕ್ಷಿಣ–ಉತ್ತರ ದಿಕ್ಕಿನಲ್ಲಿ ಮಲಗಿಸಿ ಪೂಜೆಗೆ ಸಿದ್ಧತೆ ಮಾಡಿಕೊಳ್ಳಲಾಗುತ್ತದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಶವವನ್ನು ಕೈವಲ್ಯದಲ್ಲಿ ಕೂರಿಸುವ ಪರಿಪಾಠವಿಲ್ಲ. ಸಿದಿಗೆಯಲ್ಲಿ ಮಲಗಿಸಿ, ತಲೆ ಸಂದಿ, ಮನೆಯ ಸೂರಿನ ಹಂಚೊಂದನ್ನು ಇರಿಸಲಾಗುವುದು. ಶವವನ್ನು ಹಣ್ಣುಕಾಯಿಯಿಂದ ಪೂಜೆ ಮಾಡಿ, ಎಲ್ಲರೂ ಎಳ್ಳು ನೀರು ಬಿಡುತ್ತಾರೆ. ಉಳಿದ ಹಣ್ಣು ಕಾಯಿ ಕರ್ಪೂರ ಊದುಬತ್ತಿ, ಹೂಗಳನ್ನು ಶವದ ಗುಂಡಿ ಪೂಜೆಗೆ ಬುಟ್ಟಿಯಲ್ಲಿ ತೆಗೆದುಕೊಂಡು ಹೋಗುವರು.

ಗಂಡಸು ತೀರಿ ಹೋಗಿದ್ದರೆ, ಆತನ ಹೆಂಡತಿ ತವರಿನ ನೂಲಿನ ಸೀರೆ ಉಟ್ಟು, ಉಡಿ ತುಂಬಿ, ತಲೆಗೆ ಎಣ್ಣೆ, ಕೂದಲಿಗೆ ಹೂ ಮುಡಿಸಿ, ಕೆನ್ನೆಗೆ ಅರಶಿನವನ್ನು ಹಚ್ಚಿ ಶವದ ಜೊತೆ ಕೂರಿಸಿ, ಮುತ್ತೈದೆಯರು ಪೂಜೆ ಮಾಡುವರು. ನಂತರ ನೆಂಟರಿಷ್ಟರೆಲ್ಲ ಪೂಜೆ ಮಾಡಿದ ಬಳಿಕ, ಸಿದಿಗೆಯಲ್ಲಿ ಶವವನ್ನು ಮಲಗಿಸಿ, ತಲೆಯ ಭಾಗ ಮುಂದೆ ಬರುವಂತೆ, ಹೆಂಗಸಿನ ಸೋದರ ಸಂಬಂಧಿಕರು ಹೆಗಲುಕೊಡಬೇಕು. ತಮಟೆ ಸದ್ದಿನೊಂದಿಗೆ ಇಲ್ಲವೇ ಪಟಾಕಿ ಹಚ್ಚಿ ಶವವನ್ನು ಎತ್ತಲಾಗುತ್ತದೆ. ತಂದೆ ತೀರಿದ್ದರೆ ಹಿರಿಯ ಮಗ ಹಳದಿ ಅನ್ನದ ಚಟ್ಟವನ್ನು ಹಿಡಿದು, ತಲೆಯ ಮೇಲೆ ವಸ್ತ್ರವೊಂದನ್ನು ಹಾಕಿಕೊಂಡು ಶವದ ಮುಂದೆ ನಡೆಯಬೇಕು. ಶವದ ಮೇಲೆ ಮಂಡಕ್ಕಿ, ನಾಣ್ಯಗಳನ್ನು ಚಿಮ್ಮುತ್ತಾ ಸಾಗುತ್ತಾರೆ. ಶವದ ಗುಂಡಿಗಿಂತ ೧೫ ಮಾರು ದೂರದಲ್ಲಿ ಶವದ ಸಿದಿಗೆಯನ್ನು ಇಡಲಾಗುತ್ತದೆ. ಮಗನು ಹಿಡಿದ ಚಟ್ಟದ ಮಡಿಕೆಯ ಅನ್ನವನ್ನು ಎಡಗೈಯಿಂದ ಚೆಲ್ಲುತ್ತ ಹಿಮ್ಮುಖವಾಗಿ ನಡೆಯುತ್ತಾ,

ಶವದ ಎಡ ಬದಿಯಿಂದ ಬಲಬದಿಗೆ ಮೂರು ಸಾರಿ ಸುತ್ತಬೇಕು. ಸುತ್ತಿದ ನಂತರ ಶವದ ಕಾಲಿನ ಬಳಿ ವಿರುದ್ಧ ದಿಕ್ಕಿನಲ್ಲಿ ನಿಂತುಕೊಂಡು ಮಡಿಕೆಯನ್ನು ಕಲ್ಲಿನ ಮೇಲೆ ಹೊತ್ತುಹಾಕಿ ಒಡೆಯಬೇಕು. ನಂತರ ಗುಂಡಿ ಪೂಜೆ ಮಾಡಿ, ಶವವನ್ನು ದಕ್ಷಿಣ-ಉತ್ತರ ದಿಕ್ಕಿನಲ್ಲಿ ಗುಂಡಿಗೆ ಇರಿಸಿ, ನಗ್ನಗೊಳಿಸಬೇಕು. ಮೊದಲು ಹೆಂಡತಿಯಿಂದ 'ಮೂರುಹಿಡಿ' ಮಣ್ಣನ್ನು ಎಡಗೈಯಿಂದ ಹಾಕಿಸುತ್ತಾರೆ. ಉಳಿದವರೆಲ್ಲರೂ ಮೂರಿಡಿ ಮಣ್ಣನ್ನು ಹಾಕಿದ ಮೇಲೆ, ಸಲಿಕೆ (ಹಾರೆ)ಯನ್ನು ನೇರವಾಗಿಸಿ, ಮಣ್ಣನ್ನು ಎಡಬದಿ ಇಲ್ಲವೇ ಬಲ ಬದಿಯಿಂದ ಗುಂಡಿಗೆ ಹಾಕಬೇಕು. ಮಣ್ಣು ಹಾಕುವಾಗ ಸಲಿಕೆಯನ್ನು ಕಾಲಿನ ಮಧ್ಯೆ ತರಬಾರದು.

ಮಣ್ಣು ಗುಂಡಿಗೆ ತುಂಬುವಾಗ ಯಾರೂ ಆಯಾಸ ಮಾಡಿಕೊಳ್ಳಬಾರದು. ಮನೆಯಲ್ಲಿ ಗರ್ಭಿಣಿ ಸ್ತ್ರೀಯಿದ್ದರೆ, ಆಕೆಯ ಗಂಡ ಸಲಕೆ ಹಿಡಿದು ಮಣ್ಣು ಹಾಕಬಾರದು ಎಂಬ ನಂಬಿಕೆಯಿದೆ. ಅದುವರೆಗೂ ದೂರದಲ್ಲಿ ಕುಳಿತಿದ್ದ ಚಟ್ಟ ಹಿಡಿದ ಹಿರಿಯ ಮಗ, 'ಶವ ಪೂಜೆ'ಗೆ ಬರಬೇಕು. ಮಣ್ಣು ಏರಿಸಿದ ಗುಂಡಿ ಸುತ್ತಲೂ ಗೋಮಯವನ್ನು ಚಿಮುಕಿಸಿ, ಶವದ ತಲೆಯ ಭಾಗದಲ್ಲಿ ಇರಿಸಿದ ಕಲ್ಲು, ನೆಟ್ಟಿರುವ ತುಂಬೆ ಗಿಡಕ್ಕೆ ಹಾಗೂ ಶವದ ದಿಬ್ಬದ ಸುತ್ತಲೂ ವಿಭೂತಿ ಪುಡಿಯನ್ನು ಹಾಕಬೇಕು.

ಹಣ್ಣು ಕಾಯಿ ಪೂಜೆ, ಕರ್ಪೂರ ಪೂಜೆ, ಸೂರ್ಯ ಪೂಜೆ ಮಾಡಿಸಿ ನಂತರ, ನೆಂಟರಿಷ್ಟರೆಲ್ಲ ಪೂಜೆ ಮಾಡಬೇಕು. ಹಣತೆಯೊಂದು ಹತ್ತಿಸಿ ತಲೆಭಾಗದಲ್ಲಿ ಇರಿಸಬೇಕು.ಶವದ ಗುಂಡಿ ತೆಗೆಯಲು ಬಳಸಿದ ಹತಾರಗಳನ್ನು ಶವದ ಗುಂಡಿಗೆ ಆಚೀಚೆ ಮೂರು ಬಾರಿ ಎಡಗೈಯಿಂದ ಎಸೆಯಬೇಕು. ನಂತರ ಅಲ್ಲಿದ್ದವರೆಲ್ಲರನ್ನು ಸ್ವಲ್ಪ ದೂರಕ್ಕೆ ಕಳುಹಿಸಿ, ಹೆಂಡತಿಯ 'ಮುತ್ತೈದೆತನ'ವನ್ನು ಕಳಚಲಾಗುತ್ತದೆ. ಜೋರಾಗಿ ಅಳುತ್ತಿರುವ ಅವಳ ಕೈಬಳೆ ಶವದ ಮೇಲೆ ಒಡೆದು, ಹಣೆಯ ಕುಂಕುಮ ಒರೆಸಿ, ಕೊರಳಿನಲ್ಲಿರುವ ತಾಳಿಯನ್ನು ಬಿಚ್ಚಿ ಅದರ ಒಂದೆರಡು ಕರಿಮಣಿಯನ್ನು, ಶವದ ಮಣ್ಣಿನ ರಾಶಿಯ ಮೇಲೆ ಹಾಕಿ, ಅವಳಿಂದ ಶವದ ಅಂತಿಮ ಪೂಜೆ ಮಾಡಿಸಿ, ತಲೆಯ ಮೇಲೆ ಸೀರೆ ಸೆರಗನ್ನು ಹಾಕಿ, ಮೂರು ವಿಧವೆಯವರು ಆಕೆಯನ್ನು ಕರೆದುಕೊಂಡು ಬರುವರು. ಸ್ವಲ್ಪ ದೂರದಲ್ಲಿ ಕುಳಿತ ಎಲ್ಲರೂ ಮಂಡಕ್ಕಿ ತಿಂದು, ಎಲೆ ಅಡಿಕೆ ಹಾಕಿಕೊಂಡು, ಮೂರನೇ ದಿನದ ಕೂಳಿಗೂ ಎಲ್ಲರೂ ಬನ್ನಿ ಎಂದು ವಿನಂತಿಸಿಕೊಳ್ಳಬೇಕು. ನಂತರ ಕೆರೆ, ಗುಂಡಿ ಬಳಿ ತೆರಳಿ, ಗೋಮಯವನ್ನು ನೀರಿನೊಂದಿಗೆ ಅಪ್ರೋಕ್ಷಿಸಲಾಗುವುದು.

ಅಲ್ಲಿಂದ ನೇರವಾಗಿ ಕೇರಿಯ ದೇಗುಲಕ್ಕೆ ಬಂದು, ಅಲ್ಲಿ ತೀರ್ಥವನ್ನು ಹಾಕಿಸಿಕೊಂಡು, ಸಾವಿನ ಮನೆಗೆ ಬರುವರು. ಸಾವಿನ ಮನೆಯ ಎದುರಿನ ಕೋಣೆಯೊಳಗೆ ಸೇರಿನ ಮೇಲೆ ಹಚ್ಚಿಟ್ಟಿರುವ ಹಣತೆಯನ್ನು ನೋಡಿ, ಮನೆ ಮುಂದಿಟ್ಟಿರುವ ಅಕ್ಕಿಕಾಳನ್ನು ಎಡಗೈಲಿ ತೆಗೆದುಕೊಂಡು, ಮನೆಯ ಅಭಿಮುಖವಾಗಿ ನಿಂತು, ಮನೆಯ ಸೂರಿನ ಮೇಲೆ ಅಕ್ಕಿಕಾಳನ್ನು

ಬೀರಿ, ಹಿಂತಿರುಗಿ ನೋಡದೆ, ತಮ್ಮ ಮನೆ ಕಡೆ ತೆರಳಿ, ಹೊರಗಡೆಯೇ ಸ್ನಾನ ಮುಗಿಸಿ, ಮನೆಯೊಳಗೆ ಪ್ರವೇಶಿಸಿ ತಮ್ಮ ಮನೆದೇವರಿಗೆ ಪೂಜೆ ಮಾಡಬೇಕು.

ಕೂಳು : ಮೂರನೇ ದಿನದ ಕೂಳು-ಸತ್ತ ಮೂರನೇ ದಿನದ್ದಾಗಿರುತ್ತದೆ. ಚಟ್ಟ ಹಿಡಿದ ಹಿರಿಯ ಮಗ, ಪಿತೃ ಋಣ ತೀರಿಸಲು ಮಂಡೆಕೊಡುತ್ತಾನೆ. ಕ್ಷೌರಿಕನನ್ನು ಕರೆಯಿಸಿ, ಗೌರವ ನೀಡಿ (ಒಂದು ಟವೆಲ್ ಮತ್ತು ೧೦೧ ರೂಪಾಯಿ, ಒಂದು ಸೇರು ಅಕ್ಕಿ, ಹಣ್ಣುಕಾಯಿ) ತಲೆ ಬೋಳಿಸಿಕೊಳ್ಳುತ್ತಾನೆ. ಋಣ ಕೊಟ್ಟ ಕೂದಲನ್ನು ಕುಡಿಬಾಳೆ ಎಲೆಯಲ್ಲಿ ಗಂಗೆಗೆ ಅರ್ಪಿಸಲಾಗುತ್ತದೆ. ಭಾವ, ಭಾಮೈದನಿಗೆ ಹೊಸಬಟ್ಟೆ ಕೊಡಿಸುತ್ತಾರೆ. ಪುಣ್ಯಾಹದ ನೀರನ್ನು ಮನೆಯಲ್ಲೆಲ್ಲ ಹಾಕಿ, ೩ನೇ ದಿನದ ಕೂಳಿಗೆ ತಯಾರು ಮಾಡಿಕೊಳ್ಳುವರು.

ಮೃತವ್ಯಕ್ತಿ ಬಳಸುತ್ತಿದ್ದ ವಸ್ತುಗಳನ್ನು (ಕನ್ನಡಕ, ಊರುಗೋಲು, ಪೆನ್ನು, ನಶ್ಯೆಡಬ್ಬಿ, ಎಲೆ ಅಡಿಕೆಚೀಲ ಇತ್ಯಾದಿ) ಸಮಾದಿಯ ಬಳಿ ಇರಿಸುವರು. 'ಹೆಣ ಹೊತ್ತ'ವರು ಅಂದು ಬರಲೇಬೇಕು, ಕಾರಣ ಸಮಾಧಿ ಪೂಜೆ ನಡೆದ ಬಳಿಕ ಅವರ 'ಹೆಗಲನ್ನು ಇಳಿಸಬೇಕು' ಹೆಗಲಿಗೆ ಅರಶಿನ ಮಿಶ್ರಿತ ಹರಳೆಣ್ಣೆ ಹಚ್ಚಿ, ಖಾರದ ಸಾರನ್ನು ನಾಲಿಗೆಗೆ ಸವರಿ ಕಳುಹಿಸುವರು. ಮೀನು, ಕೋಳಿ, ಕುರಿಮಾಂಸ, ಮೊಟ್ಟೆಯ ಮಾಂಸಹಾರ, ಹೋಳಿಗೆ, ಕಡ್ಲೆಬೇಳೆ ವಡೆ, ಪಲ್ಯೆ, ಅನ್ನ, ಸಾರು, ಮಂಡಕ್ಕಿ, ಕಾರ, ಸಿಹಿ ತಿಂಡಿಗಳು, ಅವರು ಬಳಸುತ್ತಿದ್ದ ಬೀಡಿ, ಸಿಗರೇಟು, ಬ್ರಾಂದಿ ಎಲೆ-ಅಡಿಕೆ-ಹೊಗೆಸೊಪ್ಪು ಇತ್ಯಾದಿ ಅವರು ಇಷ್ಟಪಡುತ್ತಿದ್ದವೆಲ್ಲವನ್ನು ನೆನಪಿಸಿಕೊಂಡು ಐದು ಕುಡಿ ಎಲೆಗಳಲ್ಲಿ, ಐದು ಎಡೆ ಇಟ್ಟು ಸಮಾಧಿ ಪೂಜೆ ಮಾಡುವರು, ಬಂದ ಸಂಬಂಧಿಕರೆಲ್ಲ ಸೇರಿ ಸಮಾಧಿ ಪೂಜಿಸಿದ ನಂತರ, ಸ್ವಲ್ಪ ದೂರದಲ್ಲಿ ಕುಳಿತುಕೊಳ್ಳುವರು. ಸಮಾಧಿಯ ಬಳಿಯಿರಿಸಿದ ಆಹಾರದಲ್ಲಿ ಯಾವ ಪದಾರ್ಥವನ್ನು ಕಾಗೆ ಕಚ್ಚಿಕೊಂಡು ಹೋಗುತ್ತದೆಂದು ಕಣ್ಣಗಲಿಸಿ ನೋಡುವರು.

ಕಾಗೆ ಮುಟ್ಟಿದರೆ ಸಾವು ಶ್ರೇಷ್ಟವೆಂಬ ನಂಬಿಕೆ ಮೇದರಲ್ಲಿದೆ. ಕಾಗೆ ಮುಟ್ಟದೆ ಇದ್ದರೆ, ಪೂಜೆ ಮಾಡಿರುವುದು ಸರಿಯಿಲ್ಲವೆಂದು ಪುನಃ ಎರಡನೇ ಪೂಜೆ ಮಾಡುವರು. ಆವಾಗಲೂ ಮುಟ್ಟಲಿಲ್ಲವೆಂದರೆ ಯಾವುದೋ ಅಪಶಕುನ ಕಾದಿದೆಯೆಂದು ತಿಳಿಯುವರು. ಕೊನೆಗೆ ಹಸುವನ್ನು ಹಿಡಿದುಕೊಂಡು ಹೋಗಿ ಎಡೆ ಮುಟ್ಟಿಸುವ ಪರಿಪಾಠವಿದೆ. ಹೀಗೆ ಕೂಳು ಹಾಕಿದ ಮೇಲೆ ಋಣಕೊಟ್ಟ ಹಿರಿಯ ಮಗ ಎಲ್ಲರಿಗಿಂತ ಮೊದಲು, ಮನೆಗೆ ಹೋಗಿ, ಕೈ ಕಾಲು ತೊಳೆದುಕೊಂಡು, ಮನೆ ದೇವರಿಗೆ ಪೂಜಿಸಿ, ಮೊದಲ ಊಟವನ್ನು ಮಾಡಬೇಕು. ಅಲ್ಲಿಯವರೆಗೆ ಕೂಳಿಡಲು ಸ್ಮಶಾನಕ್ಕೆ ತೆರಳಿದವರು ಅಲ್ಲಿಯೇ ಇರಬೇಕು. ಹಿರಿಯ ಮಗ ಊಟ ಮಾಡಿ ಮನೆ ಬಿಟ್ಟು, ಹೊರಟು ಹೋದ ನಂತರ, ಸ್ಮಶಾನಕ್ಕೆ ತೆರಳಿದವರು ಮನೆಗೆ ಬರಬೇಕು. ಸಂಬಂಧಿಕರೆಲ್ಲರಿಗೂ ಊಟಕ್ಕೆ ಆಮಂತ್ರಿಸುತ್ತಾರೆ. ಹೊರಗಿನವರು ಕೂಳೂಟಕ್ಕೆ ಅಷ್ಟಾಗಿ ಬರುವುದಿಲ್ಲ.

• **ತಿಥಿ**

ಮೃತ ವ್ಯಕ್ತಿಗೆ ತಿಂಗಳು ತುಂಬುವುದರೊಳಗೆ ಅಥವ ತಿಂಗಳಿಗೆ ಒಂದು ದಿನ ಇರುವಾಗ ಮಾಡುವ 'ಮಾಸಿಕ ತಿಥಿ'ಯೇ ಆಗಿದೆ. ತಿಥಿ ಮಾಡುವ ದಿನದ ಒಳಗೆ ಮನೆಯನ್ನು ಸುಣ್ಣ ಬಣ್ಣದಿಂದ ಒಪ್ಪಓರಣಗೊಳಿಸುತ್ತಾರೆ. ನಿಗಧಿತ ದಿನದಂದು ಐನೋರು ಅಥವ ಪುರೋಹಿತರಿಂದ ಪುಣ್ಯಾಹವನ್ನು ಮಾಡಿಸುತ್ತಾರೆ. ಅವರಿಗೆ ನವಧಾನ್ಯ, ನವವಸ್ತ್ರ, ಚಾಪೆ, ಛತ್ರಿ, ಬೂದುಗುಂಬಳ, ಜೇನುತುಪ್ಪ, ನಾಣ್ಯಗಳು ಇತ್ಯಾದಿಯನ್ನು ದಾನವಾಗಿ ನೀಡುತ್ತಾರೆ. ಋಣವನ್ನು ನೀಡಿದ ವ್ಯಕ್ತಿಯು ಪುರೋಹಿತನ ಎದುರು ಮಣೆಯ ಮೇಲೆ ಕುಳಿತು, ನಿಷ್ಕಾಮಕರ್ಮದ ಉಕ್ತಿಗಳನ್ನು ತಿಳಿಸುತ್ತಾರೆ.

ಧಾರ್ಮಿಕ ವಿಧಿ-ವಿಧಾನಗಳ ಮೂಲಕ ಸತ್ಯನಾರಾಯಣ ವ್ರತ ಮಾಡಿಸಿ, ಪುಣ್ಯಾಹದ ನೀರನ್ನು ಮನೆಯಲ್ಲೆಲ್ಲ ಆಪ್ರೋಕ್ಷಿಸಲಾಗುತ್ತದೆ. ಪುರೋಹಿತರಿಂದ ಆಶೀರ್ವಾದ ಪಡೆದು, ಪುಣ್ಯಾಹದ ನೀರನ್ನು ತಮ್ಮ ಅಣ್ಣ ತಮ್ಮಂದಿರ ಮನೆಗೂ ಕಳುಹಿಸಿ, ಅದನ್ನು ಎಲ್ಲಾಕಡೆಗೂ ಚಿಮುಕಿಸಿದ ಮೇಲೆ ಕುಟುಂಬಸ್ಥರೆಲ್ಲರ ಸೂತಕ ಕಳೆಯಿತೆಂದು ತಿಳಿಯುತ್ತಾರೆ. ನಂತರ ನೆಂಟರಿಷ್ಟರೆಲ್ಲ ಕೂಡಿ, ದಿನ (ತಿಥಿ)ದ ಬಗ್ಗೆ ಮಂಗಳವಾರ ಅಥವಾ ಶುಕ್ರವಾರ ಬರುವ ಹಾಗೆ ದಿನಾಂಕವನ್ನು ಗೊತ್ತು ಪಡಿಸಿಕೊಂಡು, ವೈಕುಂಠ ಸಮಾರಾಧನೆ (ತಿಥಿ, ದಿನ)ಯ ಆಹ್ವಾನ ಪತ್ರಿಕೆಯನ್ನು ಮುದ್ರಿಸಿ, ನೆಂಟರಿಸ್ಟರು, ಬಂಧುಗಳು, ಆಪ್ತೇಷ್ಟರನ್ನು ಆಮಂತ್ರಿಸಲಾಗುತ್ತದೆ. ಅಂದು ಸಾಮಾನ್ಯವಾಗಿ ಕುರಿ ಕೋಳಿ, ಮೀನು, ಸಸ್ಯಹಾರ, ಸಿಹಿ ಇತ್ಯಾದಿ ತರಾವರಿ ಪದಾರ್ಥಗಳೆಲ್ಲವನ್ನು ಮಾಡಿ, ಸಮಾದಿ ಸ್ಥಳವನ್ನು ಸ್ವಚ್ಛಗೊಳಿಸಿ, ಗೋಮಯದಿಂದ ಶುದ್ಧಗೊಳಿಸಿ, ಐದು ಎಡೆಯನ್ನು ನೇವೇದ್ಯ ಮಾಡಲಾಗುತ್ತದೆ.

ಎಲ್ಲರೂ ಸಮಾಧಿ ಪೂಜೆಮಾಡಿ ವಾಪಸ್ಸಾಗುವರು. ಈ ಊಟಕ್ಕೆ ಯಾವ ನಿಷಿದ್ಧಗಳಿರುವುದಿಲ್ಲ. ಆದ್ದರಿಂದ ಆಹ್ವಾನಿತರೆಲ್ಲರೂ ಆಗಮಿಸುತ್ತಾರೆ. ಹಲವು ಮೇದರು 'ವಾರ್ಷಿಕ ಸಮಾರಂಭ'ವನ್ನು ಮಾಡುವರು ಇದೂ ಕೂಡ ಮಾಂಸಹಾರವಾಗಿದ್ದು, ಐದು ಎಡೆಯೊಂದಿಗೆ ಸಮಾಧಿ ಪೂಜೆಮಾಡುವರು. ಇತ್ತೀಚೆಗೆ ವರ್ಷದ ಪೂಜೆಯ ಒಳಗೆ ಸಮಾಧಿಗೆ ಬೃಂದಾವನ ಕಟ್ಟೆ ಕಟ್ಟಿಸುವ ಪರಿಪಾಠ ಬೆಳೆದು ಬಂದಿದೆ.

• **ಹಬ್ಬ-ಹರಿದಿನಗಳು**

ಬುಡಕಟ್ಟಿಗರ ಸಂಸ್ಕೃತಿಯ ಹಿನ್ನೆಲೆಯ ಹಬ್ಬ ಆಚರಣೆ, ಆ ಸಂಸ್ಕೃತಿಯ ಗಟ್ಟಿತನವನ್ನು ತಿಳಿಸುತ್ತದೆ. ಭಾರತದ ವಿವಿಧ ಬುಡಕಟ್ಟುಗಳು ತಮ್ಮದೇ ಮೂಲ ಚಹರೆಯ ಸಾಂಸ್ಕೃತಿಕ ಅಭಿವ್ಯಕ್ತಿಗಳನ್ನು ತಮ್ಮ ಹಬ್ಬ-ಆಚರಣೆಗಳ ಮೂಲಕ ಹೊರಗೆಡಹುತ್ತವೆ. ಹಲವಾರು ಸಾಂಸ್ಕೃತಿಕ, ಧಾರ್ಮಿಕ, ಆಚಾರ-ವಿಚಾರಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿರುತ್ತವೆ. ಅವರ ಸಂಸ್ಕೃತಿ, ಧಾರ್ಮಿಕ ಹಿನ್ನೆಲೆ, ಕಲೆ, ಆರಾಧನೆ, ಕ್ರೀಡೆಗಳು ಮತ್ತು ಹಬ್ಬಗಳ ನಡುವೆ

[illegible]

[illegible]

[illegible]

ಅವಿನಾಭಾವ ಸಂಬಂಧಗಳಿರುತ್ತವೆ. ಕಾಡಿನೊಂದಿಗಿನ ಸಂಬಂಧ ಮತ್ತು ಬದುಕು ನಿರಂತರವಾಗಿದ್ದು, ಬೇರೆ ಬೇರೆ ಕಾರಣಗಳಿಗಾಗಿ ಕಾಡಿನಿಂದ ಆಚೆ ಬಂದಿರುವ ಮೇದರು ಕಾಡಿನ ಒಡನಾಟ ಇಂದಿಗೂ ಮುಂದುವರೆಸುವ ಅನಿವಾರ್ಯತೆ ಹೊಂದಿದ್ದಾರೆ. ಕಾರಣ ಬಿದಿರೇ ಮೇದರ ಜೀವನಾಡಿ. ಮೇದರ ಸೃಷ್ಟಿ ಪುರಾಣ ಹಾಗೂ ಸಾಂಸ್ಕೃತಿಕ ನಾಯಕರ ಹಿನ್ನೆಲೆಯನ್ನು ಸಾಂಸ್ಕೃತಿಕ ಮಜಲಿನಲ್ಲಿ ನೋಡುವುದಾದರೆ ಪ್ರಕೃತಿಯನ್ನು ಆರಾಧಿಸುವ, ಆಯುಧಗಳನ್ನು ಪೂಜಿಸುವ, ಹಿರಿಯರನ್ನು ನೆನಪಿಸುವ, ಕೆಲವು ಪ್ರಾಣಿಗಳು ಕ್ಷುದ್ರ, ಕೆಲವು ಪವಿತ್ರವೆನ್ನುವ, ಗೆಡ್ಡೆ–ಗೆಣಸುಗಳನ್ನು ತಿನ್ನಲೇಬೇಕೆಂಬ ಸಂಸ್ಕೃತಿಯ ಭಾಗವಾಗಿ ಆಚರಣೆಗಳನ್ನು ಮಾಡುವುದು ಕಾಣುತ್ತೇವೆ. ಹಬ್ಬ–ಹರಿದಿನಗಳು ಎನ್ನುವ ವಿಷಯದಡಿ ಬುಡಕಟ್ಟಿನ ಸಾಂಸ್ಕೃತಿಕ ಆಚರಣೆಯ ಹಬ್ಬಗಳನ್ನಷ್ಟೇ ಹೇಳುವ ಪ್ರಯತ್ನ ಮಾಡಿದ್ದೇನೆ.

ಯಳಬಿ ಹಬ್ಬ

ಈ ಹಿಂದೆ ತಿಳಿಸಿರುವಂತೆ ಬಿದಿರು ಕಳಲೆ ರೂಪದಲ್ಲಿ ಬಿದಿರು ಮೆಳೆಯಿಂದ ಮೇಲೆದ್ದು ಬಲಿಯುತ್ತಾ ಮೇಲೆರುತ್ತದೆ. ಈ ಬೆಳವಣಿಯ ಒಂದು ಹಂತದಲ್ಲಿ ಭೂಮಿಯಿಂದ ಮೇಲೆದ್ದ ಬಿದಿರಿನ ಪ್ರತಿ ಗಣ್ಣುವಿನಲ್ಲೂ ಟಿಸಿಲು ಹೊರಟು ಬಿದಿರಿನ ಸೊಪ್ಪು ದಟ್ಟವಾಗುತ್ತಾ ತನ್ನ ಆಹಾರ ಹೆಚ್ಚಿಸಿಕೊಂಡಂತೆ ಬಿದಿರು ಬೆಳೆಯುತ್ತಾ ಹೋಗುತ್ತದೆ. ಎಳೆ ಬಿದಿರು ಬಲಿಯುತ್ತ ತನ್ನ ಪ್ರತಿ ಗಣ್ಣಿನ ಸುತ್ತ ರಕ್ಷಣಾ ಹೊದಿಕೆಯನ್ನು ಕಳಚಿ ಕೆಳಗೆ ಬೀಳಿಸುತ್ತದೆ. ಎಲ್ಲಾ ರಕ್ಷಣಾ ಹೊದಿಕೆಗಳು ಬೀಳುವುದೆಂದರೆ ಬಿದಿರು ಹದಗೊಂಡಿದೆ ಎಂದರ್ಥ. ಮೇದಾರಿಕೆಗೆ ಫಲವತ್ತಾಗಿದೆ ಎಂದು ಅನುಭವಸ್ಥ ಮೇದರು ತಿಳಿಯುತ್ತಾರೆ. ಮಳೆಗಾಲದ ಆರಂಭದಲ್ಲಿ ಹೊರ ಹೊರಟ ಕಳಲೆ ಸುಮಾರು ಆರು ತಿಂಗಳಲ್ಲಿ ಕಡಿಯಲು ಬರುತ್ತದೆ. ಇದಕ್ಕೆ ಯಳಬಿ ಎನ್ನುವರು. ಆಯಾ ಕಾಡಿಗೆ ಹತ್ತಿರ ವಾಸವಿರುವ ಮೇದರು 'ಯಳಬಿ ಹಬ್ಬ' ಆಚರಿಸಿಯೇ ಬಿದಿರು ಕಡಿಯುವ ವಾಡಿಕೆಯಿತ್ತು.

ಕುಲದ ಹಿರಿಯನ ಮನೆಯಲ್ಲಿ ಕುಲಕಸಬಿನ ಹತ್ಯಾರಗಳನ್ನು ತೊಳೆದು ವಿಭೂತಿ, ಅರಿಶಿನ, ಕುಂಕುಮ ಹಚ್ಚಿ ಹೂಗಳನ್ನು ಮುಡಿಸಿ, ಹಣ್ಣು–ಕಾಯಿ ಪೂಜೆ ಮಾಡಿ ಕರ್ಪೂರ ಬೆಳಗುವರು. ಈ ವರ್ಷ ಕುಲದವರಿಗೆಲ್ಲ 'ಕೈ ತುಂಬ ಕೆಲಸ ಹೊಟ್ಟೆ ತುಂಬ ಅನ್ನ ಕೊಡು' ದೇವರೆ ಎಂದು ಹಿರಿಯ ಎಲ್ಲರ ಪರವಾಗಿ ಬೇಡಿಕೊಳ್ಳುವನು. ಹಿಡಿ ತೆಂಗಿನಕಾಯಿಯನ್ನು ಹತ್ಯಾರಗಳಿಗೆ ನೀವಾಳಿಸಿ, ಪ್ರಕೃತಿ ಕಡೆಗೂ ಮುಖವಾಗಿ ಪ್ರಕೃತಿ ದೇವರಲ್ಲಿ ಬೇಡಿಕೊಂಡು ಕಾಯಿ ಹೊಡೆಯುವನು. ನೆಂಟರಿಷ್ಟರೆಲ್ಲ ಸೇರಿ ಫಲಹಾರ ಸೇವಿಸುವರು. ಅಂದು ರಾತ್ರಿ ಹತ್ಯಾರಗಳೆಲ್ಲವೂ ಹಿರಿಯನ ಮನೆಯಲ್ಲೇ ಇರಬೇಕು.

ಮಾರನೆ ದಿನ ಮಂಗಳವಾರ ಇಲ್ಲವೇ ಶುಕ್ರವಾರ ಕುಲದವರೆಲ್ಲ ತಮ್ಮ ತಮ್ಮ ಹತ್ಯಾರಗಳೊಂದಿಗೆ ಕಾಡಿಗೆ ತೆರಳಿ ಪುನಃ ಹತ್ಯಾರಗಳನ್ನು ಬಿದಿರಿನ ಹಿಂಡಿಲಿನ ಕೆಳಗೆ

ಜೋಡಿಸಿಟ್ಟು ಬಿದಿರಿಂಡಲಿಗೆ ಕಣ(ರವಿಕೆಬಟ್ಟೆ) ತೊಡಿಸಿ ಹಣ್ಣು-ಕಾಯಿ ಪೂಜೆ ಮಾಡುತ್ತಾರೆ. ಮುತ್ತೈದೆಯರು ಕಳಸ ಪೂಜಿಸುತ್ತಾರೆ. ನಂತರ ತಮ್ಮ ಹತ್ಯಾರಗಳನ್ನು ತೆಗೆದುಕೊಂಡು ಪೂಜೆ ಮಾಡಿದ ಹಿಂಡಿಲನ್ನು ಬಿಟ್ಟು ಬೇರೆ ಹಿಂಡಿಲುಗಳಲ್ಲಿ ಸಾಂಕೇತಿಕವಾಗಿ ೪ ಬಿದಿರುಗಳನ್ನು ಕಡಿದು ಕೇರಿಗೆ ತಂದು, ಕೇರಿ ಬಾಗಿಲ ದೇವಸ್ಥಾನದ ಮುಂದೆ ಅವುಗಳನ್ನಿರಿಸಿ ಹಣ್ಣು-ಕಾಯಿ ಪೂಜೆ ಮಾಡುವರು. ನಂತರ ಕೋಳಿ ಬಲಿ ನೀಡುತ್ತಾರೆ. ಮಾರನೆಯ ದಿನದಿಂದ ಹಿರಿಯರ ಆಜ್ಞೆಯಂತೆ ತಮ್ಮ ವೃತ್ತಿಗೆ ಬೇಕಾದ ಬಿದಿರನ್ನು ಕಡಿಯಲು ತೆರಳುವುದೇ 'ಯಳಬಿ ಹಬ್ಬ'. ಬದಲಾದ ಅರಣ್ಯ ಕಾಯ್ದೆಯಿಂದ ಮೇದರು ಮುಕ್ತವಾಗಿ ಕಾಡಿಗೆ ತೆರಳದಂತೆ ನಿರ್ಬಂಧ ಹಾಕುವುದು ಹಾಗೂ ನನ್ನ ಸಂಶೋಧನೆ ನಡೆಸುತ್ತಿರುವ ದಿನಗಳಲ್ಲಿ ೨೦೦೯, ೨೦೧೦, ೨೦೧೧ರ ಸುಮಾರಿಗೆ 'ಬಿದಿರುಕಟ್ಟೆ' ರೋಗದಿಂದ 'ಬಿದಿರು ಮೆಳೆ'ಗಳು ಸರ್ವನಾಶವಾಗಿರುವುದು ಮೇದರ ಸಂಸ್ಕೃತಿಯ ಯಳಬಿ ಹಬ್ಬದ ಅನನ್ಯತೆಗೆ ಗರಬಡಿದಂತಾಗಿದೆ.

ಹಿರಿಯರ ಹಬ್ಬ

ಇದನ್ನು ಹಿರಿಯರ ಪೂಜೆ, ಧೂಪ ಹಾಕುವುದು, ಲೋಬಾನ ಹಾಕುವುದು ಎಂಬಿತ್ಯಾದಿ ಹೆಸರಿನಿಂದಲೂ ಕರೆಯುವರು. 'ಪಿತೃಪೂಜೆ' ಎಂದು ಮಲೆನಾಡಿಗರಲ್ಲಿ ವಿಶೇಷವಾಗಿ ಆಚರಿಸಲ್ಪಡುತ್ತದೆ. ಆಯಾ ಕುಟುಂಬದ ಮೃತ ಯಜಮಾನರ ಭಾವಚಿತ್ರ ಹಾಗೂ ಇತ್ತೀಚೆಗೆ ಆ ಕುಟುಂಬದ ಯಾರಾದರೂ ಮೃತ ಹೊಂದಿದ್ದರೆ ಅವರ ಭಾವಚಿತ್ರವನ್ನು ಇಟ್ಟು ಪೂಜಿಸುವ ಪರಿಪಾಠವಿದೆ. ಹಿರಿಯ ಆತ್ಮಗಳನ್ನು ನೆನಪಿಸಿಕೊಳ್ಳುವ, ಅವರ ಸನ್ಮಾರ್ಗವನ್ನು ಪರಿಪಾಲಿಸುವ ಹಿರಿಯ ಆತ್ಮಗಳನ್ನು ಈ ರೀತಿ ಗೌರವಿಸದಿದ್ದರೆ ಏನೋ ತಾಕಲಾಟಗಳು ಪ್ರಾರಂಭಿಸುತ್ತವೆ ಎಂಬ ಭೀತಿ ಬುಡಕಟ್ಟಿಗರಲ್ಲಿದೆ. ಮಲೆನಾಡಿನ ಮೇದರಲ್ಲಿ ಸಾಮಾನ್ಯವಾಗಿ ದೀಪಾವಳಿ ನಂತರದ ಮೊದಲ ಮಂಗಳವಾರ ಇಲ್ಲವೇ ಶುಕ್ರವಾರದಂದು ಹಿರಿಯರ ಪೂಜೆ ಮಾಡುವರು.

ಯಾವ ಹಬ್ಬಕ್ಕಾದರೂ ಏನಾದರೂ ಸಬೂಬು ಹೇಳಿ ತಪ್ಪಿಸಬಹುದು. ಆದರೆ ಹಿರಿಯರ ಹಬ್ಬಕ್ಕಂತೂ ಸಡಗರ-ಸಂಭ್ರಮದಿಂದಲೇ ಚಿಕ್ಕಮಗಳೂರು ಮೇದರು ಭಾಗವಹಿಸುತ್ತಾರೆ. ಒಂದು ಮಣೆ ಮೇಲೆ ಕುಡಿ ಮುಂದೆ ಮಾಡಿದ ಬಾಳೆ ಎಲೆಯ ಮೇಲೆ ಸರಿಯಾಗಿ ಅಳತೆ ಮಾಡಿದ ಒಂದು ಸೇರು ಅಕ್ಕಿಯನ್ನು ಸುರುವಿ ಅದರ ಮೇಲೆ ಸುಂದವಾಗಿ ಕಳಸ ಊಡುತ್ತಾರೆ. ಕಳಸದಲ್ಲಿ ಶುದ್ಧ ಗಂಗೆ ತುಂಬಿ ವೀಳ್ಯೆ ಮುಡಿಸಿ ಚಿಗುರು ಅಡಿಕೆ ಹಿಂಗಾರ ಮುಡಿಸುತ್ತಾರೆ. ಕಳಸದ ಹಿಂದಿನ ಗೋಡೆಗೆ ಹಿರಿಯರ ಸ್ವಚ್ಛಗೊಳಿಸಿದ ಭಾವಚಿತ್ರ ಬಂಧಿಸಿ ಅದಕ್ಕೆ ವಿಭೂತಿ, ಅರಿಶಿನ-ಕುಂಕುಮ ಲೇಪಿಸುತ್ತಾರೆ. ಕಳಸಕ್ಕೆ ಹೊಸ ಪಂಚೆ, ಸೀರೆ, ರವಿಕೆ, ಟವಲ್‌ವೊಂದನ್ನು ಏರಿಸುತ್ತಾರೆ.

ಮೇದಾರರ ಹತ್ಯಾರಗಳಾದ ಕತ್ತಿ, ಅಂಬುಗಳನ್ನು ಪೂಜಿಸುತ್ತಾರೆ. ಕುಟುಂಬದ ಯಜಮಾನಿ ತನ್ನ ಕಿವಿಯ ಒಲೆ, ಹಿರಿಯಯ ತಾಳಿ ಸರವನ್ನು ಕಳಸಕ್ಕೆ ಏರಿಸುತ್ತಾರೆ.

ಬಗೆಬಗೆಯ ಸಸ್ಯಹಾರ ಮತ್ತು ಮಾಂಸಾಹಾರ ತಯಾರಿಸಿ ಎಡೆ ನೀಡುತ್ತಾರೆ. ಮನೆಮಂದಿಯೆಲ್ಲ ಶುದ್ಧವಿದ್ದು, ಉಪವಾಸವಿದ್ದು, ಎಂಜಲು ಮಾಡದ ಆಹಾರವನ್ನು ಹಿರಿಯರಿಗೆ ಎಡೆ ನೀಡಬೇಕು. ಮನೆಯ ಮುಂಭಾಗದ ಚಾವಣಿಯ ಕೆಳಗೆ ಮುಂಬಾಗಿಲ ಬದಿಯಲ್ಲಿ ಒಂದು ಕರಿಕಂಬಳಿ, ಒಂದು ಊರುಗೋಲನ್ನು ಇಡುತ್ತಾರೆ. ಎಲ್ಲರೂ ವಿಭೂತಿಧಾರಿಗಳಾಗುತ್ತಾರೆ. ಮೊದಲಿಗೆ ಹಣ್ಣು-ಕಾಯಿ, ಕರ್ಪೂರ, ಊದುಬತ್ತಿ ಪೂಜೆ ನಂತರ ಶಾಖಾಹಾರ ನೇವೇದ್ಯ ಆನಂತರ ಮಾಂಸಾಹಾರ ನೇವೇದ್ಯ ಮಾಡಲಾಗುವುದು. ಕೋಳಿಯ ಬೀವು, ಎದೆ ಗುಂಡಿಗೆ ಹೀರಿಯನ್ನ ಲಂಬವಾಗಿ ಸೀಳಿ ಬಿದಿರಿನ ವರಸಣಿಗೆ (ತೆಳು ಹಸಿರು ಸಿಬುಕು)ಯಿಂದ ಚುಚ್ಚಿ ಪೋಣಿಸಿ ಒಟ್ಟು ಮೂರು ಕಟ್ಟುಗಳನ್ನು ಸಾರಿನೊಂದಿಗೇ ಬೇಯಿಸಿ ಪ್ರತ್ಯೇಕವಾಗಿ ತೆಗೆದಿರಿಸಿಕೊಂಡು ಎಡೆಗೆ ಇಡಲಾಗುತ್ತದೆ.

ಪೂರ್ವಜರು ಬಳಸುತ್ತಿದ್ದ ಶರಾಬು, ಬೀಡಿ, ಚುಟ್ಟ, ಎಲೆ-ಅಡಿಕೆ, ಹೊಗೆಸೊಪ್ಪು, ಸಿಹಿ ಪದಾರ್ಥಗಳು ಇತ್ಯಾದಿಗಳನ್ನು ಎಡೆಯೊಂದಿಗೆ ಪ್ರತ್ಯೇಕವಿರಿಸಿ ದೂಪ ಹಾಕುವರು. ಈ ರೀತಿ ಪೂಜಿಸಿದ ನಂತರ ಸ್ವಲ್ಪ ಸಮಯ ಎಲ್ಲರೂ ಅಲ್ಲಿಂದ ತೆರಳುವರು. ಆ ಏಕಾಂತದಲ್ಲಿ ಪೂರ್ವಜರು ಅವುಗಳ ಸೇವನೆ ಮಾಡುವರೆಂಬ ನಂಬಿಕೆ. ನಂತರ ನಾವು ಬರ್‍ತಾ ಇದೀವಿ ಎಂದು ಹೇಳುತ್ತಾ ಪೂಜಾ ಕೋಣೆಗೆ ಪ್ರವೇಶಿಸುವವರು. ಪುನಃ ಪೂಜಿಸಿ ಎಡೆಯನ್ನು ಹಿಂದಕ್ಕೆ ಎಳೆದರೆಂದರೆ ಪೂರ್ವಜರು, ಹಿರಿಯರು ಊಟ ಮಾಡಿ ಪೂರೈಸಿದ್ದಾರೆಂದೇ ಅರ್ಥ. ಈ ರೀತಿ ವಠಾರದ ಎಲ್ಲಾ ಮೇದರು ಅಂದೇ ಪೂಜೆ ಮಾಡುತ್ತಾರೆ. ಹಾಗೆಯೇ ಅವರವರ ಮನೆಯಲ್ಲಿ ಈ ರೀತಿ ಪೂಜೆಯಾದ ಮೇಲೆ ಪರಸ್ಪರರೂ ದ್ವೇಷ ಮರೆತು ಪೂಜೆ ಮಾಡುತ್ತಾರೆ. ಎಲ್ಲರನ್ನೂ ಊಟಕ್ಕೆ ಆಮಂತ್ರಿಸುತ್ತಾರೆ. ಊಟದೊಂದಿಗೆ ಮಧ್ಯಪಾನ ಸೇವನೆ ಮಾಡುವುದು ಹಿಂದಿನಿಂದ ಬಂದ ವಾಡಿಕೆ ಈಗಲೂ ಮುಂದವರೆದಿದೆ.

ಕಣಚ್ಚು

ಚಿಕ್ಕಮಗಳೂರು ಜಿಲ್ಲೆ ನರಸಿಂಹರಾಜಪುರ, ಲಕ್ಕವಳ್ಳಿ ಮೇದರಲ್ಲಿ ವಿಶೇಷವಾಗಿ ಕಂಡುಬರುವ ಆಚರಣೆಯಾಗಿದೆ. ತಾವು ಬೆಳೆದ ಧಾನ್ಯ ಕಣದಲ್ಲೇ ರಾಶಿ ಮಾಡಿ, ಜಮೀನಿನ ತಲೆಕಟ್ಟಿನಲ್ಲಿರುವ ದೈವಕ್ಕೆ ಕುರಿ, ಕೋಳಿಗಳನ್ನು ಬಲಿಕೊಟ್ಟು ಮಾಂಸಾಹಾರವನ್ನು ಎಡೆ ನೀಡುವ ಆಚರಣೆಯೇ ಕಣಚ್ಚು. ಸಾಮಾನ್ಯವಾಗಿ ಈ ದೈವಗಳು ಕಾಡಿನಲ್ಲಿ ಲಭ್ಯ ಸ್ವಾಭಾವಿಕ ಕಲ್ಲುಗಳಾಗಿವೆ. ಪ್ರತ್ಯೇಕ ಮೂರು ಮರಗಳ ಕೆಳಗೆ ಚೌಡಿ, ರಣ ಹಾಗೂ ಬ್ಯಾಟೇರು ಎಂದು ಪ್ರತ್ಯೇಕ ದೈವಗಳಿರುತ್ತವೆ. ಚೌಡಿ ಮತ್ತು ತನ್ನ ಗಣದಲ್ಲಿ ೮ ದೇವರುಗಳು, ರಣ ಮತ್ತು ತನ್ನೊಂದಿಗೆ ೬ ದೇವರುಗಳು ಹಾಗೂ ಬ್ಯಾಟೇರು ೪ ದೇವರುಗಳಿರುತ್ತವೆ.

ಕುರಿ ಹಾಗೂ ಕೋಳಿಗಳನ್ನು ಚೌಡಿಯ ಎದುರು ಬಲಿಕೊಟ್ಟು ರಣದ ಎದುರಿಗೆ ರಕ್ತವನ್ನು ಚಿಮ್ಮಿಸಲಾಗುತ್ತದೆ. ರಣಕ್ಕೆ ಕೆಂಪು ಹುಂಜದ ಪಕ್ಕೆ ಮುರಿದು, ಹಾರಲಾರದ

ಸ್ಥಿತಿಯಿದ್ದಾಗ, ಕೆಂಪನ್ನದೊಂದಿಗೆ ರಣಕ್ಕೆ ಆಯಾರ ನೀಡುತ್ತಾರೆ. ಬಹಳ ನಿಯಮವಾಗಿ ನಡೆದುಕೊಳ್ಳುತ್ತಾರೆ. ಬ್ಯಾಟೇರಿಗೆ (ಬ್ಯಾಟರಾಯ) ಪ್ರತ್ಯೇಕವಾಗಿ ಬೆಳಿಗ್ಗೆ ಕುಲಸ್ಥರೆಲ್ಲ ಒಂದೊಂದು ಕೋಳಿಯನ್ನು ಬೇಟೆಕೊಟ್ಟು ಪುನಃ ಮಾಂಸಾಹಾರವನ್ನು ಎಡೆ ಕೊಡಲಾಗುತ್ತದೆ. ಹೀಗೆ ಎಡೆ ನೀಡಿದ ನಂತರ ಕಣದಲ್ಲೇ ರಾತ್ರಿ ಊಟ ಮುಗಿಸಿ ಅಲ್ಲಿಯೇ ಮಲಗುವರು. ಸಾಮಾನ್ಯವಾಗಿ ಚೌಡಿ ಆಲದ ಮರದಲ್ಲೂ ರಣ ಬಸರಿ ಮರದಲ್ಲೂ ಬೇಟೆರಾಯ (ಬ್ಯಾಟೇರು) ಅರಚಪ್ಪಲೆ ಅಥವಾ ಬ್ಯಾಟೆ ಮರದಲ್ಲೂ ವಾಸವಿರುತ್ತಾರೆ. ಆ ಮರದ ಕೆಳಗಿರುವ ಗಿಡ–ಗಂಟಿಗಳನ್ನು ಕೆತ್ತಿ, ಸ್ವಚ್ಛಗೊಳಿಸಿ, ದೊಂದಿ ಹಚ್ಚಿ ಪೂಜಿಸುವ ವಾಡಿಕೆ ಇಂದಿಗೂ ನಡೆಯುತ್ತಿದೆ.

ಭೂಮಿ ಹುಣ್ಣಿಮೆ

ಬುಡಕಟ್ಟಿನ ಮೂಲ ನಂಬಿಕೆ. ಒಕ್ಕತನ ಮಾಡುವವರಲ್ಲಿ ಇಂದು ಕಾಣುತ್ತೇವೆ. ಬುಡಕಟ್ಟು ನಂಬಿಕೆಗಳೇ ಇಂದಿನ ಎಲ್ಲಾ ಸಾಂಸ್ಕೃತಿಕ ಆಚರಣೆಗಳಿಗೆ ಮೂಲವಾಗಿದೆ. ಭೂಮಿ ಹುಣ್ಣಿಮೆಯ ಹಿಂದಿನ ದಿನದಂದು ಮೇದರು ಕಾಡುಗೆಣಸನ್ನು ಅಗೆದು ತರುತ್ತಾರೆ. ಭೂಮಿ ಹುಣ್ಣಿಮೆಯ ದಿನ ಯಾವುದೇ ಕಾರಣಕ್ಕೂ ಭೂಮಿಯನ್ನು ಅಗೆಯುವುದು, ಊದುಬತ್ತಿಯಿಂದ ಚುಚ್ಚುವುದು, ತೆಂಗಿನಕಾಯಿಯನ್ನು ಕಲ್ಲಿನ ಮೇಲೆ ಒಡೆಯುವುದು ಇತ್ಯಾದಿ ಮಾಡಬಾರದೆಂಬ ನಂಬಿಕೆಯಿದೆ. ಆದರೆ ಒಕ್ಕಲಿಗರಲ್ಲಿ ಭೂಮಿ ಪೂಜೆಯಂದು ಪೂಜಿಸಿದ ಒಂದು ಎಡೆಯನ್ನು ಭೂಮಿ ತೋಡಿ ಮಣ್ಣು ಮುಚ್ಚುವರು. ತಾವು ತಂದ ಕಾಡುಗೆಣಸನ್ನು ಚೆನ್ನಾಗಿ ಬೇಯಿಸಿ ಸಿಪ್ಪೆ ಸುಲಿದು ಹಾಲು, ಬೆಲ್ಲದೊಂದಿಗೆ ಚೆನ್ನಾಗಿ ಹಿಚುಕಿ ಕಲಸಬೇಕು.

ತಾವು ಬೆಳೆದ ಭತ್ತದ ಪೈರನ್ನು ೩ ಗಂಟುಗಳಾಗಿ ಕಟ್ಟಿ ಅದಕ್ಕೆ ಅರಿಶಿನ, ಕುಂಕುಮ, ಹೂವಿನಿಂದ ಸಿಂಗರಿಸಿ ಕಾಡುಗೆಣಸಿನ ನೇವೇದ್ಯೆ ಮಾಡಲಾಗುತ್ತದೆ. ತಮ್ಮ ಗದ್ದೆಯ ನಾಲ್ಕು ಮೂಲೆಗಳಿಗೂ ಗೆಣಸಿನ ಲೇಹ್ಯವನ್ನು ಮುತ್ತುಗದ ಎಲೆಯಲ್ಲಿ ಇರಿಸಿ ಅತ್ತ ತಿರುಗದೆ ನೇರವಾಗಿ ಮನೆಗೆ ಬರುತ್ತಾರೆ. ಬರುವಾಗ ತಂದ ನೇವ್ಯೇದಿಸಿದ ಗೆಣಸನ್ನು ಮನೆಯ ಸೂರಿನ ಮೇಲೆ ಪಕ್ಷಿಗಳು ತಿನ್ನಲು ಇರಿಸುತ್ತಾರೆ. ಅಂದು ಮನೆ ಮಂದಿಗೆಲ್ಲ ಗೆಡ್ಡೆ–ಗೆಣಸಿನ ಆಹಾರವೇ. ಭೂಮಿಗೆ ಘಾಸಿ ಮಾಡದಿರುವ ಹಾಗೂ ಪ್ರಾಣಿ ಪಕ್ಷಿಗಳಿಗೆ ಉಣಿಸುವ ಬುಡಕಟ್ಟು ಸಂಸ್ಕೃತಿ ಇಲ್ಲಿ ಕಾಣಬಹುದಾಗಿದೆ.

ಕೆರಕದಬ್ಬ

ದೀಪಾವಳಿ ಹಬ್ಬ ಒಕ್ಕಲು ತನದವರಿಗೆ ಸಡಗರ–ಸಂಭ್ರಮದ ಜೊತೆಗೆ ಮುಸುರೆ ಹಬ್ಬವೂ ಹೌದು. ಕೃಷಿ ಪರಿಕರಗಳಾದ ನೇಗಿಲು, ನೊಗ, ಕೊರಡು, ಲೊಳ್ಳಿ, ಹಾರೆ, ಪಿಕಾಸಿ, ಸಬ್ಬಲ್ಲು, ಕೂರಿಗೆ, ಮೇರೆಕೋಲು, ಬಾಯಿಕುಕ್ಕೆ... ಇತ್ಯಾದಿ ಕೃಷಿ ಪರಿಕರಗಳ ಜೊತೆಗೆ ಎತ್ತು ಹಾಗೂ ಗಾಡಿಗಳನ್ನೂ ಚೆನ್ನಾಗಿ ತೊಳೆದು, ಅವುಗಳನ್ನು ಸಿಂಗರಿಸಿ, ಅವೆಲ್ಲವುಗಳನ್ನು ಸಾಮಾನ್ಯವಾಗಿ

ಎತ್ತಿನಗಾಡಿಗೆ ಪೇರಿಸಿ ಮಾವಿನ ಎಲೆಯ ತೋರಣ ಕಟ್ಟಿ ಉರುಮಂಜು, ಸುಣ್ಣದ ಪಟ್ಟೆಗಳನ್ನು ಬಳಿದು, ಎತ್ತುಗಳಿಗೆ ಕೊಡಣಸು, ಉರುಮಂಜು, ಸುಣ್ಣದ ಓಕಳಿ ನೀರನ್ನು ಲೋಟದಲ್ಲಿ ಅದ್ದಿ ಮುದ್ರೆ ಒತ್ತಿ ಕೋಡಿಗೆ ಕೋಡು ಅಣಸು ಇಲ್ಲವೇ ಎಳೆ ಹೆಬ್ಬಿದಿರನ್ನು ಲಂಬವಾಗಿ ಇಟ್ಟುಕೊಂಡು ಮೇಲಿನಿಂದ ಹೊಡೆಯುತ್ತಾ ಜಜ್ಜಿದ ಕುಚ್ಚನ್ನು ಕೊಡಣಸಾಗಿ ಬಳಸಿ ಅವುಗಳ ಕೊರಳಿಗೆ ಉಗಣೆಕಾಯಿ ಹಾರ, ಚೆಂಡುವಿನ ಹಾರ, ನಾಲ್ಕು ಹೆಜ್ಜೆಗಳಿಗೂ ಸಣ್ಣಸಣ್ಣ ಹಾರಗಳನ್ನು ಕಟ್ಟಿ ಪೂಜಿಸಿ ಜಾಗಟೆ ಹೊಡೆಯುತ್ತಾ ಕೊಟ್ಟಿಗೆ ಮತ್ತು ಕೃಷಿ ಸಮೃದ್ಧಿಗಾಗಿ ಪೂಜಿಸಿದ ನಂತರ ಕೆರಕನ ಸಾಮಾನು ತರಲು ಗದ್ದೆ-ಹೊಲಕ್ಕೆ ಹೋಗುವರು.

ಒಂದು ಟವೆಲ್ಲಿನಲ್ಲಿ ಹಾಲುವಾಣದ ಎಲೆ, ಉತ್ತರಾಣಿ ಕಡ್ಡಿ, ಭತ್ತದ ತೆನೆ, ಉಗುಣೆ ಕಾಯಿ, ಕಹಿ ಇಂಗ್ಲಚ್ಚೆಕಾಯಿ (ಕೌಟೆಕಾಯಿ), ಚೆಂಡುಹೂ, ಚಕ್ಕಟೆ ಹೂ, ಹಣ್ಣಡಿಕೆ, ಮಾವು ಮತ್ತು ಹಲಸಿನ ಎಲೆ, ದರ್ಬೆ, ಹಿಂಗಾರ. ಇವೆಲ್ಲವನ್ನು ಯಾರೇ ಎದುರಿಗೆ ಸಿಕ್ಕರೂ ತುಟಿ ಪಿಟಕ್ ಎನ್ನದೆ ಮನೆಗೆ ತರಬೇಕು ಹಾಲುವಾಣದ ಎಲೆಯ ಮೇಲೆ ಸಗಣಿ ದೇವತೆ (ಸಗಣಿ ಉಂಡೆ) ಇರಿಸಿ ಈ ಎಲ್ಲಾ ವಸ್ತುಗಳನ್ನು ಅಲಂಕಾರ ಮಾಡಿ ಒಂದೊಂದು ಎಲೆಯನ್ನು ಪ್ರತ್ಯೇಕವಾಗಿ ಅಡಿಗೆ ಒಲೆ, ನೀರೊಲೆ, ಒಳಕಲ್ಲು, ಬೀಸೋಕಲ್ಲು, ಹೊಸ್ತಿಲು, ಕೊಟ್ಟಿಗೆ, ಕಣ, ತುಳಸಿಕಟ್ಟೆ ಹೀಗೆ ಪ್ರಮುಖ ಸ್ಥಳಗಳಲ್ಲಿ ಇರಿಸಲಾಗುತ್ತದೆ. ಬಲಿ ಚಕ್ರವರ್ತಿಯ ಕೋಟೆಯ ಪ್ರತಿಕೃತಿಯೇ ಈ ಕೆರಕ ಎಂದು ನಂಬಲಾಗಿದೆ.

ಈ ಕೆರಕವನ್ನು ಪುನಃ ಗೋಧೂಳಿ ಸಂದರ್ಭದಲ್ಲಿ ಎಲ್ಲಾ ಕಡೆಯೂ ಪೂಜಿಸಿ ಅವುಗಳನ್ನು ಮನೆಯ ಮುಂಭಾಗದಲ್ಲಿ ಒಲೆಯ ಬೂದಿಯಿಂದ ಹಾಕಿರುವ ರಂಗೋಲಿಯ ಮಧ್ಯೆಯಿರಿಸಿ ಒಂದು ಬಿದಿರಿನ ಬುಡ್ಡಿಯಲ್ಲಿ ಮುಚ್ಚಲಾಗುತ್ತದೆ. ಮಾರನೇ ದಿನ ಮುಂಜಾವಿನಲ್ಲಿ ಕೆರಕಗಳನ್ನು ತಿಪ್ಪೇಗುಂಡಿಯಲ್ಲಿ ಪ್ರತ್ಯೇಕವಾಗಿ ವಿಸರ್ಜಿಸಲಾಗುತ್ತದೆ.

೨.೨.೩ ಕಲೆ ಮತ್ತು ಸಾಹಿತ್ಯ

ಮೇದರ ಕಲೆಗಿಂತಲೂ ವೃತ್ತಿ ಕಲಾತ್ಮಕತೆ ಮನೋಜ್ಞವಾದುದು. ಚದುರಿರುವ ಮೇದರು ಸ್ಥಳೀಯವಾಗಿ ನಾಟಕ, ಕೇತೇಶ್ವರ ಚರಿತ್ರೆ, ವಚನ ಕಮ್ಮಟ, ಕೋಲಾಟ, ಗೀಗಿ ಪದ, ಪದಬಂಧ, ಜಾಸಪದ ನೃತ್ಯ, ಬುಡಕಟ್ಟು ಹಾಡುಗಳು, ಜಾನಪದ ಗೀತೆ, ಸೋಬಾನೆ ಪದ ಇವುಗಳನ್ನು ಹಾಡುವರು. ಬೆಟ್ಟಗುಡ್ಡಗಳಲ್ಲಿ ವಾಸವಿದ್ದ ಕಾಲದಲ್ಲಿ ಜನಪದ ಸಮೃದ್ಧದಾಗಿತ್ತು. ಆಧುನಿಕ ಮಾಧ್ಯಮಗಳ ಹಾವಳಿಯಿಂದ 'ಜನಪದ' ಸೊಗಡು ದೂರವಾಗಿದೆ. ಸೋಬಾನೆ ಹಾಡುತ್ತಿದ್ದ ಮೇದರ ಹೆಂಗಸರ ಗಂಟಲುಗಳು ಮುಪ್ಪಾಗಿವೆ. ಹರೆಯದ ಹುಡಗಿಯರಂತೂ ಸ್ವಲ್ಲನ್ನೂ ಹೇಳುವುದಿಲ್ಲ. ನನ್ನ ಸಂಶೋಧನಾ ಕ್ಷೇತ್ರ ಆಲ್ದೂರಿನ ಶ್ರೀ ಭದ್ರೇಶ್, ಶ್ರೀಮತಿ ನೇತ್ರಾವತಿ, ಶ್ರೀಮತಿ ಭಾಗ್ಯರವರು ಹಾಡುವವರಿದ್ದರು. ಹಾಗೆಯೇ ತರೀಕೆರೆ ತಾಲ್ಲೂಕು ಲಿಂಗದಹಳ್ಳಿ ಹೋಬಳಿಯ ತಣಿಗೆಬೈಲಿನ ಶ್ರೀಮತಿ ಶಾಂತಮ್ಮ, ನರಸಿಂಹರಾಜಪುರದ ಮೇದರ

[illegible]

[illegible]

[illegible]

[illegible]

ಬೀದಿಯ ಶ್ರೀಮತಿ ಜಯಮ್ಮ, ಮಂಜಮ್ಮ, ಶಾರದಮ್ಮ ಇವರುಗಳು ಸೋಬಾನೆ ಪದಗಳನ್ನು ಶುಶ್ರಾವ್ಯವಾಗಿ ಹಾಡುತ್ತಿದ್ದರು. ಶೆಟ್ಟಿಕೊಪ್ಪದ ಮಹೇಶ್ ಅವರು ತಮ್ಮ ದಿವಂಗತ ತಂದೆ ಮರುಳಪ್ಪನವರಿಂದ ಬಳುವಳಿಯಾಗಿ ಬಂದಿದ್ದ, ಭಜನೆ, ತತ್ವಪದ, ಗೀಗೀಪದ ಹಾಡುತ್ತಿದ್ದಾರೆ. ನಾಮಕರಣ, ಋತುಮತಿ, ವಿವಾಹ, ಗಂಗೆಪೂಜೆ, ಕಂಕಣ ಕಟ್ಟುವ ಹಾಡು ಹೀಗೆ ಅಪೂರ್ಣ ಹಾಡುಗಳನ್ನು ಹೇಳುವ ಪ್ರಯತ್ನ ಮಾಡುತ್ತಿದ್ದರು. ಈ ತಲೆಮಾರಿನ ನಂತರದ ಮೇದರಲ್ಲಿ ಇಂತಹ ಕಲಾಪ್ರದರ್ಶನ ತೀರಾ ಕ್ಷೀಣಿಸುತ್ತದೆ ಎಂಬುದರಲ್ಲಿ ಅನುಮಾನವಿಲ್ಲ. **(ಇದಕ್ಕೆ ಸಂಬಂಧಿಸಿದ ಹಾಡುಗಳನ್ನು ಪರಿಶಿಷ್ಟದಲ್ಲಿ ಇರಿಸಲಾಗಿದೆ)**

ಮೇದ ಬುಡಕಟ್ಟಿನ ಕೆಲವು ಗಾದೆಗಳು

ಮೇದರಲ್ಲಿ ಪ್ರಚಲಿತವಿರುವ ಗಾದೆಗಳು ಸಾಮಾನ್ಯ ಆಡು ಭಾಷೆಯ ಜೊತೆ ಜೊತೆಗೆ ಬೆಳೆದು ಬಂದಿವೆ. ಇಡೀ ಬದುಕಿನ ವೃತ್ತಾಂತದ ಜೊತೆಗೆ, ಅನುಭವದಿಂದ ಹೊರ ಸೂಸಿದವುಗಳೇ ಗಾದೆ ಮಾತು. ಗಾದೆ ಬದುಕಿನ ಆಂತರ್ಯವನ್ನು ಶೋಧಿಸಿ, ಬಾಹ್ಯವನ್ನು ಸುರೂಪಗೊಳಿಸುತ್ತವೆ. ಮೇದರ ಬದುಕು–ಬವಣೆಗಳು ಈ ಗಾದೆ ಮಾತುಗಳಲ್ಲಿದೆ.

ಏಳು ಕಾಲಿನ ಏಣಿ, ಮಹಡಿ ಮೇಲೆ ಮಹಾರಾಣಿ

ಈ ಗಾದೆ ಮೇದರಲ್ಲಿ ಹೆಚ್ಚು ಪ್ರಚಲಿತವಿದ್ದು, ಏಣಿ ತಯಾರಿಸುವಾಗ ಬೆಸ ಸಂಖ್ಯೆಯ ಕಾಲುಗಳನ್ನು ಜೋಡಿಸಿ ಏಣಿ ಮಾಡುತ್ತಾರೆ. ಏಣಿ ಅಟ್ಟ ಅಥವಾ ಉಪ್ಪರಿಗೆಯನ್ನು ಹತ್ತಲು ಬಳಸುತ್ತಾರೆ. ಮೃದು ಶಾರೀರಿಕ ಲಕ್ಷಣವನ್ನು ಹೊಂದಿರುವವರಿಗೆ ಇದು ಉಪಯುಕ್ತ.

ಎದೆ ಸೀಳಿದರೆ ಎರಡಕ್ಷರ ಇಲ್ಲ, ಬಿದಿರು ಸೀಳಿದ್ರೆ ಬದುಕಿಗೆ ಕೊರತೆಯಿಲ್ಲ

ತಲೆ ತಲಾಂತರದಿಂದ ಬಂದಿರುವ ಕುಲಕಸುಬು ಜೀವನಧಾರವಾಗಿರುವ ಮೇದರಿಗೆ ಔಪಚಾರಿಕ ಶಿಕ್ಷಣ ಕಡಿಮೆಯೆಂದೇ ಹೇಳಬಹುದು. ಶಿಕ್ಷಣ ಇಲ್ಲದಿದ್ದರೂ ಅನೋಪಚಾರಿಕ ಕುಲಕಸುಬಿನಿಂದ ಹೊಟ್ಟೆ ಹೊರೆಯಲು ಬಾಧಕವಿಲ್ಲವೆಂದು ತಿಳಿಸುತ್ತದೆ.

ಮೇದ್ರ ಬದುಕು ಚಾಪೆಗೈತಿ

ಮೇದಾರಿಕೆ ನಂಬಿಕೊಂಡೇ ಮೇದರು ಬದುಕುತ್ತಿದ್ದಾರೆ. ಮೇದಾರಿಕೆ ಉತ್ಪನ್ನಗಳು ಮೇದರಿಂದ ಉತ್ಪನ್ನಗೊಂಡು ಬಿಕರಿಗೊಂಡ ನಂತರ ತುತ್ತಿನ ಚೀಲ ತುಂಬಿಸಿಕೊಳ್ಳುವರು.

ಕರಿದಿಂಗಳಾಗ ಬಿದಿರು ಕಡಿದ್ರೆ, ಕಂಡಂಗ ದುಡ್ಡು ನಿಂದಾ

ಹುಣ್ಣಿಮೆಯ ಬೆಳದಿಂಗಳಿನಲ್ಲಿ ಬಿದಿರು ಕಡಿದರೆ ಬಿದಿರಿನಲ್ಲಿ ಸಿಹಿ ಅಂಶ ಇದ್ದು ಬಿದಿರಿನ ಉತ್ಪನ್ನಗಳು ಬಾಳಿಕೆ ಬರದೆ ಹುಳುಗಳಿಗೆ ತುತ್ತಾಗುತ್ತದೆ. ಖರೀದಿದಾರರು ಈ ಉತ್ಪನ್ನಗಳನ್ನು ಕೊಳ್ಳದೆ ದೂರ ಹೋಗುವುದರಿಂದ ಬಿದಿರಿನ ಉತ್ಪನ್ನಗಳ ವ್ಯಾಪಾರ ಕುಸಿಯುವುದು.

ಆದ್ದರಿಂದ ಕರಿದಿಂಗಳಾಗ ಬಿದಿರು ಕಡಿದರೆ ಉತ್ಪನ್ನಗಳು ಹೆಚ್ಚಿನ ಬಾಳಿಕೆ ಬರುವುದರಿಂದ ಖರೀದಿದಾರರು ಹೆಚ್ಚಾಗಿ ಖರೀದಿಸುವ ಹೆಚ್ಚಿನ ಮನಸ್ಸು ಮಾಡುತ್ತಾರೆ ಎಂಬ ನಂಬಿಕೆ ಮೇದರಲ್ಲಿದೆ.

ಮೂರು ಮಹಡಿಯ ಮನೆಯಿದ್ರು ಮೂರು ತುಂಡು ಬಿದಿರಿರಬೇಕು

ಆಗೊಮ್ಮೆ ಶ್ರೀಮಂತ ಮೇದರನು ತನ್ನ ಸ್ಥಿತಿವಂತಿಕೆ ಇದ್ದರೂ ಕುಲಕಸುಬಿನ ಸೂಚನೆಯಂತೆ ಸ್ವಲ್ಪ ಬಿದಿರನ್ನಾದರೂ ಹೊಂದಲೇಬೇಕೆಂಬುದನ್ನು ಸೂಚಿಸುತ್ತದೆ.

ಬಿದಿರು ಸೀಳದೆ ಮೇದ ಕೆಟ್ಟ ಮಣ್ಣು ತುಳಿಯದೆ ಕುಂಬಾರ ಕೆಟ್ಟ

ಕುಲಕಸುಬಿನವರು ತಮ್ಮ ಜೀವಿತಕ್ಕಾಗಿ ಆ ಪಾರಂಪರಿಕ ವೃತ್ತಿಯನ್ನು ಯಾವುದೇ ಕಾರಣಕ್ಕೂ ತಿರಸ್ಕಾರದಿಂದ ನೋಡಬಾರದು ಎಂದು ಎಚ್ಚರಿಸುತ್ತದೆ.

* ಅಟ್ಟ ಹತ್ತಿದ ಮೇಲೆ ಏಣಿ ಒದ್ರಂತೆ
* ಆಕಾಶಕ್ಕೆ ಏಣಿ ಹಾಕಿದ ಹಾಗೆ
* ಏಳು ಕಾಲಿನ ಏಣಿ, ಮಹಡಿ ಮೇಲೆ ಮಹಾರಾಣಿ
* ಇವನು ಚಾಪೆ ಕೆಳಗೆ ನುಸಿದ್ರೆ, ಅವನು ರಂಗೋಲಿ ಕೆಳಗೆ ನುಸಿತಾನೆ
* ಎದೆ ಸೀಳಿದ್ರೆ ಎರಡಕ್ಷರ ಇಲ್ಲ, ಬಿದಿರು ಸೀಳಿದ್ರೆ ಬದುಕಿಗೆ ಕೊರತೆಯಿಲ್ಲ
* ಎಳೆಯಲಾರದ ಎತ್ತು ಮೆಳೆ ಮೇಲೆ ಬಿತ್ತು
* ಉರಿಯೋ ಕೆಂಡಾನ ಮಡಿಲಲ್ಲಿ ಕಟ್ಟಿಕೊಂಡ ಹಾಗೆ
* ಉರಿಯೋ ಮನೆಯಲ್ಲಿ ಗಳ ಇರಿದಂಗಾಯ್ತು
* ಕತ್ತಿಗಿಂತ ಲೇಖನಿ ಹರಿತ
* ಬೀಸೋ ದೊಣ್ಣೆಗೆ ತಲೆ ತಪ್ಪಿಸಿಕೊಂಡಕಿ ಸಾವಿರ ವರ್ಷ ಆಯುಸ್ಸು
* ಬೆಟ್ಟದ ಸಾಲಲ್ಲಿ ಗಳ ತಗೊಂಬಾ, ಕೊಟ್ಟ ಸಾಲಲ್ಲಿ ಹೆಣ್ಣು ತಕ್ಕೊಂಬಾ
* ಮನೆಯೆಲ್ಲಾ ನಿಮ್ಮದೇ, ಗಳ ಮಾತ್ರ ಮುಟ್ಬೇಡಿ
* ರಟ್ಟೆ ಮುರಿದು ರೊಟ್ಟಿ ತಿನ್ನು
* ಎಷ್ಟೇ ವಿಶ್ವಾಸ ಇದ್ರೂ, ಮೀನು ಬುಟ್ಟಿಗೆ ಕೈ ಹಾಕಬೇಡ
* ಸಡ್ಡಕನಿಗಿಂತ ನೆಂಟನಿಲ್ಲ, ಲಡ್ಡಿಗಿಂತ ಕಜ್ಜಾಯವಿಲ್ಲ
* ಹಾಲುಂಡ ಮಕ್ಕಳೇ ಬದುಕೊಲ್ಲ, ವಿಷ ಉಂಡ ಮಕ್ಕಳು ಬದುಕ್ತಾವಾ?
* ಮೇದ್ರ ಬದ್ಕು ಚಾಪೆಗೈತಿ
* ಬಿದಿರು ಕಡಿದ್ರೆ ಕೈ ಗಟ್ಟಿ
* ಕುಂತು ಉಂಡ್ರೆ ಕುಡಿಕೆ ಹಣ ಸಾಲ್ದು

* ರಟ್ಟೆ ಆಡುದ್ರೆ ಹೊಟ್ಟೆಗೆ ಹಿಟ್ಟು
* ಬೆಳದಿಂಗಳಾಗ ಗಳ ಕಡಿಬ್ಯಾಡ, ಬೋಳು ತಲೆಯಲ್ಲಿ ಬಿದಿರು ಹೊರಬೇಡ
* ಕರಿದಿಂಗಳಾಗ ಬಿದಿರು ಕಡಿದ್ರೆ, ಕಂಡಂಗ ದುಡ್ಡು ನಿಂದಾ
* ಬೊಂಬು ಹೊರುವವರ ಸಂಗಡ ಹಂಬಲಿಸಿದರೆ ಇಂಬು ಸಿಕ್ಕೀತೆ
* ಬಂಡೆ ಹೊಡೆಯಬಹುದು, ಬಿದಿರು ಮಾತ್ರ ಕಡಿಯಲಾರೆ
* ಪುಟ್ಟಿಗೆ ಹೆಣಕಂತಾ ಹಟ್ಟಿಗೆ ಕುಂದ್ರಲೇ ಅಂದ್ರ ಹೊಟ್ಟೆ ಕೆರಕಂತ ಓಣಿ ಓಣಿ ತಿರುಗುತೀನಿ ಅಂದನಂತೆ
* ಮುಡಿ ಕಟ್ಟಿಯಾಯಿತು ಬುಟ್ಟಿ ಹೆಣದಾಯಿತು
* ಮೇದ ಮೇಟು ಹೋದ ಹೆಜ್ಜೆಯೂ ಕಾಣುವುದಿಲ್ಲ
* ಕೈಯಾಗ ಕತ್ತಿ ಕಾಲಾಗ ಬಿದಿರು ಇದ್ದರೆ ಬಾಯಿಯ ತುಂಬಾ ಬೆಲ್ಲ
* ಮೊರದಿಂದ ಕತ್ತಲೆಯನ್ನು ಹೊರಹಾಕಿದನಂತೆ
* ಮೂರು ಮಹಡಿಯ ಮನೆಯಿದ್ರೂ ಮೂರು ತುಂಡು ಬಿದಿರಿರಬೇಕು
* ಬಿದಿರಿನ ಕಾಯಕ ಶರಣರ ಬದುಕು
* ಗೋಪಾಳ ಪುಟ್ಟಿಯಲಿ ಶನೀಶ್ವರ ಹೊಕ್ಕಾಂಗ
* ಬೆತ್ತ ಮೆತ್ತಗಾದರೂ ದಬ್ಬೆ ನೋಯಿಸದಿರದು
* ಬಿದಿರು ಬೆಳೆದರೆ ಬಾಳು, ಇಲ್ಲವೇ ಗೋಳು
* ಕಸುಬು ಬಿಡ್ತಾ ಬಿಡ್ತಾ ಮ್ಯಾದ ಹಾಳಾದನಂತೆ
* ಬಿದಿರನ್ನು ಮುದ್ದಿಸಬಾರದು, ಉದ್ರಿ ಕೊಡಬಾರದು
* ಹಸೆಬಿದರು ಕೆತ್ತಾಕ ಹಸ, ಮೊಸರು ಉಣ್ಣಾಕ ಹಸ
* ಎಳೆ ಬಿದಿರು ಕಡಿಬ್ಯಾಡ ಗುಂಡಳ್ಳಾಕಿ ಮನಿಗೆ ಹೋಗಬ್ಯಾಡ
* ಬಿದಿರು ಸೀಳದೆ ಮೇದ ಕೆಟ್ಟ, ಮಣ್ಣು ತುಳಿಯದೆ ಕುಂಬಾರ ಕೆಟ್ಟ
* ಒಣ ಬಿದಿರು ಸೀಳಬ್ಯಾಡ, ಓಣ್ಯಾಗ ನಿಷ್ಠೂರ ಆಗಬೇಡ
* ಕುಂತು ಹೆಣೆದರೆ ಮೊರ, ಇಲ್ಲವೇ ಮೈತುಂಬ ಸಾಲ
* ಬಿದಿರು ಸೀಳಿದಾವ ಹುಡಿಗಿಯ ನಡು ಹ್ಯಾಂಗ ಏರ್‍ಯಾನು
* ಬಿದಿರು ಎದುರು ಸೀಳಬ್ಯಾಡ ಅನ್ನನಾ ಉದುರು ಮಾಡಬೇಡಾ

೨.೧.೪ ಸಾಂಸ್ಕೃತಿಕ ನಾಯಕರು

ಮೇದರ ಸಾಂಸ್ಕೃತಿಕ ವೀರರು ಸಂಖ್ಯೆಯಲ್ಲಿ ಕಡಿಮೆಯಾದರೂ, ಸಂಖ್ಯೆಯಲ್ಲಿ ಕಡಿಮೆಯಿರುವ ಮೇದರಿಗೆ ಸಾಂಸ್ಕೃತಿಕ ಧೀಮಂತಿಕೆಯನ್ನು ತಂದುಕೊಟ್ಟಿರುತ್ತಾರೆ. ಮೇದರ ಪಂಗಡದಲ್ಲಿ ಹಲವು ಪವಾಡಗಳನ್ನು ಮೆರೆದು, ಹಲವರ ಅಹಂಕಾರವನ್ನು ನೀಗಿ, ರೋಗ–

ರುಜಿನಗಳನ್ನು ನಿವಾರಿಸಿ ಸತ್ತವರನ್ನು ಬದುಕಿಸಿ ಖ್ಯಾತನಾಮರಾದವರೆಂದು ಮೇದರ **ಕೇತಯ್ಯ** ಹಾಗೂ ಅವನ ಮಗನಾದ ಮೇದರ **ಲಿಂಗಯ್ಯ** ಹಾಗೂ ಹೆಂಡತಿಯಾದ **ಸಾತೆವ್ವ**ನ ಶಿವಭಕ್ತಿ ಪ್ರೇರಿತ ಬದುಕು ಮತ್ತು ಅವರು ಮೆರೆದ ಪವಾಡಗಳಿಂದಾಗಿ ಮೇದರಿಗೆ ಇವರೆಲ್ಲರೂ ಗುರುಸ್ಥಾನದಲ್ಲಿದ್ದಾರೆ. ಪ್ರತಿನಿತ್ಯವೂ ಮೇದರ ಪಂಗಡದವರು ಮನೆಯಲ್ಲಿಟ್ಟು ಕೇತಯ್ಯ ದಂಪತಿಗಳನ್ನು ಪೂಜಿಸುತ್ತಾರೆ. ದೇವರ ಸ್ಥಾನವನ್ನು ನೀಡುತ್ತಾರೆ. ಇದೇ ಪಂಗಡದಲ್ಲಿ ಸಾವಿರಾರು ಜನರಿಗೆ ಅನ್ನದಾನ ಮಾಡುತ್ತಿದ್ದ ಮೇದಾರ ಚೆನ್ನಯ್ಯ, ಮೇದಾರ ತೋಡಯ್ಯ ಬುಟ್ಟಿ ಹೆಣೆಯುವವರಾಗಿದ್ದರೂ ದಿನಕ್ಕೆ ಮೂರು ಬಾರಿ ಕೊಳದಲ್ಲಿ ಸ್ನಾನ ಮಾಡುತ್ತಿದ್ದರು. ಇವರೆಲ್ಲ ೧೨ನೇ ಶತಮಾನದ ಪ್ರಸಿದ್ಧ ವಚನಕಾರರು.

ಕೇತಯ್ಯನ ವಿಚಾರವಾಗಿ ಶಿವಶರಣರ ಕಥಾರತ್ನಕೋಶ ಹಾಗೂ ಭೀಮ ಕವಿಯ ಬಸವಪುರಾಣ, ಶಂಕರಲಿಂಗ ರಗಳೆ, ಬಸವೇಶ್ವರ ಕಥಾಸಾಗರ ಮುಂತಾದ ಗ್ರಂಥಗಳಲ್ಲಿ ವಿವರಗಳು ಲಭ್ಯವಿದೆ. ಇಲ್ಲಿ ಈತನಿಗೆ ಕೇತ, ಕೇತಿದೇವ, ಕೇತಯ್ಯ, ಕೇತಿತಂದೆ, ಕೇತದೇವಯ್ಯ ಎಂಬ ಪರ್ಯಾಯ ಹೆಸರುಗಳಿಂದ ಕರೆಯುತ್ತಿದ್ದರು.

ಈತನ ಕಾಲ ಸುಮಾರು ಕ್ರಿ.ಶ. ೧೧೬೦ ಎಂದು ಹೇಳಲಾಗಿದೆ. ಈತನ ಜನ್ಮಸ್ಥಳ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಬೇಲೂರು. ಈತನು ತನ್ನ ಕಾಯಕವನ್ನು ವಚನ ರೂಪದಲ್ಲೆ ಹಾಡಿ ಕಾಯಕವೇ ಕೈಲಾಸವೆಂದು ತೋರಿಸಿದ ಮಹಾಪುರುಷ. ವಚನವೊಂದರಲ್ಲಿ

ಒಂದು ಬಿದಿರಿಂಗೆ ಕವೆ ಮೂರು, ಆ ಕವೆಯೊಳಗೆ
ಲಕ್ಷ ಬಿದಿರು
ಮೂರು ಕವೆಯ ಕೊಚ್ಚಿಸಿ ಬಿಲ್ಲ ಸಿಕ್ಕ ಬಿಡಿಸಿ
ಸೀಳಿದ ಬಿದಿರ ಹೊರೆಹೊರೆಯಲಿ ನೆಯಿದೆ
ತೊಟ್ಟಿಲ ಸಂದ ಕಾಣದಂತೆ ನಾಲ್ಕು ಕಾಲನಿಕ್ಕಿ
ಅಂದವಾದ ತೊಟ್ಟಿಲ ದಂಡೆಯನಿಕ್ಕಿ ಕಟ್ಟುವುದಕ್ಕೆ
ಶ್ರುತ ದೃಷ್ಟಿವೆಂಬೆರಡು ದಾರದಲ್ಲಿ ತೊಟ್ಟಿಲ ಕಟ್ಟಿ
ಗೌರವೇಶ್ವರ ಲಿಂಗಕ್ಕೆ
ಹುಟ್ಟುಗೆಟ್ಟು ಹೋಗೋ ಎಂದು ಜೋಗುಳವಾಡಿದೆ.

ಕೇತಯ್ಯನ ಶರಣ ಭಾವ ಇಲ್ಲಿ ಮಾರ್ಮಿಕವಾಗಿ ವ್ಯಕ್ತವಾಗಿದೆ. ತನ್ನ ವೃತ್ತಿಯ ಹಿನ್ನೆಲೆಯಲ್ಲಿ ಕಾಯಕದ ಪ್ರಾಮುಖ್ಯ ಹಾಗೂ ಭಕ್ತಿಯ ಪ್ರಮುಖ್ಯವನ್ನು ಕೇತಯ್ಯನು ಅಭಿವ್ಯಕ್ತಿಸಿದ್ದಾನೆ.

ಮೇದ ಪಂಗಡದ ಶರಣನೂ, ಧೀರನೂ, ಶಿವಭಕ್ತನೂ ಆದ ಮೇದರ ಕೇತಯ್ಯ

ಬಸವಣ್ಣನವರ ಅನುಭವ ಮಂಟಪದಲ್ಲಿ ಅವಕಾಶ ಪಡೆದಿದ್ದ ವಚನಕಾರ. ಮಡಿವಾಳ ಮಾಚಯ್ಯ, ನಗೆಮಾರಿ ತಂದೆ ಶಿವಲೆಂಕ ಮಂಚಣ್ಣ, ತಳವಾರ ರಾಮಿದೇವ, ಕೀಲಾರ ಭೀಮಣ್ಣ, ಢಕ್ಕೆಯ ಬೊಮ್ಮಣ್ಣ, ಆಯ್ದಕ್ಕಿ ಮಾರಯ್ಯ, ಮೋಳಿಗೆಯ ಮಾರಯ್ಯ, ನುಲಿಯ ಚಂದಯ್ಯ, ಹೊಡೆಹುಲ್ಲು ಬಂಕಣ್ಣ, ತುರುಗಾಹಿ ರಾಮಣ್ಣ, ಗುಪ್ತ ಮಂಚಣ್ಣ, ಶಿವದಾಸಿಮಯ್ಯ, ಕಲುಕಂಣಿಯ ಕಾಯಮ್ಮ, ಕೊಟ್ಟಣದ ಸೋಮವ್ವೆ, ಕಾಮಾಟ ಭೀಮಣ್ಣ, ಕಿನ್ನರ ಬ್ರಹ್ಮಯ್ಯ, ಶಾರ್ದೂಲ ಸಂಗಯ್ಯ, ಬ್ರಹ್ಮರೂಪಿ ಚೌಡಯ್ಯ, ಮಾದಿಗರ ಹರಳಯ್ಯ, ಡೋಹಾರ ಕಕ್ಕಯ್ಯ ಇವರ ಸಮಕಾಲೀನನಾಗಿ ಹಲವರಿಗೆ ಮಾರ್ಗದರ್ಶನ ಮಾಡುತ್ತಾ, ಕಾಯಕವೇ ಕೈಲಾಸವೆಂದು ನಂಬಿ ಬಿದಿರು ಕಾರ್ಯದಲ್ಲಿ ನಿರತನಾಗಿ ವಚನಗಳನ್ನು ಬೋಧಿಸಿ ಹಲವು ಪವಾಡಗಳನ್ನು ಮೆರೆದವನು.

ಮೇದರ ಕೇತಯ್ಯನ ಬಾಲ್ಯ ಜೀವನದ ಬಗ್ಗೆ ತಿಳಿಯುವುದಿಲ್ಲ. ಈತನ ವಚನದ ಅಂಕಿತ ಗೌರೇಶ್ವರ. ಗರವೇ ಎಂದರೆ ಬುಟ್ಟಿ ಹೆಣೆಯುವವರೆಂದೇ ಅರ್ಥ. ಸಾಮಾನ್ಯ ವಚನಕಾರನಾದ ಈತ ಅತ್ಯಂತ ಸ್ಥಿತಪ್ರಜ್ಞನಂತೆ ಮಾತನಾಡುತ್ತಾನೆ. ಬಿದಿರನ್ನು ಹೆಣೆಯುವ ಕ್ರಿಯೆಯ ಪ್ರತಿಮೆಯ ಮೂಲಕ ತನ್ನ ಆಧ್ಯಾತ್ಮಿಕ ಅನುಭವವನ್ನು ಹೇಳಿಕೊಂಡಿದ್ದಾನೆ. ಶಿವಶರಣ ಮೇದಾರ ಕೇತಯ್ಯ ನಿತ್ಯವೂ ಸಾಯಂಕಾಲ ಅನುಭವ ಮಂಟಪಕ್ಕೆ ಹೋಗಿ ಅಲ್ಲಿ ನಡೆಯುವ ಶರಣರ ಚರ್ಚೆಯಲ್ಲಿ ಭಾಗವಹಿಸುತ್ತಿದ್ದನು. ಕೇತಯ್ಯ ನಿತ್ಯವೂ ತನ್ನ ಹೆಂಡತಿ ಸಾತೆವ್ವ ಹಾಗೂ ಪುತ್ರ ಲಿಂಗಯ್ಯನ ಸಹಿತ ಅರಣ್ಯಕ್ಕೆ ಬಿದಿರು ತರಲು ಹೋಗಿ ಬರುತ್ತಿದ್ದನು. ಅಲ್ಲಿ ಸಮೀಪದ ಹುತ್ತದ ಬುಡದಲ್ಲಿ ಬಿದಿರು ಮೆಳೆಯಿದ್ದಿತು. ಇದನ್ನು ಕೇತಯ್ಯನು ಗೌರವೇಶ್ವರ ವಾಸಸ್ಥಾನವೆಂದೇ ತಿಳಿದಿದ್ದನು. ಬಿದಿರಿನ ತುದಿಯಲ್ಲಿ ಒಂದು ಗಂಟೆ ಕಟ್ಟಿದ್ದು ಅದನ್ನು ಪಕ್ಷಿಗಳು ಬಾರಿಸುತ್ತಿದ್ದವು. ಈ ವಿಚಾರ ಕೇತಯ್ಯನ ಭಕ್ತಿಗೆ ಕಾರಣವಾಗಿತ್ತು.

ಒಂದು ಕಾರ್ಯಕ್ಕೆ ಹೋಗುವ ಸಂದರ್ಭದಲ್ಲಿ ಹುತ್ತದ ಗೌರವೇಶ್ವರನಿಗೆ ಸಮೀಪಿಸುತ್ತಿರುವಾಗ ಮಂತ್ರಿ ಮಂಚಣ್ಣ ಇವನ ಭಕ್ತಿಯನ್ನು ಟೀಕಿಸುತ್ತಾನೆ. ನಿಮ್ಮ ಗೌರವೇಶ್ವರನಿಗೆ ಗೊರಲಿಯ ಮನೆಯೇ ವಾಸಸ್ಥಾನವೇ ಎಂದು ವ್ಯಂಗ್ಯವಾಡುತ್ತಾನೆ. ಇದನ್ನು ಮೂಢನಂಬಿಕೆ ಎನ್ನುತ್ತಾನೆ. ಆದರೆ ಕೇತಯ್ಯ ಶಿವನ ಭಕ್ತಿಗೆ ತರ್ಕ ಮುಖ್ಯವಲ್ಲವೆಂದೇ ಹೇಳುತ್ತಾನೆ. ಪಕ್ಷಿಗಳು ಗೌರವೇಶ್ವರನಿಗೆ ಗಂಟೆ ಬಾರಿಸುವುದನ್ನು ತೋರಿಸುತ್ತಾನೆ. ಮಂಚಣ್ಣ ಪಕ್ಷಿಗಳಿಗೇನು ದೇವರ ಬಗ್ಗೆ ತಿಳಿಯುತ್ತದೆ. ಹಾರಿ ಬಂದು ಕುಳಿತಾಗ ಗಂಟೆ ಬಾರಿಸುವುದನ್ನು ಭಕ್ತಿ ಎಂದು ಹೇಳಲಾಗುವುದೇ ಎಂದು ಹಾಸ್ಯ ಮಾಡುತ್ತಾನೆ. ಈ ಮಾತಿನಿಂದ ಕೇತಯ್ಯನ ಮನಸ್ಸಿಗೆ ನೋವಾಗುತ್ತದೆ. ಮಂಚಣ್ಣನ ಟೀಕೆ ಮುಂದುವರೆಯುತ್ತಲೇ ಸಾಗುತ್ತದೆ.

ಒಮ್ಮೆ ಬಿಜ್ಜಳನ ಮಗ ಸಿಂಘಣ, ಮಂಚಣ್ಣನ ಮಗ ಮಹಾವೀರರು ಧನುರ್ವಿಧ್ಯೆಯ

ಪ್ರಯೋಗದಲ್ಲಿ ತೊಡಗಿರುತ್ತಾರೆ. ಈ ಕಡೆ ಮಂತ್ರಿ ಮಂಚಣ್ಣ ಗಂಟೆ ಬಾರಿಸುತ್ತಿರುವ ಪಕ್ಷಿಗೆ ಬಾಣ ತೊಟ್ಟಿರುತ್ತಾನೆ. ಮಂತ್ರಿಯ ಬಾಣ ಹಕ್ಕಿಗೆ ತಾಗುವುದಕ್ಕೂ ಮಂತ್ರಿ ಮಗನ ತಲೆಯ ಮೇಲಿನ ಹಣ್ಣಿಗೆ ಗುರಿಯಿಟ್ಟು ಬಾಣ ತಲೆಯನ್ನೇ ಕತ್ತರಿಸುವುದಕ್ಕೂ ಸರಿಯಾಗುತ್ತದೆ. ಇದನ್ನು ದಿವ್ಯ ದೃಷ್ಟಿಯಿಂದ ಕೇತಯ್ಯ ತಿಳಿದರೂ, ಯಾರನ್ನೂ ರಕ್ಷಿಸಲಾಗುವುದಿಲ್ಲ. ಪಕ್ಷಿ ಕೆಳಗುರುಳಿದ ಕಾಲಕ್ಕೆ ಮಂತ್ರಿ ಮಗನ ತಲೆಯೂ ಉರುಳಿದಾಗ ಕೇತಯ್ಯ ಮಂತ್ರಿಗೆ ಆಪತ್ತೊದಗಿದೆ ನೀವು ಬೇಗ ಹೋಗಿರೆಂದು ಅಂಗಲಾಚುತ್ತಾನೆ. ಇದಕ್ಕೂ ಶಿವನ ಮರ್ಯಾದಿ ಉಳಿಸಲು ಈ ಆಟವೇ ಎಂದು ಮಂತ್ರಿ ನಸುನಗುತ್ತಾನೆ. ಇದನ್ನು ನೋಡಿ ಕೇತಯ್ಯ ಹಾಡುತ್ತಾ,

ಕಾರಣ ಹರನ ನಟ ನಾಟಕದ ಲೀಲೆಯ
ಹರನೇ ಬಲ್ಲವದಂತು ಶರಣರೇ ತಿಳಿಯುವರಲ್ಲವೆಂದೂ,
ಮೂಲ ಹುಸಿಲಾಭದಿಟವೇ ನಿರೀಕ್ಷಣೆಯು ಇಲ್ಲದೆ
ಪರೀಕ್ಷಣೆಯು ಉಂಟೆ ಈ ಅವಸರದಂಗವ ಗೌರವೇಶ್ವರ

ನೀ ಬಲ್ಲೆ ಎಂದು ಹಾಡುತ್ತಾ ಸತ್ತ ಹಕ್ಕಿಗೆ ಭಸ್ಮವನ್ನು ಹಚ್ಚಿದಾಗ ಆ ಹಕ್ಕಿ ಕಣ್ದೆರೆದು ಹಾರಿ ಹೋಗುತ್ತದೆ. ಮಂಚಣ್ಣನು ಏನೂ ಅರ್ಥವಾಗದೆ ಹೋಗುತ್ತಾನೆ.

ಮಂಚಣ್ಣನ ಮಗನ ಸಾವನ್ನು ತಿಳಿದು ಧಾವಿಸಿ ಬಂದು ರೋಧಿಸಿ ಪತ್ನಿ ಪ್ರಭಾವತಿದೇವಿ ಹೊರಳಾಡುತ್ತಾಳೆ. ಶರಣರನ್ನು ನಿಂದಿಸಿದ ಪತಿಯ ಅವಿವೇಕಕ್ಕೆ ಮರುಗುತ್ತಾಳೆ. ಇದಕ್ಕೆ ಅವಳಿಗೆ ನಿನ್ನ ಸತ್ಯನಿಷ್ಟ ಶರಣರು ಮಗನನ್ನು ಬದುಕಿಸುವರೆಂದು ವ್ಯಂಗ್ಯವಾಡುತ್ತಾನೆ. ನಂತರ ಶವ ಸಮೇತ ಅನುಭವ ಮಂಟಪಕ್ಕೆ ಬರುತ್ತಾಳೆ. ಮಗನ ಪ್ರಾಣ ಬೇಡಿದಾಗ, ಆಗ ಕೇತಯ್ಯನನ್ನು ಮಾರುಹೋಗುವಂತೆ ಬಸವಾದಿಗಳು ತಿಳಿಸುತ್ತಾರೆ. ಶರಣರೂ ಬಸವರೂ ಅವಳ ಹಿಂದೆ ಬರುತ್ತಾರೆ. ಮಂಚಣ್ಣನೂ ಬಂದು ದೂರದಲ್ಲಿ ನಿಲ್ಲುತ್ತಾನೆ. ಕೇತಯ್ಯನು ಮಡದಿಯನ್ನು ಕರೆಯಿಸಿಕೊಂಡು ಈ ಮಂತ್ರಿ ಮಗನ ಪ್ರಾಣವುಳಿಸಲು ನಿನ್ನ ಮಗನ ಪ್ರಾಣ ನೀಡಬೇಕಾಗುತ್ತದೆಂದನು.

ಕೇತಯ್ಯನ ಮಗ ಲಿಂಗಣ್ಣ ಶರಣರ ಉಳಿವಿಗಾಗಿ ಪ್ರಾಣ ಕೊಡಲು ಸಿದ್ಧನಾದನು. ಆದರೆ ಲಿಂಗಣ್ಣನನ್ನು ಬಲಿ ಪಡೆಯಲು ಪ್ರಭಾವತಿದೇವಿಯು ಸಮ್ಮತಿಸಲಿಲ್ಲ. ಆದರೆ ಕೇತಯ್ಯ ಶರಣರ ಸಂಗ ನಿನ್ನ ಮಗನಿಗೆ ದೊರೆಯಬೇಕೆಂದು ತಿಳಿಸಿದನು. ಲಿಂಗಣ್ಣ ಶರಣರು ಜಯ ಜಯಕಾರ ಮಾಡಿ ಗೌರವೇಶ್ವರನಿಗೆ ಪೊಡಮಡುವ ಕಾಲಕ್ಕೆ ಪ್ರಾಣ ಹಾರಿ ಹೋಗಿತ್ತು. ಮಂತ್ರಿ ಮಗ ಮಹಾವೀರನು ಚೈತನ್ಯವಂತನಾಗಿ ಎದ್ದು ನಿಂತನು. ಲಿಂಗಯ್ಯನು ಪ್ರಾಣ ಬಿಡುವ ಕಾಲಕ್ಕೆ ಜಂಗಮ ಪ್ರಾಣಿಯಾದ ಬಸವಣ್ಣನು ಪ್ರಾಣಬಿಟ್ಟಿತು. ಈ ರೀತಿಯಾದದ್ದು ತುಂಬಾ ದುಖಃಕ್ಕೆ ಕಾರಣವಾಯಿತು. ಪ್ರಭಾವತಿ ತಾನು ಶರಣ ದ್ರೋಹಿ ಎಂದು ಅಳತೊಡಗಿದಳು. ಶರಣರಿಗೆಲ್ಲಾ ಪುನಃ ಘೋರವಾದ ಲಿಂಗಣ್ಣ-ಬಸವಣ್ಣರ ಸಾವು

ಸಹಿಸಲಸಾಧ್ಯವಾಯಿತು. ಆಗ ಮಡಿವಾಳಯ್ಯನು ಶಿವನನ್ನು ಕುರಿತು ಈ ಕ್ಷಣಕ್ಕೆ ಇವರಿಬ್ಬರ ಪ್ರಾಣ ಮರಳಿದರೆ ಸರಿ, ಇಲ್ಲದಿದ್ದರೆ ನನ್ನ ಶಿರವರಿದುಕೊಳ್ಳುತ್ತೇನೆಂದು ಖಡ್ಗವೆತ್ತಿದಾಗ ಅವರೀರ್ವರ ಪ್ರಾಣಗಳು ಮರಳಿದವು. ಶರಣರು ಜಯಕಾರ ಮಾಡಿದರು. ಇದನ್ನು ಕಂಡ ಮಂಚಣ್ಣ ಆ ಜಾಗದಿಂದ ಮರೆಯಾದನು.

ಒಮ್ಮೆ ಮಂಚಣ್ಣ ತನ್ನ ಮಾತ್ಸರ್ಯ ಮುಂದುವರೆಸುವ ಸಲುವಾಗಿ ಕಾರಗೃಹದಲ್ಲಿದ್ದ ಒಬ್ಬ ಕಳ್ಳನಿಗೆ ತಲೆಬೋಳಿಸಿ ಕಾವಿತೊಡಸಿ ಶರಣರನ್ನಾಗಿ ಮಾಡಿ ಉರಿಲಿಂಗನೆಂದು ಹೆಸರಿಟ್ಟು ಕೇತಯ್ಯನ ಮನೆಗೆ ದಾಸೋಹಕ್ಕೆ ಕಳುಹಿಸಿದನು. ಆದರೆ ಆತ ಅಭಯಕೊಟ್ಟರೆ ಪ್ರಸಾದ ಸ್ವೀಕರಿಸಿ ಪುಣ್ಯವನ್ನು ಧಾರೆ ಎರೆಯಲು ಬೇಡುತ್ತಾನೆ. ಕೇತಯ್ಯ ಹಾಗೆಯೆ ಧಾರೆ ಎರೆದು ಶಿವಪೂಜೆ ಮಾಡಲು ಹೇಳುತ್ತಾನೆ. ಕಳ್ಳನಿಗೆ ತನ್ನ ಕುತ್ತಿಗೆಯಲ್ಲಿ ಕಟ್ಟಿಕೊಂಡಿರುವ ಕಲ್ಲನ್ನು ಕಂಡರೆ ಎಂದು ಭಯದಿಂದ ಬಿಚ್ಚಿ ನೋಡಿದಾಗ ಅಲ್ಲಿನ ಕಲ್ಲು ಲಿಂಗವಾಗಿರುತ್ತದೆ. ಇದನ್ನು ನೋಡಿದ ಕಳ್ಳ ತನ್ನ ವೃತ್ತಾಂತವನ್ನು ಹೇಳಿ ಶರಣ ಉರಿಲಿಂಗನೆಂದು ಹೆಸರು ಗಳಿಸುತ್ತಾನೆ.

ಒಂದು ಸಾರಿ ಶರಣ ಬಸವಣ್ಣನ ವೇಷದಲ್ಲಿ ಬಂದ ಶಿವನು ದಾಸೋಹಕ್ಕಾಗಿ ಮುತ್ತು, ರತ್ನ ಕೊಡುತ್ತಾನೆ. ಆದರೆ ಸಾತೆವ್ವ ಸ್ವೀಕರಿಸಲಿಚ್ಚಿಸಲಿಲ್ಲ. ಬಸವಣ್ಣನು ಆ ಸಂಪತ್ತನ್ನು ಅವರ ಮನೆಯಲ್ಲೆ ಸುರಿದು ಹೋಗುತ್ತಾನೆ. ಕೇತಯ್ಯ ಬಂದು ವಿಚಾರ ತಿಳಿದು ಬಸವಣ್ಣನ ಮನೆಗೆ ಹೋಗಿ ಹಣವನ್ನು ಚೆಲ್ಲುತ್ತಾನೆ. ಆಗ ಬಸವಣ್ಣ ನಾನು ಹಣ, ಸಂಪತ್ತು ತಂದು ಕೊಟ್ಟವನಲ್ಲ. ನನ್ನ ವೇಷದಲ್ಲಿ ಶಿವನೇ ಈ ಕಾರ್ಯವೆಸಗಿದ್ದಾನೆಂದು ತಿಳಿಸುತ್ತಾನೆ. ಕೇತಯ್ಯ ಕ್ಷಮೆಯಾಚಿಸಿ ದಾಸೋಹ ಮಾಡಿ ಪರಧನದ ಪಾಪವನ್ನು ಕಳೆದುಕೊಳ್ಳುತ್ತಾನೆ.

ಒಮ್ಮೆ ಕೇತಯ್ಯನು ಬಿದಿರು ಕಡಿಯುವ ಸಂದರ್ಭದಲ್ಲಿ ಇವನ ಪರೀಕ್ಷೆಯ ಮೂಲಕ ಕೀರ್ತಿಯನ್ನು ಹರಡಲು ಶಿವನು ಇಚ್ಛಿಸಿದನು. ಕೇತಯ್ಯ ಬಿದಿರು ಕಡಿಯುವಾಗ ಮುತ್ತು, ರತ್ನಗಳು ಸುರಿಯಲಾರಂಭಿಸಿತು. ಆತ ಇದೇನೋ ಹುಳ ಹತ್ತಿರ ಬೇಕೆಂದು ಬೇರೆ ಬಿದಿರಿಗೆ ಹೋದರೆ ಅಲ್ಲೂ ಹಾಗೇ ಆಯಿತು. ಮತ್ತೆ ಬಿದಿರಿನ ತುದಿಯನ್ನು ಹತ್ತಿ ಕಡಿಯುತ್ತಿರಲು ಭಯಂಕರ ಗಾಳಿ ಬೀಸತೊಡಗಿದ್ದು, ಬಿದಿರು ಮುರಿದು ಕೇತಯ್ಯ ಕೆಳಗೆ ಬೀಳಲು ಬಿದಿರು ಬೆನ್ನಿಗೆ ನಾಟಿ ಹೊರ ಕಾಣಿಸಿತು. ಆದರೆ ಕೇತಯ್ಯ ದಾಸೋಹಕ್ಕೆ ಅವಕಾಶಕೊಡೆಂದು ಶಿವನಲ್ಲಿ ಧ್ಯಾನಿಸತೊಡಗಿದನು. ಜಂಗಮ ದಾಸೋಹಕ್ಕೆ ಮೊದಲೇ ಪ್ರಾಣ ಒಯ್ದರೆ ಜಂಗಮನಾಣೆ ಎಂದು ನಾಟಿದ್ದ ಬಿದಿರು ಕತ್ತರಿಸಿ ಒಗೆದು ಮನೆಗೆ ಬಂದು ಅರ್ಚನೆ ಮಾಡಿ ದಾಸೋಹ ಮಾಡಿದನು.

ತಾನು ಲಿಂಗೈಕ್ಯವಾಗುವ ವಿಚಾರವನ್ನು ಕೇತಯ್ಯ ಎಲ್ಲರಿಗೂ ತಿಳಿಸಿದನು. ಪದ್ಮಾಸನ ಹಾಕಿ ಕೈಯಲ್ಲಿ ಲಿಂಗ ಹಿಡಿದು ಧ್ಯಾನ ಮಗ್ನನಾದಂತೆ ಆತನ ಪ್ರಾಣ ಲಿಂಗೈಕ್ಯವಾಯಿತು. ಎಲ್ಲಾ ಶರಣರು ಮನೆಗೆ ಬಂದರು. ಆದರೆ ಮಾಚಯ್ಯನು ಕೇತಯ್ಯ ಮಡಿದರೂ ಬಸವಣ್ಣ

ಬದುಕಿದ್ದರೆ ನಾನಲ್ಲಿಗೆ ಬರುವುದಿಲ್ಲವೆಂದನು. ಈ ವಿಚಾರ ಹೇಳಿ ಬರುವಾಗ ಲಿಂಗ ಪ್ರಾಣಿಯಾದ ಬಸವಣ್ಣನ ಪ್ರಾಣವೂ ಹಾರಿತು. ಮಾಚಯ್ಯನವರಿಗೆ ಈ ವಿಷಯ ತಿಳಿದು, ಈ ದ್ರೋಹಕ್ಕೆ ಸಿಟ್ಟುಗೊಂಡು ಇವರೀರ್ವರ ಪ್ರಾಣ ಮರಳದಿದ್ದರೆ ಶರಣರು ಶಿವನನ್ನು ದೂರವಿರಿಸಬೇಕೆಂದು ವೀರ ಘೋಷಣೆ ಮಾಡುತ್ತಿರುವಾಗ ಅವರ ಪ್ರಾಣಗಳು ಮರಳಿದವು. ಮತ್ತೆ ಕೇತಯ್ಯ, ಬಸವಣ್ಣರೀರ್ವರೂ ಬದುಕಿದರು. ಕೇತಯ್ಯನ ಮಹಿಮೆ ಜಗತ್ತಿಗೆಲ್ಲಾ ತಿಳಿಯತೊಡಗಿತು. ಮತ್ತೆ ಶರಣರು ಕೇತಯ್ಯನನ್ನು ದಾಸೋಹಕ್ಕೆ ಸಿದ್ಧ ಮಾಡಿದರು. ಹೀಗೆ ಕೇತಯ್ಯ ಹಲವಾರು ವರುಷ ದಾಸೋಹ ಹಾಗೂ ಬಿದಿರು ಕಾಯಕ ನಡೆಸಿ, ಶರಣ ಮಾರ್ಗದಂತೆ ನಡೆದು ಐಕ್ಯ ಸ್ಥಿತಿಗೇರಿ ಶಿವನಲ್ಲಿ ಬೆರೆತನು.

ತನ್ನ ಜೀವನದ ದಾಸೋಹಕ್ಕಾಗಿ ಕೇತಯ್ಯ ಹರಮತದ ಹಾಡುಗಳ ಮರದೊಳಗೆ ಹೆಣೆಹೆಣೆದು ಕರಡಿಗೆಯ ತುಂಬಿ ಕಲ್ಯಾಣಪೇಟೆಯಲ್ಲಿ ಶರಣರಿಗೆ ಮಾರುತ್ತಾನೆ. ಈ ಶರಣನ ಕರಸ್ಪರ್ಶಕ್ಕಾಗಿ ಕಾತರಿಸುತ್ತಿದ್ದವು ಎಂಬತೆ "ಅಡವಿಯೊಳ್ ಬಿದಿರು ಬಲು ಬೆಳೆದು ಕೇತಯ್ಯನಿಗೆ ಸಡಗರದಿ ತೂಗಿ ಕರೆವುದು!" ಸರಿ ಕೂಗಿ ಕರೆವ ಬಿದಿರು ತರುವುದು, ಬುಟ್ಟಿ ಹೆಣೆಯುವುದು, ಮಾರಿ ದಾಸೋಹ ನಡೆಸುವುದು. ಸತ್ಯಸತಿ ಸಾತೆವ್ವ ಪತಿಗೆ ತಕ್ಕ ಸತಿ, ಪತಿಗೆ ಕಾಯಕ ಮಾಡಿ ಬೇಸರವಿಲ್ಲ. ಸತಿಗೆ ದಾಸೋಹ ಮಾಡಿ ಬೇಸರವಿಲ್ಲ. ನೂರೊಂದು ಸಾವಿರದ ಭುವಿ ಜಂಗಮರು ಈ ದಾಸೋಹದಲ್ಲಿ ತೃಪ್ತಿಪಡುತ್ತಾರೆ. ಕೇತಯ್ಯನ ಕೀರ್ತಿ ಕಲ್ಯಾಣವನ್ನು ತುಂಬಿ ಹೊರಸೂಸಿ ಹರಿಯತೊಡಗುತ್ತದೆ. **(ಡಾ.ಸಿದ್ಧಯ್ಯ ಪುರಾಣಿಕ)**[೮]

ತನ್ನ ಕಾಯಕದಲ್ಲಿಯೇ ಕೈಲಾಸವನ್ನು ಕಂಡ ಶಿವಯೋಗಿ, ಶಿವಯೋಗಿಗಿಂತಲೂ ಕಾಯಕವೇ ಮಿಗಿಲೆಂದು ಸಾರಿದವ. ಕಾಯಕ ದಾಸೋಹಕ್ಕೆ ಮಿಗಿಲಾದ ಸ್ಥಾನವನ್ನು ನೀಡಿದವ. ಈತನ ಕಾಯಕ ನಿಷ್ಠೆಯನ್ನು ಶಿವ ಮೆಚ್ಚಿಕೊಂಡು ಆತನನ್ನು ತಾನು ಸೋತು ಬದುಕಿಸಿದ. ಶಿವಗಿಂತಲೂ ಶಿವಶರಣರೇ ಮಿಗಿಲೆಂದು ಹೇಳುವುದು ಇಂತಹ ಉದಾಹರಣೆಗಳಿಂದಲೇ ಶಿವನಿಗಿಂತಲೂ ಶಿವಶರಣರು ಶ್ರೇಷ್ಠ ಎಂಬುದಕ್ಕೆ ಶರಣ ಮೇದರ ಕೇತಯ್ಯನ ಕಾಯಕ ನಿಷ್ಠ ಜೀವನವೇ ಸಾಕ್ಷಿ

(ಡಾ.ವ್ಹಿ.ಜಿ.ಪೂಜಾರ್)[೯]

"ಬಹಿರಂಗದಲ್ಲಿ ಬಿದಿರಿನ ಕಾಯಕ, ಅಂತರಂಗದಲ್ಲಿ ಅರಿವಿನ ಕಾಯಕ, ಬಹಿರಂಗವನ್ನು ಅಂತರಂಗದಲ್ಲಿ ಬೆರಸಿ, ಅಂತರಂಗದ ಬೆಳಕಿನಿಂದ ಬಹಿರಂಗವನ್ನು ಬೆಳಸಿ ಬೆಳಕಿನ ಬದುಕನ್ನು ಬದುಕಿದವ ಮೇದಾರ ಕೇತಯ್ಯ. ಆ ಬೆಳಕಿನಲ್ಲಿಯೇ ಮಡಿದ ಸಾತೆವ್ವಳಯನ್ನು ಮುನ್ನಡೆಸಿಕೊಂಡು ಹೋದಂತೆ ಶರಣ ಸಂಸಾರಿಯಾತ. ಸಂಸಾರ ಮಾಡಿ, ಸಂಸಾರದಿಂದ ಮೇಲೆದ್ದು ಬಂದ ಶಿವಶರಣ ಕೇತಯ್ಯ ಮಜ್ಜಿಗೆಯ ಮೇಲೆ ತೇಲುವ ಬೆಣ್ಣೆಯಾಗಿದ್ದಾನೆ."

೧೨ನೇ ಶತಮಾನದಲ್ಲಿ ಬಸವಾದಿ ಪ್ರಥಮರು ಸಾರಿದ ಕಾಯಕ ತತ್ವವನ್ನು ಎತ್ತಿ ಹಿಡಿದ

[illegible]

ಶಿವಶರಣ ಶ್ರೇಷ್ಠರಲ್ಲಿ ಮೇದಾರ ಕೇತಯ್ಯನು ಒಬ್ಬನಾಗಿದ್ದಾನೆ. ಮೇದಾರ ಕೇತಯ್ಯ ಐತಿಹಾಸಿಕ ಚಾರಿತ್ರಿಕ ಶಿವಶರಣನೆಂಬುದರಲ್ಲಿ ಸಂದೇಹವಿಲ್ಲ" **(ಪ್ರೊ.ಎಸ್.ಎಸ್.ಭೂಸರಡ್ಡಿ)**೧೦

ಈ ರೀತಿಯಾಗಿ ಅನೇಕ ವಿದ್ವಾಂಸರು ಮೇದಾರ ಕೇತಯ್ಯನನ್ನು ಕುರಿತು ಹೇಳಿದ್ದಾರೆ. ಆದರ್ಶ ಜೀವಿಯಾದ ಕೇತಯ್ಯ, ವ್ಯಕ್ತಿ ಮತ್ತು ಸಮಾಜದ ಉದ್ಧಾರ, ಕಾಯಕದಿಂದ ಮಾತ್ರ ಸಾಧ್ಯವೆಂಬುದನ್ನು ಅರಿತು ಅದನ್ನು ನಿಷ್ಠೆಯಿಂದ ನಡೆಸಿದ ನಿಜ ಶರಣರಾಗಿದ್ದಾರೆ ಎಂದು ಶ್ರೀ ಶಿವಮೂರ್ತಿ ಮುರಘಶರಣರು, ಚಿತ್ರದುರ್ಗ ಇವರು ನುಡಿದಿದ್ದಾರೆ.

ಮತ್ತೊಬ್ಬ ಈ ಪಂಗಡದ ವೀರನಾಯಕನೆಂದರೆ ಮೇದಾರ **ಚೆನ್ನಯ್ಯ** ಹಾಗೂ ಇವನ ಮೊಮ್ಮಗ ಮೇದಾರ **ತೋಡಯ್ಯ,** ಮೇದಾರ ಚೆನ್ನಯ್ಯನು ಒಂದು ಮಡಿಕೆ ಅನ್ನದಿಂದ ಸಾವಿರಾರು ಜನರಿಗೆ ಊಟ ಹಾಕಿದ್ದನು. ಇವನ ಮೊಮ್ಮಗ ಮೇದಾರ ತೋಡಯ್ಯ ಬುಟ್ಟಿ ಹೆಣೆದು ನಂತರ ದಿನಕ್ಕೆ ಮೂರು ಬಾರಿ ಸ್ನಾನ ಮಾಡುತ್ತಿದ್ದನಂತೆ. ಒಮ್ಮೆ ಕುಷ್ಠರೋಗಿಯಾದ ಒಬ್ಬ ಬ್ರಾಹ್ಮಣನು ತನ್ನ ಕಳೆದು ಹೋದ ಕರುವನ್ನು ಹುಡುಕುತ್ತಾ ಬಂದು ತೋಡಯ್ಯ ಸ್ನಾನಮಾಡಿದ ನೀರು ತುಂಬಿದ ಗುಂಡಿಯಲ್ಲಿ ಬಿದ್ದುಬಿಟ್ಟನಂತೆ. ಆಗ ಅವನ ಕುಷ್ಠರೋಗ ವಾಸಿಯಾಯಿತಂತೆ. ಇದನ್ನರಿತ ಹಲವು ಚರ್ಮರೋಗದವರು ತೋಡಯ್ಯನು ಸ್ನಾನ ಮಾಡಿ ಹರಿದ ಗುಂಡಿಗೆ ಮುಳುಗಿ ತಮ್ಮ ರೋಗವನ್ನು ನಿವಾರಿಸಿಕೊಂಡರು.

ಗೌರಿಶಂಕರ ಪಂಗಡದ ಮೇದನೊಬ್ಬ ಕಾಡಿನಲ್ಲಿ ಬಿದಿರು ಕಡಿದು ಜೀವನ ಸಾಗಿಸುತ್ತಿದ್ದನು. ಮನೆಯಲ್ಲಿ ಹೆಂಡತಿ ಗರ್ಭಿಣಿಯಾಗಿದ್ದಾಗ, ಶಿವ-ಪಾರ್ವತಿಯರು ಈ ಮೇದನ ಬಗ್ಗೆ ಅನುಕಂಪ ತಾಳಿ ಹಣದ ಸಹಾಯ ಮಾಡಬೇಕೆಂದು ಬೊಂಬಿನಲ್ಲಿ ಹಣ ಸುರಿಸುತ್ತಾರೆ. ಅವನು ಅನ್ಯಾಯದ ಹಣವನ್ನು ಮುಟ್ಟದೆ ವಾಪಸ್ಸು ಬರುತ್ತಾನೆ. ಬಿದಿರು ಕಡಿಯುವಾಗ ವಜ್ರವನ್ನು ಸುರಿಸುತ್ತಾರೆ. ಆದರೆ ಅದನ್ನು ಮುಟ್ಟದೆ ಗೌರಿಶಂಕರ ಮೇದನು ಬಿಟ್ಟು ಹೋಗುತ್ತಾನೆ. ಪಾರ್ವತಿಯ ಮಾತು ಕೇಳಿ ತನಗೆ ಅಗೌರವವಾಯಿತೆಂದು ಕೋಪಗೊಂಡು ಶಿವನು ಇನ್ನು ಮುಂದೆ ಮೇದರು ಕಡಿಯುವ ಬಿದಿರಿನಲ್ಲಿ ಇರುವೆ ತುಂಬಿಕೊಳ್ಳಲಿ ಎಂದು ಶಾಪ ಕೊಡುತ್ತಾನೆ. ಮತ್ತೆ ಪಾರ್ವತಿ ಪ್ರಾರ್ಥಿಸಲು ಆ ಇರುವೆಗಳೇ ಬಿದಿರುಪ್ಪು ಆಗಲಿ ಎಂದು ಹೇಳುತ್ತಾನೆ. ಮುಂದೆ ಬಿದಿರಕ್ಕಿ ಮತ್ತು ಉಪ್ಪು ಇವರಿಗೆ ದೊರಕುವಂತಾಗುತ್ತದೆ.

ಹನುಮಯ್ಯ ಸ್ವಾಮೀಜಿಯವರು, ಕೇತೇಶ್ವರ ಸ್ವಾಮೀಜಿಯವರು ಚಿತ್ರದುರ್ಗ ಜಿಲ್ಲೆಯ ಸೊಲ್ಲಾಪುರ ಗ್ರಾಮದ ಮೇದರ ಕದರೆಪ್ಪ ಮತ್ತು ಮರಿಯಮ್ಮನವರ ಗರ್ಭದಲ್ಲಿ ಚೈತ್ರಶುದ್ಧ ಪಾಡ್ಯದಂದು ಜನಸಿದರು. ಇವರಿಗೆ ಹನುಮಂತಯ್ಯನೆಂದು ನಾಮಕರಣ ಮಾಡಿದರು. ಇವರು ಬಾಲ್ಯದಲ್ಲಿ ಹೆಚ್ಚಿನ ವಿದ್ಯೆಯನ್ನು ಕಲಿಯಲಿಲ್ಲ. ತಂದೆ-ತಾಯಿಯವರೊಂದಿಗೆ ಕುಲಕಸುಬನ್ನೇ ಮಾಡುತ್ತಾ, ದನ ಕಾಯುತ್ತಿದ್ದರು. ಹೀಗಿರಲು ಒಮ್ಮೆ ಇವರ ಕನಸಿನಲ್ಲಿ ಗುರುಗಳು

[illegible]

ದರ್ಶನಕೊಟ್ಟು ಮೈಸೂರಿನ ಹತ್ತಿರವಿರುವ ದೇವನೂರು ಮಠಕ್ಕೆ ಬರುವಂತೆ ಅಪ್ಪಣೆ ಮಾಡಿದರು. ಹನುಮಂತಪ್ಪನವರು ಗುರುಗಳ ಅಪ್ಪಣೆಯಂತೆ ಮೈಸೂರಿನ ಮಲ್ಲೇಶ್ವರ ಮಠಕ್ಕೆ ಬಂದರು. ಅಲ್ಲಿ ಕೆಲವು ದಿನಗಳ ಕಾಲ ಮಲ್ಲೇಶ್ವರ ಮಹಾಸ್ವಾಮಿಗಳ ಸೇವೆಯನ್ನು ಮಾಡಿ, ಗುರುಗಳಿಂದ ಲಿಂಗ ದೀಕ್ಷೆಯನ್ನು ಪಡೆದರು. ಗುರುವಿನ ಅಪ್ಪಣೆಯಂತೆ ಮೇದರ ಸಮುದಾಯದವರನ್ನು ಸನ್ಮಾರ್ಗದಲ್ಲಿ ನಡೆಸಲು ಅವರಿಗೆ ಸಂಸ್ಕಾರಕೊಡುತ್ತಾ ಸಂಚಾರ ಹೊರಟರು. ಅಲ್ಲಿಂದ ಶ್ರೀ ವಿರೂಪಾಕ್ಷ ಒಡೆಯರ ಸನ್ನಿಧಾನದಲ್ಲಿ ಶ್ರೀಗಳವರಿಂದ ಬ್ರಹ್ಮೋಪದೇಶವನ್ನು ಪಡೆದು, ಗುರು ಕೇತೇಶ್ವರ ಸ್ವಾಮೀಜಿ ಎಂದು ನಾಮಾಂಕಿತಗೊಂಡರು.

ಗುರುವಿನಿಂದ ಮುದ್ರಿಕೆಯ ಪದಕ ಮತ್ತು ಬೆತ್ತದ ದಂಡವನ್ನು ಪಡೆದು ಮೇದರ ಕುಲಗುರುವಾಗಿ ಮೇದ ಸಮುದಾಯದ ಸಕಲ ಉದ್ಧಾರಕ್ಕಾಗಿ ದುಡಿಯಲು ಪಣತೊಟ್ಟು ಹೊರಟರು. ಈ ಸಂದರ್ಭದಲ್ಲಿ ಹುಬ್ಬಳ್ಳಿಯ ಮೂರು ಸಾವಿರ ಮಠದ ಸ್ವಾಮಿಗಳಾದ ಶ್ರೀ ಕೆಂಪಯ್ಯ ಸ್ವಾಮಿಗಳು ಇವರಿಗೆ ಹುಬ್ಬಳ್ಳಿಯಲ್ಲಿ ಮಠ ಕಟ್ಟಿಕೊಂಡು ಇರಲು ನಿವೇಶನ ವ್ಯವಸ್ಥೆ ಮಾಡಿದರು. ೧೯೩೨ರಲ್ಲಿ ಹುಬ್ಬಳ್ಳಿಯ ಮೇದರ ಓಣಿಯಲ್ಲಿ ಮೇದರ ಸಹಕಾರದಿಂದ ಒಂದು ಮಠವನ್ನು ಕಟ್ಟಿಸಿದರು. ೧೯೩೬ರಲ್ಲಿ ಸ್ವಾಮಿಜಿಯವರು ಮೇದರ ಹುಡುಗನಾದ ಎಂಟು ವರ್ಷದ ಶಾಂತಪ್ಪ ಎನ್ನುವ ಬಾಲಕನನ್ನು ಗುರುಗಳ ಸೇವೆಗಾಗಿ ಮಠದಲ್ಲಿ ಇಟ್ಟುಕೊಂಡರು.

ಅಲ್ಲಿಂದ ಪ್ರತಿವರ್ಷ ಶಿವರಾತ್ರಿ, ವಿಜಯದಶಮಿ ಹಾಗೂ ಬಸವಜಯಂತಿ ಮುಂತಾದ ಸಂದರ್ಭಗಳಲ್ಲಿ ಅನೇಕ ವಿಧವಾದ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡತೊಡಗಿದರು. ೧೯೭೦ರಲ್ಲಿ ಹುಬ್ಬಳ್ಳಿ ತಾಲೂಕಿನ ಒಂದು ಗ್ರಾಮದಲ್ಲಿ ಬ್ರಹ್ಮರಾಕ್ಷಸನ ಹಾವಳಿ ಹೆಚ್ಚಾಗಿರಲು ಗುರುಗಳು ಅಲ್ಲಿ ಅನುಷ್ಠಾನ ಮಾಡಿ ಜನರನ್ನು ರಾಕ್ಷಸನ ಕಾಟದಿಂದ ರಕ್ಷಿಸಿದರು. ಕೇತೇಶ್ವರ (ಹನುಂತಯ್ಯ) ಈ ಸಮುದಾಯದ ಜನರಿಗೆ ಗುರುವಾಗಿ, ಭವರೋಗ ವೈದ್ಯರಾಗಿ ಇವರನ್ನು ರಕ್ಷಿಸಿ ಕಾಪಾಡತೊಡಗಿದರು. ಶ್ರೀಗಳವರು ೧೯೮೮ ಡಿಸೆಂಬರ್ ತಿಂಗಳಲ್ಲಿ ಲಿಂಗೈಕ್ಯರಾದರು. ಅಲ್ಲಿ ಗುರುಗಳ ಗದ್ದಿಗೆಯನ್ನು ನಿರ್ಮಿಸಲಾಗಿದೆ. ೧೯೯೯ರಲ್ಲಿ ಮಠದ ಶಂಕುಸ್ಥಾಪನೆ ಮಾಡಲಾಯಿತು. ಈಗಲೂ ಸಹ ಹುಬ್ಬಳ್ಳಿಯಲ್ಲಿರುವ ಕೇತೇಶ್ವರರ ಗದ್ದುಗೆಗೆ ಜನರು ಭಕ್ತಿಯಿಂದ ನಡೆದುಕೊಳ್ಳುತ್ತಾರೆ.

ಅಲ್ಲಿಯ ಮಠಕ್ಕೆ ಮೇದ ಸಮುದಾಯದವರು ಹೋಗಿ ಬರುತ್ತಾರೆ. ಚಿತ್ರದುರ್ಗದ ಬೃಹನ್ಮಠದ ವತಿಯಿಂದ ಶ್ರೀ ಮುರಘಶರಣರು ಐದು ಎಕರೆ ಭೂಮಿಯನ್ನು ದೇಣಿಗೆಯಾಗಿ ನೀಡಿರುವ ಪ್ರದೇಶದಲ್ಲಿ ಮೇದರ ಶ್ರೀ ಕೇತೇಶ್ವರ ಮಹಾಮಠ, ಮೇದರ ಗುರುಪೀಠವು ಚಿತ್ರದುರ್ಗದ ಸೀಬಾರದಲ್ಲಿ ಸ್ಥಾಪಿಸಲ್ಪಟ್ಟಿದೆ. ಪ್ರಸ್ತುತ ಶ್ರೀ ಬಸವಪ್ರಭು ಕೇತೇಶ್ವರ ಮಹಾಸ್ವಾಮಿಗಳು ಪೀಠಾರೋಹಣ ಮಾಡಿರುವರು.

೨.೩ ಧಾರ್ಮಿಕ ಜೀವನ

ನಿತ್ಯ ಜೀವನದಲ್ಲಿ ವ್ಯಕ್ತಿಗೆ ಉತ್ತಮತೆ ಮತ್ತು ಯಶಸ್ಸನ್ನು ಗಳಿಸಲು ಬೇಕಾದ ನೈತಿಕ ಬಲವನ್ನು ನೀಡುವಂತಹದು. ಬದುಕಿನುದ್ದಕ್ಕೂ ವ್ಯಕ್ತಿ ಕಾರ್ಯವೆಸಗಲು ಧರ್ಮವು ಹಲವು ರೂಪಗಳನ್ನು ಧರಿಸುವುದು. ಧರ್ಮದ ಸಾಮಾಜಿಕ ಮೌಲ್ಯಗಳು, ಸಾಮಾಜಿಕ ಜೀವನಕ್ಕೆ ವ್ಯಕ್ತಿಯನ್ನು ಒಗ್ಗಿಸುತ್ತದೆ. ಹೆತ್ತವರು, ಸಂಬಂಧಿಕರು, ಹಿರಿಯರು ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುವಿಕೆ ರೀತಿಯು ಕಿರಿಯ ತಲೆಮಾರಿಗೆ ಧಾರ್ಮಿಕ ಶಿಕ್ಷಣವಾಗುತ್ತದೆ. ಧಾರ್ಮಿಕ ನೆಲೆಯಲ್ಲಿ ಅನೇಕ ವಿಧಿವಿಧಾನಗಳು, ಸಂಸ್ಕಾರಗಳು, ಆಚರಣೆಗಳಿದ್ದು ಅವುಗಳನ್ನು ಅವಲೋಕಿಸುತ್ತಾರೆ. ಇಂದು ನಾವು ಎಷ್ಟೇ ನಾಸ್ತಿಕರು ಎಂದುಕೊಂಡರೂ ದೇವರುಗಳ ಸಂಪರ್ಕ ಕಳಚಿಕೊಂಡು ಇರಲು ಸಾಧ್ಯವೇ ಇಲ್ಲ. ನಾವು ಬೇಡವೆಂದರೂ ದೇವರುಗಳು ನಮಗೆ ಹತ್ತಿರವಾಗುತ್ತವೆ. ನಾವು ಆರಾಧಿಸಲೇಬೇಕೆಂದೇನೂ ಇಲ್ಲ. ದ್ವೇಷಿಸುವುದು ಕೂಡ ಆರಾಧನೆಯ ಇನ್ನೊಂದು ತುದಿಯೇ ತಾನೆ?[೧೧] ಹೀಗೆ ಎಲ್ಲರ ಬದುಕಲ್ಲೂ ಪ್ರತ್ಯಕ್ಷ ಹಾಗೂ ಪರೋಕ್ಷ ಧಾರ್ಮಿಕ ಛಾಯೆಗಳಿರುತ್ತವೆ. ಮೇದರ ಬದುಕು ಧಾರ್ಮಿಕ ಹೊರತಾಗಿ ಎಲ್ಲವೂ ಗೌಣ ಎನಿಸುತ್ತಿತ್ತು. ಕಾರಣ ಮೇದರ ಸಾಮಾಜಿಕ ಬದುಕಿನೊಳಗೆ ಧಾರ್ಮಿಕ ಜೀವನ ಹೆಚ್ಚು ಪ್ರಭಾವಿಸಿದೆ.

೨.೩.೧ ಕುಲದೇವತಾ ಆರಾಧನೆ

ತೆಲುಗು ಮೇದರಲ್ಲಿ ೧೦೮ ಕುಲಗಳಿವೆ ಎನ್ನುವರು. ಕನ್ನಡ ಮೇದರ ಪ್ರದೇಶಾನುಸಾರ ವಿವಿಧ ಕುಲಗಳಿವೆನ್ನುವರು. ತಮಿಳು ಹಾಗೂ ಮಲಯಾಳಂ ಮೇದರಲ್ಲಿರಬಹುದಾದ ಕುಲಗಳ ಬಗ್ಗೆ ಸರಿಯಾದ ಮಾಹಿತಿ ಲಭ್ಯವಾಗಿಲ್ಲ. ಪ್ರತಿಯೊಂದು ಕುಲದವರು ತಮ್ಮ ತಮ್ಮ ಕುಲದೇವರನ್ನು ಹೊಂದಿರುವರು. ಇದು ಪರಂಪರಾಗತವಾಗಿ ನಡೆದು ಬಂದಿರಬಹುದಾದ ಆರಾಧನೆ. ಕುಲದ ದೈವಕ್ಕೆ ನಿಯಮಿತವಾಗಿ ವಾರ್ಷಿಕ ಆವರ್ತನೆಯಲ್ಲಿ ಸಲ್ಲಬೇಕಾದ ಪೂಜೆ–ಪುನಸ್ಕಾರಗಳನ್ನು ಮಾಡಲೇಬೇಕೆಂದು, ಇಲ್ಲವೇ ಯಾವುದೇ ವಿಪತ್ತುಗಳು ಸಂಭವಿಸುತ್ತವೆ ಎಂದು ನಂಬುತ್ತಾರೆ. ಕೃಷಿ ಕುಟುಂಬದಿಂದ ಬಂದವರಾದರೆ ಭೂಮಿ ಉಳುವ ಇಲ್ಲವೇ ಭಿತ್ತನೆ ಮಾಡುವ ಬೆಳೆ ಸಮೃದ್ಧಿಯಾಗಿದ್ದಾಗ, ಬೆಳೆಗೆ ಪ್ರಾಣಿಗಳ ಕಾಟವಿದ್ದಾಗ, ಬೆಳೆ ಕಟಾವು ಮಾಡುವಾಗ, ಬೆಳೆದ ಬೆಳೆ ಒಕ್ಕಲಾಟವಾಗಿ ಸಾಗಿಸುವಾಗ ಹೀಗೆ ಅನೇಕ ಸಂದರ್ಭದಲ್ಲಿ ಕುಲ ದೇವತಾ ಆರಾಧನೆ ಮಾಡಲಾಗುತ್ತದೆ.

ಮಂದೇವರೇ (ಮನೆ ದೇವರು) ಕುಲದೇವರಾಗಿದ್ದು ಮನೆಯಲ್ಲಿ ಹಲವಾರು ದೇವಾನುದೇವತೆಗಳಿದ್ದರೂ, ಮನೆದೇವರಿಗೆ ಪ್ರತ್ಯೇಕ ಕೋಣೆಯೋ, ಅಟ್ಟದ ಮೇಲೋ (ಆಲ್ದೂರು ಮೇದರು ಸಗನಿರಂಗನಾಥಸ್ವಾಮಿಯನ್ನು ಈ ರೀತಿ ಪೂಜಿಸುವರು), ಮುಂಬಾಗಿಲ ಮೇಲೋ ಪೂಜಿಸುವರು. ಮನೆದೇವರು ಮಾಡಿಕೊಟ್ಟಿರುವ ಕಟ್ಲೆಕಾಯಿಯನ್ನು ಪ್ರತಿದಿನವೂ

[illegible]

ಬೆಳಿಗ್ಗೆ ಹಾಗೂ ಸಂಜೆ ಭಕ್ತಿಯಿಂದ ಪೂಜಿಸುವರು. ದುರ್ವೀಗೆರೆಯ ಚೌಡಿಗೆ ಬಹಳ ಭಯ-ಭಕ್ತಿಯಿಂದ ದುರ್ವೀಗೆರೆ, ಅಜ್ಜಂಪುರ, ತರೀಕೆರೆ, ಲಕ್ಕವಳ್ಳಿ, ತಣಿಗೆಬೈಲು, ರಂಗೇನಹಳ್ಳಿ, ನರಸಿಂಹರಾಜಪುರ, ಶೆಟ್ಟಿಕೊಪ್ಪ, ಲಿಂಗಾಪುರದಲ್ಲಿ ವಾಸಿಸುವ ಮೇದರು ನಡೆದುಕೊಳ್ಳುವರು. ಪ್ರತಿ ಮಂಗಳವಾರ ಚೌಡಿಗೆ ಕೋಳಿ ಬಲಿಯನ್ನು ನೀಡುವರು. ಪಡಸಾಲೆಯಲ್ಲಿಯೇ ಕೋಳಿ ಕೊಯ್ದು ಅಲ್ಲಿಯೇ ಅಡಿಗೆ ಮಾಡಿ, ನೈವೇದ್ಯ ಮಾಡಿ ಊಟ ಮಾಡುವರು. ದಿನವೂ ಸಾಮಾನ್ಯವಾಗಿ ಅಡಿಗೆ ಮಾಡುವ ಒಲೆಯಲ್ಲಿ ಅಡಿಗೆ ಮಾಡುವುದಿಲ್ಲ. ಕಾರಣ ಕೇಳಿದರೆ 'ಮುಟ್ಟುಚಟ್ಟು' ಆಗುತ್ತದೆ ಎನ್ನುವರು.

ದುರ್ವೀಗೆರೆಯ ಚೌಡಿಯು ಸಂಚಾರ ಬಂದು ಯಾವ ಊರಿನಲ್ಲಿ ಯಾರ ಮನೆಯಲ್ಲಿ ತಾತ್ಕಾಲಿಕ ಸ್ಥಾಪನೆಗೊಳ್ಳುವುದೋ ಅಲ್ಲಿ 'ಚೌಡಿಗದ್ದಿಗೆ' ಇದೆಯೆಂದು ಆ ಜಾಗದಲ್ಲಿ 'ಗಿಂಡಿ' ಪೂಜೆ ಮಾಡಿ 'ಬೇವಿನುಡುಗೆ ಮಾಡಿದ ಗಿಂಡಿ'ಯ ಆಹ್ವಾಹನೆಯೊಂದಿಗೆ ಚೌಡಿ ಪ್ರವೇಶಿಸಿ ಹೇಳಿಕೆಗಳು ಆಗುತ್ತವೆ. ಚೌಡಿಯ ಆದೇಶದಂತೆ ಇವರೆಲ್ಲರೂ ಚಾಚು ತಪ್ಪದೆ ನಡೆದುಕೊಳ್ಳುತ್ತಾರೆ. ಚೌಡಿಗೆ ಕುರಿ ಬಲಿಯನ್ನು ಪಡಸಾಲೆಯಲ್ಲೇ ನೀಡಿ 'ಗಣಮಗ' ರಕ್ತವನ್ನು ಹೀರಿ ಬಿಡುತ್ತಾನೆ. ನಂತರ ಮಾಂಸವನ್ನು ಪಾಲು ಇಲ್ಲವೇ ಸಾಮೂಹಿಕ ಭೋಜನಕ್ಕೆ ಬಳಸಿಕೊಳ್ಳುತ್ತಾರೆ. ಕಿವಿ ಚುಚ್ಚುವುದು, ಮುಡಿಕೊಡುವುದು, ವಾರ್ಷಿಕ ಪೂಜೆ ಹೀಗೆ ಆಯಾ ಕುಲದವರು ತಮ್ಮ ಕುಲದ ದೇವರಲ್ಲೇ ಆಚರಿಸುವರು.

೨.೩.೨ ದೇವರು ಮತ್ತು ದೈವಾಚರಣೆ

ಬುಡಕಟ್ಟುಗಳಲ್ಲಿ ಭೀತಿಯಿಂದ ದೈವತ್ವ ಬಂದಿದೆಯೆಂದು ತಿಳಿಯಲಾಗಿದೆ. ನಿಸರ್ಗದಲ್ಲಿ ಸಹಜವಾಗಿ ಸಂಭವಿಸುವ ಸೂರ್ಯೋದಯ, ಚಂದ್ರೋದಯ ವಿಕೋಪಗಳಾದ ಗುಡುಗು, ಸಿಡಿಲು, ಚಂಡಮಾರುತ, ಭೂಕಂಪ ಇತ್ಯಾದಿಗಳ ಭಯವೇ ದೈವೀಕರಿಸಿದೆ. ನಿಸರ್ಗದ ಶಕ್ತಿಯಿಂದ ಪಾರಾಗಲು ಹಾಗೂ ಶಮನ ಮಾಡುವ ಉದ್ದೇಶದಿಂದ ಆಚರಣೆಗಳು ಉದಯಿಸಿವೆ. ದುಷ್ಟಶಕ್ತಿಗಳಿಂದ ತನ್ನನ್ನು ರಕ್ಷಿಸುವಂತೆ ದೈವವನ್ನು ಪರಿಪರಿಯಾಗಿ ಕೇಳಿಕೊಳ್ಳುತ್ತಾನೆ. ಇಂತಹ ದೇವರು ಹಾಗೂ ದೈವಕ್ಕೆ ಇಂತಹ ವಸ್ತುಗಳೇ ಸಂಪ್ರೀತಗೊಳಿಸುವುದೆಂದು ಭಾವಿಸಿ ಅದನ್ನು ತನ್ನ ಶಕ್ತ್ಯಾನುಸಾರ ನೀಡಲು ಪ್ರಯತ್ನಿಸುತ್ತಾನೆ. ದೇವರಿಗೆ ತನ್ನ ಅಹವಾಲನ್ನು ಕೇಳಿಕೊಳ್ಳುತ್ತಲೇ ಇವನ್ನು ನೆರವೇರಿಸಿದರೆ ನನ್ನಿಂದ ಇಷ್ಟು ಪ್ರಮಾಣದಲ್ಲಿ ಹಣ, ಧಾನ್ಯ, ಬೇಟೆ, ಒಡವೆ ಇತ್ಯಾದಿಗಳನ್ನು ಕೊಡುವುದಾಗಿ ಅರಿಕೆ ಮಾಡಿಕೊಳ್ಳುವರು. ಅದರಂತೆ ನಡೆದುಕೊಳ್ಳುವರು. ಇಲ್ಲದಿದ್ದರೆ ಯಾವುದೇ ತೊಂದರೆಗಳು ಸಂಭವಿಸಿದರೂ ದೇವರ ಕಾಟವೆಂದು ತಳುಕು ಹಾಕುವರು. ಬುಡಕಟ್ಟಿಗರಲ್ಲಂತು ದೇವರು ಮತ್ತು ದೈವಾರಾಧನೆಯಲ್ಲಿ ವಿಶೇಷ ಒಲವು ಕಾಣಬಹುದು.

[illegible]

ಬುಡಕಟ್ಟು ಜನರು ದೇವರನ್ನು ಸಾತ್ವಿಕ ಹಾಗೂ ಕ್ಷುದ್ರ ದೇವರುಗಳೆಂದು ವಿಭಜಿಸುವರು. ಸಾತ್ವಿಕ ದೇವರು ಕೇವಲ ಪೂಜೆ-ಪುನಸ್ಕಾರ, ಹಣ್ಣು-ಹಂಪಲು, ಕೆಂಡಾರ್ಚನೆ, ಉತ್ಸವ, ಹೇಳಿಕೆ, ಪ್ರಸಾದ ವಿನಿಯೋಗ ಇತ್ಯಾದಿ ಪೂಜಾ ವಿಧಿವಿಧಾನದಲ್ಲಿ ನೆರವೇರುತ್ತದೆ. ಯಾವುದೇ ಗಲಾಟೆ ಗೋಜಲುಗಳಿಲ್ಲದೆ ನಡೆಯುವುದಾದರೆ ದೈವವು ಭೀಭತ್ಸತೆ ಮೂಡಿಸುತ್ತದೆ. ರಕ್ತಬಲಿಯನ್ನು ಕೇಳುತ್ತದೆ. ವಾಮಚಾರ ಮಾರ್ಗವೂ ಇದೆ. ಭಯಂಕರ ಆರ್ಭಟ ಮಾಡಿ ಭಕ್ತರಲ್ಲಿ ಭೀತಿ ಹುಟ್ಟಿಸುತ್ತದೆ. ದೂಳತ, ಕುಂಕುಮ ಎರಚಾಡುತ್ತದೆ. ಬಲಿ, ಧನ ಇತ್ಯಾದಿಗಳನ್ನು ರಾಜಾರೋಷವಾಗಿ ಕೇಳುತ್ತದೆ. ನಿಂತ ಜಾಗದಲ್ಲೇ ಅಲ್ಲೋಲ-ಕಲ್ಲೋಲವಾದಂತೆ ಬಾಸವಾಗುವುದು ದೈವ. ದೇವರ ಆಚರಣೆ ಹಾಗೂ ದೈವದ ಆಚರಣೆಗಳೆರಡನ್ನೂ ಬುಡಕಟ್ಟು ಮೇದರು ಆಚರಿಸುತ್ತಾರೆ. ಸಾತ್ವಿಕ ದೇವಾನುದೇವತೆಗಳಾದ ಸಾದರಳ್ಳಿ ರಂಗನಾಥಸ್ವಾಮಿ, ಮರುಳಸಿದ್ಧೇಶ್ವರ, ಧರ್ಮಸ್ಥಳ ಮಂಜುನಾಥಸ್ವಾಮಿ, ಎಂಜರೆಭೈರವ, ಮೈಲಾರಲಿಂಗೇಶ್ವರ, ಕದಲಿರಂಗನಾಥಸ್ವಾಮಿ, ವಗ್ರಳ್ಳಿರಂಗನಾಥಸ್ವಾಮಿ, ಅರಸೀಕೆರೆ ಶಂಕರೇಶ್ವರ, ಶಕುನಿ ರಂಗನಾಥಸ್ವಾಮಿ, ಹಾಗಲಮನೆ ಸಿದ್ದೇಶ್ವರ, ಗಿರಿರಂಗನಾಥಸ್ವಾಮಿ, ಕೊಲ್ಲಾರಮ್ಮ, ಗುಳ್ಳಮ್ಮ, ಮಾಳಮ್ಮ, ಕರಿಯಮ್ಮ, ಲಕ್ಷ್ಮಿ, ಸರಸ್ವತಿ, ಈಶ್ವರ, ಗಣೇಶ, ಷಣ್ಮುಖ ಇತ್ಯಾದಿ ದೇವರುಗಳನ್ನು ಪೂಜಿಸುತ್ತಾರೆ. ಕ್ಷುದ್ರ ದೇವತೆಗಳು ಹಾಗೂ ಬಲಿಯನ್ನು ಬೇಡುವ ದೈವಗಳಿಗೆ ವಿಶೇಷ ಪೂಜೆ, ಹೆಚ್ಚು ಕಾಳಜಿ ವಹಿಸಲಾಗುತ್ತದೆ. ಭಯ-ಭಕ್ತಿ ಹೆಚ್ಚಿರುತ್ತದೆ. ಚೌಡಿ, ಮಾರಿ, ಕಾಳಿ, ರುದ್ರಿ, ಮಳ್ಳಾಳಮ್ಮ, ಬಾಳೆಮರದಮ್ಮ ಮಲೇಮ್ಮ, ಅಂತರಘಟ್ಟಮ್ಮ ಈ ಹೆಣ್ಣು ದೇವತೆಗಳನ್ನು ಹೆಚ್ಚಾಗಿ ಆರಾಧಿಸುವರು. ಮೇದರೇ ಪೂಜಾರಿಗಳಾಗುವರು.

ಮೇದರ ಹೆಚ್ಚಿನ ದೇವತೆಗಳು ಕಟ್ಟೆಯ ಮೇಲೆ ಸ್ಥಾಪಿನೆಗೊಂಡಿರುತ್ತವೆ. ಹಾಲು ಬರುವ ವೃಕ್ಷದ ಅಡಿಯಲ್ಲಿ ಕಟ್ಟೆಯೊಂದನ್ನು ಕಟ್ಟಿ ಮರದ ಬೊಡ್ಡೆಯ ಸುತ್ತ ದುಂಡಗಿನ ಹಾಗೂ ಒಂದು ಅಡಿ ಎತ್ತರದ ಕಲ್ಲು ಪ್ರತೀಕಗಳನ್ನು ಸ್ಥಾಪಿಸಿರುತ್ತಾರೆ. ಕಾಡಿನ ದೇವತೆಯರಿಗೆ ನಾಲ್ಕು ಚಪ್ಪಡಿಗಳನ್ನು ಇಡುತ್ತಾರೆ.

ಕಲ್ಲು ಚಪ್ಪಡಿಗಳಿಗೆ ಸುಣ್ಣ ಹಾಗೂ ಹುರಿಮಂಜಿನ ಪಟ್ಟೆಗಳನ್ನು ಬಳಿದಿರುತ್ತಾರೆ. ಮರದಡಿಯ ಮೇಲೆ ಗಂಟೆ ಮತ್ತು ದೀಪವನ್ನು ಇಟ್ಟಿರುತ್ತಾರೆ. ಕೊಲ್ಲಾರಮ್ಮ (ದುರ್ವಿಗೆರೆ), ಕರಿಯಮ್ಮ (ನರಸಿಂಹರಾಜಪುರ)ನಂತಹ ದೇವತೆಯರ ಸ್ಥಳಾವರಣವು ಗುಡಿಯಲ್ಲಿ ಉಳಿದ ದೇವತೆಯರ ಸ್ಥಾನಕ್ಕಿಂತ ಅರ್ಧ ಅಡಿ ಎತ್ತರದಲ್ಲಿರುತ್ತದೆ. ದೇವತೆಯರನ್ನು ಪಲ್ಲಕ್ಕಿ ಇಲ್ಲವೇ ಉಯ್ಯಾಲೆಯಲ್ಲಿಟ್ಟಿರುತ್ತಾರೆ. ಬೆಳ್ಳಿ ಇಲ್ಲವೆ ತಾಮ್ರದ ಪ್ರಭಾವಳಿಯಿಂದ ದೇವತೆಗೆ ಶೋಭೆ ಬಂದಿರುತ್ತದೆ. ತಾವೆಷ್ಟೇ ಬಡವರಾಗಿದ್ದರೂ ದೇವರ ಪೂಜೆ, ಉತ್ಸವ, ಕೆಂಡಾರ್ಚನೆ, ಅಮವಾಸ್ಯೆ ಪೂಜೆ ಇತರೆ ವಿಶೇಷ ಪೂಜೆ, ವಾರದ ಪೂಜೆ (ಮಂಗಳವಾರ), ಕಡೇ ಕಾರ್ತಿಕ, ಮಂಡಲಪೂಜೆ, ಜಾತ್ರೆ ಇತ್ಯಾದಿಗಳನ್ನು ಚಾಚು ತಪ್ಪದೆ ಮಾಡುತ್ತಾರೆ.

೨.೩.೩ ಮೇದರ ಧಾರ್ಮಿಕ ನೆಲೆಗಳು

ಮೇದರು ವಾಸ ಮಾಡುವ ಪ್ರದೇಶಕ್ಕನುಸಾರವಾಗಿ ಹಲವು ದೇವರು ಮತ್ತು ಧಾರ್ಮಿಕ ಕೇಂದ್ರಗಳನ್ನು ಹೊಂದಿರುತ್ತಾರೆ. ವಿವಿಧ ಭಾಷೆಗಳು, ಉಪಪಂಗಡಗಳು, ವಲಸೆ, ಆಚಾರ-ವಿಚಾರ, ರೂಢಿ-ಸಂಪ್ರದಾಯಗಳಿಗೆ ಅನುಗುಣವಾಗಿ ಮೇದರಲ್ಲಿ ಪೂಜಿಸಲ್ಪಡುವ ದೇವರುಗಳಿದ್ದಾರೆ. ಅವರ ಧಾರ್ಮಿಕ ನೆಲೆಗಳು ರಾಜ್ಯ ಹಾಗೂ ಹೊರರಾಜ್ಯಗಳಲ್ಲೂ ಹರಡಿರುವುದು ನನ್ನ ಸಂಶೋಧನೆಯಿಂದ ತಿಳಿದುಬಂದಿದೆ. ತಮ್ಮ ಮೂಲ ಆರಾಧನೆಯ ದೇವತೆಗಳ ಜೊತೆಗೆ ಸಂಸ್ಕೃತೀಕರಣದ ಪ್ರಭಾವದಿಂದ ಅನೇಕ ದೇವರುಗಳ ಆರಾಧನೆ ಕಾಣಬಹುದು. ತಮ್ಮ ಮೂಲ ದೇವರನ್ನು ಹೇಳುವಾಗ 'ಒಕ್ಕಲ'ನ್ನು ಬಳಸುತ್ತಾರೆ. ತಿಮ್ಮಪ್ಪನ ಒಕ್ಕಲು, ಧರ್ಮಸ್ಥಳ ಮಂಜುನಾಥಸ್ವಾಮಿ ಒಕ್ಕಲು, ವಗ್ರಳ್ಳಿ ರಂಗನಾಥಸ್ವಾಮಿ ಒಕ್ಕಲು, ಶಕುನಿ ರಂಗನಾಥಸ್ವಾಮಿ ಒಕ್ಕಲು, ಮೈಲಾರಲಿಂಗೇಶ್ವರ ಒಕ್ಕಲು, ಹಾಗಲ ಮನೆ ಸಿದ್ಧೇಶ್ವರ ಒಕ್ಕಲು ಹೀಗೆ ಮನೆ ಮಂದಿಯೆಲ್ಲ ಹಾಗೂ ಆಯಾ ಕುಲದವರೆಲ್ಲ ಆ ದೇವರಿಗೆ ನಡೆದುಕೊಳ್ಳುವಿಕೆಯೇ ಇದಾಗಿದೆ. ಆಯಾ ಒಕ್ಕಲಿನವರು ಆಯಾ ದೇವರನ್ನೇ ಕುಲದೇವರೆಂದು ಆರಾಧಿಸುತ್ತಾರೆ.

ಅಂತರಘಟ್ಟಮ್ಮ, ಕೊಲ್ಲಾರಮ್ಮ, ಚೌಡಮ್ಮ, ಮಾರಮ್ಮ, ಯಲ್ಲಮ್ಮ, ದುರ್ಗಮ್ಮ, ಕುಕ್ಕಡದಮ್ಮ, ಕರಿಯಮ್ಮ, ಬೇವಿನ ಮರದಮ್ಮ, ಗುಳ್ಯಮ್ಮ, ಗುತ್ಯಮ್ಮ, ಉಡಿಸಲಮ್ಮ ಹೀಗೆ ಹೆಣ್ಣು ದೇವತೆಗಳ ಆರಾಧಕರು ಮೇದರು. ವಗ್ರಳ್ಳಿ, ಅರಸೀಕೆರೆ, ಕಡೂರು, ಮೈಲಾರ, ಹಾಗಲಮನೆ, ಸಾದರಹಳ್ಳಿ, ತಿರುಪತಿ, ಧರ್ಮಸ್ಥಳ, ಉಡುಪಿ, ಕೊಲ್ಲೂರು, ಶೃಂಗೇರಿ, ಹೊರನಾಡು, ದುರ್ವೀಗೆರೆ, ತರೀಕೆರೆ, ಲಕ್ಕವಳ್ಳಿ, ನರಸಿಂಹರಾಜಪುರ, ನಂಜನಗೂಡು, ಮಲೈಮಾದೇಶ್ವರ ಬೆಟ್ಟ, ಶ್ರೀರಂಗಪಟ್ಟಣ, ಸೇಲಂ, ಗುಂತಕಲ್ ಹೀಗೆ ಯಾವ ಯಾವ ಪ್ರದೇಶದಲ್ಲಿ ನೆಲೆನಿಂತಿದ್ದಾರೋ ಅಥವ ಯಾವ ಪ್ರದೇಶದಿಂದ ವಲಸೆ ಬಂದಿದ್ದಾರೋ ಆ ಪ್ರದೇಶದ ದೇವರುಗಳು ಇವರ ಭಕ್ತಿಗೆ ಕಾರಣವಾದವು.

೨.೪ ಆರ್ಥಿಕ ಜೀವನ

೨.೪.೧ ಚಿಕ್ಕಮಗಳೂರು ಜಿಲ್ಲೆಯ ಮೇದ ಬುಡಕಟ್ಟು ಹಾಗೂ ಅರಣ್ಯ ಸಂಬಂಧ

ಮಾನವ ತನ್ನ ಐತಿಹಾಸಿಕವಾದ ಮಹಾನ್ ನಡಿಗೆಯಲ್ಲಿ ದಾಪುಗಾಲಿರಿಸುತ್ತಾ ಇದೀಗ ನಾಗರೀಕತೆಯ ಅತ್ಯುಚ್ಚಮಟ್ಟಕ್ಕೆ ಬಂದು ತಲುಪಿದ್ದಾನೆ. ಹಾಗೆಂದು ಮಾತ್ರಕ್ಕೆ ಇಡೀ ಜಗತ್ತಿನ ಎಲ್ಲಡೆಯಲ್ಲಿಯೂ ಇಂತಹ ಪ್ರಗತಿ ಕಾಣುವುದಿಲ್ಲ. ನಾಗರೀಕತೆಯ ಗಂಧ-ಗಾಳಿಯನ್ನೇ ಅರಿಯದ ಇನ್ನೂ ನರಮಾಂಸ ಭಕ್ಷ ಸ್ಥಿತಿಯಲ್ಲಿರುವ ನ್ಯೂಗಿನಿಯ ಮುಂಡುಗುಮುರ್ ಸಮುದಾಯ ಕಾಣಬಹುದು. ಹಾಗೆಯೇ ಅಕ್ಷರಪೂರ್ವ ಸಮುದಾಯದಷ್ಟೆ ಹಿಂದುಳಿದಿರುವ ಸಮೂಹಗಳು ಇನ್ನೂ ಬಹಳಷ್ಟಿವೆ. ಬಹಳ ವಿಶಿಷ್ಟವಾದ, ಕುತೂಹಲಕರವೂ, ಸವಾಲಿನ ಸಮಾಜವೂ, ನಾಗರೀಕ ಪ್ರಪಂಚದ ನಡುವೆಯೂ ಕೆಲವಷ್ಟು ಕಾಣುತ್ತೇವೆ. ದೇಶದ ಬೇರೆ

ಬೇರೆ ರಾಜ್ಯಗಳ ಮೂಲೆ ಮೂಲೆಗಳಲ್ಲಿ, ಬೆಟ್ಟ–ಗುಡ್ಡಗಳಲ್ಲಿ ಮತ್ತು ಕಾಡು–ಮೇಡುಗಳಲ್ಲಿ ವಾಸಿಸುವ ಈ ಜನರ ಜೀವನ ಕ್ರಮ ನಾನಾ ತೆರನಾದುದು. ಅವರ ಜೀವನದ ವೈಚಿತ್ರ–ವೈಶಿಷ್ಟ್ಯತೆಗಳನ್ನು, ಸಮಸ್ಯೆ–ಸವಾಲುಗಳನ್ನು ಅರಿತು ಅವರನ್ನು ನಾಗರೀಕತೆಯ ಪಥದಲ್ಲಿ ಮುನ್ನಡೆಯಲು ನಾಗರೀಕ ಸಮಾಜ ಅನೇಕ ಪ್ರಯತ್ನಗಳನ್ನು ನಡೆಸುತ್ತಿರುವುದು ಕಾಣಬಹುದು.

ಬುಡಕಟ್ಟುಗಳು ಅರಣ್ಯದ ಆತ್ಮ ಸ್ವರೂಪೀ ಭಾಗಗಳು. ಅರಣ್ಯ ಮತ್ತು ಅರಣ್ಯ ವಾಸಿಗಳ ಅನುಸಂಧಾನ ಆಧ್ಯಾತ್ಮದ ರೀತಿಯದು. ಅವೆರಡೂ ತಮ್ಮಷ್ಟಕ್ಕೆ ತಾವು ಪೂರಕ–ಪ್ರೇರಕ. ವರ್ತಮಾನದ ಮಾನವನ ಸಂಬಂಧಗಳಲ್ಲಿಯ ಪಲ್ಲಟಗಳಿಗೆ, ಅರಣ್ಯ ಮತ್ತು ಅರಣ್ಯಗಳ ಅನುಬಂಧದಲ್ಲಿ ಪರಿಹಾರವಿದ್ದಂತಿದೆ. ಮಾನವನ ಮತ್ತು ಅರಣ್ಯದ ಒಡನಾಟ ಅವನ ಅನ್ವೇಷಕ ಸ್ಥಿತಿಯಿಂದ ಪ್ರಜ್ಞಾಪೂರ್ವಕ ಸಂಬಂಧವಾಗಿ ಮಾರ್ಪಟ್ಟಿದೆ ಕಾಡಿನ ನಂಟು ಬುಡಕಟ್ಟಿಗರಿಗೆ ಅತೀ ಪುರಾತನವಾದುದು ಎಂಬುದನ್ನು ಮನವರಿಕೆ ಮಾಡಿದೆ.

ಬುಡಕಟ್ಟುಗಳು ದೇಶದ ಮೂಲೆ ಮೂಲೆಗಳಲ್ಲಿ ಹಾಗೂ ಪರ್ವತಗಳ ಮೇಲೆ ಕಾಡು–ಮೇಡುಗಳಲ್ಲಿ ಇತರರಿಂದ ಭೌಗೋಳಿಕವಾಗಿ ಪ್ರತ್ಯೇಕಿತವಾದಂತಯೇ ಜೀವನ ನಡೆಸುತ್ತಿದ್ದಾರೆ. ಇವರ ಇತಿಹಾಸ ಪ್ರಜ್ಞೆ ಸರಳವಾದುದು. ಅವರುಗಳಿಗೆ ನೆನಪಿರಬಹುದಾದ ೫–೬ ಪೀಳಿಗೆಗಳ ಇತಿಹಾಸವೂ ಕೂಡ ಪುರಾಣ ಹಾಗೂ ದಂತಕಥೆಗಳೊಂದಿಗೆ ಸಮ್ಮಿಶ್ರಿತವಾಗಿದೆ. ಇವರುಗಳ ಆರ್ಥಿಕ ಹಾಗೂ ತಾಂತ್ರಿಕ ಪರಿಜ್ಞಾನ ಹಾಗೂ ಈ ದಿಕ್ಕಿನಲ್ಲಿ ಅವರ ಬೆಳವಣಿಗೆ ಅತ್ಯಂತ ಕೆಳಮಟ್ಟದ್ದಾಗಿದೆ. ಆದಿವಾಸಿಗಳು ಸಾಂಸ್ಕೃತಿಕ ಸ್ವರೂಪತೆ, ಭಾಷೆ, ಸಂಸ್ಥೆಗಳು, ನಂಬುಗೆಗಳು, ಪದ್ಧತಿಗಳು, ದೃಷ್ಟಿಕೋನ, ಮೌಲ್ಯಗಳು ಮುಂತಾದವುಗಳ ದೃಷ್ಟಿಯಿಂದ ಭಾತತೀಯ ಸಮಾಜದ ಉಳಿದ ವರ್ಗಗಳಿಂದ ಬಹಳಷ್ಟು ಭಿನ್ನವಾಗಿದೆ. ಭಾರತೀಯ ಆದಿವಾಸಿಗಳು, ಬುಡಕಟ್ಟುಗಳನ್ನು ಒಂದೇ ಸಮೂಹ ಲಕ್ಷಣಗಳಲ್ಲಿ ಅಳೆಯಲು ಸಾಧ್ಯವಿಲ್ಲವಾದರೂ, ಅವರಲ್ಲಿ ಏಣಿಶ್ರೇಣಿ ಹೊಂದಿರದ, ವೈವಿಧ್ಯತೆ ಅಥವಾ ವೈಲಕ್ಷಣಗಳನ್ನು ಹೊಂದಿದ ಸಮೂಹಗಳಾಗಿವೆ.

ಆದಿವಾಸಿ ಜೀವನದ ಶೈಕ್ಷಣಿಕ ಅಧ್ಯಯನಕ್ಕೆ ಸಹಾಯಕವಾಗುವ ದೃಷ್ಟಿಯಿಂದ ಆದಿವಾಸಿಗಳು ವಾಸಿಸುವ ಭೂ ಪ್ರದೇಶಗಳ ಆಧಾರದ ಮೇಲೆ ಭಾರತದ ಆದಿವಾಸಿಗಳನ್ನು ಮೂರು ವರ್ಗಗಳಾಗಿ ವರ್ಗೀಕರಿಸಲಾಗಿದೆ.

೧. ಉತ್ತರದ ಹಾಗೂ ಈಶಾನ್ಯ ವಲಯದ ಆದಿವಾಸಿಗಳು

೨. ಮಧ್ಯವಲಯದ ಆದಿವಾಸಿಗಳು

೩. ದಕ್ಷಿಣ ವಲಯದ ಆದಿವಾಸಿಗಳು

ಸಂಶೋಧನಾ ದೃಷ್ಟಿಯಿಂದ ಭಾರತದ ದಕ್ಷಿಣ ವಲಯವು ಹೈದ್ರಾಬಾದ್, ಕೊಡಗು, ಮೈಸೂರು, ಕೊಚ್ಚಿನ್, ತಿರುವಾಂಕೂರು, ಆಂಧ್ರ, ಮದ್ರಾಸ್ ಪ್ರದೇಶಗಳನ್ನು ಒಳಗೊಂಡಿರುವುದು.

[illegible]

ತೋಡಾ, ಕೆನರಾ, ಕಾಡುಕುರುಬ, ಉರಾಲಿ, ಸೋಲಿಗ, ಯರವ, ಕೋಯಾ, ತಿರುವಾ, ಬಡಗಾ, ಇರುಳಾ, ಕೆನಿಕ್ಕಾರ್, ಮಾಲ್ವಡನ್, ಕಾಡಾರ್, ಚಂಚೂ ಮೊದಲಾದ ಆದಿವಾಸಿಗಳು ಈ ವಲಯದಲ್ಲಿ ವಾಸಿಸುವರು. ಉಳಿದ ವಲಯಗಳ ಆದಿವಾಸಿಗಳಿಗೆ ಹೋಲಿಸಿದರೆ ದಕ್ಷಿಣ ವಲಯದವರು ನಾಗರೀಕರತೆಯಲ್ಲಿ ಬಹಳ ಹಿಂದುಳಿದಿದ್ದಾರೆ. ಇತ್ತೀಚಿನವರೆಗೂ ಕಲ್ಲನ್ನು ತಿಕ್ಕಿ ಬೆಂಕಿಯನ್ನು ತಯಾರಿಸುತ್ತಾ, ಎಲೆ ಹಾಗೂ ಹುಲ್ಲಿನಿಂದ ತಯಾರಿಸಿದ ಉಡುಪುಗಳನ್ನು ಧರಿಸುತ್ತಾ ಇದ್ದ ಈ ಸಮೂಹಗಳು ಇದೀಗ ಆಧುನಿಕ ಜಗತ್ತಿನತ್ತ ನೋಡತೊಡಗಿವೆ. ಚಿಕ್ಕಮಗಳೂರು ಜಿಲ್ಲೆಯ ಮೇದ ಬುಡಕಟ್ಟು ಇಷ್ಟೇ ವರ್ಷಗಳಿಂದ ವಾಸಿಸುತ್ತಿದ್ದಾವೆ ಎಂದು ಖಚಿತವಾಗಿ ಹೇಳಲಾಗದು.

ತಲತಲಾಂತರದಿಂದ ಅವರ ನೆಲೆಗಳು ಇಲ್ಲಿವೆ. ಬ್ರಿಟೀಷರು, ಪೋರ್ಚುಗೀಸರು, ಮುಸ್ಲಿಂ ಆಳರಸರ ಕಾಲದಲ್ಲಿ ನಾವು ಕಾಫಿ ಎಸ್ಟೇಟಿಗೆ, ಕಾಫಿ ಬೀಜಗಳನ್ನು ಮೊಳಕೆಯೊಡಸಲು ಬೇಕಾದ ಚಿಕ್ಕ ಚಿಕ್ಕ ಕುಕ್ಕೆಗಳನ್ನು ನಮ್ಮ ಹಿಂದಿನ ತಲೆಮಾರಿನವರು ಮಾಡಿಕೊಡುತ್ತಿದ್ದರು. ಬೇಕಾದಷ್ಟು ಬಿದಿರು, ಕೈತುಂಬ ಕೆಲಸ ಇತ್ತಂತೆ ಎಂದು ಚಿಕ್ಕಮಗಳೂರಿನಲ್ಲಿ ವಾಸವಿರುವ ಮೇದರ ಪೈಲ್ವಾನ್ ಕೃಷ್ಣಪ್ಪನವರು ಅಭಿಪ್ರಾಯಿಸುತ್ತಾರೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಉಗಮಗೊಳ್ಳುವ ತುಂಗಾ, ಭದ್ರಾ, ನೇತ್ರಾವತಿ, ಹೇಮಾವತಿ ಹಾಗೂ ವೇದಾವತಿ ನದಿಗಳು ಹರಿಯುವ ಉದ್ದಕ್ಕೂ ದಟ್ಟವಾದ ಅರಣ್ಯ ಸಂಪತ್ತು ಕಂಡುಬರುತ್ತದೆ. ೧೯೭೭ರಲ್ಲಿ ಅಭಯಾರಣ್ಯ ಕಾಯ್ದೆ ಬರುವುದಕ್ಕೂ ಮೊದಲು ಚಿಕ್ಕಮಗಳೂರು ಜಿಲ್ಲೆಯಲ್ಲಿ ಅರಣ್ಯ ಸಂಪತ್ತು ರಾಜ್ಯದ ಒಡೆತನದಲ್ಲಿತ್ತು.

ತನ್ನ ಆಡಳಿತ ದೃಷ್ಟಿಯಿಂದ ಚಿಕ್ಕಮಗಳೂರು ಹಾಗೂ ಕೊಪ್ಪ ಅರಣ್ಯ ವಿಭಾಗಗಳನ್ನಾಗಿ ಮಾಡಿಕೊಂಡು ಇದರ ಅಡಿಯಲ್ಲಿ ಭದ್ರಾ, ಕುದುರೆಮುಖ, ಮೇಗರಮಕ್ಕಿ, ಕರ್ಕೇಶ್ವರ ಮೀಸಲು ಅರಣ್ಯ, ಹಲಸೂರು ರಾಜ್ಯ ಅರಣ್ಯ, ಮುದುಗುಣಿ, ಮುತ್ತೋಡಿ, ತಣಿಗೆಬೈಲು, ಲಕ್ಕವಳ್ಳಿ, ಉಂಬ್ಳೇಬೈಲು, ಕುಂದೂರು, ಬಿಳಗೊಳ ರಕ್ಷಿತ ಅರಣ್ಯ, ಅಳೇಹಳ್ಳಿ, ಲನೇ ಮೈಲಿಕಲ್ಲು, ಕೂಸಗಲ್ಲು, ಎನ್ನಂಗಿ, ಬೆಳ್ಳಂಗಿ ಹೀಗೆ ಅನೇಕ ವಿಭಾಗಗಳನ್ನಾಗಿ ಮಾಡಿಕೊಂಡು ಇವೆಲ್ಲವೂ ರೆಗ್ಯೂಲರ್ ಫಾರೆಸ್ಟ್‌ಗಳಾಗಿವೆ. ಇದರ ಜೊತೆಗೆ ಕಿರು ಅರಣ್ಯ ಹಾಗೂ ಗೋಮಾಳಗಳಲ್ಲಿ ಸಾಮಾಜಿಕ ಅರಣ್ಯಗಳು, ನೆಡುತೋಪುಗಳನ್ನು ನೆಟ್ಟು ಸಂರಕ್ಷಿಸಲ್ಪಟ್ಟಿದೆ. ಕರ್ನಾಟಕದ ಅರಣ್ಯ ಭೂಪಟದಲ್ಲಿ ಅತ್ಯಂತ ದಟ್ಟವಾದ, ನಿತ್ಯ ಹರಿದ್ವರ್ಣದ ಕಾಡುಗಳನ್ನು ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾಣುತ್ತೇವೆ.

ಮೇದರಿಗೂ ಹಾಗೂ ಅರಣ್ಯಕ್ಕೂ ಅವಿನಾಭಾವ ಸಂಬಂಧವಿದೆ. ಮೇದ ಬುಡಕಟ್ಟಿನವರ ಕುಲಕಸುಬಿಗೆ ಮೂಲ ಕಚ್ಚಾ ಪದಾರ್ಥ ಕಿರು ಬಿದಿರು ಹಾಗೂ ಹೆಬ್ಬಿದಿರೇ ಆಗಿದೆ. ಈ ಬಿದಿರುಗಳು ಹೆಚ್ಚಾಗಿ ಮಳೆ ಕಾಡುಗಳಲ್ಲೇ ಬೆಳೆಯುವುದು. ಭದ್ರಾ ಕಾಡು, ಕುದುರೆಮುಖ

ಕಾಡು, ಮುತ್ತೋಡಿ ಕಾಡು, ಕೂಸಗಲ್ಲು ಕಾಡು, ಎನ್ನಂಗಿ-ಬೆಳ್ಳಂಗಿ ಕಾಡು, ಮುದುಗುಣಿ ಕಾಡು, ಕುಂದೂರು-ಬಿಳಗೊಳ ಕಾಡುಗಳಲ್ಲಿ ಎತ್ತೇಚ್ಛವಾಗಿ ಲಭ್ಯವಾಗುತ್ತವೆ. ಬಹುಶಃ ಈ ಕಾರಣದಿಂದಲೇ ಅನೇಕ ಮೇದರ ನೆಲೆಗಳು ಈ ಕಾಡುಗಳಿಗೆ ಹತ್ತಿರವಿರುವಂತೆ ಕಂಡುಬರುತ್ತವೆ. ಭಾರತೀಯ ಸಂಸ್ಕೃತಿಯಿಂದಾಗಿ ಮೇದರ ಕುಲಕಸುಬು ಇಂದಿಗೂ ನಿಂತಿದೆ. ಭಾರತೀಯ ಸಂಸ್ಕೃತಿಯೊಂದಿಗೆ ಮೇದಾರಿಕೆ ಇನ್ನೂ ಜೀವಂತವಿರುವುದನ್ನು ವೃತ್ತಿನಿರತ ಮೇದರು ತಿಳಿಸುತ್ತಾರೆ.

ಅನೇಕ ರೂಢಿ ಸಂಪ್ರದಾಯಗಳು, ಆಚರಣೆಗಳು, ವಿಧಿ-ವಿಧಾನಗಳಿಗಾಗಿ ಮೇದರು ತಯಾರಿಸಿದ ಉತ್ಪನ್ನಗಳು ಬಳಕೆಯಾಗುತ್ತವೆ. ಅಂದರೆ ಹುಟ್ಟಿನಿಂದ ಸಾವಿನವರೆಗೂ ಬಿದಿರು ಅಥವ ಬಿದಿರಿನ ಉತ್ಪನ್ನಗಳು ಬೇಕು. ಉದಾಹರಣೆಗೆ ಗೌರಿಮೊರ, ಮುಚ್ಚಲು, ತೊಟ್ಟಿಲು, ಮೆಟ್ಟಕ್ಕಿ ಚಿಬ್ಬಲು, ಚಾಪೆ, ಮೂಲೆಕುಕ್ಕೆ, ಬುಟ್ಟಿ, ಗಿಲಕಿ ಇತ್ಯಾದಿಗಳು ಮದುವೆ-ಮುಂಜಿ, ನಾಮಕರಣ ಇತ್ಯಾದಿಗಳಿಗೆ ಬೇಕೆ ಬೇಕು.

ಹಾಗೆಯೇ ಭಾರತೀಯ ಸಂಸ್ಕೃತಿಯ ಭಾಗವಾಗಿರುವ ಕೃಷಿ, ಭಾರತ ದೇಶದ ಬೆನ್ನೆಲುಬಾಗಿದೆ. ಶೇ.೮೦ರಷ್ಟು ಗ್ರಾಮೀಣರು ಕೃಷಿಯನ್ನು ಅವಲಂಬಿಸಿದ್ದು ಕೃಷಿ ಸಂಬಂಧಿತ, ಬಿದಿರಿನ ಉತ್ಪನ್ನಗಳನ್ನು ಮೇದರು ತಯಾರಿಸುತ್ತಾರೆ. ಕೃಷಿ ಚಟುವಟಿಕೆಗೆ ಬೇಕಾದ ಮೊರ, ಕೊಂಗ, ಹೆಡಗೆ, ಬುಟ್ಟಿ, ಮೂಲೆಕುಕ್ಕೆ, ಗೆರಸಿ, ತಟ್ಟೆ, ಚಂದ್ರಿಕೆ, ಗೊರಬು, ಕಣಜ ತಟ್ಟಿ, ಚಾಪೆ, ಗೂಡೆ, ಹಗೇವು, ಗೊಬ್ಬರದ ಜಲ್ಲೆ, ತರಗಿನ ಜಲ್ಲೆ, ಕೋಳಿ ಜಲ್ಲೆ, ಮೇಕೆ ಜಲ್ಲೆ ಇತ್ಯಾದಿ ಅನೇಕ ಪರಿಕರಗಳು ಒಂದಲ್ಲ ಒಂದು ರೀತಿಯ ಉಪಯೋಗಕ್ಕೆ ಬರುವುದರಿಂದ ಬೇಡಿಕೆಗಳಿಗೆ ಅನುಗುಣವಾಗಿ ಇವುಗಳನ್ನು ತಯಾರಿಸುತ್ತಿದ್ದರು.

ಬಿದಿರಿನ ಉತ್ಪನ್ನ ತಯಾರಿಸಲು ಮೇದರು ಕಾಡಿನಿಂದ ಬಿದಿರು ಕಡಿದು, ಗಳಗಳನ್ನು ಹೊತ್ತು ತರುತ್ತಾರೆ. ಮೇದರು ನವೆಂಬರ್ ಅಥವಾ ಡಿಸೆಂಬರ್ ತಿಂಗಳುಗಳಲ್ಲಿ ಬಿದಿರು ಕಡಿಯುವ ಮೊದಲು 'ಕತ್ತಿಹಬ್ಬ'ವನ್ನು ತಪ್ಪದೆ ಆಚರಿಸುತ್ತಾರೆ. ಎಳೆಬಿದಿರು (ಯಳಬಿ) ಬಲಿತ ಮೇಲೆ ಅದು 'ಹೊಸಗಳ' ಎಂದು ಕರೆಯಲ್ಪಡುವ, ಆ ವರ್ಷ ಕಳಲೆ, ಯಳಬಿಯಾಗಿ ನಂತರ ಬಲಿತು ಮೇದಾರಿಕೆಗೆ ಉಪಯೋಗವಾಗಬಹುದಾದ ಬಿದಿರನ್ನು ಕಡಿಯುವ ಮೊದಲು, ಮೇದರೆಲ್ಲ ಸೇರಿ ತಮ್ಮ ಕುಲಕಸುಬಿನ ಕತ್ತಿಗಳನ್ನೆಲ್ಲ ಸಮುದಾಯದ ಮುಖಂಡನ ನೇತೃತ್ವದಲ್ಲಿ ಪೂಜಿಸಲ್ಪಡುತ್ತವೆ.

ಈ ರೀತಿ ಆಯುಧ ಪೂಜೆಯಾದ ನಂತರ. ಮುಖಂಡನೊಡನೆ ಎಲ್ಲರೂ ಕಾಡಿಗೆ ತೆರಳಿ, ಕಿರುಬಿದಿರಿನ ಹಿಂಡಲಿಗೆ ಹೊಸ ಬಟ್ಟೆ ಧರಿಸಿ, ಹಣ್ಣು, ಕಾಯಿ ಪೂಜೆಮಾಡಿ ಸಂಪ್ರದಾಯದಂತೆ ೪ ಕಿರುಬಿದಿರನ್ನು ಕಡಿದು ಹೊತ್ತು ತಂದು ಅದನ್ನು ತಮ್ಮ ದೇವರ ಗುಡಿ ಮುಂದೆ ನಿಲ್ಲಿಸಿ ಮಂಗಳವಾರ ಇಲ್ಲವೇ ಶುಕ್ರವಾರದಂದು ಗಳುಗಳ ಎದುರು

ಕುರಿಕಡಿದು ಬಲಿಕೊಟ್ಟು, ಸಮುದಾಯದವರೆಲ್ಲ ಸಾಮೂಹಿಕ ಭೋಜನ ಮಾಡಿ, ಇದಾದ ಮೂರನೆ ದಿನ ಯಜಮಾನನಿಂದ ಪೂಜಿಸಲ್ಪಟ್ಟ ಕತ್ತಿಗಳನ್ನು ಪಡೆದು ಕಾಡಿಗೆ ಹೋಗಿ ಗಳಗಳನ್ನು ಕಡಿದು ಹೊತ್ತು ತರುವ ಹಬ್ಬವೇ 'ಯಳಬಿಹಬ್ಬ' ಕರ್ನಾಟಕದ ಮಲೆನಾಡು ಹಾಗೂ ದಟ್ಟ ಕಾಡುಗಳ ಸಮೀಪ ನೆಲೆನಿಂತಿರುವ ಮೇದರು ತಪ್ಪದೆ ಈ ಆಚರಣೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಮೇದರು ಬಿದಿರಿನ 'ಕಳಲೆ' ತಿನ್ನಬಾರದೆಂಬ ನಿಷೇಧವಿದೆ. ಇದು ನಮ್ಮ ದೇವರು ಎಂಬ ಭಾವನೆ ಮೇದರಲ್ಲಿದೆ.

ಮೇದರು ಸಾಮಾನ್ಯವಾಗಿ ಹೊಸ ಬಿದಿರನ್ನೇ ಚುನಾಯಿಸಿ ಕಡಿಯುತ್ತಾರೆ. ಕಾರಣ ಇದು ಮೆದುವಿದ್ದು ಸೀಳಲು ಅಥವ ಇದರಿಂದ ತಯಾರಿಸಿದ ಬಿದಿರಿನ ಉತ್ಪನ್ನಗಳು ಹೆಚ್ಚಿನ ಬಾಳಿಕೆ ಬರುವುದರಿಂದ ಇಂತಹ ಬಿದಿರುಗಳನ್ನೇ ಹೆಚ್ಚಾಗಿ ಬಳಸುತ್ತಾರೆ. ಹಳೆಯ ಬಿದಿರು, ಮುಪ್ಪಮುರುಕ, ಸುಟ್ಟಬಡಕ, ದಪ್ಪಬಡ್ಡೆ, ಚೆನ್ನಿಕೋಲು, ಕಿರುಗಣ್ಣು, ಸಿಡಿಗಳ, ಸೆಡವುಗಳು ಹೀಗೆ ಬಿದಿರಿನ ಗುಣಮಟ್ಟ ಗುರ್ತಿಸುವ ಪದಗಳನ್ನು ಮೇದರು ಆಡುತ್ತಾರೆ. ಬಿದಿರು ಹಿಂಡಿಲಿನ ಹೊರ ಬದಿಯಲ್ಲಿ ಆ ವರ್ಷ ಹೊರಹೊರಟ ಬಲಿತಿರುವ ಬಿದಿರನ್ನು ಮಾತ್ರ ಬಿದಿರಿನ ಹಿಂಡಲಿಗೆ ಘಾಸಿಯಾಗದಂತೆ ಕಡಿಯುತ್ತಾರೆ.

ಈ ಮೇಲಿನ ಅರಣ್ಯ ಸಂಬಂಧವನ್ನು ಚಿಕ್ಕಮಗಳೂರು ಜಿಲ್ಲೆಯ ಮೇದರು ತಪ್ಪದೆ ಪಾಲಿಸುತ್ತಾರೆ. ಸಾಮಾನ್ಯವಾಗಿ ಕರಿ ತಿಂಗಳು (ಅಮವಾಸ್ಯೆ ಸಮೀಪಿಸುವುದು) ಸಮಯದಲ್ಲಿ ಬಿದಿರನ್ನು ಕಡಿದು, ಅದರಿಂದ ಮಾಡಿದ ಉತ್ಪನ್ನಗಳು ಬೇಗ ಹಾಳಾಗುವುದಿಲ್ಲ. ಆ ಸಮಯದಲ್ಲಿ ಬಿದಿರಿನಲ್ಲಿ ಸಿಹಿ ಅಂಶ ಕಡಿಮೆಯಾಗಿರುತ್ತದೆ ಎಂದು ಮೇದರು ನಂಬುತ್ತಾರೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೇರಳವಾಗಿ ಬೆಳೆಯುವ ಬಿದಿರನ್ನು ಆಶ್ರಯಿಸಿಕೊಂಡು ಸುಮಾರು ೩೭೩ ಮೇದರ ಕುಟುಂಬಗಳಿವೆ. ಅರಣ್ಯ ಇಲಾಖೆಯವರು 'ಕಾಲಿಕ ಪರವಾನಿಗೆ'ಯನ್ನು ನೀಡುತ್ತಿದ್ದರು. ಆದರೆ ಇತ್ತೀಚಿನ ವರ್ಷಗಳಲ್ಲಿ ಬಿದಿರಿಗೆ 'ಕಟ್ಟೆರೋಗ' ಬಂದಿದ್ದು ಕಿರು ಬಿದಿರು ಹಾಗೂ ಹೆಬ್ಬಿದಿರು ಹೂ ಬಿಟ್ಟಿದ್ದು, ಬಿದಿರಿನ ಹಿಂಡಿಲುಗಳೆಲ್ಲ ಸರ್ವನಾಶವಾಗಿದೆ.

ಈ ರೀತಿಯ ಕಟ್ಟೆರೋಗ ಮಲೆನಾಡಿನ ಕೂಸಗಲ್ಲು, ಅಳೇಹಳ್ಳಿ, ಎನ್ನಂಗಿ, ಹಾಗಲಮನೆ, ಆರಂಬಳ್ಳಿ, ಕುಂದೂರು, ಭದ್ರಾ ಹಿನ್ನಿರಿನ ಕಾಡು, ಶಂಕರಘಟ್ಟ, ಕೈಮರ, ಜಂಕ್ಷನ್, ಪಾಪಯ್ಯನಗುಡ್ಡ, ಸಾತುಕೋಳಿ, ದೊಡ್ಡಿನತಲೆ, ಮುಳುವಳ್ಳಿ, ಕತ್ಲೆಖಾನ್, ಮುತ್ತೋಡಿ, ಬಣಕಲ್, ಕುದುರೆಮುಖ, ಮೂಡಿಗೆರೆ ಇನ್ನೂ ಮುಂತಾದ ಕಡೆಗಳಲ್ಲಿ ಸಾಂಕ್ರಾಮಿಕ ರೋಗದಂತೆ ಬಿದಿರಿನ ಕಟ್ಟೆ ರೋಗತಗುಲಿ ಬಿದಿರೆಲ್ಲವೂ ಹೂ ಬಿಟ್ಟು ಒಣಗಿ ನಿಂತಿವೆ. ಸುಮಾರು ೩೫ರಿಂದ ೪೦ ವರ್ಷಗಳಿಗೊಮ್ಮೆ ಬರುವ ಈ ರೀತಿಯ 'ಕಟ್ಟೆರೋಗ' ಬಿದಿರು ಹೂ ಬಿಟ್ಟು ಒಣಗಿ ಉದುರಿ ಪುನಃ ಬೀಜೋತ್ಪಾದನೆ ಆಗಬೇಕು. ಈ ರೀತಿ ಉದುರಿದ

ಬಿದಿರಿನ ಹೂ, ಹೂವಿನೊಳಗಿರುವ ಬೀಜ ಮೊಳೆತು, ಸಸಿಯಾಗಿ ಬೆಳೆದು ಪುನಃ ಬಿದಿರು ಹಿಂಡಿಲುಗಳಾಗಿ, ಬಿದಿರು ಕಡಿಯಲು ಸುಮಾರು ೧೦ರಿಂದ ೧೨ ವರ್ಷಗಳು ಬೇಕಾಗುತ್ತದೆ. ನನ್ನ ಸಂಶೋಧನೆಯ ಕಾಲಕ್ಕೆ ಇಂತಹ ಸಂಕ್ರಮಣ ಸ್ಥಿತಿಯಲ್ಲಿ ಮೇದರಿದ್ದು, ಅವರ ಬದುಕು ಹೇಳತೀರದಾಗಿದೆ. ಆಗೊಮ್ಮೆ ಅಳಿದುಳಿದ ಬಿದಿರು ಇರುವೆಡೆ ಆನೆ, ಕಾಡುಕೋಣ, ಕಾಡೆಮ್ಮೆ, ಜಿಂಕೆ, ಕಡವೆ ಇತ್ಯಾದಿ ಕಾಡುಪ್ರಾಣಿಗಳು ಕೇಂದ್ರಿಕೃತವಾಗಿದ್ದು, ಅವುಗಳೊಡನೆ ಸ್ಪರ್ಧೆಗಿಳಿಯಬೇಕಾಗಿದೆ ಎಂದು ನರಸಿಂಹರಾಜಪುರದ ಮೇದರು ತಿಳಿಸುತ್ತಾರೆ.

ಎಷ್ಟೋ ವೇಳೆ ಕಾಡಾನೆಗಳೊಂದಿಗೆ ಮುಖಾಮುಖಿಯಾಗಿ ಕಾಡಿನಿಂದ ವಾಪಸ್ಸಾದ ಅನೇಕ ದೃಷ್ಟಾಂತಗಳನ್ನು ಹೇಳುತ್ತಿದ್ದಂತೆ ಅವರಲ್ಲಿದ್ದ ಆತಂಕ, ದುಗುಡ ವ್ಯಕ್ತಗೊಳ್ಳುತ್ತಿತ್ತು. ಬಿದಿರಕ್ಕಿ ಬೀಜ ಪ್ರಸರಣದಿಂದ ಮೊಳೆತ ಕಿರು ಬಿದಿರು ಸಸಿ ಎತ್ತರವಾಗುವ ಮೊದಲೇ ಕಾಡು ಪ್ರಾಣಿಗಳು ಸೇವಿಸಿ ಅಳಿದುಳಿದ ಸಸಿಗಳೇ ಮೇದರ ಬದುಕಿನ ಆಶಾಕಿರಣಗಳಾಗಿವೆ. ಆದಾಗ್ಯೂ ಇವೆಲ್ಲವನ್ನು ಮಗುವಿನ ಮುಗ್ಧ ಮನಸ್ಸಿನಂತೆ ಸ್ವೀಕರಿಸುವ ಗುಣ ಮೇದರಿಗೆ ಕರಗತವಾಗಿದೆ. ಅನೇಕ ಏಳು ಬೀಳುಗಳ ನಡುವೆಯೇ ಬದುಕನ್ನು ಕಟ್ಟಿಕೊಂಡಿರುವುದರಿಂದ ಈ ಎಲ್ಲವೂ ಸಹಜವೆಂದೇ ಭಾವಿಸುತ್ತಾರೆ. ಆಲ್ದೂರಿನ ಆ.ಗ.ಮಂಜಯ್ಯ ಹಾಗೂ ಧರ್ಮರಾಜ್‌ರವರು ಹೇಳುವಂತೆ, ಇಂದಿಗೂ ೬ರಿಂದ ೮ ಕಿ.ಮೀ. ದೂರದ ಕಾಡಿನಿಂದ ಕಿರುಬಿದಿರನ್ನು ಕಡಿದು ಹೊತ್ತುಕೊಂಡೇ ಬರುತ್ತೇವೆ. ಅರಣ್ಯ ಇಲಾಖೆಯವರು ತಗಾದೆ ತೆಗೆಯುತ್ತಾರೆ. ಅನಿವಾರ್ಯವಾಗಿ ಅವರಿಂದ ಕ್ಷಮೆ ಕೇಳಿಯೋ, ಇನ್ನೊಮ್ಮೆ ಈ ರೀತಿ ಮಾಡೊಲ್ಲ ಎಂದು ಹೇಳಿಯೋ ಅಥವ ಇಲಾಖೆ ನಮಗೆ ಬಿದಿರು ತರಲು ಪರವಾನಿಗೆ ಇನ್ನೂ ಕೊಟ್ಟಿಲ್ಲ ಅಂತ ಸಬೂಬು ಹೇಳಿಯೋ ಹೊಟ್ಟೆ ಹೊರೆಯಲು ಈ ದಂದೆ ಮಾಡುತ್ತಲೇ ಬರುತ್ತಿದ್ದೇವೆ. ಈ ಕಷ್ಟ ನಮ್ಮ ಮುಂದಿನ ತಲೆಮಾರಿನವರಿಗೆ ಬರಬಾರದು. ಹೇಗಾದರೂ ಮಾಡಿ ಕಷ್ಟನೋ, ಸುಖನೋ ಅವರಿಗೆ ವಿದ್ಯಾಭ್ಯಾಸ ಮಾಡಿಸಿ, ಉದ್ಯೋಗ ಕೊಡಿಸಿ ಈ ಕುಲಕಸುಬನ್ನು ನಮ್ಮ ತಲೆಮಾರಿಗೇ ನಿಲ್ಲಿಸಿ ಬಿಡುವಷ್ಟು ರೋಸಿ ಹೋಗಿದ್ದೇವೆ ಎಂಬ ದುಗುಡದ ಮಾತು ಬಹುಶಃ ಚಿಕ್ಕಮಗಳೂರು ಜಿಲ್ಲೆಯಾದ್ಯಂತ ಎಲ್ಲಾ ಮೇದರ ಒಕ್ಕೊರಲ ದನಿಯೆಂದೇ ಹೇಳಬಹುದು.

ಆರ್ಥಿಕತೆಯೆಂದರೆ ಜನರು ಜೀವನೋಪಾಯಕ್ಕಾಗಿ ಕೈಗೊಳ್ಳುವ ಆರ್ಥಿಕ ಚಟುವಟಿಕೆಗಳ ಒಂದು ಸಂಘಟಿತ ವ್ಯವಸ್ಥೆ ಎಂದು ಹೇಳಬಹುದು. ಉತ್ಪಾದನೆ, ವಿತರಣೆ ಹಾಗೂ ಅನುಭೋಗಗಳು ಈ ಪ್ರಕ್ರಿಯೆಯ ಪ್ರಮುಖ ಅಂಶಗಳು. ಕೃಷಿ ಪ್ರಧಾನ ಭಾರತದ ರಾಷ್ಟ್ರೀಯ ಆದಾಯ ಹಾಗೂ ತಲಾದಾಯಗಳೆರಡೂ ಕಡಿಮೆಯಿದ್ದು, ಕೃಷಿ ಸಂಬಂಧಿಕ ಕುಲಕಸುಗಳನ್ನು ಜೀವನಕ್ಕೆ ಆಶ್ರಯಿಸಿಕೊಂಡಿರುವ ಸಮುದಾಯದವರ ಸ್ಥಿತಿಯಂತೂ ಹೇಳ ತೀರದಾಗಿದೆ. ಕಮ್ಮಾರಿಕೆ, ಕುಂಬಾರಿಕೆ, ಮೇದಾರಿಕೆ, ನೇಯ್ಗೆ, ಚಮ್ಮಾರಿಕೆ ಇತ್ಯಾದಿ ಕುಲಕಸುಗಳು

[illegible]

ಅನಿವಾರ್ಯವಾಗಿ ಅಸ್ತಿತ್ವ ಉಳಿಸಿಕೊಂಡಿರುವುದು ಕಾಣಬಹುದು. ಜಾಗತೀಕರಣ ಸೃಷ್ಟಿಸಿರುವ ವೈವಿಧ್ಯಮಯ ಪದಾರ್ಥ ಪ್ರಪಂಚದ ಮಧ್ಯೆ 'ಸರಳ ಜೀವನ'ವನ್ನು ಪರಂಪರಾಗತವಾಗಿ ನಡೆಸಿಕೊಂಡು ಬಂದಿದ್ದ ಮೇದರ ಆರ್ಥಿಕ ಬದುಕು ಅನೇಕ ಪಲ್ಲಟಗಳಿಗೆ ಒಳಗಾಗಿದೆ. ಸರ್ವರಿಗೂ ಯೋಗ್ಯವಾದ ಜನಪಯೋಗಿ ಸರಳ ಆರ್ಥಿಕತೆಯ ಸರಹದ್ದನ್ನು ದಾಟಿ ಜಾಗತಿಕ ಆರ್ಥಿಕ ನೀತಿಗಳು ತಳ ಸಮುದಾಯದವರ್ಯಾರಿಗೂ ಅರ್ಥವಾಗದ ರೀತಿಯಲ್ಲಿ ಮುನ್ನುಗ್ಗುತ್ತಿದೆ. ಬದಲಾದ ವ್ಯವಸ್ಥೆಯಲ್ಲೂ ಆರ್ಥಿಕ ಜೀವನವನ್ನು ಸಮಕಾಲೀನಗೊಳಿಸುವೆಡೆ ಗಟ್ಟಿ ಚಿಂತನೆಗಳಾಗಿ ಅವು ಬೇರು ಮಟ್ಟದಲ್ಲಿರುವ ಅಲಕ್ಷಿತ ಸಮುದಾಯಗಳಿಗೆ ಉಣಬಡಿಸಬೇಕಾಗಿದೆ. ಸಾಮಾನ್ಯ ಹೇಳಿಕೆಗಳಂತೆ ಬಂಡವಾಳದ ಕೊರತೆ, ಹಳೆಯ ಕೃಷಿ ಪದ್ಧತಿ, ಉದ್ಯಮಿಗಳ ಅಭಾವ, ತಾಂತ್ರಿಕತೆಯ ಅಭಾವ, ಕುಶಲಕರ್ಮಿಗಳ ಕೊರತೆ, ಸಾರಿಗೆ ಸಂಪರ್ಕಗಳ ಕೊರತೆ, ಜಾತಿ ಪದ್ಧತಿ, ಧಾರ್ಮಿಕ ನಂಬಿಕೆಗಳು ಮತ್ತು ರಾಜಕೀಯ ಇಚ್ಛಾಶಕ್ತಿಗಳ ಕೊರತೆಯಿಂದಾಗಿ ಆರ್ಥಿಕಾಭಿವೃದ್ಧಿ ಹಿಂದುಳಿಯುತ್ತಲೇ ಸಾಗಿದೆ ಎಂದು ಹೇಳಲಾಗುತ್ತಿದೆ. ಆದರೆ ಇವೇ ಪ್ರಮುಖ ಕಾರಣಗಳಾಗುತ್ತವೆಯೇ? ಎಂದು ಪ್ರಶ್ನಿಸಿಕೊಂಡಾಗ ಇವೆಲ್ಲವೂ ಗೌಣವಾಗಿ ನಮ್ಮ ನಡುವಿರುವ ಆರ್ಥಿಕ ಹಂದರಗಳು ಜಾಳು ಜಾಳಾಗಿರುವುದು ಸ್ಪಷ್ಟವಾಗುತ್ತದೆ.

ತರಗೆಲೆಗಳಂತಾಗಿರುವ ಮೇದರ ಆರ್ಥಿಕ ಬದುಕು ಆಧುನೀಕತೆಯ ಮುಖಾಮುಖಿಯಲ್ಲದೆ ಬೇರೆನೂ ಅಲ್ಲ. ಆಧುನೀಕತೆಯಿಂದ ಸಂಸ್ಕೃತಿ, ಕೌಟುಂಬಿಕ, ಆರ್ಥಿಕ, ವಾಣಿಜ್ಯ, ವೃತ್ತಿ ಈ ಎಲ್ಲಾ ಮಗ್ಗಲುಗಳಿಗೆ ಪಾರ್ಶ್ವವಾಯು ಬಡಿಸಿದೆ. ಮೇದಾರಿಕೆಯಿಂದಲೇ ಅನೇಕ ಒಳಸುಳಿವುಗಳು ವ್ಯಕ್ತಗೊಂಡಿವೆ.

೨.೪.೨ ಮೇದರ ಕುಲಕಸುಬು

ಕೃಷಿ ಕುಟುಂಬಗಳಿಗೆ ಬೇಕಾಗುವ ಬಿದಿರಿನ ಪರಿಕರಗಳನ್ನು ತಯಾರಿಸಿ ಅವರು ನೀಡುವ ದವಸ ಧಾನ್ಯಗಳಿಗೆ ತೃಪ್ತಿಪಟ್ಟುಕೊಳ್ಳುತ್ತಿದ್ದ ಮೇದರು ಗೇಣಿದಾರರಾಗಿದ್ದ ಪ್ರಕರಣಗಳು ತೀರಾ ಕಡಿಮೆ. ೧೯೭೪ರ ಭೂ ಸುಧಾರಣೆ ಕಾಯ್ದೆಯ ಲಾಭವೂ ಮೇದರಿಗೆ ದಕ್ಕಲಿಲ್ಲ. ಸ್ವಾತಂತ್ರ್ಯ ನಂತರದ ಅನೇಕ ಬೆಳವಣಿಗೆಗಳು ವೃತ್ತಿ ಕಸುಬಿನಲ್ಲಿ ನಿಧಾನತೆಯನ್ನು ಗೋಚರಿಸಿದವು. ಕಳೆದ ೩೫-೪೦ ವರ್ಷಗಳ ಹಿಂದೆ ಬಿದಿರಿಗೆ ಕಟ್ಟೆರೋಗ ಬಂದು ಬಿದಿರಿನ ಸಂತತಿಯೇ ನಾಶವಾದಾಗ ಸುಮಾರು ೮ ರಿಂದ ೧೦ ವರ್ಷಗಳು ಬದುಕು ಸವೆಸಲು ಹಪಹಪಿಸುತ್ತಿದ್ದರು. ಆಗ ಶಿಕ್ಷಣದ ಗಮನ ಹರಿಸುವ ಪ್ರವೃತ್ತಿ, ಕಂದಾಯ ಭೂಮಿಗೆ ದರಖಾಸ್ತು ಅರ್ಜಿ ಗುಜರಾಯಿಸುವುದು, ಭೂಮಿಯಲ್ಲಿ ಅನಧಿಕೃತ ಉಳುಮೆ ಮಾಡುವುದು, ಮೇದಾರಿಕೆಗೆ ಹೊರತಾಗಿ ಕೃಷಿ ಕೂಲಿ, ಸಣ್ಣಪುಟ್ಟ ಕೈಗಾರಿಕೆಗಳಲ್ಲಿ ನೌಕರಿ ಗಿಟ್ಟಿಸುವುದು, ತುಂಬು ಕುಟುಂಬದಲ್ಲಿದ್ದ ಸದಸ್ಯರು ಹೊಟ್ಟೆ ಪಾಡಿಗಾಗಿ ಪರಊರು ಪಟ್ಟಣ ಸೇರುವುದು, ಅರೆ ಕೌಶಲ್ಯ ತರಬೇತಿಗಾಗಿ ತಡಕಾಡುವುದು, ಮೊರ ಬುಟ್ಟಿ ಸಿಗುವೆಡೆಯಿಂದ ಸಾಲಮಾಡಿಯಾದರೂ

ಖರೀದಿಸಿ ವ್ಯಾಪರ ಮಾಡುವುದು, ದೂರದೂರು ನೆರೆ ರಾಜ್ಯಗಳಿಂದ ಗಳ, ಬೊಂಬು, ಗೃಹಪಯೋಗಿ ಚಪ್ಪಡಿ ಕಲ್ಲು, ಸುರುಗಿ ಪೋಲ್ಸ್, ಅಡಿಕೆ ಮರ, ಮಂಗಳೂರು ಹೆಂಚು, ತಡಿಕೆ ಇತ್ಯಾದಿಗಳನ್ನು ಇಟ್ಟುಕೊಂಡು 'ಡಿಪೊ' ಮಾಡಿಕೊಳ್ಳುವುದು ಹೀಗೆ ಅನೇಕಾನೇಕ ಹೊಸ ಯೋಚನೆಗಳನ್ನು ಕಾಡೇ ಕಲಿಸಿತು ಎಂದರೆ ತಪ್ಪಾಗದು. ಇಂದಿಗೂ ನರಸಿಂಹರಾಜಪುರ, ಮೂಡಿಗೆರೆ, ಚಿಕ್ಕಮಗಳೂರು ಹಾಗೂ ತರೀಕೆರೆ ತಾಲೂಕಿನಲ್ಲಿ ವಾಸಿಸುತ್ತಿರುವ ಕೃಷಿ ಆಧಾರಿಸಿಕೊಳ್ಳಬೇಕೆಂದು ಅಪೇಕ್ಷಿಸುವ ಮೇದರು ಭೂಮಿಗಾಗಿ ಅರ್ಜಿ ಸಲ್ಲಿಸಿ ಕಛೇರಿಗೂ–ಮನೆಗೂ ಓಡಾಡುತ್ತಿದ್ದಾರೆ. ಅರಣ್ಯ ಇಲಾಖೆ, ಕಂದಾಯ ಇಲಾಖೆಗಳು ತರಾವರಿ ಹೇಳಿಕೆಗಳನ್ನು ನೀಡುವುದು.

ತಮ್ಮ ತಮ್ಮ ನಕ್ಷೆಗಳನ್ನು ಪರಸ್ಪರ ತೋರಿಸಿಕೊಳ್ಳುತ್ತಾ ಮೇದರ ಮೂಗಿಗೆ ತುಪ್ಪ ಸವರುವ ಪ್ರಯತ್ನ ಒಂದೆಡೆಯಾದರೆ, ಸ್ಥಳೀಯ ಶಕ್ತಿ ರಾಜಕಾರಣವನ್ನು ಬಳಸಿಕೊಳ್ಳುವ ಮನಸ್ಸಿದ್ದರೂ ರಾಜಕೀಯ ಮುಖಂಡರ ಕೊರತೆ ಈ ಸಮುದಾಯದಲ್ಲಿದ್ದು, 'ದೈನೇಸಿಸ್ಥಿತಿ'ಯಿಂದಲೇ ಶಕ್ತಿ ರಾಜಕಾರಣಿಗಳನ್ನು ಭೇಟಿ ಮಾಡಿದಾಗ ಯಾವುದೋ ಸಮಾಧಾನಕರ ಉತ್ತರ ಪಡೆದು ಅಲ್ಲಿಂದ ತೆರಳುವ ಪ್ರಕ್ರಿಯೆ ಕಳೆದ ೪–೫ ವರ್ಷಗಳಿಂದ ನಡೆದೇ ಇದೆ. ಆದರೂ ಕುಟುಂಬವೊಂದಕ್ಕೆ ಎರಡಕರೆ ಜಮೀನು ಸಿಗುತ್ತದೆ ಎಂದು ತಬರನ ಕಥೆ ಅಣಕಿಸುವಂತೆ ತಮ್ಮ ಪ್ರಯತ್ನದಲ್ಲೇನು ಕಡಿಮೆಯಿಲ್ಲವೆಂಬಂತೆ ಭಗೀರಥ ಪ್ರಯತ್ನ ಮಾಡುತ್ತಲೇ ಇದ್ದಾರೆ.

ಅರಣ್ಯ ಇಲಾಖೆಯವರೊಂದಿಗೆ ಮುಖಾಮುಖಿಯಾಗಿ ಎಷ್ಟೋ ವೇಳೆ ಗಾರ್ಡು, ಫಾರೆಸ್ಟರುಗಳಿಂದ ಒದೆ ತಿಂದು ಪೆಚ್ಚಾಗಿ ವಾಪಸ್ಸಾದ ಪ್ರಸಂಗಗಳು ಅದೆಷ್ಟೋ. ೮–೧೦ ಕಿಲೋ ಮೀಟರಗಳಿಂದ ಬರಿಗಾಲಿನಲ್ಲಿ ೨೫–೩೦ ಅಡಿ ಉದ್ದದ ೪–೫ ಬಿದಿರುಗಳನ್ನು ಹೆಗಲ ಮೇಲೆ ಹೊತ್ತುಕೊಂಡು ಬರುವಾಗ ಹುಲಿ ಜಿಂಕೆಮರಿಯನ್ನು ಬೇಟೆಯಾಡುವ ರೀತಿ, ಅರಣ್ಯ ಅಧಿಕಾರಿಗಳು ಇವರು ನಿತ್ರಾಣ ಹೊಂದಿರುವುದನ್ನು ಲೆಕ್ಕಿಸದೆ ಗಳದ ಹೊರೆಯನ್ನು ನಿರ್ದಾಕ್ಷಿಣ್ಯವಾಗಿ ದೂಡಿ ಕೊರಳ ಪಟ್ಟಿಯನ್ನು ಹಿಡಿದು ಹಿಗ್ಗಾಮುಗ್ಗಾ ಥಳಿಸಿ ಮೇದಾರರ ಕತ್ತಿಯಿಂದಲೇ ಅವರಿಂದಲೇ ಕಿರು ಬಿದಿರುಗಳನ್ನು ಮನಸೋ ಇಚ್ಛೆ ಕತ್ತರಿಸಲು ತಾಕೀತು ಮಾಡಿ ಕೊನೆಗೆ ಕತ್ತಿಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗುತ್ತಾರೆ. ಇದರ ಮರ್ಮ ಅರಿತಿರುವ ಮೇದರು ಸಾಲ ಸೋಲ ಮಾಡಿ ೫೦–೧೦೦ ರೂಪಾಯಿಗಳನ್ನು ಭಕ್ಷಿಸು ನೀಡಿ ಅವರಿಂದ ಮತ್ತೊಮ್ಮೆ ಬೈಯಿಸಿಕೊಂಡು ಇನ್ನು ಮುಂದೆ ಯಾವತ್ತೂ ಹಿಂಗೆ ಮಾಡೋದಿಲ್ಲವೆಂದು ಪ್ರಮಾಣ ಮಾಡಿಸಿಕೊಂಡು ಮಾರನೇ ದಿನವೇ ಪುನಃ ಬಿದಿರು ಹೊರಲು ಗುಡ್ಡಕ್ಕೆ ಹೋಗುತ್ತಾರೆ. 'ಉದರ ನಿಮಿತ್ತಂ ಬಹುಕೃತ ವೇಷಂ' ಇದು ಬೇರೆ ಉದ್ಯೋಗ ಮಾಡುವವರಿಗೆ, ಆದರೆ ಮೇದರಿಗೆ ಮೇದಾರಿಕೆ ಬಿಟ್ಟರೆ ಬೇರೆ ಕಸುಬು ಗೊತ್ತಿಲ್ಲದೆ ಇರುವಾಗ ಅರಣ್ಯ ಇಲಾಖೆಯೊಂದಿಗೆ ಸಣ್ಣದಾಗಿ ಮುಖಾಮುಖಿಯಾಗುವುದು ಸರ್ವೇ ಸಾಮಾನ್ಯ.

[illegible]

ನನ್ನ ಸಂಶೋಧನಾ ಕ್ಷೇತ್ರ ಚಿಕ್ಕಮಗಳೂರಿನ ಜಿಲ್ಲೆಯಾದ್ಯಂತ ಮಾಹಿತಿ ಸಂಗ್ರಹಿಸಿದಾಗ ಈ ಮೇಲಿನ ಸತ್ಯಾಂಶಗಳು ಹೊರಬಂದವು. ೩೭೩ ಮೇದ ಕುಟುಂಬಗಳಿದ್ದು ೧೮೪೮ ಜನಸಂಖ್ಯೆ ಹೊಂದಿದೆ. ೪ ತಾಲೂಕುಗಳಲ್ಲಿರುವ ಮೇದರೆಲ್ಲನ್ನು ಸಮಗ್ರವಾಗಿ ಸಂಶೋಧನಾ ಕ್ಷೇತ್ರ ಕಾರ್ಯದಲ್ಲಿ ತೊಡಗಿಸಿ ಅಧ್ಯಯನದ ಆಳಕ್ಕೆ ಹೋಗಲಾಯಿತು. ಚಿಕ್ಕಮಗಳೂರು ಜಿಲ್ಲೆಯ ಮೇದರು ಶೇ.೮೯.೬೧% ಜನರು ಬಿದಿರಿನ ಸಮಸ್ಯೆಗಳ ನಡುವೆಯೂ ತಮ್ಮ ಕುಲಕಸುಬಾದ ಮೇದಾರಿಕೆಯನ್ನು ಮಾಡುತ್ತಿದ್ದಾರೆ. ಬಹುಶಃ ಈ ಸಂಖ್ಯೆ ಈ ವೈಜ್ಞಾನಿಕ ಕಾಲಘಟ್ಟದಲ್ಲೂ ದಿಗಿಲು ಹುಟ್ಟಿಸುತ್ತದೆ.

ಏಕೆಂದರೆ ಭಾರತೀಯ ಸಂಸ್ಕೃತಿಯೊಂದಿಗೆ ತಳುಕು ಹಾಕಿಕೊಂಡಿರುವ ಈ ವೃತ್ತಿಗೆ ಈ ಪ್ರಮಾಣದಲ್ಲಿ ಬೇಡಿಕೆಯಿದೆಯೋ? ಅಥವ ಈ ಮೇದಾರಿಕೆ ವೃತ್ತಿಯನ್ನು ಬಿಡಲಾರದೆ, ಅವರು ತಯಾರಿಸಿದ ಉತ್ಪನ್ನಗಳನ್ನು ಉತ್ಪಾದಿಸಿ ಒಂದೆಡೆ ದಾಸ್ತಾನು ಇಡಲಾಗುತ್ತದೆಯೋ ಎಂದು. ಆದರೆ ಸಂಶೋಧನೆಯಿಂದ ತಿಳಿದು ಬಂದಂತೆ ನರಸಿಂಹರಾಜಪುರ, ಲಕ್ಕವಳ್ಳಿ, ತರೀಕೆರೆ, ಅಜ್ಜಂಪುರ, ಬಾಳೆಹೊನ್ನೂರು, ಆಲ್ದೂರು, ಮೂಡಿಗೆರೆ, ಚಿಕ್ಕಮಗಳೂರಿನಿಂದ ಅತಿ ಹೆಚ್ಚು ಬೀಡಿ ಕಟ್ಟುವ ಮೊರಗಳು ಮಂಗಳೂರು, ಉಡುಪಿಗೆ ಮಧ್ಯವರ್ತಿಗಳು ಸಾಗಿಸುತ್ತಾರೆ. ಹಾಗೆಯೇ ಹಾಸನ, ತಿಪಟೂರು, ತುಮಕೂರು, ಬೆಂಗಳೂರು, ಭದ್ರಾವತಿ ಪ್ರದೇಶಗಳಿಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಉತ್ಪಾದಿಸುವ ಮೇದರ ಉತ್ಪನ್ನಗಳು ರವಾನಿಸಲ್ಪಡುತ್ತವೆ. ಹಾಗೆಯೇ ಚಿಕ್ಕಮಗಳೂರು ಜಿಲ್ಲೆಯಲ್ಲಿನ ಕೃಷಿ ಕುಟುಂಬಗಳು ಕೆಲವಷ್ಟು ಬಿದಿರಿನ ಉತ್ಪನ್ನಗಳಿಗೆ ಮೇದರನ್ನೇ ಆಶ್ರಯಿಸಿರುವುದು ಕಾಣುತ್ತೇವೆ.

ಇಂದಿಗೂ ಬಿದಿರಿನ ಉತ್ಪನ್ನಗಳಾದ ಗೆರಸಿ, ಕೊಂಗ, ಸಾರಣಿ, ತೂರುವ ಮೊರ, ಗಾಳಿ ಹೊಡೆಯುವ ಮೊರ, ಗೂಡೆ, ಅನ್ನ ಬಸಿಯುವ ಚಿಬ್ಬಲು ಹಳ್ಳಿಯ ಮನೆಗಳಲ್ಲಿ ಭತ್ತ ತುಂಬುವ ಕಣಜ ಇತ್ಯಾದಿಗಳಿಗೆ ಸಾಂಪ್ರದಾಯಿಕ ಬೇಡಿಕೆ ಇದ್ದು ನರಸಿಂಹರಾಜಪುರದ ಮೇದರು ಶೃಂಗೇರಿ, ಕಿಗ್ಗ, ಹೊರನಾಡು, ತೀರ್ಥಹಳ್ಳಿ, ಕೊಪ್ಪ, ಹೊಸನಗರ ಊರುಗಳಿಗೆ ಒಂದೆರಡು ದಿನಗಳ ಕಾಲ ವ್ಯಾಪಾರಕ್ಕೆ ಹೋಗುವರು. ತರೀಕೆರೆ, ಅಜ್ಜಂಪುರದಂತಹ ಬಯಲು ನಾಡಿನ ಕೇಂದ್ರಿಕೃತ ಹಳ್ಳಿಗಳಿಗೆ ಅಲ್ಲಿಯ ಮೇದರು ವ್ಯಾಪಾರ ಮಾಡಿ ರಾಗಿ, ಮೆಣಸು, ದನಿಯ, ಕಡ್ಲೆಕಾಳು, ಹೆಸರು, ಅಲಸಂದೆ, ಹುಚ್ಚೆಳ್ಳು, ಶೇಂಗಾ ಇತ್ಯಾದಿ ದವಸ-ಧಾನ್ಯಗಳನ್ನು ಪಡೆಯುತ್ತಾರೆ. ಆಲ್ದೂರಿನ ಮೇದರು ಹಳ್ಳಿ ಹಳ್ಳಿಗಳಲ್ಲಿ ವ್ಯಾಪಾರ ಮಾಡುತ್ತಾರೆ. ಚಿಕ್ಕಮಗಳೂರಿನಲ್ಲಿರುವ ಮೇದರು ಪೇಟೆಯಲ್ಲಿಯೇ ವ್ಯಾಪಾರ ಮಾಡುವರು. ಮೇದರ ವೃತ್ತಿ ಕುಲಕಸುಬಿನ ಅನನ್ಯತೆ ಇಂದಿಗೂ ಕಾಣಬಹುದು. ಆದರೂ ಸೋತ ಕಳಾಹೀನ ಮೇದಾರಿಕೆಯ ಕಾಡಿನ ಸಂಸ್ಕೃತಿಯಲ್ಲಿ ಮತ್ತೊಮ್ಮೆ ಬದುಕು ತುಂಬುವ ಛಲ ಆಗಬೇಕಿದೆ. ಕೆಲವು ಮೇದರಲ್ಲಿ ಈ ಕುರಿತು ಚಡಪಡಿಕೆಯ ದನಿಯಿದೆ. ಕೆಲವರು ಈ ವೃತ್ತಿಯಿಂದ

ಆತಂಕಗೊಂಡು ಬಿಡುಗಡೆಯ ಹಂಬಲವನ್ನು ವ್ಯಕ್ತಪಡಿಸುತ್ತಾರೆ. ವೃತ್ತಿ ಮುಂದುವರೆಸುವ, ಮುಂದುವರೆಸದಿರುವ ಸಂಕ್ರಮಣ ಸ್ಥಿತಿಯಲ್ಲಿ ಕರ್ನಾಟಕದ ಮೇದರಿದ್ದಾರೆ.

ತರೀಕೆರೆಯ ಮೇದರಲ್ಲಿ ಶೇ.೯೪.೩೧ರಷ್ಟು ಮೇದರು ಬಿದಿರಿನ ಕೆಲಸದಲ್ಲಿಯೇ ತೊಡಗಿದ್ದಾರೆ. ಎ.ರಂಗಾಪುರ, ಕೋಡಿಕ್ಯಾಂಪಗಳಲ್ಲಿ ತಂಡದೋಪಾದಿಯಾಗಿ ಬದುಕಿತ್ತಿರುವ ಮೇದರ ಚಿತ್ರಣ, ಮೇದಾರಿಕೆಯ ಜೀವಂತಿಕೆಯನ್ನು ತಿಳಿಸುತ್ತದೆ. ಮೂಡಿಗೆರೆಯ ೧೨ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಿರುವ ಶೇ.೯೭.೫೫ ಮೇದರು ಚಿಕ್ಕಮಗಳೂರು ತಾಲೂಕಿನ ಶೇ.೭೧.೪೯ ಮೇದರು ಹಾಗೂ ನರಸಿಂಹರಾಜಪುರದಲ್ಲಿ ಶೇ.೯೦%ರಷ್ಟು ಮೇದರು ಮೇದಾರಿಕೆಯನ್ನು ನಡೆಸಿಕೊಂಡು ಹೋಗುತ್ತಿರುವುದು ಇಂದಿಗೂ ಕಾಣಬಹುದು. ಚಿಕ್ಕಮಗಳೂರು ಜಿಲ್ಲೆಯ ಮೇದರಲ್ಲಿ ಬಿದಿರಿನ 'ಡಿಪೊ ಸಂಸ್ಕೃತಿ' ಕಡಿಮೆಯೆಂದೇ ಹೇಳಬಹುದು. ತರೀಕೆರೆಯಲ್ಲಿ ೦೩, ಮೂಡಿಗೆರೆ ತಾಲೂಕು ಬಿಳಗೊಳದಲ್ಲಿ ೦೨, ಚಿಕ್ಕಮಗಳೂರು ಟೌನ್‌ನಲ್ಲಿ ೦೧ ಡಿಪೊವನ್ನು ಕಾಣಬಹುದು. ಬಹುಶಃ ಕಾಡಿನ ಅಂಚಿನ ಪಟ್ಟಣಗಳಾಗಿದ್ದರಿಂದ ಬಳಕೆದಾರರು ಮೇದರನ್ನು ಆಶ್ರಯಿಸದೆ ತಾವೇ ಅವುಗಳನ್ನು ಪೂರೈಸಿಕೊಳ್ಳುತ್ತಾರೆ. ಚಿಕ್ಕಮಗಳೂರು, ತರೀಕೆರೆ, ಬಿಳಗೊಳದಲ್ಲಿ ಹೆಚ್ಚಾಗಿ ಏಣಿಗಳ ವ್ಯಾಪಾರ ಆಗುತ್ತದೆ. ಕಾರಣ 'ಕಾಫಿತೋಟ'ದಲ್ಲಿ ಕಾಳುಮೆಣಸನ್ನು ಕೀಳಲು ತರಾವರಿ ಅಳತೆಯ ಏಣಿಗಳು ವ್ಯಾಪಾರವಾಗುತ್ತವೆ ನಿಗಧಿತ ಬೆಲೆಯಿರುವುದಿಲ್ಲ. ವ್ಯಾಪಾರಿ ಮತ್ತು ಗಿರಾಕಿಗಳ ನಡುವೆ ವ್ಯಾಪಾರ ಕುದುರುತ್ತದೆ. ಸಾಮಾನ್ಯವಾಗಿ ೯,೧೧,೧೩,೧೫,೧೭,೧೯,೨೧ ಕಾಲಿನವರೆಗಿನ ಏಣಿಗಳನ್ನು ತಯಾರಿಸುತ್ತಾರೆ. ಏಣಿ ಕಾಲುಗಳು ಬೆಸ ಸಂಖ್ಯೆಯಲ್ಲೇ ಇರಬೇಕೆನ್ನುತ್ತಾರೆ. ೨೦೦ ರೂಪಾಯಿಯಿಂದ ೭೫೦ ರೂಪಾಯಿಗಳವರೆಗೂ ಮಾರಾಟ ಮಾಡುವರು.

ಮೂಲ ಕಸುಬಿನ ಸಾಮಗ್ರಿಗಳನ್ನು ವಿತರಿಸಲು ಲ್ಯಾಂಪ್ಸ್ ಸೊಸೈಟಿ ಇಲ್ಲವೇ ಖಾಸಗಿ ಸೊಸೈಟಿಗಳನ್ನು ಮಾಡಿಕೊಂಡಿದ್ದರು. ಸೊಸೈಟಿಗೆ ಸಿದ್ಧಪಡಿಸಿದ ವಸ್ತುಗಳನ್ನು ಮಾರುವುದು ಅಷ್ಟೇನು ಲಾಭದಾಯಕವಲ್ಲವೆಂದು ಭಾವಿಸಿ, ವಿವಿಧ ಊರಿನ ವಾರದ ಸಂತೆಗಳು, ಪೇಟೆ, ಅಂಗಡಿಗೆ ಹಾಕುವುದು, ಊರೂರು ಅಲೆಯುವುದು, ಹಳ್ಳಿ ತಿರುಗುವುದು, ಮುಂಗಡ ಪಾವತಿಸಿದವರಿಗೆ ನೀಡುವುದು ಹೀಗೆ ವ್ಯಾಪಾರ ಮಾಡುವರು. ಮೇದರ ಮೊರದ ಪೆಂಡಿ, ಕಾಯಿ ಕೀಳುವ ಗಳ, ಚಂದ್ರಿಕೆ, ತಟ್ಟೆ ಇತರೆ ಬಿದಿರಿನ ಉತ್ಪನ್ನಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸುವಾಗ ಅರಣ್ಯ ತನಿಖಾ ಠಾಣೆಯವರು ಪರವಾನಗಿ ಕೇಳಿ ಪೀಡಿಸುವರು. ಸಾಮಾನ್ಯವಾಗಿ ವಾರದ ಸಂತೆಯಲ್ಲಿ ಮಾರುವ ದೊಡ್ಡ ಹೆಡಗೆಯೊಂದಕ್ಕೆ ೧೦೦ರೂ, ಚಿಕ್ಕದು ೫೦ರೂ, ಕೋಳಿ ಜಲ್ಲೆಗೆ ೧೫೦ರೂ, ತರಗಿನ ಜಲ್ಲೆಗೆ ೨೫೦ರೂ, ತೊಟ್ಟಿಲಿಗೆ ೧೨೫ರೂ, ಮೂಲೆಗೆರಸಿ ೧೦೦ರೂ, ಒಂದು ಜೊತೆ ಸಣ್ಣ ಹೆಣಿಗೆಯ ಮೊರಕ್ಕೆ ೬೦ರೂ, ದೊಡ್ಡ ಹೆಣಿಗೆ ಮೊರಕ್ಕೆ ೪೦ರೂ, ಭತ್ತದ ಕಣಜ ಒಂದು ಮೆಟ್ಟಿಗೆ ೨೦ರೂ,

ಟಮೋಟೋ, ಮಾವಿನ ಬುಟ್ಟಿಗೆ ೨೦ರೂ, ಚಂದ್ರಿಕೆಗೆ ೩೦೦ರೂ, ರೇಷ್ಮೆ ತಟ್ಟೆಗೆ ೧೫೦ರೂ, ಬೀಸಣಿಗೆಗೆ ೧೫ರೂ, ಮದುವೆ ಸಾಮಾನಿಗೆ ೨೫೦ರೂ, ಮರಣ ಹೊಂದಿದವರನ್ನು ಸಾಗಿಸುಲು ಚಟ್ಟದ ಸಾಮಾನಿಗೆ ಇಷ್ಟೇ ಎಂದು ನಿಗಧಿಗೊಳಿಸೊಲ್ಲ. ಎಷ್ಟೇ ಕೊಟ್ಟರು ತೆಗೆದುಕೊಳ್ಳುತ್ತೇವೆ ಎನ್ನುತ್ತಾರೆ. ಗಂಡ-ಹೆಂಡತಿ-ಮಕ್ಕಳನ್ನು ಒಳಗೊಂಡ ಒಂದು ಕುಟುಂಬ ಗಳವನ್ನು ಸೀಳಿ, ದೆಬ್ಬೆ ಮಾಡಿ ಸಿಬುಕು ಮಾಡಿಕೊಂಡು ೫ ಜೊತೆ ಮೊರ ಹೆಣೆಯಬಹುದು. ಆ ೫ ಜೋಡಿ ಮೊರ ಕಟ್ಟಲು ಕಂಬಿವಟ್ಟು, ಕಟ್ನೋಳು, ಮುಂಗಡ, ಹಿಂದಂಡೆ ತಯಾರಿಸಿ ಹಸಿಯಿದ್ದರೆ ಸ್ವಲ್ಪ ಬಾಡಿಸಿ ಮೊರ ಕಟ್ಟುತ್ತಾರೆ. ನುರಿತ ಕೆಲಸಗಾರರು ಕಲಾತ್ಮಕ ಮೊರ ಇಲ್ಲವೆ ಇತರೆ ಉತ್ಪನ್ನಗಳನ್ನು ಮಾಡುತ್ತಾರೆ. ಈ ರೀತಿ ತಯಾರಿಸಿದ ಮೊರಗಳು ರೂ ೨೦೦ರಿಂದ ರೂ ೨೫೦ಗಳವರೆಗೆ ಆದಾಯ ತರುತ್ತದೆ. ಇದರಿಂದಲೇ ಕುಟುಂಬದ ನಿರ್ವಹಣೆಯಾಗಬೇಕು ಎಂದು ಮೇದರು ತಿಳಿಸುತ್ತಾರೆ.

೨.೪.೩ ಬಿದಿರಿನ ವಸ್ತುಗಳ ತಯಾರಿಕೆ ಮತ್ತು ಮಾರಾಟ

'ಮೇದ'ರ ಮೂಲ ಕಸುಬು ಬಿದಿರಿನಿಂದ ತಯಾರಿಸಿದ ಉತ್ಪನ್ನಗಳನ್ನು ತಯಾರಿಸುವುದು, ಮಾರುವುದಾಗಿದೆ. ಪರಂಪರಾಗತ ಈ ಕುಲಕಸುಬಿನಿಂದ ರೈತರು ನಾಗರಿಕರಿಗೆ ಉಪಯೋಗವಾಗುವ ಅನೇಕ ಬಿದಿರಿನ ಪರಿಕರಗಳನ್ನು ತಯಾರಿಸುತ್ತಾರೆ. ಮೇದರು ಬೆಟ್ಟ-ಗುಡ್ಡಗಳ ಪರಿಸರದಲ್ಲಿ ವಾಸಮಾಡುತ್ತಿದ್ದ ಪರಿಸರ ಪ್ರೇಮಿಗಳು. ಕಾಡಿನಂಚಿನ ಗುಡಾರಗಳಲ್ಲಿ ತಯಾರಿಸಿದ ಬಿದಿರಿನ ಉತ್ಪನ್ನಗಳನ್ನು ಮಾರಾಟ ಮಾಡಲು ಪೇಟೆಗೆ ಬರುತ್ತಿದ್ದರು. ಬ್ರಿಟೀಷರು ಹಾಗೂ ಪೋರ್ಚಿಗೀಸರ ಕಾಲದಲ್ಲಿ ಅನೇಕ ಮೇದ ಕುಟುಂಬಗಳು 'ಕಾಫಿ ಎಸ್ಟೇಟ್'ನ ಒಳಗೇ ಇರುವ ಲೈನ್ ಮನೆಗಳಲ್ಲಿ ವಾಸವಿದ್ದು, ಅವರಿಗೆ ಬೇಕಾಗಿದ್ದ ಕಾಫಿ ಬೀಜ ಮೊಳಕೆಯೊಡಿಸುವ ಅಂಗೈ ಅಗಲದ ಅತೀ ಸಣ್ಣ ಕುಕ್ಕೆಗಳನ್ನು ನನ್ನ ಮುತ್ತಾತಂದಿರು ಮಾಡುತ್ತಿದ್ದರಂತೆ ಎಂದು ಚಿಕ್ಕಮಗಳೂರಿನ ಹಿರಿಯರಾದ ಪೈಲ್ವಾನ್ ಕೃಷ್ಣಪ್ಪನವರು ತಿಳಿಸುತ್ತಾರೆ. ಮೇದರು ಕಲಾತ್ಮಕತೆಯಿಂದ ಬಿದಿರಿನ ವಸ್ತುಗಳನ್ನು ತಯಾರಿಸುತ್ತಾರೆ. ಅಲ್ಲದೆ ಸಮಾರಂಭಕ್ಕೆ ಬಿದಿರಿನಿಂದಲೇ ಆಕರ್ಷಕವಾದ ಸ್ವಾಗತ ಕಮಾನುಗಳನ್ನು, ಮುಖವಾಡ, ಗಜಗಾತ್ರದ ಗೊಂಬೆ ಇತ್ಯಾದಿಗಳನ್ನು ಮಾಡುವರು. ಅರಿಸೀಕೆರೆ, ಹೂವಿನಹಡಗಲಿ, ಹೊಸಪೇಟೆ, ಹುಬ್ಬಳ್ಳಿ, ದಾವಣಗೆರೆ, ಚಳ್ಳಕೆರೆ, ತುಮಕೂರು, ಹಾಸನ, ಶಿವಮೊಗ್ಗ, ನರಸಿಂಹರಾಜಪುರ ಇತ್ಯಾದಿ ಊರಿನ ಮೇದರು ತಮ್ಮ ವಿಶಿಷ್ಟ ಹಬ್ಬ-ಹರಿದಿನಗಳಲ್ಲಿ ಬಿದಿರಿನಿಂದ ಮನೋಜ್ಞವಾದ ಪೆಂಡಾಲುಗಳನ್ನು ಮಾಡುತ್ತಾರೆ. ಬಣ್ಣದ ಹೊದಿಕೆ ಹಾಕುತ್ತಾರೆ.

ಅಲ್ಲದೆ ಕೃಷಿಕರಿಗೆ ಅತಿ ಮುಖ್ಯವಾಗಿ ಬೇಕಾದ ಬಿತ್ತನೆ ಬೀಜದ ನಳಿಕೆ (ಕೂರಿಗೆ ನಳಿಕೆ), ಮೇರೆದೊಣ್ಣೆ, ಕೊರಡು, ಲೊಳ್ಳಿಗೆ ಬಡಿಗೆ, ರಸ್ತೆ ಬದಿಯ ಹಣ್ಣಿನ ವ್ಯಾಪಾರಿಗಳಿಗೆ ದೆಬ್ಬೆಯ ತಡಿಕೆ, ಡಾಬಾಗಳಿಗೆ ವಿಭಜಕಗಳು, ರೂಫಿಂಗ್, ನೆರಕೆ ಗೋಡೆಗೆ ತಟ್ಟಿ, ಮೇಲ್ಛಾವಣಿ

ಮುಚ್ಚಲು ತಟ್ಟಿ, ಗಳ, ಬೊಂಬು ಹೀಗೆ ಅನೇಕ ಬಿದಿರಿನ ವಸ್ತುಗಳನ್ನು ಮಾರಾಟ ಮಾಡಲಾಗುತ್ತದೆ. ಸ್ವಲ್ಪ ಒಣಗಿದ ಬಿದಿರನ್ನು ಹದವಾಗಿ ಸೀಳಿ ಉಪಯೋಗಿಸಲು ಅನುಕೂಲವಾಗುವಂತೆ ಅವುಗಳನ್ನು ನೀರಿನಲ್ಲಿ ನೆನೆ ಹಾಕುವರು. ಅಥವ ಹಸಿರು ಹೊಸ ಬಿದಿರನ್ನು ಸೀಳಿ ಬಿಸಿಲಿನಲ್ಲಿ ಸ್ವಲ್ಪ ಬಾಡಿಸುವರು. ಈ ರೀತಿ ಮಾಡಿದಾಗ ಮೇದಾರಿಕೆಗೆ ಹದವಾಗಿ ಯಾವುದೇ ಬಿದಿರಿನ ಉತ್ಪನ್ನಗಳನ್ನು ಮಾಡಲು ಅನುಕೂಲಕರವಾಗುತ್ತದೆ. ಮೇದರ ಕುಲಕಸುಬಿನ ಹತ್ಯಾರಗಳಾದ ಕತ್ತಿ ಮತ್ತು ಅಂಬುಗಳನ್ನು ಹರಿತಗೊಳಿಸಿಕೊಂಡಿರುತ್ತಾರೆ. ಕಿರು ಬಿದಿರನ್ನೆ ಹೆಚ್ಚಾಗಿ ಬಳಸುವರು. ಬಡ್ಡೆ ಕಡೆಯಿಂದ ಸೀಳಿ ತುದಿ ಕಡೆಯಿಂದ ಕೆಲಸ ಮಾಡುವರು. ಭಾರತೀಯ ಸಂಸ್ಕೃತಿಯೊಂದಿಗೆ ಮೇದಾರಿಕೆ ವೃತ್ತಿ ಹೊಂದಿಕೊಂಡಿರುವುದರಿಂದ ಅವರವರ ಸಂಸ್ಕೃತಿ ಆಚರಣೆಗೆ ಬೇಕಾದ ಬಿದಿರಿನ ಪರಿಕರಗಳನ್ನು ಮೇದರು ತಯಾರಿಸುತ್ತಾರೆ. ಪರಿಚಯಸ್ಥರು, ಮಾಮೂಲು ಗಿರಾಕಿಗಳು ಬಿದಿರಿನ ಮಾಲಿಗೆ ಆದೇಶ ನೀಡಿದರೆ ಮುತುವರ್ಜಿವಹಿಸಿ ಉತ್ಪನ್ನಗಳನ್ನು ಮಾಡುವರು.

ಹುಟ್ಟಿನಿಂದ ಸಾವಿನವರೆಗಿನ (Womb to tomb) ವಾರ್ಷಿಕ ಆವರ್ತಗಳಿಗೆ ಬೇಕಾಗುವ ತೊಟ್ಟಿಲಿನಿಂದ ಚಟ್ಟದವರೆಗೆ ಅನೇಕ ಉತ್ಪನ್ನಗಳು ನುರಿತ ಮೇದರ ಕೈಯಿಂದ ಅರಳುತ್ತದೆ. 'ಕೈ ಮತ್ತು ಮನಸ್ಸು'ಗಳ ಸಂಯೋಜನೆಯಿಂದ ಉತ್ತಮ ಕಲಾಕೃತಿಗಳು ಹೊರಹೊಮ್ಮುತ್ತವೆ. ಮೇದ ತಾನು ಮಾಡುವ ಬುಟ್ಟಿ ತನ್ನ ಮನಸ್ಸಿನಲ್ಲಿ ಅಂದುಕೊಂಡತೆ ಬಂದರೆ ಅತ್ಯಂತ ಸಂಭ್ರಮಿಸುತ್ತಾನೆ. ವೃತ್ತಿ ತಾದಾತ್ಮತೆ ಮೇದರಲ್ಲಿ ಕಾಣಬಹುದು. 'ವೃತ್ತಿ ತೃಪ್ತಿ'ಗಾಗಿ ಹಾತೊರೆಯುತ್ತಾರೆ. ಗಿರಾಕಿಗೆ ತೃಪ್ತಿಪಡಿಸುವ ಅಂಶ ಗೌಣವಾಗಿದ್ದು ತನಗೇ ಮೊದಲು ತೃಪ್ತಿಯಾಗಬೇಕೆಂಬ ಹಂಬಲಿಕೆ ಪ್ರತಿಯೊಬ್ಬ ಮೇದನಲ್ಲಿ ಕಾಣುತ್ತೇವೆ.

ದಿನ ಬಳಕೆಗೆ ಉಪಯುಕ್ತವಾಗುವಂತಹ ಬೇಲಿ ತಟ್ಟಿ, ಗಾಡಿದಬ್ಬೆ, ಕಣಗೂಟ (ಗಲ್ಟೆ ಬಿದಿರು), ಮಂಕರಿ, ಹೆಡಿಗೆ, ಕುಕ್ಕೆ, ಮೊರ, ತೊಟ್ಟಿಲು, ಧಾನ್ಯದ ಕಣಜ, ಕೇರುವ ಮೊರ, ಮೀನಿನ ಮಂಕರಿ, ಜಾಳಿಸುವ ಮಂಕರಿ, ಅಡಿಕೆ ಕೈತಟ್ಟಿ, ಅಡಿಕೆ ಚಾಪೆ, ಕಾಯಿ ಕುಕ್ಕೆ, ಅನ್ನದ ಕುಕ್ಕೆ, ರೊಟ್ಟಿ ಕುಕ್ಕೆ, ಕೋಳಿ ಜಲ್ಲೆ, ಗೂಡೆ, ಮಾವಿನ ಬುಟ್ಟಿ, ಮಲಗುವ ಮಂಚಗಳು, ಏಣಿ, ಬಿದಿರಿನ ಸೋಫಾ ಸೆಟ್ಟುಗಳು, ಮೂಲೆ ಸ್ಟ್ಯಾಂಡು, ಹೂವಿನ ಬುಟ್ಟಿ, ಹೆಣ್ಣುಮಕ್ಕಳು ತಲೆಗೂದಲು ಒಣಗಿಸಿಕೊಳ್ಳುವ ಕವಚು, ಪಂಜರಗಳು, ದರಗಿನ ಜಲ್ಲೆ, ಬಣ್ಣದ ಗಿಲಕಿ, ಬಣ್ಣದ ಬೀಸಣಿಗೆ, ಎರಡು ಮೂಲೆ ತೊಟ್ಟಿಲು, ೪ ಮೂಲೆ ತೊಟ್ಟಿಲು, ರೈಲು ಬುಟ್ಟಿ, ಲೋಟ, ಚಮಚ, ಹೂಜಿ, ಜಡೆ ಬಿಲ್ಲೆ, ಹಾವು ಇತ್ಯಾದಿ ಆಟಿಕೆಗಳು ದೇವರ ಪೂಜೆಗೆ ಹಣ್ಣು–ಕಾಯಿ ತೆಗೆದುಕೊಂಡು ಹೋಗುವ ಬುಟ್ಟಿ (ಕೊಪ್ಪಳ ಜಿಲ್ಲೆಯ ಹುಲುಗಿಯ ಹುಲಿಗೆಮ್ಮ ದೇವಸ್ಥಾನದಲ್ಲಿ ಹೆಚ್ಚು ಬಳಕೆಯಿದೆ), ಪಾವು, ಸೇರು, ಸಂದೂಕ, ಗೊಟ್ಟಗಳು, ಉಪ್ಪನ್ನು ಹಾಕುವ ಸಿದ್ಧಿ, ಮೂಲೆ ಗೆರಸಿ, ಸುತ್ತು ಗೆರಸಿ, ಕೊಂಗ, ಅನ್ನ ಬಸಿಯೋ ಚೆಬ್ಬಲು,

ಮೆಟ್ಟಕ್ಕಿ ಚಿಬ್ಬಲು, ಪೆಟ್ಟಿಗೆ, ಬುಜ್ಜಣಿಕೆ, ಗೊರಬು (ಮಳೆಯಿಂದ ರಕ್ಷಿಸಿಕೊಳ್ಳಲು), ಕೂಣಿ, ಹತ್ತುಗುಣಿ, ಇರುಗುಣಿ, ಮಳಲಿಗೋರು ಇತ್ಯಾದಿ ಅನೇಕ ಉತ್ಪನ್ನಗಳನ್ನು ಬೇಡಿಕೆಗೆ ಅನುಗುಣವಾಗಿ ತಯಾರಿಸುತ್ತಾರೆ. ಈ ಉತ್ಪನ್ನಗಳನ್ನು ಎರಡು ವಿಧಗಳಲ್ಲಿ ಮಾರಲ್ಪಡುತ್ತವೆ. ಒಂದು : ಉತ್ಪನ್ನಗಳು ಇರುವೆಡೆಯಲ್ಲಿಯೇ ಗಿರಾಕಿಗಳು ಬಂದು ಖರೀದಿಸುವುದು. ಎರಡು : ಗಿರಾಕಿಗಳಿರುವೆಡೆ ಉತ್ಪನ್ನಗಳನ್ನು ತೆಗೆದುಕೊಂಡು ಹೋಗಿ ಮಾರುವುದು. ಉತ್ಪನ್ನ ಇರುವೆಡೆ ಗಿರಾಕಿಗಳು ಬಂದು ಖರೀದಿಸಿದರೆ ಲಾಭ ಹೆಚ್ಚೆಂದು, ಅವರಿರುವೆಡೆ ಮಾಲನ್ನು ಕೊಂಡೋಯ್ದು ಮಾರಿದರೆ ಲಾಭ ಅಷ್ಟಿಲ್ಲವೆಂದು ಮೇದರು ತಿಳಿಸುತ್ತಾರೆ.

ಲ್ಯಾಂಪ್ಸ್ ಸಹಕಾರ ಮಳಿಗೆ, ಮೇದರರದೇ ವಾಣಿಜ್ಯ ಕುಟೀರಗಳಲ್ಲಿ ಮಾರಟ ಮಾಡುವುದಿತ್ತು. ಬಯಲು ಸೀಮೆಯ ಮೇದರು ಅಥವಾ 'ಡಿಪೋ ಸಂಸ್ಕೃತಿ' ಹೊಂದಿರುವ ಮೇದರು ತಮ್ಮ ಅಂಗಡಿಗಳಲ್ಲಿ ವ್ಯಾಪಾರ ಮಾಡುತ್ತಾರೆ. ಡಿಪೋ ಇಲ್ಲದವರು ವಾರದ ಸಂತೆ, ಹಳ್ಳಿ, ಪಟ್ಟಣಗಳಲ್ಲಿ ತಿರುಗಿ ವ್ಯಾಪಾರ ಮಾಡುತ್ತಾರೆ. ಮಲೆನಾಡಿನಲ್ಲಿ ನಿಗಧಿತ ಕೃಷಿ ಕುಟುಂಬಗಳಿದ್ದು ಆಯಾ ಕೃಷಿಕರು ನಿಗಧಿತ ಕುಟುಂಬದಲ್ಲೇ ತಮಗೆ ಬೇಕಾದ ಬಿದಿರಿನ ವಸ್ತುಗಳನ್ನು ಪಡೆದು ಬೆಳೆ ಕಟಾವಾದ ಮೇಲೆ ಭತ್ತ, ಅಡಿಕೆ, ಕಾಫಿ ಬೀಜ ಇತ್ಯಾದಿಗಳನ್ನು ಕೊಡುವ ಜಾಜಮಾನಿ ಪದ್ಧತಿಯ ಕುರುಹುಗಳು ಅಲ್ಲಲ್ಲಿ ಇವೆ.

೨.೪.೪ ಕೃಷಿ

ಚಿಕ್ಕಮಗಳೂರು ಜಿಲ್ಲೆಯಾದ್ಯಂತಹ ಕೃಷಿಕ ಜನಾಂಗದವರಾಗಿ ಒಕ್ಕಲಿಗರು, ಲಿಂಗಾಯತರು, ಕುರುಬರು, ಉಪ್ಪಾರರು, ಗೌಂಡರ್ (ತಮಿಳು), ಬ್ರಾಹ್ಮಣ, ಮಲಯಾಳಿ, ದೇವಾಂಗದವರು ಹೆಚ್ಚಾಗಿದ್ದಾರೆ. ಮಲೆನಾಡು ತಾಲೂಕುಗಳಲ್ಲಿ ಒಕ್ಕಲಿಗರು ಹಾಗೂ ಬ್ರಾಹ್ಮಣ ಒಕ್ಕಲು ಮನೆತನಗಳು ಹೆಚ್ಚು ಭೂಮಾಲೀಕರಾಗಿದ್ದರು. ತಮ್ಮ ಒಡೆತನದ ಕಾಫಿ, ಟೀ ಎಸ್ಟೇಟ್, ಅಡಿಕೆ, ತೆಂಗಿನ ತೋಟ, ಭತ್ತದ ಗದ್ದೆ ಹಾಗೂ ಒಣಭೂಮಿ ಪ್ರದೇಶದ ಭೂಹಿಡುವಳಿಗಳು ಅವರಿಂದಲೇ ನಿಯಂತ್ರಿಸಲ್ಪಡುತ್ತಿತ್ತು. ಅನಾದಿಕಾಲದಿಂದಲೂ ಮೇದರು ಚಪಕಾರಕ ವೃತ್ತಿಯನ್ನೇ ಅವಲಂಬಿಸಿದ್ದವರಾದ್ದರಿಂದ ಕೃಷಿಯತ್ತ ಹೆಚ್ಚು ಗಮನ ಹರಿಸಲಿಲ್ಲ. ಆದಾಗ್ಯೂ ಕೃಷಿ, ಪಶುಪಾಲನೆ ಬುಡಕಟ್ಟಿಗರ ಮೂಲ ಸಂಸ್ಕೃತಿಗೆ ಹತ್ತಿರವಿರುವುದರಿಂದ ಸಣ್ಣ ಸಣ್ಣ ಭೂಹಿಡುವಳಿಗಳನ್ನು ಹೊಂದಿರುವುದು ಕಂಡುಬರುತ್ತದೆ. ಬಿದಿರಿಗಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸಿಗರಾಗಿ ಹೋಗುತ್ತಿದ್ದ ಮೇದರು, ಕೃಷಿಯನ್ನು ಪ್ರಧಾನ ವೃತ್ತಿಯನ್ನಾಗಿ ಅವಲಂಬಿಸಿಕೊಂಡಿರಲಿಲ್ಲ. ಆದರೆ ಉಳುವವನೆ ಭೂ ಒಡೆಯ ಎಂಬ ನೀತಿಯಂತೆ ಸಿಕ್ಕಿದ ಭೂಮಿ, ದರಖಾಸ್ತು ಭೂಮಿ, ಖರೀದಿಸಿದ ಭೂಮಿ, ಅವರಿವರಿಂದ ಗೇಣಿ ಪಡೆದ ಭೂಮಿ, ಸರ್ಕಾರಿ ಭೂಮಿ ದೊರೆತಂತೆ ಕೃಷಿಯನ್ನು ಉಪ ಕಸುಬಾಗಿ ರೂಢಿಸಿಕೊಂಡರು. ಇವರಲ್ಲಿ 'ಕುಮುರಿ ಬೇಸಾಯ' ಇದ್ದಂತೆ ಕಂಡುಬರುವುದಿಲ್ಲ.

ಪಶುಪಾಲನೆಯೂ ವಿರಳವೇ. ಸಾಮಾನ್ಯವಾಗಿ ಮಲೆನಾಡು ಅಂದರೆ ಚಿಕ್ಕಮಗಳೂರು, ಆಲ್ದೂರು, ನರಸಿಂಹರಾಜಪುರ, ಅಜ್ಜಂಪುರ, ಲಕ್ಕವಳ್ಳಿ, ಸಾಗರ, ಶಿವಮೊಗ್ಗ, ಶಿಕಾರಿಪುರ, ಮಡಿಕೇರಿ ಮೊದಲಾದ ಪ್ರದೇಶಗಳಲ್ಲಿ ವಾಸಿಸುವ ಮೇದರು ಕೃಷಿಯನ್ನು ಮಾಡುತ್ತಾರೆ. ಸಾಗುವಳಿ ಭೂಮಿ ಸ್ವಲ್ಪವಿದ್ದರೂ ಮಳೆಗಾಲದಲ್ಲಿ ಮಳೆಯಾಶ್ರಿತ ಜಮೀನಿನಲ್ಲಿ ಭತ್ತ ಬೆಳೆಯುತ್ತಾರೆ. ಉಳಿದಂತೆ ಒಂದು ಬೆಳೆ ತೆಗೆದ ನಂತರ ಮಾಗಿ ಹೊಡೆದು ಭೂಮಿ ಹಾಗೆ ಬಿಡುತ್ತಾರೆ. ನೀರಾವರಿ ಸೌಲಭ್ಯವಿರುವವರು ಹಲಸಂದೆ, ಉದ್ದು, ರಾಗಿ, ಜೋಳ, ತೊಗರಿ ಮತ್ತು ತರಕಾರಿಗಳನ್ನು ಬೆಳೆಯುತ್ತಾರೆ.

ನರಸಿಂಹರಾಜಪುರದ ಮೇದರು ಕೃಷಿಯಲ್ಲಿ ಹೊಸ ಅಧ್ಯಾಯ ಬರೆಯ ತೊಡಗಿದ್ದಾರೆ. ತಮ್ಮಲ್ಲಿರುವ ಖುಷ್ಕಿ ಭೂಮಿ ಹಾಗೂ ಕರಾರು ಆಧಾರಿತ ಬೇರೆಯವರ ಖುಷ್ಕಿ ಭೂಮಿಯಲ್ಲಿ ಕೇರಳ ಮೂಲಕ 'ನೇಂದ್ರಬಾಳೆ'ಯನ್ನು ಬೆಳೆಯುತ್ತಿದ್ದಾರೆ. ಹಾಗೆಯೇ ಪ್ರಮುಖ ವಾಣಿಜ್ಯ ಬೆಳೆಯಾದ 'ರಬ್ಬರ್ ಬೆಳೆ'ಯನ್ನು ತಾಂತ್ರಿಕ ನೆರವಿನೊಂದಿಗೆ ಬೆಳೆಯುವ ಪ್ರಯತ್ನ ಮಾಡಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿ ನಿಗಮದ ವತಿಯಿಂದ ಸುಮಾರು ೧೦ ಕುಟುಂಬಗಳಿಗೆ ಕೊಳವೆ ಬಾವಿಯನ್ನು ತೋಡಿಸಿ, ವಿದ್ಯುಚ್ಛಕ್ತಿ ಅಳವಡಿಸುವುದರಿಂದ 'ಮೇದ ರೈತ'ರ ಮುಖದಲ್ಲಿ ಹಸನ್ಮುಖತೆ ಕಾಣಲಾರಂಭಿಸಿದೆ. ನರಸಿಂಹರಾಜಪುರ ತಾಲೂಕಿನಲ್ಲಿ ಒಟ್ಟು ೬೨ ಕುಟುಂಬಗಳಿದ್ದು, ೨೯ ಎಕರೆ ಭೂಮಿಯನ್ನು ಹೊಂದಿವೆ. ಕುಟುಂಬವಾರು ಸರಾಸರಿ ೧೮.೭೦ ಗುಂಟೆಗಳು (ಅರ್ಧ ಎಕರೆಗೂ ಕಡಿಮೆ) ಬರುತ್ತವೆ. ಶೇ.೪೧.೯೩ ರೈತರು ೦-೨ ಎಕರೆಯೊಳಗೆ ಬರುವ ಸಣ್ಣ ಹಿಡುವಳಿದಾರರಾಗಿದ್ದು ಬದುಕಿನ ಪರ್ಯಾಯ ಆಸರೆಯನ್ನಾಗಿ ಕೃಷಿ ಮಾಡಿ ತಮ್ಮ ಆರ್ಥಿಕ ಮಟ್ಟವನ್ನು ಎತ್ತರಿಸಿಕೊಳ್ಳಬೇಕೆಂದು ತೀವ್ರ ಪ್ರಯತ್ನ ಮಾಡುತ್ತಿದ್ದಾರೆ.

ಹಾಗೆಯೇ ಮೂಡಿಗೆರೆ ತಾಲೂಕಿನಾದ್ಯಾಂತ ೧೨೩ ಮೇದ ಕುಟುಂಬಗಳಿದ್ದು ಒಟ್ಟು ೮೦ ಎಕರೆ ಜಮೀನನ್ನು ಹೊಂದಲಾಗಿದೆ. ೧೫ ಎಕರೆಗೂ ಹೆಚ್ಚು ಭೂಮಿಯನ್ನು ಹೊಂದಿರುವ ೦೧ ಕುಟುಂಬ ಮಾತ್ರವಿದ್ದು, ೦-೨ ಎಕರೆಯೊಳಗೆ ೭೦ ಕುಟುಂಬಗಳಿದ್ದಾವೆ. ೨ರಿಂದ ೪ ಎಕರೆ ಭೂಮಿಯನ್ನು ಹೊಂದಿರುವ ೯ ಕುಟುಂಬಗಳಿವೆ. ಶೇ.೫೬.೯೧% ಕುಟುಂಬಗಳು ೦-೨ ಎಕರೆಯೊಳಗಿರುವ ಸಣ್ಣ ಹಿಡುವಳಿದಾರರಾಗಿದ್ದಾರೆ. ವಿಶೇಷವೆಂದರೆ ಆಲ್ದೂರು, ಹಲಸಿನ ಮನೆ, ಜನ್ನಾಪುರ, ತೋರಣ ಮಾವು, ಮಡೇನೇರಲು ಗ್ರಾಮಗಳಲ್ಲಿ ವಾಸವಿರುವ ಕನ್ನಡ ಮೇದರು ಸರಾಸರಿ ೧/೨ ಎಕರೆ ಕಾಫಿ ತೋಟವನ್ನು ಮಾಡಿಕೊಂಡಿದ್ದಾರೆ. ಎಕರೆಗೆ ಸರಾಸರಿ ೨೨ ಕ್ವಿಂಟಲ್ ಭತ್ತವನ್ನು ಬೆಳೆದು ಆಹಾರ ಸಮಸ್ಯೆಯನ್ನು ನೀಗಿಸಿಕೊಂಡಿದ್ದಾರೆ. ತರೀಕೆರೆ ತಾಲೂಕಿನಲ್ಲಿ ಮೇದರ ೧೦ ನೆಲೆಗಳಿದ್ದು ೧೪೬ ಕುಟುಂಬಗಳು ವಾಸಿಸುತ್ತಿವೆ. ಇದರಲ್ಲಿ ೨೧ ಕುಟುಂಬಗಳು ೦-೨ ಎಕರೆ ಭೂಮಿಯನ್ನು ೩೧ ಕುಟುಂಬಗಳು ೨-೪ ಎಕರೆ

[illegible]

ಭೂಮಿಯನ್ನು ೩ ಕುಟುಂಬಗಳು ಹಾಗೂ ೪ ರಿಂದ ೬ ಎಕರೆಯೊಳಗೆ ೧ ಕುಟುಂಬ ಜಮೀನನ್ನು ಹೊಂದಿದ್ದು, ಒಣ ಭೂಮಿ ಹಾಗೂ ಭದ್ರಾ ಜಲಾಶಯ ನೀರಾವರಿ ಭೂಮಿಯನ್ನು ಹೊಂದಿವೆ. ಕುಟುಂಬವೊಂದಕ್ಕೆ ಸರಾಸರಿ ೧೭.೧೨ ಗುಂಟೆ ಜಮೀನು ಹೊಂದಲಾಗುವುದು. ಭತ್ತ, ರಾಗಿ, ಜೋಳ, ಮೆಣಸು, ದನಿಯ ಮುಂತಾದ ಆಹಾರ ಹಾಗೂ ವಾಣಿಜ್ಯ ಬೆಳೆಗಳನ್ನು ಬೆಳೆಯುವರು. ಹಾಗೆಯೇ ಚಿಕ್ಕಮಗಳೂರು ತಾಲೂಕಿನಲ್ಲಿ ೫ ನೆಲೆಗಳಿದ್ದು ೪೨ ಮೇದ ಕುಟುಂಬಗಳು ವಾಸಿಸುತ್ತಿವೆ. ೦-೨ ಎಕರೆ ಭೂಮಿ ಹೊಂದಿದ ೨ ಕುಟುಂಬಗಳು, ೨ರಿಂದ ೪ ಎಕರೆಯನ್ನು ೦೧ ಕುಟುಂಬ ಹಾಗೂ ೧೦ರಿಂದ ೧೫ ಎಕರೆಯೊಳಗೆ ೧ ಕುಟುಂಬ ಭೂಮಿಯನ್ನು ಹೊಂದಿದೆ. ನಗರ ಕುಟುಂಬಗಳಾಗಿದ್ದರಿಂದ ಕೃಷಿ ಪ್ರಾಧಾನ್ಯತೆ ಇಲ್ಲವೆಂದು ತಿಳಿಯಬಹುದು. ೧೦ರಿಂದ ೧೫ ಎಕರೆಯೊಳಗೆ ಜಮೀನನ್ನು ಹೊಂದಿದ ಕುಟುಂಬದ ಸ್ವತ್ತು ಸ್ವಯಾರ್ಜಿತ ಗಳಿಕೆಯಾಗಿದೆ.

ಚಿಕ್ಕಮಗಳೂರು ಜಿಲ್ಲಾ ಮೇದರ ನೆಲೆಗಳ ಅಧ್ಯಯನ ಮಾಡಿದಾಗ ಬಹುತೇಕ ಭೂ ಒಡೆತನ ಪಿತ್ರಾರ್ಜಿತ ಆಸ್ತಿಯಾಗಿರುವುದು ತಿಳಿದು ಬರುತ್ತದೆ. ಪೂರ್ವಿಕರ ಕಾಲದಿಂದ ಕೇವಲ ಭತ್ತದ ಬೆಳೆಯನ್ನು ಮಾತ್ರ ಬೆಳೆಯುತ್ತಿದ್ದವರು ಇತ್ತಿಚೆಗೆ ಕಾಫಿ, ನೇಂದ್ರಬಾಳೆ, ರಬ್ಬರ್‌ನಂತಹ ವಾಣಿಜ್ಯ ಬೆಳೆಗಳನ್ನು ಬೆಳೆಯಲಾರಂಭಿಸಿದ್ದಾರೆ. ಆರ್ಥಿಕ ಸುಧಾರಣೆಯ ಆರಂಭ ಸ್ಥಿತಿಯಲ್ಲಿ ಮೇದರಿದ್ದಾರೆಂದು ಸ್ಪಷ್ಟಪಡಿಸಬಹುದು. **(ಹೆಚ್ಚಿನ ಮಾಹಿತಿಗಾಗಿ ಕೋಷ್ಟಕ-ಲನ್ನು ಗಮನಿಸುವುದು)**

೨.೪.೫ ಸರ್ಕಾರದ ಅಭಿವೃದ್ಧಿ ಯೋಜನೆಗಳು ಹಾಗೂ ಮೇದ ಬುಡಕಟ್ಟು

ಪರಿಶಿಷ್ಟ ಪಂಗದವರ ಸರ್ವತೋಮುಖ ಅಭಿವೃದ್ದಿಗಾಗಿ ೧೯೭೪-೭೫ರಲ್ಲಿ ಗಿರಿಜನ ಉಪಯೋಜನೆಯನ್ನು ಜಾರಿಗೊಳಿಸಲಾಗಿದೆ. ವಿವಿಧ ಅಭಿವೃದ್ಧಿ ಇಲಾಖೆಗಳು, ನಿಗಮಗಳು ಹಾಗೂ ಮಂಡಳಿಗಳು ತಮ್ಮ ಯೋಜನಾ ಆಯವ್ಯಯದಲ್ಲಿ ರಾಜ್ಯವಲಯ ಮತ್ತು ಜಿಲ್ಲಾ ವಲಯಗಳಡಿ ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಹಣವನ್ನು ಮೀಸಲಿಟ್ಟು, ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಕುಟುಂಬಗಳಿಗೆ ಶೈಕ್ಷಣಿಕ ಅಭಿವೃದ್ಧಿಗೆ ಹಲವಾರು ಆರ್ಥಿಕ ಸೌಲತ್ತುಗಳ ಜೊತೆಗೆ ವಸತಿ, ಕುಡಿಯುವ ನೀರು, ಸಂಪರ್ಕ, ರಸ್ತೆ, ನೈರ್ಮಲೀಕರಣ, ಆರೋಗ್ಯ ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಆದ್ಯತೆ ನೀಡಲಾಗುತ್ತಿದೆ. ಪರಿಶಿಷ್ಟ ಪಂಗಡದವರ ಅಭಿವೃದ್ಧಿಗೆ ಗಿರಿಜನ ಉಪಯೋಜನೆಯಡಿ ಅನೇಕ ಅಭಿವೃದ್ಧಿ ಯೋಜನೆಗಳನ್ನು ಸರ್ಕಾರ ರೂಪಿಸಿ, ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳಲ್ಲಿ ಕೆಲವು ಇಲಾಖೆಗಳಿಂದ ಮೇದರು ಸೌಲತ್ತುಗಳನ್ನು ಬಳಸಿಕೊಂಡು ತಮ್ಮ ಜೀವನಮಟ್ಟದಲ್ಲಿ ಕೊಂಚ ಸುಧಾರಣೆಗಳನ್ನು ತಂದುಕೊಂಡಿರುವುದು ಸಮೀಕ್ಷೆಯಿಂದ ತಿಳಿದುಬಂದಿದೆ.

ಕೃಷಿ ಇಲಾಖೆಯಿಂದ ಬಳಸಿಕೊಂಡ ಸವಲತ್ತುಗಳೇ ಅಧಿಕವೆಂಬುದು ತಿಳಿಸಿದ್ದಾರೆ. ಕೃಷಿ ಪರಿಕರ ಪೂರೈಕೆ, ಧಾನ್ಯ ಸಂಗ್ರಹಣ ಅಲ್ಯೂಮಿನಿಯಂ ದೊಡ್ಡ ಡಬ್ಬಗಳು, ಮುಳ್ಳುತಂತಿ,

[illegible]

ಬಿತ್ತನೆ ಬೀಜ, ಆಧುನಿಕ ಕೃಷಿ ಉಪಕರಣಗಳು, ತುಂತುರು ನೀರಾವರಿ, ಹನಿ ನೀರಾವರಿ ಸೌಲಭ್ಯ, ಉಳುಮೆ ಎತ್ತು ಮತ್ತು ಎತ್ತಿನಗಾಡಿ ಇತ್ಯಾದಿಗಳನ್ನು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನೀಡಿರುತ್ತಾರೆ. ಭೂಹಿಡುವಳಿಗಳ ಮಿತಿ ಅತ್ಯಂತ ಕಡಿಮೆಯಿರುವ ಅತಿ ಸಣ್ಣ ರೈತರು ಕೆಲವು ಸೌಲಭ್ಯಗಳಿಂದ ವಂಚಿತರೂ ಆಗಿದ್ದಾರೆ. ಇಡೀ ಚಿಕ್ಕಮಗಳೂರು ಜಿಲ್ಲೆಯಲ್ಲಿ ಶೇ.೭೫ರ ಸಹಾಯಧನದಲ್ಲಿ ರೂ. ೫೦,೦೦೦ಗಳ ಮಿತಿಯಲ್ಲಿ ಮೂರು ಪವರ್‌ಟಿಲ್ಲರ್‌ಗಳನ್ನು ಪಡೆದಿರುವುದು ಕಂಡುಬಂದಿದೆ. ಹಾಗೆಯೇ ಸಹಾಯಧನದಡಿಯಲ್ಲಿ ೧ ಟ್ರ್ಯಾಕ್ಟರ್ ಹೊಂದಲಾಗಿದೆ. 'ಗೊಂಚಲು ಗ್ರಾಮ' ಯೋಜನೆಯಡಿಯಲ್ಲಿ ಸಹಾಯಧನ ಪಡೆಯುವ ಅರ್ಹ ಫಲಾನುಭವಿಗಳು ಅಭ್ಯವಿರುವುದಿಲ್ಲ. ಕಾರಣ ಮೇದರು ಹೊಂದಿರುವ ಭೂಹಿಡುವಳಿಗಳು ಚದುರಿ ಹೋಗಿವೆ. ಕೊಳವೆಬಾವಿ ಸೌಲಭ್ಯವನ್ನು ಬಹುತೇಕ ಮೇದರು ಹೊಂದಿದ್ದು, ಆಹಾರ ಬೆಳೆ ಮತ್ತು ವಾಣಿಜ್ಯ ಬೆಳೆಗಳನ್ನು ಇತ್ತೀಚೆಗೆ ಬೆಳೆಯುತ್ತಿದ್ದು, ಜೀವನಮಟ್ಟದಲ್ಲಿ ಸುಧಾರಣೆ ಕಾಣಲಾರಂಭಿಸಿದೆ. ಇದು ಮೇದರಿಗೆ ಅತ್ಯಂತ ತೃಪ್ತಿ ತಂದಿದೆ ಎಂದು ತಿಳಿಸುತ್ತಾರೆ.

ನರಸಿಂಹರಾಜಪುರ ಭಾಗದ ಮೇದರು ವಾಣಿಜ್ಯ ಬೆಳೆಯಾಗಿ ಕೇರಳ ಮೂಲದ ನೇಂದ್ರಬಾಳೆ ಬೆಳೆಯುತ್ತಿದ್ದು, ಸಾಕಷ್ಟು ಲಾಭ-ನಷ್ಟವನ್ನು ಅನುಭವಿಸಿದ್ದಾರೆ. ಬಿರುಗಾಳಿ, ಅಕಾಲಿಕ ಮಳೆ, ವಿದ್ಯುತ್ತಿನ ಅಸಮರ್ಪಕ ಪೂರೈಕೆ, ಉತ್ತಮ ಗುಣಮಟ್ಟದಲ್ಲದ ವಿದ್ಯುತ್, ಕಾಡುಪ್ರಾಣಿಗಳ ಉಪಟಳ ಇತ್ಯಾದಿಗಳಿಂದ ಬೆಳೆ ಸಂರಕ್ಷಣೆ ಕಷ್ಟ ಸಾಧ್ಯವೆಂದೂ ಮೇದರು ತಿಳಿಸುತ್ತಾರೆ. ರಬ್ಬರ್, ಬಾಳೆ, ಭತ್ತ, ತೆಂಗಿನ ಬೆಳೆಯನ್ನು ಬೆಳೆಯುತ್ತ, ಹಸನಾದ ಬದುಕಿನ ಕನಸು ಕಾಣುತ್ತಿರುವುದು ಕಂಡುಬಂದಿತು. ಮೂಡಿಗೆರೆ, ತರೀಕೆರೆ ಭಾಗದ ಮೇದರು ಅಡಿಕೆ, ಕಾಫಿ, ವಾಣಿಜ್ಯ ಬೆಳೆಗಳಿಗೆ ನೀರಾವರಿ ಸೌಲಭ್ಯ ಅಳವಡಿಸಿಕೊಂಡು ಕಾಫಿಗೆ ತುಂತುರು ನೀರಾವರಿ ಸೌಲಭ್ಯದಿಂದ ಅಲ್ಪಸ್ವಲ್ಪ ಸುಧಾರಿತ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಆದಾಗ್ಯೂ ಇಡೀ ಚಿಕ್ಕಮಗಳೂರಿನ ಮೇದರು 'ಭತ್ತ'ವನ್ನು ಮುಖ್ಯ ಬೆಳೆಯನ್ನಾಗಿ ಬೆಳೆಯುತ್ತಿದ್ದಾರೆ.

ಪಶುಸಂಗೋಪನಾ ಇಲಾಖೆಯಿಂದ ಮೇದರು ನಬಾರ್ಡ್‌ದರಗಳಲ್ಲಿ ಶೇ.೭೫ರ ಸಹಾಯಧನದಲ್ಲಿ ಮಿಶ್ರತಳಿ ಹಸು, ಎಮ್ಮೆ ಹಾಗೂ ಕುರಿಗಳನ್ನು ಪಡೆದು ಫಲಾನುಭವಿಗಳಾಗಿದ್ದ ನೆನಪನ್ನು ಬಿಚ್ಚಿಡುತ್ತಾರೆ. ಸ್ಥಳೀಯವಾಗಿ ಹಾಲನ್ನು ಮಾರಾಟ ಮಾಡಬೇಕಿತ್ತು. ಹಾಲು ಉತ್ಪಾದಕರ ಸಹಕಾರ ಸಂಘಗಳು ಇತ್ತೀಚೆಗೆ ಬಂದಿವೆ. ಹಾಲಿನ ವಿಲೇವಾರಿ ಕಷ್ಟವಾಗುತ್ತಿತ್ತು. ಆ ತಳಿಗಳಿಗೆ ಸಮ್ಮಿಶ್ರ ಆಹಾರ ಒದಗಿಸಿಯೇ ಸಾಕಬೇಕಿತ್ತು. ನಂತರದ ದಿನಗಳಲ್ಲಿ ಈ ರಾಸುಗಳೆಲ್ಲ ಅಸುನೀಗಿದವು ಎಂದು ಹೇಳುತ್ತಾರೆ.

ಅರಣ್ಯ ಇಲಾಖೆಯಿಂದ ಕುಶಲಕರ್ಮಿಗಳಿಗೆ ಉಚಿತ ಬಿದಿರು ಬೆತ್ತ ಸರಬರಾಜು ಮಾಡುವ ನಿಯಮದಡಿ, ನಿಯಮಿತವಾಗಿ ಕಿರುಬಿದಿರಿನ ಪೂರೈಕೆ ನಡೆಯುತ್ತಿತ್ತು. ಇತ್ತೀಚೆಗೆ ಪಶ್ಚಿಮ ಘಟ್ಟ ಶ್ರೇಣಿ, ಭದ್ರಾ ಕಾಡಿನಲ್ಲಿ ಬಿದಿರಿಗೆ ಕಟ್ಟೆರೋಗ ಬಂದು ಇಡೀ ಬಿದಿರು

[illegible]

[illegible]

ಕಾಡೇ ನಾಶವಾಗಿದ್ದು ಬಿದಿರಿನ ಪೂರೈಕೆ ಅಸಾಧ್ಯವಾಗಿದೆ. ಬಿದಿರನ್ನು ಸಹಕಾರ ಸಂಘದ ಮೂಲಕ ವಿತರಿಸುವ ಯೋಜನೆ ಹಮ್ಮಿಕೊಳ್ಳಲಾಗಿದೆ. ಆದರೆ ಬಿದಿರು ಪೂರೈಕೆ ಸರಿಯಾಗಿ ಆಗದೆ, ಸಹಕಾರ ಸಂಘಗಳು ಮೂಲೆಗುಂಪಾಗುತ್ತಿದೆ. ಅಧಿಕಾರಿಗಳು 'ಸಾಮಾಜಿಕ ಭದ್ರತಾ ನೆಡುತೋಪಿನ' ಪ್ರಸ್ತಾಪ ಮಾಡಿದರೂ ಅರ್ಧಕ್ಕೆ ನಿಂತಿತು ಎಂದು ನರಸಿಂಹರಾಜಪುರ ಹಾಗೂ ಮೂಡಿಗೆರೆ ತಾಲೂಕಿನ ಮೇದರು ಅಲವತ್ತುಕೊಂಡರು.

ಗ್ರಾಮೀಣ ಮತ್ತು ಸಣ್ಣ ಕೈಗಾರಿಕಾ ಇಲಾಖೆಯಿಂದ ಆಸಕ್ತಿ ಹೊಂದಿರುವ ಮೇದ ಯುವಕರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಸಹಕಾರಿಯಾಗುವಂತೆ ಜೇನು ಸಾಕಾಣಿಕೆ, ಬಡಿಗತನ, ಬಿದಿರು ಬೆತ್ತದ ಮತ್ತು ಇತರೆ ವೃತ್ತಿಗಳಲ್ಲಿ ತರಬೇತಿ, ನಿರುದ್ಯೋಗಿ ಯುವಕರಿಗೆ ಉಚಿತ ಉಪಕರಣಗಳ ವಿತರಣೆ ಮೇದ ಪಂಗಡದವರಿಗೆ ಗುಡಿಕೈಗಾರಿಕೆಗಳನ್ನು ಸ್ಥಾಪಿಸಲು ಲಿವಿಂಗ್‌ಕಮ್ ವರ್ಕ್‌ಶೆಡ್‌ಗಳನ್ನು ನಿರ್ಮಿಸಲು ಸಹಾಯಧನ ಮಂಜೂರಾತಿ ಈ ಸೌಲಭ್ಯಗಳೆಲ್ಲವನ್ನೂ ಮೇದರು ಪಡೆದರು. ಆದರೆ ಮೇದಾರಿಕೆ ಹೊರತಾದ ಪರ್ಯಾಯ ವೃತ್ತಿ ಕಸುಬುಗಳನ್ನು ಯಾರು ಮುಂದುವರೆಸಿಕೊಂಡು ಹೋಗಲಿಲ್ಲ. ಕೇವಲ 'ತರಬೇತಿಗಾಗಿ ತರಬೇತಿ'ಯಾಯಿತೇ ಹೊರತು ನಿಷ್ಣಾತ ತರಬೇತಿ ಆಗಲಿಲ್ಲ. ಸರ್ಕಾರದಿಂದ ಉಚಿತವಾಗಿ ನೀಡಿದ ಉಪಕರಣಗಳು ಕಳಪೆಯಾಗಿದ್ದವು.

ನಮಗೆ ನೀಡಿದ ತರಬೇತಿಯ ವೃತ್ತಿಯೂ ಭೀತಿಯಲ್ಲಿರುವುದರಿಂದ, ನಿರಾಶೆಯಿಂದ ಸುಮ್ಮನಾಗಬೇಕಾಯಿತು. ಅಧಿಕಾರಿಗಳೂ ಇದನ್ನು ಗಮನಿಸಲಿಲ್ಲವೆಂದು ವಕ್ತೃಗಳು ತಿಳಿಸುತ್ತಾರೆ. ಲಿವಿಂಗ್ ಕಮ್ ವರ್ಕ್ ಶೆಡ್‌ಗಳನ್ನು ಸುಸಜ್ಜಿತವಾಗಿ ನಿರ್ಮಿಸದೆ ಈ ಸೌಲಭ್ಯವನ್ನು ತಮ್ಮ ತಮ್ಮ ಜಮೀನುಗಳಲ್ಲಿ ನಿರ್ಮಿಸಲಾಗಿದೆ. ಜಮೀನಿನಲ್ಲಿ ಕಟ್ಟಿರುವ ಇಂತಹ ಶೆಡ್‌ಗಳಿಗೆ ವಿದ್ಯುಚ್ಛಕ್ತಿ, ಕಿಟಕಿ, ಬಾಗಿಲುಗಳಿಲ್ಲದ "ಅಪೂರ್ಣಗೊಂಡ ಸ್ಥಾವರ"ಗಳಂತಿವೆ ಎಂದು ಮೇದ ಮುಖಂಡರಾದ ಕೆ.ಅಣ್ಣಪ್ಪನವರು ತಿಳಿಸುತ್ತಾರೆ. ಇನ್ನು ಕೆಲವು ವರ್ಕ್‌ಶೆಡ್‌ಗಳು ಮೂಲಮನೆಗೆ ಅಂಟಿಕೊಂಡೇ ಇದ್ದು, ಅದರಲ್ಲೇ ಮೇದಾರಿಕೆ ನಡೆಸುತ್ತಿರವುದು ಕಂಡುಬಂತು. ಮೇದರ ನೆಲೆಗಳು ಇರುವ ಪ್ರದೇಶದಲ್ಲಿಯೇ ಪ್ರತ್ಯೇಕವಾಗಿ ಸುಸಜ್ಜಿತ ವಿವಿದೋದ್ಧೇಶ ವರ್ಕ್‌ಶೆಡ್ ನಿರ್ಮಿಸಿದಾಗ, ಎಲ್ಲರಿಗೂ ಅನುಕೂಲವಾಗುತ್ತದೆ. ಎಂದು ಮೇದರೆಲ್ಲರ ಅಭಿಪ್ರಾಯವಾಗಿರುವುದು ಸಮೀಕ್ಷೆಯಿಂದ ತಿಳಿದುಬಂದಿದೆ.

ಮೇದ ಯುವತಿಯರಿಗೆ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ಮೂಲಕ ಹೊಲಿಗೆ, (ಎಂಬ್ರಾಯಿಡರಿ), ಅಣಬೆ ಕೃಷಿ, ಸೋಪು ತಯಾರಿಕೆ ಬಗ್ಗೆ ಪ್ರಾತ್ಯಕ್ಷಿಕೆ ಮತ್ತು ತರಬೇತಿ ನೀಡಲಾಗಿದೆ. ಸ್ವದ್ಯೋಗದ ಬಗ್ಗೆ ಆಗಾಗ್ಗೆ ಮಾಹಿತಿ ಶಿಬಿರಗಳು ನಡೆಯುತ್ತಿರುವುದರಿಂದ ಮಹಿಳಾ ಜಾಗೃತಿ ಉಂಟಾಗಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಮೇದ ಮಹಿಳೆಯರು ಸ್ತ್ರೀ-ಶಕ್ತಿ ಯೋಜನೆಯಡಿ ಸಹಾಯಧನ ಪಡೆದಿದ್ದಾರೆ. ತಮ್ಮ ಮಕ್ಕಳಿಗೆ

ಪೌಷ್ಠಿಕ ಆಹಾರ, ಪ್ರಸವ ಪೂರ್ವ ಮತ್ತು ನಂತರ ಆರೋಗ್ಯಕ್ಕೆ ಸಂಬಂಧಿಸಿದ ಹಲವು ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಅಲ್ಲದೆ ಕರ್ನಾಟಕ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ಕೌಶಲ್ಯ ಅಭಿವೃದ್ಧಿಗೆ ವೃತ್ತಿಪರ ತರಬೇತಿಯನ್ನು ಪಡೆದು ತಮ್ಮ ಜೀವನ ಮಟ್ಟದಲ್ಲಿ ಸುಧಾರಣೆಯನ್ನು ಕಂಡುಕೊಳ್ಳುತ್ತಿದ್ದಾರೆ.

ಸಾರ್ವಜನಿಕ, ಕಾಲೇಜು ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಗಳಿಂದ ಮೇದ ಬುಡಕಟ್ಟಿನ ಯುವಕ-ಯುವತಿಯರು ಪಠ್ಯಪುಸ್ತಕ, ಉಚಿತ ಸಮವಸ್ತ್ರ, ವಿದ್ಯಾರ್ಥಿ ವೇತನ, ಮತ್ತಿತರ ಸಾಮಾಗ್ರಿಗಳನ್ನು ಉಚಿತವಾಗಿ ಪಡೆಯುತ್ತಿದ್ದು, ಸಾರ್ವಜನಿಕ ಶಿಕ್ಷಣದಲ್ಲಿ ಹೆಚ್ಚು ವಿದ್ಯಾರ್ಥಿಗಳಿದ್ದು, ತಾಂತ್ರಿಕ ಹಾಗೂ ಕಾಲೇಜು ಶಿಕ್ಷಣಗಳಲ್ಲಿ ಈ ಸಂಖ್ಯೆ ಕಡಿಮೆಯಿದೆ. ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾಭ್ಯಾಸ ಮುಂದುವರೆಸುವ ಮನೋಪ್ರವೃತ್ತಿ ಮೇದರಲ್ಲಿ ಕಡಿಮೆಯೆಂದೇ ಹೇಳಬಹುದು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಪಂಚಾಯತ್‌ರಾಜ್ ಇಂಜನಿಯರಿಂಗ್ ಇಲಾಖೆ ಅಡಿಯಲ್ಲಿ ಎಸ್.ಜಿ.ಆರ್.ವೈ, ಐ.ಆರ್.ಇ.ಪಿ. ಮತ್ತು ಜಿಲ್ಲಾಪಂಚಾಯತ್, ತಾಲೂಕು ಪಂಚಾಯತ್ ಅಭಿವೃದ್ಧಿ ಅನುದಾನದಲ್ಲಿ ಕೆಲವೇ ಮೇದರು ಫಲಾನುಭವಿಗಳಾಗಿರುವುದು ಸಮೀಕ್ಷೆಯಿಂದ ತಿಳಿಯಲಾಗಿದೆ. ಪರಿಶಿಷ್ಟವರ್ಗದ ಕಾಲೋನಿಗಳಿಗೆ ಸಂಪರ್ಕ ರಸ್ತೆ ಮತ್ತು ಸೇತುವೆಗಳ ನಿರ್ಮಾಣ, ಕುಡಿಯುವ ನೀರಿಗಾಗಿ ಕೊಳವೆಬಾವಿ ಯೋಜನೆಯ ಸೌಲಭ್ಯವನ್ನು ನೀಡಲಾಗಿದ್ದು ಇದರ ಸಮರ್ಪಕ ಬಳಕೆಯಾಗುತ್ತಿದೆ.

ಗಿರಿಜನರ ಉಪಯೋಜನೆಯಡಿಯಲ್ಲಿ ಪರಿಶಿಷ್ಟವರ್ಗದ ವಸತಿರಹಿತ ಕುಟುಂಬಗಳಿಗೆ ಅಂಬೇಡ್ಕರ್ ವಸತಿ ಯೋಜನೆಯಡಿ, ಘಟಕ ವೆಚ್ಚ ರೂ ೨೦,೦೦೦ದಲ್ಲಿ ರಾಜೀವಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ ೨ ಮನೆಗಳ ನಿರ್ಮಾಣ ಮಾಡಲಾಗಿದೆ.

ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಪ್ರದೇಶಗಳಲ್ಲಿ ಒಂದಾದ ಚಿಕ್ಕಮಗಳೂರು ಜಿಲ್ಲೆಯಲ್ಲೂ ಗಿರಿಜನ ದೊಡ್ಡ ಪ್ರಮಾಣದ ವಿವಿದೋದ್ದೇಶ ಸಹಕಾರ ಸಂಘಗಳು (ಲ್ಯಾಂಪ್ಸ್) ಕಾರ್ಯನಿರ್ವಹಿಸುತ್ತಿದ್ದು, ಮೂಡಿಗೆರೆ ಹಾಗೂ ನರಸಿಂಹರಾಜಪುರದ ೪೧೦ ಮೇದರು ಲ್ಯಾಂಪ್ಸ್ ಸೊಸೈಟಿಯ ಸದಸ್ಯತ್ವವನ್ನು ಪಡೆದಿದ್ದಾರೆ.

ಲ್ಯಾಂಪ್ಸ್‌ನಿಂದ ಹಲವಾರು ಸವಲತ್ತುಗಳನ್ನು ಪಡೆಯಲಾಗುತ್ತಿದೆ. ಅಲ್ಪಾವಧಿ ಸಾಲವನ್ನು ಕೂಡಾ ಈ ಸಂಘಗಳು ನೀಡುತ್ತಿದ್ದು, ಇದರ ಸೌಲಭ್ಯ ಪಡೆದಿರುವ ಮೇದರು ಸ್ಥಳೀಯ ಲೇವಾದೇವಿದಾರರಿಂದ ಶೋಷಣೆಯಿಂದ ತಪ್ಪಿಸಿಕೊಳ್ಳತ್ತಿದ್ದಾರೆ. ತಾವು ತಯಾರಿಸಿದ ಬಿದಿರಿನ ಬುಟ್ಟಿ, ಮೊರ, ಊದುಬತ್ತಿ ಕಡ್ಡಿ ಇತರೆ ಸಾಮಾಗ್ರಿಗಳನ್ನು ಲ್ಯಾಂಪ್ಸ್ ಸೊಸೈಟಿ ಮೂಲಕ ಮಾರಾಟ ಮಾಡುವ ವ್ಯವಸ್ಥೆಯೂ ಸ್ವಲ್ಪ ದಿನಗಳವರೆಗೆ ನಡೆಯಿತು ಎಂದು ಮೇದ ಮುಖಂಡರು ಹಾಗೂ ಕೊಪ್ಪದಲ್ಲಿರುವ ಲ್ಯಾಂಪ್ಸ್ ಸೊಸೈಟಿಯ ವ್ಯವಸ್ಥಾಪಕರಾದ ಸೀತಾರಾಮ್ ರೈಯವರು ವಿವರಿಸುತ್ತಾರೆ. ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿಯಲ್ಲಿ ಪ್ರತಿ ಜಿಲ್ಲೆಯಲ್ಲಿ

[illegible]

[illegible]

[illegible]

ಪ್ರಥಮ ಬಾರಿಗೆ ಅತ್ಯಂತ ಹೆಚ್ಚು ಅಂಕ ಪಡೆದ ಮೊದಲ ೫ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಅನುಕ್ರಮವಾಗಿ ರೂ.೫,೦೦೦ ಮತ್ತು ರೂ.೧೦,೦೦೦ಗಳ ಪ್ರೋತ್ಸಾಹಧನವನ್ನೂ ಮೇದರ ವಿದ್ಯಾರ್ಥಿಗಳು ಪಡೆದುಕೊಂಡಿರುವುದು ಸಮೀಕ್ಷೆಯಿಂದ ತಿಳಿದುಬಂದಿದೆ.

೨.೪.೬ ಅಭಿವೃದ್ಧಿಯ ಇತರೆ ನೆಲೆಗಳು

ಮೂಲ ವೃತ್ತಿಯನ್ನಾಧರಿಸಿರುವ ಕುಲಕಸುಬಿಗೆ ಇತ್ತೀಚೆಗೆ ಗಂಡಾಂತರ ಒದಗಿರುವುದು ಅನಿವಾರ್ಯವಾಗಿದೆ. ಈ ಗಂಡಾಂತರಕ್ಕೆ ಕುಲಕಸುಬಿನವರು ಹೊಣೆಯೆ? ಬದಲಾವಣೆಯ ಪ್ರಕ್ರಿಯೆಗಳು ತರಬಹುದಾದ ಸಾಧಕ-ಬಾಧಕಗಳನ್ನು ಸೂಕ್ಷ್ಮವಾಗಿ ಅವಲೋಕಿಸಿಲ್ಲದ್ದರ ದುಷ್ಪರಿಣಾಮವಿದು. ವೃತ್ತಿ ಬದುಕಿನ ತಾತ್ವಿಕ ನೆಲೆಗಟ್ಟಿಗೇ ಕೊಡಲಿ ಪೆಟ್ಟು ಬಿದ್ದಾಗ ದೈನಂದಿನ ಜೀವನ ನಿರ್ವಹಣೆಗಾಗಿ ಕುಲಕಸುಬಿನ ಜೊತೆ ಜೊತೆಗೆ ಲಭ್ಯ ಇತರೆ ಉದ್ಯೋಗವನ್ನು ಅವಲಂಬಿಸಿರುವುದನ್ನು ಕಾಣುತ್ತೇವೆ. ೧೭-೧೮ನೇ ಶತಮಾನದಲ್ಲಿ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಈ ಹುಡುಕಾಟ ಪ್ರಕ್ರಿಯೆ ಆರಂಭವಾಯಿತು. ಈಗ ಜಾಗತೀಕರಣದ ಸಂದರ್ಭದಲ್ಲಿ ಮುಕ್ತ ಆರ್ಥಿಕ ಚಟುವಟಿಕೆಗಳಿಂದಾಗಿ ತನ್ನ ಗತಿಯನ್ನು ನಾಗಾಲೋಟದಲ್ಲಿ ಹೆಚ್ಚಿಸಿಕೊಂಡಿದೆ.

ಜೀವನ ನಿರ್ವಹಣೆಗಾಗಿ ಮೇದರು ಇಂದು ಯಾವುದೇ ರೀತಿಯ ಕೆಲಸವನ್ನು ಮಾಡಲು ಸಿದ್ಧರಾಗಿದ್ದಾರೆ. ಇವರು ಮಾಡುವ ಕೆಲಸಗಳು ಪೇಟೆಯ ಪರಿಸರದಲ್ಲಿರುವ ಮೇದರು ಮನೆಗೆ ಸುಣ್ಣ-ಬಣ್ಣ ಹೊಡೆಯುವುದು, ಅಂಗಡಿಗಳಲ್ಲಿ ಸಾಮಾನು ಹೊರುವುದು, ಎತ್ತಿನ ಎಳೆಯುವ ಗಾಡಿಯಲ್ಲಿ ಸಾಮಾನು ಸಾಗಿಸುವುದು, ಆಟೋಗಳನ್ನು ಓಡಿಸುವುದು, ಬಾಡಿಗೆ ಪಡೆದು ಆಟೋ ಓಡಿಸುವುದು, ಕಾರು-ಲಾರಿ ತೊಳೆಯುವುದು, ಬುಟ್ಟಿ ಮಂಕರಿಗಳನ್ನು ಮಾರುವುದು, ಹೊಟೇಲ್‌ಗಳಲ್ಲಿ, ಲಾಡ್ಜ್‌ಗಳಲ್ಲಿ ಕೆಲಸ ಮಾಡುವುದು ಮುಂತಾಗಿ ಮಾಡುತ್ತಿದ್ದಾರೆ.

ಕಲಿತವರು ಅವರಿವರ ಅಂಗಡಿಗಳಲ್ಲಿ ಕೆಲಸ ಮಾಡಿದರೆ, ಕೆಲವರು ಬ್ಯಾಂಕ್ ಸಾಲದಿಂದ ಆಟೋ ತೆಗೆದುಕೊಂಡು ಓಡಿಸುತ್ತಿದ್ದಾರೆ. ಲಾರಿ, ಕಾರು ಓಡಿಸಿ ಬದುಕು ಮಾಡಿದರೆ ಬಡ ಮೇದರ ಪರಿಸ್ಥಿತಿ ಕೂಲಿ ಬಿಟ್ಟು ಬೇರೆಯಿಲ್ಲ. ಕಲಿತ ಕೆಲವರು ಸರ್ಕಾರಿ ಸಣ್ಣಪುಟ್ಟ ಕೆಲಸಗಳಲ್ಲಿದ್ದು, ಉನ್ನತ ಹುದ್ದೆಗಳಲ್ಲಿರುವ ಮೇದರು ಬಹಳ ಕಡಿಮೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು ೭೨ ಮಂದಿ ಸರ್ಕಾರಿ ಉದ್ಯೋಗದಲ್ಲಿದ್ದು ಒಟ್ಟು ಜನಸಂಖ್ಯೆಯ ಶೇ.೩.೮೯ರಷ್ಟಾಗಿದೆ. ಇದರಲ್ಲಿ ಶೇ.೯೦ ಭಾಗ 'ಡಿ' ದರ್ಜೆ ನೌಕರರಿದ್ದು ಉಳಿದವರು ಶೇ.೧೦ ಭಾಗ ಕಾರಕೂನ, ಗಾರ್ಡ್, ವಾಚರ್, ಫಾರೆಸ್ಟರ್, ಹಾಸ್ಟಲ್ ಅಡಿಗೆಯವರು, ಮೇಲ್ವಿಚಾರಕರು, ಉಪತಹಶೀಲ್ದಾರ್, ಉಪನ್ಯಾಸಕರು ಇದ್ದಾರೆ.

ಆರ್ಥಿಕತೆ

ಒಂದು ಸಮುದಾಯ ಆರ್ಥಿಕ ಸ್ಥಿತಿಯ ಆಧಾರದ ಮೇಲೆ ಅಂತಸ್ತನ್ನು ನಿರ್ಧರಿಸಬಹುದು. ಅಭಿವೃದ್ಧಿಯ ಬೆಳವಣಿಗೆಗೆ ಅನೇಕ ಅಂಶಗಳ ಜೊತೆಗೆ ಪ್ರಮುಖ ಅಂಶ ಆರ್ಥಿಕ ವ್ಯವಸ್ಥೆಯಾಗಿದ್ದು, ಇಲ್ಲದಿದ್ದರೆ ಆರ್ಥಿಕ ದುಸ್ಥಿತಿಯಲ್ಲಿ ಸಮುದಾಯವನ್ನು ಗುರ್ತಿಸಲಾಗುತ್ತದೆ. ಸಾಮಾಜಿಕ ಚಲನೆಯಲ್ಲಿ ಆರ್ಥಿಕಾಂಶಗಳು ಮಹತ್ವದ ಪಾತ್ರ ವಹಿಸುವುದರಿಂದ ಅವರ ಅಂತಸ್ತು-ಪಾತ್ರಗಳಿಗೆ ಪ್ರಭಾವಿಸುತ್ತದೆ.

ಮೂಲತಃ ಮೇದರು ಸಾಂಪ್ರದಾಯಿಕ ಮೇದಾರಿಕೆಯನ್ನು ಮಾಡುತ್ತ ಬಿದಿರಿಗಾಗಿ ಅಲೆಅಲೆಮಾರಿಗಳಾಗಿದ್ದವರು. ಕಾಲ ಕ್ರಮೇಣ ಒಂದೆಡೆ ನೆಲೆಯೂರಲಾರಂಭಿಸಿದರು. ನೆಲೆ ನಿಂತ ಮೇಲೆ ಭೂಸುಧಾರಣೆ, ದರಖಾಸ್ತು ಖರೀದಿಯಿಂದಾಗಿ ದೊರೆತ ಸಣ್ಣ ಭೂಹಿಡುವಳಿಗಳನ್ನು ಉಳುಮೆಮಾಡಿ ಮೇಕೆ, ಕೋಳಿಗಳನ್ನು ಸಾಕುತ್ತಿದ್ದರು. ಆದಾಯದ ಮೂಲಗಳಾಗಿ ಮೂಲ ವೃತ್ತಿಯಿಂದ ಶೇ.೮೯.೬೧ ಜನರು ಜೀವನ ನಿರ್ವಹಿಸುತ್ತಿದ್ದಾರೆ. ಬಿದಿರಿನ ವಸ್ತುಗಳ ವ್ಯಾಪಾರ ಹಾಗೂ ಸಣ್ಣಪುಟ್ಟ ಅಂಗಡಿಗಳಿಂದ ಶೇ.೦೬.೦೬, ವ್ಯವಸಾಯದಿಂದ ಶೇ.೨೮.೩೫ ಜನರು ಆರ್ಥಿಕ ಮೂಲವನ್ನು ಕಂಡುಕೊಂಡಿದ್ದಾರೆ. ಶೇ.೯.೬೩ರಷ್ಟು ಖಾಸಗಿ ಕೆಲಸಗಳನ್ನು, ಶೇ.೩.೮೯%ರಷ್ಟು ಸರ್ಕಾರಿ ನೌಕರರಿದ್ದು ಆದಾಯದ ಮೂಲ ಹೊಂದಿದ್ದಾರೆ. ಶೇ.೮.೮೨%ರಷ್ಟು ಮೇದರು ಕೂಲಿ ಕೆಲಸ, ಶೇ.೧೩.೬೯ರಷ್ಟು ಹೈನುಗಾರಿಕೆ, ಇದರಲ್ಲಿ ಬಿಡಿಬಿಡಿ ಕೋಳಿ ಸಾಕಾಣಿಕೆ ಜಾಸ್ತಿಯಿದ್ದು ಆಡು-ಮೇಕೆಗಳನ್ನು ಕೇವಲ ೪ ಕುಟುಂಬಗಳು ಹೊಂದಿವೆ. ಹಸು, ಎಮ್ಮೆಯಿಂದ ಹಾಲುತ್ಪನ್ನ ಮಾಡುವ ಕೃಷಿ ಮೂಲದವರನ್ನೂ ಕಾಣಬಹುದಾಗಿದೆ. ಈ ಮೇಲಿನ ಮೂಲಗಳಲ್ಲದೆ ಶೇ.೬.೫೪ರಷ್ಟು ಜನತೆ ಇತರೆ ಮೂಲಗಳಿಂದ ಆದಾಯ ಪಡೆಯುತ್ತಿದ್ದಾರೆ. ಇವರು ಆಟೋರಿಕ್ಷಾ ಓಡಿಸುವುದು, ಹಮಾಲಿ ಕೆಲಸ, ಪೇಂಟಿಂಗ್, ಪತ್ರಿಕಾ ವರದಿಗಾರರು, ಪತ್ರಿಕೆ ಸಂಪಾದಕರು, ಚಿಕ್ಕಪುಟ್ಟ ವ್ಯಾಪಾರ (ಮೀನು)ಗಳನ್ನು ಮಾರುವುದರ ಮೂಲಕ ತಮ್ಮ ತಮ್ಮ ಆದಾಯದ ಮೂಲಗಳನ್ನು ಕಂಡುಕೊಂಡಿದ್ದಾರೆ.

ಹಾಗೆಯೇ ಮೇದರ ಕುಟುಂಬದ ಮಾಸಿಕ ಆದಾಯದ ಮಾಹಿತಿಯನ್ನು ಅವಲೋಕಿಸಿದಾಗ ರೂ. ೨,೦೦೦ಕ್ಕಿಂತ ಕಡಿಮೆ ಆದಾಯವನ್ನು ಶೇ.೬೩.೨೭ ಕುಟುಂಬಗಳು ಹೊಂದಿರುವುದನ್ನು ಗಮನಿಸಿದಾಗ ಅತ್ಯಂತ ಕಡಿಮೆ ಆದಾಯದ ಕುಟುಂಬಗಳು ಮೇದರದ್ದಾಗಿವೆ. ರೂ. ೨,೦೦೧ರಿಂದ ೪,೦೦೦ ರೂಗಳೊಳಗೆ ಶೇ.೭.೨೩ ಕುಟುಂಬಗಳು, ರೂ. ೪,೦೦೧ರಿಂದ ೬,೦೦೦ ರೂಗಳೊಳಗೆ ಶೇ.೪.೦೨ ಕುಟುಂಬಗಳಿವೆ. ಈ ಆದಾಯ ಕುಟುಂಬದಲ್ಲಿ ನಿವೃತ್ತಿದಾರರು, ಪಿಂಚಣಿದಾರರು, ೪ ಎಕರೆಗಿಂತ ಹೆಚ್ಚಿನ ಜಮೀನುಳ್ಳವರು ಅವಿಭಕ್ತ ಕುಟುಂಬದವರಾಗಿದ್ದಾರೆ. ರೂ. ೬,೦೦೧ರಿಂದ ೮,೦೦೦ರೂಗಳ ಆದಾಯದವರು ಶೇ.೩.೭೫ರಷ್ಟಿದ್ದಾರೆ.

ರೂ. ೮,೦೦೧ರಿಂದ ೧೦,೦೦೦ರೂಗಳವರೆಗೆ ಶೇ.೧೭.೧೫ ಕುಟುಂಬಗಳು, ರೂ. ೧೦,೦೦೦ಕ್ಕಿಂತ ಹೆಚ್ಚಿನ ಕುಟುಂಗಳು ಶೇ.೪.೫೫ರಷ್ಟು ಆದಾಯವನ್ನು ಹೊಂದಿವೆ. ಶೇ.೧೭.೧೫ ಹಾಗೂ ಶೇ.೪.೫೫ರಷ್ಟು ಆದಾಯ ಕುಟುಂಬಗಳು ಬಹುತೇಕ ಸರ್ಕಾರಿ ನೌಕರರ ಕುಟುಂಬಗಳಾಗಿವೆ. ಒಟ್ಟಾರೆ ಮೇದ ಕುಟುಂಬವಾರು ಆದಾಯವನ್ನು ಗಮನಿಸಿದಾಗ ಕುಲಕಸುನ್ನು ಮಾಡುತ್ತಿರುವ ಮೇದರ ಕುಟುಂಬಗಳು ಹೆಚ್ಚಿದ್ದು ಸರ್ಕಾರಿ ನೌಕರರ ಪಟ್ಟಣ, ನಗರ ಬದುಕಿಗೂ ಈ ಆದಾಯ ಬಹಳ ಕಡಿಮೆಯೆಂದೇ ನಿರ್ಣಹಿಸಬಹುದಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಮೇದರ ಕುಟುಂಬಗಳ ವಾರ್ಷಿಕ ಆದಾಯದ ಮಾಹಿತಿಗಳನ್ನು ಈ ಕೆಳಕಂಡಂತೆ ಪಡೆಯಲಾಗಿದೆ. ವಾರ್ಷಿಕ ರೂ. ೧೦,೦೦೦ದಿಂದ ರೂ. ೨೦,೦೦೦ ಆದಾಯವಿರುವ ಶೇ.೬೧.೯೩ ಕುಟುಂಬಗಳಿದ್ದು ತಮ್ಮ ಆದಾಯದ ಮಿತಿ ಅತ್ಯಂತ ಕಡಿಮೆಯಿರುವುದು ತಿಳಿದುಬರುತ್ತದೆ. ರೂ. ೨೦,೦೦೦ದಿಂದ ರೂ. ೩೦,೦೦೦ ಆದಾಯದ ಶೇ.೭.೨೩ ಕುಟುಂಬಗಳು ರೂ. ೩೦,೦೦೦ದಿಂದ ೪೦,೦೦೦ ಆದಾಯದವರು ಶೇ.೪.೨೮%, ರೂ. ೪೦,೦೦೦ ರೂ. ೫೦,೦೦೦ ಆದಾಯದವರು ಶೇ.೨.೯೪, ರೂ. ೫೦,೦೦೦ ರೂ. ೬೦,೦೦೦ ಆದಾಯದ ಶೇ.೨.೧೪ ಕುಟುಂಬಗಳು, ರೂ. ೭೦,೦೦೦ದಿಂದ ರೂ. ೮೦,೦೦೦ ಆದಾಯದ ಶೇ.೪.೨೮ ಕುಟುಂಬಗಳು, ರೂ. ೯೦,೦೦೦ದಿಂದ ರೂ. ೧೦,೦೦೦ ಆದಾಯದ ಶೇ.೧೦.೯೯ ಕುಟುಂಬಗಳು, ೧೦,೦೦೦ಕ್ಕಿಂತ ಹೆಚ್ಚಿನ ಶೇ.೦.೮೦ ಕುಟುಂಬಗಳು ಆದಾಯವನ್ನು ಹೊಂದಿದ್ದು, ಮಾಸಿಕ ಹಾಗೂ ವಾರ್ಷಿಕ ಆದಾಯದ ಮಾಹಿತಿಯನ್ನು ಗಮನಿಸಿದಾಗ ಮೇದರ ಆರ್ಥಿಕ ಸ್ಥಿತಿ ಅಷ್ಟಾಗಿ ಉತ್ತಮವಿಲ್ಲದಿರುವುದು ಸಂಶೋಧನೆಯಿಂದ ದೃಢಪಟ್ಟಿದೆ.

(ಹೆಚ್ಚಿನ ಮಾಹಿತಿಗಾಗಿ ಕೋಷ್ಟಕ-೧೫ನ್ನು ಗಮನಿಸುವುದು)

ಹಣಕಾಸಿನ ವಿಲೇವಾರಿ

ಒಂದು ಕುಟುಂಬದ ನಿರ್ವಹಣೆಗೆ ಹಲವು ಮುಖಗಳಿರುತ್ತವೆ. ಇದರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ, ವೈದ್ಯಕೀಯ, ಕೌಟುಂಬಿಕ, ಶೈಕ್ಷಣಿಕ ಇತ್ಯಾದಿ. ಇವೆಲ್ಲವುಗಳನ್ನು ಕುಟುಂಬದ ಯಜಮಾನ ಸೂಕ್ಷ್ಮ ಲೆಕ್ಕಾಚಾರದ ಮೂಲಕ ನಿರ್ವಹಿಸಬೇಕು. ಬದುಕಿಗೆ ಪೂರಕವೆನಿಸುವ ಎಲ್ಲಾ ಮಜಲುಗಳಿಗೂ ಪ್ರಾಶಸ್ತ್ಯ ನೀಡಿದರೂ ಯಾವುದಕ್ಕೆ ಹೆಚ್ಚು ಯಾವುದಕ್ಕೆ ಕಡಿಮೆ ಎಂಬ ನಿರ್ಣಯವನ್ನು ಆತ ಮತ್ತು ಕುಟುಂಬದ ಸದಸ್ಯರೊಂದಿಗೆ ಚರ್ಚಿಸಿ ತೀರ್ಮಾನಿಸಬೇಕು. ಭಾರತೀಯ ಕುಟುಂಬಗಳ ಒಟ್ಟು ಸ್ಥಿತಿ ಗಮನಿಸಿದರೆ ಆದಾಯಕ್ಕಿಂತ ಖರ್ಚು ಹೆಚ್ಚಿರುವುದು ಎಲ್ಲಾ ಅಧ್ಯಯನಗಳಲ್ಲಿ ಕಾಣುತ್ತೇವೆ. ಹಾಗೆಯೇ ನನ್ನ ಅಧ್ಯಯನ ಕ್ಷೇತ್ರದ ಮೇದರೂ ಸಾಲ ಮಾಡಲು ವಿವಿಧ ಕಾರಣಗಳನ್ನು ಈ ಕೆಳಕಂಡಂತೆ ಸೂಚಿಸಿದ್ದಾರೆ. ಇವು ಖರ್ಚಿನ ಬಾಬ್ತುಗಳೇ ಆಗಿವೆ.

ವಿವಾಹದ ಖರ್ಚಿಗಾಗಿ ಶೇ.೩೧.೬೩ ಸೂಚನಾದಾರರು ತಿಳಿಸುತ್ತಾರೆ. ವಿವಾಹ ವಿಧಿ

ಸಂಪ್ರದಾಯದಂತೆಯೇ ನಡೆಯಲು, ವಿವಾಹ ಖರ್ಚು ಸರಿದೂಗಿಸಲು ಸಾಲ ಇಲ್ಲವೇ ಈ ಪ್ರಮಾಣದ ಖರ್ಚನ್ನು ಮಾಡುವರು. ವರದಕ್ಷಿಣೆ ಕೊಡುವ ಸಲುವಾಗಿ ಶೇ.೧೯.೫೭ ಮನೆ ಕಟ್ಟಲು/ಕೊಳ್ಳಲು/ರಿಪೇರಿ ಇತ್ಯಾದಿಗಳಿಗಾಗಿ ಶೇ.೯.೬೫, ಜಮೀನು/ಸೈಟುಕೊಳ್ಳಲು ಶೇ.೬.೪೩ರಷ್ಟು, ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶೇ.೧೭.೪೨, ಅನಾರೋಗ್ಯ ಖರ್ಚಿಗಾಗಿ ಶೇ.೧೨.೮೬ರಷ್ಟು, ಹಬ್ಬ-ಹರಿದಿನಗಳ ಆಚರಣೆಗಾಗಿ ಶೇ.೮.೫೭ರಷ್ಟು ಖರ್ಚು, ಉತ್ತರ ಕ್ರಿಯೆಗಾಗಿ ಶೇ.೫.೮೯ರಷ್ಟು ಖರ್ಚು, ಸೀಮಂತ/ನಾಮಕರಣಕ್ಕಾಗಿ ಶೇ.೧೫.೨೮ರಷ್ಟು, ಕೃಷಿ ಅಭಿವೃದ್ಧಿಗಾಗಿ ಶೇ.೧೨.೮೬ರಷ್ಟು ಖರ್ಚು ಮಾಡುವರು. ವಾಹನ ಖರೀದಿಗಾಗಿ ಶೇ.೦.೮೦ರಷ್ಟು, ಪಶುಸಂಗೋಪನೆಗಾಗಿ ಶೇ.೫.೬೩ರಷ್ಟು ಖರ್ಚನ್ನು ಮಾಡುವರು.

ಹಿಂದೆ ಮಾಡಿರುವ ಸಾಲ ತೀರಿಸಲು ಪುನಃ ಹೊಸ ಸಾಲಕ್ಕಾಗಿ ಶೇ.೨೦.೬೪ರಷ್ಟು, ಹಾಗೂ ಬೆಲೆ ಬಾಳುವ ಗೃಹಪಯೋಗಿ ವಸ್ತು ಖರೀದಿಸಲು (ಟಿವಿ, ಅಲ್ಮೇರಾ, ಮಂಚ, ಫ್ರಿಜ್, ವಾಶಿಂಗ್‌ಮಶಿನ್, ಬಂಗಾರ ಇತ್ಯಾದಿ) ಶೇ.೮.೩೧ರಷ್ಟು ಖರ್ಚಿನ ಬಾಬ್ತುಗಳನ್ನು ಕಾಣಬಹುದು. ಮದುವೆ ಮತ್ತು ವರದಕ್ಷಿಣೆಗಾಗಿ ಶೇ.೫೦ರಷ್ಟು ಖರ್ಚು ಮಾಡುವುದು ಗಮನಿಸಿದರೆ ಆರ್ಥಿಕವಾಗಿ ಬಡವರಾಗಿರುವ ಮೇದರು ಮದುವೆಯನ್ನು ನಿರೀಕ್ಷಿಸಿ ಹೆಚ್ಚಿನ ಹಣವನ್ನು ಸಂಗ್ರಹ ಮಾಡಲು ಅಸಾಧ್ಯವಾಗಿರುವುದನ್ನು ತಿಳಿಸುತ್ತದೆ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶೇ.೧೭.೪೨ರಷ್ಟು ಸಾಲ ಮಾಡವ ಪ್ರವೃತ್ತಿ ನೋಡಿದರೆ ಸಾಲ ಮಾಡಿಯಾದರೂ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸಬೇಕೆನ್ನುವ ಮನೋಭಾವ ತಿಳಿಸುತ್ತದೆ. ಸಾಲ ತೀರಸಲು ಪುನಃ ಸಾಲ ಮಾಡುವ ಅಭಿಪ್ರಾಯವನ್ನು ಶೇ.೨೦.೬೪ ಮೇದರು ತಿಳಿಸಿರುವುದು ಅವರ ಆರ್ಥಿಕ ಜರ್ಜರತೆಯನ್ನು ಸರಳವಾಗಿ ಅರ್ಥಮಾಡಿಕೊಳ್ಳಬಹುದಾಗಿದೆ.

ಸಾಲವನ್ನು ಪಡೆದಿರುವ ಮೂಲಗಳನ್ನು ಈ ಕೆಳಕಂಡಂತೆ ಗಮನಿಸಬಹುದು. ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಶೇ.೧೦.೪೫ ಕುಟುಂಬಗಳು, ಖಾಸಗಿ ಬ್ಯಾಂಕ್‌ಗಳಲ್ಲಿ ಶೇ.೧೯.೩೦, ಸಹಕಾರ ಬ್ಯಾಂಕ್‌ಗಳಲ್ಲಿ ಶೇ.೩೪.೩೧, ಸ್ವ-ಸಹಾಯ ಸಂಘಗಳಲ್ಲಿ ಶೇ.೫೮.೪೪ ಕುಟುಂಬಗಳು ಸಾಲ ಪಡೆದಿವೆ. ಇಲ್ಲಿ ನಿಗಧಿತ ಬಡ್ಡಿದರವಿರುತ್ತದೆ. 'ಮೈಕ್ರೋ ಫೈನ್ಯಾಸಿಂಗ್' ವ್ಯವಸ್ಥೆ ಸ್ವ-ಸಹಾಯ ಸಂಘಗಳು ಮಾಡುತ್ತಿರುವುದರಿಂದ ಶೇ.೫೮.೪೪ ಕುಟುಂಬಗಳು ಸಾಲ ಪಡೆದಿವೆ. ಲೇವಾದೇವಿಗಾರರು/ಗಿರವಿಯವರಿಂದ ಶೇ.೧೬.೬೨ ಸಾಲ ನೆರವು ಪಡೆದಿದ್ದು ಇದು ಅತ್ಯಂತ ಶೋಚನೀಯ. ಇಲ್ಲಿ ತಾತ್ಕಾಲಿಕವಾಗಿ ಸಾಲ ಪಡೆಯುವೆವು ಎಂದು ಸೂಚನದಾರರು ತಿಳಿಸಿದ್ದಾರೆ. ನೆರೆಹೊರೆಯವರಿಂದ ಶೇ.೧೧.೨೬, ಬಂಧುಗಳಿಂದ ಶೇ.೫.೮೯, ಕೆಲಸ ಮಾಡುವಲ್ಲಿ ಮಾಲೀಕರಿಂದ ಶೇ.೯.೩೮, ಸ್ನೇಹಿತರುಗಳಿಂದ ಶೇ.೧೧.೭೯, ಲ್ಯಾಂಪ್ಸ್ ಸೊಸೈಟಿ (ಮೂಡಿಗೆರೆ, ಶೃಂಗೇರಿ ಕ್ಷೇತ್ರ)ಗಳಿಂದ ಶೇ.೪೮.೨೫ ಹಾಗೂ ರಬ್ಬರ್ ಬೋರ್ಡ್ ಮೂಲಕ ಶೇ.೧.೦೭ ಕುಟುಂಬಗಳು ಸಾಲ ಪಡೆದಿವೆ. ಸಹಕಾರ ಸಂಘದ ಲ್ಯಾಂಪ್ಸ್ ಸೊಸೈಟಿ

[illegible]

(ಬುಡಕಟ್ಟುಗಳಿಗಾಗೇ ಇರುವುದು) ಹಾಗೂ ಸ್ವ-ಸಹಾಯ ಸಂಘಗಳಿಂದ ಹೆಚ್ಚಿನ ಸಾಲ ಸೌಲಭ್ಯ ಪಡೆದಿರುವುದು ಕಾಣಬಹುದು. ಹೆಚ್ಚಿನ ಸಾಲ ಅನುತ್ಪಾದಕತೆಗೆ ಬಳಕೆಯಾಗಿದ್ದು ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸಲು ಬಳಸಿರುವುದು ಅಧ್ಯಯನದಿಂದ ತಿಳಿದು ಬರುತ್ತದೆ.

ಮೇಲಿನ ಸಾಲವನ್ನು ತೀರಿಸುವ ಬಗ್ಗೆ ಪ್ರಶ್ನಿಸಿದಾಗ ಈ ಕೆಳಕಂಡಂತೆ ಮಾಹಿತಿಗಳನ್ನು ನೀಡಿರುವರು. ದುಡಿಮೆಯಿಂದ ಶೇ.೧೦೦ರಷ್ಟು ಕುಟುಂಬಗಳು ಸಾಲ ತೀರಿಸುವುದಾಗಿ ತಿಳಿಸಿರುತ್ತಾರೆ. ಅಂದರೆ ದುಡಿಮೆಯೊಂದೇ ಇವರಿಗಿರುವ ಏಕೈಕ ಮೂಲಾಧಾರ ಎಂದು ತಿಳಿಯಬಹುದು. ಬೆಲೆಬಾಳುವ ವಸ್ತುಗಳನ್ನು ಮಾರುವುದರಿಂದ ಎಂದು ಶೇ.೪೮.೫೨ ಕುಟುಂಬದವರು ತಿಳಿಸಿದರೆ, ಶೇ.೧೭.೪೨ ಕುಟುಂಬದವರು ಜಮೀನು ಅಥವ ಮನೆಯನ್ನು ಮಾರುವುದೆಂದು ತಿಳಿಸುತ್ತಾರೆ. ಶೇ.೮೫.೨೫ ಜನರು ಸಾಲವನ್ನು ಮಾಡಲೇ ಬೇಕಾಗುತ್ತದೆ ಎಂದು ತಿಳಿಸಿದರು.

ಮೇದರು ಸುಮಾರು ೪೦ ವರ್ಷಗಳ ಹಿಂದೆ ಸಾಲ ಮಾಡಲು ಹೆದರುತ್ತಿದ್ದರಂತೆ, ಅಲ್ಲದೆ ಆಗಿನ ಹಿರಿಯ ತಲೆಮಾರಿನವರು ಸರ್ಕಾರಿ ಸೌಲಭ್ಯವನ್ನು ಪಡೆದುಕೊಳ್ಳಲು ಹಿಂಜರಿಯುತ್ತಿದ್ದರು. ಅರೆ! ಸರ್ಕಾರದಿಂದ 'ಸಬ್ಸಿಡಿ, ಪುಕ್ಸಟ್ಟೆ ಕೊಡ್ತಾರಂದ್ರೆ ಸುಮ್ನೇನ' ನಾಳೆ ವತಾರೆ ಮನೆ ಜಪ್ತಿಗೆ ಬರ್ತಾರೆ, ಸಾಲ ತಗೋಳ್ಳದು ಹುಡುಗಾಟ ಅಲ್ಲ. ಇದ್ದಿದ್ರಲ್ಲೇ ಸುಖ ಪಡೋಣ, ಹಾಸಿಗೆ ಇದ್ದಷ್ಟು ಕಾಲು ಚಾಚೋಣ ಎಂದು ನರಸಿಂಹರಾಜಪುರದ ಸಿದ್ಧಪ್ಪ, ಮಂಜಪ್ಪನವರ ತಂದೆ ಲೋಕಪ್ಪ ಹಾಗೂ ದೊಡ್ಡಪ್ಪ ಕರಿಯಪ್ಪನವರು ಹೇಳುತ್ತಿದ್ದ ಮಾತನ್ನು ನೆನಪಿಸುತ್ತಾರೆ.

ಆದರೆ ಮೇದರು ಅನಿವಾರ್ಯವಾಗಿ ಸಾಲ ಮಾಡುತ್ತಾರೆ. ತಮ್ಮ ಸಾಮರ್ಥ್ಯ, ಬೆಳೆಯುವ ಬೆಳೆ ಇತ್ಯಾದಿಗಳ ಮೇಲಿನ ಭರವಸೆಯೊಂದಿಗೆ ಸಾಲಮಾಡಿ ಅದರಂತೆ ಸಾಲ ತೀರಿಸುತ್ತಾರೆ. ಯಾರಾದರೂ ಸಾಲಗಾರರು ಮನೆಯ ಹತ್ತಿರ ಬಂದರೆ ಇರಿಸು-ಮುರಿಸಿಗೆ ಒಳಗಾಗುತ್ತಾರೆ. ಹೇಗಾದರು ಮಾಡಿ ಸಾಲ ತೀರಿಸಲು ತೀವ್ರ ಪ್ರಯತ್ನ ಮಾಡುತ್ತಾರೆ. **(ಹೆಚ್ಚಿನ ಮಾಹಿತಿಗಾಗಿ ಕೋಷ್ಟಕ-೧೭ನ್ನು ಗಮನಿಸುವುದು)**

ಉಳಿತಾಯ

ಆದಾಯ ಕಡಿಮೆಯಿದ್ದರೂ ಉಳಿತಾಯ ಮಾಡಬೇಕೆಂಬ ಮನೋಭಾವ ಮೇದರಲ್ಲಿದೆ. ಯಾವ ಉದ್ದೇಶಕ್ಕಾಗಿ ಉಳಿತಾಯ ಮಾಡುತ್ತೀರಿ ಎಂದು ಕೇಳಿದರೆ ಕಾಯಿಲೆ-ಕಸಾಲೆ, ಹಬ್ಬ-ಹರಿದಿನ, ಊರು-ಕೇರಿ, ಬಂಗಾರ, ಜಾತ್ರೆ-ಉತ್ಸವ, ಸ್ಕೂಲ್ ಫೀಜಿಗೆ ಇತರೆ ಖರ್ಚು-ವೆಚ್ಚಗಳಿಗೆ ಎನ್ನುತ್ತಾರೆ. ಉಳಿತಾಯದ ಮಾಹಿತಿ ಕೇಳಿದಾಗ ಈ ಕೆಳಕಂಡ ಕಡೆ ಉಳಿತಾಯ ಮಾಡುವುದಾಗಿ ತಿಳಿಸಿದ್ದಾರೆ. ಶೇ.೩೫.೩೮ ಕುಟುಂಬಗಳು ಬ್ಯಾಂಕ್, ಶೇ.೯.೬೫ರಷ್ಟು

ಅಂಚೆಕಛೇರಿ, ಶೇ.೧೬.೩೫ರಷ್ಟು ಸಣ್ಣ ಉಳಿತಾಯ ಪತ್ರ, ಶೇ.೪೨.೩೫ರಷ್ಟು ಜೀವವಿಮೆ, ಶೇ.೨೧.೧೭ರಷ್ಟು ಭವಿಷ್ಯ ನಿಧಿ, ಶೇ.೦.೮೦ರಷ್ಟು ಷೇರು ಪತ್ರ, ಶೇ.೧೭.೯೬ರಷ್ಟು ಚೀಟಿ/ಫಂಡ್, ಶೇ.೫೬.೮೩ರಷ್ಟು ಸ್ವ–ಸಹಾಯ ಸಂಘಗಳು, ಶೇ.೧೭.೧೫ರಷ್ಟು ಕುಟುಂಗಳು ಮನೆಯಲ್ಲಿಯೇ ಕೂಡಿಡುವುದಾಗಿ ತಿಳಿಸಿದರು. ಹೆಚ್ಚಿನ ಕುಟುಂಬಗಳು ಉಳಿತಾಯ ಮಾಡಲು ಆಗದಿರುವುದಕ್ಕೆ ಬಡತನ ಕಾರಣವೆಂದು ಅಧ್ಯಯನದಿಂದ ತಿಳಿದುಬರುತ್ತದೆ.

೨.೫ ರಾಜಕೀಯ ಜೀವನ

ಬ್ರಿಟೀಷರು ಭಾರತಕ್ಕೆ ತಂದ ಅನೇಕ ಮೌಲ್ಯಗಳಲ್ಲಿ ರಾಜಕೀಯ ಮೌಲ್ಯ ಹಾಗೂ ವ್ಯವಸ್ಥೆ ಅತ್ಯಂತ ಮಹತ್ವದ್ದಾಗಿದೆ. ಅವರ ಆಗಮನಕ್ಕಿಂತ ಮೊದಲೇ ಅಸ್ತಿತ್ವದಲ್ಲಿದ್ದ ಸ್ಥಳೀಯ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ವ್ಯವಸ್ಥೆಗಳು ಬದಲಾವಣೆಯ ಪ್ರಕ್ರಿಯೆಯಲ್ಲಿ ಸಿಲುಕಿಕೊಂಡವು. ಮೇದ ಜನಾಂಗದ ವಿಷಯದಲ್ಲಿ ಆದ ರಾಜಕೀಯ ಬದಲಾವಣೆಯ ಒಂದು ಪ್ರಧಾನ ಆಯಾಮವಾದ ರಾಜಕೀಯ ಅರಿವು ಹಾಗೂ ರಾಜಕೀಯ ಪ್ರಜ್ಞೆಯ ಅಧ್ಯಯನ ಪ್ರಮುಖವಾದುದು. ಗುಡ್ಡಗಾಡು ಅತ್ಯಂತ ಹಿಂದುಳಿದ ಹಳ್ಳಿಗಳಿಗೆ ಸಮೀಪ, ಗುಡ್ಡದ ತಪ್ಪಲು ಪ್ರದೇಶದಲ್ಲಿ ಅನಿವಾರ್ಯವಾಗಿ ಬದುಕುತ್ತಿದ್ದ ಈ ಬುಡಕಟ್ಟಿನ ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಅಭಿವೃದ್ಧಿ ಕುಂಟಿತವಾಯಿತು.

ಈ ಅಧ್ಯಯನದಿಂದ ಮೇದರ ರಾಜಕೀಯ ಜೀವನವನ್ನು ಗ್ರಹಿಸಲು ಸಾಧ್ಯವಾಗಿದೆ. ಕರ್ನಾಟಕ ರಾಜ್ಯಾದ್ಯಂತ ನೆಲೆಸಿರುವ ಮೇದರ ರಾಜಕೀಯ ಜೀವನದ ಬಗ್ಗೆ ಅಲ್ಪ ಸ್ವಲ್ಪ ಮಾಹಿತಿ ಲಭ್ಯವಿದ್ದರೂ, ಅದನ್ನು ಸಮಗ್ರವಾಗಿ ಸಂಶೋಧನೆಗೆ ಬಳಸಿಕೊಳ್ಳಲು ಸಾಧ್ಯವಿರಲಿಲ್ಲ. ಕಾರಣವೇಂದರೆ ಮಾಹಿತಿಯಲ್ಲಿಯ ನಿಖರತೆಯ ಕೊರತೆ. ಇದುವರೆಗೆ ಮೇದರ ಬಗ್ಗೆ ಸೀಮಿತ ಅಧ್ಯಯನಗಳಾಗಿದ್ದು ಮೇದರ ರಾಜಕೀಯ ಜೀವನದ ಸಮಗ್ರ ಅಧ್ಯಯನ ಮುಂದಿನ ದಿನಗಳಲ್ಲಿ ನಡೆಯಬೇಕಿದೆ. ರಾಜ್ಯದ ರಾಜಕೀಯ ವ್ಯವಹಾರಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಪಾಲ್ಗೊಳ್ಳಲು ಹೊಂದಿರುವ ಹಕ್ಕುಗಳೇ ರಾಜಕೀಯ ಹಕ್ಕುಗಳು. ಅಂದರೆ ಮತ ನೀಡುವ, ಸ್ಪರ್ಧಿಸುವ, ಸಾರ್ವಜನಿಕ ಹುದ್ದೆಗಳನ್ನು ಹೊಂದುವ, ಮನವಿಯನ್ನು ಮಾಡುವ ಹಕ್ಕುಗಳಾಗಿವೆ. ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಸಂವಿಧಾನ ಇವುಗಳನ್ನು ತನ್ನ ಪ್ರಜೆಗಳಿಗೆ ನೀಡಿದೆ. ಇವುಗಳ ಉದ್ದೇಶ ಸಮಾಜದ ಕ್ಷೇಮಾಭ್ಯುದಯ. ಎಲ್ಲರ ಕಲ್ಯಾಣ. ಇದು ಅತ್ಯಧಿಕ ಜನರ, ಅತ್ಯಧಿಕ ಸುಖಕ್ಕಾಗಿ ಇರುವಂತಹದ್ದು. ಇವು ಸಾಮಾಜಿಕ ಒಳಿತಿನ ಪರಿಸ್ಥಿತಿಗಳಾಗಿವೆ. ಲಾಸ್ಕಿಯವರ ದೃಷ್ಟಿಯಲ್ಲಿ ಸಾಮಾಜಿಕ ಕಲ್ಯಾಣವೇ ಹಕ್ಕುಗಳನ್ನು ನಿರ್ಧರಿಸುವ ಪರೀಕ್ಷೆ. ಹಕ್ಕು ಉಪಯುಕ್ತವಾಗಿದೆ ಎಂಬುದು ಅದು ರಾಜ್ಯದ ಎಲ್ಲ ಸದಸ್ಯರಿಗೆ ತೃಪ್ತಿಯಾದಾಗ ಸ್ಪಷ್ಟವಾಗುತ್ತದೆ.

[illegible]

೨.೫.೧. ಮೇದ ಬುಡಕಟ್ಟು ಸಮುದಾಯದ ಒಳಾಡಳಿತ ವ್ಯವಸ್ಥೆ

ಅತ್ಯಂತ ಪ್ರಾಚೀನ ನ್ಯಾಯಪಂಚಾಯತಿ, ಆದಿವಾಸಿಗಳಿಂದಲೇ ಆರಂಭವಾಗಿದೆ. ಪ್ರಪಂಚದ ಮೇಲೆ ಆವಿರ್ಭವಿಸಿದ ಮಾನವರೇ ಆದಿವಾಸಿಗಳು. "ನ್ಯಾಯವು ಅನ್ಯಾಯಕ್ಕೆ ಪರಿಹಾರ. ಇದನ್ನರಿತ ಮಾನವ ಈ ಭೂಮಿಯ ಮೇಲೆ ಹುಟ್ಟಿದನಿಂದ ಒಂದಿಲ್ಲೊಂದು ರೂಪದಲ್ಲಿ ಅವನಿಗೆ ನ್ಯಾಯವನ್ನು ನೀಡಲಾಗುತ್ತಿದೆ. ಆಸ್ತಿಯೆಂಬುದು ಅಸ್ತಿತ್ವಕ್ಕೆ ಬಂದ ಮೇಲೆ ಅವನ ನ್ಯಾಯ ವ್ಯವಹಾರಗಳು ಹೆಚ್ಚುತ್ತಾ ಹೋಗಿ ನ್ಯಾಯಶಾಸ್ತ್ರದ ವ್ಯಾಪಕ ಪದ್ಧತಿಗಳ ಅವಶ್ಯಕತೆ ಹೆಚ್ಚಿಸಿರುವುವು"[೧೨]

ಮೇದರಲ್ಲಿ ಸಮುದಾಯದ ಒಳಾಡಳಿತ ವ್ಯವಸ್ಥೆಗೆ ಸಂಬಂಧಿಸಿದಂತೆ ಬೇಡರ ಕಟ್ಟೆಮನೆ, ಗೊಂಡರ ರಾಯಕೇಂದ್ರದಂತೆ ಮೇದರಲ್ಲೂ 'ನ್ಯಾಯಕಟ್ಟೆ' ಇದೆ. ಕುಲಾಚರಣೆಯಲ್ಲಿ ಮೊದಲ ಆದ್ಯತೆ ನೀಡಲ್ಪಡುವ ಗೌಡ, ಪಟೇಲ ಬುದ್ಧಿವಂತ, ಮುದ್ರೆಕಾರರು ಕುಲಾಚಾರಣೆಯಲ್ಲಿ ವ್ಯತ್ಯಾಸವಾದರೆ ಇವರು ಸರಪಂಚರಂತೆ ಕಾರ್ಯನಿರ್ವಹಿಸುತ್ತಾರೆ. ಈ ಪದ್ಧತಿ ಪ್ರತಿಯೊಂದು 'ಕಟ್ಟೆ'ಯಲ್ಲಿದ್ದು, ಮೇದರು ತಮ್ಮ 'ಕಟ್ಟೆ ಸಂಸ್ಕೃತಿ'ಗೆ ಅನುಗುಣವಾಗಿ ಒಳಾಡಳಿತ ವ್ಯವಸ್ಥೆ ಹೊಂದಿರುತ್ತಾರೆ. ದಕ್ಷಿಣ ಕರ್ನಾಟಕದ ಚಿಕ್ಕಮಗಳೂರು, ಶಿವಮೊಗ್ಗ, ದಾವಣಗೆರೆ, ಹಾಸನ, ಮಂಡ್ಯ, ರಾಮನಗರ ಜಿಲ್ಲೆಗಳಲ್ಲಿರುವ ಕರ್ನಾಟಕದ ಕನ್ನಡ ಮಾತನಾಡುವ ಮೇದರಲ್ಲಿ ಒಟ್ಟು ೬ ಕಟ್ಟೆಗಳಿವೆ. ಅವು ನಗರಕಟ್ಟೆ, ಪಟ್ಟಣಕಟ್ಟೆ, ಚಿಕ್ಕನಾಯಕನಹಳ್ಳಿ ಕಟ್ಟೆ, ಗರುಡನಗಿರಿಕಟ್ಟೆ ಹಾಗೂ ಮಾಗಡಿಕಟ್ಟೆ ಈ ಕಟ್ಟೆಗಳಿಂದ ಹೊರತಾದ ಕನ್ನಡ ಮಾತನಾಡುವ ಮೇದರನ್ನು ಅಮಾನಿಕಟ್ಟೆಯವರು ಎಂದು ಕರೆಯುತ್ತಾರೆ.

ಉದಾಹರಣೆಗೆ ನಗರಕಟ್ಟೆಯಲ್ಲಿ ದುರ್ವಿಗೆರೆ, ಅಜ್ಜಂಪುರ, ತರೀಕೆರೆ, ಲಕ್ಕವಳ್ಳಿ, ನರಸಿಂಹರಾಜಪುರ, ತಣಿಗೆಬೈಲು, ಬಂಡೀಗುಡ್ಡ ಹಾಗೂ ದಾನವಾಡಿ ಪ್ರದೇಶಗಳು ಬಂದು ಇಲ್ಲಿ ವಾಸಿಸುವ ಮೇದರು 'ಕಟ್ಟೆ ತೀರ್ಮಾನ'ದ ಮಿತಿಗೆ ಒಳಪಡುತ್ತಾರೆ. ಮೇದರ ನಂಬಿಕೆ, ಸಂಪ್ರದಾಯ ಮತ್ತು ಆಚರಣೆಗಳು ಈ ಸಮುದಾಯದ ಸಾಂಸ್ಕೃತಿಕ ಚಹರೆಗಳಾಗಿದ್ದು, ಇದಕ್ಕೆ ಭಂಗ ಉಂಟಾದಲ್ಲಿ ಕುಲ ಪಂಚಾಯತಿಯಲ್ಲಿ ಅದನ್ನು ಸರಿಪಡಿಸಲು ಯತ್ನಿಸುವರು. ಮೇದ ಸಮುದಾಯದ ರೀತಿ-ನೀತಿಗಳಿಗೆ ವ್ಯತಿರಿಕ್ತವಾಗಿ ನಡೆದುಕೊಂಡವರಿಗೆ 'ನ್ಯಾಯಕಟ್ಟೆ'ಯ ಗೌಡ, ಬುದ್ಧಿವಂತರು, ಸಮುದಾಯದವರೆಲ್ಲರ ಸಮ್ಮುಖದಲ್ಲಿ ನ್ಯಾಯ ತೀರ್ಮಾನ ಹೇಳುವನು. ಹಾಗೂ ಅದಕ್ಕೆ ತಕ್ಕ ಶಿಕ್ಷೆಯನ್ನು ಸೂಚಿಸುವರು. ಉದಾಹರಣೆಗೆ ಮೇದ ಬುಡಕಟ್ಟಿನ ಗಂಡು ಅಥವ ಹೆಣ್ಣು ಬೇರೆ ಜಾತಿಯವರೊಂದಿಗೆ ಅಕ್ರಮ ಸಂಬಂಧ ಇಲ್ಲವೇ ವಿವಾಹವಾದರೆ, ಬುಡಕಟ್ಟು ನಿಯಮದಂತೆ ಅವರನ್ನ ಮೇದ ಸಮೂಹದಿಂದ ಹೊರಗಿಡಲಾಗುವುದು. ಯಾವುದೇ ಒಳ್ಳೆಯ-ಕೆಟ್ಟ ಕೆಲಸ ಕಾರ್ಯಗಳಿಗೆ ಸಮುದಾಯದ ಒಳಗೆ ಸೇರಿಸದಂತೆ ತಾಕೀತು ಮಾಡಲಾಗುವುದು. ಚಪ್ಪಲಿ ಹಿಡಿದರೆ ಅಥವ ಚಪ್ಪಲಿಯಿಂದ

ಹೊಡೆದರೆ ಶಿಕ್ಷೆ ಪ್ರಮಾಣವೂ ವ್ಯತ್ಯಾಸವಾಗುದು. ಚಪ್ಪಲಿ ಹಿಡಿದರೆ ವಾಗ್ದಂಡನೆಯೂ, ಹೊಡೆದರೆ ಕುಲ ಬಹಿಷ್ಕಾರಕ್ಕೊಳಗಾಗುತ್ತಾರೆ. ಇದೆ ಸಂದರ್ಭದಲ್ಲಿ ಹೊಡೆದಾತನದ ಮನೆ ಮಂದಿಯು ಗೌಡ, ಬುದ್ಧಿವಂತರನ್ನು ಬೇಡಿಕೊಂಡು 'ಶುದ್ಧಕಾರ್ಯ' ಮಾಡುವಂತೆ ಅಂಗಲಾಚಿದ ಮೇಲೆ ಸರಿಕರ ಸಭೆ ಕರೆದು ಈ ಕುರಿತಂತೆ ಚರ್ಚಿಸಿ ಸಮುದಾಯದ ಸಭೆಯಲ್ಲಿ ತೀರ್ಮಾನ ಮತ್ತು ಶಿಕ್ಷೆ ವಿಧಿಸಲಾಗುತ್ತದೆ. ಕೇರಿಯ ದೇವಿಗೆ ರೂ.೫೦೧ ಅಥವ ರೂ.೧೦೦೧ ತಪ್ಪು ಕಾಣಿಕೆ ಹಾಕಿ ಸಸ್ಯಹಾರ ಇಲ್ಲವೇ ಮಾಂಸಹಾರವನ್ನು ಸಮುದಾಯದವರಿಗೆ ಉಣಬಡಿಸಬೇಕು. 'ಶುದ್ಧ ಸಂಸ್ಕಾರ'ದ ವೇಳೆ ಮತ್ತೊಮ್ಮೆ ಹೀಗೆ ಮರುಕಳಿಸದಂತೆ ಎಚ್ಚರಿಕೆಯ, ಮಾತನ್ನು ಗೌಡ, ಬುದ್ಧಿವಂತ ಹೇಳಲು ಮರೆಯುವುದಿಲ್ಲ.

ಕೇವಲ ವ್ಯಕ್ತಿಯೊಬ್ಬನನ್ನು ಶಿಕ್ಷಿಸದೆ; ಇಡೀ ಕುಟುಂಬದ ಸದಸ್ಯರನ್ನೂ ಈ ಶಿಕ್ಷೆಯ ಪರಿಧಿಗೆ ತರಲಾಗುತ್ತಿತ್ತು. ಸಮುದಾಯದಿಂದ ಹೊರಗಿಡುವುದೆಂದರೆ, ಮೇದರಿಗೆ ಗಡಿಪಾರು ಮಾಡಿದಷ್ಟೇ ಘೋರವಾಗಿ ಕಾಣುತ್ತಿತ್ತು. ಅನ್ನ, ನೀರು, ನೆರಳು ನೀಡದಂತೆ ತಾಕೀತು ಮಾಡಲಾಗುತ್ತಿತ್ತು. ಮದುವೆ-ಮುಂಜಿ, ಸಾವು-ನೋವುಗಳಿಗೆ ಬರದಂತೆ ನಿರ್ಬಂಧ ಹಾಕಲಾಗುತ್ತಿತ್ತು. ಅಣ್ಣ-ತಮ್ಮಂದಿರ ಮನೆಯೊಳಗೂ ಪ್ರವೇಶವಿರುತ್ತಿರಲಿಲ್ಲ. ಒಂದರ್ಥದಲ್ಲಿ ಅವರ ಬದುಕೇ ದ್ವೀಪವಾಗುತ್ತಿತ್ತು. ಆದಷ್ಟು ಬೇಗ 'ಶುದ್ಧಕಾರ್ಯ' ಮಾಡಿಸಿಕೊಳ್ಳಲು ತವಕಿಸುತ್ತಿದ್ದರು. ತಮ್ಮ ತಪ್ಪು ಮುಚ್ಚಿಕೊಳ್ಳಲು ಪ್ರಯತ್ನಿಸಿದರೆ 'ದೇವರ ಮೇಲೆ ಆಣೆ', 'ಮಕ್ಕಳ ಮೇಲೆ ಆಣೆ', 'ತಾಯಿಯ ಮೇಲೆ ಆಣೆ', 'ಗಂಗಾಜಲದ ಮೇಲೆ ಆಣೆ' ಹೀಗೆ ಆಣೆ ಹಾಕಿಸಿದರೆ ಯಾವೊಬ್ಬ ಮೇದರನು ಸುಳ್ಳು ಹೇಳುತ್ತಿರಲಿಲ್ಲ. ಆದರೆ ಆಧುನಿಕತೆಯ ಪ್ರಭಾವ ಎಲ್ಲಾ ಸಮುದಾಯಗಳ ಮೇಲೆ ಆಗಿರುವಂತೆ ಮೇದ ಸಮುದಾಯಗಳ ಮೇಲೂ ಆಗಿದ್ದು, ಸಮಾಜದ ಮುಖ್ಯಧಾರೆಯಲ್ಲಿರುವ ಸಮುದಾಯಗಳು ಜಾತಿ ಪಂಚಾಯತಿ, ಕಟ್ಟೆನ್ಯಾಯ ಪಂಚಾಯತಿಯಿಂದ ದೂರಸರಿದು, ಅದು ಸರಕಾರ ರಚಿಸಿದ ಸಂವಿಧಾನಾತ್ಮಕ ಪಂಚಾಯತಿಯ ಮೊರೆ ಹೋಗುತ್ತಿರುವುದು ಕಾಣುತ್ತೇವೆ.

ಬುಡಕಟ್ಟುಗಳಲ್ಲಿಯೂ ನ್ಯಾಯ ಪಂಚಾಯತಿಗಳು ದಿನೇ ದಿನೇ ಕಡಿಮೆಯಾಗುತ್ತಿದೆ. ಆದಾಗ್ಯೂ ಇಂದಿಗೂ 'ಚಪ್ಪಲಿ ಹಿಡಿದು ಹೊಡೆಯುವ' ಪ್ರಯತ್ನ ಮೇದರು ಮಾಡುವುದಿಲ್ಲವೆಂದು ಸಮೀಕ್ಷೆಯ ಸಂದರ್ಭದಲ್ಲಿ ಮೇದರು ತಿಳಿಸುತ್ತಾರೆ. ಅಲ್ಲದೆ ಸಮಾಜಬಾಹಿರ ಚಟುವಟಿಕೆಗಳು ಇಲ್ಲವೇ ಇಲ್ಲ ಅಥವಾ ಅತ್ಯಂತ ಕಡಿಮೆಯೆಂದು ತಿಳಿದುಬಂದಿದೆ. ಬುಡಕಟ್ಟು ನ್ಯಾಯ ಪಂಚಾಯತಿ ಇವರ ಒಳಾಡಳಿತ ಕ್ರಮವು ಅನುಚಾನವಾಗಿ ನಡೆದು ಬಂದಿದ್ದು ಇದರಲ್ಲಿ ಸಾಂಪ್ರದಾಯಿಕ ತತ್ವ ಅಡಗಿದೆ. ಇದಕ್ಕೆ ಸರಕಾರ ಮಾನ್ಯತೆಯನ್ನು ನೀಡುವುದು ಅತ್ಯಗತ್ಯವಾಗಿದೆ.

೨.೫.೨ ರಾಜಕೀಯ ಪ್ರತಿನಿಧೀಕರಣ ಹಾಗೂ ಮೇದ ಬುಡಕಟ್ಟು

• ಮತದಾನದಲ್ಲಿ ಪಾಲ್ಗೊಳ್ಳುವ ವಿವರ

ಪ್ರಜಾಪ್ರಭುತ್ವ ವ್ಯವಸ್ಥೆ ಬುನಾದಿಯೇ ಮತದಾನದಲ್ಲಿ ಪಾಲ್ಗೊಳ್ಳುವಿಕೆ. ಪೌರನು ಚಲಾಯಿಸುವ ಮತದ ಮೇಲೆ ದೇಶದ, ಸರ್ಕಾರದ, ಸಮಾಜದ, ವ್ಯಕ್ತಿಯ ಪ್ರಗತಿ ಅವಲಂಬಿಸಿದೆ. ಪ್ರತಿಯೊಬ್ಬ ವಯಸ್ಕನಿಗೂ ಈ ಹಕ್ಕು ಸಂವಿಧಾನದತ್ತವಾಗಿದ್ದು, ಇದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳತಕ್ಕದ್ದು. ಯಾವುದೇ ರೀತಿಯ ಆಸೆ, ಆಕಾಂಕ್ಷೆ, ಆಮಿಷಗಳಿಗೆ ಒಳಗಾಗದೆ ತನ್ನ ಮತದ ಮಹತ್ವವನ್ನು ಅರಿತುಕೊಂಡು ಸರಿಯಾದ ಅಭ್ಯರ್ಥಿಯನ್ನು ಆಯ್ಕೆ ಮಾಡಿದರೆ ಅದರಿಂದ ಯೋಗ್ಯವಾದ ಸರ್ಕಾರ ಅಧಿಕಾರಕ್ಕೆ ಬರುತ್ತದೆ. ಅರ್ಹರನ್ನು ಆಯ್ಕೆ ಮಾಡುವ ಜವಾಬ್ದಾರಿಯುತ ಕರ್ತವ್ಯ ಮತದಾರನದು. ಒಂದು ವೇಳೆ ಮತದ ಮಹತ್ವವನ್ನು ಅರಿಯದೆ ಮತ ಚಲಾಯಿಸಿದರೆ ಅದರಿಂದ ಮುಂದೆ ಆಗಬಹುದಾದ ಅನಾಹುತವನ್ನು ಸರಿಪಡಿಸಲು ಅತಿ ಕಷ್ಟ ಎಂಬುದನ್ನು ತಿಳಿದಿರಬೇಕು. ಇದಕ್ಕೆ ನಿದರ್ಶನವಾಗಿ ಪ್ರಸ್ತುತ ಚುನಾವಣೆಗಳು ಹೇಗೆ ನಡೆಯುತ್ತಿವೆ ಎಂಬುದು ಗಮನಾರ್ಹ. ಆದ್ದರಿಂದ ಪ್ರಾಮಾಣಿಕವಾಗಿ ಮತ ಚಲಾಯಿಸುವುದು ಮತದಾರನ ಆದ್ಯ ಕರ್ತವ್ಯವಾಗಿದೆ.

ಚಿಕ್ಕಮಗಳೂರು ಜಿಲ್ಲಾ ತಾಲೂಕುವಾರು ಕುಟುಂಬಗಳ ರಾಜಕೀಯ ಆಸಕ್ತಿ, ಮತ ಚಲಾವಣೆ ಮೂಲಕ ಭಾಗವಹಿಸುವುದು ಪಕ್ಷದ ಸದಸ್ಯರಾಗಿ, ಸಂಘಟಕರಾಗಿ, ಮುಂದಾಳುಗಳಾಗಿ ಮತ್ತು ಸ್ಪರ್ಧಿಗಳಾಗಿ ಭಾಗವಹಿಸುವ ಮಾಹಿತಿಗಳನ್ನು ಕಲೆ ಹಾಕಲಾಯಿತು. ಈ ಕೆಳಗಿನ ಅಂಶಗಳು ಬೆಳಕಿಗೆ ಬಂದವು. ಶೇ.೯೮.೧೨ರಷ್ಟು ಕುಟುಂಬಗಳು ಮತದಾನದಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವ ಬಗ್ಗೆ ತಿಳಿಸಿದ್ದಾರೆ. ಪ್ರಮಾಣದಲ್ಲಿ ಮತ ಚಲಾವಣೆಯ ಮುಖಾಂತರ ಭಾಗವಹಿಸುವಿಕೆಯು ಪ್ರಜಾಪ್ರಭುತ್ವದಲ್ಲಿ ಚುನಾವಣೆಯ ಮಹತ್ವವನ್ನು ಮನಗಂಡಿರುವುದು ತಿಳಿದುಬರುತ್ತದೆ. ಶೇ.೧.೮೮ರಷ್ಟು ಮೇದರ ಮತದಾನದಲ್ಲಿ ಪಾಲ್ಗೊಳ್ಳದಿರುವ ಬಗ್ಗೆ ಒಲವು ತೋರಿದ್ದು, ಚುನಾವಣೆಗಳು ಬೇಸರ ತಂದಿವೆ ಎಂದು ಪ್ರತಿಕ್ರಿಯಿಸುತ್ತಾರೆ.

• ರಾಜಕೀಯ ಚುನಾವಣೆಯಲ್ಲಿ ಸ್ಪರ್ಧಿಸುವ ಆಸಕ್ತಿ

ಸ್ವಾತಂತ್ರ್ಯ ನಂತರ ಸಂವಿಧಾನ ದತ್ತವಾಗಿ ಸಿಕ್ಕಿರುವ ಹಕ್ಕು ಮತ್ತು ಕರ್ತವ್ಯಗಳನ್ನು ನಿಭಾಯಿಸುವ ನಿಟ್ಟಿನಲ್ಲಿ ಜಾಗೃತಿ ಮೂಡುತ್ತಿದೆ. ಎಲ್ಲ ಸಮುದಾಯಗಳಲ್ಲೂ ಮುಖ್ಯ ಚರ್ಚೆಯಾಗುವ ವಿಷಯ ರಾಜಕೀಯವಾಗಿದ್ದು ಶಕ್ತಿ ರಾಜಕಾರಣದ ರುಚಿ-ಅಭಿರುಚಿಗಾದರೂ ರಾಜಕಾರಣದೊಳಗೆ ಇರಬೇಕೆಂದು ಅನೇಕ ಯುವಕರು, ವಯೋವೃದ್ಧರಾದಿಯಾಗಿಯೂ ಆಸಕ್ತಿ ತೋರುತ್ತಾರೆ. ಸಾಮಾನ್ಯ ಕಾರ್ಯಕರ್ತನಾಗಿ, ಸಂಘಟಿಕನಾಗಿ, ಪಕ್ಷದ ಸದಸ್ಯನಾಗಿ, ಮುಂದಾಳುವಾಗಿ, ಸ್ಪರ್ಧಾಳುವಾಗಿ ಪಕ್ಷದ ಎಲ್ಲಾ ಹಂತದ ಚಟುವಟಿಕೆಗಳಲ್ಲೂ ಭಾಗವಹಿಸುವ ಆಸಕ್ತಿ ರಾಜಕೀಯ ಅಭಿಲಾಷೆಯನ್ನು ಹೊಂದಿರುವ ಕಾರ್ಯಕರ್ತರಲ್ಲಿರುತ್ತದೆ. ಸ್ವಾತಂತ್ರ್ಯ

[illegible]

ನಂತರ ಭಾರತ ತನ್ನದೇ ಆದ ರಾಜಕೀಯ ವ್ಯವಸ್ಥೆಯನ್ನು ಸಂವಿಧಾನ ಹಾಗೂ ಪ್ರಜಾಪ್ರಭುತ್ವದ ತಳಹದಿಯ ಮೇಲೆ ನಿರ್ಮಿಸಿಕೊಂಡಿದ್ದು, ವಯಸ್ಕ ಮತದಾರ ಚುನಾವಣೆಯಲ್ಲಿ ಭಾಗವಹಿಸಬಹುದು. ಮೇದರಲ್ಲಿಯೂ ಇತ್ತೀಚೆಗೆ ರಾಜಕೀಯ ಆಸಕ್ತಿ ಮೊಳಕೆಯೊಡೆದಿರುವುದು ಸ್ಪಷ್ಟವಾಗುತ್ತದೆ. ರಾಷ್ಟ್ರೀಯ ಪಕ್ಷಗಳು, ಪ್ರಾದೇಶಿಕ ಪಕ್ಷಗಳು, ಸ್ಥಳೀಯ ಸಂಸ್ಥೆಗಳು, ಪಂಚಾಯತ್‌ರಾಜ್‌ನಲ್ಲಿರುವ ಮೂರು ಹಂತದ ಸ್ವಯಂ ಆಡಳಿತ ವ್ಯವಸ್ಥೆಯಲ್ಲಿ ಮೇದರ ಪ್ರಾತಿನಿಧ್ಯ ಇವೆ. ಪಟ್ಟಣ ಪಂಚಾಯತಿ, ಪುರಸಭೆ, ನಗರ ಸಭೆ, ಮಹಾನಗರ ಪಾಲಿಕೆಗಳೂ, ಎಂ.ಎಲ್.ಎ., ಎಂ,ಎಲ್.ಸಿ., ಎಂ.ಪಿ, ರಾಜ್ಯಸಭಾ ಸದಸ್ಯತ್ವಕ್ಕೆ ಆಸಕ್ತಿ ಇದೆ. ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮ ಪಂಚಾಯತಿ, ತಾಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಗಳಲ್ಲಿ ಸ್ಪರ್ಧಿಸುವ ಆಸಕ್ತಿ ಹೊಂದಲಾಗಿದೆ.

ರಾಜಕೀಯೇತರವಾದರೂ ಲ್ಯಾಂಪ್ಸ್ ಸೊಸೈಟಿ ಚುನಾವಣೆ, ಪಿಸಿಎಆರ್‌ಡಿ ಬ್ಯಾಂಕ್, ಟಿಎಪಿಸಿಎಂಎಸ್ ಚುನಾವಣೆ, ಗ್ರಾಮಾಂತರ ಸೊಸೈಟಿ ಇಂತಹ ಸರ್ಕಾರೇತರ ಸಹಕಾರ ಸಂಸ್ಥೆಗಳಲ್ಲಿಯೂ ಮೇದರು ಚುನಾವಣೆಯಲ್ಲಿ ಭಾಗವಹಿಸುತ್ತಿದ್ದಾರೆ. ಒಂದು ಸಂಘಟಾನಾತ್ಮಕ ವ್ಯವಸ್ಥೆಯಿರುವೆಡೆ ರಾಜಕೀಯ ಹಿತಾಸಕ್ತಿಯಿಂದ ಭಾಗವಹಿಸುವಿಕೆಯನ್ನು ಕಾಣಬಹುದು. ಚಿಕ್ಕಮಗಳೂರು ಜಿಲ್ಲೆಯ ಮೇದರ ಆಸಕ್ತಿಗೆ ಪೂರಕವಾಗಿ, ಅಧ್ಯಯನದಿಂದ ತಿಳಿದು ಬಂದ ಮಾಹಿತಿಗಳು ಹೀಗಿವೆ. ಶೇ೧೦.೧೮ರಷ್ಟು ಪಕ್ಷದ ಕಾರ್ಯಕರ್ತರಾಗಿ, ಶೇ.೧೭.೧೫ರಷ್ಟು ಪಕ್ಷದ ಸದಸ್ಯರಾಗಿ, ಶೇ.೬.೪೩ರಷ್ಟು ಸಂಘಟಕರಾಗಿ, ಮುಂದಾಳುಗಳಾಗಿ, ಶೇ.೫.೩೬ರಷ್ಟು ಸ್ಪರ್ಧಿಗಳಾಗಿರುವ ಮಾಹಿತಿಗಳು ರಾಜಕೀಯ ಚುನಾವಣೆಯಲ್ಲಿ ಮೇದರು ಸ್ಪರ್ಧಿಸಿರುವ ಹಾಗೂ ಸ್ಪರ್ಧಿಸುವ ಆಸಕ್ತಿ ಹೊಂದಿರುವುದು ಸ್ಪಷ್ಟವಾಗುತ್ತದೆ. ಧರ್ಮ ಅಫೀಮೆಂದು ಕಾರ್ಲ್‌ಮಾರ್ಕ್ಸ್ ಹೇಳಿರುವುದು ಬಹುಶಃ ಇತ್ತೀಚಿನ ದಿನಗಳಲ್ಲಿ ರಾಜಕೀಯ ಅಫೀಮು ಎಂದು ಬದಲಾಯಿಸಬಹುದಷ್ಟು ಅಮಲು ಏರಿಸಿಕೊಂಡಿರುವ ಮೇದ ಕಾರ್ಯಕರ್ತರು ಯಾವುದಾದರೂ ರಾಜಕೀಯ ಪದವಿಗಾಗಿ ಸದಾ ಹಂಬಲಿಸುತ್ತಲೇ ಇರುವುದು ಸದ್ಯದ ರಾಜಕೀಯ ಪರಿಸ್ಥಿತಿಯಾಗಿದೆ.

- **ಚುನಾವಣೆಯಲ್ಲಿ ಸ್ಪರ್ಧಿಸಿರುವವರ ವಿವರ**

ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಮೇದರು ಮೀಸಲಾತಿ ಆಧಾರದಲ್ಲಿ ಮೀಸಲಾತಿ ಇಲ್ಲದೆ ಸಾಮಾನ್ಯ ಕ್ಷೇತ್ರದಿಂದ ಆಯ್ಕೆಯಾಗಿರುವ ಅಂಶಗಳು ಬೆಳಕಿಗೆ ಬಂದಿವೆ. ತರೀಕೆರೆ ತಾಲೂಕಿನಿಂದ ೫ ಸ್ಪರ್ಧಾಳುಗಳು ಸ್ಪರ್ಧಿಸಿರುತ್ತಾರೆ. ಜಿಲ್ಲಾ ಪಂಚಾಯತಿ ಕ್ಷೇತ್ರಕ್ಕೆ ಅಜ್ಜಂಪುರದಿಂದ ೧ ಮಹಿಳಾ ಅಭ್ಯರ್ಥಿ ಸ್ಪರ್ಧಿಸಿದ್ದರು. ಹಾಗೆಯೇ ತರೀಕೆರೆ ಪಟ್ಟಣ ಪಂಚಾಯತಿಗೆ ಪುರುಷ ಅಭ್ಯರ್ಥಿ, ಜಯಪುರ (ತಣಿಗೆ ಬೈಲು) ಗ್ರಾಮ ಪಂಚಾಯತಿಗೆ ೨ ಮಹಿಳಾ ಅಭ್ಯರ್ಥಿಗಳು ಸ್ಪರ್ಧಿಸಿ ೧ ಬಾರಿ ಉಪಾಧ್ಯಕ್ಷ ಸ್ಥಾನ ಪಡೆದಿದ್ದಾರೆ. ರಂಗೇನಹಳ್ಳಿ ಗ್ರಾಮಪಂಚಾಯತಿಗೆ ಮಹಿಳಾ ೧ ಅಭ್ಯರ್ಥಿ ಸ್ಪರ್ಧಿಸಿರುತ್ತಾರೆ.

ಚಿಕ್ಕಮಗಳೂರು ತಾಲೂಕಿನಲ್ಲಿ ೨ ಅಭ್ಯರ್ಥಿಗಳು ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಸ್ಪರ್ಧಿಸಿ, ಅರಳುಗುಪ್ಪೆ ಗ್ರಾಮವನ್ನು ಪ್ರತ್ಯೇಕವಾಗಿ ೨ ಬಾರಿ ಪ್ರತಿನಿಧಿಸಿದ್ದಾರೆ. ಮೂಡಿಗೆರೆ ತಾಲೂಕಿನಲ್ಲಿ ೨ ಬಾರಿ ಜಿಲ್ಲಾ ಪಂಚಾಯತಿಗೆ, ಮಹಿಳಾ ಅಭ್ಯರ್ಥಿ ಸ್ಪರ್ಧಿಸಿ, ಕಳೆದ ಬಾರಿ ಜಿಲ್ಲಾ ಪಂಚಾಯತಿಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಆಲ್ದೂರು ಗ್ರಾಮ ಪಂಚಾಯತಿಯಿಂದ ೩ ಮಹಿಳಾ ಅಭ್ಯರ್ಥಿಗಳು ಸ್ಪರ್ಧಿಸಿ ಇಬ್ಬರು ಸದಸ್ಯರಾಗಿದ್ದಾರೆ. ತಾಲೂಕು ಪಂಚಾಯತಿಗೆ ಮಹಿಳಾ ಸದಸ್ಯೆಯೊಬ್ಬರು ಹಾಲಿ ಆಯ್ಕೆಯಾಗಿದ್ದಾರೆ. ಒಟ್ಟು ೭ ಮಹಿಳಾ ಸದಸ್ಯರನ್ನು ಕಾಣಬಹುದು.

ನರಸಿಂಹರಾಜಪುರ ತಾಲೂಕಿನಲ್ಲಿ ಪಟ್ಟಣ ಪಂಚಾಯತಿಗೆ ೫ ಅಭ್ಯರ್ಥಿಗಳು ಇದುವರೆಗೆ ಸ್ಪರ್ಧಿಸಿದ್ದು ಇಬ್ಬರು ಪುರುಷ ಅಭ್ಯರ್ಥಿಗಳಿದ್ದರು. ಹಾಲಿ ಒಟ್ಟು ಮಹಿಳಾ ಪ್ರತಿನಿಧಿ ಪಟ್ಟಣ ಪಂಚಾಯತಿಯನ್ನು ಪ್ರತಿನಿಧಿಸಿದ್ದಾರೆ. ಶೆಟ್ಟಿಕೊಪ್ಪ ಗ್ರಾಮದಿಂದ ಕಡಹಿನಬೈಲು ಗ್ರಾಮ ಪಂಚಾಯತಿಗೆ ಸಾಮಾನ್ಯ ಕ್ಷೇತ್ರದಿಂದ ಪುರುಷ ಅಭ್ಯರ್ಥಿ ಸ್ಪರ್ಧಿಸಿ ಜಯಶೀಲರಾಗಿದ್ದರು. ಸೂಸಲವಾನಿ ಗ್ರಾಮದಿಂದ ಕಡಹಿನಬೈಲು ಗ್ರಾಮ ಪಂಚಾಯತಿಗೆ ಹಾಲಿ ಮಹಿಳಾ ಸದಸ್ಯರು ಆಯ್ಕೆಯಾಗಿದ್ದಾರೆ. ಒಟ್ಟಿನಲ್ಲಿ ಮಹಿಳಾ ಮೀಸಲಾತಿ ಅನುಕೂಲವನ್ನು ಮೇದ ಸಮುದಾಯದವರು ಸಮರ್ಪಕವಾಗಿ ಬಳಸಿಕೊಳ್ಳುತ್ತಿದ್ದಾರೆ. ರಾಜಕೀಯ ಪಕ್ಷಗಳೆಲ್ಲವೂ ತನ್ನ ತನ್ನ ಕಾರ್ಯಕರ್ತರಲ್ಲಿ ಅಭ್ಯರ್ಥಿಗಳನ್ನು ಆಯ್ಕೆಮಾಡಿಕೊಳ್ಳುತ್ತಿದೆ. ಹಾಗೆಯೇ ಅತ್ಯುತ್ಸಾಹವನ್ನು ಅಭ್ಯರ್ಥಿಗಳು ತೋರುತ್ತಿದ್ದಾರೆ. ಲ್ಯಾಂಪ್ಸ್ ನಿರ್ದೇಶಕರಾಗಿ ಕೊಪ್ಪ ಮತ್ತು ಮೂಡಿಗೆರೆ ತಾಲೂಕಿನಲ್ಲಿ ತಲಾ ಒಬ್ಬರು. ಹಾಗೂ ಪಿಸಿಎಆರ್‌ಡಿ ಹಾಗೂ ಟಿಎಪಿಸಿಎಂಎಸ್‌ಗೆ ನರಸಿಂಹರಾಜಪುರದಿಂದ ತಲಾ ಇಬ್ಬರು ಹಾಲಿ ಸದಸ್ಯರಿದ್ದಾರೆ.

ಕೊಡುಗು ಜಿಲ್ಲೆ ವಿರಾಜಪೇಟೆ ವಿಧಾನ ಸಭಾ ಕ್ಷೇತ್ರದಿಂದ ೨ ಬಾರಿ ವಿಧಾನಸಭಾ ಸದಸ್ಯರಾಗಿ ಹೆಚ್.ಡಿ. ಬಸವರಾಜರವರು ಆಯ್ಕೆಯಾಗಿದ್ದರು. ಅವರು ರಾಜಕಾರಣದಲ್ಲಿ ಈಗಲೂ ಸಕ್ರಿಯರಾಗಿದ್ದಾರೆ. ಶ್ರೀಮತಿ ಭಾರತಿ ಇವರು ಮೈಸೂರು ಮಹಾನಗರ ಪಾಲಿಕೆಯ ಮೇಯರ್ ಆಗಿದ್ದರು. ಮೇದರ ಮುಖವಾಣಿಯಾದ ಕೇತೇಶ್ವರವಾಣಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ವಿವಿಧ ಗ್ರಾಮ, ಪಟ್ಟಣದಿಂದ ಆಯ್ಕೆಗೊಂಡ ಸದಸ್ಯರನ್ನು ಪ್ರಕಟಿಸುವುದನ್ನು ನೋಡಿದರೆ ಮೇದರಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸುವ ಆಸಕ್ತಿ, ರಾಜಕಾರಣ ಅಭಿರುಚಿ ಇರುವುದು ಸ್ಪಷ್ಟವಾಗುತ್ತದೆ.

ಅಡಿ ಟಿಪ್ಪಣಿಗಳು

೦೧. ಶ್ಯಾಮಾಚರಣ ದುಬೆ, ಭಾರತೀಯ ಸಮಾಜ, ನ್ಯಾಷನಲ್‌ಬುಕ್ ಟ್ರಸ್ಟ್, ಇಂಡಿಯಾ ಪುಟ ಸಂಖ್ಯೆ-೭೦-೧೯೯೦

೦೨. ಡಾ. ಲಕ್ಕಪ್ಪಗೌಡ ಹೆಚ್.ಜೆ., ಕರ್ನಾಟಕ ಬುಡಕಟ್ಟುಗಳು-ಸಂಪುಟ-೨ ಪುಟ-೨೦, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು-೧೯೯೮

೦೩. ಶಂಕರ್‌ರಾವ್. ಚ.ನ, ಜೈಭಾರತ್ ಪ್ರಕಾಶನ ಮಂಗಳೂರು ಪುಟ-೪೭೫-೧೯೯೧

೦೪. ಶ್ಯಾಮಾಚರಣ ದುಬೆ, ಭಾರತೀಯ ಸಮಾಜ, ನ್ಯಾಷನಲ್‌ಬುಕ್ ಟ್ರಸ್ಟ್, ಇಂಡಿಯಾ ಪುಟ ಸಂಖ್ಯೆ-೭೬-೧೯೯೦

೦೫. ತಪಸ್ವೀಕುಮಾರ್ ನಂ., ಸಂಸ್ಕೃತಿ ವಿಕಾಸ, ಪುಟ-೧೫೦, ಚೇತನಬುಕ್ ಹೌಸ್, ಅಂಜನಾದ್ರಿ, ಮೈಸೂರು-೨೦೦೦

೦೬. ಕೇಶವನ್‌ಪ್ರಸಾದ್ ಕೆ., ಕೊಳ್ಳೇಗಾಲ ಸುತ್ತಲಿನ ಜನಪದ ಊಟೋಪಚಾರಗಳು: ಒಂದು ಅಧ್ಯಯನ-ಪುಟ-೮೦ ಪಿಎಚ್.ಡಿ ಪದವಿಗಾಗಿ ಮೈಸೂರು ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದ ಪ್ರೌಢ ಪ್ರಬಂಧ.

೦೭. ಡಾ. ಲಕ್ಕಪ್ಪಗೌಡ ಹೆಚ್.ಜೆ., ಕರ್ನಾಟಕ ಬುಡಕಟ್ಟುಗಳು ಸಂಪುಟ ೨ ಪುಟ ೭, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು-೧೯೯೮

೦೮. ಭೀಮಣ್ಣ ಬೊನ್ನಾಳ್., (ಸಂ) ಗೌರವ ಶಿವಶರಣ ಮೇದರ ಕೇತಯ್ಯ ಸ್ಮಾರಕ ಸಂಪುಟ, ಪುಟ-೯, ಗುಲ್ಬರ್ಗಾ.

೦೯. ಅದೇ ಪುಟ-೧೯

೧೦. ಅದೇ ಪುಟ-೨೭

೧೧. ಡಾ. ಬೋರಲಿಂಗಯ್ಯ ಹಿ.ಚಿ., ಬುಡಕಟ್ಟು ದೈವಾರಾಧನೆ-ಪುಟ-೮ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೨. ಪ್ರಭಾಕರ ಎ.ಎಸ್., ಆದಿವಾಸಿ ಆಖ್ಯಾನ (ಸಂ) ಪುಟ-೨೦೬, ಹೊಸಪೇಟೆ.

ಅಧ್ಯಾಯ : ಮೂರು

ಮೇದ ಬುಡಕಟ್ಟು ಸಮುದಾಯದ ಸ್ಥಿತ್ಯಂತರಗಳು

ಅಧ್ಯಾಯ–ಮೂರು

ಮೇದರ ಸ್ಥಿತ್ಯಂತರಗಳು

ಕಾಡಿನ ಮೂಲ ಸಂಸ್ಕೃತಿಯೇ ತಮ್ಮದಾಗಿಸಿಕೊಂಡಿದ್ದ ಮೇದರ ಬದುಕಿನಲ್ಲಿ ಅಂತಹ ಚಹರೆಗಳು ಇಂದಿಗೂ ಕಾಣಬಹುದು. ಚಪಕಾರಕ ವೃತ್ತಿಯಿಂದಲೇ ಬದುಕನ್ನು ಕಟ್ಟಿಕೊಂಡಿರುವ ಮೇದರು, ಪರ್ಯಾಯ ವೃತ್ತಿಗಳ ಬಗ್ಗೆ ಅಷ್ಟೇನೂ ಒಲವು ತೋರದಿದ್ದರೂ ಬಿದಿರಿನ ಅಭಾವದಿಂದ ವೃತ್ತಿ ಸಂಕ್ರಮಣ ಸ್ಥಿತಿಯಲ್ಲಿದ್ದಾರೆ. ಬಹುಶಃ ವೃತ್ತಿಯೊಂದಿಗೆ ಇರುವ ಗಟ್ಟಿ ಸಂಬಂಧಗಳು ಎಂದೆಂದೂ ಹೀಗೆ ಇತ್ತು ಅಥವಾ ಇದಕ್ಕಿಂತ ಗಾಢವಾಗಿಯೇ ಇತ್ತೆಂದು ಊಹಿಸಬಹುದು. ತಮ್ಮ ಸಮುದಾಯದ ಕಟ್ಟುಪಾಡುಗಳನ್ನು ತಿಳಿಸುವ ಇಂದಿಗೂ ಆಚರಿಸುವ ಪ್ರಯತ್ನ ಮಾಡುತ್ತಲೇ ಇದ್ದಾರೆ.

ಮೀಸಲಾತಿ, ಔದ್ಯೋಗಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಮುಂತಾದ ಅಂಶಗಳಿಗಾಗಿ ಚದುರಿ ಹೋಗಿರುವ ಮೇದರನ್ನು ಸಂಘಟಿಸುವ, ಅವರನ್ನು ಒಂದೇ ವೇದಿಕೆಯ ಅಡಿಯಲ್ಲಿ ತರುವ ಪ್ರಯತ್ನಗಳೂ ನಡೆಯುತ್ತಿವೆ. ಈ ಕಾರಣಕ್ಕಾಗಿ ಬೆಂಗಳೂರು, ಚಿತ್ರದುರ್ಗ, ದಾವಣಗೆರೆ, ಮೈಸೂರು, ಹಾಸನ ಇತ್ಯಾದಿ ಸ್ಥಳಗಳಲ್ಲಿ ಸಮಾವೇಶಗಳನ್ನು ಮಾಡುತ್ತಿವೆ. ತಮ್ಮ ಸಾಮಾಜಿಕ ಪದ್ಧತಿಗಳು, ಸಂಸ್ಕೃತಿ, ಧಾರ್ಮಿಕ ಆಚರಣೆ, ಜನಪದ ನಂಬಿಕೆಗಳನ್ನು ಉಳಿಸಿಕೊಂಡೋಗುವ ಮನೋಭಾವನೆ ಹೊಂದಿದ್ದಾರೆ. ಆಧುನಿಕ ಯುವ

ಮನಸ್ಸುಗಳು ಇವುಗಳನ್ನು ಲಘುವಾಗಿ ಪರಿಗಣಿಸುತ್ತಿವೆ. ಈ ಹಿಂದಿನಿಂದ ಬಂದಿದ್ದ ಎಷ್ಟೋ ಬುಡಕಟ್ಟು ನಂಬಿಕೆಗಳು ಸ್ಮೃತಿಯಿಂದ ಆಚೆ ಸರಿದಿದೆ. ಉಳಿದಿರುವುದನ್ನು ಮುಂದುವರೆಸಿಕೊಂಡೋಗುವ ವಾರಸುದಾರರು ಯಾರು? ಎಂಬ ಜಿಜ್ಞಾಸೆ ಈಗಿರುವ ವಯೋವೃದ್ಧರನ್ನು ಕಾಡುತ್ತಿವೆ. ಈ ರೀತಿ ಇಂದಿನ ಬದಲಾಗುತ್ತಿರುವ ಪರಿಸ್ಥಿತಿಯಲ್ಲಿ ಸಮುದಾಯಗಳ ಸಾಮಾಜಿಕ, ಸಾಂಸ್ಕೃತಿಕ ಆಚಾರ, ಪದ್ಧತಿಗಳಲ್ಲೂ ಸ್ವಲ್ಪ ಮಟ್ಟಿನ ಬದಲಾವಣೆಯ ಪೂರ್ವಾಪರಗಳನ್ನು ಅರಿಯುವುದು ಮುಖ್ಯವೆನಿಸುತ್ತದೆ.

ಸಮಾಜಶಾಸ್ತ್ರಜ್ಞ ಆಗಸ್ಟ್‌ಕೋಮ್ಟ್‌ನ ಕಾಲದಿಂದಲೂ ಎರಡು ಸಾಮಾಜಿಕ ಪ್ರಶ್ನೆಗಳನ್ನು ಕುರಿತು ಚಿಂತಿಸುತ್ತಾ ಬಂದಿದ್ದಾರೆ. ಅದು ಸಾಮಾಜಿಕ ಸ್ಥಿರತೆಯ ಪ್ರಶ್ನೆ ಮತ್ತೊಂದು ಬದಲಾವಣೆಯ ಪ್ರಶ್ನೆ. ಸಮಾಜವು ಹೀಗಿತ್ತು? ಹೇಗಿದೆ? ಏಕೆ ಮತ್ತು ಹೇಗೆ ಪರಿವರ್ತನೆಗಳು ಹೊಂದುತ್ತಿವೆ? ಎಂಬ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಹುಡುಕಾಟ ನಡೆಯುತ್ತಲೇ ಇದೆ. ಬದಲಾವಣೆಯು ನಿಸರ್ಗ ನಿಯಮವಾಗಿದ್ದು, ಮಾನವ ಸಮಾಜ ಆದಿಯಿಂದಲೂ ನಿರಂತರವಾಗಿ ಬದಲಾಗುತ್ತಲೇ ಇದೆ. ಬಹಳ ಸಾಂಪ್ರದಾಯಿಕವೆಂಬ ಸಮಾಜಗಳು ಮತ್ತು ಸಂಸ್ಕೃತಿಗಳೂ ಬದಲಾವಣೆಯ ಪ್ರಕ್ರಿಯೆಗೆ ಒಳಪಟ್ಟಿವೆ. ಬದಲಾವಣೆಯು ಸಮಾಜದ ಆಂತರಿಕ ಗುಣ. ಯಾವುದೇ ಜೀವಂತ ಸಮಾಜಕ್ಕೆ ಸಹಜವಾಗಿಯೇ ಚಲನಶೀಲತೆ ಎಂಬುದು ಅಂತರ್ಗತವಾಗಿರುತ್ತದೆ. ಚಲನಶೀಲತೆ ಜೀವಂತಿಕೆಯ ಸಹಜಗುಣ. ನಿರಂತರವಾಗಿ ಬದಲಾವಣೆ ಗೊಳ್ಳುತ್ತಿರುವುದರಿಂದಲೇ ಅನಾಗರಿಕ ಸ್ಥಿತಿಯಿಂದ, ನಾಗರಿಕ ಸ್ಥಿತಿಗೆ ಬರಲು ಹೆಚ್ಚಿನ ಪರಿಪೂರ್ಣತೆಯ ಸ್ಥಿತಿಗೆ ಸಾಗಲು ಸಾಧ್ಯವಾಗಿದೆ. ಬದಲಾವಣೆಯ ಅಗಾಧತೆಯನ್ನು ಊಹಿಸುವುದು ಮತ್ತು ಅಳೆಯುವುದು ಕಷ್ಟ ಸಾಧ್ಯ. ಸಾಮಾಜಿಕ ಬದಲಾವಣೆಯ ವೇಗ ಇತ್ತೀಚಿನ ವರ್ಷಗಳಲ್ಲಂತೂ ತೀವ್ರತರವಾಗಿದೆ.

ಬದಲಾವಣೆಯು ನಮ್ಮ ವ್ಯಕ್ತಿಗತ ಜೀವನ, ಕೌಟುಂಬಿಕ ಜೀವನ ಇನ್ನಿತರ ಎಲ್ಲವನ್ನೂ ಒಳಗೊಂಡಿದೆ. ಸಾಮಾಜಿಕ ರಚನೆ ಹಾಗೂ ಕಾರ್ಯಗಳಲ್ಲಿ ಈ ಬದಲಾವಣೆಗಳು ಕಂಡುಬರುತ್ತವೆ. ಕಾಲಬದ್ಧವಾಗಿ ಮಾನವನ ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡುಬರುವ ವಿಪ್ಲವತೆಯನ್ನು ಸಂಕೇತಿಸುತ್ತದೆ. ಬದಲಾವಣೆಗೆ ಕಾರಣಗಳಾವುವು? ಅವುಗಳ ಗುರಿಗಂತವ್ಯ ಯಾವುವು? ಯಾವ ದಿಸೆಯತ್ತ ಹೇಗೆ ಅದು ಸಾಗಬೇಕು? ಎಂಬ ಪ್ರಶ್ನೆಗಳು ಸಂಕೀರ್ಣವಾದುದು. ಇದರ 'ಒಳ-ಹೊರ'ಗನ್ನು 'ಆದಿ-ಅಂತ್ಯ'ವನ್ನು ಸಂಪೂರ್ಣವಾಗಿ ಅರಿಯಲು ಸಾಧ್ಯವಾಗುವುದಿಲ್ಲ. ಗತಿಶೀಲ ಪ್ರವೃತ್ತಿ ಹೊಂದಿರುವುದರಿಂದ ಹಳೆಯ ಅಂಶಗಳನ್ನು ಅರಿಯುವುದರೊಳಗೆ ಬದಲಾವಣೆಗಳ ಸರಮಾಲೆಗಳೇ ಸಂಭವಿಸಬಹುದು. ಬದಲಾವಣೆ ಪ್ರಗತಿಶೀಲವಾಗಿರುವಂತೆ ಪ್ರತಿಗಾಮಿಯೂ ಆಗಿದೆ. ಶಾಶ್ವತ ಸ್ವರೂಪದ್ದಾಗಿರುವಂತೆ ಅಲ್ಪ ಕಾಲಿಕವೂ ಆಗಿರಬಹುದು. ಯೋಜನಬದ್ಧವೂ, ಯೋಜನಾ ರಹಿತವೂ ಆಗಿರಬಹುದು.

ಏಕಮುಖ ಹಾಗೂ ಬಹುಮುಖವುಳ್ಳದ್ದೂ ಆಗಿರಬಹುದು. ಹಾಗೆಯೇ ಹಿತಕಾರಕರವಾಗುವಂತೆ ಹಾನಿಕಾರಕವೂ ಆಗಿರಬಹುದು.

"ಸಮಾಜವು ತನ್ನ ಅಸ್ತಿತ್ವದ ಉಳಿವಿಗಾಗಿ ನಿರಂತರವಾಗಿ ಬದಲಾವಣೆಯ ಪ್ರಕ್ರಿಯೆಗೆ ಒಳಪಡುತ್ತದೆ."[೧] ಎಂದಿದ್ದಾರೆ "Social scientists generally agee that societies change continuously in order to survive" ಹಾಗೆಯೇ ಕಿಂಗ್ಸ್‌ಲೇ ಡೇವಿಸ್‌ರವರು 'ಜಗತ್ತಿನ ಇತರ ಎಲ್ಲಾ ಅಂಶಗಳಂತೆ ಸಮಾಜವೂ ಕೂಡ ಬದಲಾವಣೆಯ ಪ್ರಕ್ರಿಯೆಗೆ ಒಳಗೊಳ್ಳುವುದನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ"[೨] ಎಂದಿದ್ದಾರೆ("The fact remains that societies like all other phenomena unremittingly and inevitably change").

ಜಗತ್ತಿನ ಎಲ್ಲಾ ಸಮುದಾಯಗಳಲ್ಲೂ ಬದಲಾವಣೆಗಳು ಆಂತರಿಕ ಹಾಗೂ ಬಾಹ್ಯವಾಗಿ ಗೋಚರ-ಗೋಚರವಲ್ಲದ ಸ್ಥಿತಿಯಲ್ಲಿ ನಡೆಯುತ್ತಲೇ ಇರುತ್ತವೆ. ಅವುಗಳು ವ್ಯಕ್ತಗೊಂಡಾಗ ಜನರ ಆಚಾರ-ವಿಚಾರ, ಜೀವನ ಶೈಲಿ, ಸಂಸ್ಕೃತಿ, ನೀತಿ-ನಿಯಮಗಳು, ಸಂಘ-ಸಂಸ್ಥೆಗಳಲ್ಲಿ ಬದಲಾವಣೆಯಾಗುತ್ತಿರುವುದು ಕಾಣಬಹುದು. ಇಂತಹ ಬದಲಾವಣೆಗಳು ಕೆಲವೊಮ್ಮೆ ಉದ್ದೇಶ ಪೂರ್ವಕವಾಗಿ ನಡೆದಿರಬಹುದು. ಕೆಲವೊಮ್ಮೆ ತನ್ನಷ್ಟಕ್ಕೆ ತಾನೇ ಸಂಭವಿಸಿದ ಸಹಜ ಪ್ರಕ್ರಿಯೆಯಾಗಿರಬಹುದು. ಇಂತಹ ಬದಲಾವಣೆಗಳನ್ನು ಸಮಾಜ ಗಮನಿಸುತ್ತಲೇ ಇರುತ್ತದೆ. ಬದಲಾವಣೆಯ ಎಲ್ಲಾ ಅಂಶಗಳನ್ನು ಒಪ್ಪಿ ಅಳವಡಿಸಿಕೊಳ್ಳುತ್ತದೆ ಎಂದು ಹೇಳಲಾಗದು. "...ಈ ಸ್ವೀಕರಣ ಮತ್ತು ಪ್ರತಿರೋಧಗಳು ಸಮುದಾಯಗಳನ್ನು ಬದಲಾವಣೆಗೆ ಅರ್ಥಪೂರ್ಣವಾಗಿ ಅನ್ವಯಿಸುವ, ಬೆಸೆಯುವ ಪ್ರಕ್ರಿಯೆಯಲ್ಲಿ ತೊಡಗಿರುತ್ತವೆ. ಸ್ವೀಕರಿಸುವಾಗ ಸಮುದಾಯದ ಆಳದಲ್ಲಿನ ಚಾರಿತ್ರಿಕ ಹಸಿವು ಪ್ರತಿರೋಧಿಸುವಾಗ ಕಾಡುವ ಅನನ್ಯತೆಯ ಭಯ ಇವೆರಡೂ ಒಂದು ಸಮುದಾಯದ ಸಂಸ್ಕೃತಿ ಕೋಶದ ಮಿಡಿತವನ್ನು ಒಂದು ಅರ್ಥಪೂರ್ಣ ಲಯಕ್ಕೆ ಹೊಂದಿಸಿವೆ."[೩]

ಆದ್ದರಿಂದ ಬದಲಾವಣೆಯನ್ನು ಯಾವಾಗಲೂ ಎಲ್ಲಾ ಸಮಾಜಗಳು ಒಪ್ಪಿಕೊಳ್ಳುತ್ತವೆ ಎಂದು ಹೇಳಲು ಸಾಧ್ಯವಿಲ್ಲ. ಎಷ್ಟೋ ಅಂಶಗಳು ಬದಲಾವಣೆಯನ್ನು ತಡೆಯುವ ಪ್ರಯತ್ನವನ್ನು ಮಾಡುತ್ತಲೇ ಇರುತ್ತವೆ. ಆದರೂ ಈ ಎಲ್ಲಾ ಅಡೆ-ತಡೆಗಳ ಮಧ್ಯೆಯೂ ಬದಲಾವಣೆಯು ಕೆಲವೊಮ್ಮೆ ವೇಗವಾಗಿ, ಕೆಲವೊಮ್ಮೆ ನಿಧಾನಗತಿಯಲ್ಲಿ ನಿರಂತರವಾಗಿ ಸಂಭವಿಸುತ್ತಲೇ ಇರುತ್ತದೆಂದು ಹೇಳಬಹುದು.

ಆಧುನೀಕರಣವು ಸಾಮಾಜಿಕ ಬದಲಾವಣೆಯ ಪ್ರಮುಖ ಪ್ರೇರಕಾಂಶವಾಗಿದೆ. ಇದು ತನ್ನೊಂದಿಗೆ ಪಾಶ್ಚಾತೀಕರಣ, ಕೈಗಾರೀಕರಣ, ಸಂಸ್ಕೃತಿಕರಣವನ್ನೂ ಕರೆದು ತರುತ್ತದೆ. ಅಲ್ಲದೆ ಸಾಮಾಜಿಕ ಬದಲಾವಣೆಗೆ ಈ ಅಂಶಗಳೇ ಅಲ್ಲದೆ ಭೌಗೋಳಿಕ, ಜೈವಿಕ, ಸಾಂಸ್ಕೃತಿಕ ಹಾಗೂ ತಾಂತ್ರಿಕ ಅಂಶಗಳೂ ಕೂಡ ಸಾಮಾಜಿಕ ಬದಲಾವಣೆಗೆ ಪ್ರೇರೆಪಿಸುತ್ತವೆ. ಹೀಗಾಗಿ

[illegible]

ಪರಿವರ್ತನೆ ಸಹಜಗುಣವಾಗಿದ್ದು, ಸಮಾಜವು ಪರಿವರ್ತನೆ ಹೊಂದುತ್ತಲೇ ಇರುತ್ತದೆ. ಸಾಮಾಜಿಕ ಬದಲಾವಣೆ ತನ್ನಿಂದ ತಾನೇ ಆಗಲಾರದು, ಬದಲಿಗೆ ಅನೇಕ ಅಂಶಗಳು ೧೮ನೇ ಶತಮಾನದ ಆರಂಭದಿಂದ ಭಾರತೀಯರನ್ನು ಪ್ರಭಾವಿಸಲು ಆರಂಭಿಸಿತು. ಯುರೋಪಿನಲ್ಲಾದ ಕೈಗಾರಿಕಾ ಕ್ರಾಂತಿಯಂತೂ ಜಗತ್ತಿನ ಮೂರನೇ ರಾಷ್ಟ್ರಗಳಲ್ಲಿ ಹೊಸ ಬಾಷ್ಯ ಬರೆಯಿತು. ಭಾರತದಂತಹ ಬಹು ಸಂಸ್ಕೃತಿ ದೇಶದಲ್ಲಿ 'ಈಸ್ಟ್ ಇಂಡಿಯಾ ಕಂಪನಿ'ಗಳು ಕಂಪನಿ ಆಡಳಿತದಲ್ಲಿ ಭಾರತೀಯ ನೆಲ, ಜಲ, ಕಾಡು, ಮಾನವ ಸಂಪನ್ಮೂಲಗಳನ್ನೆಲ್ಲ ಉದಾರಿ ಬಳಸಿಕೊಳ್ಳುತ್ತಲೇ ಇವೆಲ್ಲವೂ ಬರಿದಾದವು, ಅಸ್ತಿತ್ವವೇ ನಲುಗಿದವು, ಪ್ರಾಣಿಗಳಂತೆ ಪಳಗಿದವು. ಪಾಶ್ಚಾತ್ಯರ ಅನುಕರಣೆ ಎಲ್ಲ ರಂಗಗಳಲ್ಲೂ ಸಾಧ್ಯವಾಯಿತು. ನಂತರದ ದಿನಗಳಲ್ಲಿ ಎಲ್ಲವೂ ಒಗ್ಗಿಹೋದವು. ಈ 'ಕರಣ'ಗಳಿಂದ ಉದ್ಭವಿಸುವ ವಿಪರ್ಯಾಸಗಳನ್ನು ಸಹಜವಾಗಿ 'ಒಪ್ಪಿ, ಅಪ್ಪು'ವ ಯಾಂತ್ರಿಕ ಕೌಶಲ್ಯತೆಯನ್ನು ಅಳವಡಿಸಿಕೊಂಡನು. "... ಕಾಲದ ಸ್ಥಿತ್ಯಂತರಗಳಿಗೆ ಜೀವಂತಿಕೆಯಿಂದ ಸ್ಪಂದಿಸುವ ಯಾವ ಜನಸಮುದಾಯವೂ ನಾಶವಾಗುವುದಿಲ್ಲ. ಸ್ಥಗಿತ ಮೌಲ್ಯದ ಪ್ರತಿಪಾದಕ ಘಟಕಗಳು ಕೊಳೆತು ನಾರುತ್ತ ಎಲ್ಲೆಂದರಲ್ಲಿ ದುರ್ನಾತ ಬೀರುತ್ತದೆ."[೪] ಎಂಬ ಮಾತು ಹಳೆಯದನ್ನು ಹೊಸತು ಕೊಚ್ಚಿಕೊಂಡು ಹೋಗುತ್ತದೆ. ಎಂಬ ಅರ್ಥದಲ್ಲಿ ಆಧುನೀಕರಣವು ಹೊಸತನ ನೀಡುತ್ತದೆ. ಬದಲಾವಣೆಗೆ ಒಗ್ಗಿದ ಎಲ್ಲವನ್ನೂ ಆಧುನಿಕವೆಂದು ಕರೆಯುವುದು ವಾಡಿಕೆಯಾಗಿದೆ.

ಇಂದು ಆಧುನಿಕ ಪ್ರಕ್ರಿಯೆಯಿಂದಾಗಿ ಎಲ್ಲಾ ಭೌತಿಕ ಸ್ವರೂಪಗಳಲ್ಲಿ ಬದಲಾವಣೆಗಳನ್ನು ಕಾಣುತ್ತೇವೆ. 'ಈವತ್ತಿನ ಕೆಳಜಾತಿಗಳು ದಲಿತರ, ಅಲೆಮಾರಿ ಸಮುದಾಯಗಳ ಬಹಳಷ್ಟು ಆಚರಣೆಗಳಲ್ಲಿ ಯೋಚನಾ ವಿಧಾನದಲ್ಲಿ ಈ ಬುಡಕಟ್ಟು ಬದುಕಿನ ವಾಸನೆ ಇರುವುದನ್ನು ಕಾಣುತ್ತೇವೆ. ಅನೇಕ ಸ್ಥಿತ್ಯಂತರಗಳ ಮೂಲಕ ವರ್ತಮಾನದಲ್ಲಿ ಕೆಳ ವರ್ಗಗಳು, ದಲಿತರು, ಅಲೆಮಾರಿ ಸಮುದಾಯಗಳು ಇನ್ನೂ ಆಲೋಚನೆಯ ಮಟ್ಟದಲ್ಲಿ ಆದಿಮ ಸ್ಮೃತಿಗಳನ್ನು ಬಿಟ್ಟುಕೊಟ್ಟಿಲ್ಲ'[೫] ಇಂತಹ ಉಲ್ಲೇಖಗಳನ್ನು ಗಮನಿಸಿದಾಗ, ಆದಿಮ ಪರಂಪರೆಯ ವಿಸ್ತಾರ ಅರ್ಥವಾಗುತ್ತದೆ. ಪ್ರಾಚೀನ ಕಾಲದಿಂದಲೂ ಬದುಕಿನ ಸಂಘರ್ಷದಲ್ಲಿ ತೊಳಲಾಡುತ್ತಲೇ ಬಂದಿರುವ ಬುಡಕಟ್ಟು ಸಮುದಾಯಗಳ ಜ್ಞಾನ ಪರಂಪರೆಯನ್ನು ಅಭಿವ್ಯಕ್ತಪಡಿಸುವ ಪಾರಂಪರಿಕ ಕುಲಕಸುಬುಗಳು ವಿಪ್ಲವತೆಗೆ ಒಳಗಾಗಿರುವುದು ಸರ್ವೆಸಾಮಾನ್ಯವಾಗಿದೆ. ತನ್ನ ಮೂಲ ಸಂಸ್ಕೃತಿ, ಆಧುನೀಕತೆಯ ಬಣ್ಣದಲ್ಲಿ ಲೀನವಾಗಿದೆ. ಆಧುನೀಕತೆಯ ಚಿತ್ತಾರಗಳು ಬುಡಕಟ್ಟನ್ನು ಉಸಿರುಟ್ಟಿಸಿವೆಯೇ ಹೊರತು ಅವರ ಬದುಕನ್ನು ಗಟ್ಟಿಗೊಳಿಸಲಿಲ್ಲ.

ಕಾಡು ಅಥವಾ ಕಾಡಿಗೆ ಹತ್ತಿರವಿದ್ದ ಮೇದರೂ ಆಧುನಿಕತೆಗೆ ಪಕ್ಕಾದರು. ಜನಸಮುದಾಯ ವಾಸಿಸುವ ಗ್ರಾಮಗಳು ಪರಿವರ್ತನೆಗೆ ಒಳಗಾದಂತೆ ಅಲ್ಲಿಯೇ ನೆಲೆನಿಂತ ಮೇದರು ಸಾಂಸ್ಕೃತಿಕ ಸಂಘರ್ಷಕ್ಕೆ ಒಳಗಾಗಿ, ಅನಿವಾರ್ಯವಾಗಿ ಬೇರೊಂದು ಸಂಸ್ಕೃತಿಯೊಂದಿಗೆ

[illegible]

ರಾಜಿ ಮಾಡಿಕೊಳ್ಳಬೇಕಾಯಿತು. ವೈದಿಕ ಪರಂಪರೆಯ ಪ್ರಭಾವಕ್ಕೆ ಸಿಲುಕಿದ ಮೇದರು ಪಾಶ್ಚಾತೀಕರಣ ಹಾಗೂ ಆಧುನೀಕರಣದ ಪ್ರಕ್ರಿಯೆಯಿಂದ ಹೊರಹೊಮ್ಮಿದ ನಮೂನೆಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಲಾರಂಭಿಸಿದರು. ಕೈಗಾರೀಕರಣದ ಉತ್ಪನ್ನಗಳೇ ಪ್ರಸ್ತುತ ಮೇದರ ಆಧುನಿಕ ಮುಖಾಮುಖಿಯ ಪ್ರಧಾನ ಅಂಶವಾಗಿದ್ದು, ಕುಲಕಸುಬಿನ ಎದುರು ದೊಡ್ಡ ಪ್ರಶ್ನೆಯಾಗಿ ರಾರಾಜಿಸುತ್ತಿದೆ. ಪ್ರಕೃತಿಯನ್ನೇ ಆಶ್ರಯಿಸಿಕೊಂಡ ಮೇದರು ಅರಣ್ಯ ಸಂಪತ್ತು ಸರ್ಕಾರದೆಂದು ಘೋಷಣೆಯಾದ ನಂತರ ಕಾಡಿಗೆ ಉಪ ಉತ್ಪನ್ನ (By product)ಗಳಿಂದ ಅನಾಥಪ್ರಜ್ಞೆ ಅನುಭವಿಸುವಂತಾಯಿತು. ಇಂದಿಗೂ ಅರಣ್ಯ ಅಧಿಕಾರಿಗಳು ಮತ್ತು ಮೇದರು ಮುಖಾಮುಖಿಯಾಗುತ್ತಿದ್ದಾರೆ. ಶೇ.೮೫ಕ್ಕಿಂತ ಹೆಚ್ಚಿನ ಮೇದರು ಕುಲಕಸುಬನ್ನೇ ಆಧರಿಸಿರುವ ೨೧ನೇ ಶತಮಾನದ ಆರಂಭದಲ್ಲೂ ಇವರು ಕಾಡಿನ ಬಿದಿರಿಗೆ ಆತುಕೊಂಡಿರುವುದು ಸ್ಪಷ್ಟವಾಗುತ್ತದೆ. ಬಿದಿರಿನಿಂದ ಅನೇಕ ಕಲಾತ್ಮಕ ವಸ್ತುಗಳನ್ನು ತಯಾರಿಸಿ ಬೇಡಿಕೆ ಇಲ್ಲದ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗಾದರೂ ಮಾರಿ ಬದುಕುವ ಅನಿವಾರ್ಯ ಯೋಚನೆಗಳು ಪಾರಂಪರಿಕ ವೃತ್ತಿಗೆ ತಂದಿರುವ ದುರ್ದೆಸೆಯನ್ನು ತಿಳಿಯಬಹುದಾಗಿದೆ. ಮೇದಾರಿಕೆಯ ಉತ್ಪನ್ನಗಳಿಗೆ ಪರ್ಯಾಯವಾಗಿ ಕೈಗಾರಿಕೆಗಳ ಉತ್ಪನ್ನಗಳು ಬಂದಿರುವುದು ತಿಳಿಯದ ಮುಗ್ಧರೇನಲ್ಲ ಮೇದರು. ಆದರೆ ಪಾರಂಪರಿಕ ವೃತ್ತಿಯಿಂದಾಚೆ ಕಂಡುಕೊಳ್ಳುವ ಬದುಕಾದರೂ ಯಾವುದು? ಮುಂದೊಂದು ದಿನ ಇದೇ ಸಂಕಷ್ಟ ಅದಕ್ಕೆ ಬಾರದೇ? ಈಗಲಾದರೂ ಅದಕ್ಕೆ ಸ್ಪರ್ಧೆಯಿಲ್ಲವೇ? ನಮಗಾದರೂ ಯಾವ ಯಾಂತ್ರಿಕ ಕೌಶಲ್ಯತೆಯಿದೆ? ಇಂತಹ ಅನುಮಾನದ, ಶೋಕದ ಚಿಂತನೆಗಳು ಪ್ರಸ್ತುತ ಬದುಕಿನ ಅಸ್ಥಿರತೆಯನ್ನು ಕಾಣಬಹುದಾಗಿದೆ. ನನ್ನ ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡಂತೆ, ಬಿದಿರಿನ ಉತ್ಪನ್ನಗಳಿಗೆ ಬೇಡಿಕೆ, ಮಾರುಕಟ್ಟೆಗಳೆರಡೂ ಇಲ್ಲ. ನಮ್ಮದು ಹೇಗೋ ಜೀವನ ಸಾಗುತ್ತಿದೆ. ನಮ್ಮ ನಂತರದ ತಲೆಮಾರಿನವರು ಈ ವೃತ್ತಿಯನ್ನೇ ನಂಬಿ ಬದುಕಲಾಗದು. ಆದ್ದರಿಂದ ಹೇಗಾದರೂ ಮಾಡಿ ಮಕ್ಕಳನ್ನು ಕಷ್ಟಪಟ್ಟು ಓದಿಸುತ್ತೇವೆ. ಬೇರೆ ಉದ್ಯೋಗವನ್ನು ಅವರು ಪಡೆದುಕೊಳ್ಳಲಿ ಎಂಬ ಮಾತುಗಳು ಬದಲಾವಣೆಯನ್ನು ಒಪ್ಪಿದರೂ ಬದುಕಿನ ಆಳಕ್ಕೆ ಅಳವಡಿಸಿಕೊಳ್ಳಲು ಅನೇಕ ವಿರೋಧಾಬಾಸಗಳು ವ್ಯಕ್ತವಾಗಿವೆ. ವಿಜ್ಞಾನ, ತಂತ್ರಜ್ಞಾನ ಯುಗದ ಈ ಹೊತ್ತಿನಲ್ಲಿ ಉತ್ಪಾದನಾ ವ್ಯವಸ್ಥೆಗೂ ಬುಡಕಟ್ಟುಗಳಿಗೂ ಅನುಸಂಧಾನ ಏರ್ಪಟ್ಟಿಲ್ಲ. ಜಾಗತೀಕರಣದ ವೇಗ ಅವರನ್ನು ಲೆಕ್ಕಕ್ಕೂ ತೆಗೆದುಕೊಂಡಿಲ್ಲ. ಮೊದಲೇ ಬದುಕಿಗಾಗಿ ನಲುಗುತ್ತಿದ್ದ ಮೇದರ ಬದುಕು ಆಧುನಿಕತೆಯ ಭರಾಟೆಯಲ್ಲಿ ತತ್ತರಿಸಿದೆ. ಮೇದರು ಬಿದಿರಿನಿಂದ ತಯಾರಿಸುವ ಎಲ್ಲ ಉತ್ಪನ್ನಗಳನ್ನು ಯಾಂತ್ರಿಕ ಜಗತ್ತು ಉತ್ಪಾದಿಸುತ್ತಿದ್ದು, ಕೈಗಾರಿಕೆಗಳೊಂದಿಗೆ ಅನುಸಂದಾನ ನಡೆಸಿ ಕೆಲವೇ ವಸ್ತುಗಳನ್ನು ಮಾತ್ರ ನಾವು ಉತ್ಪಾದಿಸಲು ಪೇಟೆಂಟ್ ನೀಡಿ ಎಂದು ಕೇಳುವ ವ್ಯಂಗ್ಯ ಮೇದರನ್ನು ಕಾಡುತ್ತಿದೆ. ನಾನು ಕ್ಷೇತ್ರಕಾರ್ಯದಲ್ಲಿಯೇ ಇದ್ದಾಗ

[illegible]

ನರಸಿಂಹರಾಜಪುರದ ಮೇದರ ಓಣಿಯ ೬೭ ವಯಸ್ಸಿನ ಗಂಗಮ್ಮ ಎರಡು ದಿನಗಳಿಂದ ಕಿಗ್ಗ, ಹೊರನಾಡು ಹಳ್ಳಿಗಳನ್ನು ತಿರುಗಿ ಮೇದಾರಿಕೆಯ ವಸ್ತುಗಳನ್ನು ವ್ಯಾಪಾರ ಮಾಡಿ ಎರಡು ಜೊತೆ ಮೊರ ಒಂದು ಗೆರಸಿಯನ್ನು ವಾಪಸ್ಸು ತರುತ್ತಲೇ ಅವರನ್ನು ಪ್ರಶ್ನಿಸಿದಾಗ. "ಮೊದ್ಲಂಗೆ ವ್ಯಾಪಾರ ಇಲ್ಲಣ್ಣ, ಹಳ್ಳಿಯವರು ಬಾರಿ ಕಲ್ತಿದ್ದಾರೆ. ಕಳೆದ ಮುವತ್ತೈದು ವರ್ಷದಿಂದ ಹೊತ್ತುಕೊಂಡೇ ವ್ಯಾಪಾರ ಮಾಡ್ತಿದ್ದೀನಿ. ಆದ್ರೆ ಇನ್ನು ಮುಂದೆ ಹಳ್ಳಿ ಸುತ್ತಕ್ಕೂ ಆಗೋಲ್ಲ, ವ್ಯಾಪಾರನೂ ಇಲ್ಲ" ಎಂದು ಒಂದು ಚೊಂಬು ನೀರನ್ನು ಗಟಗಟ ಕುಡಿಯುತ್ತಲೇ ನನ್ನ ಪ್ರಶ್ನೆಗೆ ಉತ್ತರಿಸಿದರು.

ಆಧುನಿಕತೆ ಕಡೆ ಮೇದರು ಅನಿವಾರ್ಯವಾಗಿ ಮುಖ ಮಾಡಿದ್ದರೂ, ತಮ್ಮ ಬದುಕಿನ ಗುರಿ ಯಾವುದೆಂದು ತಿಳಿಯದಾಗಿದ್ದಾರೆ. 'ಗಾಳಿ ಬಂದಂಗೆ ತೂರಿಕೊಳ್ಳಬೇಕೆಂಬ' ಸರಳ ಸತ್ಯ ಮೇದರನ್ನು ಕಾಪಾಡುತ್ತಿದೆ. ಅವರ ಉತ್ಪಾದನಾ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಬಂದೊದಗಿದೆ. ವಸಾಹತುಶಾಹಿ ಮುಖವಾಡ ಧರಿಸಿರುವ ಇಂದಿನ ಕೆಲವು ಅಧಿಕಾರಿಗಳು ಹಾಗೂ ಸರ್ಕಾರೇತರ ಸಂಘ-ಸಂಸ್ಥೆಗಳು ಬುಡಕಟ್ಟುಗಳ ಉದ್ಧಾರದ ಹೆಸರಿನಲ್ಲಿ ಸರ್ಕಾರಿ ಪ್ರಾಯೋಜಿತ ಯೋಜನೆಗಳ ಸಂಪನ್ಮೂಲವನ್ನೆಲ್ಲ ದೋಚುತ್ತಿದ್ದಾರೆ. ಕಡತಕ್ಕೆ ಬೇಕಾಗುವ ಫೋಟೊಗಳನ್ನು ಕ್ಲಿಕ್ಕಿಸಿ ದಾಖಲೆಗಳನ್ನು ದಪ್ಪ ಮಾಡುತ್ತಾ ತಮ್ಮ ನಿಗಧಿತ ವ್ಯವಹಾರಗಳನ್ನು ಪೂರೈಸಿಕೊಳ್ಳುತ್ತಿದ್ದಾರೆ. ಇಂತಹ ಯಾವ ಕಾರ್ಯಕ್ರಮಗಳೂ ಇಂತಹ ಸಮುದಾಯಗಳ ಬೇರುಮಟ್ಟದವರೆಗೂ ತಲುಪುತ್ತಿಲ್ಲ. ಮೇಲುಸ್ತುವಾರಿ, ಮೌಲ್ಯಮಾಪನ, ಪರಿಶೀಲನೆ ಎಂಬುದೆಲ್ಲವೂ ಕಡತದಲ್ಲಿವೆ. ಕತ್ತಿ ಕೊರಡನ್ನು ನಂಬಿಯೇ ಬದುಕಿದ್ದ ಮೇದರು ಅವುಗಳನ್ನು ಜಿಗುಪ್ಸೆಯಿಂದಲೇ ದೈನಂದಿನ ಕಾಯಕಕ್ಕೆ ತೆಗೆದುಕೊಳ್ಳಬೇಕಾಗಿದೆ.

ಇನ್ನು ಕೆಲವರು ಅವುಗಳು ಎಲ್ಲಿವೆ ಎಂದು ತಡಕಾಡುತ್ತಿದ್ದಾರೆ. ಬಳಸದೇ ಇರುವ ಆಯುದ ತುಕ್ಕು ಹಿಡಿಯಲೇ ಬೇಕಲ್ಲವೇ! ಮೇದರ ಬದುಕಿಗೆ ತುಕ್ಕು ಹಿಡಿಯುತ್ತಿದೆ. ಮೇದಾರಿಕೆಗೆ ವಿಮುಖವಾಗಿರುವ ಶೇ.೧೦ರಷ್ಟು ಮೇದರು 'ವೃತ್ತಿಚಲನೆ' ಹೊಂದುತ್ತಿದ್ದಾರೆ. ಕೃಷಿ, ಕೂಲಿ, ಚಿಕ್ಕಪುಟ್ಟ ವ್ಯಾಪಾರ, ಹಮಾಲಿ, ಖಾಸಗಿ ವಲಯಗಳಲ್ಲಿ ದುಡಿಮೆ ಇತ್ಯಾದಿಗಳಿಗೆ ವಾಲಿದ್ದಾರೆ. ವೈದ್ಯರು 'ಟೆಸ್ಟ್ ಡೋಸೇಜ್' ಕೊಡುವಂತೆ, ಹಿರಿಯರು ತಮ್ಮ ಮಕ್ಕಳಿಗೆ 'ಮೇದಾರಿಕೆಯ ಭೀತಿ'ಯನ್ನು ಪದೇ ಪದೇ ಹೇಳುತ್ತಿದ್ದಾರೆ. ಬೇರೆ ಬದುಕನ್ನು ಕಟ್ಟಿಕೊಳ್ಳುವ ಬಗ್ಗೆ ತಿಳಿಸುತ್ತಿದ್ದಾರೆ. ಯುವ ಸಮುದಾಯವೋ ಈ ಸ್ಪರ್ಧಾ ಪ್ರಪಂಚದಲ್ಲಿ ತಮ್ಮ ಅಸ್ತಿತ್ವವನ್ನು ಹೇಗೆ ರೂಪಿಸಿಕೊಳ್ಳಬೇಕೆಂಬುದರ ಬಗ್ಗೆ ಚಿಂತಿತರಾಗಿದ್ದಾರೆ. ಒಟ್ಟಾರೆ ಮೇದಾರಿಕೆಗೆ ಆಧುನಿಕತೆಯ ಪ್ರಭಾವಬೀರಿ ಬದುಕಿನಲ್ಲಿ ಕವಲುದಾರಿಗಳು ನಿರ್ಮಾಣವಾಗಿವೆ. ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೊಂದಿರುವ ಮೇದರು ಭಾರತೀಯ ಮೂಲ ಸಂಸ್ಕೃತಿಯ ಪರಂಪರೆಯ

ರೀತಿಯಲ್ಲಿ ಜೀವನ ಕ್ರಮ ರೂಪಿಸಿಕೊಂಡಿದ್ದು, ಆಧುನಿಕತೆಯ ಪ್ರಭಾವದಿಂದ ತತ್ತರಿಸಿದ್ದರೂ ಅವೆಲ್ಲವನ್ನು ಅರಗಿಸಿಕೊಂಡು ಮುಂಬರುವ ಬದಲಾವಣೆಗಾಗಿ ತೆರೆದುಕೊಂಡಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಹದಿನೆಂಟು ಆಶ್ರಮಶಾಲೆಗಳಿದ್ದರೂ, ಮೇದರ ಮಕ್ಕಳು ಆಶ್ರಮ ಶಾಲೆಗಳಿಗೆ ದಾಖಲಾಗುತ್ತಿಲ್ಲ. ಸರ್ಕಾರಿ ಶಾಲಾ–ಕಾಲೇಜುಗಳಲ್ಲಿಯೇ ಅಭ್ಯಸಿಸುತ್ತಿದ್ದಾರೆ. ಶೇ.೯೫ ಭಾಗ ವಿದ್ಯಾರ್ಥಿಗಳು ಮನೆಯಿಂದಲೇ ಶಾಲಾ–ಕಾಲೇಜಿಗೆ ಹೋಗಿ ಬರುತ್ತಾರೆ. ತಂದೆ–ತಾಯಿ, ಕುಟುಂಬದವರೊಂದಿಗೆ ಹೊಂದಿರುವ ಅತೀ ಅಕ್ಕರೆಯೇ ಇದಕ್ಕೆ ಕಾರಣವಾಗಿದೆ. 'ಶಿಕ್ಷಣದಿಂದಲೇ ಮುಂದಿನ ಭವಿಷ್ಯ' ಎಂಬ ಧ್ಯೇಯ ವಾಕ್ಯ ಮೇದರನ್ನು ಶಿಕ್ಷಣ ಪ್ರಕ್ರಿಯೆಯಲ್ಲಿ ನಿಧಾನವಾಗಿ ಒಳಗೊಳ್ಳುವಂತೆ ಮಾಡುತ್ತಿದೆ. ಇದು ಶೈಕ್ಷಣಿಕ ಬದಲಾವಣೆ ತರುವಂತೆ, ಸಾಂಸ್ಕೃತೀಕರಣದ ಪ್ರಭಾವದಿಂದ ಬುಡಕಟ್ಟು ಸಂಸ್ಕೃತಿಯಲ್ಲಿ ಅನೇಕ ಬದಲಾವಣೆಗಳಾಗಿವೆ. 'ವೈದಿಕ ಧರ್ಮ'ದ ಪ್ರಭಾವು ಈ ಬುಡಕಟ್ಟಿನ ಮೇಲಾಗಿ ಬುಡಕಟ್ಟು ದೇವಾನುದೇವತೆಗಳ ಜೊತೆಗೆ ವೈದಿಕ ದೇವರುಗಳನ್ನು ಆರಾಧಿಸುತ್ತಾರೆ. ಬಲಿ ಹಾಗೂ ನೈವೇದ್ಯಗಳು ಸಾಂಗವಾಗಿ ನಡೆಯುತ್ತಿವೆ. ಈ ಬುಡಕಟ್ಟು ಜಾತಿ ವ್ಯವಸ್ಥೆಯ ಲಕ್ಷಣಗಳನ್ನು ಮೈಗೂಢಿಸಿಕೊಂಡಿದೆ. ಯಳಬಿ ಹಬ್ಬವೂ ಇದೆ, 'ದೀಪಾವಳಿ'ಯೂ ಇದೆ. ಸಮ್ಮಿಶ್ರಣಗೊಂಡ ಸಾಂಸ್ಕೃತಿಕ ಆಚರಣೆಗಳು ಕಂಡುಬರುತ್ತವೆ. ಜಾತಿ ಪದ್ಧತಿಯಲ್ಲಿರುವ 'ಮಡಿ–ಮೈಲಿಗೆ', ಶುದ್ಧಾಚಾರ ಇತ್ಯಾದಿಗಳು ಹೆಚ್ಚಿವೆ. ಅವಿಭಕ್ತ ಕುಟುಂಬಗಳಲ್ಲಿಯೇ ವಾಸಿಸುತ್ತಿದ್ದ ಮೇದರು ಶೇ.೯೦ಕ್ಕಿಂತ ಹೆಚ್ಚು ಕುಟುಂಬಗಳು ವಿಭಕ್ತವಾಗಿವೆ. ೩೫–೪೦ ವರ್ಷಗಳ ಹಿಂದೆ ಸರ್ಕಾರಿ ಸೌಲಭ್ಯಗಳೇ ಬೇಡವೆಂದ ಕುಟುಂಬಗಳು ಆ ಸೌಲಭ್ಯಗಳಿಗಾಗಿ ಚಾತಕ ಪಕ್ಷಿಯಂತೆ ಕಾಯುತ್ತಿವೆ. ಭೂಮಿಯಿಂದ ದೂರಸರಿದಿದ್ದ ಮೇದರು ಕುಲಕಸುಬಿನ ಸ್ಥಿತ್ಯಂತರದಿಂದ ಭೂಮಿ ಬೇಕೆಂದು ದೊಂಬಾಲು ಬಿದ್ದಿದ್ದು, ಕಂದಾಯ ಇಲಾಖೆಯಲ್ಲಿ ಒಂದರ ಮೇಲೊಂದರಂತೆ ಅರ್ಜಿ ಪೇರಿಸುತ್ತಿದ್ದಾರೆ. ಮನೆಯ ಮುಂಭಾಗದಲ್ಲೇ ಚಪ್ಪರಹಾಕಿ ಮದುವೆ ಮಾಡಬೇಕೆಂದು ಪ್ರತಿಪಾದಿಸುತ್ತಿದ್ದ ಮೇದರು ಛತ್ರದಲ್ಲಿ ಮದುವೆ ಮಾಡುತ್ತಿದ್ದಾರೆ. 'ತೆರ' ಪದ್ಧತಿ ಸಂಪ್ರದಾಯಕಷ್ಟೇ ಸೀಮಿತಗೊಳಿಸಿ 'ವರದಕ್ಷಿಣೆ' ಮೇದರಲ್ಲೂ ಇಣುಕು ಹಾಕಿದೆ. ಮೇದರ ವಿವಾಹ, ಭೌಗೋಳಿಕ ಚೌಕಟ್ಟನ್ನು ದಾಟಿ ಅನ್ಯ ಭಾಷಿಕ ಮೇದರಲ್ಲೂ ವಿವಾಹ ಮಾಡುವ ಆಲೋಚನೆ ನಡೆಯುತ್ತಿದೆ. ಹೆಣ್ಣು ಮಕ್ಕಳನ್ನು ನೌಕರಿಗೆ ಕಳುಹಿಸುವ ಹಾಗೂ ತಾಂತ್ರಿಕ ವೃತ್ತಿಪರ ಶಿಕ್ಷಣ ಕೊಡಿಸಲು ಆಶಿಸುತ್ತಿದ್ದಾರೆ. ಸಂಪ್ರದಾಯಿಕ ನಾಯಕತ್ವ ಪ್ರಶ್ನಿಸುತ್ತಿದ್ದಾರೆ. ಕಟ್ಟೆ ತೀರ್ಮಾನದಿಂದ ಆಚೆ ಕೋರ್ಟು, ಕಛೇರಿಗಳು ಹೆಚ್ಚು ಪ್ರಿಯವಾಗುತ್ತಿವೆ. ಮತದಾನ ಮೂಲಕ ಮತ ಚಲಾಯಿಸುವ ಹಕ್ಕಿನೊಂದಿಗೆ ರಾಜಕೀಯ ಪ್ರತಿನಿಧಿತ್ವವನ್ನು ಪಡೆಯುತ್ತಿದ್ದಾರೆ. ಹಲವು ರಾಜಕೀಯ ಪಕ್ಷಗಳ ಸಖ್ಯ ಬೆಳೆಸಿಕೊಂಡಿದ್ದಾರೆ. ಅವರ ಆರಾಧನಾ ದೇಗುಲಗಳು ಹಳೆಯ ಸ್ವರೂಪ ಕಳಚಿಕೊಂಡು ಆಧುನಿಕ ಶೈಲಿ ಹೊದ್ದುಕೊಂಡಿವೆ. ಸಾರಿಗೆ-ಸಂಪರ್ಕ

ಜಾಲಗಳು ಆಧುನಿಕರಂತೆ ಮೇಳೈಸಿವೆ. ವಾಸದ ಮನೆಗಳು ರೂಪಾಂತರಗೊಳ್ಳುತ್ತಿವೆ. ಬರೀ ಗುಡಿಸಲುಗಳಿದ್ದ ಜಾಗದಲ್ಲಿ ಸುಂದರ ತಾರಸೀ ಮನೆಗಳು ಇಲ್ಲವೇ ಹಂಚಿನ ಮನೆಗಳು ಸ್ಥಾನ ಪಡೆದಿವೆ. ಮನೆಯಲ್ಲಿ ಗೃಹೋಪಯೋಗಿ ವಸ್ತುಗಳು, ಅಲಂಕಾರಿಕ ವಸ್ತುಗಳು, ಪೀಠೋಪಕರಣಗಳು, ವಿದ್ಯುತ್ ಮತ್ತು ಎಲೆಕ್ಟ್ರಾನಿಕ್ ವಸ್ತುಗಳು ಮನೆಯನ್ನು ಅಲಂಕರಿಸಿವೆ. ಬಿದಿರನ್ನು ಹೊತ್ತುಕೊಂಡು ಬರುತ್ತಿದ್ದವರೇ ಸೈಕಲ್‌ನಲ್ಲಿ ತರುವಂತಾದರು. ಈಗ ಸರಕು ವಾಹನಗಳಿಂದ ತರುತ್ತಿದ್ದಾರೆ. ಬೆಳಿಗ್ಗಿನಿಂದ ರಾತ್ರಿವರೆಗೆ ಬಿದಿರಿನ ಕೆಲಸ ಮಾಡುತ್ತಿದ್ದವರು ಕೆಲವೇ ಗಂಟೆಗಳು ಮಾತ್ರ ಮಾಡುತ್ತಿದ್ದಾರೆ. ಹಳ್ಳಿ, ಸಂತೆ, ಪೇಟೆಗಳಲ್ಲಿ ಮೊರ ಬುಟ್ಟಿಯನ್ನು ಮಾರುವುದು ನಾಚಿಕೆಯೆಂದು ಇಂದಿನ ತಲೆಮಾರಿನವರು ಭಾವಿಸುತ್ತಾರೆ. ಹಳ್ಳಿಗಳಲ್ಲಿ ಮೇದಾರಿಕೆ ಉತ್ಪನ್ನಗಳ ವ್ಯಾಪಾರ ಕಡಿಮೆಯಿರುವುದರಿಂದ ಸಾಂಪ್ರದಾಯಿಕ ವೃತ್ತಿ ಸಂಬಂಧದ ಕೊಡಿ ಕಳಚುತ್ತಿದೆ. ತಮ್ಮ ಜನಾಂಗದ ಬೇಡಿಕೆಯನ್ನು ಈಡೇರಿಸಿಕೊಳ್ಳಲು ಕರ್ನಾಟಕ ರಾಜ್ಯ ಮೇದ ಮಹಾ ಸಂಘದ ಸದಸ್ಯತ್ವವನ್ನು ಪಡೆಯುತ್ತಿದ್ದಾರೆ. ಅರಣ್ಯ ಇಲಾಖೆಯ ಅಧಿಕಾರಿಗಳ ದರ್ಪವನ್ನು ಹಿಮ್ಮೆಟ್ಟಿಸುತ್ತಿದ್ದಾರೆ. ಅಭಿವೃದ್ಧಿ ಇಲಾಖೆಗಳಿಂದ ದೊರೆಯುವ ಸವಲತ್ತುಗಳನ್ನು ವಿಚಾರಿಸಿ ಫಲಾನುಭವಿಗಳಾಗುತ್ತಿದ್ದಾರೆ. 'ಸಾಂಘಿಕ ಜೀವನ' ಕ್ರಮವನ್ನು ಓಣಿಗಳಲ್ಲಿ ಇಂದಿಗೂ ಹೊಂದಿದ್ದಾರೆ. ಯಾವುದೇ ಜೀವನ ಆವರ್ತನಾ ಕಾರ್ಯಕ್ರಮಗಳಲ್ಲಿ ಮೇದರೆಲ್ಲರೂ ಒಟ್ಟುಗೂಡುತ್ತಾರೆ. ಅಂತರ್ಮುಖಿಗಳಾಗಿದ್ದ ಮೇದರು ಸಾರ್ವಜನಿಕರೊಂದಿಗೆ ಮುಕ್ತ ಒಡನಾಟವನ್ನು ಹೊಂದುತ್ತಿದ್ದಾರೆ. ಜೀವನ ಶೈಲಿಯಲ್ಲಿ ಹಲವಾರು ಬದಲಾವಣೆಗಳನ್ನು ಕಾಣಲಾರಂಭಿಸಿದೆ. ಸ್ತ್ರೀಯರ ಸ್ಥಾನಮಾನದಲ್ಲಿ ಸಾಕಷ್ಟು ಬದಲಾವಣೆಯಾಗಿ ಪುರುಷ ಸಮಾನವಾಗಿ ಕಾಣಲ್ಪಡುತ್ತಿದ್ದಾಳೆ. ಆಹಾರ ಮತ್ತು ಉಡುಗೆ–ತೊಡುಗೆಯಲ್ಲಿ ಬದಲಾವಣೆಯಾಗುತ್ತಿದೆ. ಬೇಟೆ ಪ್ರವೃತ್ತಿ ಕಡಿಮೆ ಮಾಡಿದ್ದರೂ, ಮೀನಿನ ಶಿಕಾರಿಯನ್ನು ಇಂದಿಗೂ ಉಳಿಸಿಕೊಂಡಿದ್ದಾರೆ. ಆಧುನಿಕತೆಯ ಯುಗ (ERA) ಇಡೀ ಸಮುದಾಯವನ್ನು ಆವರಿಸುವಂತೆ ಮೇದ ಬುಡಕಟ್ಟಿನ ಸಾಂಸ್ಥಿಕ ರೂಪ, ರಚನೆಗಳಲ್ಲಿ ಗುರುತರ ಬದಲಾವಣೆಯನ್ನು ಮಾಡಿದೆ. ಆದಾಗ್ಯೂ ಈ ಬುಡಕಟ್ಟು ತನ್ನ ಪರಂಪರೆಯ ಚಹರೆಗಳನ್ನು ಕುರುಹುಗಳಾಗಿ ಉಳಿಸಿಕೊಂಡು ಮುಂದಿನ ತಲೆಮಾರಿಗೆ ಸಾಗ ಹಾಕುತ್ತಿದೆ.

೩.೧ ಸಾಮಾಜಿಕ ಸ್ಥಿತ್ಯಂತರ

ಯಾವ ಸಂಸ್ಕೃತಿಯೂ ಎಂದಿಗೂ ಸ್ಥಿರವಾಗಿರಲಾರದು. ಒಂಟಿಯಾಗಿ ಮತ್ತು ಪ್ರತ್ಯೇಕವಾಗಿ ಬೆಳವಣಿಗೆ ಹೊಂದಲಾರದು ಎಂಬ ಮಾತು ಮೇದ ಬುಡಕಟ್ಟನ್ನು ಒಳಗೊಂಡಂತೆ ಜಗತ್ತಿನ ಎಲ್ಲಾ ಸಮುದಾಯಗಳಿಗೆ ಅನ್ವಯಿಸುತ್ತದೆ. ಸಾಮಾಜಿಕ ಬದಲಾವಣೆಯ ಪ್ರಭಾವವು ಮೇದರ ಸಾಮಾಜಿಕ ವ್ಯವಸ್ಥೆಯ ಮೇಲೆ ಗಾಢವಾದ ಪ್ರಭಾವ

ಬೀರಿದೆ. ಅದು ಸಾಮಾಜಿಕ ಸಂಘಟನೆ, ಸಾಮಾಜಿಕ ಸಂಸ್ಥೆಗಳು ಮತ್ತು ಸಾಮಾಜಿಕ ಮೌಲ್ಯಗಳ ಮೇಲೆ ಪ್ರಭಾವಿಸಿದೆ. ಮೆಕೈವರ್ ಮತ್ತು ಪೇಜ್‌ರವರು ತಿಳಿಸುವಂತೆ ಸಾಮಾಜಿಕ ಬದಲಾವಣೆಯು ಹಲವು ರೀತಿಯ ಪರಿವರ್ತನೆಗಳಿಗೆ ಜೀವನದ ಮಾನವ ನಿರ್ಮಿತ ಪರಿಸ್ಥಿತಿಗಳಲ್ಲಿನ ಪರಿವರ್ತನೆಗಳಿಗೆ ಮಾನವರ ಮನೋಭಾವನೆಗಳು ಮತ್ತು ನಂಬುಗೆಗಳಲ್ಲಿನ ಪರಿವರ್ತನೆಗಳಿಗೆ, ಮತ್ತು ಮಾನವ ನಿಯಂತ್ರಣಕ್ಕೆ ನಿಲುಕದ ಪರಿವರ್ತನೆಗಳಿಗೆ ಪ್ರತಿಕ್ರಿಯಾತ್ಮಕವಾದ ಪ್ರಕ್ರಿಯೆಯಾಗಿದೆ. ಎಂದು ಉದ್ಧರಿಸಿರುವುದು ಬದಲಾವಣೆ ಸರ್ವಾವೃತ ಪ್ರಕ್ರಿಯೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. 'ಮೇದ' ಬುಡಕಟ್ಟಿನ ಅಧ್ಯಯನದಿಂದ ಅವರ ಬದಲಾದ ಹಲವು ಮುಖಗಳು ಅಭಿವ್ಯಕ್ತಗೊಂಡವು. ಅವುಗಳೆಲ್ಲವನ್ನು ಸ್ಪಷ್ಟಪಡಿಸುತ್ತದೆ.

ವಾಸಸ್ಥಾನ

ಮೂಲಭೂತವಾಗಿ ಮೇದರು ಬಿದಿರು ಎತೇಚ್ಛವಾಗಿ ಸಿಗುತ್ತಿದ್ದ ಕಾಡಿನೊಳಗೇ ಬಿಡಾರಗಳನ್ನು ಕಟ್ಟಿಕೊಂಡು ಕುಲಕಸುಬನ್ನು ಮಾಡುತ್ತಿದ್ದರು. ನಂತರ ವ್ಯಾಪಾರ ದೃಷ್ಟಿ ಹಾಗೂ ಬಿದಿರಿನ ಅಭಾವದಿಂದ ಒಂದು ಕಡೆಯಿಂದ ಮತ್ತೊಂದೆಡೆ ಸಂಚರಿಸುವ ಪ್ರವೃತ್ತಿಯಿಂದಾಗಿ ವಲಸಿಗರಾದರು. ಆಂಧ್ರ, ತಮಿಳನಾಡುಗಳಿಂದ ಬಂದ 'ಮೇದರು' ಕರ್ನಾಟಕದ ಬಹುತೇಕ ಸ್ಥಳಗಳಲ್ಲಿ ನೆಲೆಸಿದ್ದಾರೆ. 'ಕರ್ನಾಟಕ'ದ ಕನ್ನಡ ಮಾತನಾಡುವ ಮೇದರು 'ಮಹಾರಾಷ್ಟ್ರ'ದಲ್ಲಿ ಹೆಚ್ಚಾಗಿ ನೆಲೆಸಿದ್ದು, ಮೇದಾರಿಕೆಯನ್ನೇ ಮುಂದುವರೆಸಿದ್ದಾರೆ. ಕೆಲವು ಮೇದರು ಕಾಡಿನ ಕಾನೂನು ಹಾಗೂ ಅರಣ್ಯ ಇಲಾಖೆಯವರ ಉಪಟಳದಿಂದ ಕಾಡಿನಿಂದ ಜಾರಿಕೊಂಡು ಅರಣ್ಯ ತಪ್ಪಲು, ಇಲ್ಲವೇ ಅಂಚಿನ ಹಳ್ಳಿಗಳಲ್ಲಿ ವಾಸಿಸಬೇಕಾಯಿತು. ಬ್ರಿಟೀಷರ ಸಾಮ್ರಾಜ್ಯಶಾಹಿ ಧೋರಣೆಯಿಂದ ಹುಟ್ಟಿದ 'ವಸಾಹತು' ನೀತಿಯ ಭಾಗವಾಗಿ, ಭೂಮಿ, ಕಾಡಿನ ಸ್ವಾದೀನ ಪ್ರಕ್ರಿಯೆಯಿಂದಾಗಿ ಪೋರ್ಚುಗೀಸರು ಮೇದರಿಂದಲೇ ಕಾಫಿಕುಕ್ಕೆ (ಕಾಫಿ ಬೀಜಗಳನ್ನು ಅತೀ ಸಣ್ಣ ಕುಕ್ಕೆಯಲ್ಲಿ ಮಣ್ಣು ತುಂಬಿಸಿ ಮೊಳಕೆಯೊಡೆಸುವ ಪರಿಕರ)ಗಳನ್ನು ಅಸಂಖ್ಯವಾಗಿ ಬಳಕೆ ಮಾಡುತ್ತಿದ್ದರು.

ವ್ಯಾಪಾರಕ್ಕೆ ಹಳ್ಳಿ, ದೂರದ ಪಟ್ಟಣದ ಸಂತೆಗಳನ್ನು ಕೇಂದ್ರಿಕರಿಸಿಕೊಂಡಿದ್ದ ಮೇದರು, ನಿಧಾನವಾಗಿ ಪಟ್ಟಣ ಹಾಗೂ ನಗರಗಳತ್ತ ಆಕರ್ಷಿತರಾದರು. ಆದರೆ ಕಾಡಿನ ಸಂಬಂಧ ಬಿಡಲಿಲ್ಲ. ಅನುಕೂಲಕರಕ್ಕಾಗಿ ಹಾತೊರೆಯುವ ಮಾನವನ ಮನಸ್ಸು, ಹಳ್ಳಿ, ಪಟ್ಟಣ, ನಗರಗಳ ಹೊರವಲಯದಲ್ಲಿ ತಮ್ಮದೇ ಆದ 'ಮೇದರ ಕೇರಿ', 'ಮೇದರ ಓಣಿ', 'ಮೇದರಟ್ಟಿ' ಕಟ್ಟಿಕೊಂಡು ಗುಂಪು ಮನೆಗಳಲ್ಲಿ ವಾಸಿಸುತ್ತಿರುವುದರಿಂದ ಇಂದಿಗೂ ಅಂತಹ ಮನೆಗಳಲ್ಲೆ ಮೇದರು ವಾಸಿಸುತ್ತಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ, ತರೀಕೆರೆ, ಅಜ್ಜಂಪುರ, ಆಲ್ದೂರು, ಚಿಕ್ಕಮಗಳೂರು, ಕೋಡಿಕ್ಯಾಂಪ್, ಎಂ.ರಂಗಾಪುರ, ಹಾಗೂ ಉಪ್ಪಾರ ಬೀರನಹಳ್ಳಿಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಮೇದರು 'ಗುಂಪು ಮನೆ'ಗಳಲ್ಲಿಯೇ

ವಾಸವಿದ್ದಾರೆ. ಚದುರಿ ಹೋಗಿರುವ ಮೇದರು ತಮ್ಮ ತಮ್ಮ ಭಾಷಿಕ ಮೇದರೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದಾರೆ.

ವಿವಾಹ

ಮೇದರಲ್ಲಿ ಒಳಬಾಂಧ್ಯವ್ಯ ವಿವಾಹಗಳೇ ಪ್ರಚಲಿತವಿದ್ದು, ಕುಲ-ಗೋತ್ರ-ಬೆಡಗು ಆಧಾರಿತವಾಗಿ ವಿವಾಹಗಳು ಜರುಗುತ್ತವೆ. ಒಂದೇ ಬುಡಕಟ್ಟಿನ ಸಗೋತ್ರವಲ್ಲದ ಗಂಡು ಮಗುವಿನ ಹುಟ್ಟಿನೊಂದಿಗೆ, ಆ ಬುಡಕಟ್ಟಿನ (ಅತ್ತೆಯ, ಮಾವನ ಮಗಳು) ಹೆಣ್ಣು ಮಗುವಿನ ಮದುವೆಗೆ ಹೆಸರಿಡುವ ಪದ್ಧತಿ ಅತಿ ಹೆಚ್ಚಾಗಿ ಇದ್ದಿತ್ತು. 'ಹೆಸರಿಟ್ಟಿದ್ದೇವೆ' ಎಂಬ ಹೆಸರಿನಿಂದಲೇ 'ಮದುವೆ'ಗೆ ಕರಾರು ಮಾಡುವ ವಾಡಿಕೆಯಿಂದ 'ತೊಟ್ಟಿಲು ವಿವಾಹ'ಗಳು ಇದ್ದವು. ನಾಮಕರಣಕ್ಕಾಗಿ ತೊಟ್ಟಿಲು ಶಾಸ್ತ್ರ ಮಾಡುವಾಗಲೇ 'ಗಂಡು-ಹೆಣ್ಣ'ನ್ನು ಹೊಂದಿಸುತ್ತಿದ್ದರು. ಆ ಮಕ್ಕಳ ಕಿವಿಯೊಳಗೆ ಆಗ ತಾನೇ ಹೆಸರಿಟ್ಟ ಹುಡುಗ, ಇಲ್ಲವೇ ಹುಡುಗಿಯ ಹೆಸರನ್ನು ಹಸುಳೆಗಳ ಪರಸ್ಪರ ಕಿವಿಯೊಳಗೆ 'ಇವನೇ ನಿನ್ನ ಗಂಡ', 'ಇವಳೇ ನಿನ್ನ ಹೆಂಡತಿ' ಎಂದು ಹೇಳುತ್ತಿದ್ದರು. ನಂತರದ ದಿನಗಳಲ್ಲಿ ಬಾಲ್ಯ ವಿವಾಹ, ಅಪ್ರಾಪ್ತ ವಯಸ್ಕ ವಿವಾಹಗಳು ಸರ್ವೇಸಾಮಾನ್ಯವಾದುವು. ಆರು ದಶಕಗಳ ಹಿಂದೆಯೂ ಮೇದರಲ್ಲಿ ಅಪ್ರಾಪ್ತ ವಯಸ್ಸಿನಲ್ಲಿಯೇ ವಿವಾಹವಾದ ಉದಾಹರಣೆಗಳು ನನ್ನ ಸಂಶೋಧನಾ ಕ್ಷೇತ್ರದ ವ್ಯಾಪ್ತಿಯಲ್ಲಿ ಲಭಿಸಿದವು. ಮದುವೆಯಾಗಿ ೩-೪ ವರ್ಷಗಳಿಗೆ ಋತುಮತಿಯಾದ ಪ್ರಕರಣಗಳು ಹೆಚ್ಚಿದ್ದವು. ಅಂದರೆ ಸುಮಾರು ೮-೯ನೇ ವಯಸ್ಸಿನಲ್ಲಿ ವಿವಾಹಗಳು ಆಗಿವೆ. ೧೯ನೇ ಶತಮಾನದಲ್ಲಿಯೇ ಶ್ರೀ ರಾಮಕೃಷ್ಣ ಪರಮಹಂಸರು ೬ ವರ್ಷದ ಕನ್ಯೆಯನ್ನು, ಎಂ.ಜಿ.ರಾನಡೆಯವರು ೮ ವರ್ಷದವಳನ್ನು, ಡಿ.ಕೆ.ಕರ್ವೆಯವರು ೯ ವರ್ಷದವಳನ್ನು ವಿವಾಹವಾಗಿದ್ದನ್ನು ನೆನಪಿಸಿಕೊಳ್ಳಬಹುದು. ಆನಂತರ ಮೇದರು ಋತುಮತಿಯಾದ ನಂತರ ವಿವಾಹವಾಗುವ ತೀರ್ಮಾನಕ್ಕೆ ಬಂದಿದ್ದರಿಂದ ಹುಡುಗಿಗೆ ೧೫-೧೬ ವರ್ಷದಲ್ಲಿ, ಹುಡುಗನಿಗೆ ೧೮-೨೦ ವರ್ಷಗಳಲ್ಲಿ ವಿವಾಹ ಏರ್ಪಟ್ಟವು. ಈಗ ಕಾನೂನಿನ ಪ್ರಕಾರ ಹೆಣ್ಣಿಗೆ ೧೮, ಗಂಡಿಗೆ ೨೧ ವಯಸ್ಸು ಆಗಲೇಬೇಕು ಎಂದಿದ್ದರೂ, ತಮ್ಮ ವಿವಾಹವನ್ನು ಉದ್ದೇಶ ಪೂರ್ವಕವಾಗಿ ಮುಂದೂಡುತ್ತಿದ್ದಾರೆ. ಉದ್ಯೋಗ, ಸ್ವಾವಲಂಬನೆ, ಸಹೋದರಿಯರ ಮದುವೆ, ಮನೆಕಟ್ಟಬೇಕು, ಕಾಫಿ, ರಬ್ಬರ್ ಬೆಳೆಬರಬೇಕು, ದುಡ್ಡು ಜೋಡಿಸಿಟ್ಟುಕೊಂಡು ವಿವಾಹವಾಗಬೇಕೆಂಬ ಧೋರಣೆಗಳಿಂದಾಗಿ ವಿಳಂಬಿತ ವಿವಾಹಗಳು ನಡೆಯುತ್ತಿವೆ. ಆದರೂ ಹೆಣ್ಣಿಗೆ ೨೨-೨೪, ಗಂಡಿಗೆ ೨೬-೨೮ರ ವಯಸ್ಸಿನಲ್ಲಿಯೇ ವಿವಾಹ ಮಾಡುವ ಪ್ರಯತ್ನಗಳಂತೂ ಮೇದರ ಹಿರಿಯರಿಂದ ನಡೆಯುತ್ತಲೇ ಇವೆ. ಗೌಡ, ಬುದ್ಧಿವಂತ, ಬುಡಕಟ್ಟು ಹಿರಿಯರ ಮುಖಂಡತ್ವದಲ್ಲಿ ನಡೆಯುತ್ತಿದ್ದ ವಿವಾಹಗಳು ವೈದಿಕ ಪದ್ಧತಿಯಂತೆ ಪುರೋಹಿತರು, ಐನೋರು ಉಪಸ್ಥಿತಿಯಲ್ಲಿ

[illegible]

ನಡೆಯುತ್ತಿವೆ. ಮನೆಯ ಮುಂದೆ ಬದಲಾಗಿ ವಿವಾಹಗಳು ಛತ್ರಗಳಲ್ಲಿ ಜರಗುತ್ತಿವೆ. ಸಾಮೂಹಿಕ ವಿವಾಹಕ್ಕೆ ಒಪ್ಪದ ಮೇದರು, ಇತ್ತೀಚಿಗೆ 'ಸಾಮೂಹಿಕ ವಿವಾಹ'ಕ್ಕೆ ಒಲವು ತೋರುತ್ತಿದ್ದಾರೆ. ತೆರ ಕೊಡುತ್ತಿದ್ದವರು ಈಗ ವರದಕ್ಷಿಣೆ ತೆಗೆದುಕೊಳ್ಳುತ್ತಿದ್ದಾರೆ. ಏಳು ದಿನಗಳು ನಡೆಯುತ್ತಿದ್ದ ವಿವಾಹ ಪ್ರಕ್ರಿಯೆ ಒಂದು ದಿನಕ್ಕೆ ಮೊಟಕುಗೊಂಡಿದೆ. ಒಟ್ಟಾರೆ ವಿವಾಹ ವಿಧಿ-ವಿಧಾನ ಪ್ರಕ್ರಿಯೆಗಳಲ್ಲಿ ಗುರುತರ ಬದಲಾವಣೆಗಳಾಗಿವೆ, ಆಗುತ್ತಿವೆ.

ಕೂಡಿಕೆ

'ಕೂಡಿಕೆ' ಮೇದರಲ್ಲಿ ಒಪ್ಪಿತ ವಿವಾಹವಾಗಿತ್ತು. 'ವಿಧವೆ', ವಿಧುರ'ರ ಒಪ್ಪಿಗೆ ಪಡೆದು ಗೌಡ, ಬುದ್ಧಿವಂತರ ಸಮ್ಮುಖದಲ್ಲಿ 'ಸಂಜೆ' ವೇಳೆಯಲ್ಲಿ ಈ ವಿವಾಹವಾಗುತ್ತಿತ್ತು. ಇದೊಂದು 'ವಿಧವಾ ವಿವಾಹ', 'ವಿಧುರ ವಿವಾಹ' ರೀತಿಯದ್ದಾಗಿತ್ತು. "ಸಾಮಾನ್ಯವಾಗಿ ನಿಷಿದ್ಧ ಸಂಬಂಧಗಳು ವಿಧವಾ ವಿವಾಹದಲ್ಲೂ ನಿಷಿದ್ಧವೇ. ವಿಧವೆ ಗಂಡನ ಸಹೋದರನನ್ನು ಮದುವೆಯಾಗಕೂಡದು. ಕೆಲವೊಮ್ಮೆ ಗಂಡನ ಹತ್ತಿರದ ಸಂಬಂಧಿಗಷ್ಟೇ ಅಲ್ಲ ಅವನ ಗೋತ್ರದ ಯಾರನ್ನೂ ಮದುವೆಯಾಗುವಂತಿಲ್ಲ".[೬] ಮರುವಿವಾಹವಾಗುವ ವಿಧುರ ವಿವಾಹಕ್ಕಿಂತ ಮೊದಲು 'ಎಕ್ಕೆಗಿಡ'ದೊಂದಿಗೆ ವಿವಾಹವಾಗಬೇಕು. ಎಕ್ಕೆಗಿಡಕ್ಕೆ ಕಪ್ಪು ಬಟ್ಟೆಯನ್ನು ಕಟ್ಟಿ ಹಣ್ಣು-ಕಾಯಿ ಪೂಜೆ ಸಲ್ಲಿಸಿ ಎಕ್ಕೆಯ ಎರಡು ಹೂವುಗಳನ್ನು ಹೊಸ ವಸ್ತ್ರದಲ್ಲಿ ಸುತ್ತಿ, ಹುಡುಗನ ಬಲಗೈಗೆ ಕಟ್ಟುತ್ತಾರೆ. ಸಾಮಾನ್ಯ ಮೇದರ ವಿವಾಹದಂತೆಯೇ ಈ ವಿವಾಹವು ನಡೆಯುವುದಾದರೂ ಮದುವೆಯ ಸಾರಥ್ಯವನ್ನು ಗೌಡ, ಬುದ್ಧಿವಂತ, ಯಜಮಾನರು ಹಾಗೂ ವಿಧವೆಯರು ವಹಿಸಿಕೊಂಡಿರುತ್ತಾರೆ. ಇವರ 'ವಿವಾಹ'ವನ್ನು ಗೌಡರು, ಬುದ್ಧಿವಂತರು ಘೋಷಿಸುತ್ತಾರೆ. ಗಂಡಿನ ಮನೆಯಲ್ಲಿ ಸಂಜೆ ನಡೆಯುವ ವಿವಾಹವನ್ನು 'ಸೀರುಡಿಕೆ' ಎಂದು ಕರೆಯುತ್ತಾರೆ. ಕರಿಯ ಕಂಬಳಿಯ ಮೇಲೆ ಮದುಮಕ್ಕಳನ್ನು ಕೂರಿಸಿ, ವಿಧವೆಯರು ಸೇಸೆ ಎರಚುತ್ತಾರೆ. ಆರತಿ ಬೆಳಗುವುದಿಲ್ಲ. ವಧುವರರ ಎದುರಿಗೆ ಹಣತೆಯೊಂದನ್ನು ಹಚ್ಚಿಟ್ಟಿರುತ್ತಾರೆ. ಸರಳ ವಿವಾಹದ ನಂತರ ವಧುವರರು ಮೊದಲ ರಾತ್ರಿಯನ್ನು ನೆರೆಯ ಗ್ರಾಮದಲ್ಲಿ ಕಳೆಯಬೇಕು. ಮಾರನೆದಿನ ತನ್ನ ಊರಿಗೆ ವಾಪಸ್ಸು ಬರಬಹುದು. 'ಕರೆಯುವ ಕಳಿಸುವ ಶಾಸ್ತ್ರ' ಏನೂ ಇರುವುದಿಲ್ಲ. ಮದುವೆ ಆದ ದಿನ ರಾತ್ರಿ ಸಂಬಂಧಿಕರೆಲ್ಲರಿಗೂ ಊಟದ ವ್ಯವಸ್ಥೆ ಮಾಡಿರುತ್ತಾರೆ. ವಿಧವೆಯ ಮಕ್ಕಳಿಗೆ ಎಲ್ಲಾ ಬಗೆಯ ಹಕ್ಕುಗಳಿರುತ್ತವೆ. ಅವಳ ಮಕ್ಕಳು ಎಲ್ಲರಂತೆ ಮದುವೆಯಾಗಬಹುದು.

ಇತ್ತೀಚಿನ ದಿನಗಳಲ್ಲಿ 'ಸೀರುಡಿಕೆ' 'ಕೂಡಿಕೆ' ಮರೆಯಾಗುತ್ತಿದೆ. ವೈದವ್ಯವನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆ. ಆದರೆ ವಿಧುರರು ಕನ್ಯೆಯೊಂದಿಗೆ ವಿವಾಹವಾಗಲು ತವಕಿಸುತ್ತಿದ್ದಾರೆ. 'ವಿಧವಾ ವಿವಾಹ' ಇಲ್ಲವೆಂದೇ ಹೇಳಬಹುದು. 'ಆದರ್ಶ ಯುವಕ'ರ ಲಭ್ಯತೆಯಂತೂ ಇಲ್ಲವೇ ಇಲ್ಲ. ವಿಧವೆ ಅಮಂಗಲೆ ಎಂದು ಪರಿಗಣಿಸಲಾಗುತ್ತಿದೆ.

ಕುಟುಂಬ

ಇದೊಂದು ಸಾರ್ವತ್ರಿಕವಾದ, ಖಾಯಂ ಆದ ವ್ಯಾಪಕವಾದ ವ್ಯವಸ್ಥೆ. ಸಾಮಾಜಿಕವಾಗಿ ಅಂಗೀಕೃತವಾದ ಲೈಂಗಿಕ ಸಂಪರ್ಕ, ಸಂತಾನ ಕ್ರಿಯೆ, ಸಮಾನ ವಸತಿ, ಕೌಟುಂಬಿಕ ಕಾರ್ಯಗಳು, ಆರ್ಥಿಕ ಸಹಕಾರ ಕುಟುಂಬದಿಂದ ಸಾಧ್ಯವಾಗಿದೆ. ಈಶಾನ್ಯ ಭಾಗದ ಗಾರೋ, ಖಾಸಿ ಮತ್ತು ನಾರ್ ಪಂಗಡಗಳು ನಾಯರ್, ಮಾಪಿಳ್ಳೆ, ಲಕ್ಷದ್ವೀಪ ನಿವಾಸಿಗಳು ದಕ್ಷಿಣ ಭಾರತದ ಹಲವು ಆದಿವಾಸಿಗಳು ಮತ್ತು ಇತರ ವರ್ಗಗಳಲ್ಲಿ ಕಂಡುಬಂದ 'ಮಾತೃಗೋತ್ರ' ಪ್ರಧಾನ್ಯತೆ ಮೇದರಲ್ಲೂ ಇತ್ತು ಎಂಬುದಕ್ಕೆ ಇಂದಿಗೂ ಚಹರೆಗಳು ಲಭ್ಯವಾಗುತ್ತವೆ. 'ಮನೆತನ'ವನ್ನು ಹೆಣ್ಣಿನ ಹೆಸರಿನಿಂದ ಕರೆಯಲ್ಪಡುತ್ತಿತ್ತು. ಉದಾಹರಣೆಗೆ 'ಶೇಷಿ ಮನೆಯವರು, ಸುಬ್ಬಕ್ಕನ ಕುಟುಂಬ, ಕರಿಯಮ್ಮ ಕುಟುಂಬ' ಈ ಮಾತುಗಳು ಈಗಿನ ಅತ್ಯಂತ ಹಿರಿಯ ಹೆಂಗಸರು ತಿಳಿಸುತ್ತಾರೆ. ಇದಕ್ಕೆ ಪೂರಕವೆಂಬಂತೆ ಮಾತೃಪ್ರಧಾನ ದೇವತೆಗಳಿರುವುದು ಕರಿಯಮ್ಮ, ದೇವಿರಮ್ಮ (ದೀಪಾವಳಿಯಲ್ಲಿ ವಿಶೇಷವಾಗಿ ಆರಾಧಿಸುವ ದೇವತೆ), ಅಂತರಘಟ್ಟಮ್ಮ, ಮಾರಮ್ಮ, ಚೌಡಮ್ಮ, ಗುತ್ಯಮ್ಮ, ಗುಳ್ಳಮ್ಮ, ಕೊಲ್ಲಾರಮ್ಮ... ಇತ್ಯಾದಿ ಮೇದರ ಆರಾಧನಾ ದೇವತೆಗಳು ಮಾತೃಪ್ರಧಾನ್ಯತೆಯನ್ನು ಪುಷ್ಟೀಕರಿಸುತ್ತದೆ. ಆದರೆ ಬದಲಾವಣೆಯ ವ್ಯವಸ್ಥೆಯಲ್ಲಿ 'ಪಿತೃಗೋತ್ರ', 'ಪಿತೃ ಬೆಡಗಿ'ನಿಂದ ತಂದೆಯ ಆಳ್ವಿಕೆಯನ್ನು ಹಾಗೂ ಪಿತೃ ಕುಟುಂಬ ಪ್ರಧಾನ್ಯತೆ ಕಾಣಬಹುದು.

ಮುತ್ತಜ್ಜ, ಅಜ್ಜ, ಅಜ್ಜಿ, ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳೆಲ್ಲರೂ ಒಂದೇ ಸೂರಿನಡಿಯಲ್ಲಿ ವಾಸಿಸುತ್ತ ಅವಿಭಕ್ತ ಕುಟುಂಬವನ್ನು ಕಟ್ಟಿಕೊಂಡಿದ್ದ ಮೇದರಲ್ಲಿ ಅವುಗಳ ಸಂಖ್ಯೆ ಕ್ಷೀಣಗೊಂಡಿರುವುದು ಕಂಡುಬರುತ್ತದೆ. ಅಧ್ಯಯನಕ್ಕೊಳಪಡಿಸಿದ ೩೭೩ ಕುಟುಂಬಗಳಲ್ಲಿ ಕೇವಲ ೨೫ ಕುಟುಂಬಗಳಲ್ಲಿ ಅವಿಭಕ್ತ ಕುಟುಂಬ ಪದ್ಧತಿ ಕಾಣಬಹುದಾಗಿದೆ. ವಸತಿ, ಖಾಸಗಿ ಬದುಕು, ಉದ್ಯೋಗ ಇತ್ಯಾದಿ ಅಂಶಗಳಿಂದಾಗಿ ವಿಭಕ್ತ ಕುಟುಂಬಗಳ ಬಗೆಗೆ ಒಲವು ತೋರಿದ್ದಾರೆ. ಕುಟುಂಬದ 'ಹಿರಿಯರಿ'ಗೆ ತೋರುವ ಗೌರವವೇನೂ ಕಡಿಮೆಯಿಲ್ಲ ಆದರೆ ವಿಭಕ್ತ ಕುಟುಂಬದ ಮುಖ್ಯ ನಿರ್ಧಾರಗಳೆಲ್ಲವೂ ಆಯಾ ಕುಟುಂಬದ ಪುರುಷರದೇ ಹೆಚ್ಚು ಎಂದು ತಿಳಿದು ಬಂದಿದೆ.

ಸ್ತ್ರೀ ಸ್ಥಾನಮಾನದಲ್ಲಿನ ಬದಲಾವಣೆ ಮೇದರ ಕುಟುಂಬಗಳಲ್ಲಿನ ಸ್ತ್ರೀಯರೂ ನಿರ್ಧಾರ ತೆಗೆದುಕೊಳ್ಳುವಾಗ ಪಾಲ್ಗೊಳ್ಳುತ್ತಾರೆ. ಸ್ತ್ರೀ ಎರಡನೇ ದರ್ಜೆಯ ಪ್ರಜೆಯಾಗಿ ಮೇದ ಬುಡಕಟ್ಟಿನಲ್ಲಿ ಪರಿಗಣಿಸಲ್ಪಟ್ಟಿಲ್ಲ. ಬದಲಿಗೆ ಪುರುಷನ ಪ್ರಾಬಲ್ಯ ಸ್ವಲ್ಪ ಜಾಸ್ತಿಯೆಂದೆನಿಸಿದರೂ ಸ್ತ್ರೀಯ ಅಸ್ತಿತ್ವವನ್ನು ದೃಢಪಡಿಸುತ್ತದೆ. ಸ್ತ್ರೀಗೆ ಆಸ್ತಿಯ ಹಕ್ಕು ನೀಡಿಲ್ಲ. ಕಾರಣ ಮದುವೆಯನ್ನು ಶಕ್ತಿಮೀರಿ ವರದಕ್ಷಿಣೆ ನೀಡಿ ಮಾಡುವುದರಿಂದ ಆಸ್ತಿ ಹಕ್ಕಿನ ಬಗ್ಗೆ ಯಾವ ಪ್ರಕರಣಗಳು ಉದಯಿಸಿಯೇ ಇಲ್ಲಿ. 'ವಿವಾಹ ವಿಚ್ಛೇದನ', 'ಪರಿತ್ಯಜನೆ' ಮೇದರಲ್ಲಿ ತೀರಕಡಿಮೆ ಅಥವ

ಇಲ್ಲವೇ ಇಲ್ಲವೆಂದು ಹೇಳಬಹುದು. ಕಡು ಬಡತನದಲ್ಲೂ ಹೊಂದಾಣಿಕೆಯ ಬದುಕು ಮಾಡಿಕೊಂಡು ಹೋಗುವ ಮನಸ್ಥಿತಿ ಮೇದರರದು. ಮೇದರ ಸಾಂಸ್ಕೃತಿಕ ನಾಯಕರಾದ ಕೇತಯ್ಯ ಮತ್ತು ಪತ್ನಿ ಸಾತೆವ್ವನ ಹೊಂದಾಣಿಕೆ ಬದುಕಿನ ಆದರ್ಶ ಮೇದರಲ್ಲಿ ವ್ಯಕ್ತವಾಗಿದೆ. ಇಂದು ಭಾರತೀಯ ಸಾಂಸ್ಕೃತಿಕ ಜಗತ್ತಿನ ಸ್ವರೂಪ ಬದಲಾಗಿದೆ. ವೃತ್ತಿ ಶಿಕ್ಷಣ, ಕಂಪ್ಯೂಟರ್ ತರಬೇತಿ, ಉದ್ಯೋಗ, ಸ್ವಂತ ಉದ್ದಿಮೆ ಇತ್ಯಾದಿ ಕ್ಷೇತ್ರಗಳಲ್ಲಿ ದುಡಿಯುವ ಇಂಗಿತ ಮಹಿಳೆಯರಲ್ಲಿದೆ. ಹೊಸ್ತಿಲೇ ದಾಟದ ಹೆಣ್ಣು ಮಗಳು ಇಂದು ಶಿಕ್ಷಣಕ್ಕಾಗಿ, ಉದ್ಯೋಗಕ್ಕಾಗಿ ಹೊರ ನಡೆದಿದ್ದಾಳೆ.

ನನ್ನ ಅಧ್ಯಯನ ಕ್ಷೇತ್ರದಲ್ಲಿ ೪೮೬ ಕಲಿತ ಮಹಿಳೆಯರಿದ್ದಾರೆ. ಪುರಷರಿಗಿಂತ ಓದಿನಲ್ಲಿ ಸ್ತ್ರೀಯರದೇ ಮೇಲುಗೈ. ವೃತ್ತಿ ಶಿಕ್ಷಣದಲ್ಲೂ ಅವರೇ ಮುಂದಿರುವುದು ಕಾಣಬಹುದು. ಗಂಡು-ಹೆಣ್ಣು ಎರಡೂ ಒಂದೇ ಎನ್ನುವ ಮನೋಭಾವನೆಯನ್ನು ಕಂಡುಕೊಳ್ಳಲಾಗಿದೆ. ಪುರುಷನಿಗೆ ಸರಿಸಮಾನಾಗಿ ಮೇದ ಮಹಿಳೆಯರು ಕುಲಕಸುಬು ಮಾಡುತ್ತಾರೆ. ಚಿಕ್ಕಪುಟ್ಟ ಬಿದಿರಿನ ವ್ಯಾಪಾರದಿಂದ ಬರುವ ಪುಡಿಗಾಸಿನ ಒಡತಿಯೂ ಆಗುತ್ತಾಳೆ. ಕುಟುಂಬದ ಚಿಕ್ಕಪುಟ್ಟ ನಿರ್ವಹಣೆ ಈ ಪುಡಿಗಾಸಿನಿಂದ ನಿರ್ವಹಿಸುತ್ತಾಳೆ. ಮಕ್ಕಳ ವಿದ್ಯಾಭ್ಯಾಸದ ಹೊಣೆ, ಪುರುಷನಿಗಿಂತ ಹೆಣ್ಣುಮಕ್ಕಳದೇ ಹೆಚ್ಚು. ಸ್ವ-ಸಹಾಯ ಸಂಘಗಳಲ್ಲಿ ಮೇದ ಮಹಿಳೆಯರು ಸದಸ್ಯತ್ವ ಪಡೆದಿದ್ದು ಸಾಂಘಿಕ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ ಕಾಣಬಹುದು. ಹಣದ ಉಳಿತಾಯ, ಮರುಬಳಕೆ, ಸಾಲ ಪಡೆಯುವಿಕೆ ಇತ್ಯಾದಿ ಸಹಕಾರ ತತ್ವದ ವಾಣಿಜ್ಯ ವ್ಯವಹಾರಗಳಿಂದ ಸ್ತ್ರೀಯ ಸ್ಥಾನಮಾನದಲ್ಲಿ ಏರಿಕೆ ಕಾಣಲಾರಂಭಿಸಿದೆ. ರಾಜಕೀಯ ಕ್ಷೇತ್ರದಲ್ಲಿ ಶೇ.೯೫ ಭಾಗ ಮಹಿಳೆಯರೇ ಪ್ರತಿನಿಧಿಸಿರುವುದು ರಾಜಕೀಯ ಸ್ಥಾನಮಾನದ ಹೆಗ್ಗುರುತಾಗಿದೆ. ಈ ಪ್ರಕ್ರಿಯೆಗೆ ಪುರುಷರು ಅಸೂಯೆ ಪಟ್ಟುಕೊಂಡಿರುವುದಿಲ್ಲ.

ಬುಡಕಟ್ಟು ಆಚರಣೆಗಳಲ್ಲಿ ಬದಲಾವಣೆ : “ಬುಡಕಟ್ಟಿನ ರಕ್ತ ಸಂಬಂಧದ ಮೂಲ ಕೊಂಡಿಯೇ ಬಳಿ, ಕುಲ ಅಥವಾ ಬೆಡಗು ಇವುಗಳ ಆಧಾರದ ಮೇಲೆ ಬುಡಕಟ್ಟಿನ ಮೂಲ ಪತ್ತೆ ಹಚ್ಚುಬಹುದಾಗಿದೆ. ಪರಿಸರದ ಪ್ರಾಣಿ, ಪಕ್ಷಿ, ಗಿಡ, ಮರ, ಹೂ, ಬಳ್ಳಿಗಳು, ಸ್ಥಳ, ಕಾಯಕ ಇತ್ಯಾದಿಗಳೆಲ್ಲವೂ ಬುಡಕಟ್ಟಿನ ಬಳಿ, ಕುಲ ಅಥವಾ ಬೆಡಗುಗಳಾಗಬಹುದು. ಒಂದರ್ಥದಲ್ಲಿ ಬುಡಕಟ್ಟುಗಳ ಮೂಲ ಕುರುಹು ಎಂದರ್ಥ”[೨] ಬೆಸ ಕುಲ ಬೆಡಗು-ಕುಲ-ಬಳಿಗಳಲ್ಲಿ ಮಾತ್ರ ವಿವಾಹವಾಗಬೇಕು ಎಂಬ ನಂಬಿಕೆ ತಲತಲಾಂತರದಿಂದಲೂ ಬಂದಿದ್ದು, ನಿಷೇದಿತ ಬಳಿಗಳಲ್ಲಿ ವಿವಾಹವಿರಲಿಲ್ಲ. ಇಂದು ತಮ್ಮ ಬುಡಕಟ್ಟಿನ ಬೇರೆ ಭಾಷಿಕ ಮೇದರಲ್ಲಿ, ಉದಾಹರಣೆಗೆ ತೆಲುಗು, ಕನ್ನಡ, ತಮಿಳು ಮೇದರಲ್ಲಿ ಪರಸ್ಪರ ವಿವಾಹವಾಗುವ ಇಲ್ಲವೇ ಆ ನಿಟ್ಟಿನಲ್ಲಿ ಚಿಂತಿಸುವ ಪ್ರಕ್ರಿಯೆ ಆರಂಭವಾಗಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ತೆಲುಗು-ಕನ್ನಡ ಮೇದರು, ದಾವಣಗೆರೆಯ ಕನ್ನಡ ಮೇದರು ನಡುವೆ, ಮಾಗಡಿಯ ಹೊಸಪೇಟೆಯಿಂದ

ಬೇರೆ ಬೆಡಗಿನ ಹುಣಸೂರು ಕನ್ನಡ ಮೇದರು, ದಾವಣಗೆರೆಯ ಕನ್ನಡ ಮೇದರು, ಮಹಾರಾಷ್ಟ್ರದ ಮರಾಠಿ ಭಾಷಿಕ ಮೇದರ ಜೊತೆಗೆ ವಿವಾಹಗಳು ಅಲ್ಲೊಂದು ಇಲ್ಲೊಂದು ಲಘು ಪ್ರತಿಭಟನೆಯೊಂದಿಗೆ ಜರುಗುತ್ತಿವೆ. ಇಂತಹ ವಿವಾಹಗಳಿಂದಾಗಿ ಮೂಲ ಬುಡಕಟ್ಟು ಸಂಪ್ರದಾಯದಲ್ಲಿ ಲಘು ಕಂಪನವಾದಂತೆ ಮೇದರು ಭಾವಿಸುತ್ತಾರೆ. ಮೇದರ ಹಿರಿಯ ಮತ್ತು ಕಿರಿಯ ತಲೆಮಾರಿನ ನಡುವೆ ಅಂತರವಿದ್ದು, ಹೊಸ ತಲೆಮಾರಿನವರು ಸಂಪ್ರದಾಯ ಬಿಟ್ಟು ಯೋಚಿಸುವ ಪ್ರಯತ್ನ ಮಾಡುತ್ತಿದ್ದಾರೆ.

ಬುಡಕಟ್ಟು ದೈವಗಳಾದ ಸೂರ್ಯ, ಚಂದ್ರ, ಗುಡ್ಡ, ಪರ್ವತ, ನೀರು, ತೊರೆ, ಆಕಾಶ, ಭೂಮಿ ಇತ್ಯಾದಿಗಳು ದೂರವಾಗುತ್ತಾ ಶೂದ್ರ ಪರಂಪರೆಯ ದೇವಾನುದೇವತೆಗಳಾದ ಮಲೆಮ್ಮ, ಅಂತರಘಟ್ಟಮ್ಮ, ಮಾರಮ್ಮ, ಚೌಡಮ್ಮ, ಮಸಣಿ, ಗುಳ್ಯಮ್ಮ, ಕರಿಯಮ್ಮ ಇತ್ಯಾದಿ ದೇವತೆಗಳನ್ನು ಆರಾಧಿಸತೊಡಗಿದರು. ಅಮೂರ್ತ ಸ್ವರೂಪದ ದೇವತೆಗಳನ್ನು ಪೂಜಿಸುತ್ತಿದ್ದ ಮೇದರು ಕಲ್ಲು ಗುಂಡುಗಳನ್ನೇ ತೊಳೆದು ಅರಿಶಿನ, ಕುಂಕುಮ ಹಚ್ಚಿ ಪೂಜಿಸುತ್ತಿದ್ದರು. “... ಹೊಲದ ಸಾಲಿನಲ್ಲಿ ಬೆಳೆದ ಹರಳು ಎಲೆಗಳನ್ನು ಕಿತ್ತು ಅದರ ಮೇಲೆ ಹಾಲು, ಅನ್ನ ಇಟ್ಟು ಕಲ್ಲುಗಳ ಮುಂದೆ ಇಡುತ್ತಿದ್ದರು. ಆ ಕಲ್ಲುಗಳೇ ಮೂರು ದೇವರುಗಳು! ಒಂದು ಭೂಮಿತಾಯಿ, ಎರಡು ಮಳೆರಾಯ, ಮೂರು ಬೆನವಣ್ಣ. ಸೃಷ್ಟಿಸುವ, ಪೋಷಿಸುವ ಮತ್ತು ರಕ್ಷಿಸುವ ಸಂಕೇತಗಳು”.[೮] ಈ ರೀತಿಯ ಪ್ರಕೃತಿ ಪೂಜೆಯಿಂದ ಸಂಸ್ಕೃತೀಕರಣಗೊಂಡ ದೇವರುಗಳ ಆರಾಧನೆಗೆ ತೊಡಗಿದರು. ೧೧೬೦ನೇ ಕಾಲಘಟ್ಟದಲ್ಲಿದ್ದ ಕೇತಯ್ಯ ಶೈವಪಂಥದ ಪ್ರಭಾವಕ್ಕೆ ಒಳಗಾಗಿದ್ದ ದ್ಯೋತಕವಾಗಿ ಹಲವು ಮೇದರು ಇಂದು ಶಿವದಾರ, ರುದ್ರಾಕ್ಷಿ, ಇಷ್ಟಲಿಂಗಧಾರಣೆ, ವಿಭೂತಿಧಾರಣೆ, ಸಸ್ಯಾಹಾರ, ಶಿವಪೂಜೆ ಇತ್ಯಾದಿಗಳನ್ನು ಅನುಸರಿಸುವರು.

ಹಾಗೆಯೇ ವೈಷ್ಣವ ದೇವರುಗಳಾದ ಲಕ್ಷ್ಮಿ, ಸರಸ್ವತಿ, ಉಮಾಮಹೇಶ್ವರ, ಗಣೇಶ, ಆಂಜನೇಯ, ಶ್ರೀಕೃಷ್ಣ, ಮಂಜುನಾಥ ಇತ್ಯಾದಿ ದೇವಾನುದೇವತೆಗಳನ್ನು ಆರಾಧಿಸುವ ಮೇದರು ಉಪವಾಸ, ಮಡಿ, ವಾರ, ಸ್ನಾನ, ಎಡೆ, ಕುಂಕುಮಧಾರಣೆ, ವಿಭೂತಿಧಾರಣೆ ವಾರದ ದಿನ ಮಾಂಸಹಾರ ವರ್ಜ್ಯ ಇತ್ಯಾದಿ ಜಾತೀಯ ಅಂಶಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಬುಡಕಟ್ಟು ಹಾಗೂ ಬುಡಕಟ್ಟಿನಲ್ಲದ ದೇವಾನುದೇವತೆಗಳನ್ನು ಆಚರಿಸುವುದು ಕಾಣಬಹುದು. ಬುಡಕಟ್ಟಿನವರು ಸಾಮಾನ್ಯವಾಗಿ ತಮ್ಮ ದೇವಸ್ಥಾನದಲ್ಲಿ ರಕ್ತಬಲಿ ಕೇಳುವ, ಮತ್ತೊಂದು ಶುದ್ಧ ಸಸ್ಯಹಾರ ಅಪೇಕ್ಷಿಸುವ ದೇವರುಗಳನ್ನು ಸ್ಥಾಪಿಸಿಕೊಂಡಿರುತ್ತಾರೆ.

ಬಲಿ ಕೊಡುವಾಗ ಶುದ್ಧ ಸಸ್ಯಹಾರ ದೇವರನ್ನು ಬೇರೆಡೆಗೆ ಸ್ಥಾನಪಲ್ಲಟ ಮಾಡುತ್ತಾರೆ. ಹಿಂದೆ ಗದ್ದಿಗೆಯಲ್ಲಿಯೇ ‘ಮುಖಪರದೆ’ ಇಳಿಬಿಟ್ಟು, ಬಲಿ ಕೊಡುತ್ತಿದ್ದರು. ಬಲಿಗೆ ಕೂಗುವ ಹುಂಜವೇ ಆಗಬೇಕಿತ್ತು. ಈಗ ಫಾರಂನಲ್ಲಿ ಸಾಕಿದ ಕೋಳಿಯನ್ನೇ ಬಲಿಕೊಡುತ್ತಿದ್ದಾರೆ. ಚೌಡಿಗೆ ಬಲಿಕೊಡುವಾಗ ಗಣಮಗ ಬಲಿಯ ರಕ್ತವನ್ನು ಗಹಗಹಿಸಿ ಕುಡಿಯುವುದು,

ಅವ್ಯಾಹತವಾಗಿ ನಡೆದು ಬಂದು ಸ್ವಲ್ಪ ಕಾಲ ಮರೆಯಾಗಿತ್ತು. ಪುನಃ ಆ ಪದ್ಧತಿಯನ್ನು ಹುಟ್ಟುಹಾಕಿಕೊಂಡಿದ್ದಾರೆ. ಕೆಲವು ಬಲಿ ದೇವತಾ ಹಬ್ಬಗಳಲ್ಲಿ ಪೋತರಾಜ ಗಾವು ಸಿಗಿಯುವಂತೆ ಕರಾವಳಿ ಕರ್ನಾಟಕದಲ್ಲಿ ಭೂತದ ಕೋಲದಲ್ಲಿ ಹುಂಜವನ್ನು ಸೀಳುವಂತೆ ಮೇದರಲ್ಲೂ ಬಲಿ ವಿಧಾನಗಳಲ್ಲಿ ಏರಿಳಿತ ಕಾಣಬಹುದಾಗಿದೆ. 'ಹಿರಿಯರ ಪೂಜೆ' ಬಗ್ಗೆ ಅಂದಿನಿಂದಲೂ ಎಲ್ಲೂ ಮುಕ್ಕಾಗದ ರೀತಿಯಲ್ಲಿ ಆರಾಧನೆ ನಡೆಸಿಕೊಂಡು ಬರುತ್ತಿದ್ದಾರೆ. ಕಣಚ್ಚು ಸಂಸ್ಕೃತಿ ಪರಂಪರಾಗತವಾಗಿ ಬಂದದ್ದು, ಹೆಚ್ಚಿನ ಖರ್ಚಿನ ಬಾಬ್ತು ಆದ್ದರಿಂದ ಕೆಲವರು ಅದನ್ನು ಕೈಬಿಡುತ್ತಿದ್ದಾರೆ. ಮೂರು ವರ್ಷಗಳಿಗೊಮ್ಮೆ 'ಮಾರಿಜಾತ್ರೆ'ಯನ್ನು ಅದ್ದೂರಿಯಾಗಿಯೇ ಆಚರಿಸುತ್ತಿದ್ದಾರೆ. ಮಾರಿಜಾತ್ರೆಯಲ್ಲಿ ಮೇದರಿಗೆ 'ಗಾವುಗುರಿ' ಮೀಸಲು. ಚರಿಗೆ ಚೆಲ್ಲುವ ದಿನಕ್ಕಾಗಿ ಮೇದರು ಕಾಯುತ್ತಿರುತ್ತಾರೆ. ಹಬ್ಬ ಆಚರಣೆಗಳನ್ನು ಸಂಭ್ರಮದಿಂದ ಮೇದರು ಆಚರಿಸುತ್ತಿದ್ದಾರೆ.

ಬೇಟೆ, ಪಶುಪಾಲನೆ, ಮೀನುಗಾರಿಕೆ, ಕೃಷಿ, ಸಂಸ್ಕೃತಿ ಆಚರಣೆಗಳಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ. 'ಬೇಟೆಹಬ್ಬ' ಮರೆತಿದ್ದಾರೆ. ಮೊಲ, ಮೀನು ಶಿಕಾರಿ ಸಾಮೂಹಿಕವಾಗಿ ನಡೆಯುತ್ತಿದ್ದದ್ದು ಇಂದು ಅಲ್ಲೊಮ್ಮೆ ಇಲ್ಲೊಮ್ಮೆ ಬೇಟೆಯಾದ ಮಾಹಿತಿ ಸಿಗುತ್ತವೆ. ಗೋಡೆಯಲ್ಲಿ ನೇತುಹಾಕಿದ್ದ ಸೆಣಬಿನ ೮,೧೦,೧೨,೧೬ ಹೂಡಿನ ಬಲೆಗಳು ವರಲೆ ತಿನ್ನುತ್ತಿವೆ. ತಂತಿ ಬಲೆಯಲ್ಲಿ ವಿರಳವಾಗಿ ಬೇಟೆ ಮಾಡುತ್ತಾರೆ. ಭದ್ರಾ ಹಿನ್ನೀರಿಗೆ ಸಮೀಪ ವಾಸಿಸುವ ನರಸಿಂಹರಾಜಪುರದ ಮೇದರು ರಾತ್ರಿ ವೇಳೆ ಸಣ್ಣ ಸೊಸಲು ಮೀನಿನ **'ಸೀರೆ ಬೇಟೆ'** ಇಂದಿಗೂ ಜನಪ್ರಿಯವಾಗಿದೆ. (ಛಾಯಾಚಿತ್ರ ಲಗತ್ತಿಸಿದೆ) ಇತ್ತೀಚೆಗೆ ಹಣ ತೆತ್ತು ಬೇಕಾಗುವ ಮಾಂಸಾಹಾರವನ್ನು ಕೊಂಡು ತಂದು ತಿನ್ನುವತ್ತ ವಾಲಿದ್ದಾರೆ. ಗೆಡ್ಡೆ-ಗೆಣಸು-ಸೊಪ್ಪು, ಕಳಲೆ, ನಿತ್ಯ ಮಾಂಸಹಾರವಿದ್ದದ್ದು ಸಾಂದರ್ಭಿಕವಾಗಿ ಮಾರ್ಪಟ್ಟಿದೆ. ಆಹಾರದಲ್ಲಿ ಮಡಿವಂತಿಕೆ ಮಾಡುವವರು ಬುಡಕಟ್ಟು ಲಕ್ಷಣ ಕಳೆದುಕೊಂಡು ಅನ್ಯ ಮತ ಅಥವಾ ಜಾತಿಯವರ ಪ್ರಭಾವಕ್ಕೆ ಒಳಗಾಗಿದ್ದಾರೆ. ಸಾಮಾನ್ಯ ಆಡು ಮಾತಿನಲ್ಲಿ 'ನಾವು ಮೇದ ಜಾತಿ' ಎಂದೇ ಉಚ್ಚರಿಸುವುದು ಸರ್ವೇಸಾಮಾನ್ಯವಾಗಿದೆ.

ಮೇದರಲ್ಲಿ ಶವಸಂಸ್ಕಾರದಲ್ಲಿ ಸಮ್ಮಿಶ್ರ ಪದ್ಧತಿ ರೂಢಿಯಲ್ಲಿದೆ. ಬುಡಕಟ್ಟು ವಾಸಿಗರು ಹೂಳುವ ಇಲ್ಲವೇ ಶವಗಳ ಮೇಲೆ ಸಣ್ಣಪುಟ್ಟ ಕಲ್ಲುಗಳನ್ನು ಹೇರಿ ಶವಸಂಸ್ಕಾರ ಮಾಡುವುದಿದ್ದರೂ, ಮೇದರಲ್ಲಿ ಕೆಲವೆಡೆ ಕೆಲವು ಸಂದರ್ಭಗಳಲ್ಲಿ ದಹಿಸುವುದು ಕಂಡುಬಂದಿದೆ. ಪಿಂಡ ಬಿಡುವ, ಪುಣ್ಯಾಹ ಮಾಡಿಸುವ, ಸತ್ಯನಾರಾಯಣ ವ್ರತ ಆಚರಿಸುವ, ಜಾತಕ ಬರೆಸುವ, ವಾರ-ತಿಥಿ-ಗಳಿಗೆಗಳನ್ನು ನೋಡುವ, ಕೇಶ ಮುಂಡನ ಮಾಡಿಸುವ, ಕೆಟ್ಟ ಗಳಿಗೆಯಲ್ಲಿ ವ್ಯಕ್ತಿ ಸತ್ತರೆ ಮನೆ ಬಿಡುವ ಇತ್ಯಾದಿ ಅನೇಕ ವೈದಿಕ ಸಂಸ್ಕೃತಿಯ ಆಚರಣೆಗಳು ಮೇದರಲ್ಲಿ ಕಂಡುಬರುತ್ತಿವೆ. "ಸಂಸ್ಕೃತೀಕರಣ, ನಗರೀಕರಣ, ಔದ್ಯೋಗೀಕರಣ, ಪಾಶ್ಚಾತೀಕರಣ

[illegible]

ಇತ್ಯಾದಿ ಕರಣಗಳು ಬುಡಕಟ್ಟುಗಳ ಮೇಲೆ ದಿನೇ ದಿನೇ ತನ್ನದೆಯಾದ ಪ್ರಭಾವ ಬೀರಿ ಬುಡಕಟ್ಟುಗಳನ್ನು ಸ್ಥಿತ್ಯಂತರಗೊಳಿಸಿವೆ. ಕಸುಬು, ಊಟೋಪಚಾರ, ಭಾಷೆ, ಉಡಿಗೆ–ತೊಡಿಗೆ ಇತ್ಯಾದಿಗಳು ಬುಡಕಟ್ಟು ಬದುಕಿನಲ್ಲಿ ಬದಲಾವಣೆ ತರುತ್ತಿವೆ. ಸಂಸ್ಕೃತಿ, ಸಮಾಜ ರಚನೆ, ಸಾಮಾಜಿಕ ಜವಾಬ್ದಾರಿಗಳು, ಲೋಕರೂಢಿ, ನಂಬಿಕೆ, ಸಂಪ್ರದಾಯಗಳು ಮತ್ತು ಆಚರಣೆಗಳಲ್ಲಿಯೂ ಬದಲಾವಣೆಯ ಅಲೆಗಳು ಅನಿವಾರ್ಯವಾಗಿವೆ"[೯]

೩.೨ ಸಾಂಸ್ಕೃತಿಕ ಸ್ಥಿತ್ಯಂತರ

ಶತ ಶತಮಾನಗಳಿಂದ ಒಂದು ಸಮುದಾಯಕ್ಕೆ ಧೀಮಂತಿಕೆಯನ್ನು ತಂದುಕೊಡುವುದೇ ಸಂಸ್ಕೃತಿ. 'ಸಾಂಸ್ಕೃತಿಕ ಕೊಡು–ಕೊಳ್ಳುವಿಕೆ' ಅತ್ಯಂತ ಕಡಿಮೆ ಪ್ರಮಾಣದಲ್ಲಿ ನಡೆಯುತ್ತಿದ್ದವು. ಭಾರತೀಯ ಸಂಸ್ಕೃತಿಯಲ್ಲಿ ಆಗಿ ಹೋಗಿರುವ ಅನೇಕ ಸಂಸ್ಕೃತಿಗಳು ಹಿಂದೂ ಧರ್ಮದಿಂದ ಪ್ರಭಾವಿಸಲ್ಪಟ್ಟಿರುವ ವೈಷ್ಣವ ಹಾಗೂ ಶೈವ ಪಂಥಗಳು ಅನೇಕ ಬುಡಕಟ್ಟುಗಳ ಮೇಲೆ ದಾಂಗುಡಿಯಿಟ್ಟಿರುವುದು ಕಾಣಬಹುದು. ಆದರೆ ಈಗ ಆ ಪ್ರಕ್ರಿಯೆ ಮಾಡಬೇಕಿಲ್ಲ. ಈ ಬುಡಕಟ್ಟುಗಳೇ ಸಂಸ್ಕೃತೀಕರಣಗೊಂಡು ಆ ಪರಂಪರೆಗಳನ್ನು ತಮ್ಮದಾಗಿಸಿಕೊಳ್ಳುವ ಪ್ರಯತ್ನ ಮುಂದುವರೆಸುವುದು ಸ್ಪಷ್ಟಗೊಳ್ಳುತ್ತದೆ. ೨೧ನೇ ಶತಮಾನದ ಆರಂಭ ಕಾಲ ಬದಲಾವಣೆಯ ಪರ್ವಕಾಲ. ಜಾಗತೀಕರಣವೆಂಬ ಬಂಡವಾಳಶಾಹಿ ಆಧುನೀಕತೆಯ ಹಂತವಾಗಿದ್ದು, ವಿಶ್ವ ಸಮಾಜಗಳನ್ನು ಅತ್ಯಂತ ಹತ್ತಿರದಿಂದ ಕೂಡಿಸುವ ಸಂಕೀರ್ಣವಾದ ಒಂದು ಸ್ಥಿತಿಯಾಗಿದೆ. ಇಂತಹ ಸ್ಥಿತಿಯನ್ನು ಕಂಡು ಜಗತ್ತಿನೆಲ್ಲೆಡೆ ಚರ್ಚೆಗಳು ನಡೆಯುತ್ತಿವೆ. "ಇಡೀ ಜಗತ್ತು ಜಾಗತೀಕರಣದ ಕುರಿತು ಯೋಚಿಸುತ್ತಿರುವ ತೀವ್ರತೆಯಿಂದಲೇ ಅದರ ಅನಿವಾರ್ಯತೆ ಮತ್ತು ಅಪಾಯಗಳೆರಡನ್ನೂ ಕಂಡುಕೊಳ್ಳಬಹುದು. ಜಾಗತೀಕರಣದ ಚರ್ಚೆ ಹೆಚ್ಚು ತೀವ್ರವಾಗಿರುವುದು ಭಾರತದಂತಹ ಅನೇಕ ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ. ಒಂದೆಡೆ ಇಂತಹ ದೇಶಗಳು ವಸಾಹತುಶಾಹಿಯು ಜಾಗತೀಕರಣದ ಹೆಸರಿನಲ್ಲಿ ನಡೆಸಲಿರುವ ಮರು ಆಕ್ರಮಣದ ಕುರಿತು ಆತಂಕಗೊಂಡಿದ್ದಾರೆ. ಜಾಗತೀಕರಣದ ಫಲವಾಗಿ ಹುಟ್ಟಿರುವ ಉದಾರೀಕರಣ ಮತ್ತು ಖಾಸಗೀಕರಣಗಳಿಂದ ಜಾಗತೀಕ ಮಟ್ಟದ ತಂತ್ರಜ್ಞಾನದ ಪ್ರವಾಹದಲ್ಲಿ ಒಂದಾಗಿ ಅಭಿವೃದ್ಧಿ ಸಾಧಿಸುವ ತವಕವು ಹೆಚ್ಚುತ್ತಿದೆ. ಒಂದು ಅರ್ಥದಲ್ಲಿ ಜಾಗತೀಕರಣ ಅಪಾಯ ಮತ್ತು ಅವಕಾಶಗಳೆರಡನ್ನು ಇಂದು ಜಗತ್ತಿನ ಮುಂದಿಟ್ಟಿದೆ."[೧೦]

೨೧ನೇ ಶತಮಾನದ ಹಿಂದಿನ ದಿನಗಳನ್ನು ನೋಡಿದರೆ ೭–೮ನೇ ಶತಮಾನಗಳಲ್ಲಿ ಹೊಸ ಧಾರ್ಮಿಕ ಪಂಥಗಳು ಮತ್ತು ಹೊಸ ಧರ್ಮಗಳ ಉದಯ ಕಾಲದಿಂದಲೇ ಬುಡಕಟ್ಟುಗಳಲ್ಲಿ ಪರಿವರ್ತನೆಯ ಯುಗ ಆರಂಭವಾಗಿದೆ. ಬೌದ್ಧ, ಜೈನ, ಶೈವ, ವೈಷ್ಣವ ಧರ್ಮಗಳು ಪ್ರವರ್ಧಮಾನ ಸ್ಥಿತಿಯಲ್ಲಿದ್ದಾಗ, ಧರ್ಮಗಳ ಪೈಪೋಟಿ ಆರಂಭವಾಯಿತು.

ಅಂದಿನ ಆರಾಧಕರು ತಮ್ಮ ತಮ್ಮ ಧಾರ್ಮಿಕ ವರ್ಧನೆಗೆ ಅನೇಕ ಉದ್ದೇಶಿತ ಪ್ರಯತ್ನಗಳನ್ನು ಮಾಡಿ ಮತಾವಲಂಬಿಗಳಾಗುವಂತೆ ಪ್ರಯತ್ನಿಸಿವೆ. ವೈದಿಕ ಧರ್ಮ ಹಾಗೂ ಬೌದ್ಧ ಧರ್ಮದ ನಡುವೆ ತಿಕ್ಕಾಟ ತಾರಕಕ್ಕೇರಿ ಭಾರತದಲ್ಲೇ ಹುಟ್ಟಿದ ಬೌದ್ಧ ಧರ್ಮ ಪಲಾಯನಗೊಳ್ಳುವಂತೆ ವ್ಯವಸ್ಥಿತವಾಗಿ ವೈದಿಕ ಧರ್ಮ ಸಂಚು ಮಾಡಿದೆ. ವೈಷ್ಣವೀಕರಣ, ಶೈವೀಕರಣ, ವೈದೀಕರಣಗಳು ತಮ್ಮ ವ್ಯಾಪ್ತಿಯಿಂದಾಗಿ ಬದುಕುತ್ತಿದ್ದ ಜನರನ್ನು ತಮ್ಮ ತಮ್ಮ ಧರ್ಮದ ವ್ಯಾಪ್ತಿಯೊಳಗೆ ತರಲು ಪ್ರಯತ್ನಿಸಿದವು. ಧಾರ್ಮಿಕ ಪ್ರಭಾವಕ್ಕೆ ಪಕ್ಕದ ಬುಡಕಟ್ಟುಗಳು ತಮ್ಮಲ್ಲಿ ಅನೇಕ ಬದಲಾವಣೆಗಳು ಹಾಗೂ ಮೂಲ ಸಂಸ್ಕೃತಿಯೊಂದಿಗೆ ಹೊಸ ಧಾರ್ಮಿಕ ಆಚರಣೆಗಳು, ದೈವಿಕ ನಂಬಿಕೆಗಳನ್ನು ಅಳವಡಿಸಿಕೊಳ್ಳಲಾರಂಬಿಸಿದವು. ಕಾಡಿಗೆ-ನಾಡಿಗೆ ಸಮ್ಮಿಶ್ರ ಸಂಸ್ಕೃತಿ ತಮಗರಿವಿಲ್ಲದೆಯೇ ಸಾಂಸ್ಕೃತಿಕ ಸ್ಥಿತ್ಯಂತರಕ್ಕೆ ಒಳಗು ಮಾಡಿವೆ.

ಇನ್ನು ಆಧುನೀಕರಣ, ಕೈಗಾರೀಕರಣ, ನಗರೀಕರಣ, ಪಾಶ್ಚಾತೀಕರಣ ಹಾಗೂ ಸಂಸ್ಕೃತೀಕರಣಗಳ ಕಬಂಧ ಬಾಹುಗಳು ಬುಡಕಟ್ಟುಗಳನ್ನು ಸಾರಾಸಗಟಾಗಿ ವಶಪಡಿಸಿಕೊಳ್ಳವ ಪ್ರಯತ್ನ ಮಾಡಿವೆ. ಲಘು ಪ್ರತಿಭಟನೆಗಳು ಸೌಮ್ಯವಾಗಿ ಕಾಲಾಂತರದಲ್ಲಿ ಈ ಪ್ರಕ್ರಿಯೆಗಳ ಸೆಳೆತ ಪ್ರಾಧಾನ್ಯವಾಗಿ ತನ್ನ ತನಗಳು ಈ ವ್ಯವಸ್ಥೆಗೆ ಶರಣಾಗಿರುವುದು ಕಂಡುಬರುತ್ತದೆ. ಸಾಮ್ರಾಜ್ಯಶಾಹಿ ವಸಾಹತು ಧೋರಣೆಯ ಬ್ರಿಟಿಷರ ಪ್ರಭಾವವಂತೂ ಬುಡಕಟ್ಟಿಗರ ಮೇಲೆ ಹೆಚ್ಚಾಯಿತು. ತಮ್ಮ ಮತ ಪ್ರಚಾರ, ಶಿಕ್ಷಣ, ಆರೋಗ್ಯ, ಹೊಸತನ್ನು ಪರಿಚಯಿಸುವುದು, ಪ್ರತಿಭಟಿಸಿದವರನ್ನು ಸದೆಬಡಿದು 'ಅಪರಾಧಿ ಬುಡಕಟ್ಟಿ'ಗೆ ಸೇರಿಸುವುದು, ಅರಣ್ಯ ಕಬಳಿಕೆ, ಸರ್ಕಾರಿ ನೌಕರಿ, ತೋಟದ ಕೆಲಸ ಹೀಗೆ ಅನ್ಯಾನ್ಯ ಕರ್ತೃತ್ವದಿಂದ ಕೊನೆಗೆ ಇಡೀ ಬುಡಕಟ್ಟು ಸಮುದಾಯಗಳನ್ನು ಮತಾಂತರಗೊಳಿಸಲಾಯಿತು. ಈಶಾನ್ಯ ಭಾರತದ ಶೇ.೮೦ಕ್ಕೂ ಮಿಕ್ಕಿ ಬುಡಕಟ್ಟುಗಳು ಕ್ರಿಶ್ಚಿಯನ್ ಧರ್ಮಾವಲಂಬಿಗಳಾಗಿರುವುದು ಇದಕ್ಕೆ ಸಾಕ್ಷಿ. ಈ ಮೂಲ ಸಂಸ್ಕೃತಿಯ ಬುಡಕಟ್ಟುಗಳು ಒತ್ತಾಯ, ಕೆಲವೊಮ್ಮೆ ಪ್ರೀತಿಯಿಂದ ಒಪ್ಪಿ-ಅಪ್ಪಿರುವ ಸಾಧ್ಯತೆ ಹೆಚ್ಚಿವೆ.

ಹೀಗೆ ಅನೇಕ ಪ್ರಕ್ರಿಯೆಗಳು, ಪ್ರಭಾವಗಳು ಬುಡಕಟ್ಟು ಸಂಸ್ಕೃತಿಯ ಸ್ಥಿತ್ಯಂತರಕ್ಕೆ ಕಾರಣವಾಗಿ, ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ಮೂಲ ಬುಡಕಟ್ಟು ಸಂಸ್ಕೃತಿಯೊಂದಿಗೆ ಅನ್ಯ ಪ್ರಭಾವಿತ ಸಂಸ್ಕೃತಿಗಳು ಕಾಣುತ್ತೇವೆ. ಕೆಲವೊಮ್ಮೆ ಬುಡಕಟ್ಟು ಸಂಸ್ಕೃತಿ ಕುರುಹುಗಳಾಗಿ ಕಾಣಲ್ಪಟ್ಟು, ಜಾತಿ ಪ್ರಾಧಾನ್ಯತೆಯ ಅಂಶಗಳು ದಟ್ಟವಾಗಿರುವುದು ಗೋಚರಿಸುತ್ತವೆ. ಸಂಸ್ಕೃತಿಯ ಸ್ವಭಾವವೇ ಚಲಿತವಾಗಿರುವುದು. ಮಾನವನ ಆಂತರಿಕ ಭಾವನೆಗಳು, ಕಲೆ, ಸಾಹಿತ್ಯ, ಧರ್ಮ, ತತ್ವಶಾಸ್ತ್ರ, ಮೌಲ್ಯಗಳು ಇವೆಲ್ಲವೂ ಆತನ ಜೀವನದ ರೀತಿಯನ್ನು ಪ್ರತಿಬಿಂಬಿಸುತ್ತದೆ. ಇವುಗಳಲ್ಲಿ ಬದಲಾವಣೆಗಳು ತಲೆ ದೋರಿದಾಗ ಮಾನವನ ಜೀವನದ ಕ್ರಮದಲ್ಲಿಯೂ ಬದಲಾವಣೆಗಳಾಗುತ್ತವೆ.

[illegible]

ಬುಡಕಟ್ಟುಗಳ ಮೌಲ್ಯಗಳು ಮತ್ತು ನಂಬಿಕೆಗಳು, ರೂಢಿಗಳು, ಆಚಾರ-ವಿಚಾರಗಳು, ರೀತಿ-ನಿಯಮಗಳು, ಲೋಕಾಚಾರ ಮತ್ತು ನೈತಿಕ ನಿಯಮಗಳು, ಸಿದ್ಧಾಂತಗಳು ಮತ್ತು ಅಭಿರುಚಿಗಳೆಲ್ಲವೂ ಸಂಸ್ಕೃತಿಯ ವಿವಿಧ ಅಂಶಗಳಾಗಿದ್ದು, ಇವೆಲ್ಲವೂ ಕಾಲನ ಹೊಡೆತಕ್ಕೆ ಸಿಲುಕುತ್ತವೆ. ಇವು ಮಾನವನ ವರ್ತನೆಯನ್ನು ನಿಯಂತ್ರಿಸಿ, ನಿರ್ದೇಶಿಸುವ 'ಸಾಂಸ್ಕೃತಿಕ ಶಕ್ತಿ'ಗಳಾಗಿದ್ದು ಇವುಗಳಲ್ಲಿ ಸ್ಥಿತ್ಯಂತರಗಳನ್ನು ಗಮನಿಸಲಾಗಿದೆ.

ಮೇದ ಬುಡಕಟ್ಟಿನ ಲೋಕಾಚಾರಗಳು ತನ್ನ ಪರಿಮಿತಿಯಲ್ಲಿದ್ದವು. ವಿವಿಧ ಧರ್ಮ ಹಾಗೂ 'ಇಸಂ' (ಕರಣ)ಗಳ ಪ್ರಭಾವದಿಂದಾಗಿ ಮೂಲ ಸಂಸ್ಕೃತಿಯನ್ನು ಹೊಂದಾಣಿಕೆ ಮಾಡುವ ಅಥವ ಅವುಗಳೊಂದಿಗೆ ಬೆಸೆಯುವ ಪ್ರಯತ್ನ ನಡೆಯಿತು. ಆಚಾರ-ವಿಚಾರ, ಊಟ-ಉಪಹಾರ, ಉಡುಗೆ-ತೊಡುಗೆ, ಭಾಷೆ-ವ್ಯವಹಾರ, ವೃತ್ತಿ-ಕಸುಬುಗಳು, ವಾಸ, ದೈವಾರಾಧನೆ, ಕುಟುಂಬ ವ್ಯವಸ್ಥೆ, ಆರ್ಥಿಕ ಚಟುವಟಿಕೆಗಳು, ಶಿಕ್ಷಣ ಇವುಗಳಲ್ಲಿ ನಿಧಾನ ಬದಲಾವಣೆಗಳನ್ನು ಸಾಂಸ್ಕೃತಿಕ ಸ್ಥಿತ್ಯಂತರವೆಂದು ಕರೆಯಬಹುದು. ಧಾರ್ಮಿಕ ನಂಬಿಕೆ ಮತ್ತು ಶ್ರದ್ಧೆ ವ್ಯಾಪಕವಾಗಿ ಹರಡಿದ್ದ ಕಾಲವಿದ್ದಂತೆ ಧರ್ಮ-ದೇವರುಗಳನ್ನು ನಂಬದ ನಾಸ್ತಿಕವಾದವೂ ಸಂಸ್ಕೃತಿಯ ಮೇಲೆ ಸ್ವಲ್ಪ ಮಟ್ಟಿನ ಪ್ರಭಾವ ಬೀರಿತು. ಬೌದ್ಧ ಧರ್ಮದಲ್ಲಿ ಪ್ರಗತಿಶೀಲಾತ್ಮಕ ಧೋರಣೆಗಳು ಹೆಚ್ಚಿದ್ದು, ವೈದಿಕ ಧರ್ಮದಲ್ಲಿ ಮೂಢನಂಬಿಕೆ, ಧಾರ್ಮಿಕ ಶ್ರದ್ಧೆ, ಆಚರಣೆಗಳು ವ್ಯಾಪಕವಾಗಿದ್ದು ಬುಡಕಟ್ಟುಗಳಿಗೆ ಈ ಧರ್ಮ ಅಪ್ಯಾಯಮಾನವಾಗಿ ಕಂಡಿತು. ಈ ರೀತಿ ಬುಡಕಟ್ಟುಗಳು ಸಂಸ್ಕೃತೀಕರಣ ಪ್ರಕ್ರಿಯೆಗೆ ಒಳಗಾಗಿ, ಮೂಲ ಸಂಸ್ಕೃತಿಯೊಂದಿಗೆ ವೈದಿಕ ನವ ಸಂಸ್ಕೃತಿಯನ್ನು ತಮ್ಮದಾಗಿಸಿಕೊಂಡಾಗಲೇ ಸಾಂಸ್ಕೃತಿಕ ಸ್ಥಿತ್ಯಂತರಗಳು ಕಂಡುಬಂದಿವೆ. ಹಿಂದೂ ಧರ್ಮಕ್ಕೆ ಮತಾಂತರಗೊಳ್ಳದಿದ್ದರೂ, ಬುಡಕಟ್ಟುಗಳು ಹಿಂದೂ ಧರ್ಮದ ಒಂದು ಭಾಗವಾಗಿ ಅಂತರ್ಗತವಾದವು. ತನ್ನ ಸಾಂಸ್ಕೃತಿಕ ಚಹರೆಗಳನ್ನು ಪೂರ್ಣವಾಗಿ ಅಪ್ಪಿಕೊಳ್ಳದೆ, ಸಂಪೂರ್ಣ ಬಿಡದೆ ಎರಡನ್ನೂ ಆಚರಣೆಯಲ್ಲಿ ಕಂಡುಕೊಂಡರು. ಕಾಡಿನಿಂದ ಹೊರಬಂದ ಮೇದರು ಅನ್ಯಜಾತಿ-ಸಮುದಾಯಗಳೊಂದಿಗೆ ನಾಗರೀಕ ಸಂಸ್ಕೃತಿಯೊಂದಿಗೆ ವಾಸಮಾಡತೊಡಗಿದಾಗ, ತನ್ನ ಸಂಸ್ಕೃತಿಯ ಜೊತೆಗೆ ಅನ್ಯ ಸಂಸ್ಕೃತಿಗಳ ಆಚರಣೆಗಳನ್ನು ಬೆಕ್ಕಸ ಬೆರಗಾಗಿ ನೋಡುತ್ತಲೇ ಕೆಲವು ನಮೂನೆಗಳನ್ನು ತಮ್ಮದಾಗಿಸಿಕೊಂಡರು. ಬುಡಕಟ್ಟು ದೈವಾಚರಣೆಯೊಂದಿಗೆ, ಸ್ಪೃಶ್ಯ ಅಥವ ಸಾತ್ವಿಕ ದೇವರುಗಳೆನಿಸುವ ಆರಾಧನಾ ದೇವಾನುದೇವತೆಗಳನ್ನು ಆಚರಿಸುವುದರೊಂದಿಗೆ, ಸಾಂಸ್ಕೃತಿಕ ವಿಪ್ಲವಕ್ಕೆ ಒಳಗಾದರು. ಬುಡಕಟ್ಟಿಗೆ ತನ್ನದೇ ಲಿಪಿಯಿಲ್ಲದ ಭಾಷೆಯಿದ್ದು, ವ್ಯಾಪಾರ-ವ್ಯವಹಾರದ ದೃಷ್ಟಿಯಿಂದ ಅನಿವಾರ್ಯವಾಗಿ ಕಲಿತ ನೂತನ ಭಾಷೆ ತಮ್ಮ ಬದುಕಿನ 'ಒಳ-ಹೊರಗು'ಗಳನ್ನು ಬದಲಾವಣೆ ಮಾಡಿತು. ಆಂಧ್ರ, ತಮಿಳುನಾಡಿನಿಂದ ವಲಸಿಗರಾಗಿ ಬಂದ ಮೇದರು ಕರ್ನಾಟಕದ ಆಡು ಭಾಷೆ ಕನ್ನಡ ಕಲಿತು, ಕರ್ನಾಟಕ ಸಂಸ್ಕೃತಿಯನ್ನೂ ಹೊಂದಿರುವುದು

ತಮ್ಮ ಮಾತೃ ಭಾಷೆಯ ಸಂಸ್ಕೃತಿಯಲ್ಲಿ ಬದಲಾವಣೆಗಳಾದಂತೆ. ಕೈಗಾರಿಕೀಕರಣವು ಬುಡಕಟ್ಟು ಕಸುಬಿನ ಮೂಲಕ್ಕೆ ಕೊಡಲಿ ಪೆಟ್ಟುಕೊಟ್ಟಿತು. ಮಾನವನಿಂದ ತಯಾರಾಗುತ್ತಿದ್ದ 'ಕರಕುಶಲತೆ' ನಾಶದ ಅಂಚಿಗೆ ಬಂತು. ದೊಡ್ಡ ಕಾರ್ಖಾನೆಗಳು, ದೊಡ್ಡ ಬಂಡವಾಳಗಳೊಂದಿಗೆ, ಬಿದಿರಿಗೆ ಪರ್ಯಾಯ ವಸ್ತುಗಳನ್ನು ಸೃಷ್ಟಿಸಿ 'ಕೊಳ್ಳುಬಾಕ ಸಂಸ್ಕೃತಿ'ಯ ಮಾರುಕಟ್ಟೆ ತುಂಬಿಸಿ ಕಚ್ಚಾ ಪದಾರ್ಥ ಬಿದಿರನ್ನೇ ಆಶ್ರಯಿಸಿ ಮೇದಾರಿಕೆಯನ್ನು ತನ್ನ ಬುಡಕಟ್ಟಿನ ಅನನ್ಯತೆಯೆಂದು ಭಾವಿಸಿದ್ದ ಮೇದರು ಸಾಂಸ್ಕೃತಿಕ ತತ್ತರಕ್ಕೆ ಒಳಗಾದರು. ಸಂಸ್ಕೃತಾನುಕರಣದವರು, ಆಧುನೀಕರಣ, ಪಾಶ್ಚಾತೀಕರಣಕ್ಕೆ ಒಳಗೊಳ್ಳುತ್ತಿರುವಂತೆ ಮೇದಾರಿಕೆ ಸಾಂಸ್ಕೃತಿಕ ಬೇಕುಗಳ ಉತ್ಪನ್ನಗಳು ಮೂಲೆಗುಂಪಾಗುತ್ತ ಆರ್ಥಿಕ ಹಾಗೂ ಸಾಂಸ್ಕೃತಿಕ ದಾಸ್ಯಕ್ಕೆ ಒಳಗಾದರು. ಕೂಡುಕುಟುಂಬ, ಒಟ್ಟುಕುಟುಂಬ, ಅವಿಭಕ್ತ ಕುಟುಂಬ ಕಲ್ಪನೆಯಲ್ಲಿ ಬದುಕು ಸವೆಸಿದ ಮೇದರು ವಲಸೆ, ಉದ್ಯೋಗ, ವ್ಯಾಪರ ಇತರೆ ಕಾರಣಗಳಿಂದಾಗಿ ವಿಭಕ್ತ ಕುಟುಂಬಗಳು ಜನ್ಮತಾಳಿದವು. ಒಂದೇ ಸೂರಿನಡಿ ಇರಬೇಕಾದವರು ಒಡೆದು ಹೋಳಾದ ಆಧುನಿಕ 'ಕುಟುಂಬ ಸಂಸ್ಕೃತಿಗೆ' ಒಳಗಾದರು. ಮೇದರಲ್ಲಿ ಶೇ.೬.೭೦ರಷ್ಟು ಮಾತ್ರ ಅವಿಭಕ್ತ ಕುಟುಂಬವಿರುವುದು ಕಾಣಬಹುದು.

ಬುಡಕಟ್ಟುಗಳ ಮೂಲ ಶಿಕ್ಷಣ, ಕಾಡಿನ ಪಾಠ. ಔಪಚಾರಿಕ ಶಿಕ್ಷಣ ಸಂಸ್ಥೆಗಳೆಂಬುದು ಇರಲಿಲ್ಲ. ಅನೌಪಚಾರಿಕ ಶಿಕ್ಷಣ ಸಂಸ್ಥೆಯೆಂದರೆ ಬುಡಕಟ್ಟುಗಳ ಕುಟುಂಬವೇ ಆಗಿತ್ತು. ಆ ಶಿಕ್ಷಣ ಕೇಂದ್ರವು ಬೇಟೆ, ರಕ್ಷಣೆ, ಕುಮರಿ ಬೇಸಾಯ, ಪಶುಪಾಲನೆ, ಗಡ್ಡೆ-ಗೆಣಸು, ಹಣ್ಣು-ಹಂಪಲ ಸಂಗ್ರಹ ಕಾಡಿನ ಜೇನು ಕೀಳುವುದು, ಮರ ಹತ್ತುವ, ಕಾಡು ಪ್ರಾಣಿಗಳನ್ನು ಪಳಗಿಸುವ ಇತ್ಯಾದಿ ಅಂಶಗಳನ್ನು ತಿಳಿಸುತ್ತಿತ್ತು. ಕಾಡಿನ ಬಗ್ಗೆ ಸೂಕ್ಷ್ಮಾತಿಸೂಕ್ಷ್ಮ ಅಂಶಗಳು ತಿಳಿಯಲ್ಪಡುತ್ತಿದ್ದವು. ಕೂಡಿಡುವ ಸಂಸ್ಕೃತಿ ಇರಲಿಲ್ಲ. ಅಂದಿನ ಬದುಕು ಅಂದಿಗೆ, ಸಿಕ್ಕ 'ಬೇಟೆ' ಎಲ್ಲರೂ ಹಂಚಿಕೊಂಡು ತಿಂದು ತೃಪ್ತಿಪಡುತ್ತಿದ್ದರು. ಹಾಡು, ನೃತ್ಯ, ಕೇಕೆ ಹಾಕುವುದು, ಬೆಂಕಿಯ ಸುತ್ತ ಸುತ್ತುವುದು, ಬೆಂಕಿ ನಂದಿಸದೆ ೩೬೫ ದಿನಗಳೂ ಅದನ್ನು ಜೋಪಾನವಾಗಿ ಕಾಪಾಡುತ್ತಿದ್ದರು. ಕಾಡಿನ ಪ್ರಾಣಿಗಳ ಕೂಗು, ಹೆಜ್ಜೆ ಗುರುತು ಅವುಗಳ ಮನಸ್ಥಿತಿಯನ್ನು ಪ್ರಾಣಿಗಳಿಗಿಂತಲೂ ಹೆಚ್ಚು ಅರಿತಿದ್ದರೆಂದರೆ ಅತಿಶಯೋಕ್ತಿಯಾಗಲಾರದು. ಇದು ಬದುಕಿನ ಶಿಕ್ಷಣವಾಗಿತ್ತು. ಆಶ್ರಮ ಶಾಲೆ, ಸರ್ಕಾರಿ ಶಾಲೆ, ಸಂಘ-ಸಂಸ್ಥೆಗಳಿಂದ ಔಪಚಾರಿಕ ಶಿಕ್ಷಣ ನೀಡಿದ್ದರಿಂದ 'ಮೂಲ ಶಿಕ್ಷಣ' ಗೌಣವಾಗುತ್ತ, ಇತ್ತ ಪರಿಪೂರ್ಣವಲ್ಲದ ಆಧುನಿಕ ಶಿಕ್ಷಣದಿಂದ 'ಎಡಬಿಡಂಗಿ' ಸ್ಥಿತಿಗೆ ತಲುಪಿದರು. ಕಾಡಿನ ಹಾಡಿಗಳಲ್ಲೇ ಶಿಕ್ಷಣ ನೀಡಲು ನಾಗರೀಕರ ಅಸಮ್ಮತಿ, ಲಿಪಿ ರಹಿತ ಭಾಷಿಕರಿಗೆ ಪೂರಕವಾದ ಶಾಲಾ ಪಠ್ಯ-ಪೂರಕ ಚಟುವಟಿಕೆಗಳ ಕೊರತೆ, ಶಾಲಾ ಗೈರು ಹಾಜರಾತಿ, ಸ್ಥಗಿತತೆ (Stagnation) ಇತ್ಯಾದಿಗಳ ಬಗ್ಗೆ ಗಂಭೀರವಾಗಿ ಚಿಂತಿಸದ ಶೈಕ್ಷಣಿಕ ವ್ಯವಸ್ಥೆ, ಬುಡಕಟ್ಟುಗಳ ಮಕ್ಕಳು ಇತ್ತ ಕಾಡಿನಲ್ಲೂ, ಶಾಲೆಯಲ್ಲೂ

[illegible]

ಇರಬೇಕಾಯಿತು. ಈ ರೀತಿ ಶಿಕ್ಷಣ ಪಡೆದವರು ಉದ್ಯೋಗಕ್ಕೆ ಬೇಕಾಗುವ ಕನಿಷ್ಠ ವಿದ್ಯಾರ್ಹತೆಯನ್ನು ಪಡೆಯಲಾಗದೆ ನಿರುದ್ಯೋಗಿಗಳಾಗಬೇಕಾಯಿತು. ಉದ್ಯೋಗ ಮತ್ತು ಶಿಕ್ಷಣಕ್ಕೆ ತಾಳೆಯಿಲ್ಲದ ಈ ವ್ಯವಸ್ಥೆಯಲ್ಲಿ ಕಾಡಿನ ಬುಡಕಟ್ಟುಗಳು ನಾಡಿನೊಳಗೆ ವಾಸಿಸುವ ಬುಡಕಟ್ಟುಗಳೊಂದಿಗೆ ಸ್ಪರ್ಧಿಸಲಾರದೆ, ಸರ್ಕಾರಿ ಕೆಲಸಗಳು ಮರಿಚಿಕೆಯಾಯಿತು. ಅಂತೂ ಕಲಿತ ಮತ್ತು ಕಲಿಯದವರ ನಡುವೆ ಅನೇಕ ಬದಲಾವಣೆಗಳಾದವು.

ಮೇದರ ಸಾಂಸ್ಕೃತಿಕ ಆವರ್ತನೆಗಳು ಈ ರೀತಿ ಪಟ್ಟಿ ಮಾಡಬಹುದು. ಹುಟ್ಟು, ನಾಮಕರಣ, ಚೌಲ ತೆಗೆಯುವ ಸಂಸ್ಕಾರ, ಕಿವಿ ಚುಚ್ಚುವ ಸಂಸ್ಕಾರ, ಋತುಮತಿ ಪ್ರೌಢ ಸಂಸ್ಕಾರ, ಮದುವೆ, ವಿವಾಹ ಸಂಸ್ಕಾರ ವಿಧಿ, ವಧುವರರ ಆಯ್ಕೆ, ವಿವಾಹಕ್ಕೆ ಪ್ರಶಸ್ತವಾದ ಕಾಲ, ವಿವಾಹಯೋಗ್ಯ ವಯಸ್ಸು, ವಿವಾಹ ಸಂಸ್ಕಾರ, ಸೀಮಂತೋತ್ಸವ, ಸಾವು, ಶವ ಸಂಸ್ಕಾರ, ಸಾವಿನ ನಂತರದ ಆಚರಣೆಗಳು ಕೂಳು, ತಿಥಿ, ವಾರ್ಷಿಕ ಶ್ರಾದ್ಧ, ಮನೆ ಬಿಡುವುದು, ರೂಢಿ–ಸಂಪ್ರದಾಯ–ನಂಬಿಕೆಗಳಲ್ಲಿ ಆಚರಣೆ ಇತ್ಯಾದಿ ಅನೇಕ ಸಾಂಸ್ಕೃತಿಕ ಅಂಶಗಳಲ್ಲಿ ದಾಖಲು ಮಾಡುವಂತಹ ಬದಲಾವಣೆಗಳು ಆಗಿವೆ. ಕೆಲವು ಹೊಸ ಆಚರಣೆಗಳು ಸೇರಿಕೊಂಡಿವೆ. ವೈದಿಕ ಹಾಗೂ ವೈಷ್ಣವ ಧರ್ಮಗಳ ಪ್ರಭಾವ ಹೆಚ್ಚಾಗಿದ್ದ, ಜಾತಿ ಚೌಕಟ್ಟು ಬುಡಕಟ್ಟಿನ ಚೌಕಟ್ಟಿನ ಮೇಲೆ ಇರಿಸಿಕೊಳ್ಳುವಂತಿದೆ. ಬುಡಕಟ್ಟು ಹಾಗೂ ಜಾತಿಯ ಪರಸ್ಪರ ಪ್ರಭಾವವು ಸಾಂಸ್ಕೃತಿಕ ಸ್ಥಿತ್ಯಂತರಕ್ಕೆ ಒಳಗಾಗಿದೆ.

ಮೇದ ಬುಡಕಟ್ಟಿನ ಗೌಡ, ಬುದ್ಧಿವಂತರ ನೇತೃತ್ವದಲ್ಲೇ ನಡೆಯುತ್ತಿದ್ದ ವಿವಾಹ, ಪುರೋಹಿತರ ಮಧ್ಯಸ್ಥಿಕೆಯಲ್ಲಿ ನಡೆಯುತ್ತಿದೆ 'ಕೂಡಿಕೆ', 'ಸೀರುಡಿಕೆ, ಎಂಬ ವಿಧವಾ ಹಾಗೂ ವಿಧುರರ ಮರು ವಿವಾಹ ದೂರವಾಗಿದೆ. 'ತೆರ' ಸಾಂಕೇತಿಕವಾಗಿ 'ವರದಕ್ಷಿಣೆ' ಜೀವ ಪಡೆದಿದೆ. ಮಡಿ–ಮೈಲಿಗೆ ಕಟುನಿಟ್ಟಾಗಿದ್ದ ಮೇದರಲ್ಲಿ ಸ್ವಲ್ಪ ದೂರ ಸರಿದಂತಿದೆ. ತೀರ್ಮಾನದ ಕಟ್ಟೆಮನೆ ಅಥವ ಬುಡಕಟ್ಟು ನ್ಯಾಯಪಂಚಾಯಿತಿಯನ್ನು ಆಧುನಿಕ ಯುವಕರು ಪ್ರಶ್ನಿಸುತ್ತಿದ್ದಾರೆ. ಹಬ್ಬ–ಹರಿದಿನಗಳು ಸಂಪ್ರದಾಯತೆಗಿಂತ ಆಚರಣೆಗಳಾಗಿವೆ. ಆದ್ರೆ ಕ್ಷುದ್ರ ದೇವತೆಗಳ ಮೇಲಿನ ಭಯ–ಭಕ್ತಿ ಬುಡಕಟ್ಟುಗಳಲ್ಲಿ ಇಂದಿಗೂ ನಡೆದೇ ಇದೆ. ಬಲಿ ದೇವತೆಗಳು, ಶಕ್ತಿ ದೇವತೆಗಳ ಆರಾಧನೆ ನಡೆಯುತ್ತಿವೆ. ಮೇದ ಮೂಲ ಸಂಸ್ಕೃತಿಯ ಬಿಂಬಿಕವಾದ 'ಯಳಬಿ ಹಬ್ಬ' ಆಚರಣೆ ಸಾರ್ವತ್ರೀಕರಣದಿಂದ ಮಾಯವಾಗುತ್ತಿರುವಂತೆ ಭಾಸವಾಗುತ್ತಿದೆ. ಬುಡಕಟ್ಟಿನ ಹಿರಿಯರಿಗೆ ಗೌರವ ಕಡಿಮೆಯಾಗುತ್ತಿರುವುದು ಕಾಣಬಹುದು.

ಸ್ತ್ರೀ–ಪುರುಷರ ಸ್ಥಾನಮಾನ ಹೆಚ್ಚು ಕಡಿಮೆಯಾಗುತ್ತಿರುವುದು ಕಂಡುಬರುತ್ತಿದೆ. ಕುಲದೇವತಾ ಆರಾಧನೆಗಳು ನಿರಂತರವಾಗಿ ನಡೆಯದೆ ಜನನ–ಮರಣಗಳ ಆವರ್ತನೆಯಲ್ಲಿ ಮಾತ್ರ ಆಚರಿಸಲ್ಪಡುತ್ತಿವೆ. ಪ್ರೇತಾತ್ಮ, ದೆವ್ವ, ಭೂತ, ಜಕ್ಕಣಿ ಕಾಟ ಇವುಗಳಲ್ಲಿ ಇದ್ದ ಅತೀಯಾದ ನಂಬಿಕೆ ಅವುಗಳ ನಿವಾರಣೆಗೆ ಮಾಡುತ್ತಿದ್ದ ನಿವಾರಣಾ ಕ್ರಮಗಳ ತೀವ್ರತೆ

ಕಡಿಮೆಯಾಗಿದೆ. ವೈದ್ಯಕೀಯ ರಂಗವೂ, ದೇವಸ್ಥಾನವೂ ಎರಡೂ ಕಾಯಿಲೆ–ಕಸಾಲೆಗಳಿಗೆ ಉಪಶಮನವೆಂದು ನಂಬುತ್ತಾರೆ. ಶಕ್ತಿ ದೇವರಲ್ಲಿ 'ಮಂಡಲಕ್ಕೆ ಬಿಡುವ' ಆಚರಣೆ ಮೇದರಲ್ಲಿ ಇಂದಿಗೂ ಇದೆ. ಶಕ್ತಿ ದೇವರೆಂದು ಮೇದರ ಕುಲದೇವರಾದ ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲೂಕಿನ ದುರ್ವಿಗೆರೆ ಗ್ರಾಮ, ಉಬ್ರಾಣಿ ರಕ್ಷಿತ ಅರಣ್ಯಕ್ಕೆ ಆತುಕೊಂಡಿರುವ ಶ್ರೀ ಕೊಲ್ಲಾರಮ್ಮ ದೇವಿಗೆ, ಚಿಕ್ಕಮಗಳೂರು ಜಿಲ್ಲೆಯ ಆಲ್ದೂರು ಹೊರತುಪಡಿಸಿ ತರೀಕೆರೆ, ಲಕ್ಕವಳ್ಳಿ, ಅಜ್ಜಂಪುರ, ಹಾಗೂ ಹಾಸನ, ಕೊಂಡಬಾಗಿಲು, ಮಾಗಡಿ ಇತ್ಯಾದಿ ಕನ್ನಡ ಮೇದರೆಲ್ಲರೂ ನಡೆದುಕೊಳ್ಳುವುದು, ಯಾವುದೇ ಶುಭಕಾರ್ಯಕ್ಕೆ ದೇವರನ್ನು ಕೇಳಿಯೇ ಮುಂದಡಿ ಇಡುವ ವಾಡಿಕೆ ಈ ದಿನಗಳಲ್ಲೂ ಕಾಣಬಹುದು. ನನ್ನ ಸಂಶೋಧನಾ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ದೇಗುಲಕ್ಕೆ ಭೇಟಿ ನೀಡಿದಾಗ ಒಂದು 'ಮಿನಿ ಆಸ್ಪತ್ರೆ' ರೀತಿ ಗೋಚರಿಸಿತು. ಮೇದರಲ್ಲದೆ ಬೇರೆ ಜಾತಿಯವರೂ ಹೆಚ್ಚಿನ ಸಂಖ್ಯೆಯಲ್ಲಿ 'ಮಂಡಲ'ದಲ್ಲಿದ್ದರು. ಬಹಳ ಹಿಂದೆ ಬುಡಕಟ್ಟು ದೇವರಲ್ಲಿಯೇ ಮೊರೆಹೋಗಿ ತಪ್ಪು ಕಾಣಿಕೆ ಸಲ್ಲಿಸಿ, ಹರಕೆ ಸಲ್ಲಿಸುತ್ತಿದ್ದ ಮೇದರು ಪರಊರುಗಳ ದೇವಾನು ದೇವತೆಗಳಿಗೆ ಹೋಗುತ್ತಾರೆ. ಈ ಅಂಶಗಳನ್ನು ಧಾರ್ಮಿಕ ಸ್ಥಿತ್ಯಂತರಗಳಲ್ಲಿ ವಿವರಿಸಲಾಗಿದೆ.

'ಕಾಡು ಹಾಗೂ ಕಾಡಿನ ಜನ ಸಂಸ್ಕೃತಿಯನ್ನು ಅನಾಗರಿಕವೆಂದು ತೀರ್ಮಾನಿಸಿದ ವಿಚಾರವಂತರ ತಲೆಯಲ್ಲಿದ್ದ ಮಾನದಂಡವೆಂದರೆ, ವೈದಿಕ ಪ್ರಣೀತ ಆಲೋಚನಾ ವಿಧಾನ. ಶತಮಾನಗಳಿಂದ ದೇವರು ಧರ್ಮಗಳ ಹೆಸರಿನಿಂದ ಬಹುತೇಕ ಮಾನವ ಸಂಕುಲವನ್ನು ಪ್ರಾಣಿಗಳಿಗಿಂತ ಕೀಳಾಗಿ ಕಂಡ ಜನ ಸಮುದಾಯವೊಂದು ತನ್ನ ಆಚರಣಾ ವಿಧಿ ವಿಧಾನ ಹಾಗೂ ನಡವಳಿಕೆಯ ಕ್ರಮವೇ ಶ್ರೇಷ್ಠವೆಂಬ ಭ್ರಮಾತ್ಮಕತೆಯಲ್ಲಿ ಪರಂಪರೆಯನ್ನು ತಿರುಚುವ, ಮರುರೂಪಿಸುವ ಸಂಚು ಹೇರುತ್ತಲ್ಲದೆ, ವೈದಿಕ ಜಗತ್ತು ತನ್ನ ಪಾರಮ್ಯವನ್ನು ನೇರಗೊಳಿಸುವುದ ಕ್ಕೋಸ್ಕರವಾಗಿಯೇ ಉಳಿದ ಜನ ಸಮುದಾಯದ ಸಂಸ್ಕೃತಿಯ ಅನನ್ಯತೆಯ ಕುಡಿಯನ್ನು ಹೊಸಕಿ ಹಾಕಿಬಿಟ್ಟಿತು. ಆಗಲೇ ಈ ರೀತಿಯ ಆಲೋಚನಾ ವಿಧಾನ 'ಬುಡಕಟ್ಟು ಸಂಸ್ಕೃತಿ'ಯನ್ನು ಒಂದೇ ಏಟಿಗೆ ಕೀಳೆಂದು ಅನಾಗರಿಕವೆಂದು ತೀರ್ಮಾನಿಸಿ ನೇಣಿಗೇರಿಸಿತು. ಇದೊಂದು ಅನಾಗರೀಕ ಜಗತ್ತಿನ ದೃಷ್ಟಿಮಾಂಧ್ಯ ಹಾಗೂ ಕಾಮಾಲೆ ಕಣ್ಣುಗಳಲ್ಲಿ ತೆರೆದುಕೊಂಡ ಆತ್ಮಹತ್ಯಾ ವಿವೇಚನೆಯೆ ಸರಿ.[೧೧]

ಬುಡಕಟ್ಟು ಜನರು ಹೊಸತನ್ನು ಬೇಕೆಂದು ಕೇಳಿದವರಲ್ಲ ಹೇರಲ್ಪಟ್ಟ ಹೊಸತು. ಪ್ರಭಾವಿಸಿದ ಹೊಸತು. ಕಾಲನ ಚಕ್ರಕ್ಕೆ ಸಿಲುಕಿದ ಬುಡಕಟ್ಟುಗಳು ಕಾಡಿನ ನೆಲೆಯನ್ನು ತಪ್ಪಿದ್ದು, ಕಾಡಿನಲ್ಲೇ ಅವರ ಮೇಲೆ ನಡೆದ ಸಾಂಸ್ಕೃತಿಕ ಪ್ರಹಾರ ಕ್ರಮವಾಗಿ ಕಾಡಿನ ನೆಲೆ ತಪ್ಪಿ, ನಾಡಿನತ್ತ ಮುಖಮಾಡಿದ ಬುಡಕಟ್ಟುಗಳು ವೈದಿಕ ಧರ್ಮದ ಪ್ರಭಾವಕ್ಕೂ ಕಾಡಿನಲ್ಲೇ ಉಳಿದ ಬುಡಕಟ್ಟುಗಳು 'ಕ್ರಿಶ್ಚಿಯನ್' ಧರ್ಮದ ಪ್ರಭಾವಕ್ಕೂ ಒಳಗಾಗಿರುವುದು

[illegible]

ಕಂಡರೆ ಕಾಡಿನಲ್ಲಿ ಬೇಟೆ ಮಾಡುತ್ತಿದ್ದ ಬುಡಕಟ್ಟಿಗರನ್ನೇ ಇವರು 'ಬೇಟೆ' ಮಾಡಿರುವುದು ವಿಪರ್ಯಾಸವಲ್ಲದೆ ಮತ್ತೇನು ಅಲ್ಲ. ಸಂಸ್ಕೃತಿಯೆಂದು ನಾಗರೀಕ ಸಮುದಾಯ ಉಚ್ಚರಿಸುವುದು ಕಾಡಿನ ಜನ ಬುಡಕಟ್ಟಿಗರಿಗೆ ಅದೇ ಬದುಕಾಗಿತ್ತು. 'ಕ್ರಮ-ಅಕ್ರಮ-ಸಕ್ರಮ' ಯಾವುದೂ ಅರಿಯದ ಬುಡಕಟ್ಟುಗಳು ಅನ್ಯ ಧರ್ಮಗಳ ಸಾಂಸ್ಕೃತಿಕ ಪ್ರವಾಹಕ್ಕೆ ಸಿಕ್ಕಿ ಜರ್ಜರಿತವಾಗಿ 'ಇತ್ತ ದರಿ ಅತ್ತ ಪುಲಿ ನಾ ಎತ್ತ ಪೋಪುದಂ' ಎಂಬ ಉಭಯ ಸಂಕಟದಲ್ಲಿ ಸಿಲುಕಿದರು. ಆದರೂ ಅರಗಿಸಿಕೊಳ್ಳುವ ಶಕ್ತಿ ಬುಡಕಟ್ಟುಗಳಲ್ಲಿರುವುದರಿಂದ, ಹೊರಗಿನಿಂದ ನೋಡುವ ದೃಷ್ಟಿಕೋನಗಳು ಕಪೋಲ ಕಲ್ಪಿತ ರೀತ್ಯ ಬೌದ್ಧಿಕ ಕಸರತ್ತುಗಳನ್ನು ಮಾಡುತ್ತ ಬುಡಕಟ್ಟು ಸಂಸ್ಕೃತಿಯ ಅಂತ್ಯ ಸನ್ನಿಹಿತವಾಗುತ್ತಿದೆಯೆಂದು ಬೊಬ್ಬೆಯಿಡುತ್ತಿದ್ದಾರೆ. ಆದರೆ ಬುಡಕಟ್ಟುಗಳು ಒಳಗೊಳ್ಳುವಿಕೆ ಪ್ರವೃತ್ತಿ ಪ್ರಕೃತಿ ಸಹಜವಾಗಿ ಆರ್ಜಿಸಿಕೊಂಡಿವೆ. "...ಹೀಗಾಗಿ ನಾವು ಸಂಸ್ಕೃತಿಯೊಂದನ್ನು ಸ್ಥಗಿತ ಮೌಲ್ಯವಾಗಿ ನೋಡುವ ಕ್ರಮವನ್ನು ಮತ್ತು 'ಅಯ್ಯೋ! ಅದು ಬದಲಾಗಿ ಬಿಡುತ್ತದೆ, ಉಳಿಯಬೇಕು' ಎಂಬ ಆತಂಕವನ್ನು ಏಕಕಾಲದಲ್ಲಿ ಇಲ್ಲವಾಗಿಸಿಕೊಳ್ಳಬೇಕಿದೆ.[೧೨] ಹೀಗೆ ಸ್ಥಿತ್ಯಂತರದ ರೂಪಗಳನ್ನು ಹೇಗೆದಿಯೋ ಹಾಗೆ ಸ್ವೀಕರಿಸುವ, ದಾಖಲಿಸುವ ಪ್ರಯತ್ನ ಮಾಡುವುದೇ ಶ್ರೇಯಸ್ಕರ. ಮೇದಬುಡಕಟ್ಟಿನ ಸಾಂಸ್ಕೃತಿಕ ಸ್ಥಿತ್ಯಂತರಗಳು ಅನಿವಾರ್ಯ ಪ್ರಕ್ರಿಯೆಯಿಂದ ಆದುದಾಗಿದೆ

೩.೩ ಆರ್ಥಿಕ ಸ್ಥಿತ್ಯಂತರ

ಮೇದರ ಆರ್ಥಿಕ ಸ್ಥಿತಿ-ಗತಿಗಳನ್ನು ಆರ್ಥಿಕ ಸ್ಥಿತ್ಯಂತರಗಳನ್ನು ತಿಳಿಯುವ ಪ್ರಯತ್ನ ಇಲ್ಲಿದೆ. ಮೇದರು ಚಪಕಾರಕ ವೃತ್ತಿಯಿಂದಲೇ ಶೇ.೮೯.೬೧ ಜನರು ಜೀವನ ಮಾಡುತ್ತಿದ್ದಾರೆ. ಅನಾದಿ ಕಾಲದಿಂದಲೂ ಈ ವೃತ್ತಿ ತಮಗೆ ಬಳುವಳಿಯಾಗಿ ಬಂದಿದೆ ಎಂದು ಸೃಷ್ಟಿ ಪುರಾಣಗಳ ಕಡೆಗೆ ಬೆರಳು ಮಾಡುತ್ತಾರೆ. ಗಟ್ಟಿಗರಾದ ನಾವು ದುಡಿದು ತಿನ್ನಲೆಂದೇ ಈ ಭೂಮಿ ಮೇಲೆ ಹುಟ್ಟಿದ್ದೇವೆ. ನಾವು ಎಷ್ಟೇ ದುಡಿದರೂ ಸ್ಥಿತಿವಂತರಾಗುವುದಿಲ್ಲ ಎಂಬ ಸಾಂಪ್ರಾಯಿಕ ನಂಬಿಕೆಯಿದೆ.

ಮೇದಾರಿಕೆಯ ಜೊತೆಗೆ ಕೃಷಿ ಚಟುವಟಿಕೆಗಳಲ್ಲಿ ತೊಡಗಿರುವ ಮೇದರ ಭೂಹಿಡುವಳಿಗಳು ಅತ್ಯಂತ ಕಡಿಮೆಯವು. ಇದರಿಂದ ಬರುವ ಉತ್ಪನ್ನಗಳು ಖರ್ಚಿಗೆ ಸಮವಾಗುತ್ತವೆ ಎಂಬುದು ಅಧ್ಯಯನದಿಂದ ತಿಳಿದು ಬಂದಿರುವುದು. ಕೃಷಿಗೆ ಪ್ರಾಮುಖ್ಯತೆ ನೀಡದೆ, ವಂಶಪಾರಂಪರಿಕ ಬಿದಿರಿನ ಕೆಲಸಕ್ಕೆ ನಿಗಾವಹಿಸಿದ ಮೇದರು ಹಿಂದಿನ ೩-೪ ತಲೆಮಾರಿನವರು ಮಾಡಿದ್ದ ತುಂಡು ಜಮೀನೇ, ಅವಿಭಕ್ತದಿಂದ ವಿಭಕ್ತ ಕುಟುಂಬಗಳಾಗಿ ವಿಭಜನೆಗೊಂಡಂತೆ ಪಿತ್ರಾರ್ಜಿತ ತುಂಡು ಜಮೀನೇ ಪುನಃ ಹಲವಾರು ತುಣುಕುಗಳಾಗಿವೆ. ಭೂಸುಧಾರಣೆಯ ಲಾಭ ಮೇದರಿಗೆ ಆಗಿಲ್ಲ. ಕಾರಣ ಗೇಣಿದಾರನಾಗಿ ಭೂಮಿ ಉಳುತ್ತಿದ್ದದ್ದೇ ಕಡಿಮೆ. ಸರ್ಕಾರದಿಂದ

ಪರಿಶಿಷ್ಟ ಪಂಗಡಕ್ಕಾಗಿ ನೀಡಬಹುದಾದ ಭೂಮಿ ಅವರಿಗೆ ದಕ್ಕಿರುವುದು ವಿರಳವೆ. ಬುಡಕಟ್ಟಿಗರು 'ಕುಮರಿ ಬೇಸಾಯ'ದಲ್ಲೂ ಕಡಿಮೆ ಉತ್ಪಾದನೆಯಾದರೂ 'ಬದುಕಿನ ಕಾಳು' ಬೆಳೆಯುತ್ತಿದ್ದರು. ಪ್ರಭುತ್ವದಲ್ಲಿ ಬಲಗೈ ಎನಿಸಿದ ಶ್ರೀಮಂತರು, ಭೂಮಾಲೀಕರು, ಬಂಡವಾಳಶಾಹಿಗಳು ಇಡೀ ಕಾಡನ್ನೇ ನುಂಗುವಾತುರದಲ್ಲಿ ಕಾಡಿನಲ್ಲಿ ಅಲ್ಲಲ್ಲಿ ನೆಲೆನಿಂತ ಬುಡಕಟ್ಟಿಗರನ್ನು ಕಾಡಿನಿಂದ ಆಚೆ ಹಾಕಲು ಕಿರುಕುಳ ನೀಡಿದರು. ಸಂಘರ್ಷಕ್ಕೆ ನಿಂತ ಬುಡಕಟ್ಟಿಗರನ್ನು ವಾಮಮಾರ್ಗದಿಂದ ತಳ್ಳುವ ಪ್ರಯತ್ನ ನಡೆಯಿತು. 'ಕಾಡು ನಮ್ಮದು' ಎಂದೇಳುವ ಬುಡಕಟ್ಟಿಗರಲ್ಲಿ 'ಪಟ್ಟಾ' ಎಲ್ಲಿ ಎಂದರೆ, ಪೇಲರವ ಆಗದೆ ಬೇರೇನು ಇಲ್ಲ. ಅಂಬೇಡ್ಕರ್ ಚಿಂತನೆಗಳನ್ನು ಎ.ಎಸ್. ಪ್ರಭಾಕರ ಅವರು ಈ ರೀತಿ ಉಲ್ಲೇಖಿಸಿದ್ದಾರೆ "... ಆರ್ಥಿಕವಾಗಿ ಅಸ್ಪೃಶ್ಯನಿಗಿಂತ ಆದಿವಾಸಿಯು ಹಿಂದುಳಿದಿದ್ದರೂ, ಅವನು ಸ್ಪೃಶ್ಯನಾಗಿರುವ ಕಾರಣಕ್ಕಾಗಿ ಆದಿವಾಸಿಗಳಿಗೆ ಹಿಂದೂ ಸಮಾಜದಲ್ಲಿ ಮಾನ್ಯತೆ ಇದೆ ಎಂದು ಅಂಬೇಡ್ಕರ್ ಭಾವಿಸುತ್ತಾರೆ. ಆದರೆ ಭಾರತ ಸಮಾಜದ ಸಂರಚನೆ ಶ್ರೇಣಿಕೃತಗೊಂಡಿದ್ದೇ ಆರ್ಥಿಕ ವಿಷಮತೆಯ ಕಾರಣಕ್ಕಾಗಿ. ಅಸ್ಪೃಶ್ಯರಿಗೆ ಎಲ್ಲೆಲ್ಲಿ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಅಧಿಕಾರಗಳಿಲ್ಲವೋ ಅಲ್ಲೆಲ್ಲ ಆದಿವಾಸಿಗಳೂ ಅಸ್ಪೃಶ್ಯರಂತೆ ಅಸ್ಪೃಶ್ಯರು ಮತ್ತು ಆದಿವಾಸಿಗಳೂ ಸಮಾನ ದುಃಖಿಗಳೇ ಆಗಿದ್ದಾರೆ. ಇಂಡಿಯಾದ ಈ ಬಗೆಯ ಸನಾತನ ರಾಜಕೀಯಾರ್ಥಿಕ ಅಸಮಾನತೆಯ ವಿರುದ್ಧ ಹೋರಾಡುವಾಗ ಈ ಕಾರಣಗಳಿಗಾಗಿ ನೊಂದ ಎಲ್ಲಾ ಸಮುದಾಯಗಳನ್ನು ಸೈದ್ಧಾಂತಿಕವಾಗಿ ಒಗ್ಗೂಡಿಸಬೇಕಾಗುತ್ತದೆ."[೧೩]

ಈ ನಿಟ್ಟಿನಲ್ಲಿ ಅಸ್ಪೃಶ್ಯರು ಹಾಗೂ ಶೂದ್ರರು ಆರ್ಥಿಕ ದಾರಿದ್ರ್ಯದಲ್ಲಿದ್ದಾರೆ. ಬುಡಕಟ್ಟುಗಳು, ಕಾಡಿನಲ್ಲಿ ವಾಸಿಸುವ ಆದಿವಾಸಿಗಳು. ಕುಮರಿ ಬೇಸಾಯ, ಬೇಟೆ, ಪಶುಪಾಲನೆ ಜೊತೆಗೆ ಕಾಡು ಉತ್ಪನ್ನಗಳಾದ ಜೇನು, ಸೀಗೆ, ಅಂಟುವಾಳ, ಮುರುಗಿನ ಹುಳಿ, ಕಲ್ಲು ಹೂ, ಪತ್ರೆ, ಚೆಕ್ಕೆ, ಗಿಡಮೂಲಿಕೆಗಳು, ನೆಲ್ಲಿಕಾಯಿ, ಹಣ್ಣು-ಹಂಪಲು, ಗೆಡ್ಡೆ-ಗೆಣಸು ಇತ್ಯಾದಿಗಳನ್ನು ಸಂಗ್ರಹಿಸುತ್ತಿದ್ದರು. ಅವುಗಳ ಮೌಲ್ಯ ಅರಿಯದ ಗಿರಿಜನರನ್ನು ವಂಚಿಸುವ ಮಧ್ಯವರ್ತಿಗಳ ದಂಡೇ ಕಾಡಿನಲ್ಲಿ ತಿರುಗುತ್ತಿತ್ತು. ಇದರಿಂದಲೂ ಬರುವ ಹಣ, ಕ್ಷೀಣ ಮೊತ್ತದ್ದಾಗಿತ್ತು.

ಕೂಡಿಡುವ ಸಂಸ್ಕೃತಿಯವರಲ್ಲದ ಬುಡಕಟ್ಟುಗಳು ಅಂದಂದಿನ ಬದುಕನ್ನು ಮಾತ್ರ ಸವೆಸುವ, ಕೂಡಿ-ಹಂಚಿ ತಿನ್ನುವ ಪ್ರವೃತ್ತಿಯವರಾಗಿದ್ದರು. ಭವಿಷ್ಯದ ಬಗ್ಗೆ ಅತೀವ ಕಾಳಜಿವಹಿಸುತ್ತಿರಲಿಲ್ಲ. ಮೇದರ ಕೃಷಿ, ಆರ್ಥಿಕತೆ, ಪಶುಪಾಲನೆ, ಮೂಲವೃತ್ತಿ ಇವುಗಳಿಂದ ದೈನಂದಿನ ಬದುಕು ಸಾಧ್ಯವಾಗುತ್ತಿತ್ತೇ ಹೊರತು, ಸಾಲ ಮಾಡುವುದನ್ನು ತಪ್ಪಿಸಿಕೊಳ್ಳಲಾಗುತ್ತಿರಲಿಲ್ಲ. ಕೃಷಿ, ಭೂಹಿಡವಳಿಗಳು ಅತ್ಯಂತ ಕಡಿಮೆಯಿದ್ದು, ತಾಂತ್ರಿಕ ರೀತಿಯ ಕೃಷಿ ಚಟುವಟಿಕೆಗಳನ್ನು ಮಾಡಲಾಗುತ್ತಿಲ್ಲ. ಕೃಷಿಯಿಂದಲೇ ಸಂಪೂರ್ಣ ಸ್ವಾವಲಂಬಿ ಬದುಕನ್ನು ಮಾಡಲಾಗುತ್ತಿಲ್ಲ. ಬದಲಿಗೆ ಮೇದಾರಿಕೆ ಹಾಗೂ ಕೃಷಿಯನ್ನು ಒಟ್ಟಿಗೆ ನಡೆಸುವ ಹಲವು ಕುಟುಂಬಗಳು

ತಾವು ಬೆಳೆಯುವ ಆಹಾರ ಬೆಳೆ (ಭತ್ತ)ಯಿಂದ ಸಾಧಾರಣ ಸಂತೃಪ್ತ ಜೀವನ ನಡೆಸುತ್ತಿದ್ದರೆ ಕೇವಲ ಬಿದಿರಿನ ಕೆಲಸ ಮಾಡುವ ಕುಟುಂಬದ ದೈನಂದಿನ ಆದಾಯ ರೂ. ೨೦೦ರಿಂದ ೨೫೦. ನರಸಿಂರಾಜಪುರದ ಮೇದರು ತಮ್ಮ ಆರ್ಥಿಕ ಮೂಲವನ್ನು ಹೆಚ್ಚಿಸಿಕೊಳ್ಳಲು ವಾಣಿಜ್ಯ ಬೆಳೆಗಳಾದ ನೇಂದ್ರಬಾಳೆ, ರಬ್ಬರ್‌ನ್ನು ಬೆಳೆಯುತ್ತಿದ್ದಾರೆ. ಆಲ್ದೂರು ಹೋಬಳಿಯ ೪-೫ ಗ್ರಾಮಗಳಲ್ಲಿ ವಾಸಿವಿರುವ ಮೇದರು ಸರಾಸರಿ ತಲಾ ೦-೨ ಎಕರೆ ಜಮೀನಿನಲ್ಲಿ ತಲಾ ೧/೨ ಎಕರೆ ವಾಣಿಜ್ಯ ಬೆಳೆಯಾದ ಕಾಫಿ ಉಳಿದ ಜಮೀನನ್ನು ಕೇವಲ ಭತ್ತ ಬೆಳೆಯುವ ತರಿ ಗದ್ದೆಗಳಾಗಿವೆ. ಚಿಕ್ಕಮಗಳೂರು ತಾಲೂಕಿನ ೨ ಕುಟುಂಬಗಳು ಮಾತ್ರ ಕಾಫಿ, ಗದ್ದೆ ಹೊಂದಿದ್ದು, ಮೂಡಿಗೆರೆಯ ಗುಡ್ಡಟ್ಟಿಯ ಒಂದು ಕುಟುಂಬ ಹಾಗೂ ಚಿಕ್ಕಮಗಳೂರು ನಗರವಾಸಿ ಮೇದ ಕುಟುಂಬ ಮಾತ್ರ ೧೦-೧೫ ಎಕರೆ ಭೂಮಿಯಲ್ಲಿ ಕಾಫಿ ಹಾಗೂ ತೆಂಗಿನ ತೋಟವನ್ನು ಹೊಂದಿರುತ್ತಾರೆ. ತರೀಕೆರೆ ತಾಲೂಕಿನ ೨ ಕುಟುಂಬಗಳು ಮಾತ್ರ ಅಡಿಕೆ ಹಾಗೂ ತೆಂಗಿನ ತೋಟಗಳನ್ನು ತಲಾ ೨-೪ ಎಕರೆ ಹೊಂದಿದ್ದು ಕಡಿಮೆ ಭೂ ಹಿಡುವಳಿಯ ರೈತರು ಭತ್ತ, ರಾಗಿ ಇತರೆ ಕಾಳು-ಕಡ್ಡಿಗಳನ್ನು ಬೆಳೆಯುತ್ತಿದ್ದಾರೆ.

ಕೃಷಿಕೇತರ ಚಟುವಟಿಕೆಗಳು ಮೇದರಲ್ಲಿ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ. ಮನೆಗೆ ಸುಣ್ಣ, ಬಣ್ಣ ಬಳಿಯುವವರು ದಿನಕ್ಕೆ ೧೫೦ರಿಂದ ೨೦೦ರೂ. ಹಮಾಲಿ ಕೆಲಸ ಮಾಡುವರು ೧೦೦ರಿಂದ ೧೫೦ರೂ, ಬಾಡಿಗೆಗೆ ಆಟೋ ಓಡಿಸುವರು ದಿನಕ್ಕೆ ರೂ. ೧೫೦, ಕಾರು-ಲಾರಿ ತೊಳೆಯುವುದು ರೂ ೧೦೦, ಬುಟ್ಟಿ ವ್ಯಾಪರ ಮಾಡುವುದು ರೂ. ೭೫ರಿಂದ ೧೦೦, ಬೊಂಬು ವ್ಯಾಪಾರ 'ಡಿಪೊ' ಹೊಂದಿರುವ ಮೇದರು ಇಷ್ಟೇ ಎಂದು ಹೇಳಲಾಗದಿದ್ದರೂ ರೂ. ೫೦೦ರಿಂದ ೬೦೦ರೂ. ಸಂಪಾದನೆ ಬರುವುದಾಗಿ ಅಧ್ಯಯನ ಸಂದರ್ಭದಲ್ಲಿ ತಿಳಿದುಬಂದಿದೆ. ಮೇದರು ಅಲೆಮಾರಿಗಳಾಗಿ ಊರೂರು ಸುತ್ತುತ್ತಿದ್ದರು. ಬಿದಿರು ಲಭ್ಯವಾಗುವೆಡೆ ತಾತ್ಕಾಲಿಕ ವಲಸೆ ಹೋಗುತ್ತಿದ್ದರು. ಶೆಡ್ ನಿರ್ಮಿಸಿಕೊಂಡು ಪುನಃ ಮೂಲಸ್ಥಾನಕ್ಕೆ ಹೋಗುತ್ತಿದ್ದರು. ಒಂದೆಡೆ ಬದುಕು ಗಟ್ಟಿಗೊಳ್ಳಲು ಪ್ರಯತ್ನಿಸುತ್ತಲೇ ಇದ್ದರು, ನೈಸರ್ಗಿಕ ವಿಪತ್ತೆಂಬಂತೆ 'ಬಿದಿರಿಗೆ ಕಟ್ಟೆ' ರೋಗ ೩೫-೪೦ ವರ್ಷಕ್ಕೊಮ್ಮೆ ಬಂದು ಬಿದಿರು ಸಂತತಿಯೇ ಸರ್ವನಾಶವಾಗುತ್ತದೆ. ಆ ಬಿದಿರಿನ ಹೂ ಒಣಗಿ ಅದರ ಬೀಜ ಪ್ರಸರಣವಾಗಿ ಸಸಿ, ಗಳವಾಗಿ ಕಡಿಯಲು ಸುಮಾರು ೧೦ರಿಂದ ೧೨ ವರ್ಷಗಳು ಬೇಕಾಗಬಹುದು. ಈ ಸಂಕ್ರಮಣ ಕಾಲಘಟ್ಟದಲ್ಲಿ ಮೇದರು ಆರ್ಥಿಕ ದುಸ್ಥಿತಿಗೆ ಬರುತ್ತಾರೆ. ಕುಲಕಸಬಿಗೆ ಪರ್ಯಾಯ ಉದ್ಯೋಗ ಹುಡುಕಲು ಪ್ರಾರಂಭಿಸುತ್ತಾರೆ. ಇಂತಹ ಸಂಕ್ರಮಣ ಅವಸ್ಥೆಯಲ್ಲಿರುವಾಗಲೇ ನನ್ನ ಈ ಸಂಶೋಧನೆ ನಡೆದಿದೆ. ಬಿದಿರಿನ ಸರ್ವನಾಶವಾಗಿದ್ದು, ನನ್ನ ಸಂಶೋಧನಾ ಭೌಗೋಳಿಕ ಎಲ್ಲೆಯೊಳಗಿನ ಮೇದರ ಸ್ಥಿತಿ ಅತ್ಯಂತ ದೈನೇಸಿ ಸ್ಥಿತಿಯಿಂದ ಕೂಡಿತ್ತು. ಅದುವರೆವಿಗೂ ಮನೆಯಲ್ಲಿಯೇ ಕುಳಿತು ಬಿದಿರಿನ ಕೆಲಸ ಮಾಡುತ್ತಿದ್ದ ಸ್ತ್ರೀ-

[illegible]

ಪುರುಷರು ಕೃಷಿಕೂಲಿ, ತೋಟದ ಕೂಲಿ, ಬಟ್ಟೆ ಹೊಲಿಯುವುದು, ತರಕಾರಿ–ಸೊಪ್ಪಿನ ವ್ಯಾಪಾರ, ತೆಂಗಿನಕಾಯಿ ವ್ಯಾಪಾರ, ಡ್ರೈವಿಂಗ್, ಬಾಳೆಕಾಯಿ ಮಂಡಿಗೆ ಕೂಲಿ ಕೆಲಸಕ್ಕೆ ಹೋಗುವುದು, ಭದ್ರಾವತಿ, ಶಿವಮೊಗ್ಗ ಬೇರೆಡೆಯಲ್ಲಿ ಸಿಗಬಹುದಾದ ಕುಕ್ಕೆ, ಪಂಜರಗಳನ್ನು ತಂದು ಮಾರಾಟಮಾಡುವುದು, ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಲ್ಲಿನ ಕೆಲಸ ಮಾಡುತ್ತಿರುವುದು ಕಂಡುಬಂತು. ಕೆಲವರು ಕೋಳಿ ಸಾಕಾಣಿಕೆ (ನಾಟಿಕೋಳಿ), ಮೇಕೆ ಸಾಕಾಣಿಕೆ ಹಾಗೂ ದನ, ಎಮ್ಮೆಗಳನ್ನು ಹೈನುಗಾರಿಕೆ–ಸಾಕಾಣಿಕೆ ಮಾಡುವುದು. ಎತ್ತು, ಗಾಡಿಯಿದ್ದವರು ಕೂಲಿ ಮಾಡುವುದನ್ನು ಕಂಡುಕೊಳ್ಳಲಾಯಿತು. ಬಾಳೆ ಬೆಳೆ ವಾರ್ಷಿಕ ಬೆಳೆಯಾಗಿದ್ದು, ಕೃಷಿ ಅನುಭವವಿರುವ ಮೇದರು ಬೇರೆಯವರ ಜಮೀನನ್ನು ಕರಾರಿನ (ಒಂದು ಬಾಳೆ ಗುಂಡಿಗೆ ನೀರು ಸೇರಿ ರೂ. ೧೨, ನೀರಿಲ್ಲದೆ ರೂ. ೮ ರಂತೆ) ಆಧಾರದ ಮೇಲೆ ಬಾಡಿಗೆ ಪಡೆದು, ಆ ಭೂಮಿಯಲ್ಲಿ ಹೆಚ್ಚೆಚ್ಚು ಬಾಳೆ ಬೆಳೆಯುವ ಆತ್ಮ ವಿಶ್ವಾಸವನ್ನು ಹೊಂದಿರುವುದು ಸಂಶೋಧನೆಯಿಂದ ತಿಳಿಯಲಾಯಿತು.

ಬಹುಶಃ ಮೇದಾರಿಕೆಯೊಂದೇ ಆರ್ಥಿಕ ಜೀವನದ ಮೂಲವಾಗಿದ್ದರೆ ಅದೇ ಬದುಕು ಅವರದ್ದಾಗಿರುತ್ತಿತ್ತು. ಅವರ ನೋಟ ಮೇದಾರಿಕೆಯಿಂದ ಆಚೆ ಹೊರಳಲು 'ಬಿದಿರಿನ ಕಟ್ಟೆ' ರೋಗ ಬಂದುದೇ ಅನಿವಾರ್ಯವೆಂದು ತಿಳಿಯಬಹುದು. ತಮ್ಮ 'ಮೂಲ ಸಂಸ್ಕೃತಿ'ಯಿಂದ ಸರಳವಾಗಿ ಬದುಕಿದ್ದ ಮೇದರು ಪಟ್ಟಣ, ನಗರ ವಾಸಿಗಳಾಗಿದ್ದು, ನಗರೀಕರಣದ ಬದುಕಿಗೆ ಹೊಂದಿಕೊಳ್ಳಬೇಕಿದೆ. ಪಟ್ಟಣದ ಅಂಚಿನಲ್ಲಿ ವಾಸಿಸುತ್ತಿದ್ದರೂ ನಗರ ಜೀವನಕ್ಕೆ ಹೊಂದುವ ಹಾಗೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಪಡೆದುಕೊಳ್ಳಬೇಕಿದೆ. ಮನೆಯ ರಚನೆ, ವಿನ್ಯಾಸ, ಮೂಲ ಕಸುಬನ್ನೇ ಮಾಡುವುದಾದರೆ ಬಿದಿರಿನ ಪೂರೈಕೆಗಾಗಿ ಹಣದ ಖರ್ಚು, ಡಿಪೊ ಆಗಿದ್ದರೆ ಬಂಡವಾಳ, ಮಕ್ಕಳ ವಿದ್ಯಾಭ್ಯಾಸ, ಮನೆಗೆ ಗೃಹಪಯೋಗಿ ವಸ್ತುಗಳು, ಮನೆ ಮತ್ತು ನೀರಿನ ಕಂದಾಯ (ಖಾತೆಯಾಗಿದ್ದರೆ), ದೈನಂದಿನ ಬದುಕಿನ ನಿರ್ವಹಣೆ, ಅನಾರೋಗ್ಯ, ಹಬ್ಬ–ಹರಿದಿನಗಳು... ಹೀಗೆ ಅನೇಕ ಬೇಕು–ಬೇಡಗಳನ್ನು ನಿರ್ವಹಿಸುವಾಗ ಆರ್ಥಿಕ ಮುಗ್ಗಟ್ಟು ತಲೆದೋರುವುದು. ಈ ನಡುವೆಯೂ ಮೇದರ ಆರ್ಥಿಕ ಸ್ಥಿತಿ–ಗತಿಗಳನ್ನು ಅವಲೋಕಿಸಿದಾಗ ಶೇ.೬೩.೨೭ರಷ್ಟು ಕುಟುಂಬಗಳು ಮಾಸಿಕ ರೂ ೨,೦೦೦ಕ್ಕಿಂತ ಕಡಿಮೆ ದುಡಿಮೆ ಮಾಡುತ್ತಿರುವುದು ಇವರ ಆರ್ಥಿಕ ದುಸ್ಥಿತಿಯನ್ನು ತಿಳಿಸುತ್ತದೆ.

ಈ ಬುಡಕಟ್ಟಿನ ಕೆಲವೇ ಕೆಲವು ವ್ಯಕ್ತಿಗಳು ಗೆಜೆಟೆಡ್ ಹುದ್ದೆಗಳಲ್ಲಿದ್ದು, ಶೇ.೮೫ ಭಾಗ ನೌಕರರು 'ಡಿ' ದರ್ಜೆ, ಶೇ.೧೦ ಭಾಗ ನಾನ್ ಗೆಜೆಟೆಡ್ ನೌಕರರಿದ್ದಾರೆ. ಅವರ ಸಾಲದ ಮಾಹಿತಿ ಕೋಷ್ಟಕವನ್ನು ಪರಿಶೀಲಿಸಿದಾಗ ಶೇ.೯೫ ಭಾಗ ಮೇದರು ಸಾಲ ಮಾಡುವವರಾಗಿದ್ದಾರೆ. ಸಾಲ ತೀರಿಸುವ ಮಾಹಿತಿಯೂ ವಿಶೇಷವಾಗಿದೆ. ಅಂದರೆ ಸಾಲಗಾರರು ದುಡಿಮೆಯಿಂದ ಸಾಲ ತೀರಿಸುವುದಾಗಿ ಶೇ.೧೦೦ರಷ್ಟು ತಿಳಿಸಿದರೆ ಜಮೀನು/ಮನೆ ಮಾರಿ ಶೇ.೧೭.೪೨ರಷ್ಟು,

ಬೆಳೆಬಾಳುವ ವಸ್ತುಗಳನ್ನು ಮಾರಿ ಶೇ.೪೮.೫೨ರಷ್ಟು, ಸಾಲಮಾಡಿ ಶೇ.೮೫.೨೫ರಷ್ಟು ಸೂಚನಾದಾರರು ಸಾಲ ತೀರಿಸುವುದಾಗಿ ತಿಳಿಸುತ್ತಾರೆ. ಸುಮಾರು ೩೫-೪೦ ವರ್ಷಗಳ ಹಿಂದೆ ಸಾಲ ಮಾಡಲು ಹೆದರುತ್ತಿದ್ದು, ಪ್ರಸ್ತುತ ಮೇದರು ನಿರ್ಭೀತಿಯಿಂದ ಸಾಲ ಮಾಡುತ್ತಾರೆ. ಸಂಸ್ಕೃತಿಯಿಂದ ಹೊರಹೊಮ್ಮಿದ ಸಾಲಗಳೇ ಜಾಸ್ತಿಯೆಂದು ಅಧ್ಯಯನ ತಿಳಿಸುತ್ತದೆ. ಅಂದರೆ ವಿವಾಹದ ಖರ್ಚು, ವರದಕ್ಷಿಣೆ, ಮಕ್ಕಳ ವಿದ್ಯಾಭ್ಯಾಸ, ಹಬ್ಬ-ಹರಿದಿನ ಆಚರಣೆಗೆ, ಉತ್ತರ ಕ್ರಿಯಾವಿಧಿಗಳು, ಸೀಮಂತೋತ್ಸವ, ನಾಮಕರಣ, ಬೆಳ್ಳಿ-ಬಂಗಾರ ಅಥವ ಇತರೆ ಬೆಲೆ ಬಾಳುವ ವಸ್ತುಗಳನ್ನು ಖರೀದಿಸಲು ಎಂಬುದಾಗಿ ತಮ್ಮ ಸಾಲದ ಕಾರಣಗಳಿಗೆ ಈ ಮೇಲಿನಂತೆ ವಿವರಿಸಿದರು. ಬದಲಾದ ವ್ಯವಸ್ಥೆಯಲ್ಲಿ ಆರ್ಥಿಕ ವ್ಯವಸ್ಥೆಯೂ ಬದಲಾಗಿರುವುದು ಸ್ಪಷ್ಟವಾಗಿದೆ. ಆದಾಯ, ಖರ್ಚು, ಉಳಿತಾಯಗಳನ್ನು ನೋಡಿದಾಗ ಆರ್ಥಿಕ ಏರುಪೇರು ಸ್ಪಷ್ಟಗೊಂಡು ಸಾಲ ಮತ್ತು ಬಡತನದ ದವಡೆಯಲ್ಲಿ ಮೇದರು ಸಿಲುಕಿರುವುದು ಸ್ಪಷ್ಟವಾಗುತ್ತದೆ.

ಮೇದಾರಿಕೆಯಿಂದ ಆಚೆ ವಿವಿಧ ಕೆಲಸಗಳಲ್ಲಿ ತೊಡಗಿರುವ ಮೇದರು ತಮ್ಮ ಆರ್ಥಿಕ ಮಟ್ಟವನ್ನು ಸುಧಾರಿಸಿಕೊಳ್ಳಬೇಕೆಂಬ ಚಡಪಡಿಕೆ ಕಾಣುತ್ತೇವೆ. ನಾವು ಶ್ರೀಮಂತರಾಗುವುದಿಲ್ಲ, 'ಅಂದಿನ ದುಡಿಮೆ ಅಂದೇ ಸರಿಯಾಗುತ್ತೆ' ಎಂದು ಹೇಳುವ ಇಂದಿನ ಮೇದರಲ್ಲಿ ಹಿಂದಿನ ನಾಣ್ನುಡಿಯನ್ನು ಮುರಿಯಬೇಕೆನ್ನುವ ಛಲವಿರುವಂತಿದೆ. ಆದಾಗ್ಯೂ ಹಸಿವು, ದಾರಿದ್ರ್ಯದಿಂದ ಹೊರಬರಬೇಕೆನ್ನುವ ಅವರ ಪ್ರಯತ್ನಗಳು ಕಾಲಿಕವಾಗುತ್ತದೆ. ಮುಂದುವರೆದ ದಿನಗಳಲ್ಲಿ ಆ ಶೂರತ್ವ ಖಂಡಿತ ಅವರಲ್ಲಿ ಇರಲಾರದು. ಕಾರಣ ಸರಳ ಗ್ರಹಿಕೆಯ ಬುಡಕಟ್ಟಿಗನಿಗೆ ವಿಶ್ವ ಮಾರುಕಟ್ಟೆ, ಜಾಗತೀಕರಣ, ಬೆಲೆ ನಿಗಧಿ ಇಲ್ಲದಿರುವುದು, ವಿಶ್ವಗ್ರಾಮ, ಖಾಸಗೀಕರಣ ಇತ್ಯಾದಿ ಅಂಶಗಳು ನಿಲುಕಲಾರವು.

ನೇಂದ್ರ, ರಬ್ಬರ್, ಕಾಫಿಗಳು ಎಂತಹ ಹುನ್ನಾರಗಳಿಗೆ ಈಡಾಗುತ್ತವೆ. ಎಂದು ಅರಿಯಲು ಅಸಾಧ್ಯ. ಎ.ಎಸ್.ಪ್ರಭಾಕರ್‌ರವರು ತಿಳಿಸಿರುವಂತೆ "ಕರ್ನಾಟಕದಲ್ಲಿ ಅದೂ ಕಂಪ್ಯೂಟರ್ ಯುಗಕ್ಕೆ, ಹೊಸ ಶತಮಾನಕ್ಕೆ ಕಾಲಿಡುತ್ತಿರುವ ಆಧುನಿಕ ವ್ಯವಸ್ಥೆ ಇಂದು ಅನೇಕ ಬುಡಕಟ್ಟುಗಳು ತಿನ್ನಲು ಮರದ ಹೊಟ್ಟನ್ನು ನೀಡಿದೆ. ಇಲ್ಲವೆ ಉಪವಾಸ ಕೆಡವಿ ಸಾಯಿಸಿದೆ".[೧೪] ಎಂಬ ಮಾತು ಅಕ್ಷರಶಃ ಅನುಮೋದಿಸಬೇಕಿದೆ. ಕಾರಣ ೨೧ನೇ ಶತಮಾನದ ಆರಂಭದಲ್ಲಿ ಅತಿವೇಗವಾಗಿ ವಿಶ್ವ ಸಮಾಜ ಒಪ್ಪಿಕೊಂಡ ಜಾಗತೀಕರಣದ ಪ್ರಕ್ರಿಯೆಯಿಂದ ಲಾಭ ಯಾರ್ಯಾರಿಗೆ ಎಷ್ಟೆಷ್ಟಾಗಿದೆ ಎಂದು ಅವಲೋಕಿಸಿದರೆ ತಿಳಿಯುತ್ತದೆ. ಜಾಗತೀಕರಣ ಪ್ರಕ್ರಿಯೆ ಪ್ರಣೀತ ಮುಂದುವರೆದ ರಾಷ್ಟ್ರಗಳಿಗಷ್ಟೇ ಹೆಚ್ಚಿನ ಲಾಭವಾಗಿರುವುದು. ಜಗತ್ತಿನ ಅಂಚಿನಲ್ಲಿರುವ ವಿಶೇಷವಾಗಿರುವ ಎಲ್ಲಾ ವರ್ಗದ ಸಂಪತ್ತಿನ ಮೇಲೂ ತಮ್ಮ ಏಕಸ್ವಾಮ್ಯದ ಪೇಟೆಂಟ್ ಹಕ್ಕು ಸ್ಥಾಪಿಸಿ, ನನ್ನದೆಂದು ಹೇಳಲಾರದೆ ಸೆಲೆ ತಪ್ಪುವುದು ಮೊದಲ ಹುನ್ನಾರ

ಪರೋಕ್ಷ ಸಾಂಸ್ಕೃತಿಕ ದಾಳಿ ಆರಂಭವಾಗುವುದು. 'ವಿಶ್ವ ಮಾರುಕಟ್ಟೆ' ತೆರೆದು ಸಾಮ್ರಾಜ್ಯಶಾಹಿ ರಾಷ್ಟ್ರಗಳಿಂದ ಉತ್ಪಾದಿತ ವಸ್ತುಗಳನ್ನು ಭಾರತ ಹಾಗೂ ಇಂತಹದೇ ಮೂರನೇ ಜಾಗತೀಕ ರಾಷ್ಟ್ರಗಳಲ್ಲಿ ಬಿಕರಿ ಮಾಡುತ್ತದೆ. ಪೈಪೋಟಿ ನಡೆಸುವ ಸಾಮರ್ಥ್ಯವಿರುವ ರಾಷ್ಟ್ರಗಳೂ ತಮ್ಮ ಗುಣಮಟ್ಟದ ಪದಾರ್ಥಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಇಟ್ಟು ಯಶಸ್ವಿಯಾಗಬಹುದು (Might is right) ಎಂಬ ಉಕ್ತಿ ಉಚ್ಛರಿಸಿದರೂ, ಇಂತಹ ದೇಶಗಳು ತರಗೆಲೆಳಂತೆ ಗಾಳಿಗೆ ಹಾರುತ್ತವೆ. ವಿಶ್ವ ಕೈಗಾರಿಕೋದ್ಯಮ, ವಿಶ್ವ ರಾಜಕೀಯ, ವಿಶ್ವ ಸಾಂಸ್ಕೃತಿಕತೆ, ವಿಶ್ವ ಬ್ಯಾಂಕ್ ಇತ್ಯಾದಿ ಬ್ರಾಂಡ್‌ಗಳೆಲ್ಲವೂ 'ವಿಶ್ವ'ದ ಅಡಿಯಲ್ಲೇ ಬಂದು, ಪರ್ಯಾಯ ಉತ್ಪನ್ನಗಳು ಎಲ್ಲಾ ಕ್ಷೇತ್ರಗಳಲ್ಲಿ ದಾಂಗುಡಿಯಿಟ್ಟಿದೆ.

ಮೇದರ ಕುಲಕಸುಬಿನಿಂದ ಉತ್ಪಾದಿಸಲ್ಪಡುತ್ತಿದ್ದ ಮೊರ, ತೊಟ್ಟಿಲು, ಕೋಳಿ ಪಂಜರ, ಅನ್ನ ಬಸಿಯುವ ಚಿಬ್ಬಲು, ಕಣಜ, ಗೆರಸಿ, ಗೊರಬು, ಗೋರು ಇತ್ಯಾದಿಗಳಿಗೆ ಪರ್ಯಾಯವಾಗಿ ಅಲ್ಯುಮಿನಿಯಂ, ಇಡಾಲಿಯಂ, ಫೈಬರ್, ಪ್ಲಾಸ್ಟಿಕ್, ಕಬ್ಬಿಣ, ಸ್ಟೀಲ್, ರಬ್ಬರ್, ಸಿಂಥೆಟಿಕ್ ಇತ್ಯಾದಿ ಆಧುನಿಕ ರೂಪಿ ವಸ್ತುಗಳಿಂದ ತಯಾರಾದ ವಸ್ತುಗಳು ಅನುಭೋಗಿದಾರರಿಗೆ ಕಡಿಮೆ ಬೆಲೆಗೆ ಬಿಕರಿಗೊಳ್ಳುತ್ತಿದೆ. ಒಂದು ಸಂಸ್ಕೃತಿಯ ಅಳಿವು–ಉಳಿವಿನ ಪ್ರಶ್ನೆಯನ್ನು ಕೇಳುವವರಾದರೂ ಯಾರು? ಮೇದರ ಬದುಕಿನಂತೆ ಕುಂಬಾರ, ಕಮ್ಮಾರ, ಚಮ್ಮಾರ, ಬಡಗಿ, ನೇಯ್ಗೆಯರು ಇತ್ಯಾದಿ ಗುಡಿ ಕೈಗಾರಿಕೆಗಳನ್ನೇ ನಂಬಿ ಬರುವರ ಬದುಕನ್ನು ಜಾಗತೀಕರಣವೆಂಬ ಬ್ರಹ್ಮಾಂಡದೊಳಗೆ ಎಸೆಯಲಾಗಿದೆ. ಇದು ಬುಡಕಟ್ಟಿನ ಸ್ಥಿತ್ಯಂತರ ಮಾತ್ರವಲ್ಲ ಒಂದು ಸಂಸ್ಕೃತಿಯ ಮರೆವು. ಒಂದು ದೇಶದ, ಸಮಾಜದ ಬದಲಾವಣೆ ಬೇಕು. ದೂರದೃಷ್ಟಿಯಿಲ್ಲದ, ಬದಲಾವಣೆಯ ಲಾಭಾಂಶದ ವಾರಸುದಾರರು ಯಾರೋ ಆಗಿ ಒಂದು ದೇಶದ ಸ್ವತ್ತು, ಬೌದ್ಧಿಕ ಜ್ಞಾನ, ಜ್ಞಾನ ಪರಂಪರೆ, ಮಾನವ ಶಕ್ತಿ ಎಲ್ಲವನ್ನೂ ಹೀರಿ ಸತ್ವರಹಿತವಾಗಿಸುವ ಹುನ್ನಾರದೊಳಗೆ 'ಮೇದ' ಬುಡಕಟ್ಟು ಬರುತ್ತದೆ. ಏನೂ ಅರಿಯದ 'ಕಾಯಕ ಯೋಗಿ' ಮೇದ ಬಿದಿರು ಸಿಗುವುದಿಲ್ಲ. ಮಾರುಕಟ್ಟೆ ಇಲ್ಲ ಕಟ್ಟೆರೋಗ ಬಂದಿದೆಯೆಂದು ತಿಳಿಯುವಾತನಿಗೆ ಇಡೀ ಕಾಡೇ ಬೇರೆಯವರ ಸ್ವತ್ತಾಗುವ ಪರಿವೆ ಬಂದಿರಲಾರದು. 'ರಾಷ್ಟ್ರೀಯ ಉದ್ಯಾನವನ ನೀತಿ', 'ರೆಸಾರ್ಟ್ ಸಂಸ್ಕೃತಿ', 'ವನ್ಯಧಾಮ', 'ಬಯೋಡೈವರ್ಸಿಟಿ' ಹೆಸರಿನಲ್ಲಿ ಕಾಡನ್ನು ಅಳತೆ ಮಾಡಿಕೊಳ್ಳುವಾಗ ಕಾಡಿನ ಬಿದಿರು ಎಲ್ಲಿ ಸಿಗುತ್ತೆ? ಅರಣ್ಯ ಕಾಯ್ದೆ ಬಿಗಿಗೊಳಿಸುತ್ತಾರೆ. ಮೇದರ ಗೋಳು ಹೇಳ ತೀರದು. ವರ್ಷಕ್ಕೆ ಮೂರ್‍ನಾಲ್ಕು ಬಾರಿ ಕೊಡುತ್ತಿದ್ದ ಬಿದಿರಿನ ಪರವಾನಿಗಿ, ಸಬೂಬು ಹೇಳಿ ವರ್ಷಕ್ಕೆ ಒಮ್ಮೆ ನೀಡುವುದೂ ದುಸ್ತರ. ಬದುಕು ಶೋಚನೀಯ ಸ್ಥಿತಿ ತಲುಪಿ, ಆರ್ಥಿಕ ಸ್ಥಿತ್ಯಂತರಗಳು ಕಂಡುಬರುತ್ತಿವೆ. ಕುಲಕಸುಬು ಬಿಡಬಾರದು ಹಾಗಾಗಿ ಈ ವೃತ್ತಿ ಮಾಡುತ್ತಿದ್ದೇವೆ ಎಂದು ಶೇ.೮೯.೬೧ ಮೇದರು ತಿಳಿಸಿದರೆ, ಈ ವೃತ್ತಿಯಿಂದ ತೃಪ್ತಿಯಿಲ್ಲ

ಎಂದು ಶೇ.೬೮.೬೩ ಜನ ಪ್ರತಿಕ್ರಿಯಿಸಿದ್ದಾರೆ. ಶೇ.೨೬.೨೭ರಷ್ಟು ಜನ ಸಾಧಾರಣ ತೃಪ್ತಿಯಿದೆ ಎಂದು ತಿಳಿಸಿದರೆ, ಶೇ.೫.೦೯ರಷ್ಟು ಜನರು ನಿರ್ಲಿಪ್ತತೆ ಅಥವ ತಟಸ್ಥ ಧೋರಣೆ ತೋರಿರುವುದು ಶತ ಶತಮಾನಗಳಿಂದ ತಮ್ಮ ಬದುಕನ್ನು ಕಟ್ಟಿಕೊಂಡ ಮೇದರು ವೃತ್ತಿ ಗೌರವಕ್ಕಾಗಿ ಈ ವೃತ್ತಿ ಮಾಡುತ್ತಿರುವುದು ಬಿಟ್ಟರೆ, ಆರ್ಥಿಕ ಮೂಲದ ಹಿನ್ನೆಲೆಯಲ್ಲಿ ಹೋಲಿಸಿದರೆ ಈ ವೃತ್ತಿಗೆ ತಿಲಾಂಜಲಿ ಇಡುವುದೇ ಮೇಲೆಂದು ತಿಳಿಸುವುದರ ಹಿಂದೆ ಈ ಬುಡಕಟ್ಟುವಿನ ನೋವು ಮಡುಗಟ್ಟಿದೆ. ಮನೆಮಂದಿಯೆಲ್ಲ ದುಡಿದರೂ ತನ್ನ ಇಷ್ಟಾನಿಷ್ಟಗಳನ್ನು ಪೂರೈಸಿಕೊಳ್ಳಲಾಗದು ಎಂದರೆ ಈ ವೃತ್ತಿ ಮುಂದುವರಿಸುವ ಕುರಿತು ಹೊಸತಲೆಮಾರಿನವರಲ್ಲಿ ಹೇಗಾದರೂ ತಾನೆ ಮನಸ್ಸು ಬರಲು ಸಾಧ್ಯ? ಯಾವುದೇ ಬುಡಕಟ್ಟು ತಮ್ಮ ವೃತ್ತಿ, ಕುಲಕಸುಬಿನೊಂದಿಗೆ ತಮ್ಮದೇ ಆರ್ಥಿಕ ವ್ಯವಸ್ಥೆ ರೂಪಿಸಿಕೊಂಡಿರುತ್ತದೆ.

'ವೃತ್ತಿ ಬದಲಾವಣೆ' ಅಥವ 'ವೃತ್ತಿ ಆಘಾತ'ವಾದಾಗ ಬುಡಕಟ್ಟುಗಳು ಮನೋಕ್ಷೋಭೆಗೆ ಒಳಗಾಗುವುವು. ಬುಡಕಟ್ಟುಗಳ ಸಾಮರ್ಥ್ಯಕ್ಕನುಗುಣವಾಗಿ ಜಮೀನ್ದಾರರು, ಮೇಲ್ಜಾತಿಯವರು ಹಾಗೂ ಶ್ರೀಮಂತರು ಸಾಲ ನೀಡಿ ಅವರ ಶ್ರಮವನ್ನು ಕೊಳ್ಳೆಹೊಡೆಯುವರು. ಜೊತೆಗೆ ಅಧಿಕ ಬಡ್ಡಿ, ಚಕ್ರ ಬಡ್ಡಿಯಾಗಿ ರೂಪಾಂತರಗೊಂಡು ಜೀತ ಸ್ಥಿತಿಗೂ ಹೋಗುತ್ತದೆ. ಮಲೆನಾಡಿನ ಕಾಫಿ ಎಸ್ಟೇಟ್, ಅಡಿಕೆ ತೋಟದ ಮಾಲೀಕರಲ್ಲಿ ಇಂತಹ ಲಕ್ಷಣಗಳು ಇವೆ. ಇದನ್ನು ಜೀತವೆನ್ನಲಾಗದಿದ್ದರೂ, ಲಕ್ಷಣಗಳೆಲ್ಲ ಅವೇ ಆಗಿರುತ್ತವೆ. ಸಾಲ ಮಾಡಲು, ಸಾಲ ತೀರಿಸಲು ಮನೆ, ಜಮೀನಿನ ಪತ್ರ, ಆಭರಣ, ಕರಾರು ಪತ್ರದ ಆಧಾರದಲ್ಲಿ ಅಡುವು ಇಟ್ಟುಕೊಂಡು ಸಾಲ ತೆಗೆದುಕೊಳ್ಳುವ ಪ್ರವೃತ್ತಿ ಮೇದರಲ್ಲಿ ಹೆಚ್ಚಿದೆ. ಬ್ಯಾಂಕ್, ಸಹಕಾರ, ಖಾಸಗಿ, ಮೈಕ್ರೋ ಫೈನ್ಯಾಸಿಂಗ್‌ನವರು ಸಾಲ ಕೊಡುತ್ತಿದ್ದು, ಅವರಿಂದಲೂ ಸಾಲ ಪಡೆಯುತ್ತಿದ್ದಾರೆ. ಔದ್ಯೋಗಿಕ ಸ್ಥಿತಿಯಿಂದಲಾದರೂ ಉತ್ತಮ ಬದುಕನ್ನು ಮಾಡಬಹುದೆನ್ನುವ ಆಸೆಯೂ ಕೈಗೂಡುತ್ತಿಲ್ಲ. ಇದಕ್ಕೆ ಮೂಲ ಶಿಕ್ಷಣ ವ್ಯವಸ್ಥೆಯ ದೋಷದಿಂದ ನಿರುದ್ಯೋಗ, ಅರೆ ಉದ್ಯೋಗ ಹೆಚ್ಚಿದೆ. ಶಿಕ್ಷಣಕ್ಕೂ, ಉದ್ಯೋಗಕ್ಕೂ ತಾಳೆಯಾಗದೆ ಶಿಕ್ಷಣ ಮುಗಿಸಿ ಮನೆಗೆ ವಾಪಸ್ಸಾದವರು ಇತ್ತ ವೃತ್ತಿ ಕಸುಬಿನಲ್ಲೂ ನಿರಾಸಕ್ತಿ, ಅತ್ತ ಉದ್ಯೋಗವೂ ಇಲ್ಲದೆ ಇರುವಂತಹ ಅನೇಕ ಪ್ರಸಂಗಗಳಿವೆ. ಇನ್ನು ಕೃಷಿಕೂಲಿ, ದಿನಗೂಲಿ, ಸ್ತ್ರೀ–ಪುರುಷರ ಕೂಲಿ ತಾರತಮ್ಯವು ಆರ್ಥಿಕ ಸ್ಥಿತ್ಯಂತರದ ಅಂಶಗಳೇ ಆಗಿವೆ.

ಒಟ್ಟಾರೆ ಮೇದ ಬುಡಕಟ್ಟಿನ ಆರ್ಥಿಕ ಸ್ಥಿರತೆ ಹಳಿ ತಪ್ಪಿದೆ 'ಮೂಲ ಕಸುಬಿ'ಗೆ ಪೆಟ್ಟುಬಿದ್ದದ್ದು, ಆನಂತರ ಆಧುನೀಕತೆಯ ಹೆಸರಿನಿಂದಾಗಿ ಕೈಗಾರಿಕೀಕರಣ, ನಗರೀಕರಣವಾದದ್ದು, ಸಂಸ್ಕೃತೀಕರಣದ ಹೆಸರಿನಲ್ಲಿ ವೈದಿಕ ಧರ್ಮಾನುಸರಣೆಯಿಂದಾಗಿ ತಮ್ಮ ಬದುಕಿನ ಆವರ್ತನೆಯಲ್ಲಿ ಹೆಚ್ಚೆಚ್ಚು ಖರ್ಚು ಮಾಡುವುದೇ ಅನುತ್ಪಾದಕ ಚಟುವಟಿಕೆಗಳಿಗಾಗಿ ಇಂತಹುವುಗಳ ನಡುವೆ ಮೇದರ ಆರ್ಥಿಕ ಸ್ಥಿತ್ಯಂತರತೆಗಳನ್ನು ಗ್ರಹಿಸಬಹುದಾಗಿದೆ.

[illegible]

೩.೪ ರಾಜಕೀಯ ಸ್ಥಿತ್ಯಂತರ

ಪ್ರಾಚೀನ ಕಾಲದಿಂದಲೂ ಪ್ರತಿಯೊಂದು ಸಮುದಾಯವೂ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಅಸ್ತಿತ್ವಕ್ಕಾಗಿ ಪ್ರಯತ್ನಗಳನ್ನು ನಡೆಸುತ್ತಲೇ ಬಂದಿದೆ. ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲವೂ ಮುಕ್ತವಾಗಿರುವುದನ್ನು ನಾವು ಕಾಣುತ್ತೇವೆ. ಪ್ರತಿ ಸಮುದಾಯ ತಾನು ರಾಜಕೀಯವಾಗಿ ಬೆಳೆದು ತನ್ನ ಸ್ಥಾನಮಾನವನ್ನು ಹೊಂದುವುದು ರಕ್ಷಣೆಯ ದೃಷ್ಟಿಯಿಂದ ಪ್ರಮುಖವೆನಿಸುತ್ತದೆ. ಜಾತಿ ಪ್ರಧಾನ ಭಾರತದಲ್ಲಿ ಜಾತಿ–ಸಮುದಾಯ ಆಧಾರಿತ ನಾಯಕರನ್ನು ಹೊಂದುವ ಪ್ರಯತ್ನವನ್ನು ಎಲ್ಲಾ ಸಮುದಾಯಗಳು ಹೊಂದುತ್ತಿವೆ. ಸಾರ್ವತ್ರಿಕ ಮತದಾನ ವ್ಯವಸ್ಥೆ ಮತ್ತು ಸಂವಿಧಾನದ ಕಲಂ ೧೫ ಪ್ರಚುರಪಡಿಸುವ ಸಮಾನತೆಯ ಅಂಶಗಳನ್ನು ಪರಿಗಣಿಸಿ ಮಹಿಳಾ, ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ಹಾಗೂ ಅಲ್ಪಸಂಖ್ಯಾತರಿಗೂ ಮೀಸಲಾತಿ ಸೌಲಭ್ಯವನ್ನು ಸಂವಿಧಾನ ದತ್ತಕವಾಗಿ ನೀಡಬೇಕೆಂದುದಾಗಿದೆ. ರಾಜಕೀಯವು ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ನಿರ್ಧರಿಸುವ ಪ್ರಕ್ರಿಯೆಯೆಂದು ಪರಿಭಾವಿಸಲಾಗಿದೆ. ಭೂಮಾಲೀಕರು, ಮೇಲ್ಜಾತಿಯವರು ಹಾಗೂ ಉನ್ನತ ವರ್ಗದವರು ರಾಜಕೀಯ ಹಿಡಿತದಲ್ಲೇ ಇರಲು ಇಚ್ಛಿಸುತ್ತಾರೆ. ರಾಜಕೀಯ ಅಂತಸ್ತು ಪ್ರಸ್ತುತ ಎಲ್ಲಾ ಅಂತಸ್ತುಗಳಿಗಿಂತ ಮಿಗಿಲಾದುದು ಎಂದು ಅವರು ಭಾವಿಸುವುದರ ಜೊತೆಗೆ ತಮ್ಮ ವೈಯಕ್ತಿಕ ಹಾಗೂ ಸಮೂಹದ ಹಿತಾಸಕ್ತಿಗಳನ್ನು ಕಾಪಾಡುವ ಉದ್ದೇಶ ಹೊಂದಲಾಗಿರುತ್ತದೆ.

ಪ್ರಜಾಪ್ರಭುತ್ವದಲ್ಲಿ ಮತದಾನ ಪ್ರಮುಖ ಘಟ್ಟವಾಗಿದ್ದು ವಯಸ್ಕ ಮತದಾರ ಮತದಾನ ಮಾಡಿ ತನ್ನ ಹಕ್ಕನ್ನು ಚಲಾಯಿಸುತ್ತಾನೆ. ದೇಶದ ಅಭಿವೃದ್ಧಿಗೆ ಹಾಗೂ ರಕ್ಷಣೆಗೆ ಸೂಕ್ತ ವ್ಯಕ್ತಿಯನ್ನು ಆಯ್ಕೆ ಮಾಡುತ್ತಾನೆ. ಮತದಾನದಲ್ಲಿ ಪಾಲ್ಗೊಳ್ಳುವ ಆಸಕ್ತಿ, ಪಕ್ಷದ ಸಂಘಟಕ, ಸದಸ್ಯ, ಕಾರ್ಯಕರ್ತ, ಅಭ್ಯರ್ಥಿ ಹೀಗೆ ವಿವಿಧ ಮಜಲುಗಳಲ್ಲಿ ಪಾಲ್ಗೊಳ್ಳುವ ವಿವರಗಳ ಜೊತೆಗೆ ಆಂತರಿಕವಾಗಿ ರಾಜಕೀಯ ಅಂಶಗಳು ಮೇದರ ಬದುಕಿನ ಮೇಲೆ ಪ್ರಭಾವಿಸಿರುವುದನ್ನು ಗ್ರಹಿಸಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಮೇದರು ಶೇ.೯೮.೧೨ರಷ್ಟು ಮತ ಚಲಾವಣೆ ಮುಖಾಂತರ ಭಾಗವಹಿಸುವರಾಗಿದ್ದು, ಉಳಿದವರು ಚುನಾವಣೆಯ ಬಗ್ಗೆ ತಾತ್ಸಾರ ತೋರುತ್ತಾರೆ. ಅಭ್ಯರ್ಥಿಗಳ ಹುಚ್ಚಾಟ, ರಾಜಕೀಯ ಪಕ್ಷ ಮತ್ತು ವ್ಯಕ್ತಿಗಳನ್ನು ನಿರ್ಧರಿಸಲಾರದೆ ಅನೇಕರು ಮತದಾನದಲ್ಲಿ ಪಾಲ್ಗೊಳ್ಳುತ್ತಾರೆ. ಯಾವುದೇ ರಾಜಕೀಯ ತತ್ವ ಸಿದ್ಧಾಂತಗಳನ್ನು ಹೊಂದಿರದ ಮೇದರು ಚುನಾವಣೆಯಲ್ಲಿ ಪಾಲ್ಗೊಳ್ಳಬೇಕು ಎಂಬ ಕಾರಣದಿಂದ ಮತ ಚಲಾಯಿಸುತ್ತಾರೆ. ಸಂವಿಧಾನ ಪ್ರಜಾಪ್ರಭುತ್ವದ ಆಶಯಕ್ಕನುಗುಣವಾಗಿ, ಮೌಲ್ಯಧಾರಿತ ವ್ಯಕ್ತಿಯ ಆಯ್ಕೆಯನ್ನು ಮಾಡಬೇಕು ಎನ್ನುವುದರ ಬಗ್ಗೆ ಬಹುತೇಕ ಮೇದರಿಗೆ ಅರಿವಿರುವುದಿಲ್ಲ. ಅಕ್ಕಪಕ್ಕದವರು, ನಮ್ಮವರು ಯಾವ ಪಕ್ಷಕ್ಕೆ ಓಟು ಕೊಡುತ್ತಾರೋ ಅವರಿಗೆ ನಾವು ಓಟು ಹಾಕುತ್ತೇವೆ

ಎನ್ನುತ್ತಾರೆ. ಇನ್ನು ವಯಸ್ಕರನ್ನು ವಿಚಾರಿಸಿದರೆ "ಯಾರು ಗೆದ್ರೂ ನಾವು ರಾಗಿ ಬೀಸೋದು ತಪ್ಪಲ್ವಲ್ಲ" ಎಂದು ಹೇಳುತ್ತಾರೆ. ರಾಜಕಾರಣಿಗಳೆಲ್ಲರೂ ಆಶ್ವಾಸನೆ ಮಾತ್ರ ನೀಡುವರು, ಗೆದ್ದ ಮೇಲೆ ಈ ಕಡೆ ತಿರುಗುವುದಿಲ್ಲ. ನಮ್ಮ ಯಾವ ಕೆಲಸವೂ ಮಾಡೋದಿಲ್ಲ ಎಂದು ತಿಳಿಸುತ್ತಾರೆ. ನಿಮ್ಮಲ್ಲಿ ಚುನಾವಣೆಗೆ ಸ್ಪರ್ಧಿಸಿರುವ ವ್ಯಕ್ತಿಗಳು ಇದ್ದಾರೆಯೇ ಎಂದು ಪ್ರಶ್ನಿಸಿದಾಗ ರಾಜಕಾರಣದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು ಎಲ್ಲರಿಗೂ ಸಾಧ್ಯವಿಲ್ಲ. ಆರ್ಥಿಕವಾಗಿ ಉತ್ತಮವಾಗಿರುವವರು ಮಾತ್ರ ಭಾಗವಹಿಸಲು ಸಾಧ್ಯ. ನಾವು ಆರ್ಥಿಕವಾಗಿ ತೀರ ಹಿಂದುಳಿದವರಾಗಿದ್ದು ಮತದಾನ ಮಾತ್ರ ನಮ್ಮ ಹಕ್ಕು. ಇದನ್ನು ಚಲಾಯಿಸುತ್ತೇವೆ ಎನ್ನುತ್ತಾರೆ.

ಈ ಜಿಲ್ಲೆಯ ೪ ತಾಲೂಕುಗಳಲ್ಲಿ ಚುನಾವಣೆಗೆ ಸ್ಪರ್ಧಿಸಿರುವರ ಮಾಹಿತಿ ಈ ರೀತಿ ಇದ್ದು, ತರೀಕೆರೆ ತಾಲೂಕಿನಲ್ಲಿ ೦೨, ಚಿಕ್ಕಮಗಳೂರು ತಾಲೂಕಿನಲ್ಲಿ ೦೨, ಮೂಡಿಗೆರೆ ತಾಲೂಕಿನಲ್ಲಿ ೦೭ ಹಾಗೂ ನರಸಿಂಹರಾಜಪುರ ತಾಲೂಕಿನಲ್ಲಿ ೦೯ ಅಭ್ಯರ್ಥಿಗಳು ಸ್ಪರ್ಧಿಸಿ ಜಯಗಳಿಸಿದ್ದಾರೆ. ಜಿಲ್ಲಾ ಪಂಚಾಯತಿಯಲ್ಲಿ ೦೨ ಮಹಿಳೆಯರು, ತಾಲೂಕು ಪಂಚಾಯತಿಗೆ ೦೧ ಮಹಿಳೆ, ೧೨ ಅಭ್ಯರ್ಥಿಗಳು ಗ್ರಾಮ ಪಂಚಾಯತಿಗೆ, ೦೫ ಪಟ್ಟಣ ಪಂಚಾಯತಿಗೆ ಒಟ್ಟು ೨೦ ಅಭ್ಯರ್ಥಿಗಳು ಭಾಗವಹಿಸಿರುವುದು ಅಧ್ಯಯನದಿಂದ ತಿಳಿದು ಬಂದಿದೆ. ಪಕ್ಷಾಧಾರಿತವಲ್ಲದ ಗ್ರಾಮ ಪಂಚಾಯಯಿತಿ ಚುನಾವಣೆಯಲ್ಲಿ ಪಕ್ಷ ಬೆಂಬಲವಾಗಿ ಪರಿಶಿಷ್ಟ ಪಂಗಡದ ಮೀಸಲು ಕ್ಷೇತ್ರ ಪರವಾಗಿ ಕಾಂಗ್ರೇಸ್, ಬಿ.ಜೆ.ಪಿ, ಜೆ.ಡಿ.ಎಸ್ ಪಕ್ಷಗಳು ಮೇದರಲ್ಲಿಯೇ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತದೆ. ೨೦ ಅಭ್ಯರ್ಥಿಗಳಲ್ಲಿ ೦೨ ಮಾತ್ರ ಪುರುಷ ಅಭ್ಯರ್ಥಿಗಳಾಗಿದ್ದು, ಉಳಿದ ಅಭ್ಯರ್ಥಿಗಳೆಲ್ಲರೂ ಮಹಿಳೆಯರೇ ಎಂಬುದು, ಅದೂ ಶೇ.೩೩.೩೩ ಮೀಸಲಾತಿ, ಅಡಿ ಎಸ್.ಟಿ. ಮಹಿಳೆಗಾಗಿ ಬಂದ, ಮೇದರಲ್ಲದೆ ಬೇರೆ ಪರಿಶಿಷ್ಟ ಪಂಗಡಗಳು ಇಲ್ಲದೇ ಇದ್ದ ಸಂದರ್ಭದಲ್ಲಿ ರಾಜಕೀಯ ವಿಪ್ಲವತೆಗಳು ಮೇದರ 'ಓಣಿ'ಯಲ್ಲಿ ನಡೆಯುತ್ತವೆ. ೦೩ ಅಥವ ಅದಕ್ಕಿಂತ ಹೆಚ್ಚಿನ ಅಭ್ಯರ್ಥಿಗಳು ಸ್ಪರ್ಧಿಸಿ ತನ್ನ ಕ್ಷೇತ್ರದೊಳಗೆ ಮತಯಾಚನೆ ಮಾಡುವಾಗ ಸಮುದಾಯದ ಬೆಂಬಲಿಗರನ್ನು ಕರೆದುಕೊಂಡು ಹೋಗಲೇಬೇಕು. ಸಾಮೂಹಿಕ ವ್ಯವಸ್ಥೆಯಾಗಿದ್ದರೆ ಒಂದಿಷ್ಟು ಜನರನ್ನು ಸೇರಿಸಿ ಮತ ಪ್ರಚಾರ ಮಾಡಬಹುದಿತ್ತು. ಆದರೆ ಮೇದರ ಕೇರಿ-ಓಣಿಯಲ್ಲಿರುವ ಬಂಧು-ಬಳಗದವರನ್ನು ಅಷ್ಟು ಸುಲಭವಾಗಿ ವಿಂಗಡಿಸಿ, ಬೆಂಬಲಕ್ಕೆ ಕರೆದುಕೊಂಡು ಹೋಗುವ ಹಾಗಿಲ್ಲ. ಚುನಾವಣೆ ಮೀಸಲಾತಿ ಬಾರದಿದ್ದಾಗ ಐಕ್ಯತೆಯಿಂದಿರುವ ಮೇದರು ಚುನಾವಣೆಯಿಂದಾಗಿ ರಾಜಕೀಯ ಸ್ಥಿತ್ಯಂತರ ಕಾಣಬಹುದಾಗಿದೆ.

ರಾಗ-ದ್ವೇಷ, ಅಸೂಯೆ, ಗುಪ್ತ ಪ್ರಚಾರ, ಸೇಡು, ತೋರುಗಾಣಿಕೆ, ಮಾತ್ಸರ್ಯ ಇಂತಹ ಅರಿಷಡ್ವರ್ಗಗಳಲ್ಲಿ ಅರಳಿ 'ಬಂಧುತ್ವದ ಸುಮಧುರ ವ್ಯವಸ್ಥೆ'ಯು ವಿಚಲಿತವಾಗಿದೆ. ವ್ಯಕ್ತಿ ಮತ್ತು ಪಕ್ಷದ ಬೆಂಬಲಿಗರಾಗಿ ಕೆಲಸ ನಿರ್ವಹಿಸಿದ ವ್ಯಕ್ತಿಗಳ ನಡುವೆ ಜಗಳವಾಗಿ

ಅಸಮಧಾನದ ಹೊಗೆಯಾಡುತ್ತಲೇ ಇರುತ್ತದೆ. ಕೇರಿಯಿಂದ ಆಚೆ ಅಥವ ದೂರದೂರಿನಲ್ಲಿರುವವರೂ ಬಾಹ್ಯ ಬೆಂಬಲವನ್ನು ತಮ್ಮ ತಮ್ಮವರಿಗೆ ನೀಡುತ್ತ ಅವರೂ ಬಂಧುತ್ವದ ಶಾಂತ ನೆಲೆಯಿಂದ ಸಿಡಿದು ಗುರಿಯಾಗಿಸುವರ ಕೆಂಗಣ್ಣಿಗೆ ದಾಳವಾಗುವುದು ರಾಜಕೀಯ ಸ್ಥಿತ್ಯಂತರರ ಒಂದು ಸ್ಥಿತಿ. ರಾಜಕೀಯ ಪಕ್ಷಗಳು ಚುನಾವಣೆಗೆ ನಿಂತ ಮೊದಲೇ ವೇದಿಕೆಯನ್ನು ನಿರ್ಮಿಸಿಕೊಳ್ಳುತ್ತದೆ. ತಮ್ಮ ಪಕ್ಷಗಳು ಪರಿಶಿಷ್ಟ ಪಂಗಡಕ್ಕಾಗಿ ಕೆಲವು ಮೋರ್ಚ, ವೇದಿಕೆ, ಮಂಚ್ ಇತ್ಯಾದಿ ಹೆಸರಿನಲ್ಲಿ ಪ್ರತ್ಯೇಕವಾಗಿ ಪುರುಷ ಮತ್ತು ಮಹಿಳಾ ರಾಜಕೀಯ ಸಂಘಟನೆಯನ್ನು ಕಟ್ಟಿ ಸಮುದಾಯದ ನಡುವೆ ಒಡನಾಟ ಇಟ್ಟುಕೊಳ್ಳುವ ರಾಜಕೀಯ ಪಕ್ಷಗಳು ಪದಾಧಿಕಾರಿಗಳ ಸಂಗಡ ನಿರಂತರ ಸಂಪರ್ಕ–ಭೇಟಿ ಇವುಗಳು ನಡೆದಾಡುತ್ತಿರುವಾಗ ಪರಸ್ಪರ ಸಮುದಾಯದವರಲ್ಲಿ ರಾಜಕೀಯ ಚಟುವಟಿಕೆಗಳನ್ನು ಬಿರುಸುಗೊಳಿಸುವಾಗ ಮತ್ತಷ್ಟೂ ಅಂತರ ಏರ್ಪಡುತ್ತದೆ. ಪ್ರಜಾಪ್ರಭುತ್ವದ ನೆಲೆಗಟ್ಟಿನಲ್ಲಿ ಪ್ರಾತಿನಿಧ್ಯ ಕೊಡಬೇಕು ನಿಜ. ಆದರೆ ಪ್ರಾತಿನಿಧ್ಯ ತನ್ನದಾಗಿಸಿಕೊಳ್ಳುವ ನಿಟ್ಟಿನಲ್ಲಿ ಸಮುದಾಯದೊಳಗೆ ಆಗುವ ಪಲ್ಲಟವನ್ನು ಯಾರೂ ನಿರೀಕ್ಷಿಸುವುದಿಲ್ಲ. ಆದರೆ ಮೇದರಂತಹ ಮುಗ್ಧ ಬುಡಕಟ್ಟಿನವರು, ರಾಜಕೀಯ ತಂತ್ರಗಾರಿಕೆಯಿಂದ ಗಾವುದ ದೂರವಿದ್ದವರಿಗೆ ರಾಜಕೀಯದಿಂದಲೇ 'ಬುಡಕಟ್ಟು ಸಂಘಟನೆ' ಜರ್ಜರಿತಗೊಳ್ಳುವಂತೆ ಮಾಡುತ್ತಿರುವುದು ಸ್ಥಿತ್ಯಂತರವಾಗಿದೆ.

ರಾಜಕೀಯದ ಮೂಲಕ ತನ್ನ ಅಭ್ಯರ್ಥಿತನದ ಮೂಲಕ ಸ್ಪರ್ಧಿಸಿ ಪ್ರಜಾಪ್ರಭುತ್ವದ ಆಶಯದಂತೆ ಯಾರಾದರೂ ಒಬ್ಬರಿಗೆ ಮಾತ್ರ ಆಯ್ಕೆಗೆ ಅವಕಾಶವಿದ್ದು, ಗೆದ್ದ ವ್ಯಕ್ತಿ ಹಾಗೂ ಸೋತ ವ್ಯಕ್ತಿಗಳ ನಡುವಿನ ಅಂತರ ಕಡಿಮೆಯಾಗಲು ವರ್ಷಗಳೇ ಬೇಕಾಗುತ್ತದೆ. ಬೌದ್ಧಿಕವಾಗಿ ರಾಜಕಾರಣದಲ್ಲಿ ನುರಿತರಲ್ಲದ ಮೇದರಿಗೆ ರಾಜಕೀಯ ಚಾಣಾಕ್ಷತೆಯಿಲ್ಲ. ಗೆದ್ದ ಸದಸ್ಯರು ರಾಜಕಾರಣಕ್ಕೆ ಎಲ್ಲಾ ದೃಷ್ಟಿಯಿಂದಲೂ ಸಮರ್ಪಕ ವ್ಯಕ್ತಿಗಳೇ? ಆಯ್ಕೆಯಾದ ಮಹಿಳಾ ಸದಸ್ಯೆ ರಾಜಕೀಯ ತಂತ್ರಗಾರಿಕೆ ನಡೆಸುವ ಚಾಕಚಕ್ಯತೆ ಇದೆಯೇ? ಆಯ್ಕೆಯ ಹಿಂದೆ ಪಕ್ಷರಾಜಕಾರಣದಲ್ಲಿ ನುರಿತ ಬಲಾಢ್ಯ ಜಾತಿ, ವರ್ಗದವರು ಮುಕ್ತ ಹಸ್ತರಾಗಿ ಸದಸ್ಯರನ್ನು ಬಿಡುವರೆ? ವ್ಯವಸ್ಥೆಯೊಳಗೆ ಅಧಿಕಾರಕ್ಕಾಗಿ ಮೀಸಲು ಲಭಿಸುವುದೇ? ಆಗೊಮ್ಮೆ ಮೀಸಲು ಪ್ರಕಾರ ಅಧಿಕಾರ ಸಿಕ್ಕರೆ ಪಕ್ಷದವರ ರಬ್ಬರ್‌ಸ್ಟ್ಯಾಂಪ್ ಆಗದೆ ಇರುವರೇ? ತನ್ನ ಪತಿ ಆಡಳಿತದ ಹಿಂದಿನ ಸೂತ್ರದಾರನೇ? ಹೀಗೆ ಹಲವಾರು ಪ್ರಶ್ನೆಗಳು ಪ್ರಸ್ತುತ ಮಹಿಳಾ ಪ್ರಾತಿನಿಧ್ಯದಲ್ಲಿರುವ ತೊಡಕುಗಳಾಗಿವೆ.

ಮೇದರ ಆಯ್ಕೆಗೊಂಡ ಸದಸ್ಯರೂ ಎಲ್ಲಿಯೋ ಮೂಲೆ ಗುಂಪಾಗಿರುವುದು ಕಂಡುಬಂದಿತು. ತಮ್ಮ ಜನಾಂಗದವರೇ ಆಯ್ಕೆಯಾಗಿ, ಅಧಿಕಾರದ ಗದ್ದುಗೆ ಏರಿದ್ದರೂ ಪ್ರಜಾಸತ್ತಾತ್ಮಕ ಆಡಳಿತವನ್ನು ನೀಡಲಾಗದೆ ಹತಾಶ ಸ್ಥಿತಿಯನ್ನು ತಲುಪಿದ ಉದಾಹರಣೆಗಳನ್ನು ಕಂಡುಕೊಳ್ಳಲಾಯಿತು. ಮಡಿಕೇರಿ ಜಿಲ್ಲೆಯ ವಿರಾಜಪೇಟೆ ವಿಧಾನ ಸಭಾ ಕ್ಷೇತ್ರದಿಂದ ೨

[illegible]

ಬಾರಿ ಎಂ.ಎಲ್.ಎ ಆಗಿ ಆಯ್ಕೆಗೊಂಡು ಸರ್ಕಾರಿ ಭರವಸೆಗಳ ಸಮಿತಿ ಅಧ್ಯಕ್ಷರಾದ ಹೆಚ್.ಡಿ.ಬಸವರಾಜು 'ಮೇದ ಬುಡಕಟ್ಟಿ'ನವರೇ ಆಗಿದ್ದರು. ಮೀಸಲಾತಿ ವರ್ಗಾವಣೆಯಾಗಿದ್ದರಿಂದ ರಾಜಕೀಯ ಪ್ರಾತಿನಿಧ್ಯ ಮರಿಚಿಕೆಯಾಯಿತು.

ಪ್ರಸ್ತುತ ರಾಜ್ಯದ ೧೬ ವಿಧಾನಸಭಾ ಮೀಸಲು ಕ್ಷೇತ್ರ ಕರ್ನಾಟಕ ರಾಜ್ಯದಲ್ಲಿದ್ದರೂ ಅವುಗಳೆಲ್ಲವನ್ನೂ ನಾಯಕ ಬುಡಕಟ್ಟಿನವರು ತಮ್ಮದಾಗಿಸಿಕೊಂಡರು. ಆದರೆ ಈ ಹಿಂದೆ ವಿರಾಜಪೇಟೆ ಹಾಗೂ ಮುಂಡಗೋಡು ಪರಿಶಿಷ್ಟ ಪಂಗಡದ ಎರಡು ಮೀಸಲು ಕ್ಷೇತ್ರವಿದ್ದಾಗ ಹೆಚ್.ಡಿ.ಬಸವರಾಜುರವರು ಆಯ್ಕೆಗೊಂಡಿದ್ದು, ರಾಜಕೀಯ ಭರವಸೆಯನ್ನು ಮೂಡಿಸಿತ್ತು. ಕರ್ನಾಟಕದಾದ್ಯಂತ ನೆಲೆಸಿದ್ದ ಮೇದರು ಅಭಿಮಾನದಿಂದ ಈ ಆಯ್ಕೆಯನ್ನು ಸ್ಮರಿಸುತ್ತಿದ್ದರು. ಇಡೀ ಸಮುದಾಯವೇ ರಾಜಕೀಯ ಅಂತಸ್ತಿಗೆ ಏರಿದ ಅನುಭವವನ್ನು ಪಡೆದಿದ್ದರು. ಇದೂ ರಾಜಕೀಯ ಸ್ಥಿತ್ಯಂತರವೆ. ಇಂತಹ ಶಕ್ತಿ ರಾಜಕಾರಣಗಳಿಂದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಸ್ಥಿತ್ಯಂತರಗಳು ಘಟಿಸಿವೆ. ಪಕ್ಷದ ಕಾರ್ಯಕರ್ತರಾಗಿ ಶೇ.೧೦.೧೮ ಜನರು ತಮ್ಮನ್ನು ಗುರ್ತಿಸಿಕೊಂಡರೆ ಶೇ.೧೭.೧೫ರಷ್ಟು ಜನರು ವಿವಿಧ ಪಕ್ಷಗಳ ಸದಸ್ಯರಾಗಿ ಗುರ್ತಿಸಿಕೊಂಡಿರುವರು. ಪಕ್ಷದ ಸಂಘಟಕರಾಗಿ, ಮುಂದಾಳುಗಳಾಗಿ ಶೇ.೬.೪೩ ಜನರು ಗುರ್ತಿಸಿಕೊಳ್ಳುತ್ತಿರುವುದು ಮೇದ ಬುಡಕಟ್ಟಿನ ಶೇ.೧೭ರಷ್ಟು ಜನರು ರಾಜಕೀಯ ಚಟುವಟಿಕೆಗಳಲ್ಲಿರುವುದು ಗಮನಿಸಬಹುದು. ರಾಜಕಾರಣದ ಸಂದರ್ಭದಲ್ಲಿ ಇತರೆ ಸಮುದಾಯದವರೊಂದಿಗೆ ಪ್ರತಿವರ್ತಿಸುವ ಸಂದರ್ಭದಲ್ಲಿ ಮುಜುಗರ ಅನುಭವಿಸಿದ್ದಾರೆ.

ಸಮುದಾಯದ ಬೆಂಬಲವಿಲ್ಲದಿರುವುದು ಹಾಗೂ ಪರಿಶಿಷ್ಟ ವರ್ಗದವರು ಎಂಬ ಭಾವನೆ ಅವರನ್ನು ಆಗಾಗ್ಗೆ ಕಾಡಿರುವುದನ್ನು ಮುಕ್ತವಾಗಿ ಹಂಚಿಕೊಂಡಿರುತ್ತಾರೆ. ಶಕ್ತಿ ರಾಜಕಾರಣದಲ್ಲಿ ಬಲಾಢ್ಯ ಕೋಮು ಪ್ರತಿನಿಧಿಸುವರಿಗೆ ಪ್ರಥಮ ಸ್ಥಾನವಿದ್ದು, ಅಂಚಿನಲ್ಲಿರುವ ಸಮುದಾಯಗಳು ನಿರ್ಲಕ್ಷಿಸಲ್ಪಟ್ಟೇ ಇರುತ್ತವೆ. ಆದಾಗ್ಯೂ ಶಕ್ತಿ ರಾಜಕಾರಣದ ತಂತುಗಳಿಂದ ರಾಜಕೀಯ ಸ್ಥಾನಮಾನಗಳನ್ನು ದಕ್ಕಿಸಿಕೊಳ್ಳುವ ಪ್ರಯತ್ನಗಳನ್ನು ಮೇದರಲ್ಲಿ ಕಂಡುಕೊಳ್ಳಲಾಗಿದೆ. ನನ್ನ ಅನಿಸಿಕೆಯಂತೆ ಚಿಕ್ಕಮಗಳೂರು ಜಿಲ್ಲಾ ಮೇದರ ರಾಜಕೀಯ ಸ್ಥಿತ್ಯಂತರದ ಮಾದರಿಯನ್ನು ಕರ್ನಾಟಕದಾದ್ಯಂತ ನೆಲೆಗೊಂಡಿರುವ ಮೇದರಿಗೆ ಆರೋಪಿಸಿಸಬಹುದು. ಮೇದರಿಗೆ ರಾಜಕೀಯವಾಗಿ ಅಷ್ಟೊಂದು ಬೆಂಬಲ ದೊರೆತಂತೆ ತೋರುವುದಿಲ್ಲ. ಸ್ವಾತಂತ್ರ್ಯ ನಂತರದ ಸರ್ಕಾರವು, ಸಂವಿಧಾನದಲ್ಲಿ ಹಿಂದುಳಿದ ಪರಿಶಿಷ್ಟ ಜಾತಿ, ಪಂಗಡಗಳಿಗೆ ಪ್ರಾತಿನಿಧ್ಯವನ್ನು ಚುನಾಯಿತ ಸಮೂಹದಲ್ಲೂ ನೀಡಿ ವಿಶೇಷ ಸೌಲಭ್ಯಗಳನ್ನು ದೊರಕಿಸಿಕೊಟ್ಟಿತು. ಮೇದರಲ್ಲಿ ರಾಜಕೀಯ ಪ್ರಭಾವ ಹೊಂದಿದವರು ತೀರ ಕಡಿಮೆ. ರಾಜಕೀಯದಲ್ಲಿ ಪ್ರಬಲರಾದ ಗುರ್ತಿಸಿಕೊಂಡವರೇ ಪ್ರಬಲರಾಗುತ್ತ ತಮ್ಮ ಸಮುದಾಯದ ಇತರರಿಗೆ ಈ ಅವಕಾಶ ವರ್ಗಾಯಿಸುವ ಮನೋಸ್ಥಿತಿ ತೋರಲಿಲ್ಲ. ಬಹುಶಃ 'ರಾಜಕೀಯ ಸ್ಥಿತಿ'ಯೇ ಹೀಗಿರಬೇಕು.

ಅನೇಕ ತನ್ನ ತಲೆಮಾರುಗಳಿಗೆ ಈ ಅಧಿಕಾರ ವರ್ಗಾಯಿಸುವ ಪ್ರವೃತ್ತಿ, ರಾಜಕಾರಣ ಅಪೇಕ್ಷಿತ ತನ್ನ ವರ್ಗಕ್ಕೂ ವಿಸ್ತರಣೆ ಮಾಡುವ ರಾಜಕೀಯ ಮನಸ್ಸುಗಳಿವೆ. ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆ ಹೆಚ್ಚುತ್ತಾ, 'ರಾಜಕೀಯ ಸ್ಥಿತ್ಯಂತರ'ಗಳ ತೀವ್ರತೆ ಕಾಣಬಹುದು. ರಾಜಕಾರಣದಿಂದ ವೈಮನಸ್ಸು ಜಾಸ್ತಿಯಾಗಿ ಸಿಡಿದು ಹೋಗುವ ಬದಲು ರಾಜಕಾರಣವನ್ನು ರಾಜಕೀಯಕ್ಕಷ್ಟೇ ಸೀಮಿತಗೊಳಿಸುವ ಪರಿಭಾವನೆಯನ್ನು ಮೇದ ಬುಡಕಟ್ಟಿನವರು ಅರಿಯಬೇಕಾಗಿದೆ. ರಾಗ-ದ್ವೇಷಗಳಿಂದ ಬುಡಕಟ್ಟು ಸಂಸ್ಕೃತಿಗೆ ಧಕ್ಕೆ ಬಾರದಂತೆ ಎಚ್ಚರವಹಿಸಬೇಕಿರುವುದು ಸಧ್ಯದ ತುರ್ತಾಗಿದೆ.

ಪ್ರಸ್ತುತ ಅನೇಕ ಪ್ರಕ್ರಿಯೆಗಳಿಂದಾಗಿ ಜಗತ್ತಿನ ಎಲ್ಲ ಸಮುದಾಯಗಳಲ್ಲೂ ಗುರುತರ ಬದಲಾವಣೆ ಕಂಡು ಬರುತ್ತಿದ್ದು, ಕುಲಕಸುಬು ಆಧಾರಿತ ಮೇದರು ತಮ್ಮ ಬದುಕಿನಲ್ಲೂ ಅನೇಕ ಬದಲಾವಣೆಗಳನ್ನು ಕಂಡುಕೊಂಡಿದ್ದಾರೆ. ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲಂತೂ ಕ್ಷಿಪ್ರ ಬದಲಾವಣೆಗೆ ಒಳಗಾಗಿದ್ದು ಸಾಂಸ್ಕೃತಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ನಿದಾನಗತಿಯ ಬದಲಾವಣೆಗಳನ್ನು ಹೊಂದುತ್ತಿರುವುದು ಸಂಶೋಧನೆಯಿಂದ ತಿಳಿದುಬಂದಿದೆ. ಮೇದಾರಿಕೆ ಸಂಸ್ಕೃತಿಯ ಭಾಗವಾಗಿರುವುದರಿಂದ ಇನ್ನೂ ಇದರ ಉಪಯೋಗವನ್ನು ಭಾರತೀಯ ಸಮಾಜ ಪಡೆಯುತ್ತಿದೆ. ಆದಾಗ್ಯೂ ಮಾರುಕಟ್ಟೆಯನ್ನು ಪ್ರವೇಶಿದುತ್ತಿರುವ ಕೈಗಾರಿಕಾ ಉತ್ಪನ್ನಗಳು ಅನೇಕ ಸವಾಲುಗಳನ್ನು ಮೇದರಿಗೆ ಒಡ್ಡಿ, ಇದನ್ನು ಅರಗಿಸಿಕೊಳ್ಳದ ಸ್ಥಿತಿಯಲ್ಲಿ ಮೇದರರಿರುವುದು ಕಂಡುಬಂದಿದೆ. ಬದಲಾವಣೆ ಜಾಗತೀಕ ಧರ್ಮವೆಂದು ಅರಿತಿರುವ ಮುಗ್ಧ ಮೇದರು ಆಧುನಿಕ ಕಾಲಘಟ್ಟದಲ್ಲಿ ತಮ್ಮ ಅಸ್ಥಿತ್ವವನ್ನು ಹೇಗೆ? ರೂಪಿಸಿಕೊಳ್ಳಬೇಕೆಂಬುದನ್ನು ಅರಿಯದೆ ದಿಗ್ಮೂಡರಂತಾಗಿರುವುದು ಸಮೀಕ್ಷೆ ತಿಳಿಸುತ್ತದೆ.

ಅಡಿ ಟಿಪ್ಪಣಿಗಳು

೦೧. Mathur. change in Agreian society -1987 Page-1

೦೨. Kingslay Davis. Human society-1981-Page-621

೦೩. ಪ್ರಭಾಕರ ಎ.ಎಸ್. ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು-೨೦೦೬, ಕನ್ನಡ ವಿ.ವಿ. ಹಂಪಿ-ಪುಟ-೧

೦೪. ಪ್ರಭಾಕರ ಎ.ಎಸ್.-ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು-ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ-೨೦೦೬-ಪುಟ-೮

೦೫. ಅದೇ ಪುಟ-೧೨

೦೬. ಡಾ. ಲಕ್ಕಪ್ಪಗೌಡ. ಎಚ್.ಜೆ. (ಸಂ)-ಕರ್ನಾಟಕದ ಬುಡಕಟ್ಟುಗಳು-ಪುಟ-೧೭

೦೭. ಡಾ. ಬೋರಲಿಂಗಯ್ಯ ಹಿ.ಚಿ. ಎ.ಎಸ್. ಪ್ರಭಾಕರ (ಸಂ)-ಬುಡಕಟ್ಟು ಅಧ್ಯಯನ ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ-೨೦೦೫-ಪುಟ-೪,೧೮೧

೦೮. ಡಾ. ಬೋರಲಿಂಗಯ್ಯ ಹಿ.ಚಿ.-ಬುಡಕಟ್ಟು ದೈವಾರಾಧನೆ-ಕನ್ನಡ ವಿ.ವಿ. ಹಂಪಿ ೨೦೦೨-ಪುಟ-೨

೦೯. ಡಾ. ಮೇತ್ರಿ ಕೆ.ಎಂ.-ಬುಡಕಟ್ಟು ಕುಲಕಸುಬುಗಳು-ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ-ಪುಟ-೩೬,೩೭

೧೦. ಪ್ರಭಾಕರ ಎ.ಎಸ್. (ಸಂ)-ಬುಡಕಟ್ಟು ಅಭಿವೃದ್ಧಿ ಮೀಮಾಂಸೆ ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ-೨೦೦೪-ಪುಟ-೧೮೩

೧೧. ಪ್ರಭಾಕರ ಎ.ಎಸ್. ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪುಟ-೧೪೯-೨೦೦೬

೧೨. ಅದೇ ಪುಟ- ೧೨

೧೩. ಮೊಗಳ್ಳಿ ಗಣೇಶ-ದಲಿತರು ಮತ್ತು ಜಾಗತೀಕರಣ-ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ-೧೯೯೯-ಪುಟ-೧೨

ಅಧ್ಯಾಯ : ನಾಲ್ಕು

ಮೇದರ ಸಮಕಾಲೀನ ಸಮಸ್ಯೆಗಳು–ಸವಾಲುಗಳು

ಅಧ್ಯಾಯ–ನಾಲ್ಕು

ಮೇದರ ಸಮಕಾಲೀನ ಸಮಸ್ಯೆಗಳು–ಸವಾಲುಗಳು

ಬುಡಕಟ್ಟುಗಳ ಅಭಿವೃದ್ಧಿಗಾಗಿ ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು ಕೈಗೊಂಡಿರುವ ಕಾರ್ಯಕ್ರಮಗಳು ಹಾಗೂ ಕಾರ್ಯ ತಂತ್ರಗಳಿಂದಾಗಿ, ದೇಶದ ಎಲ್ಲ ಬುಡಕಟ್ಟುಗಳ ಸಮಗ್ರಾಭಿವೃದ್ಧಿ ಆಗುತ್ತದೆಂಬ ಭ್ರಮೆ ಹುಟ್ಟಿಸುತ್ತದೆ. ವಾಸ್ತವದಲ್ಲಿ ಯೋಜನೆಗಳಿಗಿಂತ ಯೋಜನೆಗಳು ಉನ್ನತವಾಗಿದೆ ಎಂದು ಕಲ್ಪಿಸಿ, ಯೋಜನೆಗಳ ಸಂಖ್ಯೆ ಮತ್ತು ಇದಕ್ಕೆ ಮೀಸಲಿಡುವ ಹಣ ಮಾತ್ರ ಬೃಹದಾಕಾರವಾಗಿ ಆಗುತ್ತಿವೆಯೇ ಹೊರತು ಬುಡಕಟ್ಟುಗಳ 'ಬೇಕು'ವಿಗೆ ಅನುಗುಣವಾಗಿ ಯೋಜಿತವಾಗುತ್ತಿಲ್ಲದಿರುವುದರಿಂದ ಯೋಜನೆಗಳು ಆಯಶಸ್ವಿ ಹೊಂದುತ್ತಿವೆ. ಈ ನೀತಿ ಮೇದ ಬುಡಕಟ್ಟುವಿಗೂ ಅನ್ವಯಿಸುತ್ತದೆ. ಜೀವನಕ್ಕೆ ಮೂಲಾಧಾರವಾಗಿರುವ 'ಮೇದಾರ್ಕಿ ವೃತ್ತಿ'ಯನ್ನೇ ತಾಂತ್ರಿಕ ಹಾಗೂ ವೈಜ್ಞಾನಿಕ ಒಳಗಾಗುವಿಕೆಯ ಕುರಿತು ಇದುವರೆಗೂ ಸಮಗ್ರ ಚಿಂತನೆ ಮಾಡದಿರುವುದು ಈ ಸಮುದಾಯ ಇಂದಿಗೂ ಅನೇಕ ಸಮಸ್ಯೆ ಸವಾಲುಗಳನ್ನು ಎದುರಿಸುತ್ತಿವೆ. ಬಿದಿರಿನಿಂದ ಪರ್ಯಾಯ, ಆಕರ್ಷಕ ಸರಕುಗಳ ಉತ್ಪಾದನೆಗೆ ಬೇರು ಮಟ್ಟದ ಚಿಂತನೆಗಳಾಗದೇ ಇರುವುದು, ಸೂಕ್ತ ಮಾರುಕಟ್ಟೆಗಳಿಲ್ಲದೆ ಸೊರಗುತ್ತಿರುವ ಈ ವೃತ್ತಿಗೆ ಜನಾಕರ್ಷಣೆಯಾಗುವಂತೆ ಮಾರುಕಟ್ಟೆ

[illegible]

[illegible]

ಒದಗಿಸಿ, ಈ 'ವೃತ್ತಿಯ ಸಾಂಪ್ರದಾಯಿಕ ಜ್ಞಾನ ಪರಂಪರೆ'ಯನ್ನು ಉಳಿಸಿಕೊಳ್ಳುವ ಕಾಳಜಿ ಯಾರಿಗೂ ಇದ್ದಂತಿಲ್ಲ. ಈ ವೃತ್ತಿಯ ಜೊತೆಗೆ ಪರ್ಯಾಯ ವೃತ್ತಿಯನ್ನಾಗಿ ಕೃಷಿಯನ್ನೇ ಮೊದಲ ಆಯ್ಕೆ ಮಾಡಿಕೊಳ್ಳುವ, ಕಷ್ಟಸಹಿಷ್ಣತೆಯುಳ್ಳ ಮೇದರಿಗೆ ಸರ್ಕಾರದಿಂದ ದೊರೆಯುವ ಭೂಮಿ ಮರಿಚಿಕೆಯಾಗಿದೆ. ರಾಜಕೀಯ, ಶಿಕ್ಷಣ, ಇತರೆ ಉದ್ಯೋಗಗಳಲ್ಲಿ ಸ್ಪರ್ಧಾತ್ಮಕತೆಯ ಕೊರತೆಯಿಂದಾಗಿ ಆರ್ಥಿಕ, ಸಾಮಾಜಿಕ, ರಾಜಕೀಯ ಮಜಲಿನ ಕೆಳಸ್ತರದಲ್ಲಿ ಮೇದರು ಉಳಿದಿರುವುದು ಸಮೀಕ್ಷೆಯಿಂದ ತಿಳಿದುಬಂದಿದೆ.

೪.೧ ಆರ್ಥಿಕ ಸಮಸ್ಯೆ

ತಲತಲಾಂತರದಿಂದ ಮೇದಾರಿಕೆಯನ್ನು ಕುಲಕಸುಬನ್ನಾಗಿ ಮಾಡಿಕೊಂಡು ಬರುತ್ತಿರುವ ಮೇದರ ಬದುಕು ಸ್ಥಿರವಾಗಿಯೇ ಇದೆ. ಸರ್ಕಾರದ ಅನೇಕ ಯೋಜನೆಗಳ ಲಾಭಪಡೆದಿರುವ ಮೇದರ ಆರ್ಥಿಕ ಸ್ಥಿತಿ ಅಷ್ಟೇನು ಉತ್ತಮವಾಗಿಲ್ಲ. ನಿರಂತರ ಆದಾಯ ಗಳಿಸಿ ಜೀವನ ಮಟ್ಟ ಸುಧಾರಿಸಿಕೊಳ್ಳುವ ಪ್ರವೃತ್ತಿ ಮೇದರಲ್ಲಿ ಕಾಣುತ್ತಿಲ್ಲ. ಸರ್ಕಾರಿ ಯೋಜನೆಗಳಲ್ಲಿ ಕೆಲವು ಯೋಜನೆಗಳು ಮೇದರ ಮೇಲೆ ಹೇರಲ್ಪಟ್ಟು, ಸರ್ಕಾರದ ಲೆಕ್ಕಕ್ಕಷ್ಟೇ ಎಂಬಂತೆ ಕಂಡುಬಂದಿದೆ. ಮೇದರು ಮೇದಾರಿಕೆ ಜೊತೆಯಲ್ಲಿ ವ್ಯವಸಾಯ, ಪಶುಸಂಗೋಪನೆ, ಕುರಿ ಸಾಕಾಣಿಕೆ, ನಾಟಿಕೋಳಿ ಸಾಕಾಣಿಕೆ, ಸಣ್ಣಮಟ್ಟ ವ್ಯಾಪಾರ, ಕೂಲಿ, ಡ್ರೈವಿಂಗ್ ಇತ್ಯಾದಿ ಮಾಡುತ್ತಿದ್ದರೂ ಅವುಗಳಿಂದ ಬರುವ ಆದಾಯ ದೈನಂದಿನ ಖರ್ಚಿಗಷ್ಟೇ ಸಾಕಾಗುವುದು ಎಂದು ತಿಳಿಸುತ್ತಾರೆ. ಕೈಗಾರಿಕೀರಣದ ಪ್ರಭಾವದಿಂದಾಗಿ ಕರಕುಶಲ ವೃತ್ತಿಗಳು ಮೂಲೆಗುಂಪಾಗಿ ಕಾರ್ಖಾನೆಯಿಂದ ತಯಾರಾದ ವಸ್ತುಗಳು ಮೇದರ ಪರಿಕರಗಳೊಂದಿಗೆ ಮುಖಾಮುಖಿಯಾಗಿ ಕೊಳ್ಳುವ ಗ್ರಾಹಕ ಅಂತಿಮವಾಗಿ ನಯವಾದ, ಕಡಿಮೆ ಬೆಲೆ, ಹೆಚ್ಚು ಬಾಳಿಕೆ ಬರುವ ಕೈಗಾರಿಕಾ ಪದಾರ್ಥಗಳಿಗೇ ಮನಸೋಲುತ್ತಿರುವುದು, ಕ್ರಮೇಣವಾಗಿ ಮೇದಾರಿಕೆಯ ವಸ್ತುಗಳನ್ನು ಉಪೇಕ್ಷಿಸುತ್ತಿರುವುದನ್ನು ಸಮೀಕ್ಷೆಯಿಂದ ಮನಗಾಣಲಾಯಿತು.

ಮೇದಾರಿಕೆ ವಸ್ತುಗಳ ಮಾರಾಟದಿಂದ ಕುಟುಂಬವಾರು ಸರಾಸರಿ ತಲಾ ರೂ.೨೦೦ಗಳ ಗಳಿಕೆಯು ಕುಟುಂಬದ ದುಸ್ಥಿತಿಯನ್ನು ತಿಳಿಸುತ್ತದೆ. ಮೇದಾರಿಕೆಯ ಜೊತೆಗೆ ಕೃಷಿ ಚಟುವಟಿಕೆಯಲ್ಲಿ ತೊಡಗಿರುವ ಮೇದರ ಭೂಹಿಡುವಳಿಗಳ ಗಾತ್ರವೂ ಅತ್ಯಂತ ಕಡಿಮೆಯಾಗಿದೆ. ಉದಾಹರಣೆಗೆ ೦-೨ ಎಕರೆಯೊಳಗೆ ಭೂಮಿಯನ್ನು ಹೊಂದಿರುವ ಕುಟುಂಬಗಳು ೧೧೯. ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು ೩೭೩ ಕುಟುಂಬಗಳಿದ್ದು, ಇದರಲ್ಲಿ ಶೇ.೩೨ ಕುಟುಂಬಗಳು ಅತ್ಯಂತ ಕಡಿಮೆ ಭೂಹಿಡುವಳಿಯನ್ನು ಹೊಂದಿದೆ. ೦-೦೨ ಎಕರೆಯೊಳಗೆ ಇರುವ ಭೂಮಿಯ ಪ್ರಮಾಣ ಕೇವಲ ೧೧೯ ಎಕರೆ ಮಾತ್ರ. ೦-೨ ಎಕರೆ ಮೇಲ್ಪಟ್ಟ ಭೂಹಿಡುವಳಿಗಳ ಪ್ರಮಾಣ ಅತ್ಯಂತ ಕಡಿಮೆಯಿದ್ದು, ಈ ಭೂಮಿಯಿಂದ ಸುಧಾರಿತ ಯಂತ್ರೋಪಕರಣಗಳನ್ನು ಬಳಸಲಾಗದೆ. ಲಾಭದಾಯಕ ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗದೆ. ಮೇದರು ಹೆಸರಿಗಷ್ಟೇ

[illegible]

[illegible]

[illegible]

[illegible]

ಕೃಷಿಕರಾಗಿದ್ದಾರೆಯೇ ಹೊರತು ಕೃಷಿಯಿಂದ ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಲಾಗಿಲ್ಲ. ತಾವು ಬೆಳೆದ ಬೆಳೆಗಳಿಗೆ ವೈಜ್ಞಾನಿಕ ಬೆಲೆ ಸಿಗದೆ ಮತ್ತಷ್ಟೂ ಆರ್ಥಿಕ ಹಿನ್ನೆಡೆ ಅನುಭವವಿಸುತ್ತಿದ್ದಾರೆ. ಸಕಾಲದಲ್ಲಿ ಬಿತ್ತನೆ ಬೀಜ, ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ, ಕೃಷಿನಾಟಿ ಇತ್ಯಾದಿಗಳಿಗಾಗಿ ಸಾಲ ಮಾಡುವ ಪ್ರಮೇಯದಿಂದಾಗಿ ಸಾಲದ ಹೊರೆಯೂ ಜಾಸ್ತಿಯಾಗಿ ಆರ್ಥಿಕ ದುಸ್ಥಿತಿ ತಲುಪಿದ್ದಾರೆ. ಕೋಷ್ಟಕ ೧೮ರಲ್ಲಿ ನಮೂದಿಸಿರುವಂತೆ ಕುಟುಂಬವಾರು ಪಡೆದಿರುವ ಸಾಲದ ಮೂಲಗಳನ್ನು ಗಮನಿಸಿದಾಗ ಮೇದರು ವಿವಿಧ ಉದ್ದೇಶಗಳಿಗಾಗಿ ಸಾಲ ಮಾಡುವುದು ಕಂಡುಬಂದಿದೆ. ಮೇದರು ಆರ್ಥಿಕ ಸಮಸ್ಯೆಯಲ್ಲಿ ಸಿಲುಕಿರುವುದು ಕಂಡುಬರುತ್ತದೆ. ಇವರ ಸಾಲ ಅಭಿವೃದ್ಧಿಗಿಂತಲೂ, ಸಾಮಾಜಿಕ ಕಾರ್ಯಗಳಂತಹ ಜವಾಬ್ದಾರಿ ನಿರ್ವಹಣೆ ಮತ್ತು ಅನಭಿವೃದ್ಧಿಗಾಗಿಯೇ ಸಾಲ ಮಾಡುತ್ತಿರುವುದು ಸಂಶೋಧನೆಯಿಂದ ದೃಢಪಟ್ಟಿದೆ. ಆದಾಯ ಕಡಿಮೆಯಿರುವುದರಿಂದ ಉಳಿತಾಯದ ಬಗ್ಗೆ ಅಷ್ಟಾಗಿ ಒಲವಿಲ್ಲದಿರುವುದು ಕಾಣಬಹುದು. ವಿವಾಹ, ವರದಕ್ಷಿಣೆ, ಮನೆಕಟ್ಟಲು, ಮನೆಕೊಳ್ಳಲು, ಜಮೀನು/ಸೈಟುಕೊಳ್ಳಲು, ಮಕ್ಕಳ ವಿದ್ಯಾಭ್ಯಾಸ, ಅನಾರೋಗ್ಯ, ಹಬ್ಬಹರಿದಿನಗಳು, ಉತ್ತರಕ್ರಿಯೆ, ಸೀಮಂತ, ನಾಮಕರಣ, ಕೃಷಿ ಅಭಿವೃದ್ಧಿ, ವಾಹನ ಖರೀದಿ, ಪಶುಸಂಗೋಪನೆ, ಸಾಲ ತೀರಿಸಲು ಬೆಲೆಬಾಳುವ ವಸ್ತು ಖರೀದಿಸಲು ಇವೇ ಮೊದಲಾದ ಅಂಶಗಳಿಗಾಗಿ ಸಾಲ ಮಾಡುವುದರಿಂದ ಮೇದರ ಆರ್ಥಿಕ ಪರಿಸ್ಥಿತಿ ಸರಿಯಿಲ್ಲದಿರುವುದು ಕಂಡುಬರುತ್ತದೆ.

ಮೇದರು ಶೇ.೮೯.೬೧ರಷ್ಟು ಬಿದಿರಿನ ಕೆಲಸವೇ ಆದಾಯದ ಮೂಲವಾಗಿ ಹೊಂದಿದ್ದು, ಶೇ.೬.೦೬ರಷ್ಟು ಚಿಕ್ಕಪುಟ್ಟ ವ್ಯಾಪಾರ, ಬಿದಿರು ಬೊಂಬಿನ ವ್ಯಾಪಾರ ಹೊಂದಿದ್ದಾರೆ. ಶೇ.೨೮.೩೫ರಷ್ಟು ವ್ಯವಸಾಯದ ಮೂಲ ಹೊಂದಿದ್ದು, ಖಾಸಗಿ ಕೆಲಸದಿಂದ ಶೇ.೯.೬೩ರಷ್ಟು, ಶೇ.೩.೮೯ರಷ್ಟು ಸರ್ಕಾರಿ ಕೆಲಸದಿಂದ, ಶೇ.೮.೮೨ರಷ್ಟು ಕೂಲಿ, ಶೇ.೧೩.೬೯ರಷ್ಟು ಹೈನುಗಾರಿಕೆ, ಶೇ.೬.೫೪ರಷ್ಟು ಇತರೆ ಕೆಲಸಕಾರ್ಯಗಳಿಂದ ಕನಿಷ್ಠ ಆದಾಯದ ಮೂಲವನ್ನು ಹೊಂದಿರುತ್ತಾರೆ. ಮುಖ್ಯವಾಗಿ ಮೇದಾರಿಕೆಯನ್ನೇ ಆಶ್ರಯಿಸಿಕೊಂಡಿರುವ ಮೇದರ ಆದಾಯ ಅತ್ಯಂತ ತಳಸ್ತರದಲ್ಲಿರುವುದು ಸಮೀಕ್ಷೆಯಿಂದ ದೃಢಪಟ್ಟಿದೆ.

೪.೧.೧ ಮಲೆನಾಡು ಹಾಗೂ ಬಯಲು ಸೀಮೆಯ ಮೇದರು

'ಕರ್ನಾಟಕದ ಮೇದ' ಎಂದರೆ 'ಕನ್ನಡ ಮೇದ' ಎಂದೇ ಅರ್ಥೈಸಬಹುದು. ಆದರೆ ಕುಲಕಸುಬನ್ನು ಆಧಾರವಾಗಿಸಿಕೊಂಡಿರುವ ಕುಲಸಂಬಂಧಿ ವೃತ್ತಿದಾರರು, ಒಂದಿಲ್ಲೊಂದು ಕಾರಣಕ್ಕೆ ವಲಸಿಗರಾಗುತ್ತಾರೆ. ಅರೆಅಲೆಮಾರಿಯೋ, ಅಲೆಮಾರಿಯಾಗಿಯೋ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುವುದು ಪ್ರವೃತ್ತಿಯನ್ನಾಗಿಸಿಕೊಂಡಿರುತ್ತಾರೆ.

ಈ ಪ್ರಕ್ರಿಯೆ ಬಹುತೇಕ ಬುಡಕಟ್ಟುಗಳಲ್ಲಿ ಕಾಣಬಹುದು. ಇದರಂತೆ ಕರ್ನಾಟಕದ ಮೂಲ ನಿವಾಸಿಗಳಾಗಿ 'ಕನ್ನಡ ಮೇದರು' ಕಂಡುಬರುತ್ತಾರೆ. ಇವರ ಆದಿಕಾಲದ ಪ್ರಜ್ಞೆಯನ್ನು ಪ್ರಚೋದಿಸಿದಾಗ, ಕರ್ನಾಟಕದ ಅಥವ ಸೀಮಿತ ಭೌಗೋಳಿಕ ಎಲ್ಲೆಯೊಳಗೇ ಸುತ್ತುವರೆಯುವುದು. ಹಾಗೂ ಇವರ ವೃತ್ತಿ ಸಂಬಂಧಿ ಭಾಷಾಜ್ಞಾನ ವಿಶ್ಲೇಷಿಸಿದಾಗ ಕನ್ನಡ ಹೊರತಾಗಿ ಬೇರೆ ಭಾಷೆಯ ಗಂಧಗಾಳಿ ಸೋಂಕಿಲ್ಲದಿರುವುದು. ಕರ್ನಾಟಕದ ಸಹ್ಯಾದ್ರಿ ಪರ್ವತ, ಪಶ್ಚಿಮ ಘಟ್ಟ ಶ್ರೇಣಿ, ಇನ್ನಿತರ ಗುಡ್ಡುಗಾಡು ಪ್ರದೇಶಗಳಲ್ಲಿ ಈ ರೀತಿಯ ಪ್ರಾಗೈತಿಹಾಸಿಕ ಮೇದ ಬುಡಕಟ್ಟುಗಳನ್ನು ಕಾಣಬಹುದು. ಮೇದರನ್ನು ಬಿದಿರು ಕುಲಕಸುಬು ಮಾಡುವುದರಿಂದ ಗುರ್ತಿಸಬಹುದಾದರೂ, ಬೇರೆ ಬೇರೆ ಹೆಸರುಗಳಿಂದ ಗುರ್ತಿಸುವುದು ಕಾಣಬಹುದಾಗಿದೆ. ದೇಶದ ಬೇರೆ ಬೇರೆ ರಾಜ್ಯಗಳೊಳಗೆ ವಲಸೆ ಹೋಗಿರುವಂತೆ, ಕರ್ನಾಟಕಕ್ಕೂ ಬೇರೆ ರಾಜ್ಯಗಳಿಂದ ವಲಸೆ ಬಂದಿರಬಹುದು.

ತಮ್ಮ ಮಾತೃಭಾಷೆ, ಕುಲ-ಬೆಡಗು-ಬಳಿ, ಆಚರಣೆಗಳು, ಸಂಪ್ರದಾಯಗಳು, ರೂಢಿ ಸಂಪ್ರದಾಯ, ದೈವಾರಾಧನೆ, ನಂಬಿಕೆ, ಸಂಸ್ಕೃತಿ, ಇತಿಹಾಸ ಇತ್ಯಾದಿಗಳನ್ನು ಪರಿಶೀಲಿಸಿದಾಗ, ಕರ್ನಾಟಕಕ್ಕೆ ನೆರೆಯ ರಾಜ್ಯಗಳಾದ ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ, ಕೇರಳದಿಂದ ವಲಸೆ ಬಂದಿರಬಹುದಾದ ಸೂಚನೆಗಳು ಲಭ್ಯವಾಗುತ್ತದೆ. ಕರ್ನಾಟಕದಲ್ಲಿರುವ 'ಕನ್ನಡ' ಮೂಲ ಭಾಷೆಯನ್ನಾಡುವ ಕನ್ನಡ ಮೇದರಿಗೆ ತಮ್ಮ ಮೂಲ ಪುರುಷನ ಬಗ್ಗೆ ಸವಿವರ ಮಾಹಿತಿಗಳು ಲಭ್ಯವಾಗುವುದಿಲ್ಲ. ಹಾಗೆಯೇ ಆಂಧ್ರದಿಂದ ಕರ್ನಾಟಕಕ್ಕೆ ಹಲವಾರು ಶತಮಾನಗಳ ಹಿಂದೆಯೇ ವಲಸೆ ಬಂದಿರಬಹುದಾದ ತೆಲುಗು ಭಾಷಿಕ ಮೇದರು ಮಹೇಂದ್ರಚಲ ಅರಣ್ಯದಿಂದ ತಾವು ವಲಸೆ ಬಂದಿರುವುದಾಗಿ ತಿಳಿಸುತ್ತಾರೆ. ಅಂದರೆ ಮಹೇಂದ್ರಚಲ ಅರಣ್ಯಕ್ಕೆ ಪ್ರಾಕೃತಿಕ ವಿಪತ್ತು ಸಂಭವಿಸಿಯೋ, ಅಥವಾ ಯುರೋಪಿಯನ್ನರ ಉಪಟಲವೋ ಹಾಗೂ ಇನ್ನಾವುದೋ ಗುರುತರವಾದ ಕಾರಣದಿಂದಾಗಿ ಅಲ್ಲಿನ ಕಾಡಿನ ಅಥವ ಕಾಡಿನಂಚಿನ ಮೇದರು ನೆರೆಯ ರಾಜ್ಯದಲ್ಲಿ ಸಮೃದ್ಧಿಯಾಗಿ ಸಿಗುತ್ತಿರಬಹುದಾದ ಬಿದಿರಿಗಾಗಿ ವಲಸೆ ಬಂದಿರಬಹುದಾದ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಕರ್ನಾಟಕದಲ್ಲಿಯೇ ಮೂಲನಿವಾಸಿಗಳಾದ 'ಕನ್ನಡ ಮೇದರು' ಶ್ರೀ ಕೇತೇಶ್ವರರ ಸ್ಮರಣೆ ಮಾಡುವುದು ನೋಡಿದರೆ ಐತಿಹಾಸಿಕ ಘಟನಾವಳಿಗಳಿಂದ, ಸಾಂಸ್ಕೃತಿಕ ವೀರರೆನಿಸಿದ ಶ್ರೀ ಕೇತೇಶ್ವರರು ಕರ್ನಾಟಕದ ಮೂಲದವರು ಎನ್ನುವುದರಲ್ಲಿ ಸಂಶಯವಿಲ್ಲ.

ದಟ್ಟ ಅರಣ್ಯವನ್ನು ಹೊಂದಿರುವ ಪ್ರದೇಶಗಳಾದ ಸಹ್ಯಾದ್ರಿ ಪರ್ವತ, ತಪ್ಪಲು ಪ್ರದೇಶ ಮತ್ತು ಪಶ್ಚಿಮ ಘಟ್ಟ ಶ್ರೇಣಿಗಳು ಅದರ ಸೆರಗಿಗೆ ಅಂಟಿಕೊಂಡಿರುವ ಪ್ರದೇಶಗಳಲ್ಲಿ ವಾಸವಾಗಿದ್ದ, ಬಿದಿರನ್ನೇ ತಮ್ಮ ವೃತ್ತಿಗೆ ಆಧಾರವಾಗಿಸಿಕೊಂಡಿದ್ದ ಮೇದರು ವಿವಿಧ ಪಂಗಡಗಳಾಗಿ ಚದುರಿ ಹೋಗಿರುವುದು ಕಾಣಬಹುದು. ಕರ್ನಾಟಕದಲ್ಲಿರುವ ಎಲ್ಲಾ ಮೇದರು

[illegible]

ವಿವಿಧ ಕಾರಣಗಳಿಗಾಗಿ ವೈವಾಹಿಕ ಸಂಬಂಧ ಇಲ್ಲವೇ ಎಲ್ಲರೂ ಒಂದೇ ಎನ್ನುವ ಭಾವನೆಯಲ್ಲಿ ತಾಕಲಾಟಗಳನ್ನು ಗಮನಿಸಿದಾಗ, ತಮ್ಮ ತಮ್ಮ ನೆಲೆಯಲ್ಲಿ ಬುಡಕಟ್ಟು ಸಂಸ್ಕೃತಿಯನ್ನು ಅರ್ಥೈಸಿರುವುದು ಭಿನ್ನವಾಗಿದೆ. ಸಾಮಾನ್ಯವಾಗಿ ಬುಡಕಟ್ಟು ಸಂಸ್ಕೃತಿಯು ಕಟ್ಟುನಿಟ್ಟಾಗಿ ಮತ್ತು ಸೀಮಿತ ಪರಿಧಿಯನ್ನು ಹೊಂದಿರುವುದು ಸ್ಪಷ್ಟವಾಗುತ್ತದೆ. ಕನ್ನಡವನ್ನೇ ಮೂಲಭಾಷೆಯನ್ನಾಡುವ, ಕನ್ನಡ ಮೇದರು ತಮ್ಮ ದೈನಂದಿನ ಚಟುವಟಿಕೆ, ವ್ಯಾಪಾರ-ವಾಣಿಜ್ಯ, ಭಾಷೆ ಸಂವಹನ ಇತ್ಯಾದಿಗಳಲ್ಲಿ ಕನ್ನಡ ಭಾಷೆಯನ್ನಲ್ಲದೆ ಬೇರಾವ ಭಾಷೆ ಮಾತನಾಡದಿರುವುದು ಗಮನಿಸಬಹುದು. ತಮ್ಮ ಸ್ಥಳೀಯ ಭಾಷೆಗೇ ಮಹತ್ವ ನೀಡುವುದಲ್ಲದೆ ಬೇರಾವ ಭಾಷೆಯ ಪ್ರಭಾವ ಅವರ ಮೇಲಿಲ್ಲದಿರುವುದನ್ನು ಗಮನಿಸಲಾಗಿದೆ. ದಕ್ಷಿಣದ ಚಾಮರಾಜನಗರದಿಂದ ಹಿಡಿದು ಉತ್ತರದ ಜೋಯಿಡಾವರೆಗೆ ಹಬ್ಬಿರುವ ಸಹ್ಯಾದ್ರಿಯ ಮಲೆಸಾಲಿನಲ್ಲಿ, ನದಿ ಮುಖಜ ಭೂಮಿಯಲ್ಲಿ ಹತ್ತಾರು ಮೇದರ ನೆಲೆಗಳು ವಾಸವಾಗಿವೆ. ಅಲ್ಲದೆ ಹಲವಾರು ಬುಡಕಟ್ಟುಗಳು ವಾಸಿಸುತ್ತಿವೆ.

ಶಿರಾಡಿ, ಚಾರ್ಮಾಡಿ, ನಾಗೋಡಿ, ಆಗುಂಬೆ, ಅರಬೈಲ್, ನಾಗಬೈಲ್, ನಾಗವಳ್ಳಿ, ಗೇರುಸೊಪ್ಪ, ದೇವಿಮನೆ ಮುಂತಾದ ಘಟ್ಟ ಪ್ರದೇಶಗಳು. ಕಾವೇರಿ, ಚಂದ್ರಗಿರಿ, ಬರಪೊಳೆ, ನೇತ್ರಾವತಿ, ಸೀತಾ, ಗಂಗಾವಳಿ, ಶರಾವತಿ, ಬೇಡ್ತಿ, ಅಘನಾಶಿನಿ, ಕಾಳಿ ಮುಂತಾದ ನದಿಗಳು ಇವೆಲ್ಲವನ್ನೂ ಒಳಗೊಂಡಿರುವ ಪಶ್ಚಿಮ ಘಟ್ಟಗಳು, ಕರಾವಳಿಯ ನಡುವಿನ ವೈವಿಧ್ಯಮಯ ಪ್ರದೇಶಗಳಾದ ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ, ದಕ್ಷಿಣಕನ್ನಡ ಹಾಗೂ ಉತ್ತರಕನ್ನಡ ಜಿಲ್ಲೆಗಳಲ್ಲಿ ಕಂಡುಬರುವ ಸೋಲಿಗರು, ಯರವರು, ಕುಡುಬಿಯರು, ಕಾಡುಕುರುಬರು, ಗೊಂಡರು, ಹಸಲರು, ಕುಣುಬಿಯರು, ಮೇದರು, ಸಿದ್ಧಿಯರು, ಗೌಳಿಗರು (ಕಚ್ಚೆಗೊಲ್ಲರು), ಹಾಲಕ್ಕಿ ಒಕ್ಕಲಿಗರು, ಕೊರಗರು, ಮಲೆಕುಡಿಯರು, ಮೇರರು, ಮನ್ಸರು ಮತ್ತು ಭೈರರು ಮುಂತಾದವರು ಈ ಭಾಗದಲ್ಲಿ ತಮ್ಮದೇ ಆದ ನಿತ್ಯ ಜೀವನ ನಡೆಸುತ್ತಿದ್ದಾರೆ. ಅನಾದಿ ಕಾಲದಿಂದ ಮೂಲ ನಿವಾಸಿಗಳಾದ ವರ್ಗ ಒಂದೆಡೆಯಾದರೆ ಅನ್ಯಾನ್ಯ ಕಾರಣಗಳಿಗಾಗಿ ವಲಸೆ ಬಂದಿರುವ ಬುಡಕಟ್ಟುಗಳನ್ನೂ ಈ ಪ್ರದೇಶದಲ್ಲಿ ಕಾಣಬಹುದು.

ಕರ್ನಾಟಕದ ನಿತ್ಯ ಹರಿದ್ವರ್ಣದ ಕಾಡುಗಳಿಗೆ ಹತ್ತಿರವಿರುವ ಜಿಲ್ಲೆಗಳಾದ ಚಿಕ್ಕಮಗಳೂರು, ಹಾಸನ, ಉತ್ತರಕನ್ನಡ, ಮಡಿಕೇರಿ ಜಿಲ್ಲೆಗಳಲ್ಲಿ ಮೇದರ ನೆಲೆಗಳು ಆರಂಭದಲ್ಲಿ ದಟ್ಟವಾಗಿದ್ದವು. ಆದಾಗ್ಯೂ ಈ ನೆಲೆಯಲ್ಲಿ ವಾಸವಾಗಿದ್ದ ಮೇದರಲ್ಲಿ ವೈವಾಹಿಕ ಸಂಬಂಧಗಳು ಸರ್ವೇಸಾಮಾನ್ಯವಾಗಿ ನಡೆಯುತ್ತಿರಲಿಲ್ಲ. ಕಾರಣ ಆದಿಮಾನವನಿಗೆ ಇದ್ದ ಸಾರಿಗೆ-ಸಂಪರ್ಕದ ತೊಡರು ತಮ್ಮ ತಮ್ಮಲ್ಲಿಯೇ ಒಳಬಾಂದವ್ಯ, ವಿವಾಹವನ್ನು ಮುಂದುವರಿಸಿಕೊಂಡಿರಬಹುದು. ಇಂದಿಗೂ ಕರ್ನಾಟಕದ ಎಲ್ಲಾ ಮೇದರಲ್ಲಿಯೂ 'ಬಹುಮುಖಿ ವಿವಾಹ ಒಪ್ಪಂದ' ಏರ್ಪಡಲು ಹರಸಾಹಸವಾಗುತ್ತಿದೆ. ಇಂದಿನ ಜಾಗೃತ ಮೇದರಲ್ಲಿ ವಿವಾಹಗಳು ಪ್ರದೇಶಾತೀತವಾಗಿ

ಜರುಗಬೇಕೆಂಬ ಅಭಿಲಾಷೆ ಎಲ್ಲೋ ಒಂದು ಕಡೆ ಸ್ಥಗಿತವಾಗುತ್ತಿದೆ. ಆದಾಗ್ಯೂ ಆರ್ಥಿಕ ಸ್ಥಿರತೆ, ಸಾಮಾಜಿಕ ಪ್ರಗತಿಯಲ್ಲಿರುವ ಬಯಲು ಸೀಮೆಯ ಮೇದರೊಂದಿಗೆ ವಿವಾಹ ಪ್ರಕ್ರಿಯೆಗಳು ನಡೆಯಬೇಕೆಂಬ ದೂರದ ಆಸೆ ಮಲೆನಾಡಿನ ಮೇದರಲ್ಲಿ ಕಾಣುತ್ತೇವೆ. ಈ ಚಿಂತನೆಯ ಬೀಜಬಿತ್ತನೆ ಸುಮಾರು ೪ ದಶಕಗಳಿಂದ ನಡೆಯುತ್ತಿದ್ದರೂ, ಮೊಳಕೆಯೊಡೆಯುತ್ತಿಲ್ಲ. ಬಹುಶಃ ಬುಡಕಟ್ಟುಗಳ ಮನಸ್ಥಿತಿಯೇ ಹೀಗಿರಬೇಕು. ಕಾಲಚಕ್ರ ಉರುಳಿದಂತೆ ಈ ಎಲ್ಲಾ ಪ್ರಕ್ರಿಯೆಗಳು ಸದ್ದಿಲ್ಲದೆ ನಿಧಾನವಾಗಿ ಅಂತರ್ಗತವಾಗಬಹುದೆಂಬ ಆಶಾಭಾವ ಮುಗ್ಧ ಮನಸ್ಸಿನ ಮೇದರಲ್ಲಿ ಕಾಣಬಹುದು.

ಮಲೆನಾಡಿನ ಮೇದರು ಅಂತರ್ಮುಖಿ ಎಂಬುದರಲ್ಲಿ ಸಂಶಯವಿಲ್ಲ. ಇವರ ದೃಷ್ಟಿಕೋನ, ನಡೆನುಡಿ, ಬುಡಕಟ್ಟು ಕಟ್ಟುಪಾಡು, ನಂಬಿಕೆಗಳು, ರೀತಿ-ರಿವಾಜುಗಳು, ಸರಳತೆ, ಮೃದುತ್ವ, ಸಂಕುಚಿತತೆ ಇವೆಲ್ಲವೂ ಸಹಜವಾಗಿ ಬುಡಕಟ್ಟುವಿನ ಪಾವಿತ್ರ್ಯತೆಯನ್ನು ಕಟ್ಟುನಿಟ್ಟಾಗಿ ಪಾಲಿಸುವ ಇಂಗಿತ ವ್ಯಕ್ತಪಡಿಸುತ್ತಾರೆ. ಬುಡಕಟ್ಟುವಿನಲ್ಲಿ ಇದ್ದ ರಕ್ತ ಪಾವಿತ್ರ್ಯತೆ(Purity of blood)ಯ ಕಲ್ಪನೆ ಮಲೆನಾಡಿನ ಮೇದರಲ್ಲಿ ಇಂದಿಗೂ ಅದೇ ಪ್ರಮಾಣದಲ್ಲಿ ಕಾಣಬಹುದಾಗಿದೆ. ಮುಕ್ತವಾಗಿ ಪ್ರತಿವರ್ತಿಸುವ ಸ್ವಭಾವ ಕಡಿಮೆಯೆಂದೇ ಹೇಳಬಹುದು. ತಮ್ಮ ಕುಲಾಧಾರಿತ ಬೆಡಗುಗಳನ್ನು ಸೀಮಿತ ಪ್ರದೇಶಕ್ಕೆ ಮೀಸಲಿಡುತ್ತಾರೆ. ತಮ್ಮ ಕುಲ-ಬೆಡಗು-ಬಳಿಗಳು ಹಬ್ಬಿರುವ ಪ್ರದೇಶಗಳಲ್ಲಿ ಮಾತ್ರ ತಮ್ಮ ಸಂಬಂಧಗಳನ್ನು ಗುರ್ತಿಸುತ್ತಾರೆ. ಅದರಾಚೆಯ ಮೇದರ ನೆಲೆಗಳನ್ನು ಗಂಭೀರವಾಗಿ ಪರಿಗಣಿಸದಿರುವುದನ್ನು ಗಮನಿಸಿದಾಗ, ಮಲೆನಾಡಿನ ಮೇದರಲ್ಲಿ ಕೆಲವು ಕಟ್ಟುಪಾಡುಗಳನ್ನು ಇಂದಿಗೂ ಮುಂದುವರಿಸಿಕೊಂಡು ಬರುತ್ತಿರುವುದನ್ನು ಕಾಣಬಹುದು. ಉದಾಹರಣೆಗೆ ಮಲೆನಾಡಿನಲ್ಲಿಯೇ ವಾಸವಾಗಿರುವ ಕನ್ನಡ ಮೇದರರಾಗಿರುವ ಆಲ್ದೂರಿನ ಮೇದರಲ್ಲೂ ಕುಲ ಸಂಬಂಧಿ ಸಮಾನಾಂತರ ಕುಲಾಚಾರಗಳಿದ್ದರೂ ನರಸಿಂಹರಾಜಪುರ, ತಣಿಗೆಬೈಲು, ಲಕ್ಕವಳ್ಳಿ, ತರೀಕೆರೆ ಇತ್ಯಾದಿ ಮೇದರುಗಳು ಆಲ್ದೂರಿನ ಮೇದರೊಂದಿಗೆ ವೈವಾಹಿಕ ಸಂಬಂಧ ಏರ್ಪಡಿಸುವಲ್ಲಿ ಅನುಮಾನ ವ್ಯಕ್ತಪಡಿಸುತ್ತಿದ್ದಾರೆ. ಬುಡಕಟ್ಟುಗಳಲ್ಲಿ ಇಂತಹ ಗುಮಾನಿಗಳು ನಿವಾರಣೆಯಾಗಬೇಕಾದರೆ ಅನೇಕ ತಲೆಮಾರುಗಳೇ ನಶಿಸಬೇಕಾಗಬಹುದು.

"ಯಾವುದೇ ಬುಡಕಟ್ಟು ಜನಾಂಗ ತಾವು ತಲತಲಾಂತರಗಳಿಂದ ಜೀವಿಸಿದ ಪರಿಚಿತ ಪರಿಸರದಲ್ಲಿ ತಮ್ಮ ಪೂರ್ಣಮಟ್ಟದ ಬುಡಕಟ್ಟು ಸಂಸ್ಕೃತಿಯ ನೆಮ್ಮದಿಯ ಬದುಕಿನ ಚಟುವಟಿಕೆಗಳಿಗಾಗಿ ತಮಗೆ ಬೇಕಾದಷ್ಟು ಸಂಪನ್ಮೂಲಾಧಾರಿತ ಕಾಡನ್ನು ಹಳ್ಳಿಯ ಸುತ್ತಲು ಸಾಂಪ್ರದಾಯಿಕವಾಗಿ ಗುರ್ತಿಸಿಕೊಂಡ ಸಾಂಸ್ಕೃತಿಕ ಗಡಿರೇಖೆಯನ್ನು ಸೀಮಾ/ಜಮ್ಮಾ/ಎಲ್ಲೆ ಗಡಿ ಎಂದು ಕರೆಯಲಾಗುತ್ತದೆ. ಹೀಗೆ ಸಾವಿರಾರು ವರ್ಷಗಳಿಂದಲೂ ನಿರ್ಮಿಸಿಕೊಂಡ ಈ ಗಡಿರೇಖೆಯ ಒಳಗೆ ನಿರ್ದಿಷ್ಟ ಬುಡಕಟ್ಟು ಸಮುದಾಯ ತನ್ನ ಬದುಕಿಗಾಗಿ ಕಾಡಿನ

ಉತ್ಪನ್ನ, ಆಹಾರಕ್ಕಾಗಿ ಬೇಸಾಯ ಹಾಗೂ ಇಡೀ ಬುಡಕಟ್ಟು ಜನಾಂಗದ ಸಾಂಸ್ಕೃತಿಕ ಅವಿಚ್ಛಿನ್ನ ಚಟುವಟಿಕೆಯ ಭಾಗವಾಗಿರುತ್ತದೆ."[7] ಈ ಕಲ್ಪನೆಗೆ ಅನುಗುಣವಾಗಿ ಮೇದ ಬುಡಕಟ್ಟು, ಮೇದಾರಿಕೆಗೆ ಬೇಕಾದ ಕಿರುಬಿದಿರಿನ ಮೆಳೆಗಳು ದಟ್ಟವಾಗಿ ಬೆಳೆದು, ಹೇರಳವಾಗಿ ಲಭ್ಯವಾದೆಡೆ ಜೋಪಡಿಗಳನ್ನು ಕಟ್ಟಿಕೊಂಡು ತಮ್ಮ ಕುಲಕಸುಬನ್ನು ನಡೆಸುತ್ತಿದ್ದರು. ಆ ಬುಡಕಟ್ಟು ತಾವು ತಯಾರಿಸಿದ ಬಿದಿರಿನ ಉತ್ಪನ್ನಗಳನ್ನು ಅಕ್ಕಪಕ್ಕದ ಹಳ್ಳಿಗಳಲ್ಲೋ, ಸಂತೆಗಳಲ್ಲೋ ಮಾರಾಟ ಮಾಡಿ ಜೀವನ ಸಾಗಿಸುತ್ತಿದ್ದರು. ತಮ್ಮ ಪಾರಂಪರಿಕ ನೆಲೆ, ಕಸುಬು, ಸಾಂಸ್ಕೃತಿಕ ಪರಿಸರ, ಭಾಷೆ, ಧಾರ್ಮಿಕ ಆಚರಣೆ, ರೂಢಿ-ಸಂಪ್ರದಾಯಗಳು ಇತ್ಯಾದಿಗಳನ್ನು ಬುಡಕಟ್ಟಿನೊಳಗೇ ಕಟ್ಟುನಿಟ್ಟಾಗಿ ಆಚರಿಸಲ್ಪಡುತ್ತಿದ್ದ ಮೇದರು ಪ್ರತ್ಯೇಕ ದ್ವೀಪಗಳಾಗಿ ಉಳಿದು ಬಿಡುತ್ತಿದ್ದರು. ತಮ್ಮ ಅತ್ಯಂತ ಸೀಮಿತ ಜನಸಂಪರ್ಕಗಳು ಅವರ ವ್ಯಾಪಾರ, ವ್ಯವಹಾರ ಹಾಗೂ ಸಂಬಂಧಗಳನ್ನೂ ಸೀಮಿತಗೊಳಿಸಿದ್ದವು. ಆದರೆ ನಾನಾ ಕಾರಣಗಳಿಂದಾಗಿ ಕಾಡಿನಿಂದ ಹೊರಬಂದ ಮೇದರು ದಿಕ್ಕೆಟ್ಟರು. ಕುಲಕಸುಬು ಬಿಡಲಾರದೆ, ಬೇರಾವ ವೃತ್ತಿಯನ್ನು ಮಾಡಲಾರದ ಸಂಕ್ರಮಣ ಸ್ಥಿತಿ ತಲುಪಿದರು.

ವಿವಿಧ ಜನವಸತಿಯ ಸಾಮಿಪ್ಯದಿಂದ ಹೊಸ ಹೊಸ ಅನುಭವಗಳು ಆದವು. ಮೇದಾರಿಕೆಯನ್ನು ಮಾಡುವ ಬುಡಕಟ್ಟು ಮೇದರು ತಮ್ಮ ಅಕ್ಕಪಕ್ಕದಲ್ಲೇ ಇರುವರೆಂಬ ಅನುಭವ ಆದದ್ದೇ ಪವಾಡಸದೃಶ್ಯ ಎಂಬಂತೆ ಗೋಚರಿಸಿತು. ಇಂತಹ ಸೀಮಿತ ವ್ಯಾಪ್ತಿಯ ನೆಲೆಯಿಂದಾಚೆ ಬಂದ ಮೇದರಲ್ಲಿ ಒಳಗೊಳ್ಳುವಿಕೆ ಪ್ರಕ್ರಿಯೆ ನಿಧಾನಗತಿಯಲ್ಲಿಯೇ ನಡೆದಿರುವುದರಿಂದ ಬಯಲು ಸೀಮೆ ಹಾಗೂ ಮಲೆನಾಡಿನ ಮೇದರಲ್ಲಿ ವೈವಾಹಿಕ ಬಾಂದವ್ಯ ವೃದ್ಧಿಯಾಗುವಲ್ಲಿ ತಡವಾಗುತ್ತಿದೆ. ಒಳಬಾಂದವ್ಯ, ಕುಲಾಚಾರ, ಪ್ರಾಧಾನ್ಯತೆ ಇನ್ನೂ ಪ್ರಖರವಾಗಿರುವುದರಿಂದ ಮುಕ್ತ ಮನಸ್ಸು ಅನಾವರಣಗೊಂಡಿರುವುದಿಲ್ಲ.

ಬಯಲು ಸೀಮೆಯ ಮೇದರು ಹಾಗೂ ಮಲೆನಾಡಿನ ಮೇದರಲ್ಲಿ ಕುಲಕಸುಬು ಹಾಗೂ ಉತ್ಪನ್ನಗಳ ವ್ಯಾಪರದಲ್ಲಿ ಸ್ವಲ್ಪ ವ್ಯತ್ಯಾಸಗಳನ್ನು ಕಾಣಬಹುದು. 'ಡಿಪೋ ಸಂಸ್ಕೃತಿ' ಬಯಲು ಸೀಮೆಯವರಲ್ಲಿ ಹೆಚ್ಚು. ಕಾರಣ ಬಯಲು ನಾಡು ವಿಸ್ತಾರವಾಗಿರುವುದು. ಕೇಂದ್ರೀಕೃತ ಹಳ್ಳಿಗಳ ಸಂಖ್ಯೆ ಜಾಸ್ತಿ, ಜನಸಂಖ್ಯೆ ದಟ್ಟಣೆ, ಸಾಂಪ್ರದಾಯಿಕ ಪಟ್ಟಣಗಳು ಎತ್ತೇಚ್ಛವಾಗಿ ಬಯಲು ನಾಡಿನಲ್ಲಿ ಕಾಣುತ್ತೇವೆ. ಹಾಗೂ ಬಿದಿರಿನ ಲಭ್ಯತೆ ಬಯಲು ಸೀಮೆಯಲ್ಲಿ ಕ್ಷೀಣವಿರುವುದರಿಂದ, ಲಭ್ಯವಿರುವೆಡೆಯಿಂದ ಅವುಗಳನ್ನು ತಂದು ಬೇಡಿಕೆಗೆ ಅನುಸಾರ ವ್ಯಾಪಾರ ನಡೆಸುವುದು ಕಾಣುತ್ತೇವೆ. ಆದರೆ ಮಲೆನಾಡಿಗರಿಗೆ ಬಿದಿರಿನ ಲಭ್ಯತೆ ಜಾಸ್ತಿಯಿಂದ ಬಳಕೆದಾರರೇ ಇದನ್ನು ಚುನಾಯಿಸಿಕೊಂಡು ಉಪಯೋಗಿಸುವುದರಿಂದ ಮೇದರು 'ಡಿಪೋ ಸಂಸ್ಕೃತಿ'ಯಿಂದ ಹೊರಗುಳಿದಿರುವುದು ಕಾಣಬಹುದು. ಡಿಪೋದಲ್ಲಿ ಸಾಮಾನ್ಯವಾಗಿ ಬಿದಿರು, ಬಿದಿರಿನ ಉತ್ಪನ್ನಗಳಾದ ಏಣಿ, ಬುಟ್ಟಿ, ಚಾಪೆ, ಮೊರ, ಗೂಡೆ, ತೊಟ್ಟಿಲು, ಬೀಸಣಿಗೆ

ಇತ್ಯಾದಿಗಳನ್ನು ಹಾಗೂ ಇದರ ಜೊತೆಗೆ ಅಡಿಕೆ ಮರ, ಸುರುಗಿ ಪೋಲ್ಸ್, ಮಂಗಳೂರು ಹೆಂಚು, ಕಡಪಕಲ್ಲು, ಬಂಡೆ, ಕಲ್ಲುಕಂಬ ಇತ್ಯಾದಿ ಗೃಹ ನಿರ್ಮಾಣ ಸಾಮಗ್ರಿಗಳನ್ನು ಮಾರಾಟ ಮಾಡುತ್ತಾರೆ. ಮಲೆನಾಡಿನ ಮೇದರು ತಾವು ತಯಾರಿಸಿದ ಬಿದಿರಿನ ಉತ್ಪನ್ನಗಳನ್ನು ಸಾಮಾನ್ಯವಾಗಿ ಕೃಷಿಕರು ಹೆಚ್ಚಾಗಿ ವಾಸವಿರುವ ಹಳ್ಳಿಗಳಲ್ಲಿ ವ್ಯಾಪಾರ ಮಾಡುತ್ತಾರೆ.

ಮಲೆನಾಡಿನ ಹಳ್ಳಿಗಳು ಚಿಕ್ಕ ಹಾಗೂ ಚದುರಿದವುಗಳು. ಜನಸಂಖ್ಯೆ ತೀರ ಕಡಿಮೆ. ಬಯಲು ಸೀಮೆಯ ಹಳ್ಳಿಗಳಿಗೆ ಹೋಲಿಸಿದರೆ ೧೦ನೇ ೧ ಭಾಗ ಎಂದರೂ ಸರಿಯೇ. ಈ ಹಳ್ಳಿಗಳು ದೂರದೂರವಿದ್ದು, ಕೆಲವೊಮ್ಮೆ ಒಂದೇ ಒಂದು ಮನೆಯ ಒಂದು ಹಳ್ಳಿಯನ್ನೂ ನೋಡಬಹುದು. ಇಂತಹ ಹಳ್ಳಿಗಳನ್ನು ಕಾಲ್ನಡಿಗೆಯಲ್ಲೇ ಸುತ್ತಿ, ಗುಡ್ಡ, ಹಳ್ಳಿ, ನದಿ ಇತ್ಯಾದಿಗಳನ್ನು ಬಳಸಿ ವ್ಯಾಪಾರ ಮಾಡಬೇಕು. ಅಂದರೆ ಬಿದಿರಿನ ಉತ್ಪನ್ನವಿರುವಿಡೆ ಗಿರಾಕಿಗಳು ಬಯಲು ಸೀಮೆಯಲ್ಲಿ ಬರುವುದಾದರೆ, ಗಿರಾಕಿಗಳು ಇರುವೆಡೆ ಮಲೆನಾಡಿನ ಮೇದರು ತಮ್ಮ ಉತ್ಪನ್ನಗಳನ್ನು ತೆಗೆದುಕೊಂಡು ಹೋಗಬೇಕಿದೆ.

ಬಯಲು ಸೀಮೆಯ ಮೇದರು ತಮ್ಮ ಮಾತೃ ಭಾಷೆಯ ಜೊತೆಗೆ ಒಂದೆರಡು ವ್ಯಾವಹಾರಿಕ ಭಾಷೆ ತಿಳಿದಿರುತ್ತಾರೆ. ಮಲೆನಾಡಿಗರಲ್ಲಿ ವ್ಯವಹಾರಿಕ ಭಾಷಾಜ್ಞಾನ ತೀರ ಕಡಿಮೆಯಿರುತ್ತದೆ. ಶೈಕ್ಷಣಿಕ ಮಟ್ಟದಲ್ಲಿ ಬಯಲು ಸೀಮೆಯ ಮೇದರು ಮಲೆನಾಡಿಗರಿಗಿಂತ ಒಂದು ಹೆಜ್ಜೆ ಮುಂದೆ ಎಂದು ನಿಸ್ಸಂಶಯವಾಗಿ ಹೇಳಬಹುದು. ರಾಜಕೀಯ ಪ್ರಜ್ಞೆ ಹಾಗೂ ಆರ್ಥಿಕ ಸ್ಥಿತಿ ಮಲೆನಾಡಿನ ಮೇದರಿಗಿಂತ ಬಯಲು ಸೀಮೆಯ ಮೇದರದ್ದು ಹೆಚ್ಚಿದೆ.

೪.೧.೨ ಅರಣ್ಯ ಕಾಯ್ದೆಗಳು ಮತ್ತು ಮೇದ ಬುಡಕಟ್ಟು

ಅರಣ್ಯಕ್ಕೂ ಮೇದರಿಗೂ ಅವಿನಾಭಾವ ಸಂಬಂಧವಿದೆ. ಅನಾದಿಕಾಲದಿಂದಲೂ ಕಾಡನ್ನೇ ಆಶ್ರಯಿಸಿರುವ ಮೇದರು, ಇಂದಿಗೂ ಶೇ.೯೦ರಷ್ಟು ಮೇದರು ಕುಲಕಸುಬನ್ನೇ ನೆಚ್ಚಿಕೊಂಡಿದ್ದು, ಕಾಡಿನಿಂದ ಸಿಗುವ ಬಿದಿರು, ಬೊಂಬು, ಸೀಬು, ಗಲ್ಪೆ ಇತ್ಯಾದಿಗಳನ್ನು ಬಳಸಿಯೇ ತಮ್ಮ ಹೊಟ್ಟೆ ಹೊರೆಯುತ್ತಿದ್ದಾರೆ. ಅರಣ್ಯ ಕಾಯ್ದೆಗಳು ಬರುವುದಕ್ಕೂ ಮೊದಲು, ಬಿದಿರು ಲಭ್ಯವಿರುವ ಪ್ರದೇಶಗಳಲ್ಲಿಯೇ ಗುಡಾರ ಇಲ್ಲವೆ ಸಾಧಾರಣ ಮನೆಗಳನ್ನು ನಿರ್ಮಿಸಿಕೊಂಡು, ಎತ್ತೇಚ್ಛವಾಗಿ ಸಿಗುತ್ತಿದ್ದ ಬಿದಿರನ್ನು ಬಳಸಿ, ಬಿದಿರಿನ ಉತ್ಪನ್ನಗಳನ್ನು ಮಾಡುತ್ತಿದ್ದರು. ಅವುಗಳನ್ನು ಹಳ್ಳಿಹಳ್ಳಿಗಳಲ್ಲಿ ಹೊತ್ತೊಯ್ದು ಮಾರಿ ಜೀವನ ಸಾಗಿಸುತ್ತಿದ್ದರು.,

ಕಾಡಿನಿಂದ ಬಿದಿರನ್ನು ತರಲು ಯಾವ ನಿರ್ಬಂಧವಿರಲಿಲ್ಲ. ತಮ್ಮ ವೃತ್ತಿ ಕಸುಬಿಗೆ ಬೇಕಾದಷ್ಟು ಬಿದಿರನ್ನು ಕಡಿಯುತ್ತಿದ್ದರು. ಅದರಲ್ಲೂ ಹೊಸ ಗಳು (ಎಳಬಿ ಬಲಿತ ನಂತರದು) ಮಾತ್ರ ಬಳಸುತ್ತಿದ್ದು, ಈ ಹೊಸ ಬಿದಿರು ಹಿಂಡಿಲಿನ ಹೊರಮೈಯಿಂದ ಹುಲುಸಾಗಿ ಬೆಳೆದಿರುತ್ತದೆ. ಇದನ್ನು ಕತ್ತರಿಸಿ ತೆಗೆಯುವಾಗ ಹಿಂಡಿಲಿಗೆ ಯಾವ ಘಾಸಿಯೂ ಆಗುತ್ತಿರಲಿಲ್ಲ. ಹಿಂಡಿಲಿನಿಂದ ಗರಿಷ್ಠ ಎರಡರಿಂದ ಮೂರು ಬಿದಿರುಗಳನ್ನು ಮಾತ್ರ ಕತ್ತರಿಸುತ್ತಿದ್ದರು.

ಅದರಲ್ಲೂ ಗುಣಮಟ್ಟದ ಬಿದಿರುಗಳನ್ನು ಚುನಾಯಿಸುತ್ತಿದ್ದರು. ಸಾಮಾನ್ಯವಾಗಿ ಮೇದರೇ ಕಾಡಿಗೆ ಹೋಗಿ ಯಾವ ಭಾಗದ ಕಾಡಿನ ಬಿದಿರು ಮೆದು ಸ್ವರೂಪ ಹೊಂದಿರುತ್ತದೆ, ಯಾವ ಕಾಲ (ಸಾಮಾನ್ಯವಾಗಿ ಅಮವಾಸ್ಯೆಯಲ್ಲಿ ಬಿದಿರು ಸಿಹಿ ಅಂಶವನ್ನು ಕಳೆದುಕೊಂಡಿರುತ್ತದೆ ಆಗ ಕಡಿದ ಬಿದಿರು ಹುಳು ಹೊಡೆಯುವುದಿಲ್ಲ ಎಂಬ ನಂಬಿಕೆ ಮೇದರಲ್ಲಿದೆ)ದಲ್ಲಿ ಬಿದಿರನ್ನು ಕತ್ತರಿಸಬೇಕು ಎಂಬ ನಿರ್ಣಯಗಳು ಪರಂಪರಾಗತವಾಗಿ ನಡೆಸಿಕೊಂಡು ಬಂದಿರುವ ಮೇದರು, ಕಾಡಿನ ನಾಡಿಬಡಿತವನ್ನು ಸೂಕ್ಷ್ಮವಾಗಿ ಬಲ್ಲವರಾಗಿದ್ದಾರೆ. ಎಳೆ ಬಿದಿರನ್ನು ಯಾವ ಕಾರಣಕ್ಕೂ ಕತ್ತರಿಸುವುದಿಲ್ಲ 'ಯಳಬಿ ಹಬ್ಬ' ಆಚರಿಸಿ ನಂತರ ಯಳಬಿ ಬಲಿತು ಕೆಲಸಕ್ಕೆ ಯೋಗ್ಯವಾಗಿದೆ ಎಂದು ತಿಳಿದ ಮೇಲೆಯೇ ಬಿದಿರನ್ನು ಕತ್ತರಿಸುವರು.

ಕಾಡಿನಲ್ಲೇ, ಕಾಡಿನಂಚಿನಲ್ಲೇ ವಾಸಿಸುತ್ತಿದ್ದ ಮೇದರು ಅರಣ್ಯ ಕಾಯ್ದೆಗಳಿಂದಾಗಿ ಹಳ್ಳಿಯ ಅಂಚು, ಇಲ್ಲವೇ ಪಟ್ಟಣದ ಅಂಚಿಗೆ ದೌಡಾಯಿಸಬೇಕಾಯಿತು. ಅರಣ್ಯವು ಸರ್ಕಾರದ ಆಸ್ತಿಯೆಂದು ಘೋಷಿಸಿದ ಮೇಲೆ ಸಾಂಪ್ರದಾಯಿಕ ಕಾಡಿನ ಹಕ್ಕನ್ನು ಕಳೆದುಕೊಂಡ ಮೇದರು ನೆಲೆ ತಪ್ಪಿದಂತಾಗಿ ದಿಗ್ಮೂಢರಾದರು. ಕಾಡನ್ನು ಸಂರಕ್ಷಿಸಿಡುವ ನೆಪದಲ್ಲಿ ಅನೇಕಾನೇಕ ಅರಣ್ಯ ಕಾಯ್ದೆಗಳು ಹುಟ್ಟಿಕೊಂಡವು. ಉದಾಹರಣೆಗೆ ಭಾರತೀಯ ಅರಣ್ಯ ಕಾಯ್ದೆ-೧೯೨೭, ಕರ್ನಾಟಕ ಅರಣ್ಯ ಕಾಯ್ದೆ-೧೯೬೩, ಕರ್ನಾಟಕ ಅರಣ್ಯ ನಿಯಮ-೧೯೬೯, ವನ್ಯಜೀವಿ ಕಾಯ್ದೆ-೧೯೭೨, ಅರಣ್ಯ ಸಂರಕ್ಷಣಾ ಅಧಿನಿಯಮ-೧೯೮೦, ವನ್ಯಜೀವಿ ಘೋಷಣಾ ನಿಯಮ-೨೦೦೩ ಈ ಎಲ್ಲಾ ಕಾಯ್ದೆ ಹಾಗೂ ನಿಯಮಗಳು, ಕಾಡು, ಕಾಡಿನ ಉತ್ಪನ್ನ, ಕಾಡುಪ್ರಾಣಿ ಸಕಲವೂ ಸರ್ಕಾರದ ಒಡೆತನಕ್ಕೆ ಸೇರಿದ್ದು, ಅವೆಲ್ಲವುಗಳ ಮೇಲೆ ಹಕ್ಕು ಸ್ವಾಮ್ಯ ಸಾಧಿಸುವ ಭರಾಟೆಯಲ್ಲಿ ಕಾಡಿನ ಒಳಗೆ ಕಾಡುಪ್ರಾಣಿಗಳಂತೆಯೇ ಸಹಜವಾಗಿ ಬದುಕುತ್ತಿರುವ ಆದಿವಾಸಿಗಳು, ಕಾಡನ್ನೇ ಆಶ್ರಯಿಸಿರುವ ಬುಡಕಟ್ಟಿನ ಬಗೆಗೆ ಸ್ವಲ್ಪ ಯೋಚಿಸುವ ಪ್ರಯತ್ನವನ್ನು ಈ ಕಾನೂನುಗಳು ಮಾಡಲಿಲ್ಲ.

ರಾಷ್ಟ್ರೀಯ ಉದ್ಯಾನವನ, ಅಭಯಾರಣ್ಯ, ಸಂರಕ್ಷಿತ ಅರಣ್ಯ, ನೆಡತೋಪು, ಸಾಮಾಜಿಕ ಅರಣ್ಯ, ಕಿರು ಅರಣ್ಯ, ಮೀಸಲು ಅರಣ್ಯ, ಗೋಮಾಳ, ಸೊಪ್ಪುಗುಡ್ಡ ಇತ್ಯಾದಿ ಹೆಸರಿನಲ್ಲಿ ಕಾಡಿನ ಸಂಪೂರ್ಣ ಒಡೆತನ ಸರ್ಕಾರದ್ದು ಎಂದು ತೀರ್ಮಾನಿಸಿ, ಕಾಡಿನೊಳಗೆ ಯಾವ ಮುಜುಗರ, ಹಿಂಜರಿಕೆಯಿಲ್ಲದೆ ಮುಕ್ತವಾಗಿ ವಾಸಿಸುತ್ತಿದ್ದ, ಬೇಟೆಯಾಡುತ್ತಿದ್ದ ಅರಣ್ಯವಾಸಿಗಳನ್ನೇ ಸರ್ಕಾರದ ಕಾನೂನುಗಳು ಬೇಟೆಯಾಡಿದವು. ಸರ್ಕಾರದ ಪ್ರತ್ಯೇಕೀಕರಣ ನೀತಿ, ಸ್ವಾಂಗೀಕರಣ ನೀತಿ ಹಾಗೂ ಅಭಿವೃದ್ಧಿ ನೀತಿಗಳ ನಡುವೆ ಸಮನ್ವಯ ಸಾಧಿಸಲಾಗದೆ, ಬುಡಕಟ್ಟು ಜನರ ಬದುಕನ್ನು ಉತ್ತಮಪಡಿಸುವ ಯೋಜನೆ-ಯೋಚನೆ ಕಾಗದದ ಮೇಲೆ ಒಕ್ಕಣಿಕೆಯಾಗಿಯೇ ಉಳಿದಿದೆ. ಕಾಡುತ್ಪನ್ನಗಳನ್ನು ಸಂಗ್ರಹಿಸದಂತೆ, ಮಾರದಂತೆ ನಿರ್ಬಂಧ. ಕುಮರಿ ಬೇಸಾಯಕ್ಕೆ ಒಳಪಡಿಸಿರುವ ಭೂಮಿಯ ಪಟ್ಟ, ಖಾತೆ, ದಾಖಲೆಗಳನ್ನು ಕೇಳಿ ಕಾಡಿನಿಂದ ಹೊರಗಟ್ಟುವ

ಹುನ್ನಾರ, ನಕ್ಸಲೀಯರಿಗೆ ಬೆಂಬಲಿಸುತ್ತಿದ್ದಾರೆಂದು ಅನುಮಾನಿಸಿ, ಕಳ್ಳರೆಂದು ನೋಡುವುದು, ಅವರ ಪ್ರಕೃತಿ ಸಹಜ ಕಾಡಿನ ಚಲನ-ವಲನಗಳನ್ನೇ ದಿಟ್ಟಿಸಿ ನೋಡುವುದು, ನಾನಾ ಪ್ರಕಾರದ ಹಿಂಸೆ, ಕಿರಿಕಿರಿ, ದೌರ್ಜನ್ಯದಂತಹ ಮಾನವಹಕ್ಕುಗಳನ್ನು ಉಲ್ಲಂಘಿಸಿರುವುದು ಭಾರತದಾದ್ಯಂತ ಅರಣ್ಯದಲ್ಲಿ ನೆಲೆಸಿರುವ ಬುಡಕಟ್ಟುಗಳಿಂದ ತಿಳಿಯಬಹುದು.

ಗಿರಿಜನ ಉಪಯೋಜನೆಯಲ್ಲಿ ಶೇ.೬೦:೪೦ರ ಅನುಪಾತದಲ್ಲಿ ಒಪ್ಪಂದದ ಆಧಾರ ಮೇಲೆ ಸಾಮಾಜಿಕ ಭದ್ರತಾ ನೆಡುತೋಪು ನಿರ್ಮಾಣ ಹಾಗೂ ನಿರ್ವಹಣೆ, ಕುಶಲಕರ್ಮಿಗಳಿಗೆ ಉಚಿತ ಬಿದಿರು ಬೆತ್ತ ಸರಬರಾಜು, ಮನೆಗಳ ನಿರ್ಮಾಣಕ್ಕೆ ರೂ. ೧೦,೦೦೦ ಮಿತಿಯಲ್ಲಿ ಗೃಹ ನಿರ್ಮಾಣ ವಸ್ತುಗಳ ಸರಬರಾಜು, ಲ್ಯಾಂಪ್ಸ್ ಸಹಕಾರಿ ಸಂಘಗಳ ಮೂಲಕ ಬುಡಕಟ್ಟು ಉತ್ಪನ್ನಗಳನ್ನು ಮಾರಾಟ ಮಾಡುವ ಪ್ರಕ್ರಿಯೆ ಇದ್ದರೂ ವಾಸ್ತವವಾಗಿ ಬುಡಕಟ್ಟಿಗರ ಉತ್ಪನ್ನಕ್ಕೆ ಬೇಕಿರುವ ಕಚ್ಚಾ ಪದಾರ್ಥಗಳ ಸರಬರಾಜಿನಲ್ಲೇ ಕಾನೂನು ತೊಡಕುಗಳಿವೆ. ಉದಾಹರಣೆಗೆ ಮೇದರು ಮೇದಾರಿಕೆಯನ್ನು ಕಾಲಿಕ (ಸೀಸನಲ್)ವಾಗಿ ಮಾಡದೆ ವರ್ಷಂಪೂರ್ತಿ ಈ ವೃತ್ತಿಯಿಂದಲೇ ಬದುಕು ಸಾಗಿಸಬೇಕಿರುವುದರಿಂದ ಬಿದಿರಿನ ಪೂರೈಕೆ ವರ್ಷಪೂರ್ತಿ ಬೇಕಿರುತ್ತದೆ. ಆದರೆ ಅರಣ್ಯ ಕಾಯ್ದೆ ಪ್ರಕಾರ ಜೂನ್‌ನಿಂದ ಸೆಪ್ಟಂಬರ್‌ವರೆಗೆ ಕಾಡಿಗೆ ಪ್ರವೇಶಿಸಲು ಅನುಮತಿ ನೀಡುವುದಿಲ್ಲ. ಆಗೊಮ್ಮೆ ಬಿದಿರು ತರಲು ಪರವಾನಿಗೆ ನೀಡಿದರೂ ವರ್ಷದಲ್ಲಿ ಎರಡು ಬಾರಿ ಮಾತ್ರ. ಆದರೆ ತಂದ ಬಿದಿರನ್ನು ದಾಸ್ತಾನು ಮಾಡಲು ಸೂಕ್ತ ದಾಸ್ತಾನು ಮಳಿಗೆಗಳಿಲ್ಲ. ಬಿದಿರಿನಲ್ಲಿ ನೀರಿನ ಪಸೆ ಆರಿದ ಮೇಲೆ ಬಿದಿರಿನ ಕೆಲಸ ಕಷ್ಟ ಸಾಧ್ಯ. ಬಿದಿರಿನಿಂದ ತಯಾರಿಸಿದ ಪರಿಕರಗಳನ್ನು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸಾಗಿಸುವಾಗಲೂ ಅರಣ್ಯ ಅಧಿಕಾರಿಗಳ ತಕರಾರು, ಪರವಾನಿಗೆಗಾಗಿ ಪೀಡಿಸುವುದು. ಕಾಡಿನಿಂದ ಬಿದಿರನ್ನು ಹೊತ್ತುಕೊಂಡು ಬರುವಾಗಲಂತೂ ಮೇದರು ಜೀವ ಹಿಡಿದುಕೊಂಡೇ ಇರುತ್ತೇವೆನ್ನುತ್ತಾರೆ. ವರ್ಷದಲ್ಲಿ ಎರಡು ಬಾರಿ ಮಾತ್ರ ಪುಕ್ಕಟೆ ಇಲ್ಲವೇ ರಿಯಾಯಿತಿ ದರದಲ್ಲಿ ಬಿದಿರನ್ನು ಪೂರೈಸುತ್ತಾರೆ. ಇದಕ್ಕೂ ವಿಪರೀತ ನಿಬಂಧನೆಗಳು. ಮೇದರಲ್ಲದವರಿಂದ ಬಿದಿರನ್ನು ಕಡಿಸುವುದರಿಂದ ಉಪಯೋಗಕ್ಕೆ ಬಾರದ ಇಲ್ಲವೇ ಗುಣಮಟ್ಟವಲ್ಲದ ಬಿದಿರನ್ನು ಮನಸೋಇಚ್ಛೆ ಕತ್ತರಿಸುವುದರಿಂದ ಬಿದಿರಿನ ಕೆಲಸಕ್ಕೆ ಅನಾನುಕೂಲವಾಗಿರುತ್ತದೆ. ಅದೂ ತಲಾ ಬಿದಿರಿನ ಬೆಲೆ ದುಬಾರಿಯಾಗಿರುತ್ತದೆ. ಇತ್ತೀಚೆಗೆ ಬಂದ ಅರಣ್ಯವಾಸಿ ಹಕ್ಕು ಅಧಿನಿಯಮ-೨೦೦೬ (೨೦೦೭ (೨)) ಮತ್ತು ನಿಯಮಗಳು-೨೦೦೮ ಇದರ ಪ್ರಕಾರ ಕನಿಷ್ಟ ಮೂರು ವರ್ಷ ಅರಣ್ಯದೊಳಗೆ ವಾಸವಿರುವ ಅರಣ್ಯವಾಸಿ ಬುಡಕಟ್ಟು ಕುಟುಂಬಕ್ಕೆ ತಲಾ ಎರಡು ಎಕರೆ ಭೂಮಿಯನ್ನು ಹಸ್ತಾಂತರಿಸುವ ಉಪಯುಕ್ತ ಅಧಿನಿಯಮವಿದ್ದರೂ, ಮೇದ ಬುಡಕಟ್ಟಿನವರಿಗೆ ಇದರಿಂದ ಪ್ರಯೋಜನವಾಗುತ್ತಿಲ್ಲ. ಕಾರಣ ಸಂಸ್ಕೃತೀಕರಣದ ಪ್ರಭಾವಕ್ಕೆ ಸಿಲುಕಿರುವ ಮೇದರು ಕಾಡಿನಿಂದ ಜಾರಿ ಪಟ್ಟಣ ಬದುಕಿಗೆ ಒಗ್ಗಿಕೊಂಡಿದ್ದಾರೆ.

೪.೧.೩ ಮಾರುಕಟ್ಟೆ ಸಮಸ್ಯೆ

ಬಿದಿರು ಹಾಗೂ ಬೆತ್ತಗಳಿಂದ ತಯಾರಿಸುವ ವಸ್ತುಗಳು ಕಲಾತ್ಮಕವಾದವುಗಳು ಕೆಲವಾದರೆ ನಿತ್ಯ ಬಳಕೆಗೆ ಬೇಕಾಗುವಂತಹವು ಮತ್ತೆ ಕೆಲವು. ಇದಲ್ಲದೆ ಸಾಂಪ್ರದಾಯಿಕ ಕೃಷಿಕರಿಗೆ ಬೇಕಾದ ಮೊರ, ಕೊಂಗ, ಬುಟ್ಟಿ, ಹೆಡಗೆ, ದರಗಿನ ಜಲ್ಲೆ, ಕೂರ್ಗಿಮಂಕ್ರಿ, ತಟ್ಟಿ, ಕಣಜ, ಸಾರಣಿಗೆ, ಗೊರಬು, ಅಡಿಕೆ ಕೈ, ಅಡಿಕೆ ಚಾಪೆ ಇತ್ಯಾದಿಗಳು ಮೀನು ಹಿಡಿಯುವವರಿಗೆ ಮೀನು ಬುಟ್ಟಿ, ಕೂಣಿ, ಹತ್ತುಗೂಣಿ, ಇರಿಗೂಣಿ, ಸೊಸಲುಗೂಣಿ, ಮಳಲಿಗೋರು ಇತ್ಯಾದಿಗಳು, ಪೂಜಾ ಸಾಮಗ್ರಿಗಳಾಗಿ ಹೂ ಬುಟ್ಟಿ, ಬುಕ್ಕಣಿಕೆ, ಹಣ್ಣು-ಕಾಯಿ ತಟ್ಟೆ, ಉಡುಸಲು ಕುಕ್ಕೆ ಇತ್ಯಾದಿ, ಆಹಾರ ಗೃಹ ಬಳಕೆಗಾಗಿ ಅನ್ನ ಬಸಿಯುವ ಚಿಬ್ಬಲು (ಸಿಬ್ಬಲು), ರೊಟ್ಟಿಬುಟ್ಟಿ, ಗೆರಸಿ, ಮೂಲೆ ಗೆರಸಿ, ರೌಂಡ್ ಗೆರಸಿ, ಮೂಲೆ ಮುಚ್ಚಲು ಕುಕ್ಕೆ, ಕೇರುವ ಮೊರ, ಕೊಚ್ಚುವ ಮೊರ, ಸಣ್ಣ ಹೆಣಿಗೆ ಮೊರ, ದೊಡ್ಡ ಹೆಣಿಗೆ ಮೊರ, ತರಕಾರಿ ಬುಟ್ಟಿ, ಒಣಗಿಸೋ ಗೆರಸಿ, ಬೀಸೋ ಗೆರಸಿ, ಜಾಳಿಸುವ ಮಂಕರಿ, ಅನ್ನದ ಕುಕ್ಕೆ ಇತ್ಯಾದಿ. ಆಧುನಿಕ ಕೃಷಿಕರಿಗೆ ಚಂದ್ರಿಕೆ, ರೇಷ್ಮೆ ತಟ್ಟೆ, ಚಾಪೆ, ರೇಷ್ಮೆ ಚೌಕಿಗಳು ಇತ್ಯಾದಿ, ತಾತ್ಕಾಲಿಕ ಶೆಡ್‌ಗಳಿಗೆ ಗೋಡೆ ಮತ್ತು ಬಾಗಿಲು ಬಿದಿರಿನ ತಟ್ಟಿಯಿಂದಲೇ ನಿರ್ಮಾಣವಾಗುತ್ತವೆ.

ಆಧುನಿಕ ನೈಸರ್ಗಿಕ ಅಭಿವ್ಯಕ್ತಿಗಾಗಿ ಬಿದಿರಿನ ದೆಬ್ಬೆಗಳಿಂದ ಕಲಾತ್ಮಕ ಆಕಾರಗಳಿಂದ ವಿನ್ಯಾಸಗೊಳಿಸಲಾಗುತ್ತದೆ. ಕೌಟುಂಬಿಕ ಬಳಕೆಗಾಗಿ ಬಾಗಿನ ಮೊರ, ಮುಚ್ಚಲು, ಕಾಯಿ ಕುಕ್ಕೆ, ಕೋಳಿ ಜಲ್ಲೆ, ಉಪ್ಪಿನ ಗೂಡೆ, ಅಕ್ಕಿ ಗೂಡೆ, ಕಲಬೆ, ಮಾವಿನ ಬುಟ್ಟಿ, ಟಮೋಟೋ ಬುಟ್ಟಿ, ಮಲಗು ಮಂಚಗಳು, ಏಣಿ, ಕೈಬುಟ್ಟಿ, ಬಣ್ಣದ ತೊಟ್ಟಿಲು, ಬೀಸಣಿಗೆ, ಪಂಜರಗಳು, ರೈಲು ಬುಟ್ಟಿ ಇತ್ಯಾದಿಗಳು ಬೊಂಬಿನಿಂದ ಲೋಟ, ಚಮಚ, ಹೂಜಿ, ಪಾವು, ಸೇರು, ಸಿದ್ದಿ, ಸಂದೂಕ, ಗೊಟ್ಟ, ಬಟ್ಟೆ ನೇತು ಹಾಕುವ ವಸ್ತುಗಳು, ಗೋಡೆ ಪ್ಲೇಟುಗಳು ಇತ್ಯಾದಿಗಳು, ಈ ರೀತಿ ಅನೇಕಾನೇಕ ವಸ್ತುಗಳ ವಿವಿಧ ಪ್ರದೇಶಗಳ ಅಗತ್ಯಕ್ಕನುಗುಣವಾಗಿ ಮೇದರು ಕೈಯಿಂದಲೇ ತಯಾರಿಸುವ ಈ ವಸ್ತುಗಳು ಮನಮೋಹಕವಾಗಿರುತ್ತವೆ.

ಆಧುನಿಕ ಬೇಸಾಯ ಬರುವುದಕ್ಕಿಂತ ಮೊದಲು ಈ ಸಂಪ್ರದಾಯಿಕ ಮೇದರ ಬಿದಿರಿನ ಉತ್ಪನ್ನಗಳಿಗೆ ಎಲ್ಲಿಲ್ಲದ ಬೇಡಿಕೆ ಇದ್ದವು. ಮೇದರ ಕೆಲವು ಕುಟುಂಬಗಳು ಕೆಲವು ಕೃಷಿ ಕುಟುಂಬಕ್ಕೆ ವಾರ್ಷಿಕ ಆವರ್ತನೆಯಲ್ಲಿ ಬೇಕಾಗಿದ್ದ ವಸ್ತುಗಳನ್ನು ಅವರೇ ಪೂರೈಸುತ್ತಿದ್ದರು. ಯಾವುದೇ ಕಾರಣಕ್ಕೆ ಬೇರೆ ಕುಟುಂಬದ ಮೇದರು ಗ್ರಾಹಕ ಕುಟುಂಬದ ವ್ಯವಹಾರದಲ್ಲಿ ಕೈ ಹಾಕುತ್ತಿರಲಿಲ್ಲ. ಪರಸ್ಪರರು ಈ ರೀತಿ ಹಂಚಿಕೊಂಡು ತಮ್ಮ ಹಾಗೂ ಗ್ರಾಮೀಣ ಒಕ್ಕಲು ತನದವರೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದರು. ಕೃಷಿ ಮನೆತನದವರು ತಾವು ತೆಗೆದುಕೊಂಡ ಮೇದರ ಒಟ್ಟು ವಸ್ತುಗಳಿಗೆ ಬದಲಾಗಿ ಕೃಷಿ ಒಕ್ಕಲಾಟ ಮುಗಿದ ಬಳಿಕ ಭತ್ತವನ್ನು ಅವರ ಎತ್ತಿನ ಗಾಡಿಯಲ್ಲಿ ತಂದು ಮೇದರ ಮನೆಗೆ ಒಪ್ಪಿಸುತ್ತಿದ್ದರು.

[illegible]

ಕೆಲವರು ಹಳ್ಳಿಯಿಂದಲೇ ಅಕ್ಕಿ, ಭತ್ತ, ಹಾಲೆಕಣೆಯ ಬೆಲ್ಲ, ಮನೆ ಬಳಕೆಯ ಅಡಿಕೆ, ತರಕಾರಿ ಇತ್ಯಾದಿಗಳನ್ನು ಹೊತ್ತು ತರುತ್ತಿದ್ದರು. ಸಾಮಾನ್ಯವಾಗಿ 'ಭಾನುವಾರ' ಮೇದರು ತಮ್ಮ ಬಿದಿರಿನ ಉತ್ಪನ್ನಗಳೊಂದಿಗೆ ಹಳ್ಳಿ ತಿರುಗುತ್ತಿದ್ದರು. ಮಲೆನಾಡಿನ ಚದುರಿದ ಹಳ್ಳಿಗಳಲ್ಲಿ ನೆಲೆಸಿರುವ ಕೃಷಿ ಕುಟುಂಬಗಳನ್ನು ಕಾಲ್ನಡಿಗೆಯಲ್ಲೇ ಹತ್ತಾರು ಮೈಲಿ ನಡೆದು ಅಗತ್ಯ ವಸ್ತುಗಳನ್ನು ಪುರುಷ ಹಾಗೂ ಸ್ತ್ರೀಯರಿಬ್ಬರೂ ತಲುಪಿಸುವರು. ನೀಡುವ ಭತ್ತ, ಅಕ್ಕಿ, ರಾಗಿ, ಜೋಳ, ಮೆಣಸು, ದನಿಯ, ಹೆಸರುಕಾಳು, ಕಡ್ಲೆಕಾಳು, ಹುಚ್ಚೆಳ್ಳು ಇತ್ಯಾದಿಗಳನ್ನು ಹೊತ್ತುಕೊಂಡೇ ಬರುವರು. ಆದರೆ ಇತ್ತೀಚೆಗೆ ಬಸ್ಸಿನ ವ್ಯವಸ್ಥೆ, ಸೈಕಲ್ ವ್ಯವಸ್ಥೆ ಇರುವುದಾದರೂ ಹಳ್ಳಿಗಳಿಗೆ ಮೇದರು ಹೋಗುವ ಪ್ರಮಾಣ ಕಡಿಮೆಯಾಗಿದೆ. ವ್ಯಾಪಾರವಿಲ್ಲವೆಂದು ಗೊಣಗುತ್ತಾರೆ.

ಹಿಂದೆ ವ್ಯಾಪಾರಕ್ಕೆಂದು ಹಳ್ಳಿಗೊರಟರೆ ಕುಟುಂಬಕ್ಕೆ ಬೇಕಾಗುವಷ್ಟು ದವಸ-ಧಾನ್ಯ ದೊರಕುತ್ತಿತ್ತು. ಆದರೆ ಇತ್ತಿಚಿನ ದಿನಗಳಲ್ಲಿ ಲೆಕ್ಕಾಚಾರ ಹಾಕಿ ಬಿದಿರಿನ ಉತ್ಪನ್ನಗಳಿಗೆ ಹಣವನ್ನೇ ಕೊಡುತ್ತಾರೆ. ಅಂಗಡಿಯಲ್ಲಿ ಸಿಗುವ ಪ್ಲಾಸ್ಟಿಕ್ ಮೊರ ಅಥವ ಬುಟ್ಟಿಯನ್ನು ತೆಗೆದುಕೊಂಡ್ರೆ ಕನಿಷ್ಠ ೫ ವರ್ಷ ಬರುತ್ತೆ, ನಿಮಗ್ಯಾಕೆ ಇಷ್ಟು ಕೊಡಬೇಕು ಎಂದು ಮೇದರಿಗೆ 'ಪೇಟೆಯ ವಿದ್ಯಾಮಾನ'ವನ್ನು ಉಪದೇಶಿಸಿ ಓಡಿಸುತ್ತಾರೆ. ಅನ್ನ ಬಸಿಯುವ ಗೋಜಿಗೇ ಹಲವು ಕುಟುಂಬಗಳು ಹೋಗಲ್ಲ. ಆಧುನೀಕತೆಯ ಪ್ರಭಾವದಿಂದ ಕುಕ್ಕರ್, ಮಿಕ್ಸಿ, ಡ್ರೈಯರ್, ಕ್ಲೀನ್ಡ್ ಡಿಸ್ಟೋನ್ಡ್ ರೈಸ್ ಎಲ್ಲವೂ ಕ್ಲೀನ್ಡ್ ಎಂದು ಪ್ಯಾಕ್ ಮಾಡಿದ ವಸ್ತುಗಳು ಮಾರುಕಟ್ಟೆಯಲ್ಲಿ ಲಭಿಸುವುದರಿಂದ ಅನ್ನ ಬಸಿಯುವ ಚಿಬ್ಬಲು, ಬೀಸೋಕಲ್ಲಿಟ್ಟು ಅಕ್ಕಿ ಬೀಸುವ ಮೂಲೆ ಅಥವ ವೃತ್ತಾಕಾರದ ಗೆರಸಿ, ಕೂದಲು ಓಣಗಿಸುವ ಕುಕ್ಕೆ, ಅಕ್ಕಿ ಮಾಡುವ ಮೊರ, ಭತ್ತ, ಅಕ್ಕಿ ಸಾಣಿಸುವ ಸಾರಣಿಗೆ ಇತ್ಯಾದಿಗಳು ಕೊಳ್ಳುವವರಿಲ್ಲದೆ ದೂರವಾಗುತ್ತಿವೆ. ಆ ಆಕೃತಿಗಳ ಪಳಯುಳಿಕೆಗಳು ಮೇದರ ಮನಸ್ಸಿನ ಕ್ಯಾನ್ವಾಸ್ ಮೇಲೆ ತೇಲುತ್ತಿವೆ.

ಕೃಷಿಯನ್ನು ಅವಲಂಬಿಸಿ ಮೇದರ ಕುಲಕಸುಬು ಜೀವಂತವಿತ್ತು. ಕೃಷಿಯಲ್ಲಿ ಆಧುನೀಕತೆ ಹೆಚ್ಚುತ್ತಾ ಹೋದಂತೆ ಮೇದರ ಉತ್ಪನ್ನಗಳನ್ನು ದೂರಗೊಳಿಸುತ್ತಾ ಬಂದರು. 'ಉತ್ಪನ್ನವಿರುವೆಡೆ ಗ್ರಾಹಕರು, ಗ್ರಾಹಕವಿರುವೆಡೆ ಉತ್ಪನ್ನ' ಇದರಲ್ಲಿ ಇಂತಹ ಹಾವು-ಏಣಿ ಆಟ ಮೇದರ ಉತ್ಪನ್ನದ್ದಾಗಿದೆ. ಹಳ್ಳಿ ಮತ್ತು ಮೇದರ ನಡುವಿನ ವ್ಯಾಪಾರ ಸಂಬಂಧ ದೂರವಾದಂತೆ ತಮ್ಮ ಉತ್ಪಾದಿತ ಉತ್ಪನ್ನಗಳಿಗೆ ಬೆಲೆಯಿಲ್ಲದಂತಾಗಿ ಪರ್ಯಾಯ ವೃತ್ತಿಗಳ ಬಗ್ಗೆ ಚಿಂತಿಸುವ ಸಂಕ್ರಮಣಾವಸ್ಥೆ ಗೋಚರಿಸುತ್ತದೆ. ಪಟ್ಟಣ-ನಗರಗಳಲ್ಲಿ ಬಿದಿರಿನ ಉತ್ಪನ್ನಗಳ ಅಂಗಡಿ ಇರುವವರು ಆ ಮಾಲುಗಳನ್ನು ಅಲ್ಲಿಯೇ ಮಾರುವುದರಿಂದ ಅಗತ್ಯವಿರುವ ಗ್ರಾಹಕರು ಅಂಗಡಿಯಲ್ಲೇ ಖರೀದಿಸುವರು. ಇದು ಉತ್ಪನ್ನವಿರುವಿಡೆ ಗ್ರಾಹಕರು ಆದರೆ ಅತ್ಯಧಿಕ ಸಂಖ್ಯೆಯ ಮೇದರು ತಾವು ತಯಾರಿಸಿ ಉತ್ಪನ್ನಗಳನ್ನು ಸಂತೆ, ಹಳ್ಳಿ, ದೂರದ ಊರು,

ಪೇಟೆ ಸುತ್ತಿ ವ್ಯಾಪಾರ ಮಾಡುವರೇ ಜಾಸ್ತಿ. ಇವರು ಗ್ರಾಹಕರು ಇರುವೆಡೆ ಉತ್ಪನ್ನಗಳನ್ನು ಬಿಕರಿ ಮಾಡುವರು. ಎಷ್ಟೋ ಸಂದರ್ಭದಲ್ಲಿ ಮೇದರನ್ನು ಅಸ್ಪೃಶ್ಯರೆಂಬಂತೆ ಕಾಣುತ್ತಾರೆ.

ಮೇದರ ಉತ್ಪನ್ನಗಳಿಗೆ ಮುದ್ರೆ ಇರುವುದಿಲ್ಲ. ಮುದ್ರೆ ರಹಿತ ವಸ್ತುಗಳನ್ನು ಖರೀದಿ ಮಾಡುವ ಇಂದಿನ ಗ್ರಾಹಕನ ಮನಸ್ಥಿತಿ ಕರಕುಶಲ, ಗುಡಿ ಕೈಗಾರಿಕೆಯಿಂದ ಉತ್ಪಾದಿಸಿದ ವಸ್ತುಗಳ ಬಗೆಯೂ ತೋರಬಹುದು. ಕಚ್ಚಾ ಪದಾರ್ಥವನ್ನು ಬಳಸಿ ಉತ್ಪಾದಿಸಿದ ವಸ್ತುವಿಗೆ ಎಷ್ಟು ಬೆಲೆ ನಿಗಧಿಗೊಳಿಸಿದರೆ ತನಗೆ ಲಾಭವಾಗುವುದು ಎಂಬುದು ಮೇದನ ಲೆಕ್ಕಾಚಾರ. ಯಾವತ್ತೂ ಸಾಮಾನ್ಯ ಬೆಲೆಯ ಎರಡುಪಟ್ಟು, ಮೂರುಪಟ್ಟು ಬೆಲೆಯನ್ನು ಮೇದಾರ ನಿಗಧಿಪಡಿಸುವುದಿಲ್ಲ. ಏಕೆಂದರೆ ವೃತ್ತಿ ಮತ್ತು ವ್ಯಾಪಾರ ನೈತಿಕತೆಯನ್ನು ಬಳವಳಿಯಾಗಿ ಪಡೆದಿರುತ್ತಾರೆ. ಬಳಕೆದಾರ ವಸ್ತುವಿನ ಬೆಲೆ ವಿಚಾರಿಸಿ ಇದರ ಬೆಲೆ ಇಷ್ಟಿರಲಾರದು ಎಂದು ಹೇಳಬಹುದೇ ವಿನಃ ಆ ಉತ್ಪಾದನೆಯ ಬೆನ್ನಲ್ಲಿ ಶ್ರಮ, ಕಲಾತ್ಮಕತೆ, ಸಮಯ, ತಾಳ್ಮೆ, ಹಣ ಎಷ್ಟು ವಿನಿಯೋಗಿಸಬಹುದೆಂದು ಕೊಂಚ ಚಿಂತಿಸುವ ಗ್ರಾಹಕರ ಸಂಖ್ಯೆ ತೀರ ಕಡಿಮೆ ಎಂದು ಹೇಳಬಹುದು. 'ಕೊಳ್ಳುಬಾಕ ಸಂಸ್ಕೃತಿ'ಯ ಮನಸ್ಥಿತಿಯಲ್ಲಿ ಗ್ರಾಹಕ ಚೌಕಾಸಿ ಮಾಡುತ್ತಾನೆ. ವಸ್ತುವಿನ ಗುಣ, ಪ್ರಮಾಣದ ವರ್ಗೀಕರಣ ಮೇದನಿಗೆ ಮಾತ್ರ ತಿಳಿದಿದ್ದು, ಇದರ ಬಗ್ಗೆ ಗ್ರಾಹಕರಿಗೆ ತಿಳುವಳಿಕೆ ಮಾಡಲು ತನ್ನ ವ್ಯಾಪರ ಕೌಶಲ್ಯವನ್ನು ಬಳಸಬೇಕಿರುತ್ತದೆ.

ಮೇದಾರಿಕೆಯ ಉತ್ಪನ್ನಗಳು ಸ್ಥಳೀಯ ಹಾಗೂ ತನ್ನ ಭೌಗೋಳಿಕ ಪರಿಸರದಿಂದ ಆಚೆಯೂ ವ್ಯಾಪಾರವಾಗುತ್ತವೆ. ಸಂತೆ, ಜಾತ್ರೆ, ಉತ್ಸವಗಳಲ್ಲಿ ಮಾರಾಟವಾಗಬಹುದಾದ ಉತ್ಪನ್ನಗಳನ್ನು ಉತ್ಪಾದಿತ ಸ್ಥಳದಿಂದ ವ್ಯಾಪಾರ ಸ್ಥಳಕ್ಕೆ ಸಾಗಿಸುವುದು ದುಸ್ತರ. ವಾಹನದವರ ತಗಾದೆ ಒಂದಡೆಯಾದರೆ ಇನ್ನೊಂದು ಅರಣ್ಯ ಇಲಾಖೆಯವರ ಸಮಸ್ಯೆ. ಅರಣ್ಯ ತನಿಖಾ ಠಾಣೆಯಲ್ಲಿ ಕಿರುಕುಳ ನೀಡುತ್ತಾರೆ. ಹಾಗಾಗಿ ಬಿದಿರು ಅಥವ ಬಿದಿರಿನ ಉತ್ಪನ್ನಗಳನ್ನು ಹಾಕುವುದಿಲ್ಲವೆಂದು ಹೇಳಿ ಮಾನಸಿಕ ಹಿಂಸೆ ನೀಡಿದರೆ, ಇಲಾಖೆಯವರು ಪರ್ಮಿಟ್ ತೋರಿಸು ಎಂದೇಳಿ ಭಕ್ಷೀಸು ಕೇಳುವುದು ಮತ್ತೊಂದೆಡೆ. ಎಷ್ಟೋ ಬಾರಿ ತಮ್ಮ ಬಿದಿರು ಉತ್ಪನ್ನಗಳನ್ನು ವಾಹನದಿಂದ ಹೊರಕ್ಕೆ ಎಸೆದು ಸಾರ್ವಜನಿಕರ ಎದುರಿಗೇ ಮುಜುಗರ ಅನುಭವಿಸಿದ್ದಾರೆ. ತನ್ನೊಳಗೇ ಈ ವೃತ್ತಿಗಾಗಿ ಬೈದುಕೊಂಡಿದ್ದಾರೆ. ಅಧಿಕಾರಿಗಳ ವಿರುದ್ಧ ಒಳಗೇ ಕಿಡಿಕಾರಿದ್ದಾರೆ. ಆದರೂ ಹೊಟ್ಟೆಯನ್ನು ಮುಟ್ಟಿಕೊಂಡು 'ತಣ್ಣಾಗಾಗದೆ' ಬೇರೆ ಮಾರ್ಗವಿಲ್ಲವಲ್ಲ. ಸಾರಿಗೆ ಸಮಸ್ಯೆಯಿಂದಾಗಿ ಗಾವುದ ದೂರ ನಡೆದೇ ವ್ಯಾಪಾರ ಮಾಡುವುದು ಸೂಕ್ತವೆಂದು ಸಾರಿಗೆ ಗೊಡವೆಗೇ ಹೋಗದ ಮೇದರ ಸಂಖ್ಯೆಯೂ ಹೆಚ್ಚೇ ಇದೆ. ತಮಗಾಗಿ ಸೂಕ್ತ ಮಾರುಕಟ್ಟೆ ಇಲ್ಲದಿರುವುದು ಈ ಸಮಸ್ಯೆಗಳಿಗೆ ಕಾರಣವಾಗಿದೆ. ಇಂದು ಜಾಗತೀಕರಣದ ಭರಾಟೆಯಲ್ಲಿ ಇ-ಮಾರ್ಕೆಟಿಂಗ್, ಟೆಲಿ-ಮಾರ್ಕೆಟಿಂಗ್ ಕ್ಷಿಪ್ರವಾಗುತ್ತಿದ್ದು, ವಿಶ್ವ ಮಾರುಕಟ್ಟೆ ಜಗಜಾಹಿರಾಗುತ್ತಿದ್ದು 'ವಿಶ್ವವೇ ಗ್ರಾಮ'ವಾಗಿ ಮಾರ್ಪಡುತ್ತಿರುವಾಗ ಚಪಕಾರಕ ವೃತ್ತಿಯಿಂದ

ತಯಾರಿಸಿದ ಮೊರ-ಬುಟ್ಟಿಗಳನ್ನು, ಮಾಸಲು ಬಟ್ಟೆ ಧರಿಸಿ, ಕಾಲಿಗೆ ಚಪ್ಪಲಿಯಿಲ್ಲದೆ ಊರು-ಕೇರಿಗಳನ್ನು ಸುತ್ತಿ ಮಾರುತ್ತಿರುವ ಮೇದ 'ವ್ಯಾಪಾರಿ ಸಂಸ್ಕೃತಿ'ಯ ಎದುರಿನಲ್ಲಿ 'ವ್ಯಂಗ್ಯ'ವಾಗಿ ಕಾಣುತ್ತಿದ್ದಾನೆ. 'ಇನ್ನು ಉದಾರೀಕರಣ ನೀತಿಗೆ ಸಾಮ್ರಾಜ್ಯಶಾಹಿಗಳ ಅಂತರಾಷ್ಟ್ರೀಯ ಮಾರುಕಟ್ಟೆಯ ಬಿಕ್ಕಟ್ಟುಗಳು ಕಾರಣವಾಗಿವೆ. ತಾನು ಉತ್ಪಾದಿಸಿದ ಸರಕುಗಳನ್ನು ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಯತೇಚ್ಛವಾಗಿ ಹರಡಲು ಉದಾರೀಕರಣ ನೀತಿಯನ್ನು ಕಲ್ಪಿಸಲಾಗಿದೆ. ಉದಾರೀಕೃತ ಮಾರುಕಟ್ಟೆ, ಶ್ರೀಮಂತ ದೇಶಗಳ ಮಿಗಿತ ಸರಕುಗಳ ಮಾರಾಟ ತೃತೀಯ ಜಗತ್ತನ್ನು ವ್ಯಾಪಾರ ಅಡ್ಡೆಯನ್ನಾಗಿ ರೂಪಿಸುತ್ತದೆ'[೨] ಫೈಬರ್, ಪ್ಲಾಸ್ಟಿಕ್, ಇಂಡಾಲಿಯಂ, ಉಕ್ಕು, ಪ್ಲಾಸ್ಟರ್ ಆಫ್ ಪ್ಯಾರಿಸ್, ಸಿಂಥೆಟಿಕ್ ಆಧುನಿಕ ಪದಾರ್ಥಗಳಿಂದ ಮೇದರ ಉತ್ಪನ್ನಗಳಿಗೆ ಪೂರಕ ಹಾಗೂ ಪರ್ಯಾಯವಾಗಿ ತಯಾರಿಸಲ್ಪಟ್ಟಿರುವ ಪ್ಲಾಸ್ಟಿಕ್ ಚಾಪೆ, ಫ್ಯಾನ್, ಕುಕ್ಕರ್, ಕಬ್ಬಿಣದ ತೊಟ್ಟಿಲು, ಕಬ್ಬಿಣದ ಮಂಚ, ಹೂವಿನ ಬುಟ್ಟಿ, ತರಕಾರಿ ಬುಟ್ಟಿ, ಫೈಬರ್ ಶೀಟ್ಸ್, ತಗಡು, ಗೋಣಿಚೀಲ, ಪ್ಲಾಸ್ಟಿಕ್ ಚೀಲ, ಶೀಥಲೀ ಕೇಂದ್ರಗಳು, ಗಿರಣಿಗಳು, ಮೀನಿಡಿಯುವ ಗಾಳ ಮತ್ತು ಬಲೆ, ಭತ್ತ ಕೊಯ್ದು ಹಸನು ಮಾಡುವ ಹಾರ್ವೆಸ್ಟಿಂಗ್ ಮೆಶಿನ್ ಇತ್ಯಾದಿಗಳು ಇಡೀ "ಮೇದರ ಸಂಸ್ಕೃತಿಯ" ಮೇಲೆ, "ಯಾಂತ್ರಿಕ-ತಾಂತ್ರಿಕ ಧಾಳಿ" ಮಾಡಿವೆ. ಮೇದರು ತರಗೆಲೆಗಳಂತೆ ಗಾಳಿಗೆ ಸಿಕ್ಕಿ ಕಂಗಾಲಾಗಿದ್ದಾರೆ.

'ಅಗಮ್ಯ ಕಾಡಿನ ಬಿದಿರಿಗೆ ಕಟ್ಟೆ ಬರುತ್ತಿದ್ದಂತೆಯೇ ಮೇದರ ಹಳ್ಳಿಯ ಉತ್ಪನ್ನಗಳು ಪೇಟೆಗೆ ಬರುವುದು ನಿಂತು ಹೋಯ್ತು. ಬಿದಿರಿನ ಬುಟ್ಟಿಗಳಿಗೆ ಜೋತುಕೊಂಡಿದ್ದ ಅಳಿದುಳಿದ ಸಂಪ್ರದಾಯಸ್ಥ ಗಿರಾಕಿಗಳೂ ಅನಿವಾರ್ಯವಾಗಿ ಪ್ಲಾಸ್ಟಿಕನ್ನೇ ಆಶ್ರಯಿಸಿದರು. ಮೇದರ ಹಳ್ಳಿಯ ಹೆಂಗಸರು ಅತ್ಯಾಕರ್ಷಕವಾಗಿ ಕುಸುರಿ ಕೆಲಸ ಮಾಡಿ ಕಲಾಕೃತಿಗಳಂತೆ ಹೆಣೆಯುತ್ತಿದ್ದ ಬುಟ್ಟಿಗಳೂ, ಮೊರಗಳೂ ಮಾರ್ಕೆಟ್ಟಿನಿಂದ ಅದೃಶ್ಯವಾದವು'[೩] ವ್ಯಾಪಾರಿ ಕೌಶಲ್ಯಗಳೆಲ್ಲವನ್ನೂ ಬಳಸಿದರೂ ವ್ಯಾಪಾರ ಆಗುವಂತಿಲ್ಲ. ಆಧುನಿಕ ಗ್ರಾಹಕರ ಮನೋಭಾವ 'ಆಧುನೀಕತೆ'ಗೆ ಪೂರಕವಾಗಿ ನೋಡುತ್ತಿದ್ದಾರೆ. 'ಕಡಿಮೆ ಬೆಲೆ-ಹೆಚ್ಚು ಬಾಳಿಕೆ' ಕಡೆ ಮುಖ ಮಾಡಿದ್ದಾರೆ. ಸಂಸ್ಕೃತಿಯನ್ನು ಮರೆಯುತ್ತಿದ್ದಾರೆ. ಇಡೀ ಸಾಂಸ್ಕೃತಿಕ ವರ್ತುಲಕ್ಕೆ ಧಕ್ಕೆ ಬಂದಿರುವಾಗ, ಪಾಪ ಗ್ರಾಹಕರಾದರೂ ಮೇದರ ಮೇಲೆ ಏಕೆ ಕನಿಕರ ತೋರಿಸಬೇಕು? ಬದಲಾವಣೆಯ ಹುಚ್ಚು ಹೊಳೆಯಲ್ಲಿ ಎಲ್ಲವನ್ನೂ ತೇಲಿಸಿಕೊಂಡು ಹೋಗುವ ನಿಯಮವನ್ನು ಪಾಲಿಸುತ್ತಿದೆ.

ಸಂಸ್ಕೃತಿಯ ಸೆಳೆತಗಳು ಎಲ್ಲಿ ಬಿಗಿಯಾಗಿರುತ್ತವೋ ಅಲ್ಲಿ ಸಾಂಸ್ಕೃತಿಕ ಆಕರಗಳಿಗೆ ಹೆಚ್ಚು ಆಸ್ಪದವಿರುತ್ತದೆ. ಅದೂ ಕಡಿಮೆಯಾದಂತೆ ಮೇದರು ತಮ್ಮ ವೃತ್ತಿ ಸ್ಥಿತ್ಯಂತರದಿಂದ ಪರ್ಯಾಯ ವೃತ್ತಿ ನೋಡಿಕೊಳ್ಳದೆ ಅನ್ಯಮಾರ್ಗವಿಲ್ಲ. ಬಿದಿರನ್ನು ದೂರದೂರದ ಪ್ರದೇಶದಿಂದ ಸಾಗಾಟ ಮಾಡುವಾಗ ಆಗುವ ಹೆಚ್ಚಿನ ಖರ್ಚನ್ನು ಬಿದಿರಿನ ಮೇಲೆ ಹಾಕಬೇಕು. ದುಬಾರಿಗೆ ಕೊಂಡ ಬಿದಿರಿನಿಂದ ಉತ್ಪಾದಿಸಿದ ಉತ್ಪನ್ನಗಳಿಗೆ 'ದುಬಾರಿ ಬೆಲೆ' ನಿಗಧಿಪಡಿಸಲೇಬೇಕು.

[illegible]

ಮೊದಲೇ ಇಂತಹ ಉತ್ಪನ್ನಗಳಿಗೆ ಗಿರಾಕಿಗಳಿಲ್ಲ ಇನ್ನು ದುಬಾರಿ ಎಂದಾಗಲಂತೂ ಹೌಹಾರುವರೇ ಅಧಿಕ. ಬಿದಿರಿನ ದಾಸ್ತಾನು ಮತ್ತೊಂದು ಸಮಸ್ಯೆ. ಬಿದಿರಿನ ಮೆಳೆಯಲ್ಲಿ ಸಾಕಷ್ಟು ಜಾಡ್ಯಗಳು ಕಾಣಿಸುತ್ತವೆ. ಕೆಲವು ಫಂಗಸ್ ಸಾಂಕ್ರಾಮಿಕ ರೋಗದಂತೆ ಹರಡುತ್ತದೆ. ಕಡಿತಲೆ ಮಾಡಿ ತಂದ ಬಿದಿರು ಒಣಗುವ ಮೊದಲೇ ಕೆಲಸ ಮಾಡಬೇಕು. ಬೇಕೆಂದಾಗ ಇಲಾಖೆ ಬಿದಿರಿಗೆ ಪರವಾನಿಗಿ ನೀಡುವುದಿಲ್ಲವಾದ್ದರಿಂದ ಹಸಿ ತೇವಾಂಶವನ್ನು ಉಳಿಸಿಕೊಂಡು ದೀರ್ಘಕಾಲದವರೆಗೆ (೩–೪ ತಿಂಗಳು) ದಾಸ್ತಾನು ಮಾಡುವ ವ್ಯವಸ್ಥೆ ಇಲ್ಲವಾಗಿದೆ. ಅಧಿಕ ಕಾಲ ಶೇಖರಿಸಿಟ್ಟರೆ ಕೊರೆಯುವ ಹುಳುವಿನ ಭೀತಿ, ಫಂಗಸ್ ಕ್ಷಯ, ಚುಕ್ಕೆ ರೋಗ ಕಾಣಿಸಿ ಬಿದಿರು ನಿರುಪಯುಕ್ತಗೊಳ್ಳುತ್ತದೆ. ನೆರಳಿನಲ್ಲಿ ಬಾಡಿದ, ಬತ್ತಿದ ಅಥವ ಒಣಗಿದ ಬಿದಿರನ್ನು ಸೀಳಿ ನೀರಿನಲ್ಲಿ ಹಾಕಿ ಉಪಯೋಗಿಸಬಹುದು. ಆದರೆ ಬಿಸಿಲಿನಲ್ಲಿ ಒಣಗಿದ ಬಿದಿರನ್ನು ಮೇದಾರಿಕೆಗೆ ಬಳಸಲು ನವಿರಾದ ಕೆಲಸ ಮಾಡಲು ಬರುವುದೇ ಇಲ್ಲ. ಮೇದರ ಜೋಪಡಿಗಳು, ಮನೆಗಳು, ಶೆಡ್, ಡಿಪೊಗಳು ಬಿಸಿಲಿಗೆ ತೆರೆದುಕೊಂಡಿರುತ್ತವೆ.

ಮನೆಯ ರಚನೆ ಕಿಷ್ಕಿಂದವಾಗಿದ್ದು ಖರೀದಿಸಿದ, ಅಥವಾ ಹೊತ್ತುತಂದ ಬಿದಿರುಗಳನ್ನು ತಾತ್ಕಾಲಿಕವಾಗಿ ಸಾಂಪ್ರದಾಯಿಕವಾಗಿ ಶೇಖರಿಸಿಡುತ್ತಾರೆ. ಅನುಕೂಲಕರ ಅಳತೆಯಾದ ಸಾಮಾನ್ಯವಾಗಿ ನಾಲ್ಕು ಬೀದಿಗೆ (ಎರಡು ಗಣ್ಣುಗಳ ನಡುವಿನದು ಒಂದು ಬೀದಿ) ತುಂಡರಿಸಿ ಮನೆಯ ಅಟ್ಟದ ಮೇಲೋ ಅಥವ ಮನೆಯೊಳಗಿನ ಪಡಸಾಲೆಯ ಮೂಲೆಗೋ ವಾಲಿಸುತ್ತಾರೆ. ಆ ಪಡಸಾಲೆಯಲ್ಲೇ ಹೆಂಗಸರು ಬಿದಿರಿನ ಕೆಲಸ ಮಾಡಿದರೆ, ಗಂಡಸರು ಜಗಲಿ ಮೇಲೆ ಇಲ್ಲವೇ ಮನೆ ಮುಂದಿನ ರಸ್ತೆಯಲ್ಲಿ ಬಿದಿರಿನ ಕೆಲಸ ಮಾಡುತ್ತಾರೆ. ದೊಡ್ಡ ಚಾಪೆ, ಬುಟ್ಟಿ ಸುತ್ತುವುದಕ್ಕೆ ನೀಳ ಜಾಗ ಬೇಕಾಗುತ್ತದೆ. ತಾವು ತಯಾರಿಸಿದ ಉತ್ಪನ್ನಗಳನ್ನು ಮಾರಾಟಕ್ಕಿಂತ ಮುನ್ನ ಶೇಖರಿಸಿಡಿಸಲು ಮನೆಯ ಪಡಸಾಲೆಯನ್ನೇ ಬಳಸಬೇಕು. ಆಗ ವಸ್ತುಗಳು ತಮ್ಮ ತಮ್ಮ ಸ್ಥಾನಕ್ಕಾಗಿ ಪೈಪೋಟಿ ನಡೆಸುತ್ತವೆ. ವೃತ್ತಿ, ಬದುಕು ಎಲ್ಲವೂ ಆ ಕಿಷ್ಕಿಂದೆಯಲ್ಲೇ. ಬಿದಿರಿನ ಪದಾರ್ಥಗಳನ್ನು ಖರೀದಿಸಿದ ಮೇಲೆ ಅವುಗಳನ್ನು ನೀರಿನಲ್ಲಿ ನೆನೆಸಿ ಹದಗೊಳಿಸಬೇಕು. ಅದರಲ್ಲಿರುವ ಸಿಹಿ ಶಮನವಾದ ಮೇಲೆ ತಮಗೆ ಅನುಕೂಲವಾಗುವಂತೆ ಬಳಿದುಕೊಳ್ಳಬಹುದು.

ಕೆಲವರು ಸಗಣಿಯಿಂದ ಬಳಿದುಕೊಂಡರೆ, ಮೊರ, ಗೆರಸಿಯಂತಹವನ್ನು ಹಳದಿ ಬಣ್ಣ, ಮೆಂತ್ಯೆ, ಕಾಗದವನ್ನು ಚೆನ್ನಾಗಿ ನೆನೆಸಿ, ನುಣ್ಣಗೆ ರುಬ್ಬಿ ಹಚ್ಚುವುದರಿಂದಲೂ ಬಾಳಿಕೆ ಬರುತ್ತದೆ. ಪೇಪರ್ ಬಿದಿರಿನಿಂದಲೂ ತಯಾರಿಸಲ್ಪಟ್ಟು ಪುನಃ ಬಿದಿರಿನ ಮೊರಕ್ಕೇ ಲೇಪನವಾಗುವುದು. ನಗರ ಪ್ರದೇಶಗಳಲ್ಲಿರುವ ಮೇದರು ಮೊರ, ಬುಟ್ಟಿ ವ್ಯಾಪಾರ ಮಾಡುವಾಗ ಇಂತಹ ಲೇಪನ ಮಾಡುತ್ತಾರೆ. ಇತ್ತೀಚಿನ ಬದಲಾದ ವ್ಯವಸ್ಥೆಯಲ್ಲಿ ವ್ಯಾಪಾರಕ್ಕೆ ಕಂಡುಕೊಂಡ ಒಂದು ವಿಧಾನವಾಗಿದೆ. ಕೃಷಿ ಹುಟ್ಟುವಳಿಗಳನ್ನು ಶೀಥಲೀಕೃತ ದಾಸ್ತಾನು ಮಳಿಗೆಗಳಲ್ಲಿ ಶೇಖರಿಸಿಡುವಂತೆ

ಮೇದರು ತಯಾರಿಸಿದ ಹುಟ್ಟುವಳಿಗಳನ್ನೂ ಇಂತಹ ದಾಸ್ತಾನು ಮಳಿಗೆಗಳಲ್ಲಿ ಶೇಖರಿಸಿಡಬೇಕು. ಕಾರಣ ಸೀಳಿದ ಬಿದಿರಿಗೆ, ಇಲ್ಲವೆ ತಯಾರಾದ ಉತ್ಪನ್ನಗಳಿಗೆ ಕುಟ್ಟೆ (ರಂಧ್ರ ಕೊರೆಯುವ) ಹುಳುಗಳ ಕಾಟ, ತೇವಾಂಶದಿಂದಿದ್ದರೆ ಫಂಗಸ್‌ನಿಂದ ಕಪ್ಪು ಚುಕ್ಕೆ ಮೂಡಿ ಉತ್ಪನ್ನಗಳು ತನ್ನ ಮೌಲ್ಯ ಕಳೆದುಕೊಳ್ಳುವುದರಿಂದ ಗ್ರಾಹಕರು ಹಿಂದೆ ಸರಿಯುತ್ತಾರೆ. ಒಟ್ಟಾರೆ ಗ್ರಾಹಕರ ಸಮಸ್ಯೆಯು ಮೇದ ಉತ್ಪನ್ನಗಳ ಮಾರುಕಟ್ಟೆಯನ್ನು ಕಾಡುತ್ತಿದೆ. ಕಾಯಿಪಲ್ಯೆ ಮಾರುಕಟ್ಟೆ, ಹಣ್ಣಿನ ಮಾರುಕಟ್ಟೆ, ಹೂವಿನ ಮಾರುಕಟ್ಟೆ ರೀತಿಯಲ್ಲಿ ಮೇದರ ಉತ್ಪನ್ನಗಳಿಗೆ ಪ್ರತ್ಯೇಕ ಸುಸಜ್ಜಿತವಾಗಿರುವ ಮಾರುಕಟ್ಟೆ ಇಲ್ಲದಿರುವುದೂ ವ್ಯಾಪರದಲ್ಲಿ ಹಿನ್ನಡೆಯನ್ನು ಕಾಣಲಾಗುತ್ತಿದೆ. ವ್ಯಾಪಾರ ಎಂದಾಗ ಇಂದಿನ ಸ್ಪರ್ಧಾಯುಗದಲ್ಲಿ ಜಾಹೀರಾತು, ಪ್ರಚಾರ, ಮಾರಾಟದ ಪ್ರವರ್ಧನೆ ಸಾಮಾನ್ಯ. ಆದರೆ, ಸಾಂಪ್ರಾಯಿಕ ವೃತ್ತಿಯಿಂದ ಉತ್ಪಾದಿತ ಈ ವಸ್ತುಗಳಿಗೆ ಈ ರೀತಿ ಪ್ರಚಾರ ಇಲ್ಲವಾಗಿದೆ.

ಕರಕುಶಲ ಅಭಿವೃದ್ಧಿ ನಿಗಮದವರು ಆಯೋಜಿಸುವ ಜಿಲ್ಲಾಮಟ್ಟದ ಮಳಿಗೆಗಳಲ್ಲಿ ನಿಗಧಿತ ದಿನಗಳಲ್ಲಿ ವಸ್ತು ಪ್ರದರ್ಶನ ಹಾಗೂ ಮಾರಾಟವನ್ನು ಮಾಡಲಾಗುತ್ತದೆ. ದಾವಣಗೆರೆಯಲ್ಲಿ ಪ್ರದರ್ಶಿಸಲ್ಪಟ್ಟ ಮೇದಾರಿಕೆಯ ಉತ್ಪನ್ನಗಳ ಮಾಲೀಕನನ್ನು ಸಂದರ್ಶಿಸಿದಾಗ, "ವ್ಯಾಪಾರ ಏನು ಸುಖ ಇಲ್ಲರಿ, ಇಲಾಖೆಯವರು ಬಂದು, ಫ್ರೀ ಮಳಿಗೆಗಳನ್ನು ಕೊಡುತ್ತೇವೆ ಎಂದಿದ್ದರಿಂದ ಅಂಗಡಿ ಹಾಕಿದ್ದೀವಿ" ಎಂದು ಒಡಲಾಳದ ನೋವಿನ ಮಾತುಗಳನ್ನು ಹೇಳುತ್ತಾರೆ. 'ಬೇಡಿಕೆ ಮತ್ತು ಉತ್ಪಾದನೆಯ ಮಾರುಕಟ್ಟೆ'ಯನ್ನು ಪೂರ್ವ ನಿರ್ಧರಿಸುದು ಕಷ್ಟ ಸಾಧ್ಯ. ಸಾಂಪ್ರದಾಯಿಕ ಹಬ್ಬಗಳಲ್ಲಿ ಬಳಕೆಯಾಗುವ ವಸ್ತುಗಳ ಬೇಡಿಕೆಯೆಷ್ಟು, ನಾವು ಒಟ್ಟು ಮೇದರು ಎಷ್ಟೆಷ್ಟನ್ನು ತಯಾರಿಸಬೇಕು ಎಂಬುದನ್ನು ಲೆಕ್ಕಾಚಾರ ಹಾಕಲು ಹೋಗುವುದಿಲ್ಲ. ಹಗಲಿರುಳೂ ಆಸೆಗಣ್ಣುಗಳಿಂದ ಕಷ್ಟಪಟ್ಟು ತಂದ ಬಿದಿರಿನಿಂದ ಉತ್ಪನ್ನ ಮಾಡಿದರೂ ಮಾರುಕಟ್ಟೆಯಲ್ಲಿ ವ್ಯಾಪಾರವಿಲ್ಲದೆ ಹತಾಶರಾಗುತ್ತಾರೆ. ಕೆಲವೊಮ್ಮೆ ಅನ್ಯ ವಸ್ತುಗಳೊಂದಿಗೆ ಮೇದಾರಿಕೆಯ ಉತ್ಪನ್ನಗಳನ್ನು ಮಾರುವವನಿಗೆ ಕನಿಷ್ಟ ಬೆಲೆಗೆ ಮಾರುವುದು ಅನಿವಾರ್ಯ. ವ್ಯಾಪಾರಕ್ಕೆಂದು ಬಿದಿರಿನ ಮಾಲನ್ನು ಕೊಂಡೊಯ್ದುವನ್ನು ಪುನಃ ವಾಪಸ್ ತರುವುದು ಅಪಶಕುನ ಎಂದೂ ನಂಬುತ್ತಾರೆ.

ಎಷ್ಟೋ ವೇಳೆ ಸಮುದಾಯದವರಿಂದಲೇ ಮಾರಾಟ ಪೈಪೋಟಿ ನಡೆಯುತ್ತದೆ. ವ್ಯಾಪಾರ ಆದರೆ ಸಾಕೆಂದು ಕಡಿಮೆ ಬೆಲೆಗೆ ಮಾರುವ ಮೇದರ ನಡುವೆ ವ್ಯಾಪಾರ ಸಂಬಂಧಿ ಜಗಳಗಳೂ ಆಗಿವೆ. ಇದನ್ನು ಗುರಿಕಾರ, ನ್ಯಾಯಕಟ್ಟೆಯಲ್ಲಿ ಚರ್ಚಿಸಿ ಎಲ್ಲರೂ ಇದೇ ಬೆಲೆಗೆ ಮಾರುವಂತೆ ಬೆಲೆ ನಿರ್ಧರಿಸುತ್ತಾನೆ. ಪುನಃ ವ್ಯಾಪಾರಸ್ಥರ ನಡುವೆ ಅನ್ಯೋನ್ಯತೆ ವೃದ್ಧಿಸುತ್ತದೆ. ಮೇದರ ಉತ್ಪನ್ನಗಳಿಗೂ ಹಾಗೂ ಗ್ರಾಹಕ ಸಂಸ್ಕೃತಿಗೂ ಅವಿನಾಭಾವ ಸಂಬಂಧವಿದೆ. ಸಮಾಜದ ಒಟ್ಟು ಆವರ್ತಗಳ ಮೇಲೆ ಮೇದರ ಉತ್ಪನ್ನಗಳು ಪ್ರಭಾವಿಸಿವೆ. ಇವರ ಉತ್ಪಾದನೆ

ಮತ್ತು ವಸ್ತುಗಳ ಮಾರಾಟ ದೇಶಿಯ ಸಂಸ್ಕೃತಿಯ ಉಳಿವಿಗಾಗಿ ನಡೆಸಿದ ಹೋರಾಟವಾಗಿದೆ. ಇವರ ವೃತ್ತಿಗೆ ಸಾಮಾಜಿಕ ಮನ್ನಣೆ ಮತ್ತು ಗೌರವ ಕೊಡಬೇಕಿದೆ. ಸಾಂಸ್ಕೃತಿಕ ಜೀವನಾಡಿಯಾದ ಈ ವೃತ್ತಿ ಪರಂಪರಾಗತ ನೆಲೆ ಹೊಂದಿದ್ದು ತಲೆಮಾರಿನಿಂದ ತಲೆಮಾರಿಗೆ ಸಾಗಬೇಕಾಗಿದೆ. ಇದರ ಬಳಕೆ ಮತ್ತು ಉಳಿಕೆ ಭಾರತೀಯ ಸಂಸ್ಕೃತಿ ಹಾಗೂ ಸಂಪ್ರದಾಯಿಕ ಕೃಷಿಯ ಮೇಲೆ ನಿಂತಿದೆ.

ಈ ರೀತಿ ಮೇದಾರಿಕೆ ಉತ್ಪನ್ನಗಳ ಮಾರಾಟ ಪ್ರಕ್ರಿಯೆಯಲ್ಲಿ ಹಲವಾರು ಒಳ-ಹೊರ ಕಾರಣಗಳಿದ್ದು ಮೇದರ ಮನೋಭಾವದಲ್ಲಿ ಇಂದಿನ ಸ್ಥಿತ್ಯಂತರಗಳಿಂದಾಗಿ ಮನೆ ಮಾಡಿರುವ ದುಗುಡ ಮಾತ್ರ ಸ್ಪಷ್ಟವಾಗಿದೆ.

'ಮೇದ'ರ ಮೂಲ ಕಸುಬು ಬಿದಿರು ಮತ್ತು ಬೊಂಬುಗಳಿಂದ ಕಲಾತ್ಮಕವಾದ ಉತ್ಪನ್ನಗಳನ್ನು ಮಾಡುವುದು. ಇವೇ ಜೀವನದ ಆಧಾರವಾಗಿವೆ. ಮೇದರು ತಯಾರಿಸುವ ಬಿದಿರಿನ ಉತ್ಪನ್ನಗಳು ಅನೇಕಾನೇಕ. ಹುಟ್ಟಿನಿಂದ-ಸಾವಿನವರೆಗಿನ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ ಇನ್ನಿತರ ಚಟುವಟಿಕೆಗಳಿಗೆ ಬಿದಿರಿನ ಉತ್ಪನ್ನಗಳನ್ನು ವಂಶ ಪಾರಂಪರ್ಯವಾಗಿ ಮಾಡಿಕೊಂಡು ಬರುತ್ತಿದ್ದಾರೆ. ಭಾರತೀಯ ಸಮಾಜದಲ್ಲಿ ವಾಸಮಾಡುತ್ತಿರುವ ಜನರ ಅಗತ್ಯ-ಅಭಿರುಚಿಗಳಿಗೆ ಅನುಗುಣವಾಗಿ ವೈವಿಧ್ಯಮಯ ಬುಟ್ಟಿ, ಕುಕ್ಕೆ, ಜಲ್ಲೆ, ತಟ್ಟಿ, ಕಣಜ, ಗೆರಸಿ, ಚಾಪೆ, ಮೂಲೆಕುಕ್ಕೆ, ಮೆಟ್ಟಕ್ಕಿ ಚಿಬ್ಬಲು, ಗೂಡೆ, ಗೋರು, ಗೊರಬು, ಸಿಂಬೆ, ಕೊಂಗ, ಸಾರಣಿಗೆ, ದರಗಿನ ಜಲ್ಲೆ, ಪಣತ, ಚಂದ್ರಿಕೆ, ರೇಷ್ಮೆ ತಟ್ಟೆ, ಗಿಲಗಚ್ಚಿ, ಮುಚ್ಚಲು, ತಲೆಕೂದಲು ಒಣಗಿಸೋ ಬುಟ್ಟಿ, ಟಮೋಟೊ ಬುಟ್ಟಿ, ಮಾವಿನ ಬುಟ್ಟಿ, ತರಕಾರಿ ಬುಟ್ಟಿ, ಹೂ ಬುಟ್ಟಿ, ವಿಭಜಕ (Partician), ರಸ್ತೆ ಬದಿಯ ತಾತ್ಕಾಲಿಕ ಶೆಡ್ಡಿಗೆ ಬೇಲಿ, ಬ್ಯಾಲೆನ್ಸಿಂಗ್ ರೂಫ್, ಸೀಲಿಂಗ್, ಬುಕ್ಕಣಿಗೆ, ಗಾಡಿಯ ಕಣಗೋಲು, ತಟ್ಟೆದೆಬ್ಬೆ ಬೇಲಿ, ಮೇರೆಕೋಲು, ಮನೆಯ ಚಾವಣಿಗೆ ಬಿದಿರು, ನೆರಕೆ ಗೋಡೆ ತಟ್ಟಿ ಇತ್ಯಾದಿ ಅನೇಕ ಉತ್ಪನ್ನಗಳು, ವಸ್ತುಗಳು ಮೇದರ ಕೈಯಿಂದ ಅರಳುತ್ತವೆ. ಮೇದಾರಿಕೆಯ ಕರಕೌಶಲ್ಯ ವಿಶಿಷ್ಟವಾದುದು. ಈ ಮೇದಾರಿಕೆಗೆ ಹಲವಾರು ರೀತಿಯ ಬಿದಿರುಗಳು ಬಳಕೆಯಾಗುತ್ತವೆ.

ಪ್ರಪಂಚದಲ್ಲಿ ಸುಮಾರು ೭೦೦ ಬಿದಿರಿನ ಪ್ರಭೇದಗಳಿವೆ. ಭಾರತದಲ್ಲಿ ಇಲ್ಲಿಯವರೆಗೆ ೧೩೬ ಪ್ರಭೇದಗಳನ್ನು ಗುರ್ತಿಸಲಾಗಿದೆ. ಕರ್ನಾಟಕದಲ್ಲಿ ಮಲೆನಾಡು ಮತ್ತು ಬೆಟ್ಟ-ಕಾಡುಗಳಿರುವ ಪ್ರದೇಶಗಳಲ್ಲಿ ಬಿದಿರು ಬೆಳೆಯುತ್ತದೆ. ಬಿದಿರಿನಲ್ಲಿ ಕಿರುಬಿದಿರು ಅತಿ ಮುಖ್ಯವಾದುದು. ಮೇದಾರಿಕೆಗೆ ಹೆಚ್ಚು ಬಳಕೆಯಾಗುವುದು. ಅದೇ ಪಶ್ಚಿಮ ಘಟ್ಟ ಸಾಲುಗಳಲ್ಲಿ ಮತ್ತು ಚಿಕ್ಕಮಗಳೂರು ಜಿಲ್ಲೆಯ ಮುತ್ತೋಡಿ, ಭದ್ರಾ ಅಭಯಾರಣ್ಯ, ಕುದುರೆಮುಖ ರಾಷ್ಟ್ರೀಯ ಉದ್ಯಾನವನ, ಅಳೇಹಳ್ಳಿ, ಕೂಸಗಲ್ಲು, ರಂಗನಾಥಸ್ವಾಮಿ ಬೆಟ್ಟ, ಪಾಪಯ್ಯನಗುಡ್ಡ, ಲನೇ ಮೈಲಿಕಲ್ಲು, ಎನ್ನಂಗಿ, ಬೆಳ್ಳಂಗಿ, ಸಾತ್‌ಕೋಳಿ ಮುಂತಾದೆಡೆ ಅತಿ ಹೆಚ್ಚು ಕಿರುಬಿದಿರಿನ

[illegible]

[illegible]

ಮೆಳೆಗಳಿವೆ. ೨೦-೨೫ ಮೀಟರ್ ಉದ್ದ, ೧೫ ಸೆಂಟಿಮೀಟರ್ ಸುತ್ತಳತೆ ಗಾತ್ರದ ಕಿರುಬಿದಿರು ಈ ಕಾಡುಗಳಲ್ಲಿ ಲಭ್ಯವಾಗುತ್ತದೆ. ಜೂನ್-ಜುಲೈನಲ್ಲಿ ಕಿರುಬಿದಿರಿನಿಂದ ಕಳಲೆ ಹೊರಟು ಡಿಸೆಂಬರ್, ಜನವರಿಯಲ್ಲಿ ಹದ ಬೆಳವಣಿಗೆಯಾದ ಈ ಬಿದಿರನ್ನು ಕಡಿದು, ಮೇದಾರಿಕೆಗೆ ಬಳಸಿಕೊಳ್ಳಬಹುದಾಗಿರುತ್ತದೆ. ಈ ಬಿದಿರಿನಂತೆ ಬರ್ಮಾ ಬಿದಿರು, ಹೆಬ್ಬಿದಿರು, ಸುವರ್ಣ ಬಿದಿರು, ಮೂಲಿ ಬಿದಿರು, ಗರಟೆ ಬಿದಿರು, ಸೀಬು, ವಾಟೆ, ಪನ್ನಂಗಿ ಇತ್ಯಾದಿ ಬಿದಿರುಗಳೂ ಲಭ್ಯವಿದ್ದು ಮಲೆನಾಡಿನಲ್ಲಿ ಮುಳ್ಳು ಜಾಸ್ತಿಯಿರದ ಕಿರುಬಿದಿರು ಹಾಗೂ ಪನ್ನಂಗಿ (ಗಣ್ಣಿನ ಬಳಿ ಪಟ್ಟೆಯಿರುವ) ಗಳಗಳನ್ನು ಎತೇಚ್ಚವಾಗಿ ಬಳಸುತ್ತಾರೆ.

ಚಿಕ್ಕಮಗಳೂರು, ಮೂಡಿಗೆರೆ, ತರೀಕೆರೆಗಳಲ್ಲಿ ಮುಳ್ಳು ಹೆಚ್ಚಿರುವ ಹೆಬ್ಬಿದರನ್ನು ಬಳಸುತ್ತಾರೆ. ಇದರಲ್ಲಿ ಏಣಿ, ಕೃಷಿ, ಮನೆ ಕಟ್ಟಲು ಹೆಚ್ಚಾಗಿ ಬಳಕೆಯಾಗುತ್ತದೆ. ಇದು ಕಿರು ಬಿದಿರಿಗಿಂತ ಗಡುಸಾಗಿರುವುದರಿಂದ ಮೃದು ಮತ್ತು ನಯ ಕೆಲಸಕ್ಕೆ ಸೂಕ್ತವೆನಿಸದು. ಗರಟೆ ಮತ್ತು ಸೀಬನ್ನು ಕೆಲವೇ ಕೆಲಸಗಳಿಗೆ ಬಳಸುವರು. ಗಾಡಿಯ ಕಣಗೆಗೆ ಹಾಗೂ ಏಣಿ ಕಾಲಿಗೆ ಗರಟೆ ಬಳಕೆಯಾಗುವುದು. ಸೀಬನ್ನು ಸಾಮಾನ್ಯವಾಗಿ ರೇಷ್ಮೆ ಚಂದ್ರಿಕೆಯ ಸುತ್ತಲು ಪಟ್ಟಿಕಟ್ಟಲು, ಏಣಿ ಕಾಲು ತಯಾರಿಸಲು ಬಳಸುತ್ತಾರೆ. ರೈತರು ತಮ್ಮ ಹೊಲಗಳಿಗೆ ಗರಟೆ ಮತ್ತು ಸೀಬನ್ನು ಬಳಸುತ್ತಾರೆ. ಇವುಗಳ ಬಿದಿರಿನ ಸೊಪ್ಪು ಆನೆ, ಜಿಂಕೆ, ಸಾರಂಗಗಳಿಗೆ ಅಮೃತ ಸಮಾನವಾದುದು. ಇಷ್ಟೇ ಅಲ್ಲದೆ ಅಲೋಕೇರಿಯ ಬಿದಿರು, ಇಬ್ಬಿದಿರು, ಅರಕೇರಿಯಾ, ಬಿಡ್ವಿಲಿಯ್ಯೆ ಮತ್ತು ಅರಕೇರಿಯಾ ಎಕ್ಸೆಲ್ಸ, ಪಿಲ್ಲೋ ಸ್ಟೆಯಲ್, ಓಕ್ಸಿಟೆನಾಂನ್ತಿಸ್ಟಾಕ್ಸಿ ಬಿದಿರುಗಳು ಕರ್ನಾಟಕದಲ್ಲಿ ಕಂಡುಬರುತ್ತದೆ. ಇಷ್ಟೆಲ್ಲಾ ಪ್ರಭೇದದ ಬಿದಿರುಗಳು ಕಂಡು ಬಂದರೂ ಬಳಕೆದಾರರಿಗೆ ಸಾಕಾಗುವಷ್ಟು ಬಿದಿರು ಪೂರೈಕೆಯಾಗುತ್ತಿಲ್ಲ.

ಕರ್ನಾಟಕ ರಾಜ್ಯದಲ್ಲಿ ವಾಸಮಾಡುತ್ತಿರುವ ಮೇದರು ತಮ್ಮ ಕುಲಕಸುಬಿಗಾಗಿ ಬಿದಿರನ್ನು ಲಭ್ಯವಿರುವ ಕಡೆಯಿಂದ ತರಿಸಿಕೊಳ್ಳುವರು. ಸಾಮಾನ್ಯವಾಗಿ ಉತ್ತರ ಕರ್ನಾಟಕದ ದಾಂಡೇಲಿ, ಸಿರಸಿ, ಹಳಿಯಾಳ, ಮಹಾರಾಷ್ಟ್ರದ ಅಂಚಿನ ಕಾಡುಗಳು, ಆಂಧ್ರಪ್ರದೇಶ, ಶಿವಮೊಗ್ಗ, ಭದ್ರಾವತಿ, ಸಾಗರ, ಯಲ್ಲಾಪುರ, ಕಾರವಾರ, ಭದ್ರಾ ಅಭಯಾರಣ್ಯಕ್ಕೆ ಹೊಂದಿಕೊಂಡಂತಿರುವ ಅಳೇಹಳ್ಳಿ, ಮುತ್ತೋಡಿ, ಲನೇ ಮೈಲೀಕಲ್ಲು, ಎನ್ನಂಗಿ, ಬೆಳ್ಳಂಗಿ ಇತ್ಯಾದಿ ಕಾಡುಗಳಿಂದ ಬಯಲು ಸೀಮೆಯಲ್ಲಿ ನೆಲೆಗೊಂಡಿರುವ ಮೇದರಿಗೆ ಬಹಳ ಸಮೃದ್ಧವಾಗಿ ಬಿದಿರಿನ ಪೂರೈಕೆಯಾಗುತ್ತಿತ್ತು. ಪಶ್ಚಿಮ ಘಟ್ಟ ಶ್ರೇಣಿಗೆ ಆತುಕೊಂಡಿರುವ ಮಲೆನಾಡಿಗರು ಕಾಡಿನಿಂದ ತಾವೇ ಸ್ವತಃ ಕಡಿದು ಪರವಾನಿಗೆಯೊಂದಿಗೆ ಬಿದಿರು ತರುತ್ತಿದ್ದರು. ಈಗ ಸ್ಥಳೀಯ ಗ್ರಾಮ ಅರಣ್ಯ ಸಮಿತಿಯವರು ಬಿದಿರನ್ನು ಹೊತ್ತು ತರುವವರಿಗೆ ಅವಕಾಶವೇ ನೀಡುತ್ತಿಲ್ಲ. ಮೇದರು ಅಮವಾಸ್ಯೆ, ಶನಿವಾರ ಹಾಗೆಯೇ ದೇವಿಯ ಜಾತ್ರೆ, ಯಳಬಿ ಕಾಲದಲ್ಲಿ ಬಿದಿರು-ಬೊಂಬುಗಳನ್ನು ಕತ್ತರಿಸುವುದಿಲ್ಲ ತಮ್ಮ ಕುಲಕಸುಬಿಗೆ ಬೇಕಾದ ಬಿದಿರು ಚುನಾಯಿಸುವುದರಲ್ಲಿ

ಕಾಡಿಗೆ ಸಮೀಪವಿರುವ ಮೇದರು ಸಿದ್ದ ಹಸ್ತರು. ಹೊಸ ಬಿದಿರನ್ನೇ ಆಯ್ಕೆ ಮಾಡಿಕೊಳ್ಳುವರು. ಸಾಮಾನ್ಯವಾಗಿ ಹೊಸ ಬಿದಿರು, ಮೇದಾರಿಕೆಗೆ ಅನುಕೂಲ, ಬಿದಿರು ಮೆಳೆಯ ಹೊರಬುಡದಿಂದ ಬೆಳೆದಿರುವುದರಿಂದ ಇವುಗಳನ್ನು ಕಡಿಯಲೂ ಸುಲಭ ಹಾಗೂ ಬಿದಿರು ಮೆಳೆಗೆ ಘಾಸಿಯೂ ಆಗುವುದಿಲ್ಲ. ಅಲ್ಲದೆ ಬಿದಿರು ಮೆಳೆಯನ್ನು ಕಡಿಯುವುದಾಗಲಿ, ಅನಗತ್ಯವಾಗಿ ಬೇಡವಾದ ಬಿದಿರನ್ನು ಕಡಿದು ಹಾಕುವುದಾಗಲಿ ಮೇದರಲ್ಲಿ ನಿಷಿದ್ಧ. ನರಸಿಂಹರಾಜಪುರ, ತರೀಕೆರೆ, ಲಕ್ಕವಳ್ಳಿ, ಆಲ್ದೂರಿನ ಮೇದರು ಎತ್ತಿನ ಗಾಡಿಯಲ್ಲಿ ಬಿದಿರನ್ನು ತರುತ್ತಿದ್ದರು. ಪರವಾನಿಗಿ ಸಿಗದಿದ್ದಾಗ ಅರಣ್ಯ ಇಲಾಖೆಯವರ ಕಣ್ಣು ತಪ್ಪಿಸಿ ಹೊತ್ತುಕೊಂಡು ಬರುತ್ತಾರೆ. ಇಲಾಖೆಯಿಂದ ಪರವಾನಿಗೆ ಮಂಜೂರಾತಿಗೆ ಅನೇಕ ಸಲ ತಿರುಗಾಡಿದರೂ ಈ 'ಸೀಸನ್'ನಲ್ಲಿ ಬಿದಿರು ಕಡಿಯುವ ಹಾಗಿಲ್ಲ. 'ಪರ್ಮಿಟ್' ಕೊಡಲಾಗುವುದಿಲ್ಲವೆಂದು ತಿಳಿಸುತ್ತಾರೆ. ಅಂದರೆ ಅವರ ದೃಷ್ಟಿಯಲ್ಲಿ ಮೇದಾರಿಕೆ 'ಸೀಸನಲ್ ಆಕ್ಯುಪೇಶನ್'. ಹಾಗಂತ ಪರ್ಮಿಟ್ ಕೊಟ್ಟಾಗ ತಿಂಗಳುಗಟ್ಟಲೆ ಇಲ್ಲವೇ ವರ್ಷಕ್ಕಾಗುವಷ್ಟು ಒಂದೇ ಬಾರಿ ದಾಸ್ತಾನು ಮಾಡಿಕೊಳ್ಳಲೂ ಬರುವುದಿಲ್ಲ. ಇದು ಸಾಧ್ಯವಿಲ್ಲದ, ಸಾಧೂವು ಅಲ್ಲದ ಮಾತು. ಪರವಾನಿಗೆ ಪಡೆದು ಕೆಲವೊಮ್ಮೆ 'ಪುಕ್ಕಟ್ಟೆಯೂ' ಕೆಲವೊಮ್ಮೆ 'ನಿಗಧಿತ ದರ'ವನ್ನು ಇಲಾಖೆಗೆ ಸಂದಾಯಿಸಬೇಕು.

ಇತ್ತೀಚಿಗೆ ಲಾರಿಯಲ್ಲಿ ಗಳಗಳನ್ನು ತರುತ್ತಾರೆ. (ಛಾಯಾಚಿತ್ರವನ್ನು ಲಗತ್ತಿಸಲಾಗಿದೆ) ಮೇದರೆಲ್ಲರೂ ಒಟ್ಟಿಗೇ ಒಂದೆರಡು ದಿನಗಳಲ್ಲಿ ಬಿದಿರನ್ನು ಕಡಿದು ಬಿದಿರಿಗೆ ಗುರ್ತುಮಾಡುತ್ತಾರೆ. ಅಂದರೆ ಚಿಟ್ಟೆಯನ್ನು ಬುಡಸಮೇತ ಸಪಾಯಿಯಾಗಿ ಕಡಿಯುವುದು, ಚಿಟ್ಟೆ(ಬಿದಿರಿನ ಮೆಳೆಯಿಂದ ಕಡಿದ ಬಿದಿರಿನ ಆರಂಭದ ಭಾಗ)ಯನ್ನು ಅರ್ಧ ಕಡಿದು ಸೀಳುವುದು. ಮೊದಲ ಗಣ್ಣಿಗೆ ೧ ಗೆರೆ, ೨ ಗೆರೆ, ೩ ಗೆರೆ, ೪ ಗೆರೆ, ಇಲ್ಲವೆ ೨ನೇ, ೩ನೇ, ೪ನೇ ಗಣ್ಣಿಗೆ ಈ ರೀತಿ ಗೆರೆ ಹಾಕುವುದು ಚಿಟ್ಟೆಯ ಹೊರಭಾಗಕ್ಕೋ, ಒಳಭಾಗಕ್ಕೋ ಅಥವ ಒಳ ಹೊರ ಭಾಗಕ್ಕೋ ಅರ್ಧಕಚ್ಚು ಮಾಡುವುದು.

ಈ ರೀತಿಯ ಗುರ್ತುಗಳನ್ನು ಮಾಡಿ ಲಾರಿಗೆ ಒಟ್ಟಿಗೇ ತುಂಬಿ ನಂತರ ಮೇದರ ಕೇರಿಗೆ ಅದನ್ನು ತಂದಾಗ ಮೇದ ಕುಟುಂಬಗಳಿಗೆ ಆಗುವ ಆನಂದ ಅಪರಿಮಿತ. ಕುಣಿದು-ಕುಪ್ಪಳಿಸುತ್ತಾರೆ. ಬಿದಿರನ್ನು ಲಾರಿಯಿಂದ ಉರುಳಿಸುವಾಗ 'ಇದು ನಂದು-ಅದು ನಿಂದು ಎಂದು ಪಿಸುಗುಡುತ್ತಿರುತ್ತಾರೆ. ನಂತರ ಅವರವರ ಪಾಲಿನ ಗಳುಗಳನ್ನು ಅವರವರ ಮನೆಯ ಮುಂದೆ ಹಾಕಿರಬೇಕು. ಅದರ ನಿರ್ವಹಣೆ ಹೊತ್ತ ಮೇದ ಮುಖಂಡರು ಎಷ್ಟು ಕಡಿದಿದ್ದಾರೆ, ಇವರ ಬಿದಿರಿನ ಪಾಲಲ್ಲಿ ಹೆಚ್ಚುವರಿಯಿದ್ದಲ್ಲಿ ತೆಗೆಯುತ್ತಾರೆ ಇಲ್ಲವೇ ಹೆಚ್ಚುವರಿ ಹಣವನ್ನು ವಸೂಲು ಮಾಡುತ್ತಾರೆ. ಮೇದರ ಕೇರಿಯಲ್ಲಿ ಮೇದಾರಿಕೆಯನ್ನು ಮಾಡಿಯೇ ಹೊಟ್ಟೆ ಹೊರೆಯಬಹುದಾದ ವಯೋವೃದ್ಧರು, ವಿಧವೆಯರು, ಅಂಗವಿಕಲರಿಗೆ ಸಮೂಹದಿಂದಲೇ

ಒಂದೊಂದು ಗಳುವನ್ನು ನೀಡುವರು. 'ಸಮಪಾಲು–ಸಮಬಾಳ್ವೆ'ಯ ಬದುಕನ್ನೇ ಹಿಂದಿನಿಂದ ಆಚರಿಸಿದ ಮೇದರು ಇವರು ಇಂದಿಗೂ ಅದೇ ಸಂಪ್ರದಾಯವನ್ನು ಹೊಂದಿದ್ದಾರೆ. ಮೇ ತಿಂಗಳಲ್ಲಿ, ಜನವರಿ–ಫೆಬ್ರವರಿ ತಿಂಗಳಲ್ಲಿ ಅರಣ್ಯ ಇಲಾಖೆಯವರು ಬಿದಿರು ಕೊಡುವುದು ಏನೇನು ಸಾಲದು ಎಂದು ಗೋಳಿಡುತ್ತಾರೆ. ಆದ್ದರಿಂದ ನಮ್ಮ ಕೈ ಕೆಲಸ ನಡೆದರೇ ಹೊರತು ಹೊಟ್ಟೆ ತುಂಬುವುದು ಆ ಕಾರಣಕ್ಕಾಗಿ ಬಿದಿರನ್ನು ಹೊತ್ತು ತರುತ್ತೇವೆಂದು ತಿಳಿಸುತ್ತಾರೆ.

ಕಾಡು, ಸರಕಾರದ ವಶವಾಗಿ ಕಾಡಿನ ಸಹಜ ಉತ್ಪನ್ನ ವಸ್ತುಗಳು ಸರ್ಕಾರದ ಅಧೀನಕ್ಕೆ ಒಳಪಟ್ಟವು. ಅಂದಿನಿಂದ ಕಾಡಿನಲ್ಲಿ ಬೆಳೆಯುವ ಬಿದಿರನ್ನು ಕಾನೂನು ಪ್ರಕಾರ ಕಟಾವು ಮಾಡಿ 'ಮೇದರ ಸಂಘ'ಕ್ಕೆ ರಿಯಾಯಿತಿ ದರದಲ್ಲಿ ವಿತರಿಸುವರು. ದೂರದೂರಿನ ಮೇದರು ಇಲ್ಲವೆ ಮೇದರಲ್ಲದ ಮಧ್ಯವರ್ತಿಗಳು ಇಲಾಖೆಯೊಂದಿಗೆ ಸಖ್ಯ ಬೆಳೆಸಿ ಪರವಾನಿಗಿಯ ಬಿದಿರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಿ ಹೆಚ್ಚು ಲಾಭ ಮಾಡಿಕೊಳ್ಳುವರು. ಒಂದು ಕುಟುಂಬಕ್ಕೆ ದಿನವೊಂದಕ್ಕೆ ಕನಿಷ್ಠ ಮೂರು ಬಿದಿರು ಬಳಕೆಯಾಗುತ್ತದೆ. ತಿಂಗಳಿಗೆ ೧೦೦ ಬಿದಿರು ಬೇಕಾಗುವುದು. ಮೇದಾರಿಕೆಯನ್ನು ಅವಲಂಬಿಸಿರುವ ರಾಜ್ಯದ ಮೇದ ಕುಟುಂಬಗಳಿಗೆ ತಿಂಗಳೊಂದಕ್ಕೆ ೧೦ ಲಕ್ಷ ಬಿದಿರು ಬೇಕಾಗುವುದು ಎಂದು ಮೇದ ಜನರನ್ನು ಅಧ್ಯಯಿಸುತ್ತಿರುವ ಹಾಗೂ ಸಾಮಾಜಿಕ ಕಾರ್ಯಕರ್ತರಾದ ಮಹೇಶ್ ಶೆಟ್ಟಿಕೊಪ್ಪ ಇವರು ಮಾಹಿತಿ ನೀಡುತ್ತಾರೆ. ವರ್ಷದ ಕೆಲವು ಋತುಮಾನಗಳಲ್ಲಿ ಮಾತ್ರ ಬೆಳೆಯುವ ಬಿದಿರು ವರ್ಷವಿಡೀ ಬಳಕೆಯಾಗುವ ಬಿದಿರು ಇವುಗಳ ನಡುವೆ ಉತ್ಪಾದನೆ, ಬೇಡಿಕೆ ಮತ್ತು ಪೂರೈಕೆಯಲ್ಲಿ ಅಸಮಾನತೆಯಿದೆ.

ಕಚ್ಚಾ ಬಿದಿರಿನ ಲಭ್ಯತೆ, ಪೂರೈಕೆ ಒಂದು ಸಮಸ್ಯೆಯಾದರೆ ಹಣಕಾಸಿನ ಸಮಸ್ಯೆ ಇನ್ನೊಂದು ಸಮಸ್ಯೆ. ಸರ್ಕಾರದಿಂದ ಬಿದಿರನ್ನು ಮೇದರ ಸಹಕಾರ ಸಂಘಗಳ ಮೂಲಕ ವಿತರಿಸಬೇಕು. ಇದಕ್ಕಾಗಿ 'ಮೇದ ಸಹಕಾರ ಸಂಘ'ಗಳು ನೋಂದಣಿಯಾಗಬೇಕು. ಸರಿ, ಅನೇಕ ಮನೆಗಳಿಂದ ಕೂಡಿದ ಪ್ರದೇಶದಲ್ಲಿ ಇದು ಸಾಧ್ಯವಾಗುವುದಾದರೆ, ಚದುರಿರುವ ಮೇದರ ಕುಟುಂಬಗಳದು ಮತ್ತೊಂದು ಸಮಸ್ಯೆ. 'ಮೇದರ ಸಹಕಾರ ಸಂಘ' ಸ್ಥಾಪನೆಯೇನೋ ಆಯಿತು, ಆದರೆ ಪರವಾನಿಗೆ ನೀಡದೆ ಅನೇಕಾನೇಕ ಸಬೂಬುಗಳನ್ನು ಹೇಳುತ್ತ ಸರ್ಕಾರ ಮುಂದೂಡಿದರೆ ಇಲಾಖೆಯನ್ನು ಸಂಪರ್ಕಿಸಿ ಬೇಸತ್ತ ಮೇದರು ಇತ್ತ ಸಂಘದ ನವೀಕರಣ ಮಾಡದೆ ಸ್ಥಗಿತವಾಗುವುದು. ಇತ್ತ ಬಿದಿರನ್ನು ಕೊಡುತ್ತೇವೆ ಸಹಕಾರ ಸಂಘದ ದಾಖಲೆ ತನ್ನಿ ಎಂದರೆ ಪೇಚಾಟ. ಇಂತಹ ಮುಸುಕಿನ ಗುದ್ದಾಟದಲ್ಲಿ ಬಲಿಪಶುವಾಗುವರು ಬಡ ಮೇದರು. ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲೂಕಿನ ದುರ್ವಿಗೆರೆ ಗ್ರಾಮದಲ್ಲಿ ನೆಲೆಸಿರುವ ಸುಮಾರು ೪೦ ಮೇದ ಕುಟುಂಬಗಳು ಉಬ್ರಾಣಿ ಸಂರಕ್ಷಿತ

[illegible]

ಅರಣ್ಯದಿಂದ ಪ್ರತಿ ಸೋಮವಾರದಂದು ಬಿದಿರನ್ನು ಹೊತ್ತು ತರಲು ಅನುಮತಿಸಿದ್ದಾರೆ. ಅಲ್ಲಿಯೂ 'ಸಹಕಾರ ತತ್ವ'ದ ಅಡಿಯಲ್ಲಿ ನಿಯಮಿತ ಹಣ ಸಂದಾಯಿಸಬೇಕು. ಈ ರೀತಿಯ ಅನುಕೂಲ ಎಲ್ಲಾ ಕಡೆಯ ಮೇದರಿಗಿದ್ದರೆ ಸರ್ಕಾರದೊಂದಿಗೆ ಮುಖಾಮುಖಿಯಾಗುವ ಪ್ರಶ್ನೆಯೇ ಒದಗದು.

ಸುಮಾರು ೩೫–೪೦ ವರ್ಷಗಳಿಗೊಮ್ಮೆ ಬಿದಿರು ಹೂಬಿಟ್ಟು (Sporadic) ಕ್ರಮೇಣ ಎಲ್ಲಾ ಕಡೆ ಗಾಳಿ ಪ್ರಸರಣದಿಂದಲೇ ಹರಡಿ, ಎಲ್ಲೆಲ್ಲಿ ಬಿದಿರು ಮೆಳೆಗಳಿವೆಯೋ ಅಲ್ಲೆಲ್ಲ ಬಿದಿರು ಹೂ ಬಿಡುತ್ತದೆ (Gregarious flowering). ಕ್ರಮೇಣ ಬೀಜಗಳಾಗಿ ಸಿಡಿದು ಹಸಿರಿನಿಂದ ನಳನಳಿಸುತ್ತಿದ್ದ ಬಿದಿರು, ಕ್ರಮೇಣ ಹಳದಿ ಬಣ್ಣಕ್ಕೆ ತಿರುಗಿ ಕಟ್ಟೆ ರೋಗದಿಂದ ಮೆಳೆಗಳು ಸಾಯುತ್ತವೆ. ಈ ರೀತಿಯ ನೈಸರ್ಗಿಕ ಪ್ರಕ್ರಿಯೆಯನ್ನು ಮೇದರು 'ಬರಗಾಲದ ಸೂಚನೆ' ಎಂದು ಭಾವಿಸುವರು. ನಿಜ ಅರ್ಥದಲ್ಲಿ ಅವರ ಬದುಕಿಗೆ ಇದು "ಬರಗಾಲವೇ"! ೫೦–೬೦ ವರ್ಷಗಳ ಹಿಂದೆ ನೈಸರ್ಗಿಕ ವಿಕೋಪದಿಂದ ಬರಗಾಲ ಬಂದಿತ್ತು. ಮಳೆ ಸರಿಯಾಗಿ ಬರಲಿಲ್ಲ. ಹೊಲ ಉತ್ತಲಿಲ್ಲ, ಬಿತ್ತಲಿಲ್ಲ. ಕಾಯಿಲೆ–ಕಸಾಲೆ, ಸಾವು–ನೋವು ವಿಪರೀತವಾಗಿತ್ತು. ಆಗ ನಮ್ಮನ್ನು ಉಳಿಸಿದವಳೇ 'ಬಿದಿರಮ್ಮ' ಎನ್ನುತ್ತಾರೆ ಲಕ್ಕವಳ್ಳಿಯ ಮೇದರು. ಮೇದರು ಮತ್ತಿನ್ನಿತರ ಜನಾಂಗದವರು. ಬಿದಿರ ಹೂ ಬಿಟ್ಟ ಮೆಳೆಗಳ ಕೆಳಗೆ ಸ್ವಚ್ಛಗೊಳಿಸಿ ಸಗಣಿಯಿಂದ ಸಾರಿಸಿ, ಮೆಳೆಗಳನ್ನು ಕೊಕ್ಕೆಗಳಿಂದ ಅಲುಗಿಸಿದಾಗ ಬೀಳುವ ಬಿದಿರಕ್ಕಿಯನ್ನು ಒಟ್ಟುಗೂಡಿಸಿ, ಹಸನುಗೊಳಿಸಿ ಬಳಸುತ್ತಿದ್ದೆವು ಎಂದು ೯೮ ವರ್ಷದ ಲಕ್ಕವಳ್ಳಿಯ ವಯೋವೃದ್ಧೆ ರಾಮಮ್ಮ ಸಿದ್ಧಪ್ಪ ತಿಳಿಸುತ್ತಾರೆ.

ಈ ರೀತಿ ನೈಸರ್ಗಿಕ ವಿಪತ್ತು, ಮೇದರ ಬದುಕಿನ ಬರಸಿಡಿಲು ಬಡಿದಂತಾಗಿ ಮೇದರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ ವಿಪತ್ತುಗಳೆಲ್ಲವೂ ಒಟ್ಟೊಟ್ಟಿಗೆ ಸಂಭವಿಸುವುದನ್ನು ಕ್ಷೇತ್ರಕಾರ್ಯದ ದಿನಗಳಲ್ಲಿ ಅನುಭವಕ್ಕೆ ಬಂದಿದೆ. ಕಾರಣ ನನ್ನ ಕ್ಷೇತ್ರಕಾರ್ಯ ದಿನಗಳಲ್ಲೇ ಚಿಕ್ಕಮಗಳೂರು ಜಿಲ್ಲೆಯಾದ್ಯಂತ 'ಬಿದಿರುಕಟ್ಟೆ'ಯಿಂದ ಮೇದರು ತತ್ತರಿಸಿದ್ದರು. ಇದರ ಪ್ರಭಾವ ಕೇವಲ ಚಿಕ್ಕಮಗಳೂರು ಜಿಲ್ಲೆಗಷ್ಟೇ ಅಲ್ಲ, ಇಲ್ಲಿಂದ ಸರಬರಾಜಾಗುತ್ತಿದ್ದ ಕರ್ನಾಟಕದ ಮೇದರಿಗೂ ಇದರ ಬಿಸಿತಟ್ಟಿದೆ. ಇಡೀ ಕಾಡಿನಲ್ಲಿ ಎಲ್ಲಿಯೋ ಅಲ್ಲೊಂದು, ಇಲ್ಲೊಂದು ಬಿದಿರು ಮೆಳೆ ಉಳಿದುಕೊಂಡರೆ ಅದಕ್ಕೆ ಮೇದರು ಮತ್ತು ಕಾಡು ಪ್ರಾಣಿಗಳು ಪಾಲುದಾರರು.

ಒಟ್ಟಾರೆ ಮೇದರು ತಮ್ಮ ಕುಲಕಸುಬಾದ ಮೇದಾರಿಕೆಗೆ ಬೇಕಾದ ಕಚ್ಚಾವಸ್ತುವಿನ ಅಲಭ್ಯತೆಯಿಂದ ಹಾಗೂ ಮಾರುಕಟ್ಟೆ ಸಮಸ್ಯೆಯಿಂದ ಹೊಟ್ಟೆ ಹೊರೆಯಲಾರದೆ ವೃತ್ತಿಯನ್ನು ಬಿಡಲಾರದೆ, ವೃತ್ತಿಯನ್ನು ಅಪ್ಪಲಾರದ ಗೊಂದಲ ಸ್ಥಿತಿಯಲ್ಲಿದ್ದಾರೆ. ಸರ್ಕಾರವಾದರೂ ಬಿದಿರಿನ ಲಭ್ಯವಿರುವೆಡೆಯಿಂದ ಅವುಗಳನ್ನು ಶೇಖರಿಸಿ, ತಲಾವಾರು ವಿತರಣೆಯನ್ನು ಸಮರ್ಪಕಗೊಳಿಸಿದರೆ ಹಾಗೂ ನಿರುಪದ್ರವ ಜೀವಿಗಳಾದ ಮೇದರು ತಮ್ಮ ವೃತ್ತಿ ಕಸುಬಿಗಷ್ಟೇ ಹೊತ್ತು ತರುವ

ಬಿದಿರಿಗೆ ಯಾವ ನಿಬಂಧನೆಯನ್ನು ಹೇರದೆ ತೆರಿಗೆ ಹಾಕದೆ ಮುಕ್ತಗೊಳಿಸಿದರೆ 'ಸಾಂಸ್ಕೃತಿಕ ಮುಖ' ಹೊಂದಿರುವ ಮೇದಾರಿಕೆಯ ಪಳಿಯುಳಿಕೆಗಳು ಮುಂದಿನ ತಲೆಮಾರಿಗೆ ಸಾಗಹಾಕಲ್ಪಡುತ್ತದೆ.

೪.೨ ಮೀಸಲಾತಿ ಹಾಗೂ ಮೇದ ಬುಡಕಟ್ಟು

ಆದಿವಾಸಿ ಕಲ್ಯಾಣದ ಬಗ್ಗೆ ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟೀಷರು ಚಿಂತಿಸಿದ್ದರು. ಆದಿವಾಸಿಗಳನ್ನು ಪ್ರತ್ಯೇಕವಾಗಿರಸಬೇಕೇ? ಅಥವಾ ಉಳಿದ ಸಮೂಹಗಳೊಂದಿಗೆ ಸ್ವಾಂಗೀಕರಣಗೊಳಿಸಬೇಕೆ? ಎನ್ನುವ ವಿಷಯಗಳನ್ನು ಕುರಿತಂತೆ ಹೆಚ್ಚು ಚರ್ಚೆಗಳಾಗುತ್ತಿದ್ದವೇ ಹೊರತು ಪುನರ್ವಸತೀಕರಣ ಅಥವಾ ಏಕೀಕರಣದ ಬಗ್ಗೆ ಚಿಂತನೆಗಳು ಹರಿಸಿರಲಿಲ್ಲವೆನ್ನಬಹುದು. 'ಪರೋಕ್ಷ ಆಳ್ವಿಕೆಯ ನೀತಿ'ಯನ್ವಯ ಆದಿವಾಸಿಗಳು ತಮ್ಮ ಸಾಂಪ್ರದಾಯಿಕ ಜೀವನ ಶೈಲಿಯಿಂದ ಯಾವುದೇ ಆತಂಕವಿಲ್ಲದೇ ಜೀವನ ನಡೆಸಲು ಈ ನೀತಿ ಉದ್ದೇಶಿಸಿತ್ತು. ೧೮೭೦ರ ಭಾರತ ಸರ್ಕಾರ ಕಾಯ್ದೆ ಕೆಲವು ಪ್ರದೇಶಗಳನ್ನು "ಪರಿಶಿಷ್ಟ ಪ್ರದೇಶ"ಗಳೆಂದು ಗುರ್ತಿಸಿತು. ೧೮೭೪ರಲ್ಲಿ "ಪರಿಶಿಷ್ಟ ಜಿಲ್ಲಾ ಕಾಯ್ದೆ" ಜಾರಿಗೊಂಡಿತು. ೧೯೧೯ರ ಭಾರತ ಸರ್ಕಾರ ಕಾಯ್ದೆಯು ಪರಿಶಿಷ್ಟ ಪ್ರದೇಶ ಹಾಗೂ ಜಿಲ್ಲೆಗಳನ್ನು "ಹಿಂದುಳಿದ ಪ್ರದೇಶ"ಗಳೆಂದು ಪುನರುಚ್ಛಿಸಿತು. '೧೯೩೫ರ ಭಾರತ ಸರ್ಕಾರದ ಕಾಯ್ದೆ' ಜಾರಿಗೊಳಿಸುವವರೆಗೂ ಆದಿವಾಸಿಗಳಿಗೆ 'ವಿಶೇಷ ರಕ್ಷಣೆ ನೀಡುವ' ಸರ್ಕಾರದ ನೀತಿಯನ್ನು ಮುಂದುವರಿಸಲಾಯಿತು. ೧೯೩೫ರ ಕಾಯ್ದೆಯಂತೆ ಆದಿವಾಸಿ ಪ್ರದೇಶಗಳನ್ನು ಹೊರತುಪಡಿಸಿದ ಪ್ರದೇಶ ಹಾಗೂ ಪಾಕ್ಷಿಕವಾಗಿ ಹೊರತುಪಡಿಸಿದ ಪ್ರದೇಶಗಳೆಂದು ವರ್ಗೀಕರಿಸಿತು. ಈ ಕಾಯ್ದೆಯಂತೆ ರಾಜ್ಯಗಳಿಗೆ ಸ್ವಯಮಾಧಿಕಾರವನ್ನು ನೀಡಲಾಗಿತ್ತು.

ಪ್ರಾಂತಗಳ ರಾಜ್ಯಪಾಲ ನೇರವಾಗಿ 'ಹೊರತು ಪಡಿಸಿದ ಪ್ರದೇಶ'ಗಳಿಗೆ ಸಂಬಂಧಿಸಿದಂತೆ ನೇರ ನಿರ್ಣಯ ತೆಗೆದುಕೊಳ್ಳಬಹುದಾಗಿತ್ತು. 'ಪಾಕ್ಷಿಕವಾಗಿ ಹೊರತು ಪಡಿಸಿದ ಪ್ರದೇಶ'ಗಳಲ್ಲಿ ಮಾತ್ರ ಅವರು ಪ್ರಾಂತದ ಮಂತ್ರಿ ಮಂಡಲದ ಸಲಹೆ ಪಡೆದು ಆದಿವಾಸಿಗಳ ಕಲ್ಯಾಣದಲ್ಲಿ ತೊಡಗಬಹುದಾಗಿತ್ತು. ವಾಸ್ತವಿಕವಾಗಿ ಅವರನ್ನು ಪ್ರತ್ಯೇಕವಾಗಿರಿಸಿದ್ದರಿಂದ ಅವರ ಬೆಳವಣಿಗೆಯು ಕುಂಠಿತವಾಗಿ ಅವರು ಜಡವಾಗಿರುವಂತೆ ಮಾಡಿದ್ದಲ್ಲದೆ, ವಿಕಾಸಗೊಳ್ಳತೊಡಗಿದ್ದ ಅವರ ಸಾಂಸ್ಕೃತಿಕ ಸಮ್ಮಿಶ್ರಣದ ಪ್ರಕ್ರಿಯೆಗೆ ತಡೆಯನ್ನೊಡ್ಡಿದಂತಾಯಿತು. ಆದಿವಾಸಿ ಕಲ್ಯಾಣದ ಬಗ್ಗೆ ಮೂರು ಮುಖ್ಯ ದೃಷ್ಟಿಕೋನಗಳಿವೆ. ಪ್ರತ್ಯೇಕತೆಯ ನೀತಿ, ಸ್ವಾಂಗೀಕರಣದ ನೀತಿ ಮತ್ತು ಏಕೀಕರಣದ ನೀತಿ.

ಪ್ರತ್ಯೇಕತೆಯ ನೀತಿಯನ್ನು ಡಾ. ವೆರಿಯರ್ ಎಲ್ವಿನ್ ಮತ್ತು ಹಟ್ಟನ್ ಪುಷ್ಟಿಕರಿಸಿದರು. ಆದಿವಾಸಿಗಳನ್ನು ಇತರ ನಾಗರಿಕ ಜನತೆಯಿಂದ ಪ್ರತ್ಯೇಕವಾಗಿರುಸುವುದರಿಂದಲೇ ಅವರ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವುದು ಸಾಧ್ಯ. ಆದಿ ಪ್ರದೇಶಗಳನ್ನು 'ಮೀಸಲು

[illegible]

ಪ್ರದೇಶ' ('Reserved Areas') ಎಂದು ಘೋಷಿಸಬೇಕೆಂದರು. ಇದರಿಂದ ಅವರ ಜೀವನ ಮೌಲ್ಯಗಳ ಸಂರಕ್ಷಣೆಯು ಸಾಧ್ಯವಾಗುವುದಲ್ಲದೆ, ಶೋಷಣೆಯೂ ನಿಲ್ಲುವುದೆಂದು ಎಲ್ವಿನ್ ಸ್ಪಷ್ಟಪಡಿಸಿದ್ದರು. ಆದಿವಾಸಿಗಳ ಮೇಲೆ ಯಾವುದನ್ನು ಒಮ್ಮೆಲೆ ಹೇರಕೂಡದೆಂದೂ, ಯಾವುದೇ ಬದಲಾವಣೆಯು ಮಂದಗತಿಯಿಂದ ಕ್ರಮೇಣವಾಗಿ ಬರಬೇಕೆಂದೂ ಅವರ ಅಭಿಪ್ರಾಯವಾಗಿತ್ತು. ಈ ಕಾರಣಕ್ಕಾಗಿ ಅವರು ಬದುಕುವ ಪ್ರದೇಶಗಳನ್ನು "ರಾಷ್ಟ್ರೀಯ ಉದ್ಯಾನವನ" ಮಾಡಿ ಅದರೊಳಗಿರುವ ಆದಿವಾಸಿಗಳ ಸಂಸ್ಕೃತಿಯನ್ನು ಸಂರಕ್ಷಿಸಬೇಕೆಂದಿದ್ದರು. ಇಂದಿನ ರಾಷ್ಟ್ರೀಯ ಉದ್ಯಾನ ಕಲ್ಪನೆ ವ್ಯತಿರಿಕ್ತವಾಗಿದೆ. ಬುಡಕಟ್ಟುಗಳನ್ನು ಕಾಡಿನಿಂದ ಆಚೆ ಹಾಕುವ ಹುನ್ನಾರವಾಗಿದೆ. ಸ್ವಾಂಗೀಕರಣ ಪ್ರಕ್ರಿಯೆ ಆದಿವಾಸಿಗಳನ್ನು ಬೃಹತ್ ಸಮಾಜದ ಸಾಂಸ್ಕೃತಿಕ ಪ್ರವಾಹದೊಂದಿಗೆ ಒಂದಾಗಿಸುವುದಾದರೆ ಪುನರ್ವಸತೀಕರಣ ಅಥವಾ ಏಕೀಕರಣ ನೀತಿ ಇತ್ತೀಚಿನ ವರ್ಷಗಳಲ್ಲಿ ಪುನರ್ವಸತೀಕರಣ ನೀತಿಯು ಹೆಚ್ಚೆಚ್ಚು ಬಳಕೆಯಾಗುತ್ತಿದೆ. ಇದರ ಉದ್ದೇಶ ಆದಿವಾಸಿಗಳ ಅಸ್ತಿತ್ವವನ್ನು ಉಳಿಸುವುದರೊಂದಿಗೆ ಅವರಿಗೆ ಆಧುನಿಕ ಸಮಾಜದ ಅನುಕೂಲತೆಗಳನ್ನು ಒದಗಿಸಿಕೊಡುವ ಈ ನೀತಿಯೇ ಹಿತಕರವೆಂದು ಹಲವರ ಅಭಿಪ್ರಾಯಪಟ್ಟಿದ್ದಾರೆ. ೧೯೫೦ರಲ್ಲಿ 'ಆದಿವಾಸಿಗಳ ಏಕೀಕರಣ ನೀತಿ' ಘೋಷಿಸಿ ಈ ನೀತಿ ಪ್ರಕಾರ ಆದಿವಾಸಿಗಳನ್ನು ಶಾಶ್ವತವಾಗಿ ನೆಲೆಗೊಳಿಸುವ ಬಗ್ಗೆಯೂ ಒತ್ತು ನೀಡಲಾಗಿದೆ. ಇದನ್ನು 'ಪುನರ್ವಸತಿಕರಣ ನೀತಿ' ಎಂಬುದಾಗಿಯೂ ಕರೆಯಲಾಗಿದೆ.

ಬುಡಕಟ್ಟುಗಳ ಕಲ್ಯಾಣ ಕಾರ್ಯಕ್ರಮಗಳು ಮತ್ತು ಯೋಜನೆಯಗಳನ್ನು ಸಂವಿಧಾನದತ್ತವಾಗಿ ನೀಡಲಾಗಿದೆ. ಮೀಸಲಾತಿ ಪ್ರಕಟವಾದಾಗಿನಿಂದ ಈ ಮೀಸಲಾತಿ ವಿರುದ್ಧ ಆರಂಭವಾದ ಪ್ರತಿಭಟನೆಯ ವ್ಯಾಪಕತೆ ಹಾಗೂ ಅದು ಕಡೆಯ ಪ್ರಚಾರ ಮತ್ತು ಇದಕ್ಕೆ ಪ್ರತಿಯಾಗಿ ನಿಧಾನವಾಗಿಯಾದರೂ ಆರಂಭವಾದ ಮೀಸಲಾತಿ ಪರವಾಗಿ ಮತ ಪ್ರದರ್ಶನ ಹಾಗೂ ವಾದಗಳು ಜಾತಿ ಹಿತಾಸಕ್ತಿಗಳ ಆಧಾರದ ಭಾವಾವೇಶದ ವಿವಾದವಾಗಿ ಪರಿವರ್ತಿತವಾಗಿದ್ದು ಮೀಸಲಾತಿ ತತ್ವದ ವಿಕೃತಿಯೇ ಆಗಿದೆ.

'ಬಹುದೊಡ್ಡ ಜನವರ್ಗವನ್ನು ಒಳಗೊಂಡಿರುವ ಭಾರತೀಯ ಸಮಾಜದಲ್ಲಿ ಅಸಮಾನತೆ ಅಂತರ್ಗತವಾಗಿದೆ. ಮೀಸಲಾತಿ ಈ ಅಸಮಾನತೆಯನ್ನು ತೊಡೆದು ಹಾಕಿ ಸಮಾಜವನ್ನು ಜಾತಿ ವ್ಯವಸ್ಥೆಯ ಬಂಧನದಿಂದ ಬಿಡುಗಡೆಗೊಳಿಸುವ ಆಶಯ ಹೊಂದಿದೆ. ಹೀಗಾಗಿ ಮೀಸಲಾತಿಯನ್ನು ವಿರೋಧಿಸುವುದು ಎಂದರೆ ಸಮಾನತೆಯನ್ನು ವಿರೋಧಿಸುತ್ತಾ ಜಾತಿ ವ್ಯವಸ್ಥೆಯನ್ನು ಒಪ್ಪಿಕೊಳ್ಳುವುದೇ ಆಗಿದೆ'[೪]

ಮೀಸಲಾತಿ ತತ್ವವನ್ನು ತಾತ್ವಿಕವಾಗಿ ಒಪ್ಪಿಕೊಳ್ಳಲು ಸಾಧ್ಯವಾಗುವುದು ನಾವು ಜಾತಿ ಮೀರಿ ನಿಂತು ಒಟ್ಟಾರೆ ಸಮಾಜದ ಸಾರ್ವತ್ರಿಕ ಆರೋಗ್ಯದ ದೃಷ್ಟಿಯಿಂಬ ಯೋಚಿಸಿದಾಗ, ಹೀಗಿರುವಾಗ ಮೀಸಲಾತಿ ವಿರೋಧವನ್ನು ಅರ್ಥಮಾಡಿಕೊಳ್ಳಲು ಕೂಡ ಜಾತಿ ಮೀರಿ

ನಿಲ್ಲಬೇಕಾದದ್ದು ನಮ್ಮ ಧರ್ಮವೇ ಆಗಿದೆ’[೫] ಹೀಗೆ ಮೀಸಲಾತಿ ಪರ, ವಿರೋಧ ಚರ್ಚೆಗಳು ಆರಂಭವಾಗಿ ಇಂದಿಗೂ ಪ್ರಗತಿ ಸಮಾನತೆ ವಿರೋಧಿ ಮನಸ್ಥಿತಿಗಳು ಮೀಸಲಾತಿಯನ್ನು ತನ್ನೊಳಗೇ ವಿರೋಧಿಸುವ ಅಥವ ಮೀಸಲಾತಿ ಪಡೆಯುತ್ತಿರುವವರನ್ನು ಓರೆನೋಟಕ್ಕೆ ಸಿಕ್ಕಿಸಿಕೊಳ್ಳುವ ಪ್ರವೃತ್ತಿ ನಡೆದೇ ಇದೆ. ಡಾ. ಬಿ.ಆರ್. ಅಂಬೇಡ್ಕರ್ ಅವರು ಮೀಸಲಾತಿಯ ಧ್ಯೇಯೋದ್ದೇಶ, ಕಾಲಮಿತಿಯನ್ನೂ ಪ್ರತಿಪಾದಿಸಿದ್ದಾರೆ. ಸಮಾನತೆ ಎಲ್ಲಿಯವರೆಗೆ ಬರುವುದಿಲ್ಲವೋ ಅಲ್ಲಿಯವರೆಗೆ ಮೀಸಲಾತಿ ಇರುತ್ತದೆ. ಮೀಸಲಾತಿಯನ್ನು ದುರ್ಬಳಕೆ ಮಾಡಿಕೊಳ್ಳುವುದು, ಮೀಸಲಾತಿ ಪಡೆಯುವ ಒಬ್ಬನ ಹಕ್ಕನ್ನು ಕಿತ್ತುಕೊಂಡಂತಾಗುತ್ತದೆ.

ಕರ್ನಾಟಕ ಮೇದ ಸಮುದಾಯವನ್ನು ೧೯೫೬ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಪರಿಷ್ಕೃತ ಆದೇಶದ ಪರಿಶಿಷ್ಟ III, ಭಾಗ VIII ರ ಮೈಸೂರು ರಾಜ್ಯದ ಪಟ್ಟಿಯ ಕ್ರಮಸಂಖ್ಯೆ (೭), ೫ರ ಪ್ರಕಾರ ಕೊಡಗು ಜಿಲ್ಲೆಗೆ ಸೀಮಿತಗೊಂಡಂತೆ ಬುಡಕಟ್ಟು ಪಟ್ಟಿಗೆ ಸೇರಿಸಲಾಗಿದೆ. ಇದರ ಪ್ರಾದೇಶಿಕ ಮಿತಿಯನ್ನು ೨೭.೦೭.೧೯೭೭ರಂದು ಸಡಿಲಿಸಿ ಕರ್ನಾಟಕಕ್ಕೆ ವಿಸ್ತರಿಸಲಾಯಿತು. ಆದರೆ ಈ ಬುಡಕಟ್ಟಿನ ಪರ್ಯಾಯ ಪದಗಳ್ಯಾವುವೂ ಈ ಪಟ್ಟಿಯಲ್ಲಿ ಸೇರಿಸಲ್ಪಟ್ಟಿರಲಿಲ್ಲ. ಮೇದರನ್ನೇ ಪ್ರತಿನಿಧಿಸುವ ಪದಗಳಾದ ಮೇದರ್, ಮೇದರಿ, ಗೌರಿಗ, ಬುರುಡ ಮತ್ತು ಬುಡ್ಡರ್ ಪದಗಳನ್ನು ಮೇದ ಪದದ ಪರ್ಯಾಯ ಪದಗಳೆಂದು ಪರಿಗಣಿಸಿ ಎಲ್ಲಾ ಪದಗಳಿಗೂ ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಕರ್ನಾಟಕ ಸರ್ಕಾರ ೨೯.೧೧.೧೯೭೭ರಿಂದ ಒಂದು ವರ್ಷದ ಮಟ್ಟಿಗೆ ಕಲ್ಪಿಸಿ ಮೊಟಕುಗೊಳಿಸಿತು.

ಸರ್ಕಾರಿ ಆದೇಶ ಸಂಖ್ಯೆ ಸಕಇ ೧೭೭ ಎಸ್‌ಎಡಿ ೯೯, ಬೆಂಗಳೂರು, ದಿನಾಂಕ ೧೫ನೇ ಜೂನ್ ೨೦೦೩ರ ಪ್ರಸ್ತಾವನೆಯಲ್ಲಿ ನಮೂದಿಸಲಾದ ಅಂಶಗಳನ್ನು ಸರ್ಕಾರವು ಗಮನಿಸಿದೆ. ಆ ಪ್ರಕಾರವಾಗಿ (೧) ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಡಿ ೨೨೫ ಬಿಸಿಎ, ೨೦೦೦ ದಿನಾಂಕ ೩೦.೦೩.೨೦೦೨ರ ಪ್ರವರ್ಗ–೧ರ ಕ್ರ.ಸಂ. ೩೬(ಡಿ) ಗೌರಿಗ, ೩೬ (೧) ಮೇದರಿ ೩೬ (ಜೆ) ಬುರುಡ್ ಇವುಗಳನ್ನು ಕೈಬಿಟ್ಟು ಪರಿಶಿಷ್ಟ ಪಂಗಡಗಳ ಪಟ್ಟಿಯ ಕ್ರಮಸಂಖ್ಯೆ ೩೭ರ ಕೊನೆಯಲ್ಲಿ ಮೇದಾರಿ, ಗೌರಿಗ, ಬುರುಡ್ ಎಂಬುದಾಗಿ ಓದಿಕೊಳ್ಳಲು ಆದೇಶಿಸಿದೆ.

ಪ್ರತ್ಯೇಕವಾಗಿ ಸರ್ಕಾರಿ ಆದೇಶ ಸಂಖ್ಯೆ ಎಸ್.ಡಬ್ಲ್ಯೂ.ಎಲ್. ೨೮೫ ಎಸ್.ಎ.ಡಿ. ೭೮ ಬೆಂಗಳೂರು ದಿನಾಂಕ ೨೭.೦೩.೮೦ರಂತೆ ಕರ್ನಾಟಕ ರಾಜ್ಯದ ಪರಿಶಿಷ್ಟ ವರ್ಗದ ಪಟ್ಟಿಯ ಕ್ರಮಸಂಖ್ಯೆ ೩೭ರಲ್ಲಿ ಮೇದ, ಗೌರಿಗ, ಮೇದಾರಿ, ಬುರುಡ್–ಮೇದ ಸಮಾನಾರ್ಥಕ ಪದಗಳು ಅವಕಾಶ ಪಡೆದವು. ಈ ಪಟ್ಟಿಯಲ್ಲಿ ಸೇರಿಸುವಂತೆ ಕರ್ನಾಟಕ ಸರ್ಕಾರ ೧೯೭೮ರಿಂದ ಸತತ ೩೨ ವರ್ಷಗಳಿಂದ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತಿದೆ. ಆದರೂ ಕೇಂದ್ರ ಸರ್ಕಾರ ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೆ ಇರುವುದರಿಂದ ‘ಮೇದಾರ’ ಪರ್ಯಾಯ ಸಮಪದದ ಮೇದರಿಗೆ ಅನ್ಯಾಯವಾಗಿರುವುದಾಗಿ ಬಿಜಾಪುರ, ಹುಬ್ಬಳ್ಳಿ, ಹಾವೇರಿ, ಬೆಳಗಾವಿ,

ರಾಯಚೂರು, ಗುಲ್ಬರ್ಗಾಗಳಲ್ಲಿ ವಾಸಿಸುತ್ತಿರುವ 'ಮೇದಾರ'ರು ತಮ್ಮ ಅಳಲನ್ನು ತೋಡಿಕೊಂಡಿತು. ಕರ್ನಾಟಕ ರಾಜ್ಯ ಮೇದ ಮಹಾಸಂಘವು ಮಾಜಿ ಶಾಸಕರಾದ ಹೆಚ್.ಡಿ. ಬಸವರಾಜು ಅವರ ಅಧ್ಯಕ್ಷತೆಯಲ್ಲಿ ಸ್ಥಾಪನೆಗೊಂಡಿದ್ದು ದಿನಾಂಕ: ೧೧.೦೭.೨೦೧೦ರಂದು ಮೇದ ಸಮುದಾಯದ ಮಹಾಸಭೆಯನ್ನು ಕರೆದು 'ಮೀಸಲಾತಿ ಪಟ್ಟಿಯಿಂದ ಹೊರಗುಳಿದಿರುವ ಮೇದ ಪದದ ಸಮ ಪದವಾದ 'ಮೇದಾರ' ಕೈ ಬಿಟ್ಟಿರುವುದರ ಬಗ್ಗೆ ವ್ಯಾಪಕ ಚರ್ಚೆ ನಡೆಸಲಾಗಿದೆ. ೧೫.೦೮.೨೦೧೦ರಂದು ಬೆಂಗಳೂರಿನ ಎಂ.ಜಿ. ರಸ್ತೆಯ 'ಗಾಂಧಿ ಪ್ರತಿಮೆ' ಬಳಿ ಕರ್ನಾಟಕ ರಾಜ್ಯಾದ್ಯಂತ ಆಗಮಿಸಿದ್ದ ಸುಮಾರು ೫೦೦೦ ಮೇದ ಬುಡಕಟ್ಟಿನವರು ಸ್ವಾತಂತ್ರ್ಯ ದಿನವನ್ನು ಕಪ್ಪು ಪಟ್ಟಿ ಕಟ್ಟಿಕೊಂಡು ಕರಾಳ ದಿವನ್ನಾಗಿ ಆಚರಿಸುತ್ತಾ, 'ಮೇದಾರ' ಪರಿಶಿಷ್ಟ ಪಟ್ಟಿಗೆ ಸೇರಬೇಕೆಂದು ಹಾಗೂ ೩೬ ಮೇದ ಬುಡಕಟ್ಟಿನ ನೌಕರರಿಗೆ ವಿನಾಕಾರಣ ಕಿರುಕಳ ನೀಡುವ ಸಲುವಾಗಿ ಸಿಆರ್‌ಸಿ ಸೆಲ್‌ನಿಂದ ಮೊಕದ್ದಮೆ ಹೂಡುವ ಷಡ್ಯಂತ್ರವನ್ನು ಬಲವಾಗಿ ಟೀಕಿಸುತ್ತಾ ಪ್ರಸ್ತುತ ಮೇದರ ಹಲವಾರು ಹಕ್ಕೊತ್ತಾಯಗಳನ್ನು ಪ್ರತಿಭಟನಾ ಸಭೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಬಹುಶಃ ಈ ನಿದರ್ಶನದಿಂದ 'ಮೇದ'ರ ರಾಜಕೀಯ ಬಲವರ್ಧನೆ, ಪ್ರತಿಭಟನಾ ಚಳುವಳಿಗಳು, ಹಕ್ಕೊತ್ತಾಯಗಳನ್ನು ಗಮನಿಸಿದರೆ ಈ ಬುಡಕಟ್ಟಿಗಾಗಿರುವ ಮೀಸಲಾತಿ ಅನ್ಯಾಯವನ್ನು ಮನವರಿಕೆ ಮಾಡಿಕೊಳ್ಳಬಹುದು. ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡಕ್ಕೆ ೫೦ ಬುಡಕಟ್ಟುಗಳು ಸೇರಿವೆ. ಈ ಹಿಂದೆ ಮುಂಡಗೋಡು ಹಾಗೂ ವಿರಾಜಪೇಟೆ ಮಾತ್ರ ವಿಧಾನಸಭಾ ಪರಿಶಿಷ್ಟ ಮೀಸಲು ಕ್ಷೇತ್ರಗಳಿದ್ದವು. ಮೇದ ಬುಡಕಟ್ಟಿನವರಾದ ಹೆಚ್.ಡಿ.ಬಸವರಾಜು ೨ ಬಾರಿ ವಿಧಾನಸಭಾ ಸದಸ್ಯರಾಗಿ ಆಯ್ಕೆಗೊಂಡಿದ್ದರು.

ಕರ್ನಾಟಕ ಸರ್ಕಾರ ಪರಿಶಿಷ್ಟ ಪಂಗಡಕ್ಕೆ ವಿಧಾನಸಭಾ ಮೀಸಲು ಕ್ಷೇತ್ರವನ್ನು ೨ಕ್ಕೆ ಬದಲಾಗಿ ೧೬ ಕ್ಷೇತ್ರಗಳನ್ನು ನಿಗಧಿಪಡಿಸಿದೆ. ಸುಮಾರು ೨೦ ಲಕ್ಷಕ್ಕಿಂತಲೂ ಹೆಚ್ಚಿರುವ ಪರಿಶಿಷ್ಟ ಪಂಗಡದ ಬಲಾಢ್ಯ ಕೋಮಾದ ವಾಲ್ಮೀಕಿ, ನಾಯಕ, ಬೇಡ, ಪರಿವಾರದವರು ಪ್ರತಿನಿಧಿಸುತ್ತಿರುವುದು ಮಿಕ್ಕ ೪೯ ಬುಡಕಟ್ಟುಗಳಲ್ಲಿ ಯಾರಿಗೂ ಪ್ರತಿನಿಧಿತ್ವ ಸಿಗದಿರುವುದು ಅಸಮಾಧಾನ ತಂದಿದೆ ಎಂದು ಹೆಚ್.ಡಿ. ಬಸವರಾಜುರವರು ರಾಜಕೀಯ ವಿಶ್ಲೇಷಣೆ ಮಾಡುತ್ತಾರೆ. ಪರಿಶಿಷ್ಟ ಜಾತಿಯವರು ಕೇಳುತ್ತಿರುವ ಒಳ ಮೀಸಲಾತಿಯನ್ನು ಪರಿಶಿಷ್ಟ ಪಂಗಡದವರೂ ಕೇಳಬಹುದಾದ ದಿನಗಳು ದೂರವಿಲ್ಲವೆಂದು ವಿವರಿಸುತ್ತಾರೆ.

೦೧.೧೨.೧೯೭೮, ೨೮.೧೧.೧೯೮೪, ೧೯.೧೦.೧೯೯೫, ೧೦.೦೧.೨೦೦೧, ೧೯.೦೩.೨೦೦೩, ೦೫.೦೬.೨೦೦೮ ಹಾಗೂ ೦೪.೧೨.೨೦೦೮ರಂದು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸುತ್ತಾ, 'ಮೇದ'ದ ಸಮಾನಾರ್ಥಕ ಪದಗಳಾಗಿ 'ಮೇದಾರಿ, ಬುರುಡ್ ಹಾಗೂ ಗೌರಿಗ' ಇರುವಂತೆ 'ಮೇದಾರ' (MEDARA) ಕೂಡ ಸಮ ಪದವೇ ಎಂದು ಸೂಚಿಸಿದೆ. ದಿನಾಂಕ: ೨೭.೧೨.೨೦೦೬ರಂದು ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾದ ಸದಸ್ಯರಾದ ಟಿ.ಸ್ಯಾಫೆಲ್

ಅವರು ಧಾರವಾಡ, ಹಾವೇರಿ, ಬೆಳಗಾವಿ ಮತ್ತು ಉತ್ತರ ಕರ್ನಾಟಕದಲ್ಲಿ ನೆಲೆಸಿರುವ 'ಮೇದರ'ನ್ನು ಭೇಟಿಯಾಗಿ ಮೇದಾರ ಸಾಮಾಜಿಕ ನಡಾವಳಿಗಳು, ಭಾಷೆ, ಶಿಕ್ಷಣ, ಆರ್ಥಿಕತೆ, ರೂಢಿ–ಸಂಪ್ರದಾಯ, ವೃತ್ತಿ, ವೈವಾಹಿಕ ಸಂಬಂಧಗಳೆಲ್ಲವೂ ಒಂದೇ ಆಗಿರುವುದರಿಂದ 'ಮೇದ', 'ಮೇದಾರಿ', 'ಬುರುಡ್', ಗೌರಿಗ'ರಂತೆ 'ಮೇದಾರ' ಕೂಡ ಮೇದ ಸಮಪದವೆಂದು ವರದಿ ನೀಡಿರುತ್ತಾರೆ. ಆದಾಗ್ಯೂ ಮುಗ್ಧ ಮೇದರ ತಾಳ್ಮೆ ಸುಮಾರು ೩೩ ವರ್ಷಗಳಿಂದ ಕಾದು ನೋಡಿ ಪ್ರತಿಭಟನೆಯಂತಹ ತಂತ್ರ ಬಳಸಿಕೊಳ್ಳಬೇಕಾಗಿದೆ ಎಂದು ಮೇದ ಸಮಾಜದ ಮುಖಂಡರಾದ ದಾವಣಗೆರೆಯ ಚಂದ್ರಶೇಖರ್, ಸೋಮಣ್ಣ, ಹಾವೇರಿ ನಾಗರಾಜ್, ಬೆಂಗಳೂರಿನ ಲಕ್ಷ್ಮೀನರಸಿಂಹಯ್ಯ, ರಾಮಯ್ಯ, ಶಿವಪ್ಪ, ಹುಬ್ಬಳ್ಳಿಯ ಗಂಗಣ್ಣ, ವೈ.ಸಿ.ಬೆಟಗೇರಿ, ತಿಪ್ಪಣ್ಣ ಶಿರಹಟ್ಟಿ, ಹಿರಿಯೂರಿನ ಬಸವರಾಜ್, ಚಳ್ಳಿಕೆರೆಯ ಹನುಮಂತಪ್ಪ, ಸುಶೀಲ ರಾಮ್‌ದಾಸ್, ನರಸಿಂಹರಾಜಪುರದ ಅಣ್ಣಪ್ಪ, ಮಹೇಶ್ ಶೆಟ್ಟಿಕೊಪ್ಪ, ಆಲ್ದೂರಿನ ಅ.ಗ.ಮಂಜಯ್ಯ, ಗುಡ್ಡಟ್ಟಿಯ ರಾಜಮ್ಮ ಮುಂತಾದವರು ಬೆಂಗಳೂರಿನಲ್ಲಿ ಪ್ರತಿಭಟನೆ ನಿರತರಾಗಿದ್ದಾಗ ತಮ್ಮ ಪ್ರತಿಕ್ರಿಯೆಯನ್ನು ನೀಡಿದರು.

ಇನ್ನು ಕೆಲವು ಶೈಕ್ಷಣಿಕ ಸಂಸ್ಥೆಗಳಿಗೆ 'ಮೇದ' ಪ್ರಮಾಣ ಪತ್ರವನ್ನು ನೀಡಿದಾಗ್ಯೂ ಪರಿಗಣಿಸದಿರುವುದು ಕೆಲವು ಜಿಲ್ಲೆ, ತಾಲೂಕುಗಳಲ್ಲಿಯ ಅಧಿಕಾರಿಗಳು 'ಮೇದ' ಪ್ರಮಾಣ ಪತ್ರವನ್ನೇ ನೀಡದಿರುವುದು ಕಂಡು ಬರುತ್ತದೆ. ದಾವಣಗೆರೆ ಜಿಲ್ಲೆ ದಾವಣಗೆರೆಯ 'ಮೇದ'ರು ಪ್ರಮಾಣ ಪತ್ರ ಪಡೆದರೆ 'ಹರಿಹರ' ಪಕ್ಕದ ತಾಲೂಕಿನಲ್ಲಿ ಪ್ರಮಾಣ ಪತ್ರ ನೀಡದೆ ಇರುವ ಅಧಿಕಾರಿಗಳ ಮನೋಸ್ಥಿತಿಗೆ ಏನನ್ನಬೇಕು? ಮೂಲ ಕಸುಬಿನ ಕತ್ತಿ, ಕೊರಡಿನೊಂದಿಗೆ ಕಛೇರಿಯ ಮುಂದೆ ಪ್ರತಿಭಟಿಸಿ ಹೋರಾಟ ಮಾಡುವುದಾಗಿ ದಾವಣಗೆರೆ, ಹರಿಹರದ ಮೇದರು ತಮ್ಮ ಅಳಲನ್ನು ತೋಡಿಕೊಂಡರು.

ಇನ್ನು ಶೈಕ್ಷಣಿಕವಾಗಿ ಶೇ.೬೨ರಷ್ಟಿರುವ ಮೇದರು ಲೆಕ್ಕಕ್ಕಷ್ಟೇ ಈ ಶೇಕಡಾವಾರು. ಆದರೆ ಉನ್ನತ ಶಿಕ್ಷಣ, ತಾಂತ್ರಿಕ ಶಿಕ್ಷಣ ಇತರೆ ವೃತ್ತಿಪರ ಶಿಕ್ಷಣಗಳಲ್ಲಿರುವುದು ತೀರಾ ಕಡಿಮೆ. ಕನ್ನಡ ಮಾಧ್ಯಮದಲ್ಲೇ ಹೆಚ್ಚಿನವರು ಕಲಿತಿದ್ದು ಗುಣಮಟ್ಟದ ಶಿಕ್ಷಣದಿಂದ ವಂಚಿತರಾಗಿದ್ದು, ಈ ಶಕ್ತಿರಾಜಕಾರಣದ ಸಂದರ್ಭದಲ್ಲಿ ಯಾವ ಬೆಂಬಲವೂ ಇಲ್ಲದೆ ಮೀಸಲಾತಿಯಿದ್ದರೂ ಸರ್ಕಾರಿ ಉದ್ಯೋಗಗಳು ಮರಿಚಿಕೆಯಾಗಿದೆ ಎಂದು ನನ್ನ ಸಂಶೋಧನಾ ಕಾರ್ಯವ್ಯಾಪ್ತಿಯ ಪ್ರಜ್ಞಾವಂತ ಎಲ್ಲಾ ಮೇದರು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ. ಪರಿಶಿಷ್ಟರ ಒಳಗೇ ಆರೋಗ್ಯಕರವಲ್ಲದ ಸ್ಪರ್ಧೆಯ ತುಣುಕುಗಳಂತಿದ್ದವು ಅವರ ಮಾತುಗಳು. ಶಿಕ್ಷಣದಂತೆ ಮನೆ, ಭೂಮಿ, ಕೃಷಿ, ತೋಟಗಾರಿಕೆ, ಬ್ಯಾಂಕು, ಸಹಕಾರ ಸಂಘಗಳು, ಪ್ರತಿನಿಧಿತ್ವ ಹೀಗೆ ಹಲವಾರು ಕ್ಷೇತ್ರಗಳಲ್ಲಿಯೂ ಮೇದರು ಮೀಸಲಾತಿಯಿಂದ ಸಮರ್ಪಕ ಸೌಲಭ್ಯ ಪಡೆಯಲಾಗುತ್ತಿಲ್ಲ. ಮೀಸಲಾತಿ ಎಂಬುದು ಸಧ್ಯಕ್ಕೆ ನಾಮಕವಸ್ಥೆಯಾಗುತ್ತಿದೆ ಎಂದು ತಿಳಿಸುತ್ತಾರೆ. ಮೀಸಲಾತಿಯ

[illegible]

'ಕೇನೆಪದರ' ಅತ್ಯಲ್ಪದಲ್ಲಿ ಅತ್ಯಲ್ಪವಾಗಿದ್ದು, ಒಂದೇ ತಲೆಮಾರಿಗೆ ಮೀಸಲಾತಿಯನ್ನು ಪಡೆದಿರುವುದು ನನ್ನ ಸಂಶೋಧನೆಯಿಂದ ಕಂಡುಕೊಳ್ಳಲಾಗಿದೆ. ಹೀಗೆ ಮೀಸಲಾತಿಯ ಹಲವು ಮುಖಗಳು ಅನಾವರಣಗೊಂಡಿವೆ.

೪.೨.೧ ಕೃಷಿ ಭೂಮಿ ಮಂಜೂರಾತಿ

ಅನಾದಿಕಾಲದಿಂದಲೂ ಬಿದಿರಿನಿಂದ ಬದುಕನ್ನು ಕಂಡುಕೊಂಡು, ಮೇದಾರಿಕೆಯ ಉತ್ಪನ್ನ ತಯಾರಿಸುವಲ್ಲಿಯೇ ತೃಪ್ತಿ ಹೊಂದುತ್ತಿದ್ದ ಮೇದರು ಅನ್ಯ ಕಸುಬಿನ ಕಡೆಗೆ ಗಮನ ಹರಿಸಿದ್ದು ತೀರಾ ಕಡಿಮೆ. ಹೇರಳವಾಗಿ ಸಿಗುತ್ತಿದ್ದ ಬಿದಿರು, ಮನೆಮಂದಿಗೆಲ್ಲ ಕೈ ತುಂಬ ಕೆಲಸ. ಮೇದರ ಉತ್ಪನ್ನಗಳಿಗೆ ಬಹಳ ಬೇಡಿಕೆ. ಈ ರೀತಿ ಒಂದು ಕುಲಕಸುಬಿಗೆ ಬೇಡಿಕೆ, ಪ್ರೋತ್ಸಾಹವಿದ್ದಾಗ ಆ ಕುಲಸುಬಿನವರು ಬೇರೆ ವೃತ್ತಿ ಬಗ್ಗೆ ಕಾಳಜಿವಹಿಸದಿರುವುದು ಸರ್ವೆಸಾಮಾನ್ಯ. ಅಥವಾ ಯಾವುದೇ ಕುಲಕಸುಬಿನವರ ಮನಸ್ಥಿತಿ ಹೇಗಿರುತ್ತದೆ ಎಂದರೆ ಈ ವೃತ್ತಿ ಚೆನ್ನಾಗಿ ನಡೆಯುತ್ತಿರುವಾಗಲೇ ಬೇರೆ ವೃತ್ತಿಯನ್ನು ಈ ವೃತ್ತಿಯೊಂದಿಗೆ ಜೋಡಿಸಿಕೊಳ್ಳಬೇಕೆಂಬ ವ್ಯಾವಹಾರಿಕ ನಿಗಾವಹಿಸುವಿಕೆಯಿರುವುದಿಲ್ಲ.

ಹೋಗಲಿ ಕುಲಕಸುಬಿನಿಂದ ಹೊಟ್ಟೆ-ಬಟ್ಟೆ ಸಂತೃಪ್ತಿಯಿಂದ ಹೊರೆಯಲು ಸಾಧ್ಯವೇ ಹೊರತು, ಲಾಭದ ದೊಡ್ಡ ಗಂಟು ಸಿಗುವುದೆಂಬುದು ಕೇವಲ ಊಹೆ. ಭೂಸುಧಾರಣೆಯಿಂದ ದೊರಕಿರುವ ಕೆಲವರ ತುಂಡು ಜಮೀನು, ಆಕಸ್ಮಿಕವಾಗಿ ಹಿರಿಯರು ಮಾಡಿರುವ ಪಿತ್ರಾರ್ಜಿತ ಜಮೀನು ಹಾಗೂ ಅವಿಭಕ್ತದಿಂದ ವಿಭಕ್ತವಾಗುತ್ತಿದ್ದಂತೆ ಮನೆ ಹಾಗೂ ಭೂಮಿಗಳೂ ಸೀಳಿವೆ. ಸರ್ಕಾರದಿಂದ ಮಂಜೂರಾಗಿರುವ ಮಂಜೂರಾತಿ ಜಮೀನು, ಅಪ್ಪಿ-ತಪ್ಪಿ ಕಷ್ಟಪಟ್ಟು ಖರೀದಿಸಿರುವ ಭೂಹಿಡುವಳಿಗಳು ಮಾತ್ರ ಮೇದರ ಭೂ-ಆಸ್ತಿಯಾಗಿದೆ. ಅರ್ಥಶಾಸ್ತ್ರಜ್ಞರು ಹೇಳುವಂತೆ 'ತುಂಡು ಜಮೀನು' ಅಥವಾ 'ಸಣ್ಣ ಭೂಹಿಡುವಳಿ'ಗಳು ಯಾಂತ್ರಿಕ ಬೇಸಾಯಕ್ಕೆ ಅನಾನುಕೂಲಕರ ಹಾಗೂ ಲಾಭದಾಯಕವಲ್ಲವೆಂಬುದು ಚಿಕ್ಕಮಗಳೂರು ಜಿಲ್ಲೆಯಲ್ಲಿ ವಾಸಿಸುತ್ತಿರುವ ಮೇದರಿಗಂತೂ ಅಕ್ಷರಶಃ ಒಪ್ಪುತ್ತದೆ. ಭೂಮಿ ಹೊಂದಿರುವ ಮೇದರಲ್ಲಿ ಶೇ.೯೫ ಭಾಗ ೦-೨ ಎಕರೆ ಹೊಂದಿದವರಾಗಿದ್ದು, ೨ ರಿಂದ ೩ ಕುಟುಂಬಗಳು ೨ರಿಂದ ೬ ಎಕರೆ ಭೂಮಿಯವರಾಗಿದ್ದು, ಕೇವಲ ೨ ಕುಟುಂಬದವರು ೧೦-೧೫ ಎಕರೆ ಭೂಮಿಯನ್ನು ಹೊಂದಿರುವುದು.

ಮೇದರ ಭೂ ಹಿಡುವಳಿಗಳ ಪೂರ್ಣ ಚಿತ್ರಣ ಲಭಿಸುತ್ತದೆ. ದೂರದೃಷ್ಟಿಯಿಲ್ಲದ ಮೇದರು 'ಕಂದಾಯ ಭೂಮಿ' ಎತ್ತೇಚ್ಛವಾಗಿದ್ದಾಗ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಿಲ್ಲ. ಬಲಾಢ್ಯ ಕೋಮಿನವರು, ಭೂಮಾಲೀಕರು, ಶ್ರೀಮಂತರು, ರಾಜಕಾರಣಿಗಳು ಅಂತಹ ಭೂಮಿಯನ್ನು ತಮ್ಮದಾಗಿಸಿಕೊಂಡ ಮೇಲೆ ಮೇದರಿಗೆ ಜ್ಞಾನೋದಯವಾಯಿತು. ನಾವು ಮೀಸಲಿನವರಿದ್ದೇವೆ ನಮಗೂ ಸರ್ಕಾರಿ ಜಮೀನು ನೀಡಬೇಕು ಎಂದು ಅಲವತ್ತಿಕೊಂಡಾಗ ರೆವಿನ್ಯೂ

[illegible]

ಭೂಪಟದಲ್ಲಿರುವ ಭೂವಿ ಖಾಲಿಯಾಗಿದ್ದವು. ಹೋಗಲಿ ಅರಣ್ಯ ಕಡಿಮೆಯಾಗಿ ಆ ಭೂಮಿಯನ್ನು ಸರ್ಕಾರಕ್ಕೆ ಸ್ವಾಧೀನ ಪಡಿಸುವ ಭೂಮಿಯಲ್ಲೂ ಈಗಾಗಲೇ ಬಲಾಢ್ಯರು ಅತಿಕ್ರಮಿಸಿಕೊಂಡಿದ್ದು, 'ಸರ್ಕಾರಿ ಭೂಮಿ'ಗಾಗಿ ಕಾಯುವ ಕಾಯಕ ಮೇದರದ್ದಾಗಿದೆ. ನರಸಿಂಹರಾಜಪುರದ ಮೇದರ ಭೂ ಸಮಸ್ಯೆಯ ಒಂದು ಉದಾಹರಣೆ ಹೀಗಿದೆ– ೧೯೮೫ರಲ್ಲಿ ನಿಬಂಧನೆಗೊಳಪಟ್ಟ ಭೂಮಿಯನ್ನು ೮ ಕುಟುಂಬಕ್ಕೆ ತಲಾ ಎರಡು ಎಕರೆಯನ್ನು ವಿತರಿಸಿತು. ಮಂಜೂರಾತಿ ಆಗಿದೆ. ಪಟ್ಟಾ ಸಿಕ್ಕಿಲ್ಲ. ಹೋಗಲಿ ಭೂಮಿ ಸಿಕ್ಕಿರುವುದು, ನರಸಿಂಹರಾಜಪುರದಿಂದ ೩೦ ಕೀ.ಮೀ ದೂರದ ಬೈರಾಪುರ ಎಂಬ ಭದ್ರಾ ಅಭಯಾರಣ್ಯಕ್ಕೆ ಆತುಕೊಂಡ ಜಾಗ. ಭದ್ರಾ ಅಭಯಾರಣ್ಯಕ್ಕೆ ಹೊಸ ದಾರಿಯನ್ನು ಮಂಜೂರಾದ ಭೂಮಿಯ ಮೇಲೆ ಹೋಗಿ ತಲಾ ೧/೨ ಎಕರೆ ಭೂಮಿ ಪುನಃ ಭದ್ರಾ ಅಭಯಾರಣ್ಯಕ್ಕೇ ಸೇರಿತು. ಹೆಸರಿಗಷ್ಟೇ ಮಂಜೂರಾದ ಈ ಜಾಗದಲ್ಲಿ ಅಂದಿನಿಂದ ಉಳುಮೆಯಾಗಲಿ, ಭೂಮಿಯನ್ನ ಸ್ವಾದೀನಪಡಿಸಿಕೊಳ್ಳುದಾಗಿ ಮಾಡಲಿಲ್ಲ. ಆಜುಬಾಜಿನ ರೈತರು ತಮ್ಮದೇ ಜಮೀನೆಂಬಂತೆ ಅವುಗಳನ್ನು ಉಳಿಮೆ ಮಾಡಿಕೊಂಡು ಬೆಳೆಯನ್ನು ಬೆಳೆಯಲಾರಂಭಿಸಿದರು. ತಮ್ಮ ಉದಾಸೀನತೆಯಿಂದ ಅಷ್ಟು ದೂರ ಹೋಗಿ ಭೂಮಿಯನ್ನು ಉಳುಮೆ ಮಾಡುವಂತಹ ಸ್ಥಿತಿಯಿರದ ಮೇದರ ಅಸಹಾಯಕತೆಯನ್ನು ಅರಿತವರು ಭೂಮಿಯನ್ನು ಉಳುಮೆ ಮಾಡಿಕೊಂಡೇ ಹೋದರು. ಅದರಲ್ಲಿ ಕೆಲವರು ಕೇವಲ ರೂ. ೫೦೦ಗಳಿಗೆ ಮಂಜೂರಾದ ಜಮೀನನ್ನು ಸ್ಥಳೀಯರಿಗೆ ಮಾರಿಕೊಂಡರು. ಪಿಟಿಸಿಎಲ್ ಕಾಯ್ದೆ ಪ್ರಕಾರ ಏ.ಸಿ ಕೋರ್ಟ್, ಡಿ.ಸಿ ಕೋರ್ಟ್, ಹೈಕೋರ್ಟ್ ಎಂದು ತಿರುಗಿ ನ್ಯಾಯತೀರ್ಪು ತಮಗೆ ದಕ್ಕುವಂತೆ ಮಾಡಿಕೊಳ್ಳುವಲ್ಲಿ ಒಬ್ಬೊಬ್ಬರದು ಕನಿಷ್ಟ ೩೫ರಿಂದ ೪೦ ಸಾವಿರ ರೂಪಾಯಿಗಳು ಖರ್ಚಾಗಿರುವುದು ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದುಬಂದಿದೆ.

ಮುಗ್ಧ ಮೇದರ ಮತ್ತೊಂದು ಪ್ರಕರಣದಲ್ಲಿ ಭದ್ರಾ ಹಿನ್ನೀರಿನ ಹಂದೂರು ಗ್ರಾಮದಲ್ಲಿ ತಲಾ ಎರಡೆರಡು ಎಕರೆ ಜಮೀನು ಮಂಜೂರಾಗಿದೆ ಎಂದು ಸರ್ಕಾರಿ ಕಡತಗಳಲ್ಲಿ ತೋರಿಸಲಾಗಿತ್ತು. ಅದೇ ನರಸಿಂಹರಾಜಪುರದ ಮೇದರು ಸಂತೋಷಗೊಂಡು ಒಂದೆರಡು ವರ್ಷಗಳ ನಂತರ ತಮ್ಮ ಜಮೀನ ಯಾವುದೆಂದು ತಿಳಿಯುವ ಕುತೂಹಲ ಹಾಗೂ ಅನೇಕ ಕನಸುಗಳಿಂದ ಆ ಭೂಮಿಯನ್ನು ಸಾಗುವಳಿ ಮಾಡಿ ಬದುಕನ್ನು ಉನ್ನತೀಕರಿಸಿಕೊಳ್ಳಬಹುದೆಂದು ಮಹದಾಸೆಯಿಂದ ಅನೇಕ ಬಾರಿ ಅರಣ್ಯ ಇಲಾಖೆ, ಕಂದಾಯ ಇಲಾಖೆಯನ್ನು ಸುತ್ತಾಡಿದರೂ ಸರ್ವೆ ನಂಬರ್ ಭೂಮಿ ಸಿಗುತ್ತಿಲ್ಲ. ಕೊನೆಗೆ ಪಿ.ಡಬ್ಲ್ಯೂಡಿ ನಕಾಶೆಯಲ್ಲಿ ಈ ಸರ್ವೆ ನಂಬರಿನ ನಕಾಶೆಯನ್ನು ತೆರೆದಾಗ, ಭದ್ರಾ ಹಿನ್ನೀರಿನೊಳಗೆ ಆ ಎಲ್ಲಾ ಭೂಮಿಯು ಮುಳುಗಡೆಯಾಗಿದೆ. ಇದಕ್ಕಿಂತ ವಿಪರ್ಯಾಸಬೇಕೆ? ಎಂದು ಶೆಟ್ಟಿಕೊಪ್ಪದ ಮಹೇಶ್ ಪ್ರಶ್ನಿಸುತ್ತಾರೆ. ಸರಿ, ಎಚ್ಚೆತ್ತ ಮೇದರು ತಕ್ಷಣವೇ ಪರ್ಯಾಯ ಭೂಮಿಗಾಗಿ ತಡಕಾಡಿದಾಗ

ಸುಮಾರು ೭ ಕಿ.ಮೀ ದೂರದಲ್ಲಿರುವ ಗೇರುಬೈಲು ಗ್ರಾಮದ ಜಾಗದಲ್ಲಿ ರೆವಿನ್ಯೂ ನಕಾಶೆಯಲ್ಲಿ ಗೋಮಾಳವೆಂದು ಗುರ್ತಿಸಲ್ಪಟ್ಟಿರುವ ಐವತ್ತು ಎಕರೆ ಜಮೀನನಲ್ಲಿ ತಮ್ಮ ಹಕ್ಕು ಸ್ಥಾಪಿಸಬಹುದೆಂದು ಆಸೆಗಣ್ಣುಗಳಿಂದ ಕಂದಾಯ ಇಲಾಖೆಯ ಅನುಮತಿಯೊಂದಿಗೆ ಅಲ್ಲಿಗೆ ತಲುಪಿದರೆ ಈಗಾಗಲೇ ಖಾಲಿ ಜಾಗವನ್ನು ಸ್ಥಳೀಯ ಬಾಳೆಕೊಪ್ಪ ಗ್ರಾಮದ ಕೃಷಿಕರು ಬೇಲಿಹಾಕಿ ಸಾಗುವಳಿ ಮಾಡುತ್ತಿದ್ದಾರೆ. ಮಂಜೂರಾತಿಯೂ ಪಡೆದಿದ್ದಾರೆ.

ಮಿಕ್ಕ ಜಾಗದಲ್ಲಿ ಸಾಮಾಜಿಕ ಅರಣ್ಯದವರು ಅರಣ್ಯೀಕರಣಕ್ಕಾಗಿ ಅಕೇಶಿಯಾ, ಮ್ಯಾಂಜಿಯಂ ಗಿಡಗಳನ್ನು ಎರಡು ವರ್ಷಗಳ ಹಿಂದೆ ನೆಟ್ಟು ಅದರ ಬಿಲ್‌ಪಾಸ್ ಆಗದೆ ಸ್ಥಗಿತವಾಗಿದ್ದರಿಂದ ಇಲಾಖೆಯ ನೌಕರರು ಚಡಪಡಿಕೆಯಲ್ಲಿದ್ದರು. ಸರಿ, ಕಂದಾಯ ಜಾಗದಲ್ಲಿ ಅರಣ್ಯ ಇಲಾಖೆಯವರು ಗಿಡಗಳನ್ನು ನೆಡುವಾಗ ಸೂಕ್ಷ್ಮವಾಗಿ ಭೂಪಟವನ್ನು ಗಮನಿಸದೆ ಆದ ಈ ಪ್ರಮಾದ ಹಾಗೂ ರೆವಿನ್ಯೂ ಜಾಗದಲ್ಲಿ ಈಗಾಗಲೇ ೫-೬ ವರ್ಷಗಳ ಹಿಂದೆ ನೆಟ್ಟಿದ್ದ ಗಿಡಗಳು, ಮರಗಳಾಗಿ ಆ ಜಾಗವನ್ನು ಕಂದಾಯ ಇಲಾಖೆಯವರು ನಮ್ಮದೆಂದು ಖಾಲಿ ಜಾಗದಲ್ಲಿ ಇತ್ತೀಚಿಗೆ ನೆಟ್ಟಿರುವ ಜಾಗವು ಅರಣ್ಯ ಇಲಾಖೆಯದೆಂದು ಸ್ಥಳ ಪಲ್ಲಟದಿಂದಾಗಿ ಪರಸ್ಪರರು ಕಚ್ಚಾಡುತ್ತಿರುವಾಗ ರೆವಿನ್ಯೂ ಜಾಗದಲ್ಲಿ ಕಾಡು ಬೆಳೆಸಿರುವ ಅರಣ್ಯ ಮರಗಳಿರುವ ಪ್ರದೇಶದಲ್ಲಿ ಮೇದರ ಭೂಮಿ ಮಂಜೂರಾಗುತ್ತದೆ ಎಂದು ಕಾಯುತ್ತಿರುವ ಮೇದರ ಪರಿಸ್ಥಿತಿಯ ಚಿಕ್ಕ ಚಿತ್ರಣವಾಗಿದೆ.

ಇನ್ನು ಆಲ್ದೂರಿನ ಮೇದರದು ಇದಕ್ಕಿಂತ ಕೆಟ್ಟ ಸ್ಥಿತಿ. ಆಲ್ದೂರನ್ನು ಆವರಿಸಿಕೊಂಡಿರುವುದು ಗುಡ್ಡ-ಬೆಟ್ಟಗಳು. ದೊಡ್ಡ ದೊಡ್ಡ ಎಸ್ಟೇಟ್ ಮಾಲೀಕರು ಈಗಾಗಲೇ ಭೂಕಬಳಿಕೆ ಮಾಡಿಕೊಂಡಿರುವುದರಿಂದ ಪರಿಶಿಷ್ಟರಿಗೆ ಭೂಮಿದಕ್ಕುವುದು ದುಸ್ತರವೇ ಸರಿ. ಈಗ ಎಲ್ಲಿ ರೆವಿನ್ಯೂ ಭೂಮಿ ಸಿಗುತ್ತದೆಂದು ಹುಡುಕುವುದು ಸಾಧ್ಯವಿಲ್ಲ. ಕಾರಣ ಪರಿಶಿಷ್ಟರ ಪ್ರಮಾಣಪತ್ರ ಇಟ್ಟುಕೊಂಡು ಸೌಲಭ್ಯಗಳಿಗಾಗಿ ಓಡಾಡುವುದು ಅನಿವಾರ್ಯವಾಗಿದೆ. ಇಂದು ಹೋರಾಟವಿಲ್ಲದೆ ಏನನ್ನೂ ಪಡೆಯಲಾಗದ ಸ್ಥಿತಿಗೆ ವ್ಯವಸ್ಥೆ ಬಂದಿರುವುದರಿಂದ ಹೋರಾಟದ ಭಾಗವಾಗಿ ಸಂಘಟನೆಯನ್ನು ಬೆಳಸಬೇಕಿದೆ ಎಂದು ಗುಡ್ಡಟ್ಟಿಯ ರಾಜಮ್ಮನವರು ತಿಳಿಸುತ್ತಾರೆ. ಒಟ್ಟಾರೆ ಬಗುರುಹುಕುಂ ಜಾಗವಾಗಲಿ, ಭೂ ಮಂಜೂರಾತಿ ಸಮಿತಿಯಿಂದ ಭೂಮಿ ಸಿಗುತ್ತದೆಂದಾಗಲಿ, ನಿರ್ಬಂಧಿತ ಭೂಮಿ ಸಿಗುತ್ತದೆಂದಾಗಲಿ ಇತ್ಯಾದಿ ಆಸೆಯ ಸೆಲೆಗಳೆಲ್ಲ ಮೇದರಲ್ಲಿ ಬತ್ತಿ ಹೋಗಿವೆ.

ಸಮುದಾಯ ಬಿಟ್ಟು ಹೊರ ಹೋಗದ ಮೇದರಿಗೆ ೨೫ ಕಿ.ಮೀ ದೂರದಲ್ಲಿ ಜಮೀನನ್ನು ೨೫ ವರ್ಷಗಳ ಹಿಂದೆಯೇ ಕೊಟ್ಟಿದ್ದೂ ಪ್ರಯೋಜನಕ್ಕೆ ಬಾರದಾಗಿದೆ. ಇನ್ನು ಪಿತ್ರಾರ್ಜಿತವಾಗಿ ಬಂದ ಸೀಳು ಭೂಮಿಯಲ್ಲೇ ಕೃಷಿ ಮಾಡುತ್ತಿರುವ ಕೇವಲ ಆಹಾರ ಬೆಳೆ ಅಲ್ಪಸ್ವಲ್ಪ ರಬ್ಬರ್, ಬಾಳೆ, ಕಾಫಿ, ಬೆಳೆಯುವುದರಲ್ಲಿ ರೈತಾಪಿ ಬದುಕು ಕೊನೆಗೊಳ್ಳುತ್ತದೆ.

ಇನ್ನು ಇತ್ತೀಚಿನ ಕಾಯ್ದೆ ಪ್ರಕಾರ ಪರಿಶಿಷ್ಟ ಪಂಗಡದವರು ಮೂರು ವರ್ಷಗಳಿಂದ ನಿರಂತರವಾಗಿ ಕಿರು ಅರಣ್ಯದಲ್ಲಿ ವಾಸವಿದ್ದು, ಕೃಷಿ ಮಾಡಿಕೊಂಡಿದ್ದರೆ. ಆ ಭೂಮಿಯನ್ನು ಅವರಿಗೇ ನೀಡಬಹುದೆಂಬ ಕಾಯಿದೆಯ ಪ್ರಯೋಜನವು ಮೇದರಿಗಿಲ್ಲವಾಗಿದೆ. ಕಾರಣ ಅಂತಹ ಸ್ಥಿಯಲ್ಲಿ ಮೇದರಿಲ್ಲ. ಭೂ ಸುಧಾರಣೆ ಕಾಯ್ದೆ ಜಾರಿಗೆ ಬಂದಾಗ ಭೂಹಿಡುವಳಿಗಳನ್ನು ಗೇಣಿ ಮಾಡುತ್ತಿದ್ದ ಮೇದರು, ಇಂತಹ ಮೋಸದ ಜಮೀನು ಬೇಡ ಎಂದು ಅರ್ಜಿ ಗುಜರಾಯಿಸದೆ, ಮಾಲೀಕರಿಗೇ ಜಮೀನನ್ನು ಬಿಟ್ಟುಕೊಟ್ಟ ಮೂರು ನಿದರ್ಶನಗಳು ನನ್ನ ಸಂಶೋಧನೆಯಿಂದ ತಿಳಿದುಬಂದಿದೆ. ಇಂತಹ ಮನಃಸ್ಥಿತಿಯ ಮೇದರು ಜಮೀನಿಗಾಗಿ ಹೋರಾಟ ಮಾಡಿದವರಲ್ಲ, ಬದಲಿಗೆ ಸರ್ಕಾರಿ ಜಮೀನಿಗಾಗಿ ಅರ್ಜಿ ಸಲ್ಲಿಸಿ ಎಷ್ಟೋ ವರ್ಷಗಳ ನಂತರ ಮಂಜೂರು ಆಗುವವರೆಗೂ ಚಾತಕ ಪಕ್ಷಿಯಂತೆ ಕಾಯುವವರಾಗಿದ್ದಾರೆ. ತರೀಕೆರೆ, ನರಸಿಂಹರಾಜಪುರ ಹಾಗೂ ಮೂಡಿಗೆರೆ ತಾಲೂಕಿನ ಮೇದರಲ್ಲಿ ೧೮ ಕುಟುಂಬದವರು ಮಾತ್ರ ಸರ್ಕಾರಿ ಭೂಮಿಯನ್ನು ಪಡೆದಿದ್ದಾರೆ. ಇದರಲ್ಲಿ ಶೇ.೫೦ಕ್ಕಿಂತ ಹೆಚ್ಚಿನ ಭೂಮಿ ಕೃಷಿಯೋಗ್ಯವಾಗಿರುವುದಿಲ್ಲ.

ದುರ್ಗಮ ಪ್ರದೇಶದಲ್ಲಿರುವುದು, ಭದ್ರಾ ಅಭಯಾರಣ್ಯಕ್ಕೆ ಆತುಕೊಂಡಿರುವುದರಿಂದ ಕಾಡುಪ್ರಾಣಿಗಳ ಉಪಟಳದ ಭಯ, ಮೇಲಾಗಿ ಮೇದರ ನೆಲೆಗಳಿಂದ ಅತೀ ದೂರದಲ್ಲಿ ಮಂಜೂರಾಗಿರುವ ಭೂಮಿ. ಇತ್ಯಾದಿ ಅಂಶಗಳನ್ನು ದಾಖಲಿಸಬಹುದು. 'ಎ' ವರ್ಗದ ಭೂಮಿ ಕಾಯ್ದಿರಿಸಿ, ಮಿಲ್ಟ್ರಿ, ಪರಿಶಿಷ್ಟ ಜಾತಿ, ಪಂಗಡ ಹಾಗೂ ಸಾರ್ವಜನಿಕರಿಗೆ ವಿತರಿಸಲಾಗುವ ಭೂಮಿ, ಇಂದು ಭೂಮಿಯ ಅಲಭ್ಯತೆಯಿಂದಾಗಿ ಮೇದರಿಗೆ ಭೂಮಿ ಸಿಗುತ್ತಿಲ್ಲ. ಅರ್ಜಿ ನಮೂನೆ ೫೦ ಹಾಗೂ ೫೩ರಲ್ಲಿ ಅರ್ಜಿ ಸಲ್ಲಿಸಿದ್ದರೆ ಭೂ ಮಂಜೂರಾತಿಯಾಗುತ್ತಿತ್ತು. ಆದರೆ ಅಜ್ಞಾನದಿಂದ ಇಂತಹ ಪ್ರಕ್ರಿಯೆ ನಡೆಸದ್ದರಿಂದ ಇಲ್ಲಿಯೂ ಭೂಮಿಯಿಂದ ವಂಚಿತರಾಗಿದ್ದಾರೆ. ಯಾವುದೇ ತರಹ (RF, MF, SF, DC ಫಾರೆಸ್ಟ್) ಕಾಡಿನಲ್ಲಿ ವಾಸಮಾಡುತ್ತ, ಸದರಿ ಗ್ರಾಮ ಪಂಚಾಯತಿ ಮೂಲಕ ಅರ್ಜಿಯನ್ನು ಸಲ್ಲಿಸಿ, ಮೂರು ವರ್ಷಗಳಿಂದ ಈ ಬುಡಕಟ್ಟು ಕುಟುಂಬ ವಾಸಿಸುತ್ತಿರುವ ದಾಖಲಾತಿಯಿದ್ದರೂ ಭೂ ಮಂಜೂರಾತಿಯಾಗುತ್ತಿತ್ತು. ಇಂತಹ ಪ್ರಕರಣಗಳೂ ಮೇದರಲ್ಲಿ ಇಲ್ಲದಿರುವುದು ಕ್ಷೇತ್ರಕಾರ್ಯದಿಂದ ತಿಳಿಯಲಾಗಿದೆ.

೪.೨.೨ ರಾಜಕೀಯ ಮೀಸಲಾತಿ

ಸಂವಿಧಾನದ ಕಲಂ ೧೫ ಪ್ರಚುರಪಡಿಸುವ ಸಮಾನತೆಯ ಅಂಶಗಳನ್ನು ಪರಿಗಣಿಸಿ ಮಹಿಳಾ, ಪರಿಶಿಷ್ಟಜಾತಿ, ಪಂಗಡ, ಹಿಂದುಳಿದ ಹಾಗೂ ಅಲ್ಪಸಂಖ್ಯಾತರಿಗೂ ಮೀಸಲಾತಿ ಸೌಲಭ್ಯವನ್ನು ಸಂವಿಧಾನದತ್ತಕವಾಗಿ ನೀಡಬೇಕೆಂಬುದಾಗಿದ್ದು ರಾಜಕೀಯವು ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ನಿರ್ಧರಿಸುವ ಪ್ರಕ್ರಿಯೆಯೆಂದು ಭಾವಿಸಲಾಗಿದೆ. ರಾಜಕೀಯ ಅಂತಸ್ತು

ಇತರೆ ಎಲ್ಲಾ ಅಂತಸ್ತುಗಳಿಗಿಂತ ಮಿಗಿಲಾದುದು ಎಂದು ಭಾವಿಸುವ ಮನೋಭಾವ ಇತ್ತೀಚೆಗೆ ವ್ಯಾಪಕವಾಗುತ್ತಿದೆ. ಇದರಿಂದ ವೈಯಕ್ತಿಕ ಹಾಗೂ ಸಮೂಹದ ಉದ್ದೇಶಗಳನ್ನು ಕಾಪಾಡುವ ಉದ್ದೇಶ ಹೊಂದಲಾಗಿದೆ. ಚುನಾವಣೆಯ ಮೂಲಕ ಜನರಿಂದ ಆಯ್ಕೆಗೊಳ್ಳುವ ಜನಪ್ರತಿನಿಧಿಗಳು ಸಮಾಜದಲ್ಲಿ ಉನ್ನತ ಗೌರವಾದರಗಳನ್ನು ಹೊಂದಿ ರಾಜಕೀಯ ಅಂತಸ್ತು-ಸ್ಥಾನಮಾನಗಳನ್ನು ಹೊಂದುತ್ತಿರುವುದು ಪ್ರಪಂಚದಾದ್ಯಂತಹ ವಿಶೇಷವಾಗಿ ಕಂಡುಬರುತ್ತಿದೆ.

ಬಲಾಢ್ಯಕೋಮು, ಮೇಲ್ಜಾತಿ, ಭೂಮಾಲೀಕ, ಆರ್ಥಿಕ ಸ್ಥಿತಿವಂತರು ಇತ್ಯಾದಿ ತರಹೇವರಿಯವರು ರಾಜಕೀಯ ಜಂಗೀಕುಸ್ತಿಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಆದರೆ ಮತದಾನದಿಂದಲೇ ವಂಚಿತರಾಗಿದ್ದ, ಸಹಸ್ರ ಸಹಸ್ರ ವರ್ಷಗಳಿಂದ ಮನುಷ್ಯರಾಗಿಯೂ ಮನುಷ್ಯರಂತೆ ತಿಳಿಯದಂತಹ ದಲಿತ, ಶೋಷಿತ, ಗಿರಿಜನರನ್ನು ಸಮಾಜದ ಮುಖ್ಯವಾಹಿನಿಯಲ್ಲಿ ತರಬೇಕೆಂದು, ಕಳೆದುಕೊಂಡ ಧ್ವನಿ ಮರುಧ್ವನಿಸಬೇಕೆಂದು ರಾಜಕೀಯ ಮೀಸಲಾತಿಯು ಜಾರಿಗೆ ಬಂದಿತು. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರಿಗೆ ಪ್ರತ್ಯೇಕ ರಾಜಕೀಯ ಮೀಸಲು ಕ್ಷೇತ್ರವನ್ನು ನಿಗಧಿಪಡಿಸಲಾಯಿತು. ಈ ಸಮುದಾಯದವರು ಹೆಚ್ಚಿರುವ ಪ್ರದೇಶವನ್ನು ಮೀಸಲು ಕ್ಷೇತ್ರವನ್ನಾಗಿ ಘೋಷಿಸಿ, ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರ ಹಾಗೆಯೇ ಪರಿಶಿಷ್ಟ ಪಂಗಡ ಮೀಸಲು ಕ್ಷೇತ್ರವೆಂದು ಪರಿಗಣಿಸುವ ಪರಿಪಾಠದಿಂದಾಗಿ, ಸ್ಥಳೀಯ ಸಂಸ್ಥೆಯಿಂದ ಹಿಡಿದು ಲೋಕಸಭೆವರೆಗೂ ಪರಿಶಿಷ್ಟರಿಗೆ ಈ ರಾಜಕೀಯ ಮೀಸಲಾತಿಯನ್ನು ಒದಗಿಸಲಾಗಿದೆ. ಈ ಕಾರಣದಿಂದಾಗಿ ಪರಿಶಿಷ್ಟರಲ್ಲೇ ರಾಜಕೀಯ ಪೈಪೋಟಿಯಿಂದಾಗಿ ಸದಸ್ಯರನ್ನು ಆಯ್ಕೆಗೊಳಿಸುವ ಪ್ರಕ್ರಿಯೆಯು 'ಸಾಮಾಜಿಕ ನ್ಯಾಯ' ಒದಗಿಸುವ ಪ್ರಯತ್ನವಾಗಿದೆ. ಪರಿಶಿಷ್ಟರಲ್ಲಿ ತಮ್ಮ ಸ್ಥಾನಕ್ಕಾಗಿ ಪೈಪೋಟಿ ನಡೆಸುತ್ತಾರೆ. ವಿವಿಧ ರಾಜಕೀಯ ಮುಖಂಡರು ಹಾಗೂ ರಾಜಕೀಯ ಪಕ್ಷಗಳು ತಮ್ಮ ತಮ್ಮ ಅಭ್ಯರ್ಥಿಗಳ ಬೆಂಬಲಕ್ಕೆ ನಿಲ್ಲುತ್ತವೆ. ಯಾವುದೇ ಕ್ಷೇತ್ರದ ಮೀಸಲು ಅಭ್ಯರ್ಥಿ ಆಯ್ಕೆಗೊಳ್ಳುವ ಮೂಲ ಉದ್ದೇಶ, ಸಂಬಂಧಿಸಿದ ಕ್ಷೇತ್ರದ ಅಭಿವೃದ್ಧಿ ಜೊತೆಗೆ ಯಾವ ಕ್ಷೇತ್ರದಿಂದ ಪ್ರತಿನಿಧಿಸಿರುತ್ತಾರೋ ಆ ಕ್ಷೇತ್ರದ ದಮನಿತರ ಧ್ವನಿಯಾಗಿ ಹೊರಹೊಮ್ಮಿ ಅವರ ಕಷ್ಟ-ಸುಖಗಳಿಗೆ ಸ್ಪಂದಿಸಿ ಅವರ ಸರ್ವತೋಮುಖ ಅಭಿವೃದ್ಧಿ ಮಾಡುವುದೇ ಆಗಿದೆ.

ಈ ಹಿಂದೆ ಕರ್ನಾಟಕ ರಾಜ್ಯದಲ್ಲಿ ಕೊಡಗು ಜಿಲ್ಲೆಯ ವಿರಾಜಪೇಟೆ ಹಾಗೂ ಉತ್ತರಕನ್ನಡ ಜಿಲ್ಲೆಯ ಮುಂಡಗೋಡು, ಪರಿಶಿಷ್ಟ ಪಂಗಡದ ಮೀಸಲು ಕ್ಷೇತ್ರವಾಗಿತ್ತು. ಮೇದ ಬುಡಕಟ್ಟಿನ ಹೆಚ್.ಡಿ. ಬಸವರಾಜು, ವಿರಾಜಪೇಟೆ ಮೀಸಲು ಕ್ಷೇತ್ರವನ್ನು ಪ್ರತಿನಿಧಿಸಿ ಎರಡು ಬಾರಿ ವಿಧಾನಸಭಾ ಸದಸ್ಯರಾಗಿದ್ದರು. ಇತ್ತೀಚೆಗೆ ಕರ್ನಾಟಕ ರಾಜ್ಯದ ಮೀಸಲು ಕ್ಷೇತ್ರ ಸಂಖ್ಯೆಯನ್ನು ೨ರಿಂದ ೧೫ಕ್ಕೆ ಹೆಚ್ಚಿಸಲಾಗಿದೆ. ಆದರೆ ಮೇದ ಹಾಗೂ ಇತರೆ ೪೮ ಬುಡಕಟ್ಟುಗಳಲ್ಲಿ ಯಾವೊಂದು ತನ್ನ ಪ್ರತಿನಿಧಿಯನ್ನು ವಿಧಾನಸಭೆಗೆ ಕಳುಹಿಸಿಲ್ಲ. ಬದಲಿಗೆ

ಕರ್ನಾಟಕದಲ್ಲಿ ಬಲಾಢ್ಯ ಪರಿಶಿಷ್ಟ ಪಂಗಡವಾದ ವಾಲ್ಮೀಕಿ, ಬೇಡ, ನಾಯಕ ಬುಡಕಟ್ಟಿನವರೇ ೧೬ ವಿಧಾನಸಭಾ ಸದಸ್ಯತ್ವವನ್ನು ತಮ್ಮದಾಗಿಸಿಕೊಂಡಿದೆ. ಬಹುಶಃ ಉಳಿದ ಬುಡಕಟ್ಟಿಗರಿಗೆ ತಮ್ಮ ಸಾಮರ್ಥ್ಯದ ಬಗೆಯೇ ಅನುಮಾನ ಮೂಡುತ್ತದೆ. ಅಥವಾ ರಾಜಕೀಯ ಪ್ರತಿನಿಧೀಕರಣವೆಂಬುದು ಮರಿಚಿಕೆಯಾಗುತ್ತಿದೆ. ಈ ಅಸಮಧಾನವನ್ನು ಮೇದ ಮುಖಂಡರು ತಿಳಿಸುತ್ತಾರೆ. ರಾಜಕೀಯ ಮೀಸಲಾತಿ ಶೆ.೩ ಇದ್ದು, ಪ್ರಸ್ತುತ ಜನಸಂಖ್ಯೆಕ್ಕೆ ಅನುಗುಣವಾಗಿ ಶೇ.೭.೫ಕ್ಕೆ ಹೆಚ್ಚಿಸಬೇಕೆಂದು ಪರಿಶಿಷ್ಟ ಪಂಗಡದವರ ಒತ್ತಾಯವಾಗಿದೆ. ಸ್ಥಳೀಯ ಪಂಚಾಯತ್ ಚುನಾವಣೆಯಲ್ಲಿ ಮಹಿಳಾ ಮೀಸಲಾತಿ ಶೇ.೧೦ ಇದ್ದು ಇದರಲ್ಲಿ ಶೇ.೫೦ರಷ್ಟು ಬುಡಕಟ್ಟು ಮಹಿಳೆಯರಿಗೆ ಮೀಸಲಿರಿಸಲಾಗಿದೆ. ಪರಿಶಿಷ್ಟ ಪುರುಷರಿಗೂ ಈ ರೀತಿ ಮೀಸಲು ಪ್ರಮಾಣವನ್ನು ಹೆಚ್ಚಿಸಬೇಕೆಂದು ಒತ್ತಾಯಿಸಲಾಗುತ್ತಿದೆ. ಮೀಸಲಾತಿಯಿದ್ದರೂ ರಾಜಕೀಯ ಮೀಸಲಾತಿ ಲಾಭ ಪಡೆಯಲಾಗುತ್ತಿಲ್ಲ. ದುರ್ಬಲ ವರ್ಗದ ಪರಿಶಿಷ್ಟ ಪಂಗಡದವರೆಲ್ಲರೂ ತಮ್ಮ ಸಂಖ್ಯೆಗೆ ಅನುಗುಣವಾಗಿ, ಸಾಮಾಜಿಕ ನ್ಯಾಯವನ್ನು ಪಡೆಯುವ ದೃಷ್ಟಿಯಿಂದ 'ರಾಜಕೀಯ ಒಳಮೀಸಲಾತಿ' ನೀಡಬೇಕೆಂದು ಅವರ ಆಗ್ರಹಪೂರ್ವಕ ನಿಲುವಾಗಿದೆ. ರಾಜಕೀಯ ಮೀಸಲಾತಿ ತಾರತಮ್ಯದ ವಿರುದ್ಧ ಸರ್ಕಾರದ ಗಮನ ಸೆಳೆಯುವ ಬಗ್ಗೆ ಮೇದ ಮುಖಂಡರು ಸಮೀಕ್ಷೆಯ ಸಂದರ್ಭದಲ್ಲಿ ತಿಳಿಸಿರುತ್ತಾರೆ. ರಾಜಕೀಯ ಪ್ರತಿನಿಧೀಕರಣವಿಲ್ಲದೆ ಸಮುದಾಯದ ಪ್ರಗತಿ ಹಾಗೂ ಇತರೆ ನಿರೀಕ್ಷೆಗಳು ಗೌಣವಾಗುತ್ತವೆಂದು ಭಾವಿಸುತ್ತಾರೆ.

೪.೨.೩ ಶಿಕ್ಷಣ ಮತ್ತು ಉದ್ಯೋಗ

ಪ್ರಪಂಚದ ಹಲವು ದೇಶಗಳು ಶಿಕ್ಷಣವನ್ನು ಮೂಲವಾಗಿಸಿಕೊಂಡು ನಾಗರೀಕತೆಯಲ್ಲಿ ಜ್ಞಾನದ ಬಳಕೆಯಲ್ಲಿ ಪ್ರಗತಿ ಸಾಧಿಸಿಕೊಂಡು ಧನಾತ್ಮಕವಾಗಿ ಸಾಮಾಜಿಕ ಬದಲಾವಣೆಯನ್ನು ಹೊಂದುತ್ತಿದೆ. ಆದರೆ ಭಾರತದಲ್ಲಿನ ಅನಕ್ಷರತೆ, ಅಜ್ಞಾನ, ಬಡತನ, ಆರೋಗ್ಯ-ನೈರ್ಮಲ್ಯ, ಜನಸಂಖ್ಯೆ, ಜಾತೀಯತೆ, ಅನೈತಿಕತೆ, ಸೋಮಾರಿತನದಂತಹ ಹಲವಾರು ಸಮಸ್ಯೆಗಳಿಂದಾಗಿ ಇನ್ನೂ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗಿಲ್ಲ. ವ್ಯಕ್ತಿಯ ವ್ಯಕ್ತಿತ್ವವನ್ನು ಅರಳಿಸುವುದೇ ಶಿಕ್ಷಣ. ವ್ಯಕ್ತಿಯನ್ನು ಶಾರೀರಿಕವಾಗಿ, ಬೌದ್ಧಿಕವಾಗಿ, ಧಾರ್ಮಿಕವಾಗಿ ಸನ್ನದ್ದುಗೊಳಿಸುತ್ತದೆ. ಯಾವುದೇ ಒಂದು ರಾಷ್ಟ್ರದ ಆದರ್ಶ ಕಲ್ಪನೆಗಳು, ಸಾಂಸ್ಕೃತಿಕ ಮೌಲ್ಯಗಳು, ಆರ್ಥಿಕ ಹಾಗೂ ಸಾಮಾಜಿಕ ಒಲವು ಶಿಕ್ಷಣದ ಮೇಲೆ ಅವಲಂಬಿತವಾಗಿದೆ. ಹಾಗಾಗಿ ಪ್ರತಿನಿಧಿಯಾಗಿ ಕೆಲಸ ಮಾಡುತ್ತವೆ. ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ, ವ್ಯಕ್ತಿಯ ಭಾಷೆ, ಸಂಸ್ಕೃತಿಯ ಉಳಿವಿಗಾಗಿ ಕೆಲಸ ಮಾಡುತ್ತದೆ. ಶಿಕ್ಷಣದ ಮಹತ್ವವನ್ನು ಮೇದರು ನಿಧಾನವಾಗಿ ಅರ್ಥಮಾಡಿಕೊಂಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಶಿಕ್ಷಣದ ಒಲವು ಹೆಚ್ಚುತ್ತಿದ್ದರೂ, ಇದರ ಗತಿ ಆಶಾದಾಯವಾಗಿ ಕಂಡುಬರುತ್ತಿಲ್ಲ. ತಮ್ಮ ಕುಲಕಸುಬಿನೊಂದಿಗೆ ಇತರೆ ಚಿಕ್ಕಪುಟ್ಟ ಕೆಲಸಗಳನ್ನು ಮಾಡಿದರೂ ತಮ್ಮ ಆಧ್ಯತೆಗಳಲ್ಲಿ ಮಕ್ಕಳಿಗೆ ಶಿಕ್ಷಣಕೊಡಿಸುವುದು ಬಹಳ ಮುಖ್ಯವಾದ ಉದ್ದೇಶವಾಗಿದೆ.

[illegible]

ಒಟ್ಟಿನಲ್ಲಿ ಯಾವುದೇ ಒಂದು ಸಮುದಾಯದ ಸಾಮಾಜಿಕ, ಆರ್ಥಿಕ ಪ್ರಗತಿಗೆ ಶಿಕ್ಷಣವು ಬಹಳ ಮುಖ್ಯವಾಗಿದ್ದು, ಈ ನಿಟ್ಟಿನಲ್ಲಿ ಮೇದ ಸಮುದಾಯದಲ್ಲಿನ ಶೈಕ್ಷಣಿಕ ಮಟ್ಟವನ್ನು ಅಧ್ಯಯನ ಮಾಡಲಾಗಿದ್ದು ಅವುಗಳಲ್ಲಿರುವ ತೊಡಕುಗಳನ್ನು ಈ ಕೆಳಗಿನಂತೆ ಕಂಡುಕೊಳ್ಳಲಾಗಿದೆ.

ಪ್ರಾಥಮಿಕ ಶಿಕ್ಷಣ ಇಂದು ಹಲವು ಶಕ್ತಿಗಳ ಮೂಲವಾಗಿರುವ ಬಗ್ಗೆ ಸರ್ವಸಮ್ಮತ ಅಭಿಪ್ರಾಯವಿದೆ. ಇತ್ತೀಚೆಗೆ ಶಿಕ್ಷಣದ ಒಲವು ಹೆಚ್ಚುತ್ತಿದ್ದು, ಪ್ರಾಥಮಿಕ ಶಿಕ್ಷಣಕ್ಕೆ ಗರಿಷ್ಠ ದಾಖಲಾಗುತ್ತಿದ್ದು, ಉನ್ನತ ಶಿಕ್ಷಣದಲ್ಲಿ ಕ್ಷೀಣಿಸುವಿಕೆಯಿದೆ. ಮೇದರ ಪ್ರಾಥಮಿಕ ಶಿಕ್ಷಣ ಮಜಲನ್ನು ಹೀಗೆ ಕಾಣಬಹುದು. ೧–೭ನೇ ತರಗತಿಯವರೆಗೆ ಶೇ.೨೨.೫೫ರಷ್ಟು, ೮–೧೦ನೇ ತರಗತಿಯವರೆಗೆ ಶೇ.೧೭.೨೩ರಷ್ಟು, ೧೧–೧೨ನೇ ತರಗತಿಯವರೆಗೆ ಶೇ.೭.೧೧ರಷ್ಟು, ಪದವಿಯವರೆಗೆ ಶೇ.೨.೪೦, ಸ್ನಾತಕೋತ್ತರ ಪದವಿ ಶೇ.೦.೬೦ರಷ್ಟು ಇತರೆ ಶೇ.೨.೦೭ರಷ್ಟು ಮಾಹಿತಿ ಲಭ್ಯವಾಗಿದೆ.

ರಾಜ್ಯದಲ್ಲಿ ಶೇ.೬೬.೨೬ರಷ್ಟು ಸಾಕ್ಷರತೆ ಪ್ರಮಾಣವಿದ್ದರೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಶೇ.೫೨.೦೨ರಷ್ಟಿರುವುದು, ಶೈಕ್ಷಣಿಕ ಹಿನ್ನೆಡೆ ತೋರಿಸುತ್ತದೆ. ಇಂದು ಶಿಕ್ಷಣದ ಅಗತ್ಯತೆ ಹಾಗೂ ಅನಿವಾರ್ಯತೆ ಬಗ್ಗೆ ಎಲ್ಲ ಸಮುದಾಯದಲ್ಲೂ ಕಾಳಜಿ ಹೆಚ್ಚುತ್ತಿದ್ದು, ಮೇದರಲ್ಲೂ ಸಾಕ್ಷರತೆಯ ಮಹತ್ವ ತಿಳಿದಿದೆ. ಆದರೆ ಎಂತಹ ಶಿಕ್ಷಣ? ಯಾವ ಮಾಧ್ಯಮ? ಎಂತಹ ಶಾಲೆ? ಮಕ್ಕಳನ್ನು ಶಿಕ್ಷಣದಿಂದ ಏನು ಮಾಡಿಸಬೇಕು? ವಿದ್ಯಾರ್ಥಿಗಳ ಗುರಿಗಳೇನು? ಹಾಸ್ಟೆಲ್ ವ್ಯವಸ್ಥೆಯನ್ನು ಬಳಸಿಕೊಳ್ಳಬೇಕೆ? ಬಾರದೆ? ಇಂತಹ ಹಲವಾರು ಪ್ರಶ್ನೆಗಳಿಗೆ ಮೇದರಲ್ಲಿ ಯಾವ ಉತ್ತರಗಳೂ ಸ್ಪಷ್ಟವಾಗಿ ಹೊರಬರುತ್ತಿಲ್ಲ. ವಾಸ್ತವವಾಗಿ ಆಧುನಿಕ ಸಮಾಜದಲ್ಲಿ ಶಿಕ್ಷಣ ಮತ್ತು ಉದ್ಯೋಗದ ಸ್ಪರ್ಧಾಕತೆಯ ಬಗ್ಗೆ ವಿಶ್ಲೇಷಿಸುವಂತಹ ಮೇದರ ಸಂಖ್ಯೆ ಅತ್ಯಂತ ಸಣ್ಣದು. ನಗರ, ಪಟ್ಟಣ ಪ್ರದೇಶದ ಮೇದರಲ್ಲಿ ಶಿಕ್ಷಣದ ಜಾಗೃತಿ ಕಾಣುತ್ತೇವೆ. ಬಹುತೇಕರು ತಮ್ಮ ಮಕ್ಕಳನ್ನು ಆಂಗ್ಲ ಮಾಧ್ಯಮ ಶಾಲೆಗೆ ಸೇರಿಸಿದ್ದಾರೆ.

'ಭಾರತೀಯ ಸಂದರ್ಭದಲ್ಲಿ ಮೇಲು ಜಾತಿಯವರು ಆಧುನಿಕರಾಗುವಾಗ ಅದಕ್ಕಿಂತ ಮುಖ್ಯವಾಗಿ ಅಧಿಕಾರದ ಕೇಂದ್ರಕ್ಕೆ ಸೇರ್ಪಡೆಯಾಗುವಾಗ ತಮ್ಮ ದೇಶಿಯ ಭಾಷೆಗಳಿಗೆ ಪರ್ಯಾಯವಾಗಿ ಇಂಗ್ಲೀಷನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಈ ಚಾರಿತ್ರಿಕ ಸಂಗತಿಯನ್ನು ಮರೆಯುವಂತಿಲ್ಲ. ಹಾಗಾಗಿ ದಲಿತರು ಮತ್ತು ಕೆಳಜಾತಿಗೆ ಸೇರಿದವರು ತಾವು ಅಖಿಲ ಭಾರತ ಮಟ್ಟದ ಸಂಪರ್ಕ ಜಾಲವೊಂದನ್ನು ರೂಪಿಸಿಕೊಳ್ಳಲು ಸಾಧ್ಯವಾಗದೇ ಹೋಗಿರುವುದಕ್ಕೆ ತಾವೆಲ್ಲರೂ ದೇಶಿಯ ಭಾಷೆಗಳಿಗೆ ಕಟ್ಟು ಬಿದ್ದಿರುವುದೇ ಕಾರಣವೆಂದು ತಿಳಿದರೆ ಅದರಲ್ಲಿ ಅಚ್ಚರಿಯೇನಿಲ್ಲ. ಅವರು ಈ ಸಂದರ್ಭವನ್ನು ಮೀರಲು ಇಂಗ್ಲಿಷ್‌ನ ಪರವಾಗಿ ನಿಲ್ಲುವುದು ಸಹಜವಾಗಿಯೇ ಇದೆ. ಕನ್ನಡ ಹಾಗೂ ಇಂಗ್ಲಿಷ್ ಮಾಧ್ಯಮಗಳ ಆಯ್ಕೆಯಲ್ಲಿ ಮೇದರಲ್ಲಿ ಗೊಂದಲವಿದ್ದು, ತಾತ್ವಿಕ ನಿರ್ಧಾರಗಳು ಕಂಡುಬರುವುದಿಲ್ಲ. ಚಿಕ್ಕಮಗಳೂರು ಜಿಲ್ಲೆ

ಮಲೆನಾಡಿನ ಪ್ರದೇಶವಾಗಿದ್ದು ನರಸಿಂಹರಾಜಪುರ ಹಾಗೂ ಮೂಡಿಗೆರೆ ತಾಲೂಕುಗಳಲ್ಲಿ ಗಿರಿಜನರಿಗಾಗಿಯೇ ನಿರ್ಮಿಸಲಾಗಿರುವ 'ಆಶ್ರಮಶಾಲೆ'ಯಲ್ಲಿ 'ಮೇದ'ರ ಮಕ್ಕಳು ಓದುತ್ತಿರುವುದು ಶೇ.೨ರಷ್ಟು ಮಾತ್ರ. ಅದೂ ಆಲ್ದೂರು ಹೋಬಳಿಯ ಮಕ್ಕಳು ಮಾತ್ರ. ಇದಲ್ಲದೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಎಲ್ಲ ಹಂತದ ಹಾಸ್ಟೆಲ್‌ಗಳೂ ಇದ್ದು, ಓದುವ ಮೇದರ ಮಕ್ಕಳ ಸಂಖ್ಯೆ ಅತೀ ವಿರಳವಾಗಿದೆ. ಯಾಕಿದ್ದನ್ನು ಇಷ್ಟು ಒತ್ತುಕೊಟ್ಟು ತಿಳಿಸಲು ಕಾರಣ, ಮೇದರಲ್ಲಿ ಮಡಿ–ಮೈಲಿಗೆಯ ಆಧಾರದ ಮೇಲೆ ಪ್ರತ್ಯೇಕವಾಗಿರುವ ಧೋರಣೆ ಒಂದು ಕಡೆ, ಮಕ್ಕಳನ್ನು ತಮ್ಮ ಮಡಿಲಿನಲ್ಲಿಯೇ, ತಮ್ಮ ಕಣ್ಮುಂದೆಯೇ ಆಡಿಕೊಂಡು ಬೆಳೆಯಬೇಕೆಂಬ ಧೋರಣೆ ಮತ್ತೊಂದು ಕಡೆ. ಈ ಧೋರಣೆಗಳು ಆರ್ಥಿಕ ಸಮಸ್ಯೆಗಿಂತಲೂ ಕ್ರೂರವಾದುದು ಎಂಬುದು ನನ್ನ ಅಭಿಪ್ರಾಯ. ಮಕ್ಕಳನ್ನು ಹಾಸ್ಟೆಲ್‌ನಲ್ಲಿ ಯಾಕೆ ಓದಿಸುವುದಿಲ್ಲ ಎಂದು ಕೇಳುವ ಪ್ರಶ್ನೆಗಳಿಗೆ, 'ಅಲ್ಲಿ ಆ ಜಾತಿ, ಈ ಜಾತಿ'ಯವರೆಲ್ಲ ಇರುತ್ತಾರೆ, 'ಮೈಯಲ್ಲಿ ಕಜ್ಜಿ ಕುರ ಏಳ್ತಾವೆ' ಅದಕ್ಕೆ ಕಳಿಸೋದಿಲ್ಲ ಅಂತಾರೆ. ಬಹುಶಃ ಮೇದರಲ್ಲಿ ಹಾಸ್ಟೆಲ್ ಬಗ್ಗೆ ಇರುವ ವಾಸ್ತವವೋ, ಪೂರ್ವಗ್ರಹಣಗಳಿಂದ ಶಿಕ್ಷಣವನ್ನು ಪ್ರಾಥಮಿಕ ಹಂತದಿಂದಲೇ ಸರಿದಾರಿಯಲ್ಲಿ ನಡೆಯದಿರುವಂತೆ ಸ್ವಯಂಕೃತ ಅಪರಾಧವನ್ನು ಮಾಡುತ್ತಿದ್ದಾರೆ.

ಇನ್ನು ಶಾಲೆಗೆ ಹೋಗುವ ಮಕ್ಕಳು ಓದುವಿನಲ್ಲಿ ಇತರೆ ಮಕ್ಕಳಿಗಿಂತ ಹಿಂದುಳಿದಿದ್ದಾರೆ. ಗ್ರಹಣ ಶಕ್ತಿ, ಆಟ–ಪಾಠಗಳಲ್ಲಿ ಹಿಂದುಳಿದಿರುವಿಕೆ, ಬಿರುದು–ಬಾವಲಿ–ಪಾರತೋಷಕಗಳನ್ನು ಹೆಚ್ಚಾಗಿ ಪಡೆಯದಿರುವುದು ಇತ್ಯಾದಿಗಳು ಪುರಾವೆ ಒದಿಗಿಸುತ್ತವೆ. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಉತ್ತೇಜನ ನೀಡುತ್ತಿರುವುದಾದರೂ, ಗಂಡು ಮಕ್ಕಳನ್ನು ಜಾಸ್ತಿ ಓದಿಸಬೇಕು ಎಂಬ ಧೋರಣೆ ಮನಸ್ಸಿನಲ್ಲಿದೆ. ಸಾಮಾನ್ಯ ಶಿಕ್ಷಣಕ್ಕೆ ಆದ್ಯತೆ ನೀಡಿ ವೃತ್ತಿಶಿಕ್ಷಣದಿಂದ ದೂರ ಉಳಿದಿದ್ದಾರೆ. ಕಲಾ ವಿಭಾಗವನ್ನು ಹೆಚ್ಚಾಗಿ ಆಯ್ಕೆ ಮಾಡಿಕೊಂಡು ನಂತರ ವಾಣಿಜ್ಯ, ವಿಜ್ಞಾನ ಆಯ್ಕೆಯ ಕ್ರಮ ಅನುಸರಿಸುತ್ತಿದ್ದಾರೆ. ಐ.ಟಿ.ಐ, ಡಿಪ್ಲೋಮ ಕೋರ್ಸ್, ಜೆ.ಓ.ಸಿ, ನರ್ಸಿಂಗ್, ಕಂಪ್ಯೂಟರ್ ಕೋರ್ಸ್‌ಗಳು ತೀರ ಕಡಿಮೆಯಿದೆ. ಸ್ನಾತಕೋತ್ತರ ಪದವಿಯನ್ನು ಒಟ್ಟು ೧೧ ಜನರು ಪಡೆದಿದ್ದು ಮೂಡಿಗೆರೆ ತಾಲೂಕಿನ ಮೇದರು ಮುಂಚೂಣಿಯಲ್ಲಿದ್ದಾರೆ. ಎಂ.ಎ, ಎಂ.ಬಿ.ಎ ಕೋರ್ಸ್ ಜೊತೆಗೆ ಎಂ.ಬಿ.ಬಿಎಸ್., ಎಂ.ಡಿ ಕೋರ್ಸಿನವರು ಇಲ್ಲಿದ್ದಾರೆ.

ನರಸಿಂಹರಾಜಪುರದಲ್ಲಿ ೦೩ ಸ್ನಾತಕೋತ್ತರ ಪದವಿಧರರಿದ್ದು, ತರೀಕೆರೆಯಲ್ಲಿ ಎಂ.ಬಿ.ಎ ಪದವಿದರರು ಒಬ್ಬರಿದ್ದಾರೆ. ಶೈಕ್ಷಣಿಕ ಮಟ್ಟವು ಉದ್ಯೋಗಕ್ಕೆ ಪೂರಕವಾಗಿಲ್ಲದಿರುವುದು ಕಂಡುಬರುತ್ತಿದೆ. ಉದ್ಯೋಗಕ್ಕೂ, ಶಿಕ್ಷಣಕ್ಕೂ ಇಂದಿನ ಆಯ್ಕೆ ವಿಧಾನದಲ್ಲಿ ತಾಳೆ ಇಲ್ಲದಿರುವುದು ಬೇರೆ ಪ್ರಶ್ನೆ. ಆದರೆ ಶಿಕ್ಷಣದ ಆಯ್ಕೆ ಪ್ರಕಾರಗಳಲ್ಲಿ ಮೇದರು ತುಂಬಾ ಹಿಂದುಳಿದಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು ೭೨ ಮಂದಿ ಸರ್ಕಾರಿ ಹುದ್ದೆಗಳಲ್ಲಿದ್ದು, ಒಟ್ಟು ಜನಸಂಖ್ಯೆಯ ಶೇ.೩.೮೯ರಷ್ಟಿದೆ. ಇದರಲ್ಲಿ ಶೇ.೯೦ ಭಾಗ 'ಡಿ' ದರ್ಜೆ ನೌಕರರಿದ್ದು,

[illegible]

[illegible]

ಉಳಿದ ಶೇ.೧೦ ಭಾಗ ಕ್ಲರ್ಕ್, ಗಾರ್ಡ್, ವಾಚರ್, ಫಾರೆಸ್ಟರ್, ಹಾಸ್ಟೆಲ್ ಅಡಿಗೆಯವರು, ಮೇಲ್ವಿಚಾರಕರು, ಉಪತಹಶೀಲ್ದಾರ್, ಮ್ಯಾನೇಜರ್, ಉಪನ್ಯಾಸಕರು ಇವುಗಳಲ್ಲಿ ಬಹುತೇಕ ಮುಂಬಡ್ತಿಯಿಂದಾಗಿ ಈ ಹುದ್ದೆಯಲ್ಲಿರುವವರು ಹಲವರು ಹತ್ತಾರು ವರ್ಷಗಳಿಂದ ಅರೆಕಾಲಿಕ ನೌಕರರಿದ್ದು ಉದ್ಯೋಗ ಖಾತ್ರಿಯಾದವರು, ಮುಂಬಡ್ತಿಯಿಂದ ಮತ್ತೊಂದು ಅಂತಸ್ತನ್ನು ಪಡೆದವರ ಸಂಖ್ಯೆಯೇ ಹೆಚ್ಚು. ಇದರಿಂದ ಸ್ಪಷ್ಟವಾಗುವುದೇನೆಂದರೆ ತುಂಬಾ ಸ್ಪರ್ಧೆ ಇಲ್ಲದ ಸಮಯದಲ್ಲಿ ನೌಕರಿಗೆ ಸೇರಿರುವ ನೌಕರರು ನಿವೃತ್ತಿ ಅಂಚಿನಲ್ಲಿದ್ದಾರೆ. ಪಶ್ಚಿಮ ಘಟ್ಟ ಪ್ಯಾಕೇಜ್ ವಿಶೇಷ ನೇಮಕಾತಿಯಲ್ಲಿ ಐದು ವಿದ್ಯಾವಂತ ಯುವಕರಿಗೆ ಫಾರೆಸ್ಟ್ ವಾಚರ್ ನೌಕರಿ ದಕ್ಕಿದ್ದು ಬಿಟ್ಟರೆ ಸರ್ಕಾರಿ ಉದ್ಯೋಗಗಳ ಲಭ್ಯತೆ ತೀರ ವಿರಳವೆ.

'...ಆಯಕಟ್ಟಿನ ಜಾಗಗಳಲ್ಲಿ ಕೆಳಜಾತಿಗಳ ನೇಮಕವನ್ನು ಬದಿಗೆ ಸರಿಸುವ ಸಂದರ್ಭಗಳೇ ಹೆಚ್ಚು. ಒಂದು ವೇಳೆ ಅಂತಹ ಹುದ್ದೆಗಳಿಗಾಗಿ ನ್ಯಾಯೋಚಿತವಾಗಿ ಸಲ್ಲಬೇಕಿದ್ದುದನ್ನು ಕೇಳಿದರೆ 'ನಿಮಗೆ ಅರ್ಹತೆ ಇಲ್ಲ. ನಿಮಗೆ ಸಾಮರ್ಥ್ಯವಿಲ್ಲ' ಎಂಬ ಟೀಕಾ ಪ್ರಹಾರಗಳು ಹಾಗೂ ಅವಹೇಳನಕಾರಿ ಮಾತುಗಳು ಅಗ್ಗದ ಪ್ರಮಾಣದಲ್ಲಿ ಪ್ರಯೋಗವಾಗುತ್ತಿವೆ.'[೬] ಈ ಮಾತುಗಳ ಆಂತರ್ಯ ಮೇದ ಬುಡಕಟ್ಟುವಿಗೂ ಅನ್ವಯಿಸುತ್ತದೆ.

ಅರೆ ಸರ್ಕಾರಿ, ಖಾಸಗಿ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಮೇದರ ಸಂಖ್ಯೆ ಕಡಿಮೆ. ಉದ್ಯೋಗಕ್ಕೆ ಸರಿ ಹೊಂದುವ ಶಿಕ್ಷಣದ ಕೊರತೆ ಹಾಗೂ ಸ್ಪರ್ಧಾತ್ಮಕತೆಯ ಕೊರತೆಯಿಂದ ಮೇದರು ಹಿಂದುಳಿದಿದ್ದಾರೆ. ಇಂದಿನ ಜಾಗತೀಕರಣದ ಸಂದರ್ಭದಲ್ಲಿ 'ಖಾಸಗಿವಲಯ'ದಲ್ಲಿ ಮೀಸಲಾತಿ ಇಲ್ಲದಿರುವುದೂ ಕಾರಣವಾಗಿದೆ. ಆಗೊಮ್ಮೆ ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದರೆ ಕಡಿಮೆ ಅಂತಸ್ತಿನ ಕೆಲಸಗಳು. ತಾಂತ್ರಿಕ ಹಾಗೂ ಕೌಶಲ್ಯರಹಿತ ಶಿಕ್ಷಣವನ್ನು ಪಡೆದಿರುವುದು ಇಂದಿನ ಸ್ಪರ್ಧಾ ಪ್ರಪಂಚದಲ್ಲಿ ಮೇದರು ಔದ್ಯೋಗಿಕ ಕ್ಷೇತ್ರದಲ್ಲಿ ಹಿನ್ನಡೆ ಅನುಭವಿಸುತ್ತಿದ್ದಾರೆ.

ಇನ್ನು ನಗರಗಳಲ್ಲಿರುವ ಮೇದರ ಮಕ್ಕಳಲ್ಲಿ ಕೀಳರಿಮೆ ಅತ್ಯಂತ ಕಡಿಮೆಯಿದ್ದು. ತಮ್ಮ ಸಾಮರ್ಥ್ಯಕ್ಕನುಗುಣವಾಗಿ ಸರ್ಕಾರಿ, ಅರೆ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ತೃಪ್ತಿದಾಯಕವಾಗಿ ದುಡಿಯುತ್ತಿದ್ದಾರೆ. ಸ್ವಾಭಿಮಾನ ಪ್ರವೃತ್ತಿಯ ಮೇದರು ತಮ್ಮ ಇತರೆ ನೌಕರಿ ಜೊತೆಯಲ್ಲಿ ಕುಲಕಸುಬನ್ನೂ ಮುಂದುವರೆಸುತ್ತಿದ್ದಾರೆ. ರಾಮನಗರ ಜಿಲ್ಲೆಯ ಮಾಗಡಿಯ ಅನೇಕ ಕುಟುಂಬಗಳು, ಬೆಂಗಳೂರಿನ ಕಾಮಾಕ್ಷಿಪಾಳ್ಯ, ಗೊರ್‍ಗುಂಟೆಪಾಳ್ಯ, ಮಹದೇಶ್ವರನಗರ ಇತ್ಯಾದಿ ನಗರದ ಅಂಚಿನ ಪ್ರದೇಶಗಳಲ್ಲಿ ವಾಸಿಸುತ್ತಿರುವ ನೌಕರರು ಮೂಲ ಕಸುಬನ್ನು ಮುಂದುವರೆಸಿಕೊಂಡು ಹೋಗುತ್ತಿರುವುದು ಕ್ಷೇತ್ರಕಾರ್ಯ ದಿನಗಳಲ್ಲಿ ಕಂಡುಕೊಳ್ಳಲಾಗಿದೆ. ಶೇ.೭೫ಕ್ಕಿಂತ ಹೆಚ್ಚಿನ ಮೇದರು ಪ್ರೌಢಶಿಕ್ಷಣದೊಳಗಿದ್ದು, ಉನ್ನತ ಶಿಕ್ಷಣಕ್ಕೆ ಆಸ್ಥೆವಹಿಸದಿರುವುದೂ ಉದ್ಯೋಗವಕಾಶಗಳಿಂದ ವಂಚಿತರಾಗಲು ಕಾರಣವಾಗಿದೆ. ಇತ್ತೀಚಿನ

ದಿನಗಳಲ್ಲಿ ಬಲಾಢ್ಯ ಬುಡಕಟ್ಟುಗಳು ಮೀಸಲಾತಿಯ ಬಹುತೇಕ ಸೌಲಭ್ಯಗಳನ್ನು ತಮ್ಮದಾಗಿಸಿಕೊಳ್ಳುವ ಸಂದರ್ಭದಲ್ಲಿ ಯಾವ ಬೆಂಬಲವೂ ಇಲ್ಲದ ಮೇದ ಬುಡಕಟ್ಟಿನ ಯುವಕ, ಯುವತಿಯರು ಮೂಲೆಗುಂಪಾಗುತ್ತಿರುವುದು, ಉದ್ಯೋಗ ಸಂಬಂಧಿತ ಪ್ರಶ್ನೆಗಳಿಗೆ ಸೂಚನಾದಾರರು ಉತ್ತರಿಸಿರುವುದು ಕಂಡುಕೊಳ್ಳಲಾಯಿತು. ಮೇದ ಬುಡಕಟ್ಟಿನ ಯುವಕರು ಸೋಮಾರಿಗಳಲ್ಲ. ಕೃಷಿ ಇಲ್ಲವೇ ಕುಲಕಸುಬಿನಲ್ಲಿ ನಿರತರಾಗಿರುತ್ತಾರೆ. ಆದರೆ ಸರ್ಕಾರಿ ಉದ್ಯೋಗ ಸಿಗುತ್ತಿಲ್ಲದರ ಕಳವಳ ಎದ್ದು ಕಾಣುತ್ತಿತ್ತು. ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿ ಹೆಸರನ್ನು ನೋಂದಾಯಿಸಿಕೊಂಡು, ಸಂದರ್ಶನ ಪತ್ರ ಬಾರದ್ದರಿಂದ ನಿಯಮಾನುಸಾರ ನವೀಕೃತ ಮಾಡಿಸುವ ಗೋಜಿಗೂ ಹೋಗದೆ, ಸಂದರ್ಶನ ಪತ್ರದ ನಿರೀಕ್ಷೆಯಲ್ಲಿ ಚಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ..!

ಮುಗ್ಧ ಮೇದರು ನೌಕರಿಗೆ ಆಯ್ಕೆಯಾಗಿ, ಉದ್ಯೋಗ ಖಾತ್ರಿಗೊಳಿಸುವ ಮುನ್ನ ಕಂದಾಯ ಇಲಾಖೆ ವಿಚಾರಣೆ, ಪೊಲೀಸ್ ಇಲಾಖೆ ವಿಚಾರಣೆ ನಡೆಸುವಂತಹ ಸಂದರ್ಭದಲ್ಲಿ ಅನಗತ್ಯ ಕಿರುಕಳ ಅನುಭವಿಸಿದ್ದಾರೆ. ಅದೂ ಇಲಾಖೆಯ ಸ್ವಯಂಕೃತ ಅಪರಾಧದಿಂದಲೇ ಅಂದರೆ 'ಮೇದ' ಬದಲಿಗೆ 'ಮೇಧಾ', 'ಮೇಧ' ಎಂದು ಉಲ್ಲೇಖಿಸಿ, 'ಜಾತಿ ಪ್ರಮಾಣ ಪತ್ರ' ನೀಡಿದ ಇಲಾಖಾ ಅಧಿಕಾರಿಗಳೇ ಪುನರ್‌ಪರಿಶೀಲನೆಗಾಗಿ ಇಡೀ ಕೇರಿಯ ಪ್ರಮಾಣ ಪತ್ರಗಳನ್ನು ಮತ್ತೆ ಮತ್ತೆ ತಿರುವಿ ಹಾಕಿ ಇಲಾಖಾ ತಪ್ಪು ಏನೂ ಇಲ್ಲ ಎಂಬ ಸಬೂಬಿನೊಂದಿಗೆ ಅವರ ಭಕ್ಷೀಸಿಗೆ ಒತ್ತಾಯಿಸುವ ಪರಿಯನ್ನು ಮೇದರು ತಿಳಿಸುತ್ತಾರೆ.

ಮತ್ತೊಂದು ಪ್ರಕರಣದಲ್ಲಿ ದಾವಣಗೆರೆಯ ಮೇದ ವರನೊಬ್ಬ ಮಹಾರಾಷ್ಟ್ರದ 'ಬುರಡ್' ಯುವತಿಯನ್ನು ವಿವಾಹವಾದರು. ಇಬ್ಬರೂ ಎಂಬಿಬಿಎಸ್ ಪದವಿಧರರು. ಮಹಾರಾಷ್ಟ್ರದಲ್ಲಿ ನೀಡಿರುವ 'ಬುರಡ್' ಪ್ರಮಾಣ ಪತ್ರ ಕರ್ನಾಟಕದಲ್ಲಿ ಮಾನ್ಯ ಮಾಡಲಾಗುವುದಿಲ್ಲ. ಕರ್ನಾಟಕದ ಬೆಳಗಾವಿ ಪ್ರದೇಶಗಳಲ್ಲಿ ಮಾತ್ರ ಬುರುಡ್ ಇದ್ದು ದಾವಣಗೆರೆಯಲ್ಲಿ ಇರುವುದಿಲ್ಲವೆಂಬ 'ವಾದ ಸರಣಿ'ಯಿಂದ ಬೇಸತ್ತ ವಿಚಾರವನ್ನು ಮೇದರು ವಿವರವಾಗಿ ತಿಳಿಸುತ್ತಾರೆ. ಇಂತಹ ಹಲವಾರು ಪ್ರಕರಣಗಳು ನ್ಯಾಯಾಲಯದವರೆಗೂ, ಇಲಾಖೆಗಳ ಕಡತದಲ್ಲಿ ಬಹುದಿನಗಳವರೆಗೂ ಕುಳಿತು, ಜೀವ ಪಡೆದಿವೆ. ಒಟ್ಟಾರೆ ಮೇದರ ಶೈಕ್ಷಣಿಕ ಹಾಗೂ ಔದ್ಯೋಗಿಕ ಸಮಸ್ಯೆಗಳು ಇಂದಿಗೂ ಹೆಚ್ಚಾಗಿವೆ.

೪.೨.೪. ಇತರೆ ಸೌಲಭ್ಯಗಳು

ಬುಡಕಟ್ಟು ಜನರ ಅಭಿವೃದ್ಧಿಯ ಉದ್ದೇಶಕ್ಕಾಗಿ ಬುಡಕಟ್ಟು ಜನರ ಹಿತಾಸಕ್ತಿಗಳನ್ನು ರಕ್ಷಿಸಲು ಕಾನೂನು ಕಾಯ್ದೆಯ ಬೆಂಬಲ ಒದಗಿಸುವುದು. ಹಾಗೂ ಬುಡಕಟ್ಟು ಜನರ

ಜೀವನ ಮಟ್ಟವನ್ನು ಅಭಿವೃದ್ಧಿ ಪಡಿಸುವುದು. ಬುಡಕಟ್ಟುಪರ ಯೋಜನೆಗಳನ್ನು ನೇರವಾಗಿ ಫಲಾನುಭವಿಗಳಿಗೆ ಮುಟ್ಟಲು ಹಾಗೂ ಅನಾವಶ್ಯಕ ವಿಳಂಬವನ್ನು ತಪ್ಪಿಸಲು ಮತ್ತು ಪರಿಣಾಮಕಾರಿ ಯೋಜನೆಗಳನ್ನು ಪರಿವೀಕ್ಷಿಸಲು ಅನುಕೂಲವಾಗುವಂತೆ ಅಧಿಕಾರ ವಿಕೇಂದ್ರಿಕರಣದ ಮೂಲಕ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳೆಂದು ವಿಭಜಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಅವುಗಳಲ್ಲಿ ಮುಖ್ಯವಾಗಿ ಶೈಕ್ಷಣಿಕ ನೆರವಿನ ಯೋಜನೆ, ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳು, ಆಶ್ರಮ ಶಾಲೆಗಳು (ಕರ್ನಾಟಕದಲ್ಲಿ ೯೧ ಆಶ್ರಮ ಶಾಲೆಗಳಿದ್ದು, ೫೭೨೫ ಬುಡಕಟ್ಟು ಮಕ್ಕಳು ಅಭ್ಯಾಸ ಮಾಡುತ್ತಿದ್ದಾರೆ), ಮೆಟ್ರಿಕ್ ಪೂರ್ವ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾಗಿ ವಿದ್ಯಾರ್ಥಿ ನಿಲಯಗಳ ಸೌಲಭ್ಯ, ಬುಡಕಟ್ಟು ಪಂಗಡದ ಮಕ್ಕಳಿಗೆ ೫ ರಿಂದ ೧೦ನೇ ತರಗತಿಯವರೆಗೆ ರಾಜ್ಯದ ಅನುದಾನದಿಂದ ನವೋದಯ ಶಾಲೆಗಳನ್ನು ಸ್ಥಾಪಿಸಲಾಗಿದೆ.

ಅನುದಾನಿತ ವಿದ್ಯಾರ್ಥಿ ನಿಲಯಗಳಿಗೆ ಧನಸಹಾಯ, ಮುರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗಳು, ತಾಂತ್ರಿಕ ವಿದ್ಯಾರ್ಥಿ ನಿಲಯಗಳು, ಶಿಕ್ಷಣಕ್ಕೆ ಪ್ರೋತ್ಸಾಹವಾಗಿ ಒಂದನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೂ ವಿವಿಧ ರೀತಿಯ ವಿದ್ಯಾರ್ಥಿ ವೇತನ ನೀಡಿಕೆ, ಪುರಸ್ಕಾರ ಬಹುಮಾನದ ಹಣ, ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಊಟ ಮತ್ತು ವಸತಿ ಭತ್ಯೆ ಮಂಜೂರಾತಿ, ರ್‍ಯಾಂಕ್ ವಿದ್ಯಾರ್ಥಿಗಳಿಗೆ ನಗದು ಬಹುಮಾನ, ಎಂ.ಫಿಲ್ ಮತ್ತು ಪಿಎಚ್.ಡಿ ವಿದ್ಯಾರ್ಥಿಗಳಿಗೆ ಫೆಲೋಷಿಫ್, ಕಾನೂನು ಪದವೀಧರರಿಗೆ ಆಡಳಿತದಲ್ಲಿ ತರಬೇತಿ, ಐ.ಟಿ.ಐ ಮತ್ತು ಐ.ಟಿ.ಸಿ ತರಬೇತಿ ಹೊಂದುವವರಿಗೆ ಶಿಷ್ಯ ವೇತನ, ಸ್ವಯಂ ಉದ್ಯೋಗ ತರಬೇತಿ ಕೇಂದ್ರಗಳು, ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಾಧನ ಸಲಕರಣೆಗಳ ಸರಬರಾಜು, ಪುಸ್ತಕ ಭಂಡಾರ ಸ್ಥಾಪಿಸುವ ಯೋಜನೆ, ಶೈಕ್ಷಣಿಕ ಸಂಕೀರ್ಣದಿಂದ ಹೆಣ್ಣು ಮಕ್ಕಳ ಸಾಕ್ಷರತೆ ಮಟ್ಟ ಸುಧಾರಿಸುವುದು, ಕೇಂದ್ರಿಯ ಮಾದರಿ ವಸತಿ ಶಾಲೆಗಳು, ೧೯೯೫-೯೬ನೇ ಸಾಲಿನಲ್ಲಿ ಹಮ್ಮಿಕೊಂಡ ನೂತನ ಯೋಜನೆ 'ನವ ಚೇತನ'. ಇದರಲ್ಲಿ ಮುಖ್ಯವಾಗಿ ಬುಡಕಟ್ಟು ವರ್ಗದ ವಿದ್ಯಾವಂತ ನಿರುದ್ಯೋಗಿ ಯುವ ಜನತೆಗೆ ಸೂಕ್ತ ಉದ್ಯೋಗ ದೊರಕಿಸುವ ಸಲುವಾಗಿ ಅವರಲ್ಲಿ ವೃತ್ತಿಪರ ಕೌಶಲ್ಯ ಬೆಳೆಸಲು ಉದ್ದೇಶಿಸಲಾಗಿತ್ತು. ಇಂತಹವರು ಸ್ವಯಂ ಉದ್ಯೋಗ ಕೈಗೊಳ್ಳಲು ಸಹಕಾರಿಯಾಗುವಂತೆ ಸಾರ್ವಜನಿಕ, ಖಾಸಗಿ ಸಂಸ್ಥೆಗಳಿಗೆ ತರಬೇತಿ ನೀಡಲಾಗುತ್ತದೆ.

ಸಾಮಾಜಿಕ ಭದ್ರತಾ ಯೋಜನೆಯ ಅಡಿಯಲ್ಲಿ ೧೯೯೨-೯೩ರಿಂದ ೧೮ರಿಂದ ೬೦ ವರ್ಷದ ಎಲ್ಲಾ ಪರಿಶಿಷ್ಟ ಪಂಗಡಕ್ಕೆ ಸೇರಿದ ಅರಣ್ಯ ಕೂಲಿಗಾರರಿಗೆ ಜೀವ ವಿಮಾ ಸೌಲಭ್ಯವನ್ನು ಒದಗಿಸಲಾಗಿತ್ತು. ದೌರ್ಜನ್ಯಕ್ಕೊಳಗಾದ ಗಿರಿಜನರಿಗೆ ಪರಿಹಾರವನ್ನು ನೀಡುವುದು ಹೀಗೆ ಅನೇಕ ಯೋಜನೆಗಳು ಕಾಲಕಾಲಕ್ಕೆ ಸ್ಥಾಪನೆಗೊಂಡಿದ್ದವು. ಇವುಗಳನ್ನು ಸರ್ಕಾರವೇ

[illegible]

ತನ್ನ ಹಾಗೂ ಸರ್ಕಾರೇತರ ಸಂಘ–ಸಂಸ್ಥೆಗಳ ಮೂಲಕ ಗಿರಿಜನರಿಗೆ ತಲುಪಿಸುವ ಪ್ರಯತ್ನ ಮಾಡುತ್ತಿತ್ತು. ೧೯೭೪–೭೫ರಲ್ಲಿ ಗಿರಿಜನ ಉಪಯೋಜನೆಯನ್ನು ಹುಟ್ಟುಹಾಕಿತು. ಮಧ್ಯಮ ಹಾಗೂ ವಿರಳ ಬುಡಕಟ್ಟುವಿರುವೆಡೆ ಈ ಉಪಯೋಜನೆ ಜಾರಿಗೊಳಿಸಲಾಯಿತು.

ಕರ್ನಾಟಕದಲ್ಲಿ ೧೯೭೨ರಿಂದ ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ (ITDP) ಯನ್ನು ರಾಜ್ಯಾದ್ಯಾಂತ ವಿಸ್ತರಿಸಲಾಯಿತು. ಇದರ ಮುಖ್ಯ ಧ್ಯೇಯೋದ್ದೇಶಗಳೆಂದರೆ ಪರಿಶಿಷ್ಟ ವರ್ಗದ ಕುಟುಂಬಗಳನ್ನು ಬಡತನ ರೇಖೆಯಿಂದ ಮೇಲೆ ತರಲು ಸಹಕಾರಿಯಾಗುವಂತಹ ಸವಲತ್ತುಗಳನ್ನು ಒದಗಿಸುವುದು ಕಲೆ, ಸಂಸ್ಕೃತಿ ಕಾಪಾಡಲು ಸಹಕಾರಿಯಾಗುವಂತಹ ನೀತಿ ನಿಯಮಗಳನ್ನು ಜಾರಿಗೊಳಿಸುವುದು ಸಾಮಾಜಿಕ, ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು ಆರ್ಥಿಕ ಸೌಲಭ್ಯ, ಶೈಕ್ಷಣಿಕ ಕಾರ್ಯಕ್ರಮ, ವಸತಿ, ಕುಡಿಯುವ ನೀರು, ಕಾಲೋನಿಗಳಿಗೆ ವಿದ್ಯುತ್ ಸಂಪರ್ಕ, ರಸ್ತೆ, ಚರಂಡಿ ಕಾಮಗಾರಿಗಳು, ಆರೋಗ್ಯ ಕೇಂದ್ರ ಇತ್ಯಾದಿ ಸೌಲಭ್ಯ ಒದಗಿಸುವುದು ಬುಡಕಟ್ಟು ಜನರ ಹಿತಾಸಕ್ತಿಗಳನ್ನು ರಕ್ಷಿಸಲು ಕಾನೂನು ಕಾಯ್ದೆಯ ಬೆಂಬಲ ಒದಗಿಸುವುದು, ಬುಡಕಟ್ಟು ಪ್ರದೇಶ ಮತ್ತು ಬುಡಕಟ್ಟು ಅಲ್ಲದ ಪ್ರದೇಶಗಳ ಅಭಿವೃದ್ಧಿ ಬಗ್ಗೆ ಇರುವ ಅಂತರವನ್ನು ಕಡಿಮೆ ಮಾಡುವುದು, ಕೃಷಿ, ತೋಟಗಾರಿಕೆ, ಮೀನುಗಾರಿಕೆ, ಪಶುಸಂಗೋಪನೆ, ಅರಣ್ಯೀಕರಣಕ್ಕೆ ಹಣದ ಸಹಕಾರ, ಗ್ರಾಮೀಣ ಮತ್ತು ಸಣ್ಣ ಕೈಗಾರಿಕೆ, ರೇಷ್ಮೇ ಕೃಷಿ, ವಿದ್ಯುಧೀಕರಣ, ಉದ್ಯೋಗ ಮತ್ತು ತರಬೇತಿ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ, ವಸತಿ, ಕ್ರೀಡೆ ಮತ್ತು ಯುವಜನ ಸೇವೆ, ಕನ್ನಡ ಸಂಸ್ಕೃತಿ, ತಾಂತ್ರಿಕ ಶಿಕ್ಷಣ, ಕಾಲೇಜು ಶಿಕ್ಷಣ, ಸಾರ್ವಜನಿಕ ಶಿಕ್ಷಣ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಕರ್ನಾಟಕ ರಾಜ್ಯ ಸಹಕಾರಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್, ಸಹಕಾರ ಇಲಾಖೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಆರೋಗ್ಯ, ಉದ್ಯೋಗ ಮತ್ತು ತರಬೇತಿ, ರಸ್ತೆ ಮತ್ತು ಸೇತುವೆ, ಗ್ರಾಮೀಣ ನೀರು ಪೂರೈಕೆ, ಸೀರೆ ಮತ್ತು ಧೋತಿ ಯೋಜನೆ, ಸಮಾಜ ಕಲ್ಯಾಣ ಇಲಾಖೆ ಮೂಲಕ ಅರ್ಹ ಬುಡಕಟ್ಟು ಫಲಾನುಭವಿಗಳಿಗೆ ನಿರಂತರ ಆದಾಯ ತರುವಂತಹ ವೃತ್ತಿಗಳಾದ ಕಿರಾಣಿ ವ್ಯಾಪಾರ, ಬಟ್ಟೆ ವ್ಯಾಪಾರ, ತರಕಾರಿ ಅಂಗಡಿ, ಹೋಟೆಲ್, ಖಾರ ಕುಟ್ಟುವ ಯಂತ್ರ, ಇಟ್ಟಿಗೆ ಭಟ್ಟಿ, ಬಡಗಿತನ, ಸೈಕಲ್‌ಶಾಪ್, ಸೆಂಟ್ರಿಂಗ್ ವರ್ಕ್ಸ್, ಧಾನ್ಯ ಒಕ್ಕುವ ಯಂತ್ರ, ಹೈನುಗಾರಿಕೆ, ಮೈಕ್‌ಸೆಟ್, ಎಸ್‌ಟಿಡಿ ಬೂತ್, ಹೊಲಿಗೆ ಯಂತ್ರ, ಹಿಟ್ಟಿನ ಗಿರಣಿ ಇತ್ಯಾದಿಗಳನ್ನು ಸಹಾಯಧನ ಮತ್ತು ಸಾಲದವತಿಯಿಂದ ಸ್ವತ್ತುಗಳನ್ನು ನೀಡಲಾಗಿದೆ. ಇಂತಹ ಹಲವಾರು ಕಾರ್ಯಕ್ರಮಗಳನ್ನು ಪಂಚವಾರ್ಷಿಕ ಯೋಜನೆ ಹಾಗೂ ವಾರ್ಷಿಕ ಯೋಜನೆಗಳ ಮೂಲಕ ಬುಡಕಟ್ಟುಗಳ ಅಭಿವೃದ್ಧಿಗಾಗಿ ವಿಶೇಷ ಕಾಳಜಿ ವಹಿಸಲಾಗಿತ್ತು. ಅಲ್ಲದೆ ಪರಿಶಿಷ್ಟ ವರ್ಗಗಳ ಜನರ

ಅಭಿವೃದ್ಧಿಗಾಗಿ ಇತ್ತೀಚಿನ ದಿನಗಳಲ್ಲಿ ರಾಷ್ಟ್ರೀಯ ಪರಿಶಿಷ್ಟ ವರ್ಗಗಳ ಆಯೋಗವನ್ನು ರಚಿಸಿರುವುದೇ ಅಲ್ಲದೆ ಕೇಂದ್ರದಲ್ಲಿ ಬುಡಕಟ್ಟು ಸಚಿವಾಲಯ ಹಾಗೂ ಸಚಿವರನ್ನು ಹೊಂದಿರುವುದು ಸ್ವಾಗತಾರ್ಹ ಕ್ರಮವಾಗಿದೆ. ಈ ಮೇಲಿನ ಯೋಜನೆ ಹಾಗೂ ಕಾರ್ಯಕ್ರಮಗಳು ಸರ್ಕಾರಿ ಹಾಗೂ ಸರ್ಕಾರೇತರ ಸಂಘ–ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸುತ್ತಿದೆ. ಸಮಾಜದ ಕಲ್ಯಾಣಕ್ಕಾಗಿ ಸರ್ಕಾರದ ಅನುದಾನದಿಂದ ಸರ್ಕಾರೇತರ ಸಂಘ–ಸಂಸ್ಥೆಗಳಿಗೆ ಜವಾಬ್ದಾರಿ ಕೊಟ್ಟು ಸಹಭಾಗಿತ್ವವನ್ನು ಹೊಂದಲಾಯಿತು. ೧೯೯೦ರ ನಂತರ ಸರ್ಕಾರೇತರ ಸಂಸ್ಥೆಗಳು ಹೆಚ್ಚಿನ ಪ್ರಮಾಣದಲ್ಲಿ ರೂಪುಗೊಂಡು ಸಣ್ಣ ಉಳಿತಾಯ, ಸಾಲ ಯೋಜನೆಗಳು ಇತ್ಯಾದಿ ಸರ್ಕಾರಿ ಕಾರ್ಯಕ್ರಮಗಳನ್ನು ರೂಪಿಸುವುದರಲ್ಲಿ ಭಾಗವಹಿಸಲು ಅವಕಾಶಗಳನ್ನು ಕೊಡಲಾಯಿತು. ಕರ್ನಾಟಕದಲ್ಲಿ ೫೦೦–೬೦೦ ಸರ್ಕಾರೇತರ ಸಂಸ್ಥೆಗಳು ನೋಂದಾಯಿತವಾಗಿದ್ದು, ಜನಸಾಮಾನ್ಯರಿಗೆ ಸರ್ಕಾರದ ಸವಲತ್ತುಗಳನ್ನು ತಲುಪಿಸುವುದರಲ್ಲಿ ಸರ್ಕಾರೇತರ ಸಂಘ–ಸಂಸ್ಥೆಗಳು ಉತ್ತಮ ಕೆಲಸ ಮಾಡುತ್ತಿವೆ ಎಂಬುದರಲ್ಲಿ ಎರಡು ಮಾತಿಲ್ಲ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ವತಿಯಿಂದ ಕರ್ನಾಟಕ ರಾಜ್ಯದ್ಯಂತ ೫೦೦ಕ್ಕೂ ಹೆಚ್ಚು ಸರ್ಕಾರೇತರ ಸಂಘ–ಸಂಸ್ಥೆಗಳು ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿವೆ. ಕೆಲವು ಸರ್ಕಾರೇತರ ಸಂಸ್ಥೆಗಳು ಸಾಮಾನ್ಯ ಜನರಿಗೆ ಸವಲತ್ತುಗಳನ್ನು ತಲುಪಿಸುವುದರಲ್ಲಿ ವಿಫಲವಾಗಿವೆ. ತಮ್ಮ ಖಜಾನೆಯನ್ನು ಭರ್ತಿ ಮಾಡಿಕೊಳ್ಳುತ್ತಾ ಜನರನ್ನು ಮತ್ತು ಸರ್ಕಾರವನ್ನು ವಂಚಿಸುವುದರಲ್ಲಿ ಇವು ನಿರತವಾಗಿವೆ ಎಂಬ ವಿಚಾರವು ಇಂದು ಜನಸಾಮಾನ್ಯರಲ್ಲಿ ಚರ್ಚಿತವಾಗುತ್ತಿದೆ.

ನನ್ನ ಕ್ಷೇತ್ರಕಾರ್ಯದಲ್ಲಿ ಮೇದ ಬುಡಕಟ್ಟಿನವರಿಗೆ ಲಭಿಸಿರುವ ಸರ್ಕಾರಿ ಸೌಲಭ್ಯಗಳನ್ನು ವಿಚಾರಿಸಿದಾಗ ಅವರ ಬದುಕು ಗಟ್ಟಿಗೊಳ್ಳಲು ಯಾವುದೇ ಕ್ರಿಯಾತ್ಮಕ ಯೋಜನೆಗಳು ಲಭ್ಯವಾಗದಿರುವುದು ಕಂಡುಬಂತು. ಭೂ ಮಂಜೂರಾತಿ ಪ್ರಕ್ರಿಯೆ ನಿಷ್ಕ್ರೀಯವಾದಂತಾಗಿದೆ. ಕಾರಣ 'ಎ' ವರ್ಗದ ಜಮೀನು ಲಭ್ಯವಿಲ್ಲದಿರುವುದು. ಅರ್ಜಿ ನಮೂನೆ ೫೦ ಮತ್ತು ೫೩ರಲ್ಲಿ ಅರ್ಜಿ ಹಾಕದಿರುವುದು, ೩ ವರ್ಷಗಳಿಂದ ಕಾಡಿನಲ್ಲಿ ವಾಸವಿರುವುದನ್ನು ಸಂಬಂಧಿಸಿದ ಗ್ರಾಮ ಪಂಚಾಯತಿಯಿಂದ ದೃಢೀಕರಿಸದೆ ಇರುವುದು ಸೊಪ್ಪಿನಬೆಟ್ಟ, ಗೋಮಾಳ, ಬಂಜರು, ಹುಲ್ಲುಮನಿ ಜಂಗ್ಲಿ ಇತ್ಯಾದಿಗಳೆಲ್ಲವೂ ಬಲಾಢ್ಯರು ಒತ್ತುವರಿ ಮಾಡಿಕೊಂಡಿರುವುದು. ದರಖಾಸ್ತು ಮೂಲಕ ಜಮೀನನ್ನು ವಿತರಿಸುವ ಯೋಜನೆ ಇವೆಲ್ಲವೂ ಸ್ಥಗಿತಗೊಂಡು ಅಂಗೈ ಅಗಲ ಜಾಗ ಸಿಗದಂತಾಗಿದೆ. ಕಳೆದ ದಶಕದಿಂದ ಭೂಮಿಗಾಗಿ ಹೋರಾಡುತ್ತಿದ್ದರೂ ಪ್ರಯೋಜನವಾಗಿಲ್ಲವೆಂದು ಮೇದರು ತಿಳಿಸುತ್ತಾರೆ.

ಈಗಾಗಲೇ ಇರುವ ಜಮೀನಿಗೆ ನೀರಾವರಿ ಸೌಲಭ್ಯ ಪಡೆಯುವ ಉದ್ದೇಶವಿದ್ದರೂ ಕನಿಷ್ಠ ಒಂದು ಹೆಕ್ಟೇರ್ ಖಾತೆ ಜಮೀನು ಇರಬೇಕು. ಬಹುತೇಕ ಮೇದರ ಜಮೀನು

[illegible]

೦-೨ ಎಕರೆಯೊಳಗೆ ಇದೆ. ಆದರೆ 'ಗೊಂಚಲು ಗ್ರಾಮ ಯೋಜನೆ'ಯಲ್ಲಾದರೂ ಸೌಲಭ್ಯ ಪಡೆಯಬಹುದೆಂದರೂ ಮೇದರ ಜಮೀನು ಒಂದೇ ಕಡೆ ಇರದೆ ಚದುರಿವುಗಳು. ಕೆಲವು ಜಂಟಿಖಾತೆಯಿಂದಾಗಿ ಈ ಸೌಲಭ್ಯ ಪಡೆದರೂ, ದೂರದಲ್ಲಿರುವ ಕಡಿಮೆ ಜಮೀನಿನ ಹಿಡುವಳಿದಾರರು ಈ ಸೌಲಭ್ಯದಿಂದ ವಂಚಿತರಾಗಿ ಭೂಮಿಯಿಂದ ಉಪಯುಕ್ತ ಬೆಳೆಗಳನ್ನು ಬೆಳೆಯಲಾಗದೆ ಆರ್ಥಿಕ ಸಂಕಷ್ಟದಲ್ಲಿದ್ದಾರೆ.

ಗಿರಿಜನ ಉಪಯೋಜನೆ ಅಡಿಯಲ್ಲಿ ಆಯ್ದ ಕೆಲವೇ ಗಿರಿಜನರಿಗೆ ಸೌಲಭ್ಯ ವಿಸ್ತರಿಸುವುದರಿಂದ ಏಕಕಾಲದಲ್ಲಿ ಸೌಲಭ್ಯ ಸಿಗದೆ ವಂಚಿತರಾಗುತ್ತಿದ್ದಾರೆ. ಮನೆ, ಜಮೀನು, ಹಸು, ಕುರಿ ಇತ್ಯಾದಿ ಕ್ರಮಧಾರಿತವಾಗಿ ಅಭಿವೃದ್ಧಿಯಾಗದೆ 'ತಿರುಗು ಮುರುಗು' ಅಭಿವೃದ್ಧಿ ಪ್ರಕ್ರಿಯೆ ಬುಡಕಟ್ಟುಗಳನ್ನು ಪೇಚಿಗೆ ಸಿಲುಕಿಸುತ್ತಿದೆ, ಉನ್ನತ ಶಿಕ್ಷಣ ಕೈಗೊಳ್ಳುವ ಎಲ್ಲಾ ಮೇದರಿಗೂ ಸರ್ಕಾರದ ಸೌಲಭ್ಯ ದಕ್ಕುತ್ತಿಲ್ಲ. ವಸತಿ ನಿಲಯದಲ್ಲಿ ಸ್ಥಳಾವಕಾಶವಿಲ್ಲವೆಂದೋ, ಮೀಸಲಾತಿ ಮಿತಿಯಂತೆ ಶೇ.೩ರಷ್ಟು ಸೀಟನ್ನು ಅಖೈರುಗೊಳಿಸಲಾಗಿದೆ ಎಂದೋ, ಅದೇ ರೀತಿ ಸರ್ಕಾರಿ ಹುದ್ದೆಗಳಿಗೂ ಮಿತಿ ಹೇರುವುದರಿಂದ ಮೇದ ಬುಡಕಟ್ಟಿನ ಹಲವು ಯುವಕರು ಈ ಸೌಲಭ್ಯದಿಂದ ವಂಚಿತರಾಗಿದ್ದಾರೆ.

ಅರಣ್ಯ ಇಲಾಖೆಯಿಂದ ನೀಡುತ್ತಿದ್ದ ಪುಕ್ಕಟೆ ಇಲ್ಲವೆ ರಿಯಾಯಿತಿ ದರದ ಬಿದಿರು ಪೂರೈಕೆ ಇಲ್ಲವಾಗಿದೆ. ಸಧ್ಯ ಕರ್ನಾಟಕದಲ್ಲಿ ಬಿದಿರಿಗೆ ಕಟ್ಟೆರೋಗ ಬಂದಿರುವುದರಿಂದ, ಪರ್ಯಾಯ ನಿರ್ವಹಣೆ ಇರುವುದಿಲ್ಲ. ಮೇದರು ತಯಾರಿಸುವ ವಸ್ತುಗಳ ವ್ಯಾಪಾರಕ್ಕೆ ಸೂಕ್ತ ಸುಸಜ್ಜಿತ ಮಾರುಕಟ್ಟೆಯ ವ್ಯವಸ್ಥೆಯೇ ಇಲ್ಲದಿರುವುದು. ಮೇದರಿಗೆ ವಸತಿ ಸೌಲಭ್ಯಗಳನ್ನು ವಿಸ್ತರಿಸುವುದು, ತಂತಿ ಬೇಲಿ, ಐಬೆಕ್ಸ್, ನೀರಾವರಿ ಸೌಲಭ್ಯಕ್ಕಾಗಿ ಗಂಗಾ ಕಲ್ಯಾಣ ಯೋಜನೆ, ತುಂತುರು ಹಾಗೂ ಹನಿ ನೀರಾವರಿ, ಹೈನುಗಾರಿಕೆಗಾಗಿ ಹಸು, ಎಮ್ಮೆ, ಉಳಿಮೆಗಾಗಿ ಎತ್ತುಗಳು, ಗಾಡಿಗಳು, ಔಷಧಿ ಸಿಂಪಡಣೆಯ ಯಂತ್ರ ಇತ್ಯಾದಿಗಳ ಸೌಲಭ್ಯ ವಿರಳವಾಗಿದೆ. ಸರ್ಕಾರಿ ಯೋಜನೆಗಳ ಪೂರ್ಣ ಮಾಹಿತಿಗಳು ಮೇದರಿಗೆ ತಿಳಿಯದೇ ಹೋಗುತ್ತದೆ.

ಸಂಬಂಧಿಸಿದ ಅಧಿಕಾರಿಗಳು ತಿಳಿಸುವ ಪ್ರಯತ್ನವನ್ನೂ ಮಾಡುವುದಿಲ್ಲ. ಕಿರುಬಿದಿರು ಬೆಳೆಸಲು ಬಿದಿರನ್ನು ಬಳಸುವವರಿಗೆ ೨೫ರಿಂದ ೫೦ ಹೆಕ್ಟೇರ್ ಅರಣ್ಯ ಭೂಮಿಯನ್ನು ನೀಡಿ ಅದಕ್ಕೆ ಬೇಕಾಗುವ ಮೂಲಭೂತ ಅಗತ್ಯಗಳನ್ನು ಪೂರೈಸಿ ನಿರ್ವಹಣೆಗೆ ಆ ನಿಗಧಿತ ಬುಡಕಟ್ಟಿಗೆ ನೀಡಬಹುದಾದ ಅವಕಾಶವಿದ್ದರೂ, ಅಂತಹ ಯಾವ ಪ್ರಯತ್ನಗಳನ್ನು ಮಾಡದಿರುವುದು ಸರ್ಕಾರಿ ಸೌಲಭ್ಯದ ಕೊರತೆಯಾಗಿದೆ. ರಿಯಾಯಿತಿ ದರದಲ್ಲಿ ಕೃಷಿ ಉಪಕರಣಗಳಾದ ಟ್ರ್ಯಾಕ್ಟರ್, ಟಿಲ್ಲರ್, ಒಕ್ಕಲು ಯಂತ್ರ, ಕೊಯ್ಲಿನ ಯಂತ್ರ ಇತ್ಯಾದಿಗಳನ್ನು ನೀಡುವುದು ಕಡಿಮೆಯಾಗಿದೆ.

ಒಟ್ಟಾರೆ ಗುರುತರವಾದ, ಗುಣಾತ್ಮಕ ಬದಲಾವಣೆಯಾಗಬೇಕಾದರೆ ಪುನರ್ ಪರಿಶೀಲಿಸಲ್ಪಟ್ಟ ಅಭಿವೃದ್ಧಿ ಕಾರ್ಯಕ್ರಮಗಳು ಅವರಿಗೆ ಸೂಕ್ತವಾಗುವ ರೀತಿಯಲ್ಲಿ ಸಕಾಲಕ್ಕೆ ನೀಡುವುದರಿಂದ ಸಾಧ್ಯವಾಗುತ್ತದೆ.

ಬುಡಕಟ್ಟು ಜನಾಭಿವೃದ್ಧಿಗೆ ಸ್ವ-ಸಹಾಯ ಗುಂಪುಗಳು ಮತ್ತು ಲ್ಯಾಂಪ್ಸ್ ಸಂಸ್ಥೆಗಳು ಅಹರ್ನಿಶಿ ದುಡಿಯುತ್ತಿವೆ. 'ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ' ಎಂಬ ತತ್ವದ ಆಧಾರದ ಮೇಲೆ ಸ್ವ-ಸಹಾಯ ಗುಂಪುಗಳು ರಚನೆಯಾಗಿ, ತಮಗೆ ತಾವೇ ಸಹಾಯ ಮಾಡಿಕೊಂಡು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ರಾಜಕೀಯವಾಗಿ ಅಭಿವೃದ್ಧಿಯನ್ನು ಸಾಧಿಸಿಕೊಂಡು ತಮ್ಮಲ್ಲಿ ಸ್ವಾಭಿಮಾನ ಬೆಳೆಸಿಕೊಳ್ಳುವಲ್ಲಿ ಸ್ವ-ಸಹಾಯ ಗುಂಪುಗಳು ರಚನೆಯಾಗಿವೆ. ವಿಶೇಷವಾಗಿ ಮಹಿಳೆಯರನ್ನು ಕೇಂದ್ರಿಕರಿಸಿಕೊಂಡು ಬುಡಕಟ್ಟು ಮಹಿಳೆಯರ ಅಭಿವೃದ್ಧಿಯಲ್ಲಿ ಸ್ತ್ರೀಶಕ್ತಿ ಯೋಜನೆಯನ್ನು ರೂಪಿಸಿಕೊಂಡು ಸರ್ಕಾರದಿಂದ ನೀಡುವ ಆವರ್ತನಿಧಿಯನ್ನು ಬಳಸಿಕೊಂಡು ಉಳಿತಾಯ ಮೊತ್ತ ಹೆಚ್ಚಿದಂತೆ ಆವರ್ತ ನಿಧಿಯನ್ನು ಹೆಚ್ಚಿಸುತ್ತಾ ಹೋಗುತ್ತದೆ. ಇದರಿಂದ ಯೋಜನೆಯಲ್ಲಿರುವ ಮಹಿಳೆಯರ ಆರ್ಥಿಕ ಸ್ವಾವಲಂಬನೆ ಸಾಧ್ಯವಾಗುತ್ತದೆ. ಇದು ಸ್ವ-ಸಹಾಯ ಗುಂಪುಗಳ ಮಾದರಿಯಲ್ಲಿ ಕೆಲಸ ಮಾಡಿ ತಮ್ಮ ಸ್ಥಾನಮಾನದಲ್ಲಿ ಉನ್ನತೀಕರಣ ಮಾಡಿಕೊಳ್ಳಲು ಪ್ರಯತ್ನಿಸುತ್ತಿದೆ. ಆದರೆ ಪೂರ್ಣ ಪ್ರಮಾಣದ ಲಾಭ ಅನುಭವಿಸಲು ಇನ್ನೂ ಸಾಧ್ಯವಾಗದಿರುವುದು ಮೇದ ಮಹಿಳೆಯರಲ್ಲಿ ಕಾಣಬಹುದಾಗಿದೆ.

ಲ್ಯಾಂಪ್ಸ್ ಸಹಕಾರ ಸಂಘ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಬ್ಯಾಂಕುಗಳು, ಹಾಲು ಉತ್ಪಾದಕರ ಸಹಕಾರಿ ಸಂಘಗಳು, ಕೃಷಿ ಮತ್ತು ಗ್ರಾಮೀಣಾಬೀವೃದ್ಧಿ ಬ್ಯಾಂಕುಗಳು, ಟಿ.ಎ.ಪಿ, ಸಿ.ಎಂ.ಎಸ್ ಇತರೆ ಸಹಕಾರಿ ಸಂಘಗಳೊಡನೆ ವ್ಯವಹರಿಸಿ, ಸದರಿ ಸಹಕಾರಿ ಸಂಘಗಳಿಂದ ಸದಸ್ಯತ್ವ ಪಡೆದು ಷೇರು ಸಹಾಯಧನ ಮತ್ತು ತಮ್ಮ ಕೃಷಿ ಚಟುವಟಿಕೆಗಳಿಗೆ ಸಾಲ ಪಡೆದುಕೊಳ್ಳಬಹುದಾಗಿದೆ. ಆದರೆ ಬುಡಕಟ್ಟು ಜನರ ಕಲ್ಯಾಣಕ್ಕಾಗಿ ಸ್ವಾತಂತ್ರ್ಯ ನಂತರ ಅಸಂಖ್ಯಾತ ಕಲ್ಯಾಣ ಕಾರ್ಯಕ್ರಮಗಳು ವಿಫಲಗೊಂಡಿವೆ. ಸಾವಿರಾರು ಕೋಟಿ ಹಣ ಖರ್ಚುಮಾಡಲಾಗಿದೆ. ಯೋಜನೆಯ ಫಲ ಸಿಗದಿರುವುದೂ ಸಮಸ್ಯೆಗಳ ಮತ್ತೊಂದು ಮುಖ ಗೋಚರಿಸುತ್ತದೆ. ಇಂತಹ ಯೋಜನೆಯಿಂದ ಮೇದರು ವಂಚಿತರಾಗಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ವಾಸಿಸುವ ಮೇದರ ಭೂಹಿಡುವಳಿಗಳು ಅತ್ಯಂತ ಕಡಿಮೆಯಿರುವುದು ಇದಕ್ಕೆ ನಿದರ್ಶನವಾಗಿದೆ.

ಸರ್ಕಾರದ ಯೋಜನೆಗಳ ಪ್ರಮಾಣವನ್ನು ಗಮನಿಸಿದರೆ ಬುಡಕಟ್ಟುಗಳು ಅಭಿವೃದ್ಧಿಯ ತುತ್ತ ತುದಿಯಲ್ಲಿ ತೇಲಬಹುದೇನೋ ಎಂದು ಭಾಸವಾಗುತ್ತದೆ. ಆದರೆ ಆಂತರ್ಯದಲ್ಲಿ ವಿಗತಿ ಎಂಬುದು ಸ್ಪಷ್ಟ. ಫಲಾನುಭವಿಗಳ ಆಯ್ಕೆ ಹಾಗೂ ಕಾರ್ಯಕ್ರಮದ ಅನುಷ್ಠಾನದ ವಿಧಾನದಲ್ಲಿ ತಪ್ಪಿರುವುದರಿಂದ ಮತ್ತು ಬುಡಕಟ್ಟುಗಳ ಅವಶ್ಯಕತೆಗಳನ್ನು ಅರಿಯದೆ ಬುಡಕಟ್ಟು

ಜನರ ಇಂಗಿತವನ್ನು ಪರಿಗಣಿಸದೆ ಹೇರಲಾದ ಈ ಕಾರ್ಯಕ್ರಮಗಳಲ್ಲಿ ಕೆಲವು ಕಾರ್ಯಕ್ರಮಗಳಂತೂ ಹಾಸ್ಯಾಸ್ಪದವಾಗಿದ್ದು, ಮೇದರು ವಿಮುಖರಾಗಿದ್ದಾರೆ. ಉದಾಹರಣೆಗೆ ಬಿದಿರಿನ ಬಳಕೆಯಿಂದ ತಮ್ಮ ಕುಲಕಸುಬನ್ನು ನಿರ್ವಹಿಸುವ ಮೇದರು ಬಿದಿರು ಎತ್ತೇಚ್ಛವಾಗಿ ಸಿಗುತ್ತಿದ್ದ ಕಾಲದಲ್ಲಿ ಬಡಗಿತನ ಮಾಡಿ ಎಂದರೆ ಹೇಗೆ? ಹೋಗಲಿ ಬಡಗಿತನವೂ ಒಂದು ಸಮುದಾಯದ ಮೂಲ ವೃತ್ತಿಯಾಗಿದ್ದು, ಆ ವೃತ್ತಿಯವರ ಪರಂಪರೆ ಮೇಲೆ ವ್ಯತಿರಿಕ್ತ ಪರಿಣಾಮ ಆಗದಿರುವುದನ್ನು ಮನಗಾಣಲಾಗಿದೆಯೇ? ಮೇದಾರಿಕೆಗೆ ಪರ್ಯಾಯ ವೃತ್ತಿಗಳನ್ನು ಒದಗಿಸಬೇಕೆ? ಹಾಗಿದ್ದರೆ ಅದು ಯಾವುದು? ಎಂಬುದನ್ನು ಮೇದರಿಂದಲೇ ತಿಳಿಯಬೇಕೆ ಹೊರತು ದಂತಗೋಪುರದಲ್ಲಿ ಕುಳಿತು ಯೋಜನೆಗಳನ್ನು ರೂಪಿಸುವವರಿಂದಲ್ಲ. ಇಂತಹ ಅನೇಕ ಅವೈಜ್ಞಾನಿಕ ಯೋಜನೆಗಳಿಂದ, ಯೋಜನೆಗಳ ಪ್ರಮಾಣ ಜಾಸ್ತಿಯಾಗಿದೆಯೇ ಹೊರತು ಮೇದರ ಬದುಕಿಗೆ ಅನ್ವಯಿಸುವ ಸೌಲಭ್ಯಗಳು ಅವುಗಳಿಂದ ದಕ್ಕದೆ. ಮತ್ತೊಮ್ಮೆ ಮೌನ ಆವರಿಸಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಪುಷ್ಪ ಸೇವಾ ಸಮಾಜ, ಎಸ್‌ಡಬ್ಲ್ಯೂಎಸ್ (ಸೋಶಿಯಲ್ ವೆಲ್‌ಫೇರ್ ಸೊಸೈಟಿ) ಈ ಸರ್ಕಾರೇತರ ಸಂಸ್ಥೆಗಳು ಪ್ರಾದೇಶಿಕ ಮಿತಿಯೊಳಗೆ ಸರ್ಕಾರಿ ಪೋಷಿತ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿವೆ. ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ ಅರಣ್ಯ ಹಕ್ಕುಗಳ ಮಾನ್ಯ ಮಾಡುವ ಅಧಿನಿಯಮ ೨೦೦೬ (೨೦೦೭ (೨))ರ ಪ್ರಕಾರ ಗಿರಿಜನರಿಗೆ ಸಂಬಂಧಿಸಿದ ಭೂಮಿಯನ್ನು ಸರ್ವೆ ಮಾಡಿಸುವ ಅರಣ್ಯ ಹಾಗೂ ಕಂದಾಯ ಇಲಾಖೆಯ ಕೊಂಡಿಯಾಗಿ ಕೆಲಸ ಮಾಡಿ ಇರುವ ತೊಡಕುಗಳನ್ನು ನಿವಾರಿಸಿ ಪಟ್ಟಾ ನೀಡಿಕೆಗಾಗಿ ಪ್ರಯತ್ನಿಸುತ್ತಿವೆ. ಪರಿಶಿಷ್ಟ ಪಂಗಡದ ಸೌಲತ್ತುಗಳನ್ನು ಮನವರಿಕೆ ಮಾಡಿಸುತ್ತಿದೆ. ಕರ್ನಾಟಕ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ (ಕೆ.ಎಸ್.ಎಸ್.ಐ.ಡಿ.ಸಿ)ದ ವತಿಯಿಂದ 'ಕೃಷಿ ಶೆಡ್'ಗಳನ್ನು ಜಮೀನನಲ್ಲಿ ಕಟ್ಟಿಸಿಕೊಡುವುದು ಹಳೇಮನೆ ರಿಪೇರಿ, ವಿದ್ಯುದ್ದೀಕರಣ, ಕಂಪ್ಯೂಟರ್ ತರಬೇತಿ, ಹೊಲಿಗೆ ತರಬೇತಿ ಮತ್ತು ಯಂತ್ರ ವಿತರಣೆ, ಕಸೂತಿ ತರಬೇತಿ, ಯುವಕರಿಗೆ ಡ್ರೈವಿಂಗ್ ಮತ್ತು ಪರವಾನಿಗೆ, ತಂತಿಬೇಲಿ ಇತ್ಯಾದಿ ಸೌಲತ್ತುಗಳನ್ನು ಒದಗಿಸುವ ಪ್ರಯತ್ನ ಮಾಡುತ್ತಿದೆ. ಈ ಎಲ್ಲಾ ಯೋಜನೆಗಳ ಲಾಭ ಮೇದ ಬುಡಕಟ್ಟಿನ ಇಡಿಯಾದ ಅಭಿವೃದ್ಧಿಗೆ ಪೂರಕವಾಗಿಲ್ಲ.

ಪ್ರಪಂಚ 'ಅಭಿವೃದ್ಧಿ' ಎಂಬ ಆಶಯದೊಂದಿಗೆ ನಾಗಲೋಟದಲ್ಲಿದ್ದರೆ ಆ ಗುರಿಯತ್ತ ಮುಖಮಾಡಿ ಓಡುತ್ತಿರುವ ದೇಶಗಳೆಲ್ಲವೂ ತಮ್ಮ ದೇಶದ 'ಸಾಂಸ್ಕೃತಿಕ ಪರಂಪರೆ'ಯನ್ನ ಬಲಿಕೊಡುತ್ತಿವೆ. ಅಭಿವೃದ್ಧಿ ಕೇವಲ 'ಬಂಡವಾಳ'ದ ಗುರಿಯಾಗಿದೆ. ಜಾಗತೀಕರಣದ ಸಂದರ್ಭದಲ್ಲಿ ಜಿ–೦೭, ಜಿ–೨೭, ಜಿ–೧೦೮ ಇತ್ಯಾದಿ ಸಂಖ್ಯೆಯ ರಾಷ್ಟ್ರಗಳು ಮೂರನೆ ಜಗತ್ತಿನ ರಾಷ್ಟ್ರಗಳನ್ನು ತಮ್ಮ ದಾಳವನ್ನಾಗಿ ಮಾಡಿಕೊಂಡಿವೆ. Might is right ಎನ್ನುವಂತೆ

ಭಾರತವೂ ಸಬಲೀಕರಣವಾದರೆ, 'ವಿಶ್ವಓಟ'ದಲ್ಲಿ ಸ್ಪರ್ಧಾತ್ಮಕತೆ ಒಡ್ಡಬಹುದು. ಆದರೆ 'ಬಹುರೂಪಿ ಸಂಸ್ಕೃತಿ'ಯ ಭಾರತಕ್ಕೆ ಸದ್ಯಕ್ಕೆ ಈ ಮಾದರಿ ಒಪ್ಪಿತವಲ್ಲ. ಹಸಿವು, ದಾರಿದ್ರ್ಯ, ಬಡತನ, ಅಸ್ಪೃಶ್ಯತೆ, ಅರಣ್ಯವಾಸಿ ಬದುಕು, ಪಾರಂಪರಿಕ ಜ್ಞಾನ ಬಲಿಕೊಡುತ್ತಿರುವ ಕುಲಕಸಬುಗಳು ಇಂತಹ ಬಿಕ್ಕಟ್ಟುಗಳಿಂದಾಗಿ ತನ್ನ ನೆಲೆಕಂಡುಕೊಳ್ಳಲಾರದ ಸ್ಥಿತಿಯಲ್ಲಿರುವಾಗ ನಾಗಾಲೋಟಕ್ಕೆ ಪ್ರಲೋಭಿಸುವುದು ಹಾಸ್ಯಾಸ್ಪದ. ಸರಿ ತಮ್ಮ ಕೌಶಲ್ಯಾಭಿವೃದ್ಧಿಯಿಂದ ವಿಶ್ವ ಮಾರುಕಟ್ಟೆಯನ್ನು ತಲುಪಿದರೂ ಅಲ್ಲಿನ ಸ್ಪರ್ಧಾತ್ಮಕತೆಯನ್ನು ಸಹಿಸಲು ಸಾಧ್ಯವಾಗುವುದೇ ಎಂಬ ಪ್ರಶ್ನೆ. ಭಾರತೀಯ ಸಂಸ್ಕೃತಿಯಿಂದ ಪ್ರೇರೆಪಿಸಲ್ಪಟ್ಟ ಉತ್ಪನ್ನಗಳು ತನ್ನ ಭೌಗೋಳಿಕ ಮಿತಿಯೊಳಗೇ ಬಿಕರಿಸಲು ಹಪಹಪಿಸುವಾಗ, ಅರ್ಥವಾಗದ ಜಗತ್ತಿನಲ್ಲಿ ತಮ್ಮನ್ನು ಗುರ್ತಿಸಿಕೊಳ್ಳಲು ಪಾರಂಪರಿಕ ಕಸುಬುದಾರರಿಗೆ ಸಾಧ್ಯವಾಗುವುದೇ? ಭಾರತದಂತಹ ಪ್ರಜಾಪ್ರಭುತ್ವ ಆಡಳಿತ ದೇಶದಲ್ಲಿ ಸ್ಥಳೀಯ ಹಿತಾಸಕ್ತಿಗಳಿಗೆ ಆಸ್ಥೆವಹಿಸದೆ ಜಾಗತಿಕ ಮಟ್ಟದ ಪ್ರಲೋಭನೆಗಳಲ್ಲಿ ಆಸಕ್ತಿ ಹೊಂದುವುದರಿಂದ ಇಂತಹ ಕುಲಾಧಾರಿತ ವೃತ್ತಿಗಳು ಮೂಲೆಗುಂಪಾಗುವುದಲ್ಲದೆ ಪರ್ಯಾಯ ಮಾದರಿಗಳು ಈಗಾಗಲೇ ಅಳವಡಿಸಿ ಫಲಗೊಳ್ಳದಿರುವುದನ್ನೇ ಮತ್ತೆ ಮತ್ತೆ ಹೇರಬೇಕಾಗುತ್ತದೆ.

ಬುಡಕಟ್ಟು ಪಂಗಡಗಳಿಗೆ ದೊರೆಯಬೇಕಾದ ಸೌಲಭ್ಯಗಳನ್ನು ಕೆಲವೇ ಕೆಲವು ಸಮುದಾಯಗಳು ಪಡೆಯುತ್ತಿರುವುದರಿಂದಲೂ ಸಾಮಾಜಿಕ ನ್ಯಾಯ ಪರಿಪಾಲನೆಯಾಗುತ್ತಿಲ್ಲ. ಪರಿಶಿಷ್ಟ ಪಟ್ಟಿಗೆ ಸೇರಿದ್ದರೂ ಎಷ್ಟೋ ಬುಡಕಟ್ಟು ಸಮುದಾಯಗಳು ಸೌಲಭ್ಯವಂಚಿತವಾಗಿಯೇ ಉಳಿದಿವೆ. ಇದು ಅನುಷ್ಠಾನ ಮತ್ತು ನಿರ್ವಹಣೆಯ ಕೊರತೆಯಾಗಿದೆ. ಮತ್ತೊಂದೆಡೆ ಪರಿಶಿಷ್ಟ ಪಂಗಡಕ್ಕೆ ಹೊಸ ಸಮುದಾಯಗಳು ಸೇರ್ಪಡೆಗೊಳ್ಳುತ್ತಿವೆ. ಕೆಲವೊಮ್ಮೆ ಬಲಾಢ್ಯ ಬುಡಕಟ್ಟು ಪರಿಶಿಷ್ಟರ ಪಟ್ಟಿಗೆ ಸೇರುವುದನ್ನು ಪ್ರತಿರೋಧಿಸುತ್ತದೆ. ಸಂವಿಧಾನಿಕವಾಗಿ ಸಮೀಕ್ಷೆಯಿಂದ ದೃಢಪಟ್ಟ ನಂತರ ಸೇರ್ಪಡೆಗೊಳಿಸುವುದು ಸರಿ ಮಾರ್ಗವಿದ್ದರೂ ಬುಡಕಟ್ಟು ಸಂಖ್ಯೆಗನುಗುಣವಾಗಿ ಮೀಸಲಾತಿಯ ಪ್ರಮಾಣವನ್ನು ವಿಸ್ತರಿಸದೇ ಯೋಜನೆಗಳ ಪ್ರಮಾಣದಲ್ಲಿ ಅದೇ ಸ್ಥಿತಿಯನ್ನು ಕಾಯ್ದುಕೊಂಡಾಗಲೂ ಸೌಲಭ್ಯಗಳು ವಿರಳವಾಗುತ್ತವೆ ಹಾಗೂ ಪೈಪೋಟಿ ಅನಿವಾರ್ಯವಾಗುತ್ತವೆ. ಬುಡಕಟ್ಟುವಿಗೆ ಈಗಿರುವ ಮೀಸಲಾತಿಯನ್ನು ಶೇ.೩ರಿಂದ ಶೇ.೭.೫ಕ್ಕೆ ವಿಸ್ತರಿಸುವ ಬಗ್ಗೆ ಅನೇಕ ಚರ್ಚೆಗಳಾಗಿವೆ.

ಒಟ್ಟಾರೆ ಸರ್ಕಾರಿ, ಅರೆಸರ್ಕಾರಿ ಇಲ್ಲವೇ ಖಾಸಗಿ ಸಂಘ-ಸಂಸ್ಥೆಗಳಿಂದ ಪರಿಶಿಷ್ಟ ಪಂಗಡದವರಿಗೆ ಲಭಿಸುತ್ತಿರುವ ಸೌಲಭ್ಯಗಳ ಕೊರತೆಯಿಂದ ಕೂಡಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಸ್ವಂತ ಜಮೀನಿಲ್ಲದ ಮೇದಾರರು ಗೇಣಿದಾರರಾಗಿ, ಕೂಲಿ ಕಾರ್ಮಿಕರಾಗಿ ಕನಿಷ್ಟ ಬದುಕು ಬದುಕುತ್ತಿದ್ದಾರೆ. ಮೀಸಲಾತಿ ಎಂಬ ಗಗನ ಕುಸುಮ ತೋರಿಸಿ ಅರಣ್ಯ ಭೂಮಿ, ಅರಣ್ಯ ಸಂಪತ್ತನ್ನು ಬೇರೆಯವರ ಪಾಲಾಗಿಸಲು ಅವಕಾಶ ನೀಡಿ ಮೇದರನ್ನು

ನಿರ್ಗತಿಕರನ್ನಾಗಿಸುತ್ತಿದೆ. ರಾಜಕೀಯ ಮೀಸಲಾತಿ ಪೂರ್ಣ ಪ್ರಮಾಣದ ಬದಲಾವಣೆಗೆ ಸಾಧ್ಯವಾಗುತ್ತಿಲ್ಲ. ಇವರು ಒಂದೊಂದು ಓಟುಗಳಾಗಿದ್ದಾರೆಯೇ ವಿನಃ ಸ್ವಾಭಿಮಾನ, ಸ್ವಾಭಿಮಾನಿ ಬದುಕು ಇಲ್ಲದಂತಾಗಿದೆ. ಸರ್ಕಾರಿ ಸೌಲಭ್ಯಗಳ ವಂಚನೆಯಿಂದ ಬೇಸತ್ತ ಮೂಡಿಗೆರೆಯ ರಾಜಮ್ಮ ಗುಡ್ಡಟ್ಟಿ ಇವರು ಈ ರೀತಿ ಹೇಳುತ್ತಾರೆ. "ನಮ್ಮ ಜನರ ಬಗ್ಗೆ ಕಾಳಜಿ ಕಳಕಳಿ ಹೊಂದಿರುವ ನಮ್ಮ ಅಭಿವೃದ್ಧಿಯನ್ನು ನಾವೇ ಮಾಡಿಕೊಳ್ಳಬೇಕಾಗಿರುವುದರಿಂದ ನಾವು ಪರಾವಲಂಬಿಗಳಾಗದೇ ಸ್ವಾವಲಂಬಿಗಳಾಗಿ ಬದುಕಲು ನಾವೆಲ್ಲರೂ ಏನು ಮಾಡಬೇಕು ಎಂಬುದರ ಬಗ್ಗೆ ಕರ್ನಾಟಕ ರಾಜ್ಯ ಆದಿವಾಸಿ ವಿಕಾಸ ಪರಿಷತ್ತು ಕಟ್ಟಿಕೊಂಡು ವಿಸ್ತೃತ ಚರ್ಚೆ ಮಾಡಿ ಮುಂದುವರೆಯಬೇಕಿದೆ" ಎಂಬ ಅಂಶವನ್ನು ಬಿಚ್ಚಿಡುತ್ತಾರೆ.

ಅಡಿ ಟಿಪ್ಪಣಿಗಳು

೦೧. ಕಡ್ಲಬಾಳು ಪನ್ನಂಗಧರ–'ಮೇದರ ಸಂಸ್ಕೃತಿ ಮತ್ತು ವಾಣಿಜ್ಯ ಅಧ್ಯಯನ'–ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ (ಅಪ್ರಕಟಿತ)–ಪು.ಸಂ–೨೪

೦೨. ಪ್ರಭಾಕರ ಎ.ಎಸ್., ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪುಟ–೪೦–೪೦, ಕನ್ನಡ ವಿ.ವಿ. ಹಂಪಿ, ೨೦೦೦

೦೩. ಪೂರ್ಣಚಂದ್ರ ತೇಜಸ್ವಿಕೆ.ಪಿ–ಜುಗಾರಿಕ್ರಾಸ್ (ಮೇದರಳ್ಳಿಯ ಅವಸಾನ–೨), ಪುಟ–೯ ಪುಸ್ತಕ ಪ್ರಕಾಶನ, ಮೈಸೂರು

೦೪. ಶ್ರೀಧರ ಎ., ಎಚ್.ಡಿ. ಪ್ರಶಾಂತ (ಸಂ)–ಅಭುವೃದ್ಧಿ ಅಧ್ಯಯನ ಸಂಪುಟ–೫, ಸಂಚಿಕೆ ೨ ಪುಟ–೨೮,೨೯ ಪ್ರಸಾರಾಂಗ, ಕನ್ನಡ.ವಿ.ವಿ.ಹಂಪಿ–೨೦೦೬

೦೫. ನಾಗಭೂಷಣ ಡಿ.ಎಸ್., ಲೋಹಿಯಾ ಸಮಾಜವಾದದ ದರ್ಶನ–ಪುಟ–೮೭,೮೮, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು–೨೦೦೮

೦೬. ಪುಟ್ಟಯ್ಯ ಬಿ.ಎಂ., 'ಜಾತಿ ವಿಶ್ಲೇಷಣೆಯ ಸಮಸ್ಯೆ'–ಪುಟ–೨೧ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ–೨೦೧೦

ಅಧ್ಯಾಯ : ಐದು

ಸಮಾರೋಪ

ಅಧ್ಯಾಯ–ಐದು

ಸಮಾರೋಪ

ಪ್ರಸ್ತುತ ಅಧ್ಯಯನವು ಸಮಾಜಶಾಸ್ತ್ರೀಯ ನೆಲೆಗಟ್ಟಿನಲ್ಲಿ ನಡೆದಿದೆ. ಮೇದ ಬುಡಕಟ್ಟಿನ ಸ್ಥಿತಿ–ಗತಿಗಳನ್ನು ಸಮಗ್ರವಾಗಿ, ಕೂಲಂಕುಶವಾಗಿ ಪರಾಮರ್ಶೆ ಮಾಡಲಾಗಿದೆ. ಮೇದರ ಸಮಕಾಲೀನ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ ಹಾಗೂ ರಾಜಕೀಯ ಅಂಶಗಳನ್ನು ಸಂಶೋಧನಾ ಅಧ್ಯಯನದಲ್ಲಿ ತಿಳಿಸಲಾಗಿದೆ. ಆರಂಭದ ದಿನಗಳಲ್ಲಿ ಅಲೆಮಾರಿ ಪ್ರವೃತ್ತಿಯವರಾದ ಮೇದರು ಕಾಡಿನಂಚಿನ ಹಳ್ಳಿಗಳಲ್ಲಿ ನೆಲೆನಿಂತು, ಮೇದರ ಕುಲಕಸುಬನ್ನು ಮುಂದುವರೆಸಿದ್ದಾರೆ. ಈ ಪ್ರಕ್ರಿಯೆಯಿಂದಲೇ ಅನೇಕ ಬದಲಾವಣೆಗಳು ಸಂಭವಿಸಿರುವುದು ಅಧ್ಯಯನದಿಂದ ದೃಢಪಟ್ಟಿದೆ. ಕಾಡಿನಿಂದ ನಾಡಿಗೆ ವಾಸ್ತವ್ಯವನ್ನು ಸ್ಥಳಾಂತರಿಸಿದ್ದರಿಂದ ಗ್ರಾಮ, ಪಟ್ಟಣದ ಸಂಸ್ಕೃತಿ ಮೇದರ ಮೇಲೆ ಗಾಢವಾಗುತ್ತಾ ಹೋಗಿದೆ. ಕನ್ನಡ, ತೆಲುಗು, ತಮಿಳು ಹಾಗೂ ಮಲಯಾಳಂ ಭಾಷಿಕರು ನೆರೆಯ ಆಂಧ್ರಪ್ರದೇಶ, ತಮಿಳನಾಡು ಹಾಗೂ ಕೇರಳದಿಂದ ವಲಸೆ ಬಂದಿರುತ್ತಾರೆ. ಬಿದಿರಿನಿಂದಲೇ ನಮ್ಮ ಬದುಕನ್ನು ಕಂಡುಕೊಂಡ ಮೇದರ ಉತ್ಪನ್ನಗಳನ್ನು ಗಿರಾಕಿಗಳು ಕಾಯ್ದು ಪಡೆದುಕೊಳ್ಳುತ್ತಿದ್ದ ದಿನಗಳು ಮಾಸಿಹೋಗಿವೆ. ಸರ್ಕಾರದ ಅರಣ್ಯ ನೀತಿಯು, ಮೇದಾರಿಕೆಗೆ ಕಂಟಕ ಎನಿಸಿದೆ. ಆಧುನಿಕತೆ ಹಾಗೂ ಜಾಗತೀಕರಣದ ಪ್ರಭಾವವು, ಎಲ್ಲ ಗುಡಿ ಕೈಗಾರಿಕೆಗಳನ್ನು ನಾಶ ಮಾಡುವಂತೆ

[illegible]

[illegible]

[illegible]

[illegible]

ಮೇದಾರಿಕೆಯನ್ನು ಅಂಚಿಗೆ ತಳ್ಳಲ್ಪಟ್ಟು ಅನೇಕ ಸ್ಥಿತ್ಯಂತರಗಳಿಗೆ ಒಳಗಾಗಿಸಿದೆ. ಮೇದಾರಿಕೆಯ ಜೊತೆಗೆ ಕೃಷಿ ಹಾಗೂ ಕೃಷಿಯೇತರ ಚಟುವಟಿಕೆಗಳನ್ನು ನಿರ್ವಹಿಸಿ ಬದುಕನ್ನು ಮಾಡುತ್ತಿದ್ದಾರೆ. ಮಲೆನಾಡು ಪ್ರದೇಶದಲ್ಲಿ ವಾಸಿಸುತ್ತಿರುವ ಮೇದರಲ್ಲಿ 'ಡಿಪೋ ಸಂಸ್ಕೃತಿ' ತೀರಾ ವಿರಳವಿದ್ದು, ಕಾಫಿ ಎಸ್ಟೇಟು ಇರುವೆಡೆ ಹಾಗೂ ಬಯಲು ಸೀಮೆಯ ತರೀಕೆರೆಯಲ್ಲಿ ಮಾತ್ರ ಆರು 'ಡಿಪೋ'ಗಳಿವೆ. ಸಂಸ್ಕೃತೀಕರಣದ ಪ್ರಭಾವದಿಂದಾಗಿ ವೈದಿಕ ಸಂಸ್ಕೃತಿಯ ಅಳವಡಿಕೆ ಹೆಚ್ಚಿನ ಮೇದರಲ್ಲಿ ಕಾಣಲಾಗುತ್ತದೆ. ಪಟ್ಟಣದ ಸಮುದಾಯಗಳ ನಡುವೆ ಬದುಕುತ್ತಿರುವುದರಿಂದ ಆ ಸಮುದಾಯಗಳಿಗೆ ಸಮನಾಗಿ ನಿಲ್ಲಬೇಕು ಎಂಬ ಕಾರಣಕ್ಕಾಗಿ ಸುತ್ತಮುತ್ತ ಬದುಕುತ್ತಿರುವ ಇತರ ಜಾತಿಗಳ ಅಥವಾ ಮೇಲ್ಜಾತಿಗಳನ್ನು ಅನುಸರಿಸುತ್ತಿವೆ. ಸಾರ್ವಜನಿಕರ ದೃಷ್ಟಿಯಲ್ಲಿ ಜಾತಿಯ ಶ್ರೇಣಿ ಪಟ್ಟಿಯ ಕೊನೆ ತುದಿಯಲ್ಲಿ ಪರಿಶಿಷ್ಟ ಜಾತಿಯವರಿದ್ದು, ಅವರ ಮೇಲಿನ ಸ್ಥಾನವನ್ನು ಮೇದರಿಗೆ ನೀಡುತ್ತಾರೆ. ಪರಿಶಿಷ್ಟ ಪಂಗಡದಲ್ಲಿಯೂ ಮೇಲಿನ ಸ್ಥಾನವನ್ನು ಪಡೆದಿದ್ದಾರೆ.

ಆದರೂ ಸಮುದಾಯದಲ್ಲಿ ಮೇದರ ಬಗ್ಗೆ 'ಕೆಳ ಜಾತಿಯ ಭಾವನೆ' ಇರುವುದು ಕಂಡುಬಂದಿದೆ. ಮೇದಾರಿಕೆ ವೃತ್ತಿಯನ್ನು ಬಿಡುವ ಬಗ್ಗೆ ಹೊಸ ತಲೆಮಾರಿನವರು ಆಲೋಚಿಸುತ್ತಿದ್ದಾರೆ. ಸಾಮಾಜಿಕ ಸ್ಥಾನಮಾನದ ಕಲ್ಪನೆ ಅವರಲ್ಲಿದೆ. ಆದರೆ ಈ ವೃತ್ತಿಗೆ ಪರ್ಯಾಯವಾದ ದೃಢವಾದ ಕಲ್ಪನೆಗಳು ಹೊಸ ತಲೆಮಾರಿನಲ್ಲಿ ಕಂಡುಬರುತ್ತಿಲ್ಲ. ಬದಲಿಗೆ ಹಿರಿಯ ತಲೆಮಾರಿನವರು ವೃತ್ತಿ ಸ್ಥಿತ್ಯಂತರದ ಬಗ್ಗೆ ಕಾಳಜಿ ಮಾಡುತ್ತಿದ್ದಾರೆ. ತಮ್ಮ ಮುಂದಿನ ತಲೆಮಾರಿಗೆ ಈ ವೃತ್ತಿಯನ್ನು ಸಾಗ ಹಾಕಬೇಕೆ? ಬೇಡವೇ? ಎಂಬ ಜಿಜ್ಞಾಸೆಯಲ್ಲಿದ್ದಾರೆ. ಬಿದಿರಿಗೆ 'ಕಟ್ಟೆರೋಗ' ಬಂದಿದ್ದು ಪುನ್ಹ ಬಿದಿರು ಸಿಕ್ಕರೂ ಬಿದಿರಿನ ಉತ್ಪನ್ನಗಳಿಗೆ ಮಾರುಕಟ್ಟೆಯಿಲ್ಲದಿರುವುದು ದಿಗ್ಮೂಢರನ್ನಾಗಿಸಿದೆ. ಇಡೀ ಕರ್ನಾಟಕದಲ್ಲಿ ಇಂತಹ ಸಂಚಲನವಾಗಿ ನೋವನ್ನು ಹಂಚಿಕೊಳ್ಳಲು ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳಲು ಮೀಸಲು ಸಮಸ್ಯೆ ಪರಿಹರಿಸಿಕೊಳ್ಳಲು ಇಂತಹವೇ ಪ್ರಮುಖ ಬೇಡಿಕೆಗಳಿಗಾಗಿ ರಾಜ್ಯಮಟ್ಟ ಹಾಗೂ ಸ್ಥಳೀಯವಾಗಿ ಮೇದಾರ ಸಂಘಟನೆಗಳು ಹಿಂದೆಂದಿಗಿಂತಲೂ ಇಂದು ಹೆಚ್ಚುತ್ತಿವೆ. ತಮ್ಮ ಹಕ್ಕಿಗಾಗಿ ಬೀದಿಗಿಳಿದು ಪ್ರತಿಭಟನೆ ಮಾಡುತ್ತಿದ್ದಾರೆ.

ಇಂತಹ ಹಲವು ಸಂದಿಗ್ಧತೆಗಳ ನಡುವೆ ವಾಸಿಸುತ್ತಿರುವ ಮೇದರ ಸಮಸ್ಯೆ-ಸವಾಲುಗಳನ್ನು ಮೇದರ ಬದುಕಿನ ಹಲವು ಮಗ್ಗಲುಗಳನ್ನು ಸೂಕ್ಷ್ಮವಾಗಿ ಗಮನಿಸುವ ಸಲುವಾಗಿ ಸಮಾಜಶಾಸ್ತ್ರೀಯ ನೆಲೆಯಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ. ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ, ತರೀಕೆರೆ, ಚಿಕ್ಕಮಗಳೂರು ಹಾಗೂ ಮೂಡಿಗೆರೆ ತಾಲೂಕುಗಳಲ್ಲಿ, ಹಳ್ಳಿಗಳಲ್ಲಿ, ಕಾಡಿನ ಅಂಚಿನಲ್ಲಿ ನೆಲೆಕಂಡುಕೊಂಡಿರುವ ೩೭೩ ಮೇದ ಕುಟುಂಬಗಳನ್ನು ಸಮಗ್ರ ಅಧ್ಯಯನಕ್ಕೆ ಒಳಪಡಿಸಲಾಗಿದ್ದು ಇಲ್ಲಿ ಲಭ್ಯವಾದ ಮಾಹಿತಿಗಳು ಇಡೀ ಮೇದ ಸಮುದಾಯಕ್ಕೆ ಉತ್ತಮ ಮಾದರಿಯಾಗಿ ಆರೋಪಿಸಬಹುದೆಂದು ಊಹಿಸಲಾಗಿದೆ. ಕಾರಣ, ಕರ್ನಾಟಕ ರಾಜ್ಯದಲ್ಲಿರುವ ಮೇದರ ನೆಲೆ, ಚಹರೆಗಳೆಲ್ಲವೂ ನನ್ನ ಸಂಶೋಧನೆಯಿಂದ ಕಂಡುಕೊಳ್ಳಲಾಗಿದೆ.

ಮೇದರ ಒಟ್ಟು ಜನಸಂಖ್ಯೆ, ಕ್ಷೇತ್ರಕಾರ್ಯ ವ್ಯಾಪ್ತಿಯಲ್ಲಿ ನೆಲೆಸಿರುವ ಮೇದರ ಒಟ್ಟು ಸಂಖ್ಯೆ, ಭೌಗೋಳಿಕ ಹಿನ್ನೆಲೆ, ಬಯಲು ಹಾಗೂ ಮಲೆನಾಡಿನ ಮೇದರ ತೌಲನಿಕ ಅಧ್ಯಯನ, ಮೇದರಿಗಿರುವ ಕಾಡಿನ ಸಂಬಂಧಗಳನ್ನು ಅಧ್ಯಯಿನಿಸಲಾಗಿದೆ. ಮೌಖಿಕ ಪರಂಪರೆಯಿಂದ ಹುಟ್ಟಿಕೊಳ್ಳುವ ಸೃಷ್ಟಿ ಪುರಾಣಗಳು ಒಂದು ಸಮುದಾಯದ ಪರ್ಯಾವರಣವನ್ನು ನೀಡುತ್ತದೆ. ಅದರಂತೆ ಮೇದರ ಸೃಷ್ಟಿಗೆ ಸಂಬಂಧಿಸಿದ ಪುರಾಣಗಳನ್ನು ದಾಖಲಿಸಲಾಗಿದೆ. ಸಮಾಜಶಾಸ್ತ್ರೀಯ ಅಧ್ಯಯನದ ನೆಲೆಗಟ್ಟಿನಲ್ಲಿ ಮೇದರ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ರಾಜಕೀಯ ಅಂಶಗಳನ್ನು ವಿವರವಾಗಿ ಪಡೆಯಲು ಎಚ್ಚರಿಕೆಯಿಂದ ತಯಾರಿಸಿದ 'ಸಂದರ್ಶನ ಅನುಸೂಚಿ'ಯನ್ನು ಬಳಸಿ ವಿವರವಾದ ಮಾಹಿತಿಗಳನ್ನು ಪಡೆದು ಅವುಗಳನ್ನು ಕೋಷ್ಟಕದ ಆಧಾರದ ಮೇಲೆ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ವಿವರಿಸಿರುವಂತೆ ಮೇದರ ಸಾಮಾಜಿಕ ಜೀವನದಲ್ಲಿ ವೈವಾಹಿಕ ಪದ್ಧತಿಗಳು ಶುದ್ಧ ಸಂಪ್ರದಾಯಬದ್ಧವಾಗಿ ಗುರಿಕಾರ, ಗೌಡ, ಬುದ್ಧಿವಂತರ ನೇತೃತ್ವದಲ್ಲಿ ನಡೆಯುತ್ತಿತ್ತು. ವಿವಾಹ ತೀರ್ಮಾನಗಳು ಅವರಿಂದಲೇ ತೆಗೆದುಕೊಳ್ಳಲಾಗುತ್ತಿತ್ತು. ಇಂದು ಸಂಸ್ಕೃತೀಕರಣದ ಪ್ರಭಾವದಿಂದ ಲಿಂಗಾಯಿತರ ಐನೋರು, ಬ್ರಾಹ್ಮಣರ ಪುರೋಹಿತನಿಗೆ ವರ್ಗಾವಣೆಗೊಂಡಿರುವುದನ್ನು ದಾಖಲಿಸಲಾಗಿದೆ. ಮೇದ ಬುಡಕಟ್ಟಿನಲ್ಲಿ 'ತೆರ' ಕೊಟ್ಟು ಹೆಣ್ಣನ್ನು ವಿವಾಹವಾಗುವುದು ವಾಡಿಕೆಯಾಗಿತ್ತು. ಕಳೆದ ೩೫-೪೦ ವರ್ಷಗಳಿಂದ 'ವರದಕ್ಷಿಣೆ' ನಿಧಾನವಾಗಿ ತನ್ನ ಸ್ಥಾನವನ್ನು ಗಟ್ಟಿ ಮಾಡಿಕೊಂಡಿರುವುದು ಅಧ್ಯಯನದಿಂದ ತಿಳಿಯಲಾಗಿದ್ದು ಕೂಡಿಕೆ, ಸೀರುಡಿಕೆಯಂತಹ ವಿಧವಾ ಪುನರ್ವಿವಾಹಗಳು ಮೇದರಿಂದ ಮರೆಯಾಗಿ, 'ವಿಧುರ ವಿವಾಹ'ವು ಕನ್ಯೆಯೊಂದಿಗೆ ನಡೆಯುವುದನ್ನು ದಾಖಲಿಸಲಾಗಿದೆ. ಶೇ.೯೦ ಭಾಗ ವಿಭಕ್ತ ಕುಟುಂಬವಾಗಿ ಪರಿವರ್ತನೆಯಾಗಿ, ಮಾತೃಪ್ರಧಾನ ಕುಟುಂಬದಿಂದ, ಪಿತೃಪ್ರಧಾನ ಕುಟುಂಬವಾಗಿ ಪರಿವರ್ತನೆಯಾದರೂ 'ಮಾತಾ-ಪಿತೃಗಳ ಕುಟುಂಬ'ದಂತೆ ಗೋಚರಿಸುತ್ತಿರುವುದು ಸಮಾನತೆ ಬಗ್ಗೆ ತಿಳಿಸಲಾಗಿದೆ.

ಕುಲಗೋತ್ರ-ಬೆಡಗುಗಳ ಬಗ್ಗೆ ಸರಿಯಾದ ವಿಂಗಡನೆಯನ್ನು ಮಾಡಲಾಗದ ಮೇದರು ಇದನ್ನಂತು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಇದನ್ನು 'ಕುಲಾಚಾರ' ಎಂದು ಕರೆದು ಕುಲದ ಮುಖಂಡರಾದ 'ಗೌಡ, ಬುದ್ಧಿವಂತ, ಪಟೇಲ, ಗುರಿಕಾರ, ಮುದ್ರೆಕಾರ' ಇವರಿಂದ ಯಾವುದೇ ತೀರ್ಮಾನಗಳು ನಡೆಯುತ್ತಿದ್ದವು. 'ಸಮಾನ ಬೆಡಗು'ಗಳಲ್ಲಿ ಇಂದಿಗೂ ವಿವಾಹ ನಿಷಿದ್ಧವಿದೆ. 'ಕಟ್ಟೆ ಸಂಸ್ಕೃತಿ'ಯಿಂದ ತಮ್ಮ ಸಮುದಾಯದ ಭೌಗೋಳಿಕ ಸೀಮಾರೇಖೆಯನ್ನು ತಿಳಿಯಲಾಗುತ್ತಿದೆ. ಕಟ್ಟೆಗೆ ಸಲ್ಲುವ ಗೌರವಕ್ಕೆ ಚ್ಯುತಿ ಬಂದರೆ ಈಗಲೂ ಪ್ರತಿಭಟಿಸುತ್ತಿದ್ದಾರೆ. ಇಂದಿನ ಯುವಕರು ಮೂಕ ವಿಸ್ಮಿತರಾಗಿ ಇವೆಲ್ಲವುಗಳನ್ನು ಬಿಟ್ಟಗಣ್ಣಿನಿಂದ ನೋಡುತ್ತಿರುವುದನ್ನು ವಿವರಿಸಲಾಗಿದೆ. 'ಕಟ್ಟೆ ತೀರ್ಮಾನ'ಗಳು ಶಿರಸಾವಹಿಸಿ ಒಪ್ಪುತ್ತಿದ್ದ ಪೀಳಿಗೆಯವರ ಹಿಂದೆಯೇ ಸಂಪ್ರದಾಯಿಕ ನ್ಯಾಯಪದ್ಧತಿ ಹೊರಟೋದಂತಿದೆ. 'ಸವಕಲು ತೀರ್ವಾನ' ಅಳಿದುಳಿದಿದ್ದು, ಕೋರ್ಟು ಕಛೇರಿ

ಅಪ್ಯಾಯಮಾನವಾಗಿರುವುದನ್ನು ವಿಶ್ಲೇಷಿಸಲಾಗಿದೆ. ಗೆಡ್ಡೆ–ಗೆಣಸನ್ನೇ ತಿನ್ನುತ್ತಿದ್ದವರು, ಗೆಡ್ಡೆ–ಗೆಣಸನ್ನು ಭೂಮಿ ಹುಣ್ಣುಮೆಯಲ್ಲಾದರೂ ತಿನ್ನಬೇಕು. ವರ್ಷದಲ್ಲಿ ಒಮ್ಮೆಯಾದರೂ ತಿನ್ನಲೇಬೇಕೆನ್ನುವ ಅಪೇಕ್ಷೆ ಬುಡಕಟ್ಟಿನ ಆಶಯಗಳಲ್ಲಿನ ತಂತುಗಳಾಗಿ ಉಳಿದಿರುವ ಬಗ್ಗೆ, ಮಾಂಸಹಾರ ಪ್ರಿಯರಾದ ಮೇದರು ತಮ್ಮ 'ಬೇಟೆ ಸಂಸ್ಕೃತಿ'ಯಿಂದ ಪಡುತ್ತಿದ್ದ ಖುಷಿ ಅರಣ್ಯ ಕಾಯ್ದೆಯಿಂದ ತೊಳೆಯಲ್ಪಟ್ಟಿದೆ. ತಮ್ಮ ಬೇಟೆಯ ಸಂತಸವನ್ನು 'ಸೀರೆ ಬೇಟೆ'ಯಲ್ಲಿ ಮಾತ್ರ ಅನುಭವಿಸುತ್ತಿರುವುದನ್ನು ವಿವರಿಸಲಾಗಿದೆ.

ಇಂದು 'ಶಿಕ್ಷಣದಿಂದಲೇ ಎಲ್ಲವೂ' ಎಂಬ ನೀತಿಯಂತೆ 'ಮೇದ ಅನಕ್ಷರ ಕುಕ್ಷಿ'ಗಳ ದೊಡ್ಡ ದಂಡನ್ನು ಹಿಂದಿಕ್ಕಿ, 'ಶಿಕ್ಷಣದ ವರ್ತುಲ'ದೊಳಗೆ ಆಧುನಿಕ ಮೇದ ಸಮುದಾಯದ ದಾಪುಗಾಲಿಡುತ್ತಿದೆ. 'ಶಿಕ್ಷಣಕ್ಕೂ ವೃತ್ತಿಗೂ' ಸಂಬಂಧ ಹೆಣೆದುಕೊಂಡಿದ್ದು, ಭವಿಷ್ಯದ ಆಸೆ ಕಂಗಳಲ್ಲಿ ಮಿಂಚುತ್ತಿರುವುದನ್ನು ತಿಳಿಸಲಾಗಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಮೇದರ ಸಾಕ್ಷರತೆ ಶೇ.೫೨.೦೨ರಷ್ಟಿದ್ದು ಕರ್ನಾಟಕದ ಮೇದರ ಸಾಕ್ಷರತೆ ಪ್ರತಿಶತ ೬೬.೨೬ರಷ್ಟಿದ್ದು, ಕಡಿಮೆಯೆನಿಸಿದರೂ ಸುಧಾರಣಾತ್ಮಕ ಬದಲಾವಣೆಯಾಗುತ್ತಿರುವುದು ಕಂಡುಬಂದಿದೆ. ಮಹಿಳಾ ಸಾಕ್ಷರತ ಪ್ರಮಾಣ ಪುರುಷರಿಗೆ ಸರಿಸಮಾನವಾಗಿರುವುದು ಸ್ತ್ರೀ ಶಿಕ್ಷಣಕ್ಕೆ ಒತ್ತು ನೀಡುತ್ತಿರುವುದುರಿಂದ ಸಾಮಾಜಿಕ ಅಂತಸ್ತಿನಲ್ಲಿ ಸುಧಾರಣೆ ಹೊಂದುತ್ತಿರುವುದನ್ನು ಕೋಷ್ಟಕದೊಂದಿಗೆ ಹೋಲಿಸಿ ವಿವರಿಸಲಾಗಿದೆ.

ಎಡರನೇ ಅಧ್ಯಾಯದಲ್ಲಿ ಮೇದರ ಸಾಂಸ್ಕೃತಿಕ ಜೀವನವನ್ನು ವಿಶ್ಲೇಷಿಸಲಾಗಿದೆ. ಅವರ ನಂಬಿಕೆ–ನಿಷೇಧಗಳು, ಆಚರಣೆಗಳು ಮತ್ತು ಸಂಪ್ರದಾಯಗಳು, ಕಲೆ ಮತ್ತು ಸಾಹಿತ್ಯ, ಸಾಂಸ್ಕೃತಿಕ ನಾಯಕರು, ಹಬ್ಬ–ಹರಿದಿನಗಳನ್ನು ವಿವರಿಸಲಾಗಿದೆ.

'ಶಕುನ–ಅಪಶಕುನ'ವನ್ನು ಎಲ್ಲರಂತೆ ಮೇದರೂ ನಂಬುತ್ತಾರೆ. ಕುಲಕಸುಬಿಗೆ ಸಂಬಂಧಿಸಿದ ಕೆಲವು ನಂಬಿಕೆ–ನಿಷೇಧಗಳನ್ನು ತಿಳಿಸಲಾಗಿದೆ. ಇವರ ಆಚರಣೆಗಳಲ್ಲಿ 'ಯಳಬಿಹಬ್ಬ', ಕಣಚ್ಚು, ಪಿತೃಪೂಜೆ, ಕೆರಕನಬ್ಬ, ಭೂಮಿ ಹುಣ್ಣಿಮೆ ಇತ್ಯಾದಿಗಳ ಹಿಂದಿನ ಸಾಂಸ್ಕೃತಿಕ ಮೌಲ್ಯಗಳನ್ನು ಸಮೀಕ್ಷಿಸಿ ದಾಖಲಿಸಲಾಗಿದೆ. ವೃತ್ತಿಯಲ್ಲಿ ಕಲಾತ್ಮಕತೆಗೆ ಸಿದ್ಧಹಸ್ತರಾದ ಮೇದರ ವಕ್ತೃಗಳನ್ನು ಆಯ್ಕೆ ಮಾಡಿ ಅವರಿಂದ ಮೇದಾರಿಕೆಗೆ ಸಂಬಂಧಿಸಿದಂತೆ ಹಲವಾರು ಮಾಹಿತಿಗಳನ್ನು ಪಡೆದು ಸಂಶೋಧನಾ ಮೌಲ್ಯ ಹೆಚ್ಚಿಸಿಕೊಳ್ಳಲು ಪ್ರಯತ್ನಿಸಲಾಗಿದೆ.

ಮೇದರಲ್ಲಿ ಶಿಷ್ಟ ಸಾಹಿತ್ಯಗಳ ಕೊರತೆಯಿದೆ. ಮೇದರ ವಾರ್ಷಿಕ ಆವರ್ತನಗಳಾದ ಋತುಮತಿ, ಮದುವೆ, ಸೀಮಂತ, ನಾಮಕರಣ ಮುಂತಾದ ಸಂದರ್ಭಗಳಲ್ಲಿ ಸಂದರ್ಭೋಚಿತವಾಗಿ ಹಾಡುವ ಹಾಡುಗಳು, ಸೋಬಾನೆ ಪದ, ದಾಸರ ಪದ ಇವುಗಳನ್ನು ದಾಖಲಿಸಲಾಗಿದೆ. ಕೆಲವಷ್ಟು ಅವರ ಸ್ಮೃತಿಯಿಂದ ದೂರ ಹೋಗಲು ಇಂದಿನ ವಾಕ್–ದೃಶ್ ಮಾಧ್ಯಮಗಳೂ ಕಾರಣವಾಗಿವೆ. ಕರ್ನಾಟಕ ರಾಜ್ಯದಲ್ಲಿ ವಾಸವಿರುವ ಇತರೆ ಮೇದರಿಂದ ಪಡೆದ ಸಾಹಿತ್ಯಗಳನ್ನು ಸೇರಿಸಿದ್ದೇನೆ. ೧೨ನೇ ಶತಮಾನದಲ್ಲಿದ್ದ ಮೇದರ ಕ್ಯಾತಯ್ಯ, ಸಾಮಾನ್ಯ ವಚನಕಾರನಾಗಿದ್ದು ಪವಾಡ ಪುರುಷನಾಗಿದ್ದ. ಈತನ ಹದಿಮೂರು ವಚನಗಳನ್ನು ದಾಖಲಿಸಲಾಗಿದೆ. ಜನಪದ ಶೈಲಿಯ ಹಾಡುಗಾರರು

ಚಿಕ್ಕಮಗಳೂರು ಜಿಲ್ಲೆಯ ಶೆಟ್ಟಿಕೊಪ್ಪ, ಆಲ್ದೂರು ತಣಿಗೆಬೈಲುಹಾಗೂ ನರಸಿಂಹರಾಜಪುರದಲ್ಲಿ ವಿರಳವಾಗಿ ಲಭಿಸುತ್ತಾರೆ. ಅವರು ಹಾಡಿರುವ ಹಾಡುಗಳನ್ನು ದಾಖಲಿಸಿದ್ದೇನೆ. ಮೇದರ ಸಾಂಸ್ಕೃತಿಕ ನಾಯಕರೆನಿಸಿದ ಕೇತಯ್ಯ, ಲಿಂಗಯ್ಯ, ಚನ್ನಯ್ಯ, ತೋಡಯ್ಯ, ಮುತ್ತುಶಂಕರ, ಹನುಮಯ್ಯ ಸ್ವಾಮೀಜಿಯವರ ಅನುಷಂಗಿಕ ದಾಖಲೆಗಳ ನೆರವನ್ನು ಪಡೆದು ವಿವರಿಸಿದ್ದೇನೆ. ಮೇದರು ವರ್ತಮಾನದಲ್ಲಿ ಶಿಷ್ಟ ಸಮುದಾಯ ಆಚರಿಸುವ 'ವೈದಿಕ', 'ಶೈವ ಪರಂಪರೆ'ಯ ಎಲ್ಲಾ ಹಬ್ಬಗಳ ಜೊತೆಗೆ ಬುಡಕಟ್ಟು ಆಚರಣೆಯ ಹಬ್ಬಗಳನ್ನೂ ಆಚರಿಸಿಕೊಂಡು ಬರುತ್ತಿರುವುದನ್ನು ದಾಖಲಿಸಲಾಗಿದೆ.

ಮೇದರ ಧಾರ್ಮಿಕ ಜೀವನದಲ್ಲಿ ಮೇದರ ಧಾರ್ಮಿಕ ನೆಲೆಗಳು, ಅವರ ಕುಲ ದೇವತೆ, ಮನೆ ದೇವತೆ (ಮಂದೇವರು)ಗೆ ಅನುಗುಣವಾಗಿ ಈ ನೆಲೆಗಳು ಸ್ಥಾಪಿತವಾಗಿರುವುದು. ಆಂಧ್ರದ ಅನಂತಪುರ, ತಮಿಳನಾಡಿನ ಸೇಲಂಗೂ ತೆಲುಗು-ತಮಿಳು ಭಾಷಿಕ ಮೇದರು ತಮ್ಮ ಧಾರ್ಮಿಕ ನೆಲೆಗಳಿಗೆ ಹೋಗುವುದು ಮುಡಿ, ಬಲಿ, ಪೂಜೆ-ಪುರಸ್ಕಾರ ನೆರವೇರಿಸುವರು. ಶಿಷ್ಟ ದೇವರುಗಳಿಗಿಂತ ಬುಡಕಟ್ಟು ದೇವರುಗಳ ಬಗ್ಗೆ ಭಯ, ಆತಂಕ, ಮಡಿ-ಮೈಲಿಗೆ ಜಾಸ್ತಿಯಿರುವುದು. ಮಾರಮ್ಮ, ಚೌಡಮ್ಮ, ಭೂತಪ್ಪ, ರಣ, ಬ್ಯಾಟರಾಯಗಳಿಗೆ ಹರಕೆ, ಪೂಜೆ, ಬಲಿ ಇತ್ಯಾದಿಗಳನ್ನು ಎಷ್ಟೇ ಬಡತನದಲ್ಲೂ ತೃಪ್ತಿಗೆ ಮುಕ್ಕಾಗದ ರೀತಿಯಲ್ಲಿ ಆಚರಿಸುವ ವಿವರಣೆಗಳನ್ನು ತಿಳಿಸಲಾಗಿದೆ. ಕೇವಲ ಹೆಗಲ ಮೇಲೆ ಹೊತ್ತು ದೇವರ ಸವಾರಿ ಮಾಡುವುದು ಇತ್ತೀಚೆಗೆ ಕೆಂಡಾರ್ಚನೆಯ ಜೊತೆಗೆ ಅನ್ನದಾಸೋಹ, ವಿದ್ಯುದಾಲಂಕೃತ ದೇವರ ಮೆರವಣಿಗೆ, ಸಿಡಿಮದ್ದು ಸಿಡಿಸುವುದು, ವಾದ್ಯಗೋಷ್ಠಿ, ಗಣೇಶೋತ್ಸವ, ದಸರಾ ಉತ್ಸವ ಇತ್ಯಾದಿ ಉತ್ಸವದ ಆಚರಣೆಗಳು ಮೇದರಲ್ಲಿ ಹೆಚ್ಚುತ್ತಿವೆ. ಇಂದಿನ ಯುವಕರೇ ಹೆಚ್ಚಾಗಿ ಜವಾಬ್ದಾರಿ ಮತ್ತು ಆಸಕ್ತಿ ಹೊಂದಿದ್ದಾರೆ.

ಸಾಮಾನ್ಯವಾಗಿ ಉತ್ಸವಕ್ಕೆ ಅಲಂಕಾರಕ್ಕೆ ತಾವೇ ಬಿದಿರಿನಿಂದ ತಯಾರಿಸಿದ ವೇದಿಕೆ ಹಾಗೂ ಅಲಂಕಾರಿಕ ವಿನ್ಯಾಸವನ್ನು ಮಾಡಿಕೊಳ್ಳುತ್ತಾರೆ. ಹಬ್ಬ ಆಚರಣೆಗಳಲ್ಲಿ ಪಟ್ಟಣದ ಪ್ರಮುಖ ಭಾಗದಲ್ಲಿ ಮೇದರೇ ಸೇವೆಯ ಭಾಗವಾಗಿ ಪುಕ್ಕಟೆಯಾಗಿ ಸ್ವಾಗತ ಕಮಾನನ್ನು ನಿರ್ಮಿಸುತ್ತಾರೆ. ಉತ್ಸವವನ್ನು ಟ್ರ್ಯಾಕ್ಟರ್‌ನಲ್ಲಿ ಸಾಗಿಸಲಾಗುತ್ತದೆ. ಯುವಕರು ಕುಣಿದು-ಕುಪ್ಪಳಿಸಿ ಆನಂದಿಸುವುದನ್ನು ತಿಳಿಸಲಾಗಿದೆ.

ಇನ್ನು ಮೇದರ ಬದುಕಿನ ಮೂಲ ಘಟಕವಾದ ಆರ್ಥಿಕ ಜೀವನ. ಶೇ.೯೦ರಷ್ಟು ಮೇದರು ಇಂದಿಗೂ ಕುಲಕಸುಬನ್ನೇ ಆಶ್ರಯಿಸಿದ್ದು, ಕಡಿಮೆ ಪ್ರಮಾಣದ ಭೂಹಿಡುವಳಿದಾರರಿದ್ದಾರೆ. ೦-೨ ಎಕರೆಯೊಳಗೆ ಶೇ.೯೨ರಷ್ಟು ಮೇದರು ತುಂಡು ಜಮೀನುಗಳನ್ನು ಹೊಂದಿದ್ದು, ಪಿತ್ರಾರ್ಜಿತವಾಗಿ ಬಂದ ಈ ಜಮೀನು ಅವಿಭಕ್ತ ಕುಟುಂಬದಿಂದ ಬಂದ ಬಳುವಳಿಯಾಗಿದ್ದು ತಲಾ ಉತ್ಪಾದನೆ ಕಡಿಮೆಯಾಗಿರುವುದು ತಿಳಿಸಲಾಗಿದೆ. ಮೇದಾರಿಕೆ ಸಂಕ್ರಮಣಾವಸ್ಥೆಯಲ್ಲಿದ್ದು, ಇದನ್ನೇ ಮುಂದುವರಿಸಿಕೊಂಡು ಹೋದರೆ ಬದುಕು ಹೇಗೆ? ಎಂಬ ಚಿಂತೆ ಹಿರಿ-ಕಿರಿಯ ಮೇದರನ್ನು ಕಾಡುತ್ತಿದೆ. ಕುಲಕಸುಬಿನ ಉತ್ಪನ್ನಗಳಿಗೆ ಬೇಡಿಕೆ, ಮಾರುಕಟ್ಟೆ ಎರಡನ್ನೂ ಯಾಂತ್ರಿಕ ಜಗತ್ತು ಕಸಿದುಕೊಂಡಿರುವುದನ್ನು ವಿವರಿಸಲಾಗಿದೆ. ಆದಾಯ-ಖರ್ಚು-ಉಳಿತಾಯಕ್ಕೆ ಸಂಬಂಧಿಸಿದ

ಹಲವಾರು ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆದು ಕೋಷ್ಟಕದಲ್ಲಿ ವಿವರಿಸಲಾಗಿದೆ. ಭಾರತದ ರೈತನ ಸ್ಥಿತಿಗಿಂತ ವಿಭಿನ್ನವಾಗೇನೂ ಇಲ್ಲ ಮೇದರ ಸ್ಥಿತಿ. ಶೇ.೮೦ಕ್ಕಿಂತಲೂ ಹೆಚ್ಚಿನ ಮೇದರು ಸಾಲ ಮಾಡುತ್ತಾರೆ. ಇದನ್ನು ಅನುತ್ಪಾದಕ ಚಟುವಟಿಕೆಗಳಲ್ಲಿ ಬಳಸುತ್ತಾರೆ. ಮದುವೆ–ಮುಂಜಿ–ಸೀಮಂತ–ತೊಟ್ಟಿಲು ಶಾಸ್ತ್ರ, ದೇವರ ಪೂಜೆ, ತಿಥಿ ಇತ್ಯಾದಿಗಳೇ ಶೇ.೭೦ರಷ್ಟು ಸಾಲವನ್ನು ನುಂಗುತ್ತಿದೆ. ಸಾಲ ಮರು ಪಾವತಿಯ ರೀತಿ ಪ್ರಾಮಾಣಿಕತೆಯನ್ನು ಸವಿವರವಾಗಿ ದಾಖಲಿಸಲಾಗಿದೆ.

ಮೇದರು 'ಕಟ್ಟೆಮನೆ'ಯಲ್ಲಿ ನ್ಯಾಯತೀರ್ಪು ತಮ್ಮ ಸಮುದಾಯಕ್ಕೆ ನೀಡಿರುವುದು ಬಿಟ್ಟರೆ ಎಂದೂ ರಾಜಕೀಯ ಬೆಳವಣಿಗೆಯಲ್ಲಿ ಸ್ವಯಂ ಆಡಳಿತ ನಡೆಸಿದವರಲ್ಲ. ಸ್ವಾತಂತ್ರ್ಯ ನಂತರದ ರಾಜಕೀಯ ಬೆಳವಣಿಗೆಯಲ್ಲಿ ಸಾರ್ವತ್ರಿಕ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ಚಲಾಯಿಸಿ ಇತ್ತೀಚಿನ ದಿನಗಳಲ್ಲಿ ರಾಜಕೀಯ ನಂಟನ್ನು ವೃದ್ಧಿಸಿಕೊಳ್ಳುತ್ತಿದ್ದಾರೆ. ಪರಿಶಿಷ್ಟ ಪಂಗಡದ ರಾಜಕೀಯ ಮೀಸಲಾತಿಯಿಂದಾಗಿ ಚುನಾವಣಾ ಸ್ಪರ್ಧೆಗಿಳಿದು ಸೋಲು–ಗೆಲವುಗಳನ್ನು ಅನುಭವಿಸಿದ್ದಾರೆ. ಅಧಿಕಾರದ ಸಿಹಿ–ಕಹಿಯನ್ನೂ ಅನುಭವಿಸಿದ್ದಾರೆ.

ರಾಜಕೀಯವಾಗಿ ಗುರ್ತಿಸಿಕೊಳ್ಳುವುದು ರಾಜಕೀಯ ಸ್ಥಾನಮಾನಕ್ಕೆ ಹಿಡಿದ ಕೈಗನ್ನಡಿಯೆಂದು ಭಾವಿಸಿ, ಚುನಾವಣೆಯಲ್ಲಿ ಸ್ಪರ್ಧಿಸುವ ಆಸಕ್ತಿ ಕಾರ್ಯಕರ್ತರಾಗಿ, ಸಂಘಟಕರಾಗಿ, ಮುಂಚೂಣಿ ನಾಯಕರಾಗಿ ವಿವಿಧ ರಾಜಕೀಯ ಪ್ರಕ್ರಿಯೆಗಳಲ್ಲಿ ಗುರ್ತಿಸಿಕೊಂಡಿರುವ ಮೇದರನ್ನು ಕೋಷ್ಟಕದೊಂದಿಗೆ ವಿವರಿಸಲಾಗಿದೆ

ಅಧ್ಯಾಯ ಮೂರರಲ್ಲಿ ಮೇದರ ಸ್ಥಿತ್ಯಂತರಗಳನ್ನು ವಿವರಿಸಲಾಗಿದೆ. ಮುಖ್ಯವಾಗಿ ಸಾಮಾಜಿಕ ಸ್ಥಿತ್ಯಂತರ, ಸಾಂಸ್ಕೃತಿಕ ಸ್ಥಿತ್ಯಂತರ, ಆರ್ಥಿಕ ಸ್ಥಿತ್ಯಂತರ ಹಾಗೂ ರಾಜಕೀಯ ಸ್ಥಿತ್ಯಂತರಗಳನ್ನು ಚರ್ಚಿಸಿ, ವಿವರಿಸಲಾಗಿದೆ. ಬದಲಾವಣೆಯ ಈ ಕಾಲಘಟ್ಟದಲ್ಲಿ ಜಾಗತೀಕರಣದ ಪ್ರಕ್ರಿಯೆಯೂ ಉರಿಯುವ ಬೆಂಕಿಗೆ ತುಪ್ಪ ಸುರಿದಂತಾಗಿದೆ. ಬದಲಾವಣೆ ಮೇದರ ಬದುಕಿನ ವಿವಿಧ ಆಯಾಮಗಳಲ್ಲಿ ಘಟಿಸುತ್ತಿರುವುದನ್ನು ಒಂದೊಂದು ಆಯಾಮವನ್ನೂ ಪ್ರತ್ಯೇಕವಾಗಿ ವಿವರಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಮೇದರ ಸಮಕಾಲೀನ ಸಮಸ್ಯೆ–ಸವಾಲುಗಳು ಮತ್ತು ಸರ್ಕಾರಿ–ಸರ್ಕಾರೇತರ ಸಂಘ–ಸಂಸ್ಥೆಗಳ ಅಭಿವೃದ್ಧಿ ಕಾರ್ಯಕ್ರಮಗಳು, ಮೌಲ್ಯಮಾಪನದ ಅಡಿಯಲ್ಲಿ ಮೇದರ ಕುಲಕಸುಬಿಗೆ ಸಂಬಂಧಿಸಿದ ಬಿದಿರಿನ ಪೂರೈಕೆಯ ಸಮಸ್ಯೆಗಳು, ತಯಾರಿಸಿದ ವಸ್ತುಗಳ ಮಾರಾಟ ಪ್ರಕ್ರಿಯೆಯ ಸಮಸ್ಯೆಗಳು, ಮೀಸಲಾತಿ ಸಮಸ್ಯೆ, ಕೃಷಿಭೂಮಿ ಮಂಜೂರಾತಿಯ ಸಮಸ್ಯೆ, ಶೈಕ್ಷಣಿಕ ಮತ್ತು ಔದ್ಯೋಗಿಕ ಸಮಸ್ಯೆಗಳು, ಸರ್ಕಾರಿ ಸೌಲಭ್ಯಗಳ ವಿರಳೀಕರಣ, ಮೇದ ಬುಡಕಟ್ಟು ಹಾಗೂ ಆಧುನಿಕ ಮುಖಾಮುಖಿ ಕೊನೆಯದಾಗಿ ಇತರೆ ಬುಡಕಟ್ಟುಗಳೊಂದಿಗೆ ಮೇದ ಸಮುದಾಯದ ಸಾಮರಸ್ಯವನ್ನು ಸೂಕ್ಷ್ಮಾತಿಸೂಕ್ಷ್ಮ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಸುಮಾರು ೩೫ರಿಂದ ೪೦ ವರ್ಷಗಳಿಗೊಮ್ಮೆ ಬರುವ 'ಕಟ್ಟೆರೋಗ' ಇದೊಂದು ಪ್ರಕೃತಿ ನಿಯಮ. ಇದನ್ನು ಮೇದರು 'ಬರಗಾಲದ' ಮುನ್ಸೂಚನೆ ಎನ್ನುತ್ತಾರೆ. ಬಿದಿರು ಕಾಡಿನ ಎಲ್ಲಾ

ಬಿದಿರನ್ನು ಕಟ್ಟೆರೋಗ ಆಕ್ರಮಿಸಿಕೊಂಡು, ಒಣಗಿಸಿ ಬುಡಮೇಲು ಮಾಡುತ್ತದೆ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಬಿದಿರನ್ನೇ ನಂಬಿರುವ ಬಹು ಸಂಖ್ಯೆಯ ಮೇದರಿಗೆ ಬಿದಿರು ಸಿಗದೆ ಕಂಗಾಲಾಗುತ್ತಾರೆ. ಸಮಸ್ಯೆಯ ಒಳ-ಹೊರಗುಗಳನ್ನು ವಿವರಿಸಲಾಗಿದೆ.

ಮೇದರು ಬಹಳ ಕಾಳಜಿವಹಿಸಿ, ಕಷ್ಟಪಟ್ಟು ತಂದ ಬಿದಿರಿನಿಂದ ತಯಾರಿಸಿದ ಬಿದಿರಿನಿಂದ ತಯಾರಿಸಿದ ಮೊರ, ಬುಟ್ಟಿ, ತಟ್ಟಿ, ತೊಟ್ಟಿಲು, ಚಾಪೆ ಇತ್ಯಾದಿ ವಸ್ತುಗಳು ಇಂದಿನ ಸ್ಪರ್ಧಾ ಪ್ರಪಂಚದಲ್ಲಿ ಪ್ಲಾಸ್ಟಿಕ್, ಫೈಬರ್, ಅಲ್ಯುಮಿನಿಯಂ, ಇಡಾಲಿಯಂ, ಪ್ಲಾಸ್ಟರ್ ಆಫ್ ಪ್ಯಾರಿಸ್, ಸಿಂಥೆಟಿಕ್ ವಸ್ತುಗಳಿಗೆ ಮುಖಾಮುಖಿಯಾಗಿ ಬಿದಿರಿನ ಉತ್ಪನ್ನಗಳು ತನ್ನ ಸಾಂಪ್ರದಾಯಿಕ ಮೌಲ್ಯಗಳನ್ನು ಕಳೆದುಕೊಂಡು, ಬಿಕರಿಯಾಗದೆ ವಾಪಸ್ಸಾಗುವುದನ್ನು ವಿವರಿಸಲಾಗಿದೆ. ಹಾಗೆಯೇ ಸೂಕ್ತ ಮಾರುಕಟ್ಟೆಯಿಲ್ಲದೆ ಹಳ್ಳಿ, ಸಂತೆ, ಪೇಟೆಯ ಬೀದಿ-ಬೀದಿಗಳಲ್ಲಿ ಹೊತ್ತು ಮಾರುವುದು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಾಗಿಸುವಾಗಿನ ಸಮಸ್ಯೆಗಳನ್ನು ವಿವರಿಸಲಾಗಿದೆ.

ಮುವತ್ತೂರು ವರ್ಷಗಳಿಂದ 'ಮೇದಾರ' ಸಮ ಪದವನ್ನು 'ಮೇದ' ಮೂಲ ಪದದ ಸಮರೂಪತೆಯೆಂದಿದ್ದರೂ ರಾಜ್ಯ ಸರ್ಕಾರ ಕೇಂದ್ರಕ್ಕೆ ಹಲವಾರು ಬಾರಿ ಪ್ರಸ್ತಾವನೆಯನ್ನು ಕಳುಹಿಸಿದ್ದರೂ, ಮಾನ್ಯ ಮಾಡದೆ ಮೀನಾಮೇಷ ಎಣಿಸುತ್ತಿರುವುದು ಕಾಣಬಹುದು. ಪರಿಶಿಷ್ಟ ಪಂಗಡದ ರಾಷ್ಟ್ರೀಯ ಆಯೋಗದ ಸದಸ್ಯರು ದಿನಾಂಕ: ೦೪.೦೧.೨೦೦೮ರಿಂದ ೧೧.೦೧.೨೦೦೮ರವರೆಗೆ ಧಾರವಾಡ, ಬೆಳಗಾವಿ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರವಾಸ ಮಾಡಿ 'ಮೇದಾರ' ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆಯಾಗಬಹುದೆಂದು ಶಿಫಾರಸ್ಸು ಮಾಡಿದ್ದು, ಅದರ ಸಾಧಕ-ಬಾಧಕಗಳನ್ನು ಚರ್ಚಿಸಲಾಗಿದೆ. ಇನ್ನೂ ಮೀಸಲಾತಿ ಪಟ್ಟಿಯಿಂದ ಹೊರಗುಳಿದ ಮೇದಾರರ ದಿಗಿಲನ್ನು ವಿವರಿಸಲಾಗಿದೆ.

ಕೃಷಿ ಭೂಮಿ ಮಂಜೂರಾತಿ ಸಮಸ್ಯೆಯಿಂದಾಗಿ ಮೇದರು ಕನಸಿಸಿದ ಭೂಮಿ ದೂರವಾಗಿದೆ. 'ಎ' ವರ್ಗದ ಭೂಮಿ ಸ್ವಾದೀನಪಡಿಸಿಕೊಳ್ಳಲು ಕಂದಾಯ ಇಲಾಖೆಯವರಿಗೆ ಭೂಮಿ ಲಭ್ಯವಾಗುತ್ತಿಲ್ಲ. ಸರ್ಕಾರಿ ಒಡೆತನದ ಸೊಪ್ಪಿನ ಬೆಟ್ಟ, ಗೋಮಾಳ, ಬಂಜರು, ಹುಲ್ಲುಮನಿ ಜಂಗ್ಲಿ ಬಲಾಢ್ಯರ ಬೇಲಿಗಳು ಆಕ್ರಮಿಸಿವೆ. ಭೂಮಿ ಕೊಡುವೆವೆಂದು ಕಂದಾಯ ಇಲಾಖೆ ಹೇಳುತ್ತಿದ್ದರೂ ಅರಣ್ಯ ಇಲಾಖೆಯ ಗಿಡಗಳು ಈಗಾಗಲೇ ಅಲ್ಲಿ ಹೆಮ್ಮರವಾಗಿ ಬೆಳೆಯುತ್ತಿವೆ. ಸದರಿ ಎರಡು ಇಲಾಖೆಗಳ ನಡುವಿನ 'ಭೂನಕ್ಷೆ'ಯನ್ನೇ ಶಸ್ತ್ರಚಿಕಿತ್ಸೆಗೆ ಒಳಪಡಿಸಬೇಕಿದೆ. ವಾಸ್ತವದಲ್ಲಿ ಈ ಪ್ರಕ್ರಿಯೆ ಮೇದರ ಮೂಗಿಗೆ ತುಪ್ಪ ಸವರಿದಂತಿದೆ.

ಶೈಕ್ಷಣಿಕ ಹಾಗೂ ಔದ್ಯೋಗಿಕ ಸಮಸ್ಯೆಗಳು ಮೇದರನ್ನು ಕಾಡುತ್ತಿವೆ. ಇತ್ತೀಚೆಗಷ್ಟೇ ಶಿಕ್ಷಣ ಪಡೆಯುವವರ ಸಂಖ್ಯೆ ಹೆಚ್ಚುತ್ತಿದೆ. ಅದೂ ಕಲಾ ವಿಭಾಗ, ಕನ್ನಡ ಮಾಧ್ಯಮ, ಸರ್ಕಾರಿ ಶಾಲೆ, ಸಾಮಾನ್ಯ ಶಿಕ್ಷಣ ಇತ್ಯಾದಿಗಳು. ಆಧುನಿಕ ಉದ್ಯೋಗಕ್ಕೆ ಸ್ಪರ್ಧಾತ್ಮಕತೆಯನ್ನು ಒಡ್ಡಲಾಗುತ್ತಿಲ್ಲ. ಶಿಕ್ಷಣ ಮತ್ತು ಉದ್ಯೋಗ ಎರಡೂ ವಿರುದ್ಧ ದಿಕ್ಕುಗಳಿಗೆ ಜಗ್ಗುತ್ತಿವೆ. ಖಾಸಗೀಕರಣದ ಅಬ್ಬರದಲ್ಲಿ

ಮೇದ ಕುಟುಂಬದ ಶಿಕ್ಷಿತರು ತರಗೆಲೆಗಳಂತೆ ಕೊಚ್ಚಿ ಹೋಗಿದ್ದಾರೆ ಎಂಬುದನ್ನು ವಿಶ್ಲೇಷಿಸಲಾಗಿದೆ. ಮೇದ ಬುಡಕಟ್ಟು ಹಾಗೂ ಆಧುನಿಕ ಮುಖಾಮುಖಿಯಲ್ಲಿ ಕುಲಕಸುಬಿನ ಉತ್ಪಾದನೆ, ಆಧುನಿಕ ಉತ್ಪಾದನೆ, ಶಿಕ್ಷಣ-ಉದ್ಯೋಗ, ಕುಲಕಸುಬು-ಕೃಷಿ, ಕೃಷಿ-ಕೃಷಿ ಕೂಲಿ, ಮಾರುಕಟ್ಟೆ ಇತ್ಯಾದಿ ಅಂಶಗಳನ್ನು ವಿಶ್ಲೇಷನಾತ್ಮಕ ದೃಷ್ಟಿಕೋನದಿಂದ ವಿವರಿಸಲಾಗಿದೆ. ವಿಚಿತ್ರವೆಂದರೆ ಈ ಸೆಳೆವಿನಲ್ಲೂ ಶೇ.೯೦ಕ್ಕಿಂತ ಹೆಚ್ಚಿನ ಮೇದರು ಕುಲಕಸುಬನ್ನೇ ನೆಚ್ಚಿಕೊಂಡಿರುವುದು ಕುಲಕಸುಬಿನ ಮೇಲಿರುವ ಅಪಾರ ಪ್ರೀತಿ ಮತ್ತು ಅನಿವಾರ್ಯತೆಯನ್ನು ವಿವರಿಸಲಾಗಿದೆ.

ಕಾಡಿನ ಸಂಬಂಧ ಕಳಚಿಟ್ಟು ನಾಡಿಗೆ ಹತ್ತಿರವಾಗಿರುವ ಮೇದರು ನಾಡಿನ ವಿವಿಧ ಸಂಸ್ಕೃತಿಯ ಜಾತಿ, ಪಂಗಡ, ಧರ್ಮ, ಭಾಷಿಕರ ನಡುವೆ ಬದುಕಬೇಕಾದಾಗ ಕಾಡಿನ ಹತ್ತಿರವಿದ್ದವರು ಹೇಗೆ? ನಾಡಿನ ಬದುಕಿನೊಂದಿಗೆ ಹೊಂದಿಕೊಳ್ಳುವರೋ ಎಂಬ ಆತಂಕವಿತ್ತು. ಈ ಆತಂಕವನ್ನು ದೂರ ಮಾಡಿದ್ದೇ 'ಮೇದಾರಿಕೆಯ ಉತ್ಪನ್ನಗಳು'. ಇವುಗಳನ್ನು ಮಾರಾಟ ಮಾಡುವಾಗ ಅನೇಕಾನೇಕ ಬಳಕೆದಾರರೊಂದಿಗಿನ ಅಂತರ್‌ಕ್ರಿಯೆ, ಸಾಮರಸ್ಯ, ಹೊಂದಾಣಿಕೆ ಹಾಗೂ ಒಡನಾಟದಿಂದ ವ್ಯಾವಹಾರಿಕವಾಗಿ ಈ ಆತಂಕ ದೂರವಾಗಿದೆ. ತಾನು ತಯಾರಿಸಿದ ಉತ್ಪನ್ನಗಳನ್ನು ಬಳಸುವ ಬಳಕೆದಾರರು, ವ್ಯಾಪಾರಿಗಳು ಇವರೊಂದಿಗಿನ ವ್ಯಾವಹಾರಿಕ ಸಂಬಂಧಗಳು ವೃದ್ಧಿಯಾದಂತೆ ತಾವು ನೆಲೆಸಿರುವ ಪ್ರದೇಶದ ಆಜುಬಾಜಿನಲ್ಲಿರುವವರೊಂದಿಗೆ ಪ್ರೀತಿ-ವಿಶ್ವಾಸ-ಅನ್ಯೋನ್ಯತೆಯನ್ನು ವೃದ್ಧಿಸಿ ಅವರೊಂದಿಗಿನ ಸಹಜೀವನ, ಈ ಬುಡಕಟ್ಟನ್ನು ಅವರು ಕಾಣುವ ಬಗ್ಗೆ ಇತ್ಯಾದಿ ಅಂಶಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಧ್ಯಯನದ ಫಲಿತಗಳು

ನನ್ನ ಸಂಶೋಧನಾ ವಿಷಯ 'ಕರ್ನಾಟಕದ ಮೇದ ಬುಡಕಟ್ಟಿನ ಸಮಾಜಶಾಸ್ತ್ರೀಯ ಅಧ್ಯಯನ' (ಚಿಕ್ಕಮಗಳೂರು ಜಿಲ್ಲೆ ಅನುಲಕ್ಷಿಸಿ) ಕುರಿತ ಅಧ್ಯಯನದಿಂದ ವ್ಯಕ್ತವಾದ ಕೆಲವು ಅಂಶಗಳನ್ನು ಈ ಕೆಳಗಿನಂತೆ ತಿಳಿಸಲಾಗಿದೆ.

೦೧. ಮೇದರ ಸಾಂಪ್ರದಾಯಿಕ ಕುಲಕಸುಬಿನಲ್ಲಿ ಸಾಕಷ್ಟು ಬದಲಾವಣೆಗಳಾಗುತ್ತಿದ್ದರೂ, ಇಂದಿಗೂ ಶೇ.೯೦ರಷ್ಟು ಹೆಚ್ಚಿನ ಮೇದರು ತಮ್ಮ ಸಾಂಪ್ರದಾಯಿಕ ವೃತ್ತಿಯನ್ನು ಮುಂದುವರಿಸಿಕೊಂಡು ಬರುತ್ತಿದ್ದು, ಪಟ್ಟಣಗಳಿಗೆ ಹೋಲಿಸಿದಾಗ ಹಳ್ಳಿಗಳಲ್ಲಿ ವೃತ್ತಿಯ ಚಲನೆ ವಿಧಾನಗತಿಯಲ್ಲಿರುವುದು ಕಂಡುಬರುತ್ತದೆ.

೦೨. ಹಿಂದಿನಿಂದಲೂ ಅವಿಭಕ್ತ ಕುಟುಂಬಗಳಲ್ಲಿ ಹೆಚ್ಚಾಗಿ ವಾಸಿಸುತ್ತಾ ಬಂದಿರುವ ಮೇದರು ಇಂದು ವಿಭಕ್ತ ಕುಟುಂಬಗಳ ಕಡೆ ಆಕರ್ಷಿತರಾಗಿರುವುದು ತಿಳಿದುಬರುತ್ತದೆ.

೦೩. ಮೇದ ಮಹಿಳೆಯರ ಸ್ಥಾನಮಾನ ಸುತ್ತಮುತ್ತಲಿನ ಇತರೆ ಮಹಿಳೆಯರ ಸ್ಥಾನಮಾನಕ್ಕಿಂತ ಉತ್ತಮವಾಗಿದ್ದು ತೀರ್ಮಾನಗಳನ್ನು ತೆಗೆದುಕೊಳ್ಳುವಾಗ ಸ್ತ್ರೀಯರ

ಸಲಹೆ ಕೇಳಲಾಗುವುದು. ಕೃಷಿ ಮತ್ತು ಕುಟುಂಬದ ಜವಾಬ್ದಾರಿಗಳಲ್ಲಿ ಮಹಿಳೆ ಪುರುಷರಿಗೆ ಸಮಾನವಾಗಿ ಕಾರ್ಯನಿರ್ವಹಿಸುವುದು ಕಂಡುಬರುತ್ತದೆ.

೦೪. ಮೇದರ ವಿವಾಹ ವಿಚಾರದಲ್ಲಿ ಕುಲ-ಬಳಿ-ಬೆಡಗು ಆಧಾರಿತ ಸಾಂಪ್ರದಾಯಿಕತೆಗೆ ಪ್ರಾಶಸ್ತ್ಯ ನೀಡುವುದರ ಜೊತೆಗೆ ವೈದಿಕ ಪದ್ಧತಿಗಳನ್ನು ಅಳವಡಿಸಿಕೊಳ್ಳಲಾಗಿದೆ. ಕಂಕಣ ಕಟ್ಟಿಸುವುದು, ಜಾತಕ ನೋಡಿಸುವುದು, ಪುರೋಹಿತರಿಗೆ ಮನ್ನಣೆ ನೀಡುವುದು ಇತ್ಯಾದಿಗಳಿಂದ ಸಂಸ್ಕೃತಾನುಕರಣಕ್ಕೆ ಒಳಗಾಗುತ್ತಿದ್ದಾರೆಂದು ಹೇಳಬಹುದು.

೦೫. 'ತೆರ'ಕೊಡುವ ಪದ್ಧತಿ ಸಾಂಕೇತಿಕವಾಗುತ್ತಿದ್ದು, 'ವರದಕ್ಷಿಣೆ' ಪದ್ಧತಿ ನಿಧಾನವಾಗಿ ಹೆಚ್ಚುತ್ತಿರುವುದು ಸಂಶೋಧನೆಯಿಂದ ಕಂಡುಕೊಳ್ಳಲಾಗಿದೆ.

೦೬. ಮೇದರ ಸಾಂಪ್ರದಾಯಿಕ ನ್ಯಾಯ ತೀರ್ಮಾನಕ್ಕೆ ಮೀಸಲಿದ್ದ 'ಕಟ್ಟೆಮನೆ' ಸವಕಲಾಗುತ್ತಾ ಬರುತ್ತಿದ್ದು, ಕಾನೂನು ತೀರ್ಮಾನಗಳಿಗಾಗಿ ಕೋರ್ಟು, ಕಛೇರಿಗೆ ಹೋಗುತ್ತಿರುವುದು ತಿಳಿದು ಬಂದಿದೆ.

೦೭. ಯಾವುದೇ ಒಳ್ಳೆಯ-ಕೆಟ್ಟ ಕೆಲಸಗಳಿಗೆ ದೇವರ ಅಪ್ಪಣೆ ಕೇಳುವುದು, ಚೌಡಿಯ ಗಿಂಡಿ ಹಿಡಿಯುವುದು, ಪ್ರತಿ ಮನೆಯಲ್ಲೂ ಚೌಡಿ ಪ್ರತಿಷ್ಠಾಪನೆ ಮಾಡಿ ಬಹಳ ಶುದ್ಧಾಚಾರದಿಂದ ಪೂಜಿಸಲ್ಪಡುತ್ತಿದ್ದೆ. ಪ್ರತಿ ಮಂಗಳವಾರ ಅವರವರ ಮನೆಯಲ್ಲಿ ಚೌಡಿಗೆ ಕೋಳಿ ಬಲಿ ನೀಡುತ್ತಿರವುದನ್ನು ಸಂಶೋಧನೆಯಿಂದ ಕಂಡುಕೊಳ್ಳಲಾಗಿದೆ.

೦೮. ತಮ್ಮ ಆರಾಧನಾ ದೇವರ, ದೇವಸ್ಥಾನದ ಎದುರಿನಲ್ಲಿ ಕುರಿಬಲಿ ಕೊಡುವಾಗ ಶಾಖಾಹಾರಿ ದೇವರಿಗೆ ಪರದೆ ಬಿಡುವ ಇಲ್ಲವೆ ಮಾಂಸಹಾರಿ ದೇವರನ್ನು ತಾತ್ಕಾಲಿಕವಾಗಿ ಬೇರೆಡೆಗೆ ಸ್ಥಳಾಂತರಿಸುವುದನ್ನು ಕಂಡುಕೊಳ್ಳಲಾಗಿದೆ.

೦೯. ದುರ್ವಿಗೆರೆಯ 'ಚೌಡಮ್ಮನ ಪೀಠ'ಕ್ಕೆ ಕುರಿಬಲಿಯನ್ನು ಮನೆಯೊಳಗೇ ನೀಡುತ್ತಾರೆ. ಬಲಿಯ 'ರಕ್ತ'ವನ್ನು 'ಗಣಮಗ' ಆರ್ಭಟಿಸಿ, ಗಟಗಟ ಕುಡಿದು 'ನನಗೀಗ ತೃಪ್ತಿಯಾಯ್ತು' ಎಂದಾಗ ಚೌಡಿಗೆ ಬಲಿ ತೃಪ್ತಿಯಾಯ್ತೆಂದು ತಿಳಿಯುವುದು ಅಧ್ಯಯನದಿಂದ ತಿಳಿದುಬಂದಿದೆ.

೧೦. ಕನ್ನಡ ಮೇದರು 'ಕಿರುಬಿದಿರಿನ ಕಳಲೆ' ತಿನ್ನುವುದಿಲ್ಲ. ಹೆಬ್ಬಿದಿರಿನ 'ಕಳಲೆ' ತಿನ್ನುವರು. ಇದಕ್ಕೆ ಕಾರಣ ಅವರು ತಮ್ಮ ಕುಲಕಸುಬಿಗೆ ಕಿರುಬಿದಿರನ್ನೇ ಬಳಸುವುದು ಎಂದು ಕಂಡುಕೊಳ್ಳಲಾಗಿದೆ. ಇತ್ತೀಚೆಗೆ 'ಯಳಬಿ ಹಬ್ಬ' ಆಚರಣೆಗೆ ಅರಣ್ಯ ಕಾಯ್ದೆ ಮುಳುವಾಗುತ್ತಿರುವುದು ಅಧ್ಯಯನದಿಂದ ತಿಳಿಯಲಾಗಿದೆ.

೧೧. ಮೇದರ ಕೌಟುಂಬಿಕ ಸಂಸ್ಕಾರಗಳು ವಿಶಿಷ್ಟವಾದವು. ಇವುಗಳಲ್ಲಿ ಕೆಲವನ್ನು ಕೈಬಿಟ್ಟು, ಕೆಲವನ್ನು ಬದಲಾವಣೆ ಮಾಡಿಕೊಂಡಿದ್ದರೂ ಇಂದಿಗೂ ಅವುಗಳನ್ನು ಉಳಿಸಿಕೊಂಡು ಹೋಗುತ್ತಿರುವುದು ಕಂಡುಬರುತ್ತದೆ.

೧೨. 'ಮೇದಾರ' ಪದ 'ಮೇದ' ಸಮಾನಾರ್ಥಕ ಪದವೆಂದು ಪರಿಗಣಿಸಿ, ಪರಿಶಿಷ್ಟ ಪಂಗಡದ ಸೌಲಭ್ಯಕ್ಕಾಗಿ ಕಳೆದ ೩೨ ವರ್ಷಗಳಿಂದಲೂ ಹೋರಾಟ ಮಾಡುತ್ತಿರುವುದು ಕಂಡುಬಂದಿದೆ.

೧೩. ಮೇದರ ಪುರುಷ ಹಾಗೂ ಸ್ತ್ರೀಯರ ಸಂಖ್ಯಾ ಅನುಪಾತ ಸಮನಾಗಿದ್ದು, ಇವರ ಶೈಕ್ಷಣಿಕ ಅನುಪಾತವೂ ಸಮನಾಗಿದೆ. ಇತ್ತೀಚಿನ ದಿನಗಳಲ್ಲಿ ಮಹಿಳೆಯರಿಗೆ ಕಛೇರಿ ಉದ್ಯೋಗಗಳನ್ನು ಮಾಡಲು ಸಮುದಾಯ ಸಮ್ಮತಿಸುತ್ತಿದೆ. ತಾಂತ್ರಿಕ, ವೃತ್ತಿಪರ ಶಿಕ್ಷಣವನ್ನು ಪುರುಷರಿಗಿಂತ, ಸ್ತ್ರೀಯರೇ ಹೆಚ್ಚಾಗಿ ಪಡೆಯುತ್ತಿದ್ದಾರೆ ಎಂಬುದನ್ನು ಅಧ್ಯಯನದಿಂದ ತಿಳಿಯಲಾಗಿದೆ.

೧೪. ಮೇದರ ನೆಲೆಗಳು ಪಟ್ಟಣಗಳಿಗಿಂತ ಹಳ್ಳಿಗಳಲ್ಲಿಯೇ ಹೆಚ್ಚಿದ್ದು, ಬಿದಿರಿನ ಕುಲಕಸುಬಿನ ಜೊತೆಗೆ ಕೃಷಿ ಹಾಗೂ ಕೃಷಿ ಕೂಲಿಯಲ್ಲಿ ತೊಡಗಿರುವುದು ಕಂಡುಬಂದಿದೆ.

೧೫. ರಾಜಕೀಯ ಮೀಸಲಾತಿ ಸೌಲಭ್ಯ ಬಳಸಿಕೊಂಡು ಮೇದ ಮಹಿಳೆಯರು ರಾಜಕೀಯ ಸ್ಥಾನಮಾನಗಳನ್ನು ಪಡೆದುಕೊಂಡಿದ್ದಾರೆ. ರಾಜಕೀಯ ಅಭಿರುಚಿ ಬೆಳೆಸಿಕೊಂಡು ಪುರುಷರು ಹಾಗೂ ಸ್ತ್ರೀಯರು ಸಕ್ರಿಯ ರಾಜಕಾರಣದಲ್ಲಿ ತೊಡಗಿಕೊಳ್ಳುತ್ತಿರುವುದು ಸಂಶೋಧನೆಯಿಂದ ತಿಳಿದುಬಂದಿದೆ.

೧೬. ಮೇದರಲ್ಲಿ ಸಾಲ ಮಾಡುವವರ ಸಂಖ್ಯೆ ಅಧಿಕವಾಗಿದ್ದು, ಸಾಲದ ಹೆಚ್ಚಿನ ಮೊತ್ತವನ್ನು ಅನುತ್ಪಾದಕ ಚಟುವಟಿಕೆಗಳಾದ ಮದುವೆ, ವರದಕ್ಷಿಣೆ, ಬಯಕೆ ಶಾಸ್ತ್ರ, ನಾಮಕರಣ, ತಿಥಿ, ಹಬ್ಬ, ಉತ್ಸವ ಇವುಗಳಲ್ಲಿ ಬಳಕೆಯಾಗುತ್ತಿರುವುದು ಕಂಡುಬಂದಿದೆ.

೧೭. ಮಾಹಿತಿ ಕೊರತೆಯಿಂದಾಗಿ ಐಟಿಡಿಪಿ ಹಾಗೂ ಗಿರಿಜನ ಉಪಯೋಜನೆ, ಎಸ್.ಸಿ, ಎಸ್.ಟಿ, ಡೆವಲೆಪ್‌ಮೆಂಟ್ ಕಾರ್ಪೋರೇಶನ್, ಲ್ಯಾಂಪ್ಸ್ ಸೊಸೈಟಿ, ಲ್ಯಾಂಪ್ಸ್ ಫೆಡರೇಶನ್‌ನಿಂದ ಸಿಗುವ ಸರ್ಕಾರಿ, ಸಹಕಾರಿ ಇಲಾಖೆಗಳ ಸೌಲಭ್ಯಗಳನ್ನು ಎಲ್ಲಾ ಮೇದರು ಸಮರ್ಪಕವಾಗಿ ಬಳಸಿಕೊಂಡಿಲ್ಲ. ಫಲಾನುಭವಿಗಳ ಆಯ್ಕೆಯಲ್ಲಿ ನಿಷ್ಪಕ್ಷಪಾತತೆಯನ್ನು ಅನುಸರಿಸಲಾಗುತ್ತಿದೆ.

೧೮. ಸರ್ಕಾರಿ ಪ್ರಾಯೋಜಿತ ಕಾರ್ಯಕ್ರಮಗಳು ಮೇದ ಬುಡಕಟ್ಟಿನ ಅಭಿವೃದ್ಧಿಗೆ ಪೂರಕವಾಗಿ ಇಲ್ಲವಾಗಿದೆ. ಯೋಜನೆಗಳ ಬಳಕೆ ಅಸಮರ್ಪಕವಾಗಿದೆ. ಯೋಜನೆಗಳ ಫಲಾನುಭವಿಗಳನ್ನು ವಿಚಾರಿಸಿ ಯೋಜನೆಗಳ ಮೌಲ್ಯಮಾಪನವನ್ನು ಅಧಿಕಾರಿಗಳು ನಡೆಸದೇ ಇರುವುದು ಸಂಶೋಧನೆಯಿಂದ ತಿಳಿದುಬಂದಿದೆ.

೧೯. ಮೇದರ ಕುಲಕಸುಬಿಗೆ ಬೇಕಾದ ತಲಾವಾರು ಬಿದಿರಿನ ಪೂರೈಕೆ ನಿಗದಿತವಾಗಿಲ್ಲ. ಬಿದಿರು ಸಕಾಲಕ್ಕೆ ಲಭಿಸುತ್ತಿಲ್ಲ. ಬಿದಿರಿನಿಂದ ತಯಾರಿಸಿದ ವಸ್ತುಗಳನ್ನು ಮಾರಾಟ ಮಾಡಲು ಸೂಕ್ತ ಮಾರುಕಟ್ಟೆಯ ಸೌಲಭ್ಯವಿಲ್ಲದಿರುವುದು. ಬಿದಿರು ತರಲು ಮತ್ತು ಬಿದಿರಿನ ಉತ್ಪನ್ನಗಳನ್ನು ಸಾಗಿಸಲು ಅರಣ್ಯ ಇಲಾಖೆಯ ಅಧಿಕಾರಿಗಳ ಕಿರುಕುಳವಿರುವುದು ಅಧ್ಯಯನದಿಂದ ತಿಳಿಯಲಾಗಿದೆ.

೨೦. ಸರಕಾರ ದರಖಾಸ್ತಿನಲ್ಲಿ ಭೂಮಿ ನೀಡುವ 'ಎ' ವರ್ಗದ ಭೂಮಿ ಮೀಸಲಿಡುವ ಅರ್ಜಿ ನಮೂನೆ '೫೦' ಹಾಗೂ '೫೩'ರಲ್ಲಿ ಜಮೀನಿಗಾಗಿ ಅರ್ಜಿಸಲ್ಲಿಸುವ, ಅರಣ್ಯ ಹಕ್ಕುಕಾಯ್ದೆ ೨೦೦೬ (೨೦೦೭ (೨)) ಪ್ರಕಾರ ಭೂಮಿ ಪಡೆಯುವ ಇಂತಹ ಯಾವುದೇ ಅವಕಾಶಗಳಿಂದ ಭೂಮಿಯನ್ನು ಪಡೆಯದೆ, ಭೂಮಿಗಾಗಿ ಕಳೆದ ಹತ್ತಾರು ವರ್ಷಗಳಿಂದ ಅರ್ಜಿ ಸಲ್ಲಿಸುತ್ತಲೇ ಬಂದಿರುವುದು ದಾಖಲಾತಿಗಳನ್ನು ಪರಿಶೀಲಿಸಿದಾಗ ಕಂಡುಬಂದಿತು.

೨೧. 'ಸೀರೆ ಬೇಟೆ' ಮೂಲಕ ಸೊಸಲು ಮೀನನ್ನು ಹಿಡಿಯುವ ಬೇಟೆ ಸಂಸ್ಕೃತಿ ಮೇದರಲ್ಲಿ ಇಂದಿಗೂ ಇದೆ. ೮,೧೦,೧೨ ಹೂಡಿನ ಮೊಲ ಶಿಕಾರಿಯ ಬಲೆ, ಸವರುಗೋಲುಗಳೆಲ್ಲ ಅರಣ್ಯ ಕಾಯ್ದೆಗೆ ಶರಣಾಗಿ ಮೂಲೆ ಸೇರಿದ್ದು, ವಿರಳವಾಗಿ ತಂತಿಬಲೆಯಿಂದ ಮೊಲಗಳ ಶಿಕಾರಿ ಮಾಡುವುದು ಸಮೀಕ್ಷೆಯಿಂದ ತಿಳಿದುಬಂದಿದೆ.

೨೨. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹೆಚ್ಚೆಂದರೆ ಪದವಿಪೂರ್ವ ಶಿಕ್ಷಣವರೆಗೆ ಹೆಚ್ಚಿನ ಮೇದರು ಸಿಗುತ್ತಾರೆ. ಆನಂತರದ ಶಿಕ್ಷಣ ಅತ್ಯಂತ ಕಡಿಮೆ ಇದೆ. ಬಿ.ಇ ಸ್ನಾತಕೋತ್ತರ, ವೈದ್ಯಕೀಯ, ಎಂ.ಬಿ.ಎ ಶಿಕ್ಷಣವಂತೂ ತೀರ ಕಡಿಮೆಯಿದೆ. ಶೈಕ್ಷಣಿಕ ಖರ್ಚು ದುಬಾರಿ ಎಂದು ಮೇಲಿನ ಹಂತದ ಶಿಕ್ಷಣ ಸ್ಥಗಿತಗೊಳಿಸಿರುವುದು ಅಧ್ಯಯನದಿಂದ ತಿಳಿದುಬಂದಿದೆ.

೨೩. ಚಿಕ್ಕಮಗಳೂರು ಜಿಲ್ಲೆ ಅನೇಕ ನದಿಗಳ ಉಗಮಕ್ಕೆ ಮೂಲಸ್ಥಾನವಾಗಿದ್ದು, ಧುಮ್ಮಿಕಿ ಹರಿಯುವ ಭೋರ್ಗರೆಯುವ ಈ ನೀರು ಮೇದರ ಕೃಷಿಗೆ ಸಾಧ್ಯವಿರುವುದಿಲ್ಲ. ಭದ್ರಾಹಿನ್ನೀರಿನ ಆಜುಬಾಜಲ್ಲೇ ಮೇದರ ಕೃಷಿ ಭೂಮಿಯಿದ್ದರೂ, ನೀರಿನ ಉಪಯೋಗವಾಗದಿರುವ ಬಗ್ಗೆ ಸಂಶೋಧನೆಯಿಂದ ತಿಳಿಯಲಾಯಿತು.

ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಸಾಹಿತ್ಯಗಳ ಅಧ್ಯಯನ. ಸಾಮಾನ್ಯ ಅವಲೋಕನ ಮತ್ತು ಪರಿಣಿತರಿಂದ ಹಾಗೂ ಸಂಬಂಧಿಸಿದವರ ಜೊತೆಗಿನ ಚರ್ಚೆಗಳಿಂದ ರಚಿಸಿಕೊಂಡಂತಹ ಪ್ರಾಕ್ ಕಲ್ಪನೆಗಳು ಸಂಶೋಧನೆಯಲ್ಲಿ ದೃಢಪಟ್ಟಿರುವುದನ್ನು ಕೆಳಕಂಡಂತೆ ನಮೂದಿಸಲಾಗಿದೆ.

೦೧. ಆಧುನಿಕ ಸಮಾಜದಲ್ಲಿ ಮೇದರ ಕುಲಕಸುಬು ಬದಲಾವಣೆಗೆ ಒಳಗಾಗಿ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ರಾಜಕೀಯ ಸ್ಥಿತ್ಯಂತರಿಗೆ ಒಳಗಾಗಿರುವುದು ದೃಢಪಟ್ಟಿದೆ.

೦೨. ಮೇದರ ಕುಲಕಸುಬಿಗೆ ಬೇಕಾದ ಬಿದಿರಿನ ಪೂರೈಕೆ ಸಮರ್ಪಕವಾಗಿ ಆಗದಿರುವುದು, ಸೂಕ್ತ ಮಾರುಕಟ್ಟೆಯಿಲ್ಲದೆ ಪರಿತಪಿಸುತ್ತಿದ್ದು, 'ಬಿದಿರಿನ ಕಟ್ಟೆ' ರೋಗದಿಂದ ಪಶ್ಚಿಮ ಘಟ್ಟ, ಭದ್ರಾ ಅಭಯಾರಣ್ಯದ ಕಾಡುಗಳಲ್ಲಿರುವ ಬಿದಿರು ನಾಶವಾಗಿ ಮೇದರು 'ವೃತ್ತಿ ಚಲನೆ'ಗೆ ಸ್ಪಂದಿಸುತ್ತಿದ್ದಾರೆ ಎಂಬ ಅಂಶಗಳು ದೃಢಪಟ್ಟಿದೆ.

೦೩. ಸರ್ಕಾರಿ ಪ್ರಾಯೋಜಿತ ಕಾರ್ಯಕ್ರಮಗಳ ಬಗ್ಗೆ ಸರಿಯಾದ ತಿಳುವಳಿಕೆಯಿಲ್ಲದ ಮೇದರು ಯೋಜನೆಗಳ ಲಾಭ ಪಡೆಯುವಲ್ಲಿ ಹಿಂದುಳಿದಿದ್ದು, ಸ್ಪರ್ಧಾತ್ಮಕತೆ ಮತ್ತು ಆತ್ಮವಿಶ್ವಾಸದ ಕೊರತೆಯಿಂದ ಹಿಂದುಳಿದಿದ್ದಾರೆ ಎಂಬ ಅಂಶಗಳು ದೃಢಪಟ್ಟಿವೆ.

೦೪. ಆಧುನಿಕತೆಯ ಭರಾಟೆಯಲ್ಲೂ ರೂಢಿ-ಸಂಪ್ರದಾಯಗಳನ್ನು ಇಂದಿಗೂ ಆಚರಿಸುತ್ತಿದ್ದು, ಕುಲಕಸುಬು ಬಿಟ್ಟರೆ ಬದುಕಲಾಗದು ಎಂಬ ಭಾವನೆಯಿರುವುದು ಈ ಅಧ್ಯಯನ ದಿಂದ ದೃಢಪಟ್ಟಿದೆ.

ಸಲಹೆಗಳು ಮತ್ತು ಶಿಫಾರಸ್ಸುಗಳು

ಸಂಶೋಧನಾ ಅಧ್ಯಯನದ ಸಮಯದಲ್ಲಿ ಸಂಗ್ರಹಿಸಿದ ನಂಬಲರ್ಹವಾದ ಮಾಹಿತಿಯನ್ನು ಆಧಾರವಾಗಿಟ್ಟುಕೊಂಡು ಹಾಗೂ ಸಂಶೋಧನೆಯಿಂದ ವ್ಯಕ್ತವಾದ ಅಂಶಗಳ ಆಧಾರದ ಮೇಲೆ ಮೇದರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ರಾಜಕೀಯ ಅಂಶಗಳಲ್ಲಿ ಆಗಿರುವ ಬದಲಾವಣೆಯನ್ನು ಸೂಕ್ಷ್ಮವಾಗಿ ಗ್ರಹಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮೇದರ ಸಶಕ್ತೀಕರಣ ಹಾಗೂ ಮೌಲ್ಯಾಧಾರಿತವಾಗಿರುವ ಇವರ ಸಾಮಾಜಿಕ-ಸಾಂಸ್ಕೃತಿಕ ವಿಚಾರಗಳನ್ನು ಉಳಿಸಿಕೊಂಡು ಹೋಗುವ ನಿಟ್ಟಿನಲ್ಲಿ ಕೆಲವು ಸಲಹೆಗಳನ್ನು ನೀಡಲಾಗಿದೆ.

೦೧. ಕೃಷಿ ಮತ್ತು ಭಾರತೀಯ ಸಂಸ್ಕೃತಿಗೆ ಪೂರಕವಾಗಿ ಮೇದರ ಕುಲಕಸುಬಿದ್ದು, ಇಡೀ ಭಾರತೀಯ ಸಂಸ್ಕೃತಿಯೇ ಮೂಲ ಪರಿವರ್ತನೆಯಾದಾಗ ಮಾತ್ರ ಮೇದಾರಿಕೆಗೆ ಗಂಡಾಂತರ ಬರುವುದು. ಅಲ್ಲಿಯವರೆಗೆ ಮೇದರ ಕುಲಕಸುಬಿಗೆ ಭಾಗಶಃ ಬೆಂಬಲ ಇದ್ದೇ ಇರುತ್ತದೆ. ಆದ್ದರಿಂದ ಕುಲಕಸುಬೇ ಆಧಾರವಾಗಿರುವವರಿಗೆ ರಿಯಾಯಿತಿ ದರದಲ್ಲಿ ಸಾಕಷ್ಟು ಪ್ರಮಾಣದ ಬಿದಿರನ್ನು ಸೊಸೈಟಿಗಳ ಮುಖಾಂತರ ಸರಬರಾಜು ಮಾಡಲು ಬಿದಿರಿನಿಂದ ತಯಾರಾದ ವಸ್ತುಗಳಿಗೆ ಮಾರಾಟ ಕೇಂದ್ರಗಳನ್ನು ತೆರೆಯಲು ನಿರುದ್ಯೋಗಿಗಳಿಗೆ ಕರಕುಶಲ ತರಬೇತಿಗಾಗಿ ಸೂಕ್ತ ಕ್ರಮ ಕೈಗೊಳ್ಳುವುದರಿಂದ ಹಾಗೂ ಮೇದರ ಸಂಸ್ಕೃತಿಯ ಪ್ರತೀಕವಾದ 'ಯಳಬಿ ಹಬ್ಬ' ಮುಂದಿನ ತಲೆಮಾರಿಗೂ ಕೊಂಡೋಯ್ಯುವಂತೆ ಮಾಡುವುದರಿಂದ ಮೇದರ ಸಶಕ್ತೀಕರಣ ಸಾಧ್ಯವಾಗಬಹುದಾಗಿದೆ.

[illegible]

೦೨. ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ವಿವಿದೋದ್ದೇಶ ಸಹಕಾರ ಸಂಘಗಳನ್ನು ಸ್ಥಾಪಿಸಿ, ಮೇದರ ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಕ್ಷೇತ್ರಗಳಲ್ಲಿ ಪ್ರಗತಿ ಹೊಂದಲು ಶ್ರಮಿಸುವ ಅಗತ್ಯವಿದೆ.

೦೩. 'ಮೇದರ ಅಭಿವೃದ್ಧಿ ಪ್ರಾಧಿಕಾರ'ವನ್ನು ಸ್ಥಾಪಿಸಿ ಮೇದರ ಬಗೆಗಿನ ಸಮಗ್ರ ಅಧ್ಯಯನ ಕೈಗೊಂಡು ಮೇದರ ಅಭಿವೃದ್ಧಿಗೆ ಗುಣಾತ್ಮಕ ಕಾರ್ಯಕ್ರಮಗಳನ್ನು ಕೈಗೊಳ್ಳುವ ಅವಶ್ಯಕತೆಯಿದೆ. ಹಾಗೂ ಈ ಬುಡಕಟ್ಟುವಿನ ವೃತ್ತಿಯ ಜ್ಞಾನ ಪರಂಪರೆಯನ್ನು ಕಾಯ್ದುಕೊಳ್ಳಬೇಕಿದೆ.

೦೪. ಕರ್ನಾಟಕ ರಾಜ್ಯದಲ್ಲಿರುವ ಮೇದ ಸಮಪದಗಳನ್ನು ಗುರುತಿಸಿ ಅವುಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರಕ್ಕೆ ಒತ್ತಾಯ ಪೂರ್ವಕ ಶಿಫಾರಸ್ಸುಗಳನ್ನು ಮಾಡಬೇಕಾದ ಅಗತ್ಯವಿದೆ.

೦೫. ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕಾಗಿ ಸರ್ಕಾರ ಸಹಾಯ ನೀಡಿ, ವಿಕಲ ಚೇತನರಿಗೆ ಆರೋಗ್ಯ ಧಾಮಗಳನ್ನು ಸ್ಥಾಪಿಸಿ ಅವರ ಜೀವನವನ್ನು ಉತ್ತಮ ಪಡಿಸಬಹುದಾಗಿದೆ.

೦೬. ಮೇದರು ವಾಸಿಸುವ ಬೀದಿ, ಕೇರಿಗಳಲ್ಲಿ ಉತ್ತಮ ರಸ್ತೆ, ದಾರಿ ದೀಪ, ಚರಂಡಿಗಳ ನಿರ್ಮಾಣ, ಕಾಯಕ ಮನೆ (Work shed), ಸಮುದಾಯ ಭವನ ಸ್ಥಾಪಿಸುವ ಅಗತ್ಯವಿದೆ.

೦೭. ಸಮುದಾಯದಲ್ಲಿರುವ ಅತೀ ಧಾರ್ಮಿಕತೆ, ಮೂಢನಂಬಿಕೆ, ಬಲಿ, ವರದಕ್ಷಿಣೆ ಪದ್ಧತಿ ಇವುಗಳನ್ನು ಹೋಗಲಾಡಿಸಲು ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ 'ಅರಿವು ಬಳಗ'ವನ್ನು ಸ್ಥಾಪಿಸಿ ಪ್ರಗತಿ ಪರ ಆಲೋಚನೆಗಳು ರೂಪಗೊಳ್ಳುವಂತೆ ಮಾಡುವ ಅಗತ್ಯವಿದೆ.

೦೮. ಮೇದ ಸಮುದಾಯದ ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟ ಸುಧಾರಿಸಲು ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ಪ್ರತ್ಯೇಕ ವಿದ್ಯಾರ್ಥಿ ನಿಲಯಗಳನ್ನು ಮಂಜೂರು ಮಾಡಿ ಅದರ ಎಲ್ಲಾ ಖರ್ಚುವೆಚ್ಚುಗಳನ್ನು ಸರ್ಕಾರವೇ ನೋಡಿಕೊಳ್ಳುವ ಅಗತ್ಯವಿದೆ.

೦೯. ನೇಕಾರರಿಗೆ, ಮೀನುಗಾರರಿಗೆ ಹಾಗೂ ರೈತರಿಗೆ ನೀಡುತ್ತಿರುವ ರೀತಿಯಲ್ಲೆ ಶೇ.೪%ರ ಬಡ್ಡಿಯದರದಲ್ಲಿ ಮೇದ ಸಮುದಾಯದ ಅಭಿವೃದ್ಧಿಗೆ ಹಾಗೂ ಅವರ ಕುಲಕಸುಬಿಗೆ ಉತ್ತೇಜನ ನೀಡಲು ಸಾಲ ನೀಡಲು ಸೂಕ್ತಕ್ರಮ ಕೈಗೊಂಡು, ಗುಂಪು ಮನೆಗಳನ್ನು ರಚಿಸುವ ಅಗತ್ಯವಿದೆ.

೧೦. ಮೇದ ಸಮುದಾಯಕ್ಕೆ ಅರಣ್ಯ ಇಲಾಖೆ ಸರಬರಾಜು ಮಾಡುತ್ತಿರುವ ಬಿದಿರು ಬೊಂಬುಗಳಿಗೆ ಕಡಿಮೆ ದರವನ್ನು ಸಾಂಕೇತಿಕವಾಗಿ ರೂ.೧ಕ್ಕೆ ಇರುವಂತೆ ದರ ನಿಗಧಿ ಪಡಿಸುವುದಲ್ಲದೆ, ಈ ಬಿದಿರಿನ ಉತ್ಪನ್ನಗಳಿಗೆ ಅಂತರ ಜಿಲ್ಲೆಗಳಲ್ಲಿ ಮಾರಾಟ ಮಾಡಲು

ಪರವಾನಿಗಿ ಹಾಗೂ ವ್ಯಾಟ್ ತೆರಿಗೆಯಿಂದ ಮುಕ್ತಗೊಳಿಸಲು ಕ್ರಮ ಕೈಗೊಳ್ಳುವುದು ಮತ್ತು ಎಲ್ಲಾ ಅರಣ್ಯವಲಯಗಳಿಂದ ಬಿದಿರು ಬೊಂಬುಗಳನ್ನು ಪಡೆಯಲು ಮುಕ್ತ ಅವಕಾಶ ಒದಗಿಸುವಂತೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುವ ಅಗತ್ಯವಿದೆ.

೧೧. ಬುಡಕಟ್ಟು ವರ್ಗಕ್ಕೆ ಸೇರಿರುವ ಮೇದ ಸಮುದಾಯದ ಕುಶಲ ಕೆಲಸಗಾರರಿಂದ ಬಿದಿರಿನ ಉತ್ಪನ್ನಗಳನ್ನು ತಾಂತ್ರಿಕವಾಗಿ ಪರಿಷ್ಕರಿಸಿ, ಮರಗಳಿಗೆ ಪರ್ಯಾಯ ಸಾಮಾಗ್ರಿ ತಯಾರಿಸುವ ಘಟಕ ಸ್ಥಾಪನೆಗೆ ಪರಿಶಿಷ್ಟ ನಿರ್ದೇನಾಲಯದ ಮೂಲಕ ಹೆಚ್ಚು ಆರ್ಥಿಕ ಸಹಾಯ ದೊರಕುವಂತೆ ಆದೇಶಿಸುವ ಅಗತ್ಯವಿದೆ.

೧೨. ರೇಷ್ಮೆ ಕೃಷಿಗೆ ಬೇಕಾಗುವ ಬಿದಿರಿನ ಉತ್ಪನ್ನಗಳನ್ನು ರೇಷ್ಮೆ ಇಲಾಖೆಯಲ್ಲಿ ಕಡ್ಡಾಯವಾಗಿ ಬಳಸುವಂತೆ ಸರ್ಕಾರ ಆದೇಶ ಮಾಡಿಸುವ ಅವಶ್ಯಕತೆ ಜೊತೆಗೆ ಸರ್ಕಾರಿ ಟೆಂಡರ್‌ಗಳಲ್ಲಿ ರೇಷ್ಮೆ ಬೆಳೆಗೆ ಬೇಕಾದ ಚಂದ್ರಿಕೆ ಹಾಗೂ ಕಚ್ಚಾ ಮಾಲುಗಳನ್ನು ಪೂರೈಸಲು ನೇರವಾಗಿ ಮೇದ ಸಮುದಾಯದವರಿಗೆ ಆದ್ಯತೆ ನೀಡುವ ಅಗತ್ಯವಿದೆ.

೧೩. ಕೇಂದ್ರ ಸರ್ಕಾರ ಉತ್ತರದ ಈಶಾನ್ಯ ರಾಜ್ಯಗಳಲ್ಲಿ ಬಿದಿರು ಉದ್ಯಮ ಹಾಗೂ ಅದಕ್ಕೆ ಸಂಬಂಧಿಸಿದ ಅಭಿವೃದ್ಧಿ ಚಟುವಟಿಕೆಗಳಿಗಾಗಿ ಪ್ರತಿವರ್ಷ ಸಾವಿರಾರು ಕೋಟಿ ಹಣ ನೀಡಿ ಹಲವು ಯೋಜನೆಗಳನ್ನು ರೂಪಿಸಿದೆ. ಆದರೆ ದಕ್ಷಿಣ ಭಾರತದಲ್ಲಿರುವ ರಾಜ್ಯಗಳಿಗೆ ಈ ಅವಕಾಶವಿರುವುದಿಲ್ಲ. ದೂರದೃಷ್ಟಿಯ ಇಂತಹ ಮಾದರಿಗಳನ್ನು ಅಭ್ಯಸಿಸಿ, ವಿಶ್ಲೇಷಿಸಿ ಕರ್ನಾಟಕದ ಮೇದರ ಸಮಗ್ರ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸುವ ಅಗತ್ಯವಿದೆ.

೧೪. ಬಿದಿರು ಸಸ್ಯ ಪ್ರಪಂಚದಲ್ಲಿ ತ್ವರಿತವಾಗಿ ಬೆಳೆಯುವ ಸಸ್ಯವಾಗಿದ್ದು ಪ್ರಕೃತಿ ಸಮತೋಲನಕ್ಕೆ ಹಾಗೂ ಬಿದಿರಿನಿಂದ ಹೆಚ್ಚು ಉಪಯೋಗ ಪಡೆಯಲು ಬಿದಿರನ್ನು ಅರಣ್ಯಗಳಲ್ಲಿ ಬೆಳೆಯಲು ಆದ್ಯತೆ ನೀಡುವುದರ ಅಗತ್ಯವಿದೆ.

೧೫. ಮೇದ ಯುವಕರಿಗೆ ಪರ್ಯಾಯ ಉದ್ಯೋಗ ಕೌಶಲ್ಯ ತರಬೇತಿ ನೀಡಿ, ಪರ್ಯಾಯ ಉದ್ಯೋಗಗಳನ್ನು ಅವಲಂಬಿಸಲು ಬದುಕಿಗೆ ಆಸರೆಯಾಗಬಹುದಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಅಗತ್ಯವಿದೆ.

೧೬. ಪ್ರತಿವರ್ಷ 'ಬಿದಿರು ಮೇಳ' ನಡೆಯಬೇಕು. ಸೂಕ್ತ ಪ್ರದೇಶಗಳಲ್ಲಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿ, ಬಿದಿರು ಬೆತ್ತದ ಕರಕುಶಲ ಪ್ರದರ್ಶನ ಹಾಗೂ ಮಾರಾಟದ ವ್ಯವಸ್ಥೆಗೆ ಅನುಕೂಲ ಕಲ್ಪಿಸುವುದರ ಅಗತ್ಯವಿದೆ.

೧೭. ರಾಜಕೀಯದಲ್ಲಿ ಯಾರೂ ಗುರ್ತಿಸಿಕೊಂಡಿಲ್ಲದಿರುವುದರಿಂದ ಚುನಾವಣೆಯ ನಂತರ ನಿಗಮ ಮಂಡಳಿಗಳಲ್ಲಿ ಹಾಗೂ ಎಂ.ಎಲ್.ಸಿಗಳಲ್ಲಿ ಆಧ್ಯತೆ ನೀಡಲು ಸೂಕ್ತಕ್ರಮ ಕೈಗೊಳ್ಳುವ ಅವಶ್ಯಕತೆಯಿದೆ.

ಈ ಮೇಲೆ ತಿಳಿಸಿರುವ ಸಲಹೆಗಳು ಹಾಗೂ ಶಿಫಾರಸ್ಸುಗಳನ್ನು ಅಳವಡಿಸಿಕೊಳ್ಳುವ ಮೂಲಕ

[illegible]

ಮೇದರ ಹಿತರಕ್ಷಣೆಯನ್ನು ಕಾಪಾಡಬಹುದು. ಉಳಿದಂತೆ ಈ ಸಂಶೋಧನೆಗೆ ಸಂಬಂಧಿಸಿದ ಹಾಗೆ ಕೆಳಕಂಡಂತೆ ಇನ್ನೂ ಕೆಲವು ದೃಷ್ಟಿಕೋನದಲ್ಲಿ ಸಂಶೋಧನೆಯನ್ನು ಕೈಗೊಳ್ಳಬಹುದಾಗಿದೆ.

೧. ಬದಲಾಗುತ್ತಿರುವ ಮೇದ ಮಹಿಳೆಯರ ಸ್ಥಾನಮಾನಗಳು.
೨. ಮೇದರ ಕುಟುಂಬ, ವಿವಾಹ ಮತ್ತು ಬಂಧುತ್ವ ವ್ಯವಸ್ಥೆ: ಸಮಗ್ರ ಅಧ್ಯಯನ.
೩. ಮೇದರ ಆರಾಧನಾತ್ಮಕ ಆಚರಣೆಗಳನ್ನು ಸಮಾಜಶಾಸ್ತ್ರೀಯ ನೆಲೆಯಲ್ಲಿ ಅಭ್ಯಸಿಸಬಹುದು.
೪. ಮೇದ ಬುಡಕಟ್ಟಿನ ಪರಂಪರೆ ಮತ್ತು ಆಧುನೀಕತೆ.
೫. ಮೇದರ ಕಲಾತ್ಮಕ ಕುಲಕಸುಬಿನ ಅಧ್ಯಯನ.
೬. ಮೇದ ಬುಡಕಟ್ಟಿನ ಸ್ಥಿತ್ಯಂತರಗಳು.

ಒಟ್ಟಾರೆಯಾಗಿ ಚಿಕ್ಕಮಗಳೂರು ಜಿಲ್ಲೆಯ ಪ್ರಕೃತಿಯ ಮಡಿಲಿಗೆ ಹತ್ತಿರವಾಗಿ ವಾಸಿಸುತ್ತಿರುವ ಮೇದರು ಕಾಡಿನ ಬಿದಿರನ್ನೇ ನಂಬಿಕೊಂಡು ತಮ್ಮ ನೆಲೆಗಳನ್ನು ಕಂಡುಕೊಂಡಿದ್ದಾರೆ. ಬಿದಿರಿನ ಪ್ರಾಕೃತಿಕ ಸಮಸ್ಯೆ, ಜಾಗತೀಕರಣದ ಪ್ರಭಾವದಿಂದ ಬಿದಿರಿನ ಉತ್ಪನ್ನಗಳು ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತಿವೆ. ಕರಕುಶಲ ಮೇದಾರಿಕೆಯ ಉತ್ಪನ್ನಗಳು ಹಾಗೂ ಕೈಗಾರಿಕೆಯ ಉತ್ಪನ್ನಗಳು ಮುಖಾಮುಖಿಯಾಗುತ್ತಿವೆ. ಆದಾಗ್ಯೂ ಸಾಂಪ್ರದಾಯಿಕ ವೃತ್ತಿಯೊಡನಿರುವ ಭಾವನಾತ್ಮಕ ಸಂಬಂಧದ ಕೊಂಡಿ ಗಟ್ಟಿಯಾಗಿಯೇ ಉಳಿದುಕೊಂಡಿದೆ. ವೃತ್ತಿ ಸಂಕಷ್ಟದಿಂದ ಹತಾಶರಾದ ಮೇದರು 'ವೃತ್ತಿ ಚಲನೆ' ಬಗ್ಗೆ ಮಾತನಾಡುತ್ತಾರೆ. ಪರ್ಯಾಯ ಉದ್ಯೋಗಗಳತ್ತ ಮುಖ ಮಾಡಿದ ಯುವ ಸಮುದಾಯ ಅಲ್ಲಿಯೂ ನೆಲೆಕಂಡುಕೊಳ್ಳಲಾರದೆ ದಿಗ್ಮೂಢರಾಗಿದ್ದಾರೆ. ಸಾಂಪ್ರದಾಯಿಕ ಮಾರುಕಟ್ಟೆ ಮೇದರನ್ನು ಅಲ್ಪಸ್ವಲ್ಪ ಕೈ ಹಿಡಿದಿದೆ. ತಮ್ಮ ಕುಲವೃತ್ತಿಗೆ ಆಧುನಿಕ ಸ್ಪರ್ಶ ನೀಡುವ ತವಕದಲ್ಲಿದ್ದಾರೆ. ಸರ್ಕಾರದಿಂದ ಯಾವ ಬೆಂಬಲವೂ ಇದಕ್ಕೆ ಸಿಕ್ಕಿಲ್ಲ. ಸವಕಲು ಯೋಜನೆಗಳನ್ನು ಮೇದರ ಮೇಲೆ ಎಸೆಯುತ್ತಿದ್ದಾರೆ. ಅವು ಟುಸ್ಸೆನ್ನುತ್ತಿವೆ. ಮೇದರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ, ಶೈಕ್ಷಣಿಕ ವಲಯಗಳಲ್ಲಿ ಅನೇಕ ಬದಲಾವಣೆಗಳಾಗಿವೆ. ಸಂಸ್ಕೃತೀಕರಣದ ಪ್ರಭಾವ ಹೆಚ್ಚಿದರೂ ತಮ್ಮ ಬುಡಕಟ್ಟಿನ ಮೂಲ ಸಂಸ್ಕೃತಿಯ ಎಳೆಗಳನ್ನು ಇಂದಿಗೂ ಹಿಡಿದಿಟ್ಟು ಸಮಾಜದ ನಡಾವಳಿಗಳಲ್ಲಿ ಅನ್ವಯಿಸಿಕೊಂಡಿರುವುದರಿಂದಲೇ 'ತಮ್ಮತನ' ಜೀವಂತವಾಗಿಸಿಕೊಂಡಿದ್ದಾರೆ. ಮೇದರ ಬದುಕಿನಲ್ಲಿ ಬದಲಾವಣೆಯ ಗಾಳಿಯು ತ್ವರಿತವಾಗಿ ಬೀಸುತ್ತಿರುವುದು, ಬೀಸುವ ಗಾಳಿಗೆ ತಮ್ಮನ್ನು ಒಡ್ಡಿಕೊಂಡಿರುವುದು ನನ್ನ ಸಂಶೋಧನೆಯಿಂದ ಕಂಡುಕೊಳ್ಳಲಾಗಿದೆ.

ಅನುಬಂಧಗಳು

ಅನುಬಂಧ –೧
ಪರಾಮರ್ಶನ ಗ್ರಂಥಗಳು

* ಅಮೃತ ಸೋಮೇಶ್ವರ, ಕೊರಗರು (೧೯೮೨) ಐಬಿಎಚ್ ಪ್ರಕಾಶನ, ಬೆಂಗಳೂರು.
* ಅಜ್ಜಂಪುರ ಕೃಷ್ಣಸ್ವಾಮಿ, ವನಸಿರಿ, ಕರ್ನಾಟಕ ವೃಕ್ಷ ಸಂಪತ್ತು ಮತ್ತು ವನ್ಯಮೃಗಗಳು (೧೯೯೩) ಸ್ವರ್ಣಾಂಬ ಪಬ್ಲಿಕೇಶನ್ಸ್, ಬೆಂಗಳೂರು.
* ಅಂಬಳಿಕೆ ಹಿರಿಯಣ್ಣ, ಬುಡಕಟ್ಟು ಜನರ ಬದಲಾಗುತ್ತಿರುವ ಆರ್ಥಿಕ ಜೀವನ ಜಾನಪದ: ಕೆಲವು ಅಧ್ಯಯನಗಳು (೧೯೯೯) ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು
* ಇಂದಿರಾ. ಆರ್, ಸಂಕಷ್ಟದಲ್ಲಿ ಮೂಲ ನಿವಾಸಿಗಳು (೧೯೯೯) ಇಬ್ಬನಿ, ಮೈಸೂರು
* ಇರಾವತಿ ಕರ್ವೆ, (ಅನು) ಯುಗಾಂತ (೧೯೯೦) ಸಾಹಿತ್ಯ ಅಕಾಡೆಮಿ, ನವದೆಹಲಿ
* ಕರೀಗೌಡ ಬೀಚನಹಳ್ಳಿ (ಸಂ), ಕರಕುಶಲ ಕಲೆಗಳು (೨೦೦೦) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
* ಕಾಳೇಗೌಡ ನಾಗವರ, ಎನ್. ಹುಚ್ಚಪ್ಪ (ಸಂ), ಗಿರಿಜನ ಸಂಸ್ಕೃತಿ (೨೦೦೦) ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

* ಕೇಶವನ್ ಪ್ರಸಾದ್. ಕೆ, ಬುಡಕಟ್ಟು ವಿಸ್ಮಯ (೨೦೦೫) ಅಭಿರುಚಿ ಪ್ರಕಾಶನ, ಮೈಸೂರು
* ಕರ್ನಾಟಕ ಆಕಾರ, ಪರಿಶಿಷ್ಟ ವರ್ಗಗಳ ಕಲ್ಯಾಣ ಕಾರ್ಯಕ್ರಮಗಳು (೨೦೦೬) ಪರಿಶಿಷ್ಟ ವರ್ಗಗಳ ನಿರ್ದೇಶನಾಲಯ, ಬೆಂಗಳೂರು
* ಕೃಷ್ಣಮೂರ್ತಿ ಹೊಸಬೀಡು ಹೆಚ್.ಆರ್., ಭಾರತದ ಆರ್ಥಿಕ ವ್ಯವಸ್ಥೆ (೨೦೦೨) ಸಪ್ನ ಬುಕ್‌ಹೌಸ್, ಬೆಂಗಳೂರು
* ಗಣೇಶ. ವ್ಹಿ.ಕೆ.ಜಿ., ಕರ್ನಾಟಕದ ಮಾರಾಟ ತೆರಿಗೆ ಕಾಯ್ದೆ – ೧೯೫೭ (೧೯೯೯) ಸರಸ್ವತಿ ಪಬ್ಲೀಷರ್ಸ್, ಹುಬ್ಬಳ್ಳಿ
* ಗಾಯಿತ್ರಿದೇವಿ. ಕೆ.ಜಿ, ಕರ್ನಾಟಕದಲ್ಲಿ ಮನೆಬೆಳಕು ಮತ್ತು ಉದ್ಯೋಗಿನಿ ಯೋಜನೆಗಳ ಮೌಲ್ಯಮಾಪನ (ಬೆಂಗಳೂರು:ಐಎಸ್‌ಇಸಿ) ಅಂತಿಮ ಕರಡು ವರದಿ
* ಗುರುಲಿಂಗಯ್ಯ. ಎಂ, ಕರ್ನಾಟಕ ಗೊಲ್ಲ ಸಮುದಾಯ (೨೦೦೫) ಶಕ್ತಿ ಪಬ್ಲಿಷರ್ಸ್, ಬೆಂಗಳೂರು
* ಗೋಪಾಲಕೃಷ್ಣರಾವ್. ಕೆ.ಎಲ್, (ಅನು) ಕೋಮುವಾದ ಹಾಗೂ ಭಾರತೀಯ ಇತಿಹಾಸ (ರೋಮಿಲಾ ಥಾಪರ್), ನವಕರ್ನಾಟ ಪ್ರಕಾಶನ, ಬೆಂಗಳೂರು
* ಗಂಗಾಧರ ದೈವಜ್ಞ, ಬುಡಕಟ್ಟು ಸಮಾಜ: ಹುಟ್ಟು ಸಾವಿನ ನಡುವೆ (೨೦೦೦) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
* ಚೆಲುವರಾಜು, ಜುಂಜಪ್ಪ (೧೯೯೮) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
* ಚೆಲುವರಾಜು, ದಕ್ಕಲರ ಸಂಸ್ಕೃತಿ (೧೯೯೩) ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
* ಚಂದ್ರಪೂಜಾರಿ ಎಂ., ದೇಶಿಯತೆಯ ನೆರಳಲ್ಲಿ ವಿಕೇಂದ್ರೀಕರಣ (೨೦೦೧) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
* ಚಂಗಾಮಣಿ. ಎಂ.ಎಂ, ಭಾರತೀಯ ಸಮಾಜಶಾಸ್ತ್ರ (೧೯೯೯) ರಥಸಪ್ತಮಿ ಪ್ರಕಾಶನ, ಬೆಂಗಳೂರು
* ಜೋಗನ್ ಶಂಕರ್, ಗ್ರಾಮ ಸಮಾಜ (೧೯೯೫) ಜೀವ ಪ್ರಕಾಶನ, ಮೈಸೂರು
* ಡೊಮನಿಕ್. ಡಿ, ಜಾಗತೀಕರಣ ಐಡಿಯಾಲಜಿ ಮತ್ತು ಮಾನವ ಹಕ್ಕುಗಳು (೨೦೦೭) ಸಖಿ ಪ್ರಕಾಶನ, ಹೊಸಪೇಟೆ
* ತಪಸ್ವೀಕುಮಾರ್. ಸಂ, ಸಂಸ್ಕೃತಿ ವಿಕಾಸ (೨೦೦೦) ಚೇತನ ಬುಕ್‌ಹೌಸ್, ಮೈಸೂರು
* ನಾಗಭೂಷಣ. ಟಿ.ಎಸ್, ಲೋಹಿಯಾ ಸಮಾಜವಾದದ ದರ್ಶನ (೨೦೦೪) ಕನ್ನಡ ಪ್ರಾಧಿಕಾರ, ಬೆಂಗಳೂರು

* ನಾಗೇಶ್. ಹೆಚ್.ವಿ, ಸಾಮಾಜಿಕ ಚಳುವಳಿಗಳು (೧೯೯೯) ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರಾವಾಡ
* ನಾಗೇಶ್ ಹೆಚ್.ವಿ., ಗ್ರಾಮವ್ಯಾಸಂಗ ೧೯೮೧, ಚಂದ್ರನಾಥ ಪ್ರಕಾಶನ, ಧಾರವಾಡ
* ನಾಗೇಶ್ ಹೆಚ್.ವಿ, ಗ್ರಾಮಾಂತರ (೧೯೮೮) ಸುಜಾತ ಪ್ರಕಾಶನ, ಧಾರವಾಡ
* ನಾಗೇಗೌಡ. ಹೆಚ್.ಎಲ್, ವೆರಿಯರ್ ಎಲ್ವಿನ್ ಗಿರಿಜನ ಪ್ರಪಂಚ (೨೦೦೪) ಸಾಹಿತ್ಯ ಸದನ ಪ್ರಕಾಶನ, ಬೆಂಗಳೂರು
* ನಾಯಕ. ಎನ್.ಆರ್, ಉತ್ತರ ಕನ್ನಡ ಜಿಲ್ಲೆಯ ಬುಡಕಟ್ಟುಗಳ ಜಾನಪದ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
* ನಂಜಮ್ಮಣ್ಣಿ. ಎಂ, ಭಾರತೀಯ ಸಾಮಾಜಿಕ ಸಂಸ್ಥೆಗಳು (೨೦೦೩) ನಿರ್ದೇಶಕರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು
* ನಾಗಭೂಷಣ ಸ್ವಾಮಿ. ಓ.ಎಲ್, ಪುರಾಣ (೧೯೯೩) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
* ಪುಟ್ಟಯ್ಯ. ಬಿ.ಎಂ, ದಲಿತರು ಮತ್ತು ಭೂಮಿಯ ಪ್ರಶ್ನೆ (೨೦೦೮) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
* ಪುರುಷೋತ್ತಮ ಬಿಳಿಮಲೆ, ಶಿಷ್ಟಪರಿಕಲ್ಪನೆ (೧೯೯೨) ಮದಿಪು ಪ್ರಕಾಶನ, ಮಂಗಳೂರು
* ಪ್ರಭಾಕರ. ಎ.ಎಸ್. (ಸಂ) ಬುಡಕಟ್ಟು ಅಭಿವೃದ್ಧಿ ಮೀಮಾಂಸೆ (೨೦೦೪) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
* ಪ್ರಭಾಕರ. ಎ.ಎಸ್, ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು (೨೦೦೨) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
* ಪ್ರಭಾಕರ ಎ.ಎಸ್, ಆದಿವಾಸಿ ಆಖ್ಯಾನ (೨೦೦೬) ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ
* ಭೀಮಣ್ಣ ಬೋನ್ಹಾಳ, ಕಾಯಕ ಗೌರವ ಶಿವಶರಣ ಮೇದಾರ ಕೇತಯ್ಯ (೧೯೯೩) ಸ್ಮಾರಕ ಸಂಪುಟ, ಶ್ರೀ ಭೋನ್ಹಾಳ ಪ್ರಕಾಶನ, ಕಲಬುರ್ಗಿ
* ಬೋರಲಿಂಗಯ್ಯ. ಹಿ.ಚಿ, ಗಿರಿಜನರು (೧೯೯೪) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
* ಬೋರಲಿಂಗಯ್ಯ. ಹಿ.ಚಿ, ಬುಡಕಟ್ಟು ದೈವಾರಾಧನೆ (೨೦೦೦) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
* ಬೋರಲಿಂಗಯ್ಯ. ಹಿ.ಚಿ, ಕಾಡು ಕಾಂಕ್ರಿಟ್ ಮತ್ತು ಜಾನಪದ (೧೯೯೫) ಅಕ್ಷರ ಪ್ರಕಾಶನ, ಹೆಗ್ಗೋಡು ಸಾಗರ
* ಬೋರಲಿಂಗಯ್ಯ. ಹಿ.ಚಿ, ಗಿರಿಜನನಾಡಿಗೆ ಪಯಣ (೧೯೯೧) ರಾಗಿರೊಟ್ಟಿ ಪ್ರಕಾಶನ, ಬೆಂಗಳೂರು

* ಬೋರಲಿಂಗಯ್ಯ. ಹಿ.ಚಿ, ವಿಸ್ಮತಿ ಮತ್ತು ಸಂಸ್ಕೃತಿ (೨೦೦೧) ಸಿ.ವಿ.ಜಿ. ಪಬ್ಲಿಕೇಶನ್, ಬೆಂಗಳೂರು
* ಬೋರಲಿಂಗಯ್ಯ ಹಿ.ಚಿ, ಪ್ರಭಾಕರ. ಎ.ಎಸ್ (ಸಂ) ಅಲೆಮಾರಿಗಳ ಶಾಪಗ್ರಸ್ಥ ಪಯಣ (೨೦೦೫) ಬುಡಕಟ್ಟು ಅಧ್ಯಯನ-೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
* ಬೋರಲಿಂಗಯ್ಯ. ಹಿ.ಚಿ, ಕರ್ನಾಟಕ ಜಾನಪದ ಕಲೆಗಳ ಕೋಶ (೧೯೯೬) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
* ಭೈರಪ್ಪ. ಕೆ, ಸುಂದರಪರಿಸರ (೨೦೦೪) ಸಿ.ವಿ.ಜಿ. ಪಬ್ಲಿಕೇಶನ್ಸ್, ಬೆಂಗಳೂರು
* ಭೈರಪ್ಪ. ಕೆ, ಗ್ರಾಮೀಣ ಸಮಾಜಶಾಸ್ತ್ರ ಮತ್ತು ಗ್ರಾಮೀಣಾಭಿವೃದ್ಧಿ, ಚೇತನಬುಕ್‌ಹೌಸ್, ಅಂಜನಾದ್ರಿ, ಮೈಸೂರು
* ಮಹಾಶ್ವೇತದೇವಿ, (ಅನು) ಸುಜ್ಞಾನಮೂರ್ತಿ, ಯಾರದೀಕಾಡು (೨೦೦೩) ಸಿವಿಜಿ ಪಬ್ಲಿಕೇಶನ್ಸ್, ಬೆಂಗಳೂರು
* ಮಹೇಶ್. ಸಿ.ಕೆ, ಮೀಸಲಾತಿ ಮತ್ತು ಭವಿಷ್ಯದ ಪಥಗಳು (೨೦೦೩) ವಿಮೋಚನಾ, ಚಿತ್ರದುರ್ಗ
* ಮೇತ್ರಿ. ಕೆ.ಎಂ, ಬುಡಕಟ್ಟು ಕುಲಕಸುಬುಗಳು (೨೦೦೨) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
* ಮುರುಳೀಧರ. ವೈ.ಚಿ, ಮಾರುಕಟ್ಟೆಯಲ್ಲಿ ಬಳಕೆದಾರ (೨೦೦೨) ನವಕರ್ನಾಟಕ ಪ್ರಕಾಶನ, ಬೆಂಗಳೂರು
* ಮೊಗಳ್ಳಿ ಗಣೇಶ್, ದಲಿತರು ಮತ್ತು ಜಾಗತೀಕರಣ (೧೯೯೯) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
* ಮಂಜುನಾಥ ಬೇವಿನಕಟ್ಟಿ, ಆದಿವಾಸಿ (೨೦೦೭) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
* ಮಂಜುನಾಥ ಬೇವಿನಕಟ್ಟಿ, ಆದಿವಾಸಿ ಸಂಸ್ಕೃತಿಯ ಸ್ಥಿತಿಗತಿ (೨೦೦೭) ಸಾಹಿತ್ಯ ನಂದನ, ಬೆಂಗಳೂರು
* ರಹಮತ್ ತರೀಕೆರೆ, ಪ್ರತಿಸಂಸ್ಕೃತಿ (೧೯೯೩) ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು
* ರಾಜಪ್ಪ ದಳವಾಯಿ, ಹಕ್ಕಿಪಿಕ್ಕಿಯರ ಸಂಸ್ಕೃತಿ (೧೯೯೩) ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
* ರೊಟ್ಟಿ. ಎ.ಆರ್, ಗ್ರಾಮಾಂತರ ಪ್ರದೇಶದ ಮಾರುಕಟ್ಟೆಯ ಮಹತ್ವ (೧೯೮೨) ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

* ಲಕ್ಕಪ್ಪಗೌಡ. ಎಚ್.ಜೆ. (ಸಂ) ಕರ್ನಾಟಕದ ಬುಡಕಟ್ಟು ಸಂಪುಟ-೨ (೧೯೯೪) ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು
* ಲಕ್ಷ್ಮಣ ತೆಲಗಾವಿ, ಹಿಂದುಳಿದ ವರ್ಗಗಳ ಮತ್ತು ದಲಿತ ಚಳುವಳಿಗಳು (೨೦೦೦) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
* ಶೇಖರ, ಬಂಟರು : ಬದುಕು ಮತ್ತು ಬದಲಾವಣೆ (೨೦೦೯) ಸೃಷ್ಟಿ ಪಬ್ಲಿಕೇಶನ್ಸ್, ವಿಜಯನಗರ, ಬೆಂಗಳೂರು
* ಶಂಕರ ನಾರಾಯಣ. ತೀ.ನಂ, ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು (೧೯೮೨) ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು
* ಶಂಕರ್‌ರಾವ್. ಚ.ನ, ಭಾರತೀಯ ಸಮಾಜ ಚಿಂತನೆ (೨೦೦೩) ಜೈಭಾರತ್ ಪ್ರಕಾಶನ, ಮಂಗಳೂರು
* ಹುಚ್ಚಪ್ಪ ಮಾಸ್ತರ್. ಎಸ್, ಕಾಳೇಗೌಡ ನಾಗವರ, ಗಿರಿಜನ ಸಂಸ್ಕೃತಿ (೨೦೦೦) ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು
* Anantha Krishna Iyer L., The Mysore Tribes and Castes (1978) Mysore Govt Press
* Enthover R.E., The Tribes and Castes of Bombay (1992) Vol-ii, Asian Education on Service, New Delhi
* Edwin Jayadas., Tribals in our Global Village (1995) Pan media, Bangalore
* Emile Durkhiem, A Study in Sociology (1970) Retles anda Keggar Paul Ltd.
* Edgar Thursston and K. Rangachari, Caste anda Tribes of Southern India, Vol-I,II,III,IV,V, Asian Educational Services, New Delhi - 1987
* Ghurye. G.S., Caste and Race in India (1969) Popular Prakashana, Bombay
* Gupta, Girija (ed) Family and Social change in Modern India (1976) Vikas Publishing house Pvt.Ltd, Delhi
* Gupta, Dipankar (ed), Social Statification (1991) Oxford University Press, New Delhi

* Kuppu Swamy, Social change in India (1986) Vikas Publishing House, Pvt.Ltd, New Delhi
* Kapadia. K.M, Caste in Transition (1962) Sociological Bulletin, Vol II, No. 1&2, March, sept, 1962 pp 73-90
* Karve, Iravathi, Kinship Organisation in India, (1968) Asia Publishing House, Bombay
* Kapadia. k.m, Marriage and Family in India (1968) Oxford University Press, Culcutta
* Madan. T.N, Family and Kinship - A Study of the Pandits of Rural Kashmir, Oxford University Press, Bombay
* Nanjundayya. H.V, Iyer, The Mysore Tribes and Caste (1928) Vol.V-II, Mysore Govt Press
* Oomen. T.K, Social Transformation in Rural India - Mobilization and State Intervention (1984) Vikas Publishing house, Pvt.Ltd, Ghaziabad, U P
* Oomen. T.K, Protest and Change, Studies in Social movements (1990) SAGE Publication, New Delhi
* Ogburn, William, Nimkoff, Meyer. F, A Hand book of Scioligy (1979) Eurasia Publishing House, New Delhi
* Parvathamma. C, Scheduled Caste and Tribes : a Socio-Economic Survey, Ashish Publishing House, New Dehli
* Singh. K.S, People of India, Nation Series, V-XXVI Part-2, The Scheduled Tribes, Neilobrin Oxford University Press - 2003
* Srinivas. M.N, Social Change in Modern India (1966) Allied Publication, Bombay
* Srinivas. M.N, Religion and Society among Coorg in South India 1965 Asia Publishing House, Bombay
* Srinivas. M.N, Sheshaiah. S, Parthasarathy (ed) Dimensions of Social Change in India (1997) Allied Publishers Pvt.Ltd, Bombay

* Tripathy. S.N, Tribals in India (1998) Discovery Publishing House, New Delhi
* Vyas NN and Mann R.S (ed) Indian Tribe in Trasition (1980) Rawat Publishers, Jaipur
* Yogendra Singh, Social Stratification and Change in India (1997) Manohar Publishers, New Delhi
* Yogender Singh, Modernization of India Tradition (1977), Thomson Press (India) Ltd

ವಿಶ್ವಕೋಶ

* ಶಂಕರರಾವ್. ಚ.ನ, ಸಮಾಜಶಾಸ್ತ್ರದ ಕಿರು ವಿಶ್ವಕೋಶ (೨೦೦೧) ಜೈಭಾರತ್ ಪ್ರಕಾಶನ, ಮಂಗಳೂರು
* ನಾಗೇಗೌಡ. ಹೆಚ್.ಎಲ್, (ಪ್ರ.ಸಂ) ಕನ್ನಡ ಜಾನಪದ ಕೋಶ (೧೯೮೮) ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು
* ಕಿಟೆಲ್ ರೆವೆರೆಂಡ್. ಎಫ್, 'ಕನ್ನಡ – ಇಂಗ್ಲೀಷ್ ನಿಘಂಟು' – ಬೇಸೆಲ್ ಮಿಶನ್, ಮಂಗಳೂರು

ವರದಿಗಳು

* Dr. K.M. Metry : An Extensive Study and Evaluation of Tribal Setup in Karnataka - Final Report. in which, Meda Tribe's details are Furnished, Page 289 to 303 (University Grant Commission (SAP) - 2009
* ಸಾಂಖ್ಯಿಕ ಅಧಿಕಾರಿಗಳು – ಚಿಕ್ಕಮಗಳೂರು ಜಿಲ್ಲೆಯ ಅಂಕಿ–ಅಂಶಗಳ ನೋಟ ೨೦೦೫–೦೬
* L.G. Havanur, Karnataka Backward Class Commission Report, 1975, Govt of Karnataka, Bangalore

ಸಂಪ್ರದಾಯದ ಹಾಡುಗಳು

ಋತುಮತಿ ಹಾಡು

೧

ಮೈನೆರೆದ ಸುಭದ್ರ
ಯಾವಾಗ ಮೈನೆರೆದೆ ॥
ಏನೊಂದು ಮೈನೆರೆದೆ
ಹಾಲು ಬಾನುಂಡಿದ್ದಳು ಸುಭದ್ರ
ಪಟ್ಟೆಯ ಸೀರುಟ್ಟಿದ್ದಳು ಸುಭದ್ರ
ಪಟ್ಟು ಬೀಡಿ ಎಂಬ ಗೊಂಬೆಯ ತೆಡೆಕೊಂಡು
ನಾರಿಯರಲ್ಲಿ ಕುಳಿತಿದ್ಲು ಸುಭದ್ರ ॥
ಹೆಂಡವ ನೀರ ಕಾಸಿ ॥ ತಂಬೇಲಿಗೋಣು ಬೆರೆದೆ
ನೀರು ಮಗಳಿಗೆ, ಚಯವಾಗಲೆಂದು
ತಾಯಮ್ಮ ಹರಸುತಾಳೆ, ಮೈನೆರೆದೆ ಸುಭದ್ರ
ಹಿಡಿತುಪ್ಪ ಹಿಡಿದು ತಾರೆ

ಬಾನವ ಬಸಿದು ತಾರೆ
ಸ್ಯಾವಿಗೆ ಬಸಿದು ತಾರೆ
ಇಡಿಯಡಕೆ ಹಿಡಿದು ತಾರೆ
ಬಿಳಿಯ ಎಲೆ ನಗದು ತಾರೆ
ಮೈ ನೆರೆದೆ ಸುಭದ್ರ ॥
ಹತ್ತಿ ಹೂವಿನ ಸೀರೆ
ನಾರೀರು ಹೊತ್ತೆಲ್ಲಿ, ಉಡಿಸುಬಾಕಿ
ರಾಮನ ವಾಡೆಲಿ ಸೀತೆಕುಂತೈದ್ದಾಳೆ
ಹೆತ್ತಮ ನೋಡುಬಾರೆ
ಉತ್ತರ ದಿಕ್ಕು ನನ್ನ ಮಗಳಿಗೆ
ಆಗಲೆಂದು ಎತ್ತಮ ಹೇಳುತಾಳೆ
ನನಗಿಷ್ಟು ಮುತ್ತು ಧಾನ್ಯವ
ಕೊಡುವಂತಳಾಗುವು
ಯಶವಂತಳಾಗವ್ವ ನನ ಮಗಳೆ ॥

೨

ಅಂಗಳವಡಿಯುವು ಕಂಡೆ
ಗಂಗಾಳ ಬೆಳಗೋಡು ಕಂಡೆ
ಮತ್ತೀಗ ಕಂಡೆ, ತಾಯವ್ವ ಒಳಗಿಲ್ಲ ॥
ಬಾಳೆ ಮರದಡಿಯ
ತಲೆ ಬಾಗಿ ನಿಂತವ್ಳೆ
ಬಾಳೆಹಣ್ಣು ಕೊಟ್ಟು
ಕನ್ಯೆಯ ಜಗಲೀಗೆ ಕರೆತನ್ನಿ ॥
ಹಾಲು ಕಾಸದು ಕಂಡೆ
ಕನ್ಯೆ ಒಳಗಿಲ್ಲ
ನಿಂಬೆಯ ಮರದಾಡಿ
ತಲೆಬಾಗಿ ನಿಂತವ್ಳೆ
ನಿಂಬೆಹಣ್ಣು ಕೊಟ್ಟು
ಕನ್ಯೆಯ ಜಗಲೀಗೆ ಕರೆತನ್ನಿ ॥

೩

ಜನಕಾನ ರಾಜನ ಮಗಳು ಸೀತೆ ಋತುವಾದಳು
ಆ ಮಾತ ಕೇಳಿ, ಬಂದ ರಾಮ ಲಕ್ಷ್ಮಣರು
ಕೊಬ್ಬರೆ ಎಣ್ಣೆ, ಬಾಚಣಿಕೆ ತಟ್ಟೆಯಲ್ಲಿರಿಸಿ
ನಮ ಕೋಮಲಾಂಗಿ ಸೀತಾದೇವಿಗೆ ತಲೆಬಾಚಿರಿ
ಮರುಗ ಮಲ್ಲಿಗೆ ತುರುಗ ಸಂಪಿಗೆ ತಟ್ಟೆಮಲ್ಲಿರಿಸಿ
ನಮ್ಮ ಕೋಮಲಾಂಗಿ ಸೀತಾದೇವಿ ಹೂವ ಮುಡಿಸೀರ.
ಜನಕಾನ ರಾಜನ ಮಗಳು ಸೀತೆ ಋತುವಾದಳು ॥
ಕೂತಾಲ ಸೀರೆ, ಕೂತಲ ಕುಪ್ಪಸ ತಟ್ಟೆಯಲ್ಲಿರಿಸಿ
ಕೋಮಾಲಾಂಗಿ ಸೀತಾದೇವಿಗೆ ನೆರಿಗೆ ಮಾಡಿರೆ
ತುರಗ ಸಂಪಿಗೆ ಸೀತಾದೇವಿಗೆ ಆರತಿ ಎತ್ತಿರಿ
ಜನಕಾನ ರಾಜನ ಮಗಳು ಸೀತೆ ಋತುವಾದಳು ॥
ಮಂಗಳಾರತಿ ಹಾಡು

೪

ಓ ನಮ ಸೀತೆಯು ರಥವೇರಿ ಬರುವಾಗ
ರಾಮ ಸೀತೆಯು ರಥವೇರಿ ಬರುವಾಗ
ಪಾದ ಪೂಜೆ ಮಾಡಿ ನಾವು ಧನ್ಯರಾಗುವೆವು ॥
ಮಂಗಳಾರತಿ ಶ್ರೀರಂಗನಾಥನಿಗೆ
ಜೈ ಮಂಗಳಾರತಿ ತಂದು ಬೆಳಗೀರೆ ರಂಗನಾಥನಿಗೆ
ಗೋಲಿ ಗುಜ್ಜಗ ಚಂಡು ಬುಗುರಿಯು
ಗಂಗೆ ಪೂಜೆ ಮಾಡಿ ನಾವು ಧನ್ಯರಾಗುವೆವು ॥
ಮಂಗಳಾರತಿ ಶ್ರೀರಂಗನಾಥನಿಗೆ
ಜೈಮಂಗಳಾರತಿ ತಂದು ಬೆಳಗಿರೆ ರಂಗನಾಥನಿಗೆ
ಅರಿಶಿನ ಕುಂಕುಮ ಧಾರಿಸಿ ಸರಸ್ಪತಿಗೆ
ಸರಸ್ಪತಿ ಪೂಜೆ ಮಾಡಿ ಧನ್ಯರಾಗುವೆವು ॥
ಮಂಗಳಾರತಿ ಶ್ರೀರಂಗನಾಥನಿಗೆ
ಜೈಮಂಗಳಾರತಿ ತಂದು ಬೆಳಗಿರೆ ರಂಗನಾಥನಿಗೆ ॥

೫. ಭಜನೆ

ಶಿವನೇ ನಿನ್ನಾಟ ಬಲ್ಲವನ್ ಯಾರ್ ಯಾರ್ ಬಲ್ಲವರು
ಹರನೇ ನಿನ್ನಾಟ ಬಲ್ಲವನ್ ಯಾರ್ ಯಾರ್ ಬಲ್ಲವರು
ಕುಂಬಾರ್ ಗುಂಡಯ್ಯನ ಮನೆಯಲಿ ಮಡಕೆ ಶಬ್ಧಾವ ಕೇಳಿ ॥
ತುಮ್ ತುಮ್ ತುಮ್ ಎಂದು ಕುಣಿದಾನು ಶಿವನೆ
ಶಿವನೇ ನಿನ್ನಾಟ ಬಲ್ಲವನ್ ಯಾರ್ ಯಾರ್ ಬಲ್ಲವರು
ಹರನೇ ನಿನ್ನಾಟ ಬಲ್ಲವನ್ ಯಾರ್ ಯಾರ್ ಬಲ್ಲವರು
ಮೇದಾರ್ ಕ್ಯಾತಯ್ಯನ ಮನೆಯಲಿ ಕತ್ತಿ ಶಬ್ಧಾವ ಕೇಳಿ ॥
ತುಮ್ ತುಮ್ ತುಮ್ ಎಂದು ಕುಣಿದಾನು ಶಿವನೆ
ಶಿವನೇ ನಿನ್ನಾಟ ಬಲ್ಲವನ್ ಯಾರ್ ಯಾರ್ ಬಲ್ಲವರು
ಹರನೇ ನಿನ್ನಾಟ ಬಲ್ಲವನ್ ಯಾರ್ ಯಾರ್ ಬಲ್ಲವರು
ಮಡಿವಾಳ್ ಮಾಚಯ್ಯನ ಮನೆಯಲ್ಲಿ ಬಟ್ಟೆ ಶಬ್ಧಾವ ಕೇಳಿ ॥
ತುಮ್ ತುಮ್ ತುಮ್ ಎಂದು ಕುಣಿದಾನು ಶಿವನೆ
ಶಿವನೇ ನಿನ್ನಾಟ ಬಲ್ಲವನ್ ಯಾರ್ ಯಾರ್ ಬಲ್ಲವರು
ಹರನೇ ನಿನ್ನಾಟ ಬಲ್ಲವನ್ ಯಾರ್ ಯಾರ್ ಬಲ್ಲವರು
ಸೂಳೆ ಸಿದ್ಧವ್ವನ ಮನೆಯಲಿ ದೋಸೆ ಶಬ್ಧಾವ ಕೇಳಿ ॥
ತುಮ್ ತುಮ್ ತುಮ್ ಎಂದು ಕುಣಿದಾನು ಶಿವನೆ
ಶಿವನೇ ನಿನ್ನಾಟ ಬಲ್ಲವನ್ ಯಾರ್ ಯಾರ್ ಬಲ್ಲವರು
ಹರನೇ ನಿನ್ನಾಟ ಬಲ್ಲವನ್ ಯಾರ್ ಯಾರ್ ಬಲ್ಲವರು
ಅಂಬಿಗರ ಚೌಡಯ್ಯನ ಮನೆಯಲಿ ಹುಟ್ಟಿನ ಶಬ್ಧಾವ ಕೇಳಿ ॥
ತುಮ್ ತುಮ್ ತುಮ್ ಎಂದು ಕುಣಿದಾನು ಶಿವನೆ
ಶಿವನೇ ನಿನ್ನಾಟ ಬಲ್ಲವನ್ ಯಾರ್ ಯಾರ್ ಬಲ್ಲವರು
ಹರನೇ ನಿನ್ನಾಟ ಬಲ್ಲವನ್ ಯಾರ್ ಯಾರ್ ಬಲ್ಲವರು
ಮಾದಿಗರ ಹರಳಯ್ಯನ ಮನೆಯಲಿ ಚರ್ಮದ ಶಬ್ಧಾವ ಕೇಳಿ ॥
ತುಮ್ ತುಮ್ ತುಮ್ ಎಂದು ಕುಣಿದಾನು ಶಿವನೆ
ಶಿವನೇ ನಿನ್ನಾಟ ಬಲ್ಲವನ್ ಯಾರ್ ಯಾರ್ ಬಲ್ಲವರು
ಹರನೇ ನಿನ್ನಾಟ ಬಲ್ಲವನ್ ಯಾರ್ ಯಾರ್ ಬಲ್ಲವರು

ವಕ್ತೃ: ಮಹೇಶ್, ಎಂ.ಮರುಳಪ್ಪ ಶೆಟ್ಟಿಕೊಪ್ಪ, ನರಸಿಂಹರಾಜಪುರ

- **ಮಾದಪ್ಪನ ಕುರಿತ ಹಾಡು**

ಮಲ್ಲಿಗೆ ಹೂವಾಗಿ ಚಲ್ಲೀತು ನಿನ್ನ ಪರುಶೆ
ಚೆಲ್ಲಾಟಗಾರ ಮಾದಪ್ಪ' ಒಹೋ ಚಲ್ಲಾಟಗಾರ ಮಾದಪ್ಪ
ನಿನ್ನ ಪರುಷೆ ಕಲ್ಲತ್ತಿ ಕಣಿವೆ ಇಳಿದಾವು
ಮಾದಪ್ಪ ಬರುವಾಗ ಮಾಳೆಲ್ಲ ಘಂ ಎಂದು
ಮಾಳದಲಿ ಗರಿಕೆ ಚಿಗುರ್ಯಾವೋ ಮೇದಲ್ಲಿ ಮಳೆಯು ಸುರಿದಾವೋ
ಹೊತ್ತು ಮುಳುಗಿದರೇನು ಕತ್ತಲಾದರೇನು
ಅಪ್ಪ ನಿನ್ನ ಗುಡಿಗೆ ಬರುವೇನು ಅಪ್ಪ ನಿನ ಗುಡಿಗೆ
ಬರುವೇವೂ ಮಾದಪ್ಪ ಮುತ್ತಿನ ಬಾಗಿಲು ತೆರದೇವೋ
ಮಾದಪ್ಪ ಮ್ಯಾಲೆ ಗುಂಡುಲಿಯ ಬಿಗಿದಾನೆ
ಕುಂಡಲಿನ ಗೊಂಡೆಯ ಕಾವಿ ಬಿಗಿಮಾರಿ
ಕುಂಡಲಿನ ಗೊಂಡೆಯ ಕಾವಿ ಬಿಗಿ ಮಾಡಿ ಮಾದಪ್ಪ
ಗುಂಡಲಿಯ ಮ್ಯಾಲೆ ಮೆರೆದಾನ

ಮೇದ ಬುಡಕಟ್ಟು ಸಮುದಾಯದ ಚಳ್ಳಕೆರೆಯ ಶ್ರೀಮತಿ ಸುಶೀಲಾರಾಮದಾಸ್‌ರವರು ರಚಿಸಿದ 'ಬಿದಿರಮ್ಮತಾರೆ' ಕವಿತೆ, ಹಲವು ವೇದಿಕೆಗಳಲ್ಲಿ ಹಾಡಲ್ಪಟ್ಟಿದೆ.

- **ಬಿದಿರಮ್ಮ ತಾರೆ**

ಬಿದಿರಮ್ಮ ತಾರೆ ಕೇಳಿ
ನಾನಾರಿಗಲ್ಲದವಳೇ ಬಿದಿರಮ್ಮ ತಾರೆ ಕೇಳಿ
ಹುಟ್ಟುತ ಹುಲ್ಲನಾದೆ ಬೆಳೆಯುತ ಬಿದಿರನಾದೆ
ನಾನಾರಿಗಲ್ಲದವಳೆ ಬಿದಿರಮ್ಮ ತಾರೆ ಕೇಳಿ
ಹುಟ್ಟುವ ಮಕ್ಕಳಿಗೆ ತೂಗುವ ತೊಟ್ಟಿಲಾದೆ
ಮುತ್ತೈದೆಯರಿಗೆ ಕೇರುವ ಮೊರನಾದೆ
ನಾನಾರಿಗಲ್ಲದವಳೆ ಬಿದಿರಮ್ಮ ತಾರೆ ಕೇಳೆ
ಮದುವೆಯ ಮಾಡುವವರಿಗೆ ಹಂದರದ ಕಂಬವಾದೆ
ಮನೆಮಾರು ಕಟ್ಟುವವರಿಗೆ ಪದಜಂತಿ ನಾನಾದೆ
ನಾನಾರಿಗಲ್ಲದವಳೆ ಬಿದಿರಮ್ಮ ತಾರೆ ಕೇಳೆ,
ಓದುವ ಮಕ್ಕಳಿಗೆ ಬರೆಯುವ ಪುಸ್ತಕವಾದೆ
ಮುಪ್ಪಾದ ಮುದುಕರಿಗೆ ಊರುಗೋಲಾದೆ

ಸಿದ್ಧರೂಢ ಸ್ವಾಮಿಗೆ ಬೆತ್ತದ ಛಡಿಯಾದೆ
ನಾನಾರಿಗಲ್ಲದವಳೆ ಬಿದಿರಮ್ಮ ತಾರೆ ಕೇಳೆ
ಶೇಷಾದ್ರಿ ಶೇಷನಿಗೂ..
ಮುರುಳಿಯ ಮೋಹನನಿಗೂ ಊದುವ ಕೊಳಲಾದೆ
ನಾನಾರಿಗಲ್ಲದವಳೇ ಬಿದಿರಮ್ಮ ತಾರೆ ಕೇಳೆ.

ಎಂದು ಬಿದಿರಿನ ಹುಟ್ಟು, ಬೆಳವಣಿಗೆ, ಉಪಯೋಗವನ್ನು ತಿಳಿಸಿದ್ದಾರೆ.

ಲಕ್ಷ್ಮಣ ಮಲ್ಲಪ್ಪ ಮೇದ, ಚಂದಾಪುರ ಇವರ ಕವನ 'ಬಿದುರೆ'ಯಲ್ಲಿ ಬಿದಿರಿನ ಗುಣ, ಸ್ವಭಾವ ಇದರೊಂದಿಗೆ ಪೌರಾಣಿಕ ಮೆರಗನ್ನು ನೀಡಲಾಗಿದೆ.

ಬಿದಿರು ಎಂದರೆ ತಿಳಿಕೊಳ್ಳು
ಅದರಲ್ಲೇ ನೀನು ಇರುತೀಯಲ್ಲ
ಜೀವನವನ್ನು ನಡೆಸುತಿಯಲ್ಲ
ಅದರಲ್ಲೇ ನೀ ಬದುಕುತಿಯಲ್ಲ
ಹುಟ್ಟಿದಾಗ ಇದು ಹುಲ್ಲಾಗಿರುತೈತ
ಬೆಳೆದು ನಿಂತಾಗ ಇದು ಬಿದಿರಾಗುತ್ತೈತಿ
ಮೇದನಿಗೆ ಇದು ಆಶ್ರಯ ಆಗತೈತಿ
ಜೀವನದುದ್ದಕ್ಕೂ ಇದು ಬೇಕಾಗತೈತಿ
ಮನುಷ್ಯ ಇದನ್ನು ಕಡಿತಾನ
ಮನೆಮಠ ಕಟ್ಟತಾನ
ಅದನ್ನ ಮಾರಿ ಬದುಕುತ್ತಾನ
ಜೀವನ ಅದರಿಂದ ಸಾಗಸ್ತಾನ
ಶರಣ ಮೇದರ ಕೇತಯ್ಯ
ಜೀವನ ನಡಿಸ್ದಾ ಬಿದ್ರಿನಿಂದ
ಜಗಶ್ರೇಷ್ಠ ಕಾರ್ಯ ಇದೆಂದು
ಮೇದ ಜನಾಂಗದ ಆಧಾರೆಂದ
ನಾಡಿನ ತಾಯಿಗಳೆಲ್ಲ ಅಂತಾರ್ರೀ
ತನ್ನ ಕಂದನ ತೂಗುವಾಗರ್ರೀ
ಮೇದರ ಕೇತಯ್ಯನ ತೊಟ್ಟಿಲಾರ್ರೀ
ಅದರಾಗ ನನ್ನ ಕಂದ ಆಡತೈತ್ರೀ
ಮೇದರ ಕ್ಯಾತಯ್ಯಗಳವನು ತಂದು

ಗಳದಿಂದ ಮಾಡಿದ ಬಂದದ ಒಂದು
ಕಂದನು ಆಡಲು ತೊಟ್ಟಿಲು ಒಂದು
ತಂದಳು ತಾಯಿ ಹೊಸ ತೊಟ್ಟಿಲೊಂದ
ನೂರುವರ್ಷ ಬಾಳ ಬೇಕೇ
ತೊಟ್ಟಿಲ ಮಾಡಿದವರ್‍ರೀ
ಸಾರಿ ಸಾರಿ ಹೇಳಲೆನ್ರೀ
ಚಂದಾಗಿ ಸಾಕ್ರೀ ಮಕ್ಕಲನ್ನಾರ್‍ರೀ

- **ವರಕೇತ**

ನಿನ್ನಯ ಕಡುಬಡತನವಂ ನೋಡಿ
ಪೋಆಡಿಯೊಳು ಕನಕ (ದ್ರವ್ಯಂ) ಸುರಿದು ಪೋಗೆ
ಕಾಯಕದಿಂ ಮರಳಿ ಬಂದು ನೋಡುತಿರೇ
ಇದೇನು ಪಾಪದ ಹುಳುವು ಬಿದ್ದಿದೆಯಲ್ಲಾ
ಏವಗಾಲ ಹಿಂಗುಪ್ಪದಿಂ ಪೊಗೆಯೇ, ಸತಿಗೆ ಪೇಳಿ
ಪಾದೋಟಕವ ಸಿಂಪಡಿಸಿ
ಕಾಯಕ ನಿಷ್ಠೆಯಂ ತೋರಿದ ಮಹಾ–ಮಹಿಮನು ನೀನ್ಯೆ॥
ಎಲೇ! ಬಸವನೇ ಹೊನ್ನು ಹೆಚ್ಚಾದರೆ ಹೀಗೆ ಮಾಡಬೇಕೇ
ಬಸವನ ಮೇಲೆ ರೇಗುತಿರೇ
ಇದೆಲ್ಲ ಅವನ ಸಂಕಲ್ಪವೆಂದು ಬಗೆದು
ಬಿದಿರಂ ಸೀಳಿ ಬುಟ್ಟಿಯಂ ಮಾಡಿ
ದಾಸೋಹ ಕೊಠಡಿಗೆ ನೀಡಿ
ಕಾಯಕದ ಪ್ರಸಾದವಂ ಕೊಂಡು ಕುಠಿರಕೆ ಬಂದು;
ಶಿವಗಣಂಗಳ ಸಂತೃಪ್ತಿಪಡಿಸಿ;
ಮಿಕ್ಕ ಪ್ರಸಾದವಂ ಶಿವಪ್ರಸಾದವೆಂದು
ಬಗೆದು ಜೀವಿಸಿದ್ದನಾ ಆ 'ವರಕೇತ'
ಕಾಯಕ ನಿಷ್ಠೆಯಿಂ ಪರೀಕ್ಷೆಲೋಸುಗ
ಬಿದಿರು ಪೊಳುಳ ಪೇಳಿಯೊಳು
ತುಂಬಿದನಾ ಮಹಾಶಕ್ತಿಂ ಹೊನ್ನನು॥
ಪಾತ: ಕಾಲ ಅಡವಿಗೆ ಹೋದನಾ ಕೇತ
ಬಿದಿರು ಕಡಿಯೇ ಇದೇನು ಹುಳುವು

ಎನಗೆ ಶಿವಪೂಜೆ
ಸಮಯವಾದರೂ ಗೋಚರಿಸುತ್ತಿರುವದಲ್ಲಾ॥
ಆಯ್ಯೋ! ದೇವಾ
ನಿನಗೆ ಎಸಗಿದ ಪಾಪವಾರೂ ಏನು?
ಪಸರಿದ ಪೊಳೆಯೊಳು ಪೊಕ್ಕು
ತಿಮಿರನೇ ಬೆಳೆದ ಬಿದಿರಿನೇ ಕಡಿಯೇ
ಆಯತಪ್ಪಿ ಜಾರಿ ಬೀಳುತಿರೆ; ಬಿದಿರು
ಎದೆಯೊಳು ನಡುತಿರೀ
ಹಾ! ಎಂದು ನೆಲಕೆ ಉರುಳಿದನಾ ಕೇತಾ॥
ಪ್ರಾಣ ಹೋದರೇ ಪ್ರಮಥರಾಣಿ।
ಎಂದು ಕುಠಿರಕ್ಕೆ ಬಂದು ಸಾಧ್ವಿ ಸತಿಯ
ತೊಡೆಯ ಮೇಲೆ ಎರಗುತಿರೇ॥
ಶೋಕ ಕಲ್ಪಿತವಾಯಿತು ಕಲ್ಯಾಣಪುರವು॥
ಹಗಾರ ಮಾದಣನಿಂ
ರುದ್ರಶಕ್ತಿಯ ಮಾಚಯ್ಯನಿಗೆ ಸುದ್ದಿ ತಲುಪುತಿರೇ।
ಉರಿದೆದ್ದನಾ। ಬಸವನ ಮೇಲೆ ರುದ್ರ ಅವತಾರದಿಂ॥
ಇಂತು ಶರಣನ ಪ್ರಾಣಪಕ್ಷಿ ಹೊರಡುತಲೀ।
ಇನ್ನೂ ಜೀವಿಸಿದ್ದನಾ ಆ ।ಬಸವಾ।
ವೀರಗಂಟಿ ಆಕಾಶಕ್ಕೆ ಬೀಡುತಿರೇ
ಶಿವಪುರವು ನಡುಗಿತು; ಶಿವಶರಣರ
ಸಮೂಹವು ಕೂಡಿ ಬಸವ ಮೂರ್ಛೆಯಾಗುತಿರೆ
ಇದಾವ ಪ್ರಸಂಗ ದೇವಾ
ಪಾರ್ವತಿಯು ಶಿವಗೆ ಕೇಳುತಿರೇ
ಶರಣರು ಉರಿದೆದ್ದರೇ ಉಳಿದೀತೆ ಶಿವಪುರವು।
ನೋಡು ಪ್ರಿಯೇ ಭಕ್ತರ ಕಾಯಕ ನಿಷ್ಟೆಯೂ॥
ಶಿವನು ಪ್ರತ್ಯಕ್ಷನಾಗಿ ಹರಿಸಿದನು ಶಿವಭಕ್ತರನು;
ಕೇತಯ್ಯಾ ಬಸವನು ಶಿವಯೋಗ ನಿದ್ರೆಯಿಂ
ಎದ್ದು ಪ್ರಾರ್ಥಿಸುತಿರೇ
ಕೇತನು! ಅಮರ ಗಣಂಗಳು ಮುನಿದು;

ಎನ್ನ ಕೈಲಾಸಕ್ಕೆ ಒಯ್ದಿರೇ ಮತ್ಯಕ್ಕೆ ಮರಳಿ ತಂದೆ
ಸಂಗನ ಬಸವಂಣನ ಅಲ್ಲಿಯ ಪ್ರಭುವಂ ಸ್ತುತಿಸಿ
ಕಾಣಾ ಗೌರೇಶ್ವರಾ॥
ಶರಣ ಶಿವ ಕಾಯಕವ ಒರೆಗೆ ಹಚ್ಚುವರಾರು
ವರಸಹಿತ ಸೋಲು ಬದುಕಿದ ಮೇದಾರ
ವರಕೇತ ನಿನಗೆ ಸರಿಯಾರು?

ಡಾ. ವೈ. ಟಿ. ಮೇದಾರ

- **ಕೇತನ ಕುರಿತು ಜನಪದೀಯರು ಹಾಡಿದ ಕೋಲುಪದ**

ಬಂದ ಸಾಂಬನು ಮನೆಯೊಳೊನ್ನು ಸುರುವಿದಾ।
ತಿರುಗಿ ಹೋದನು ತನ್ನ ನಿಜ ನಿವಾಸಕೆ। ಕೋಲು ಕೋಲಿನಾ
ಮುತ್ತಿನ ಕೋಲು ಕೋಲಿನಾ॥
ಇತ್ತ ಕ್ಯಾತನು ಒಂದು ಪಳಿಯ ಕಡೀದು।
ಹೊರೆಯನ್ನು ಹೊತ್ತುಕೊಂಡು ಮನೆಗೆ ಬಂದನು।
ಬಂದ ಮನೆಯೊಳು ಇಳುವಿದಾ ಹೊರೆಯನ್ನು।
ಶರಣ ಕಂಡನು ಮನೆಯೊಳಿರುವ ಹೊನ್ನನು। ಕೋಲು॥
ಹೊನ್ನು ಕಾಣುತಾ ಕೋಪವನ್ನು ತಾಳುತಾ।
ಮಹಾ ಘಾತಕಿ ನೀನೆಂದು ನುಡಿದನಾ ಸತಿಗೆ।
ಎಲೋ ಮಾನಿನಿ ನಿನ್ನ ಒಲವು ತಿಳಿಯದು।
ಮಲವು ಮನೆಯಳು ಬಂದುದ್ದೇನು ಕಾರಣ। ಕೋಲು॥
ರುದ್ರ ರೂಪದೀ ನುಡಿದ ವ್ಯಾಘ್ರನಂದದೀ।
ಸೀಗ್ರದಿಂದಲೀ ಪೇಳು ಎಂದು ಕ್ಯಾತನು।
ಆಗ ಶರಣೀ ಪಾದಕೆರಗಿ ನುಡಿದಳು।
ನಾಗಭೂಷಣಾ ಭಕ್ತ ಬಸವರಾಜನು। ಕೋಲು॥
ಬಂದು ಮನೆಯಳು ದ್ರವ್ಯ ತಂದು ಸುರುವಿದಾ।
ವಲ್ಲೆನೆಂದ ನುಡಿದ ನುಡಿ ಕೇಳಲಿಲ್ಲವನು।
ಕೇಳಿದಾಕ್ಷಣಾ ಕೋಪತಾಳಿ ಕ್ಯಾತನು।
ಹಾಳು ಮಾತನು ನುಡಿದ ಬಸವರಾಜಗೆ। ಕೋಲು॥
ರ್ವಕ್ಕ ಹೆಚ್ಚಿತೇ ಅವಗೆ ಸೊಕ್ಕು ಬಂದಿತೇ।
ಇಕ್ಕಿ ಪೋದೆನೇ ಹೊನ್ನು ಬಸವ ಮನೆಯೊಳು।
ಹೊನ್ನು ಹೆಚ್ಚಾದರೆ ಬೆಂಕಿ ಹಚ್ಚುವನದಕೆ।

ಅಚ್ಚ ಶರಣಿ ಹೊರಗಿದನು ಬಿಸುಟು ಎಂದನು। ಕೋಲು॥
ನುಡಿದ ಮಾತಿಗೆ ಶರಣಿ ತಡವ ಮಾಡದೇ।
ವಡನೆ ಹೊನ್ನನು ಹೊರಗ್ಹೆಳೆದು ಬಂದಳು।
ಮಲವು ಸೋಂಕಿ... ಮೈಲಿಗಾಯಿತೀಮನೆ।
ಎನಲು ಲಲನೆ ವಡನೆ ಸಾರಣಿಗೈದಳು। ಕೋಲು॥

ಇಂತಹ ಕೋಲಾಟದ ಪದಗಳು ಶಿವನನ್ನೇ ಮಣಿಸಿದ ಕೇತಯ್ಯನ ಕೀರ್ತಿಯನ್ನು ಎತ್ತಿ ತೋರಿಸುತ್ತದೆ.

- **ಸಂತ ಶಿಶುನಾಳ ಶರೀಫರ ಅನುಭಾವ ಗೀತೆ**

ಬಿದಿರು ನಾನಾರಿಗಲ್ಲಾದವಳು ॥ಪ॥
ಹುಟ್ಟುತಾ ಹುಲ್ಲಾದೆ
ಬೆಳೆಯುತ ಮರವಾದೆ
ಸುಂದರ ಸ್ತ್ರೀಯರಿಗೆ ಕೇರುವ ಮೊರವಾದೆ ॥೧॥
ಮುದುಕರಿಗೆ ಬಡಿಗ್ಯಾದೆ
ಮುತ್ಯಾಗ ಚಿತ್ತವಾದೆ
ದೊಡ್ಡ-ದೊಡ್ಡ ಮಹಾತ್ಮರ ಕೈಯೊಳಗೆ ಬೆತ್ತವಾದೆ ॥೨॥
ಅಂಬಿಗಗೆಲ ಕೋಲಾದೆ
ದಂಡಿಗೆ ನಾನಾದೆ
ನೀಟುಳ್ಳ ಹುಡುಗರಿಗೆ ಬೇಟೇಯಾ ಬಡಿಗ್ಯಾದೆ ॥೩॥
ಪಲ್ಲಕ್ಕಿ ದಂಡ್ಗಿಯಾದೆ
ಪತ್ರಿಗೆ ಬುಟ್ಟಿಯಾದೆ
ಎಲ್ಲಮ್ಮನ ಗುಡ್ಡದೊಳಗೆ ಅಡ್ಲಿಗೆ ನಾನಾದೆ ॥೪॥
ಹಂದರಕಾ ಹಾಲಗಂಬವಾದೆ
ದಂಡಿ ಬಾಸಿಂಗವಾದೆ
ದೊಡ್ಡ-ದೊಡ್ಡ ಮಠದೊಳಗೆ ಕಜ್ಜಾಯ ಬುಟ್ಟಿಯಾದೆ ॥೫॥
ತಿಪ್ಪಯ್ಯ ತೆಳಗಿದ್ದೆ
ಸಿದ್ಧರಾಮೇಶ್ವರನಿಗೆ ನಂದಿ ಕೋಲಾದೆ ॥೬॥
ದೇಶ ದೋಳು ಶಿಶುನಾಳ
ದೀಶನ ಮಠದೊಳಗೆ
ಸಾಧುರ ಕೈಯೊಳಗೆ ಏಕದಾರಿ ಕೊಳವೆಯಾದೆ ॥೭॥

- **ಮೇದರ ಕೇತಯ್ಯನವರ ವಚನಗಳು**

ಅರಿವಿನ ಕುಳವನರಿಯೆ, ಮಹಿನ ತೆರಗನರಿಯೆ
ಅರಿವು, ಮರಹಳಿದ ಗವರೇಶ್ವರ ಲಿಂಗಕ್ಕೆ
ಅರಿವೇ ಅರ್ಪಿತ, ಮರವೇ ಅನರ್ಪಿತ
ಮೊರನ ಹೆಣೆವ ಗೌರ, ನನೆತ್ತಬಲ್ಲೆನಯ್ಯ ॥೧॥

ಇಂದ್ರಿಯಂಗಳ ಕೊಂದೆನೆಂದಡೆ, ಅವು ಕಂದರ್ಪನ ಹಂಗು
ಕಂದರ್ಪನ ಕೊಂದೆನೆಂದಡೆ, ಅವು ಕಂಗಳ ಲಾಭ
ಕಂಗಳು ಮುಚ್ಚಿಯಲ್ಲದೆ ಲಿಂಗವ ಕಾಣಬಾರದು
ಆದುನಿರಂಗಂಗಲ್ಲದೇ, ಜಗದ ಹಂಗಿನವರಿಗಿಲ್ಲಾ
ಎಂದೆ, ಗವರೇಶ್ವರಾ ॥೨॥

ಎನ್ನ ಕಾಯಕದ ಕಳವಳ ನಿಲಿಸಿ, ಗುರುಲಿಂಗವ ತೋರಿದ
ಎನ್ನ ಮನದ ವ್ಯಾಕುಳವ ನಿಲಿಸಿ, ಜಂಗಂಲಿಂಗವ ತೋರಿದ
ಇಂತು ಅಂತರಂಗ ಬಹಿರಂಗದಲ್ಲಿ ತಾನಾಗಿ, ಎನ್ನ ಪಾವನ ಮಾಡಿದ
ಅಮರಗಣಂಗಳು ಮುನಿದು ಎನ್ನ ಕೈಲಾಸಕ್ಕೆ ಒಯ್ದಟೆ
ಸದ್ಯೋನ್ಮುಕ್ತಿಯ ತೋರಲೆಂದು ಮರ್ತ್ಯಕ್ಕೆ ಮರಳಿ ತಂದ
ಸಂಗನ ಬಸವಣ್ಣನೆ ಗುರುವೆನಗೆ, ಸಂಗನ ಬಸವಣ್ಣನೆ ಪರವೆನಗೆ
ಸಂಗನ ಬಸವಣ್ಣನ ಕರುಣದಿಂದ, ಘನಕ್ಕೆ ಘನಹಿಮ ಅಲ್ಲಮಪ್ರಭುವಿನ
ಶ್ರೀಪಾದವ ಕಂಡು ಬದುಕಿದೆನು ಕಾಣಾ, ಗವರೇಶ್ವರಾ ॥೩॥

ಎನ್ನ ಪ್ರಾಣದಲ್ಲಿ ಆಚಾರಲಿಂಗವಾಗಿ ಮೂರ್ತಿಗೊಂಡನಯ್ಯಾ, \
ಬಸವಣ್ಣನು
ಎನ್ನ ಜಿಹ್ವೆಯಲ್ಲಿ ಗುರುಲಿಂಗವಾಗಿ ಮೂರ್ತಿಗೊಂಡನಯ್ಯಾ
ಚನ್ನಬಸವಣ್ಣನು
ಎನ್ನ ನೇತ್ರದಲ್ಲಿ ಶಿವಲಿಂಗವಾಗಿ ಮೂರ್ತಿಗೊಂಡನಯ್ಯಾ ಘಟ್ಟಿವಾಳ
ಮದ್ದಯ್ಯನು
ಎನ್ನ ಕತ್ತಿನಲ್ಲಿ ಜಂಗಮಲಿಂಗವಾಗಿ ಮೂರ್ತಿಗೊಂಡನಯ್ಯಾ,
ಮರುಳು ಶಂಕರದೇವರು
ಎನ್ನ ಹೃದಯದಲ್ಲಿ ಮಹಾಲಿಂಗವಾಗಿ ಮೂರ್ತಿಗೊಂಡಯ್ಯಾ,
ಪ್ರಭುದೇವರು

ಎನ್ನ ಸಾರ್ವಾಂಗದಲ್ಲಿ ಮೂರ್ತಿಗೊಂಡರು ಪ್ರಥಮರು
ಗವರೇಶ್ವರ ಲಿಂಗದಲ್ಲಿ ಸುಖಿಯಾಗಿ ಬದುಕಿದೆನು ಕಾಣಾ,
ಮಡಿವಾಳ ಮಾಚಯ್ಯ ॥೪॥

ಎನ್ನ ಚಿತ್ತಕ್ಕೆ ಆಚಾರ ಲಿಂಗವಾದಾತ, ಬಸವಣ್ಣ
ಎನ್ನ ಬುದ್ಧಿಗೆ ಗುರುಲಿಂಗವಾದಾತ, ಬಸವಣ್ಣ
ಎನ್ನ ಅಹಂಕಾರಕ್ಕೆ ಶಿವಲಿಂಗವಾದಾತ, ಬಸವಣ್ಣ
ಎನ್ನ ಮನಕ್ಕೆ ಜಂಗಮಲಿಂಗವಾದಾತ, ಬಸವಣ್ಣ
ಎನ್ನ ಜೀವಕ್ಕೆ ಪ್ರಸಾದ ಪ್ರಸಾದ ಲಿಂಗವಾದಾತ, ಬಸವಣ್ಣ
ಎನ್ನ ಅರಿವಿಗೆ ಮಹಾಲಿಂಗವಾದಾತ, ಬಸವಣ್ಣ
ಎನ್ನ ಸ್ಥೂಲಕ್ಕೆ ಸೂಕ್ಷ್ಮ ತನುವಿಂಗೆ ಪ್ರಾಣಲಿಂಗವಾದಾತ, ಬಸವಣ್ಣ
ಎನ್ನ ಕಾರಣ ತನುವಿಂಗೆ ತೃಪ್ತಿಲಿಂಗವಾದಾತ, ಬಸವಣ್ಣ
ಇಂತೆಂದರಿದೆನಾಗಿ, ಗವರೇಶ್ವರ ಲಿಂಗದಲ್ಲಿ ಆನು
ಸುಖಿಯಾಗಿರ್ದೆನಯ್ಯಾ ॥೫॥

ಎನ್ನ ಭಕ್ತಿ ಬಸವಣ್ಣನಲ್ಲಿ ಬಯಲಾಯಿತ್ತು
ಎನ್ನ ಜ್ಞಾನ, ಚೆನ್ನಬಸವಣ್ಣನಲ್ಲಿ ಬದಲಾಯಿತ್ತು
ಎನ್ನ ವೈರಾಗ್ಯ, ಪ್ರಭುದೇವರಲ್ಲಿ ಬದಲಾಯಿತ್ತು
ಇಂತೀ ಮೂವರು ಒಬ್ಬರೊಂದ ಬಯಲ ಮಾಡಿದರಾಗಿ
ಗವರೇಶ್ವರ ಲಿಂಗದಲ್ಲಿ ನಿಶ್ಚಿಂತವಾಯಿತ್ತು ॥೬॥

ಒಂದು ಬಿದಿರಿಂಗೆ ಕವೆ ಮೂರು, ಆ ಕವೆಯ ಒಳಗೆ ಲಕ್ಷ ಸಿಬಿರು
ಮೂರು ಕವೆಯ ಕೊಚ್ಚಿಸಿ, ಬಿಲ್ಲ ಸಿಕ್ಕ ಬಿಡಿಸಿ ಸೀಳಿದ ಬಿದಿರ
ಹೊರೆಹೊರೆಯಲ್ಲಿ ನೆಯಿದೆ, ತೊಟ್ಟಿಲ ಸಂದ ಕಾಣದಂತೆ ನಾಲ್ಕು
ಕಾಲನಿಕ್ಕಿ ಅಂದ ಅಂದವಾದ ತೊಟ್ಟಿಲ ದಂಡೆಯನಿಕ್ಕಿ
ಕಟ್ಟುವಕ್ಕೆ ಶ್ರುತ ದೃಷ್ಟವೆಂಬೆರಡು ದಾರದಲ್ಲಿ ತೊಟ್ಟಿಲ ಕಟ್ಟಿ
ಗವರೇಶ್ವರ ಲಿಂಗಕ್ಕೆ ಹುಟ್ಟುಗೆಟ್ಟು ಹೋಗೋ ಎಂದು
ಜೋಗುಳವಾಡಿದೆ ॥೭॥

ಕರಣದ ಶರಣನ ಕಂಡಿಹೆ, ಕೇಳಿಹೆ
ಉಂಡುಟ್ಟುದ್ದವಾಗಿ ಹೇಳಿ ಜೋಗೈಸಿಹೆನೆಂಬ
ಬಾಲರಿಗಿನ್ನೆಲ್ಲಿಯ ಅನುಭಾವ
ಪರಮ ಬುರುವೆ, ಗವರೇಶ್ವರಾ ॥೮॥

ಪ್ರಾಣ ಸ್ಥಾನದಲ್ಲಿ ಅಪ್ಯಾಯನವಾಯಿತ್ತು, ಲಿಂಗಜಂಗಮ
ತನು ಸ್ಥಾನದಲ್ಲಿ ಅಪ್ಯಾಯನವಾಯಿತ್ತು
ಆಚಾರ ಲಿಂಗಸ್ಥಲ, ಗುರುಲಿಂಗಸ್ಥಲ
ಈ ಉಭಯ ಸ್ಥಳ ನಿಃಸ್ಥಲವಾಗಿ
ತಾನೊಂದೇ ತೋರುತ್ತಿರ್ದಿತ್ತು
ಈ ತೋರುವ ತೋರಿಕೆಯೆ ಬಸವಣ್ಣನೆನಗೆ
ಆ ಬಸವಣ್ಣನ ಕರುಣದಿಂದ ಪ್ರಭುದೇವರ ಶ್ರೀಪಾದವ ಕಂಡು
ನಾನು ಬದುಕಿದೆನು ಕಾಣಾ, ಗವರೇಶ್ವರಾ ॥೯॥

ಭಕ್ತಂಗೆ ಸುಖವೂ ಸರಿ, ದುಖಃವೂ ಸರಿ
ಉರಿಸಿರಿ ಉಭಯವೂ ಸರಿ
ಎನ್ನದಿರ್ದಡೆ ಭಕ್ತನಿಗದೇ ಹಾನಿ
ಎಂಗಮವೆಂದು ಪ್ರಮಾಣಿಸಿ
ನನ್ನ ಕಂಗಳ ಮುಂದೆ ಕಂಡವರ ಭಂಜಿಸಲಿಕ್ಕೆ ತನ್ನಂಗವಹೊರೆದಡೆ
ತೀರ್ಥ ಪ್ರಸಾದಕ್ಕೆ ಅವನೆಂದೇ ಹೊರಗು
ಗವರೇಶ್ವರಾ ॥೧೦॥

ಮೊದಲಿಲ್ದೆ ಲಾಭವುಂಟೇ?
ನಿರೀಕ್ಷಣೆಯಿಲ್ಲದೆ ಪರೀಕ್ಷಯುಂಟೇ?
ಗುರುವಿಲ್ಲದೆ ಲಿಂಗವುಂಟೇ?
ಇಂತಿ ವೇಷದ ಭಾಷೆಗೆ ಹೇಸಿದೆನು ಕಾಣಾ
ಗವರೇಶ್ವರಾ ॥೧೧॥

ಮೊದಲ ಹುಸಿ, ಲಾಭ ದಿಟವೆ?
ನಿರೀಕ್ಷೆಯಿಲ್ಲದೆ ಲಾಭವುಂಟೆ?
ಈ ಯಾವ ಸರದಂಗವ
ಗವರೇಶ್ವರ ಲಿಂಗ ನೀನೇ ಬಲ್ಲೆ? ॥೧೨॥

ಮೊರನ ಹೊಲಿವ ಗವರ ನಾನೆತ್ತ ಬಲ್ಲೆನು?
ಕಟ್ಟಿಕೊಂಡಾತ ಭಕ್ತನಪ್ಪನೆ, ಕೆಡಹಿದಾತ ದ್ರೋಯಿಯಪ್ಪನೆ?
ಆ ಲಿಂಗವು ಕಟ್ಟಲಿಕೆ, ತನ್ನ ಕೈಯಲ್ಲಿಪ್ಪುದೆ?
ಕೆಡ ಹಲಿಕೆ ಬೀಳಲು ಬಲ್ಲುದೆ?
ಆ ಲಿಂಗ ಬಿದ್ದ ಬಳಿಕ, ಜಗತ್ತು ಉಳಿಯ ಬಲ್ಲದೆ

ಆ ಪ್ರಾಣಲಿಂಗ ಬಿದ್ದ ಬಳಿಕ, ಈ ಪ್ರಾಣ ಉಳಿಯ ಬಲ್ಲುದೆ
ಆ ಲಿಂಗ ಬಿದ್ದಿತ್ತೆಂಬ ಸೂತಕದ ಶಬ್ದ ಭ್ರಾಂತುವಿನ ಪುಂಜ
ಅಂತು ಅದ ಕೇಳಲಾಗದು
ಯುಗ ಜುಂಗಂಗಳು ಗತವಹವಲ್ಲದೆ, ಲಿಂಗಕ್ಕೆ ಗತ ಉಂಟೆ?
ಲಿಂಗ ಬಿದ್ದಿತ್ತೆಂದು ನಿಂದಿಸಿ ನುಡಿವ ದ್ರೋಹಿಗಳ ಮಾತ ಕೇಳಲಾಗದು
ಗವರೇಶ್ವರಾ ॥೧೩॥

ಮೇದರ ಕುಲಗುರು ಕೇತಯ್ಯನು ತನ್ನ ವಚನಗಳಲ್ಲಿ ಕಾಯಕ ನಿಷ್ಠೆಯನ್ನು ಅಭಿವ್ಯಕ್ತಪಡಿಸಿದ್ದಾನೆ. ತನ್ನ ಸಣ್ಣ ಅರಿವನ್ನೇ ಲಿಂಗಕ್ಕೆ ಅರ್ಪಿಸುತ್ತೇನ್ನುತ್ತಾನೆ. ಇಂದ್ರಿಯಾನುಭವ ದೂರವಿರಿಸಿ ನಿಷ್ಕಲ್ಮಶದಿಂದ ದೇವರನ್ನು ನೆನೆಯಬೇಕು. ಅಲ್ಲಮಪ್ರಭು, ಚನ್ನಬಸವಣ್ಣ, ಘಟ್ಟಿವಾಳ ಮದ್ದಯ್ಯ, ಮರುಳುಶಂಕರ ದೇವರುಗಳ ಪ್ರಭಾವವನ್ನು ಮನಃಪೂರ್ವವಾಗಿ ನೆನೆಯುತ್ತಾನೆ. ಕೇತಯ್ಯನ ಒಳತೋಟಿಯಲ್ಲಿನ ಎಲ್ಲ ಪ್ರಕಾರದ ಏರಿಳಿತಗಳನ್ನು ಹದಸ್ಥಿತಿಗೆ ಬರಲು ಬಸವಣ್ಣನೇ ಕಾರಣವೆಂದು ಉಚ್ಚರಿಸುತ್ತಾನೆ. ಭಕ್ತಿ, ಜ್ಞಾನ, ವೈರಾಗ್ಯಗಳು ಪ್ರಭುದೇವರಿಂದ ಲಭಿಸಿದವೆಂದು ಪ್ರಾಂಜಲ ಮನಸ್ಸಿನಿಂದ ಒಪ್ಪುತ್ತಾನೆ. ಬಿದಿರಿನ ಕವೆ, ಕವೆಯೊಳಗಿನ ಲಕ್ಷಾಂತರ ಸಿಬಿರನ್ನು ಕೊಚ್ಚಿಸಿ, ನೇಯ್ದ ಸುಂದರ ತೊಟ್ಟಿಲಲ್ಲಿ ಲಿಂಗ ತೂಗುವ ಆಸೆ ಕೇತಯ್ಯನದಾಗಿತ್ತು. ಹೀಗೆ ತನ್ನ ವಚನಗಳ ಸಾರವನ್ನು ಹಿಡಿದಿಡುವ ಮನದಾಳದ ಇಂಗಿತ ಕೇತಯ್ಯನದಾಗಿತ್ತು.

ಮೇದ ಸಮುದಾಯದ ಮಾಹಿತಿದಾರರ ಪಟ್ಟಿ

ಕ್ರ.ಸಂ	ಹೆಸರು	ವಯಸ್ಸು	ವಿಳಾಸ	ಉದ್ಯೋಗ
೦೧	ಈರಪ್ಪ	೭೭	ಮೇದರ ಬೀದಿ, ನರಸಿಂಹರಾಜಪುರ, ೫೭೭ ೧೩೪ ಚಿಕ್ಕಮಗಳೂರು ಜಿಲ್ಲೆ	ಮೇದಾರಿಕೆ
೦೨.	ಅಣ್ಣಪ್ಪ ಕೆ.	೬೨	ಮೇದರ ಬೀದಿ, ನರಸಿಂಹರಾಜಪುರ, ೫೭೭ ೧೩೪ ಚಿಕ್ಕಮಗಳೂರು ಜಿಲ್ಲೆ	ಮೇದಾರಿಕೆ ಮತ್ತು ಕೃಷಿ
೦೩	ಗಂಗಮ್ಮ	೭೮	ಮೇದರ ಬೀದಿ, ನರಸಿಂಹರಾಜಪುರ, ೫೭೭ ೧೩೪ ಚಿಕ್ಕಮಗಳೂರು ಜಿಲ್ಲೆ	ಮೇದಾರಿಕೆ
೦೪	ನಾಗಪ್ಪ ಎಸ್.	೭೬	ಸೂಗಪ್ಪನ ಮಠ ನರಸಿಂಹರಾಜಪುರ, ೫೭೭ ೧೩೪ ಚಿಕ್ಕಮಗಳೂರು ಜಿಲ್ಲೆ	ನಿವೃತ್ತ ಸರ್ಕಾರಿ ನೌಕರರು
೦೫	ಗಂಗಾಧರಪ್ಪ ಸಿ.	೬೭	ಮೇದರ ಬೀದಿ, ನರಸಿಂಹರಾಜಪುರ, ೫೭೭ ೧೩೪ ಚಿಕ್ಕಮಗಳೂರು ಜಿಲ್ಲೆ	ಮೇದಾರಿಕೆ
೦೬	ಕರಿಯಪ್ಪ ಎಸ್.	೭೬	ಮೇದರ ಬೀದಿ, ನರಸಿಂಹರಾಜಪುರ, ೫೭೭ ೧೩೪ ಚಿಕ್ಕಮಗಳೂರು ಜಿಲ್ಲೆ	ನಿವೃತ್ತ ಸರ್ಕಾರಿ ನೌಕರರು
೦೭	ಕರಿಯಪ್ಪ ಈ	೭೭	ಮೇದರ ಬೀದಿ, ನರಸಿಂಹರಾಜಪುರ, ೫೭೭ ೧೩೪ ಚಿಕ್ಕಮಗಳೂರು ಜಿಲ್ಲೆ	ಮೇದಾರಿಕೆ ಮತ್ತು ಕೃಷಿ
೦೮	ರಂಗಪ್ಪ ಕೆ.	೫೯	ಮೇದರ ಬೀದಿ, ನರಸಿಂಹರಾಜಪುರ, ೫೭೭ ೧೩೪ ಚಿಕ್ಕಮಗಳೂರು ಜಿಲ್ಲೆ	ಮೇದಾರಿಕೆ
೦೯	ರಂಗಪ್ಪ ಎಸ್.	೫೬	ಮೇದರ ಬೀದಿ, ನರಸಿಂಹರಾಜಪುರ, ೫೭೭ ೧೩೪ ಚಿಕ್ಕಮಗಳೂರು ಜಿಲ್ಲೆ	ಮೇದಾರಿಕೆ ಮತ್ತು ಕೃಷಿ
೧೦	ಪಾರ್ವತಮ್ಮ	೭೨	ಮೇದರ ಬೀದಿ, ನರಸಿಂಹರಾಜಪುರ, ೫೭೭ ೧೩೪ ಚಿಕ್ಕಮಗಳೂರು ಜಿಲ್ಲೆ	ಮೇದಾರಿಕೆ
೧೧	ಮಂಜಪ್ಪ ಕೆ.	೪೬	ಮೇದರ ಬೀದಿ, ನರಸಿಂಹರಾಜಪುರ, ೫೭೭ ೧೩೪ ಚಿಕ್ಕಮಗಳೂರು ಜಿಲ್ಲೆ	ಮೇದಾರಿಕೆ
೧೨	ಚಂದ್ರಪ್ಪ ಸಿ.	೫೨	ಪ್ರಯೋಗಾಲಯ ಸಹಾಯಕ, ಸರ್ಕಾರಿ ಕಿರಿಯ ಕಾಲೇಜು, ತರೀಕೆರೆ	ಸರ್ಕಾರಿ ನೌಕರರು

೧೩	ಮಹೇಶ ಎಂ.	೪೪	ಶೆಟ್ಟಿಕೊಪ್ಪ ಅಂಚೆ, ನರಸಿಂಹರಾಜಪುರ ತಾ, ಚಿಕ್ಕಮಗಳೂರು ಜಿಲ್ಲೆ	ಜಾನಪದ ಕಲಾವಿದ ಮತ್ತು ಮೇದಾರಿಕೆ
೧೪	ಮಂಜಣ್ಣ	೪೯	ಲಿಂಗಾಪುರ, ಜೈಲ್ ಬಿಲ್ಡಿಂಗ್, ನರಸಿಂಹರಾಜಪುರ ತಾ, ಚಿಕ್ಕಮಗಳೂರು ಜಿಲ್ಲೆ.	ಕುರಿ ಸಾಕಾಣಿಕೆ
೧೫	ಅಯ್ಯನಾರ್	೪೮	ಮಾರ್ಕೆಟ್ ರಸ್ತೆ, ಬಾಳೆಹೊನ್ನೂರು ಅಂಚೆ, ನರಸಿಂಹರಾಜಪುರ ತಾ, ಚಿಕ್ಕಮಗಳೂರು ಜಿಲ್ಲೆ	ಮೇದಾರಿಕೆ
೧೬	ಕುಮಾರನ್	೫೬	ಭದ್ರಾ ಸೇತುವೆ ಸಮೀಪ, ಬಾಳೆಹೊನ್ನೂರು ಅಂಚೆ, ನರಸಿಂಹರಾಜಪುರ ತಾ, ಚಿಕ್ಕಮಗಳೂರು ಜಿಲ್ಲೆ	ಕಾಫಿ ತೋಟದ ಕೂಲಿ
೧೭	ಅ ಗ ಮಂಜಯ್ಯ	೬೭	ಮೇದರ ಬೀದಿ, ಆಲ್ದೂರು ಅಂಚೆ, ಮೂಡಿಗೆರೆ ತಾ, ಚಿಕ್ಕಮಗಳೂರು ಜಿಲ್ಲೆ	ಮೇದಾರಿಕೆ ಮತ್ತು ಕೃಷಿ
೧೮	ಧರ್ಮರಾಜ	೪೭	ಮೇದರ ಬೀದಿ, ಆಲ್ದೂರು ಅಂಚೆ, ಮೂಡಿಗೆರೆ ತಾ, ಚಿಕ್ಕಮಗಳೂರು ಜಿಲ್ಲೆ	ಸರ್ಕಾರಿ ನೌಕರರು
೨೦	ವೆಂಕಟೇಶ್ ಎ. ಎಸ್.	೫೨	ಮೇದರ ಬೀದಿ, ಆಲ್ದೂರು ಅಂಚೆ, ಮೂಡಿಗೆರೆ ತಾ, ಚಿಕ್ಕಮಗಳೂರು ಜಿಲ್ಲೆ	ಬ್ಯಾಂಕ್ ನೌಕರರು
೨೧	ಮಹೇಶ	೪೩	ಮಡೇನೇರಲು, ಆಲ್ದೂರು ಹೋಬಳಿ, ಮೂಡಿಗೆರೆ ತಾ.	ಕೃಷಿ
೨೨	ನಾಗಪ್ಪ	೫೦	ಕೂದುವಳ್ಳಿ ಅಂಚೆ, ಹೊಸ್ತಾರೆ ಹೋಬಳಿ, ಚಿಕ್ಕಮಗಳೂರು ತಾ.	ಮೇದಾರಿಕೆ
೨೩	ರಾಜಮ್ಮ	೫೮	ಗುಡ್ಡಟ್ಟಿ ಮೂಡಿಗೆರೆ ಅಂಚೆ, ಚಿಕ್ಕಮಗಳೂರು ಜಿಲ್ಲೆ	ಮೇದಾರಿಕೆ ಮತ್ತು ಕೃಷಿ
೨೪	ರಾಜಪ್ಪ	೪೯	ಗುಡ್ಡಟ್ಟಿ ಕಾಲೋನಿ, ಮೂಡಿಗೆರೆ ಅಂಚೆ, ಚಿಕ್ಕಮಗಳೂರು ಜಿಲ್ಲೆ	ಮೇದಾರಿಕೆ
೨೫	ಗೋಪಾಲ್	೫೪	ಮುಖ್ಯರಸ್ತೆ, ಮೂಡಿಗೆರೆ ತಾ. ಚಿಕ್ಕಮಗಳೂರು ಜಿಲ್ಲೆ	ಆರ್‌ಟಿ.ಓ. ಪ್ರತಿನಿಧಿ
೨೬	ಪೈಲ್ವಾನ್ ಕೃಷ್ಣಪ್ಪ	೭೨	ಮಾರ್ಕೆಟ್ ರಸ್ತೆ, ಚಿಕ್ಕಮಗಳೂರು	ಮೇದಾರಿಕೆ
೨೭	ರಾಜೇಶ ಪಿ.	೩೭	ಮಾರ್ಕೆಟ್ ರಸ್ತೆ, ಚಿಕ್ಕಮಗಳೂರು	ಅಕ್ಷರ ತೋರಣ ಪತ್ರಿಕಾ ಸಂಪಾದಕರು
೨೮	ರೇವಣ್ಣ	೫೨	ರಾಮನಹಳ್ಳಿ, ಪೋಲೀಸ್ ಕ್ವಾರ್ಟ್ರಸ್, ಚಿಕ್ಕಮಗಳೂರು	ಸಹಾಯಕ ಉಪನಿರೀಕ್ಷಕರು

೨೯	ಬಿಳಿಯಪ್ಪ	೫೭	ಕಲ್ಲೇದೇವರಪುರ, ಕೈಮರ ಅಂಚೆ, ಚಿಕ್ಕಮಗಳೂರು ತಾ.	ಕೃಷಿ
೩೦	ರಾಮಣ್ಣ ಪೂಜಾರಿ	೬೬	ಗುಳ್ಳಮ್ಮ ದೇವಿ ದೇವಸ್ಥಾನ, ಮಂಡಲ್‌ಖಾನ್ ರಸ್ತೆ, ತರೀಕೆರೆ	ಮೇದಾರಿಕೆ
೩೧	ಬಸವರಾಜ	೫೭	ಮಂಡಲ್‌ಖಾನ್ ರಸ್ತೆ, ತರೀಕರೆ	ಮೇದಾರಿಕೆ
೩೨	ಮಂಜುನಾಥ ಟಿ.ಎ	೫೨	ಮಂಡಲ್‌ಖಾನ್ ರಸ್ತೆ, ತರೀಕೆರೆ	ಮೇದಾರಿಕೆ
೩೩	ಕರಿಯಪ್ಪ	೭೭	ಮಂಡಲ್‌ಖಾನ್ ರಸ್ತೆ, ತರೀಕೆರೆ	ಮೇದಾರಿಕೆ
೩೪	ನಾಗಪ್ಪ	೫೬	ಕುರುಬರ ಬೀದಿ, ತರೀಕೆರೆ ತಾ. ಚಿಕ್ಕಮಗಳೂರು ಜಿಲ್ಲೆ	ಮೇದಾರಿಕೆ
೩೫	ರಂಗಪ್ಪ	೫೮	ಕೋಡಿಕ್ಯಾಂಪ್ ತರೀಕೆರೆ ತಾ. ಚಿಕ್ಕಮಗಳೂರು ಜಿಲ್ಲೆ	ಮೇದಾರಿಕೆ
೩೬	ಸೋಮು	೫೧	ಎ ರಂಗಾಪುರ, ತರೀಕೆರೆ ತಾ. ಚಿಕ್ಕಮಗಳೂರು ಜಿಲ್ಲೆ	ಮೇದಾರಿಕೆ
೩೭	ಮಂಜಪ್ಪ ಎಲ್ ಎಚ್	೫೭	ಮಂಡರವಳ್ಳಿ, ಹಲಸೂರು ಅಂಚೆ, ತರೀಕೆರೆ ತಾ. ಚಿಕ್ಕಮಗಳೂರು ಜಿಲ್ಲೆ	ಮೇದಾರಿಕೆ
೩೮	ರಾಜು	೩೯	ಮಂಡರವಳ್ಳಿ, ಹಲಸೂರು ಅಂಚೆ, ತರೀಕೆರೆ ತಾ. ಚಿಕ್ಕಮಗಳೂರು ಜಿಲ್ಲೆ	ಮೇದಾರಿಕೆ
೩೯	ಎಲ್. ಬಿ. ರಂಗನಾಥ	೭೬	ಕುರುಬರ ಬೀದಿ, ಹಳೇ ಲಕ್ಕವಳ್ಳಿ, ತರೀಕೆರೆ ತಾ. ಚಿಕ್ಕಮಗಳೂರು ಜಿಲ್ಲೆ	ಮೇದಾರಿಕೆ
೪೦	ಮಂಜಪ್ಪ ಎಲ್. ಎಸ್.	೫೯	ಕುರುಬರ ಬೀದಿ, ಹಳೇ ಲಕ್ಕವಳ್ಳಿ, ತರೀಕೆರೆ ತಾ. ಚಿಕ್ಕಮಗಳೂರು ಜಿಲ್ಲೆ	ಕೃಷಿ
೪೧	ಚಂದ್ರಪ್ಪ ಎಸ್.	೫೭	ಇಂದಿರಾ ನಗರ, ಹಳೇ ಲಕ್ಕವಳ್ಳಿ ತರೀಕೆರೆ ತಾ. ಚಿಕ್ಕಮಗಳೂರು ಜಿಲ್ಲೆ	ಮೇದಾರಿಕೆ
೪೨	ಲಿಂಗಶೆಟ್ಟಿ	೭೭	ತಣಿಗೆ ಬೈಲು, ತರೀಕೆರೆ ತಾ. ಚಿಕ್ಕಮಗಳೂರು ಜಿಲ್ಲೆ	ಮೇದಾರಿಕೆ ಮತ್ತು ಕೃಷಿ
೪೩	ಬೋರಶೆಟ್ಟಿ	೭೯	ಜಯಪುರ, ತಣಿಗೆ ಬೈಲು ಅಂಚೆ, ತರೀಕೆರೆ ತಾ. ಚಿಕ್ಕಮಗಳೂರು ಜಿಲ್ಲೆ	ಮೇದಾರಿಕೆ ಮತ್ತು ಕೃಷಿ
೪೪	ಮಂಜುನಾಥ ಆರ್	೫೭	ರೈಲ್ವೇ ಕ್ವಾರ್ಟ್ರಸ್, ಹರಿಹರ, ದಾವಣಗೆರೆ ಜಿಲ್ಲೆ	ರೈಲ್ವೆ ನೌಕರರು
೪೫	ಚಂದ್ರಶೇಖರ್ ಎ.	೬೩	ಬೊಂಬು ಬಜಾರ್, ದಾವಣಗೆರೆ	ಬೊಂಬು ವ್ಯಾಪಾರ
೪೬	ಸೋಮಣ್ಣ	೬೬	ಬೊಂಬು ಬಜಾರ್, ದಾವಣಗೆರೆ	ಬೊಂಬು ವ್ಯಾಪಾರ
೪೭	ಎಚ್.ಡಿ. ಬಸವರಾಜ್	೬೨	ಮಾಜಿ ವಿಧಾನ ಸಭಾ ಸದಸ್ಯರು, ೧೧೩೮ ಇ/ಎ, ಪದ್ಮಾ ೩ನೇ ಬಿ ಮುಖ್ಯರಸ್ತೆ, ವಿಜಯನಗರ ಎರಡನೇ ಹಂತ ಬೆಂಗಳೂರು–೪೦	ಸಮಾಜ ಸೇವೆ

೪೮	ಎಂ. ಅಂಜನಮೂರ್ತಿ	೫೫	ಅಧ್ಯಕ್ಷರು, ಅಖಿಲ ಕರ್ನಾಟಕ ಮೇದ ಜನಾಂಗದ ಹಿತ ರಕ್ಷಣ ವೇದಿಕೆ (ರಿ) ಕೇರ್‌ಅಫ್ ಸಿಂಡಿಕೇಟ್ ಬ್ಯಾಂಕ್, ಎಂ. ಎಂ. ಜೆ. ಸಿ. ಶಾಖೆ ಮೈಸೂರು	ಬ್ಯಾಂಕ್ ನೌಕರರು
೪೯	ಡಾ. ಚಂದ್ರಶೇಖರ್ ಎಸ್.	೪೨	ಸಹಪ್ರಾಧ್ಯಾಪಕರು, ಎಚಿಟಿಮಾಲಜಿ, ಕೃಷಿ ಕಾಲೇಜು, ಬಿಜಾಪುರ ೫೮೬ ೧೦೧	ಸರ್ಕಾರಿ ನೌಕರರು
೫೦	ನಾಗರಾಜ	೪೪	ಮೇದರ ಓಣಿ, ರಾಣೆಬೆನ್ನೂರು ತಾ. ಹಾವೇರಿ ಜಿಲ್ಲೆ	ಮೇದಾರಿಕೆ
೫೧	ತಿಪ್ಪಣ್ಣ ಶಿರಹಟ್ಟಿ	೪೬	ಮೇದರ ಓಣಿ, ಹುಬ್ಬಳ್ಳಿ ಶಹರ, ಹುಬ್ಬಳ್ಳಿ	ಮೇದಾರಿಕೆ
೫೨	ಎಚ್.ಪಿ. ವೆಂಕಟೇಶ್	೫೦	ಎಚ್. ವಿ. ಆರ್ ಲೇಔಟ್, ಮಾಗಡಿ ರಸ್ತೆ, ಬೆಂಗಳೂರು	ಸರ್ಕಾರಿ ನೌಕರರು
೫೩	ನಾಗರಾಜ	೪೭	ಮೇದರ ಓಣಿ ಶಿರಸಿ	ಸರ್ಕಾರಿ ನೌಕರರು
೫೪	ಮಲ್ಲೇಶ್	೪೬	ಮೇದರ ಬೀದಿ, ನರಸಿಂಹರಾಜಪುರ, ಚಿಕ್ಕಮಗಳೂರು ಜಿಲ್ಲೆ	ಮೇದಾರಿಕೆ
೫೫	ಸುಶೀಲಾ ರಾಮದಾಸ್	೫೪	ಮೇದರ ಬೀದಿ, ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ	ಮೇದಾರಿಕೆ
೫೬	ಚನ್ನಯ್ಯ	೬೦	ಹಲಸು ಮನೆ ಅಂಚೆ, ಹೊಸ್ತಾರೆ ಹೋಬಳಿ, ಚಿಕ್ಕಮಗಳೂರು ತಾ.	ಮೇದಾರಿಕೆ
೫೭	ಚಂದ್ರಪ್ಪ	೬೧	ಜನ್ನಾಪುರ ಅಂಚೆ, ಮೂಡಿಗೆರೆ ತಾ. ಚಿಕ್ಕಮಗಳೂರು ಜಿಲ್ಲೆ	ಮೇದಾರಿಕೆ
೫೮	ಮುತ್ತುರಾಜ್	೬೦	ಗೂಡೆ ಕ್ಯಾಂಪ್, ಉಪ್ಪಾರ ಬೀರನಹಳ್ಳಿ, ಲಕ್ಕವಳ್ಳಿ ಹೋಬಳಿ, ತರೀಕೆರೆ ತಾ. ಚಿಕ್ಕಮಗಳೂರು ಜಿಲ್ಲೆ	ಮೇದಾರಿಕೆ
೫೯	ಶಂಕ್ರಪ್ಪ	೪೮	ಗೂಡೆ ಕ್ಯಾಂಪ್, ಉಪ್ಪಾರ ಬೀರನಹಳ್ಳಿ, ಲಕ್ಕವಳ್ಳಿ ಹೋಬಳಿ, ತರೀಕೆರೆ ತಾ. ಚಿಕ್ಕಮಗಳೂರು ಜಿಲ್ಲೆ	ಮೇದಾರಿಕೆ
೬೦	ರಂಗಸ್ವಾಮಿ	೩೭	ಸೂಗಪ್ಪನ ಮಠ, ಹಳೇ ಹೆಬ್ಬೆ ರಸ್ತೆ, ನರಸಿಂಹರಾಜಪುರ ತಾ.	ಮೇದಾರಿಕೆ

ಕ್ಷೇತ್ರಕಾರ್ಯ ಮಾಹಿತಿ ಪಟ್ಟಿ (ಪ್ರಶ್ನಾವಳಿ)

ಕರ್ನಾಟಕದ ಮೇದ ಬಾಡಕಟ್ಟಿನ ಸಮಾಜಶಾಸ್ತ್ರೀಯ ಅಧ್ಯಯನ

ಮಾರ್ಗದರ್ಶಕರು : ಡಾ. [illegible]
ಪ್ರವಾಚಕರು, ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಬುಡಕಟ್ಟು ಅಧ್ಯಯನ ವಿಭಾಗ,
ವಿದ್ಯಾರಣ್ಯ,
ಕನ್ನಡ ವಿಶ್ವವಿದ್ಯಾಲಯ, ಹಂಪಿ-583276.

ಸಂಶೋಧಕರು : ಕೆ. [illegible]
ಎಂ.ಫಿಲ್. ಶ್ರೀ. [illegible] ಬುಡಕಟ್ಟು ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಾಮಾನ್ಯ ಮಾಹಿತಿ:
ಸಂದರ್ಶನ ದಿನಾಂಕ
ಬುಡಕಟ್ಟು:
ಬೆಡಗು ಧಾನೆ:
ಮನೆ ದೇವರು:
ಗೋತ್ರ/ಬೆಡಗು/ಬಳಿ:
ಎಫ್) ಉಪಜಾತಿ:

ಜಿ) ಮನೆತನದ ಹೆಸರು
ಎಚ್) ಮನೆ ಸಂಖ್ಯೆ:
ಐ) ಗ್ರಾಮ/ಪಟ್ಟಣ:
ಜೆ) ವಾರ್ಡ್:
ಕೆ) ಪಂಚಾಯಿತಿ:
ಎಲ್) ತಾಲ್ಲೂಕು:
ಎಂ) ಜಿಲ್ಲೆ:

ಎನ್) ಭೂ ಹಿಡುವಳಿ (ಎಕರೆಗಳಲ್ಲಿ)
1) [illegible]
2) [illegible]
ಒ) ಪಾರಂಪರಿಕ ಆಸ್ತಿ ಮಾ [illegible]
ಪಿ) ಪಾರಂಪರಿಕ ಜಾತಿ ಆಸ್ತಿ [illegible]

II. ವೈಯಕ್ತಿಕ ಮಾಹಿತಿ

ಕ್ರ.ಸಂ	ಕುಟುಂಬದ ಸದಸ್ಯರ ಹೆಸರುಗಳು	ಸಂಬಂಧ	ಲಿಂಗ	ವಯಸ್ಸು	ಶಿಕ್ಷಣ	ವೈವಾಹಿಕ ಸ್ಥಾನಮಾನ	ಕಸುಬು	[illegible]	[illegible]	[illegible]	[illegible]	ವೃದ್ಧಾಪ್ಯ	ವಿಧವಾವೇತನ
i	ii	iii	iv	v	vi	vii	viii	ix		xi	x	xiii	xiv
		ಯಜಮಾನ / [illegible]											

ಕ್ಯೂ) ಪಶು ಸಂಪತ್ತು (ಸಂಖ್ಯೆಗಳಲ್ಲಿ)
1) ಎತ್ತು, ಹೋರಿ
2) ಆಕಳು, ಕರು
3) ಎಮ್ಮೆ, ಕೋಣ
4) ಕುರಿ
5) ಮೇಕೆ
6) ಕೋಳಿ
7)

ಆರ್) ಮನೆ ವಿವರ (✔)
1) ಗುಡಿಸಲು
2) [illegible]
3) ಹೆಂಚಿನ ಮನೆ
4) ಮಾಳಿಗೆ
5) ಆರ್.ಸಿ.ಸಿ. ಮನೆ
6) ಸರಕಾರ ಮನೆ
7) [illegible]
8) [illegible]
9)

ಎಸ್) ಶೌಚಾಲಯ (✔)
[illegible]
[illegible]

ಟಿ) ನೀರು (✔)
[illegible]
[illegible]

ಯು) ವಿದ್ಯುತ್ (✔)
[illegible]
[illegible]

ವಿ) ಇತರೆ ಸೌಲಭ್ಯಗಳು (✔)
1. ಟಿ.ವಿ.
2. ಫ್ಯಾನ್
3. ರೇಡಿಯೋ
4. [illegible]
5. [illegible]
6. [illegible]
7. [illegible]
8. [illegible]
9. [illegible]
10. ದೂರವಾಣಿ [illegible]
11. [illegible]
12.

[illegible]

ಕ್ರ ಸಂ	ಚಿಕ್ಕಮಗಳೂರು ಜಿಲ್ಲಾ ವಿವಿಧ ತಾಲೂಕುಗಳ ವಿವಿಧ ಮಾಹಿತಿಗಳ ಕೋಷ್ಟಕದ ಸವಿವರ ತಖ್ತೆ:
೧	ಚಿಕ್ಕಮಗಳೂರು ಜಿಲ್ಲೆಯ ತಾಲೂಕುವಾರು ಮೇದ ಜನಸಂಖ್ಯೆ ಮತ್ತು ಕುಟುಂಬಗಳ ಮಾಹಿತಿ ಕೋಷ್ಟಕ–೧
೨	ಚಿಕ್ಕಮಗಳೂರು ಜಿಲ್ಲೆಯ ತಾಲೂಕುವಾರು ಮೇದ ಕುಟುಂಬ ಹಾಗೂ ಜನಸಂಖ್ಯೆಯ ಶೇಕಡಾವಾರು ಮಾಹಿತಿ ಕೋಷ್ಟಕ–೨
೩	ಚಿಕ್ಕಮಗಳೂರು ಜಿಲ್ಲೆಯ ತಾಲೂಕುವಾರು ಮೇದ ಸಮುದಾಯದ ಗ್ರಾಮವಾರು ಕುಟುಂಬಗಳು ಹಾಗೂ ಲಿಂಗವಾರು ಜನಸಂಖ್ಯೆ ಕೋಷ್ಟಕ–೩
೪	ಚಿಕ್ಕಮಗಳೂರು ಜಿಲ್ಲೆಯ ತಾಲೂಕುವಾರು ಮೇದ ಸಮುದಾಯದ ಗ್ರಾಮವಾರು ಮತ್ತು ಲಿಂಗವಾರು ವಯೋಗುಂಪು ಮತ್ತು ಜನಸಂಖ್ಯೆ ಕೋಷ್ಟಕ–೪
೫	ಚಿಕ್ಕಮಗಳೂರು ಜಿಲ್ಲೆಯ ವಿವಿಧ ಕಾಲೂಕುಗಳ ಶಿಕ್ಷಣದ ಶೇಕಡಾವಾರು ಮಾಹಿತಿ ಕೋಷ್ಟಕ–೫
೬	ಚಿಕ್ಕಮಗಳೂರು ಜಿಲ್ಲೆಯ ತಾಲೂಕುವಾರು, ಗ್ರಾಮವಾರು ವೃತ್ತಿ ಮತ್ತು ಶೈಕ್ಷಣಿಕ ಮಾಹಿತಿ ಕೋಷ್ಟಕ–೬
೭	ಚಿಕ್ಕಮಗಳೂರು ಜಿಲ್ಲೆಯ ತಾಲೂಕುವಾರು, ಗ್ರಾಮವಾರು ಮೇದ ಬುಡಕಟ್ಟಿನ ಕುಟುಂಬವಾರು ಪಶುಸಂಪತ್ತು, ಮನೆಗಳು, ಸೌಲಭ್ಯಗಳ ಕೋಷ್ಟಕ–೭
೮	ಚಿಕ್ಕಮಗಳೂರು ಜಿಲ್ಲೆಯ ತಾಲೂಕುವಾರು, ಗ್ರಾಮವಾರು ಮೇದ ಬುಡಕಟ್ಟಿನ ಭೂಹಿಡುವಳಿಗಳ ಮಾಹಿತಿ ಕೋಷ್ಟಕ–೮
೯	ಚಿಕ್ಕಮಗಳೂರು ಜಿಲ್ಲೆಯ ತಾಲೂಕುವಾರು ಸೂಚನಾದಾರರ ಮಾತೃಭಾಷೆಯ ಹಂಚಿಕೆಯ ವಿವರ ಕೋಷ್ಟಕ–೯
೧೦	ಚಿಕ್ಕಮಗಳೂರು ಜಿಲ್ಲೆಯ ತಾಲೂಕುವಾರು ಮೇದರ ಕುಲ–ಬಳಿ–ಬೆಡಗುಗಳ ಕೋಷ್ಟಕ–೧೦
೧೧	ಚಿಕ್ಕಮಗಳೂರು ಜಿಲ್ಲೆಯ ತಾಲೂಕುವಾರು ಮೇದ ಬುಡಕಟ್ಟಿನ ಸೂಚನಾದಾರರ ವೈವಾಹಿಕ ಸ್ಥಾನಮಾನ ಮತ್ತು ಅವಿಭಕ್ತ ಕುಟುಂಬಗಳ ಮಾಹಿತಿ ಕೋಷ್ಟಕ–೧೧
೧೨	ಚಿಕ್ಕಮಗಳೂರು ಜಿಲ್ಲೆಯ ತಾಲೂಕುವಾರು ಕುಟುಂಬಗಳ ರಾಜಕೀಯ ಆಸಕ್ತಿ ಮಾಹಿತಿ ಕೋಷ್ಟಕ–೧೨
೧೩	ಸೂಚನಾದಾರರ ಆದಾಯದ ಮೂಲದ ಮಾಹಿತಿ ಕೋಷ್ಟಕ–೧೩
೧೪	ಕುಟುಂಬದ ಮಾಸಿಕ ಆದಾಯದ ಮಾಹಿತಿ ಕೋಷ್ಟಕ–೧೪
೧೫	ಸೂಚನಾದಾರರ ಕುಟುಂಬದ ವಾರ್ಷಿಕ ಆದಾಯದ ಮಾಹಿತಿ ಕೋಷ್ಟಕ–೧೫
೧೬	ಕುಟುಂಬವಾರು ಮೇದಾರಿಕೆ ವೃತ್ತಿಯ ತೃಪ್ತಿ ಮತ್ತು ವೃತ್ತಿ ಬದಲಾವಣೆಯ ಮಾಹಿತಿ ಕೋಷ್ಟಕ–೧೬
೧೭	ಸೂಚನಾದಾರರು ಸಾಲ ಮಾಡಲು ಕಾರಣಗಳ ಮಾಹಿತಿ ಕೋಷ್ಟಕ–೧೮
೧೮	ಕುಟುಂಬವಾರು ಪಡೆದಿರುವ ಸಾಲದ ಮೂಲದ ಮಾಹಿತಿ ಕೋಷ್ಟಕ–೧೮
೧೯	ಸೂಚನಾದಾರರು ಸಾಲವನ್ನು ತೀರಿಸುವ ಮಾಹಿತಿ ಕೋಷ್ಟಕ–೧೯
೨೦	ಸೂಚನಾದಾರರ ಉಳಿತಾಯ ಮಾಹಿತಿ ಕೋಷ್ಟಕ–೨೦
೨೧	ಮೇದ ಮಹಿಳೆಯರು ತೆಗೆದುಕೊಳ್ಳುವ ನಿರ್ಣಯಗಳ ಮಾಹಿತಿ ಕೋಷ್ಟಕ–೨೧

ಚಿಕ್ಕಮಗಳೂರು ಜಿಲ್ಲೆಯ ತಾಲೂಕುವಾರು ಮೇದ ಜನಸಂಖ್ಯೆ ಮತ್ತು ಕುಟುಂಬಗಳ ಮಾಹಿತಿ ಕೋಷ್ಟಕ-೧

ಕ್ರಸಂ	ತಾಲೂಕು	ಗಂಡು	ಹೆಣ್ಣು	ಒಟ್ಟು	ಒಟ್ಟು ಕುಟುಂಬ
೧	ತರೀಕೆರೆ	೪೩೩	೩೯೪	೮೨೭	೧೪೬
೨	ಚಿಕ್ಕಮಗಳೂರು	೧೧೩	೧೧೪	೨೨೭	೪೨
೩	ಮೂಡಿಗೆರೆ	೨೪೮	೨೭೬	೫೨೪	೧೨೩
೪	ನರಸಿಂಹರಾಜಪುರ	೧೩೯	೧೩೧	೨೭೦	೬೨
		೯೩೩	೯೧೫	೧೮೪೮	೩೭೩

ಚಿಕ್ಕಮಗಳೂರು ಜಿಲ್ಲೆಯ ತಾಲೂಕುವಾರು ಮೇದ ಶೇಕಡಾವಾರು ಜನಸಂಖ್ಯೆ ಮತ್ತು ಕುಟುಂಬಗಳ ಮಾಹಿತಿ ಕೋಷ್ಟಕ-೨

ಕ್ರಸಂ	ತಾಲೂಕು	ಗಂಡು	ಹೆಣ್ಣು	ಒಟ್ಟು	ಒಟ್ಟು ಕುಟುಂಬ
೧	ತರೀಕೆರೆ	೪೩೩ ೪೬.೪೦	೩೯೪ ೪೩.೦೬	೮೨೭ ೪೪.೭೫	೧೪೬ ೩೯.೧೪
೨	ಚಿಕ್ಕಮಗಳೂರು	೧೧೩ ೧೨.೧೧	೧೧೪ ೧೨.೪೫	೨೨೭ ೧೨.೨೮	೪೨ ೧೧.೨೬
೩	ಮೂಡಿಗೆರೆ	೨೪೮ ೨೬.೫೮	೨೭೬ ೩೦.೧೬	೫೨೪ ೨೮.೩೫	೧೨೩ ೩೨.೯೭
೪	ನರಸಿಂಹರಾಜಪುರ	೧೩೯ ೧೪.೮೯	೧೩೧ ೧೪.೩೧	೨೭೦ ೧೪.೬೧	೬೨ ೧೬.೬೨
ಒಟ್ಟು		೯೩೩ ೯೯.೯೮ ೧೦೦%	೯೧೫ ೯೯.೯೮ ೧೦೦%	೧೮೪೮ ೯೯.೯೯ ೧೦೦%	೩೭೩ ೯೯.೯೯ ೧೦೦%

ತರೀಕೆರೆ ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಕುಟುಂಬಗಳು ಮತ್ತು ಲಿಂಗವಾರು ಜನಸಂಖ್ಯೆ ಕೋಷ್ಟಕ–೩

ಕ್ರಸಂ	ತಾಲೂಕು	ಗ್ರಾಮ	ಕುಟುಂಬಗಳು	ಗಂಡು	ಹೆಣ್ಣು	ಒಟ್ಟು
೧	ತರೀಕೆರೆ	ತರೀಕೆರೆ (ತಿಮ್ಮಯ್ಯನ ಬೀದಿ)	೧೫	೩೦	೨೮	೫೮
೨	---	ಜಯಪುರ (ತಣಿಗೆಬೈರು)	೭	೧೬	೧೫	೩೧
೩	---	ರಂಗೇನಹಳ್ಳಿ	೦೧	೦೨	೦೨	೦೪
೪	---	ಅಜ್ಜಂಪುರ	೦೨	೩೩	೨೪	೫೭
೫	---	ಮಂಡರದಳ್ಳಿ	೦೨	೦೪	೦೬	೧೦
೬	---	ಬಾವಿಕೆರೆ	೦೧	೦೨	೦೧	೦೩
೭	---	ಲಕ್ಕವಳ್ಳಿ	೧೭	೩೪	೩೭	೭೧
೮	---	ಎ. ರಂಗಾಪುರ	೧೨	೫೮	೪೯	೧೦೭
೯	---	ಕೋಡಿಕ್ಯಾಂಪ್	೩೨	೧೧೨	೯೯	೨೧೧
೧೦	---	ಉಪ್ಪಾರ ಬೀರನಹಳ್ಳಿ	೪೪	೧೪೨	೧೩೩	೨೭೫
ಒಟ್ಟು			೧೪೬	೪೩೩	೩೯೪	೮೨೭

ಮೂಡಿಗೆರೆ ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಕುಟುಂಬಗಳು ಮತ್ತು ಲಿಂಗವಾರು ಜನಸಂಖ್ಯೆ–೩

ಕ್ರ ಸಂ	ತಾಲೂಕು	ಗ್ರಾಮ	ಕುಟುಂಬಗಳು	ಗಂಡು	ಹೆಣ್ಣ	ಒಟ್ಟು
೧	ಮೂಡಿಗೆರೆ	ಆಲ್ದೂರು	೪೨	೮೭	೯೬	೧೮೩
೨	---	ಹಲಸಿನಮನೆ	೦೪	೦೯	೦೮	೧೭
೩	---	ಜನ್ನಾಪುರ	೦೭	೦೭	೧೭	೨೪
೪	---	ತೋರಣಮಾವು	೨೦	೪೩	೪೭	೯೦
೫	---	ಮಡೇನೇರಲು	೧೯	೩೩	೩೬	೬೯
೬	---	ಮೂಡಿಗೆರೆ	೦೧	೦೨	೦೩	೦೫
೭	---	ದಾಸರಹಳ್ಳಿ	೦೪	೧೩	೦೮	೨೧
೮	---	ಬಣಕಲ್	೦೩	೦೬	೦೯	೧೫
೯	---	ಗುಡ್ಡಟ್ಟಿ	೦೨	೦೪	೦೫	೦೯
೧೦	---	ಬಿಳಗುಳ	೦೭	೧೩	೧೬	೨೯
೧೧	---	ಬಾನಳ್ಳಿ	೧೦	೨೬	೨೩	೪೯
೧೨	---	ಬಿಳಗೊಳ ಆಶ್ರಯ ಕಾಲೋನಿ	೦೪	೦೫	೦೮	೧೩
	ಒಟ್ಟು		೧೨೩	೨೪೮	೨೭೬	೫೨೪

ಚಿಕ್ಕಮಗಳೂರು ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಕುಟುಂಬಗಳು ಮತ್ತು ಲಿಂಗವಾರು ಜನಸಂಖ್ಯೆ ಮಾಹಿತಿ ಕೋಷ್ಟಕ-೩

ಕ್ರ ಸಂ	ಗ್ರಾಮ	ಕುಟುಂಬಗಳು	ಗಂಡು	ಹೆಣ್ಣು	ಒಟ್ಟು
೧	ಚಿಕ್ಕಮಗಳೂರು ಟೌನ್ (ಕನ್ನಡ)	೦೫	೧೦	೧೩	೨೩
೨	ರಾಮಮನಹಳ್ಳಿ	೦೧	೦೨	೦೧	೦೩
೩	ಅರಳುಗುಪ್ಪೆ	೦೨	೦೬	೦೫	೧೧
೪	ಚಿಕ್ಕಮಗಳೂರು ಟೌನ್ (ತೆಲುಗು)	೩೪	೯೫	೯೫	೧೯೦
	ಒಟ್ಟು	೪೨	೧೧೩	೧೧೪	೨೨೭

ನರಸಿಂಹರಾಜಪುರ ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಕುಟುಂಬಗಳು ಮತ್ತು ಲಿಂಗವಾರು ಜನಸಂಖ್ಯೆ ಮಾಹಿತಿ ಕೋಷ್ಟಕ-೩

ಕ್ರ ಸಂ	ತಾಲೂಕು	ಗ್ರಾಮ	ಕುಟುಂಬಗಳು	ಗಂಡು	ಹೆಣ್ಣು	ಒಟ್ಟು
೧	ನರಸಿಂಹರಾಜಪುರ	ನರಸಿಂಹರಾಜಪುರ	೪೯	೧೧೧	೧೦೩	೨೧೪
೨	---	ಶೆಟ್ಟಿಕೊಪ್ಪ	೦೨	೦೪	೦೬	೧೦
೩	---	ಲಿಂಗಾಪುರ	೦೩	೦೭	೦೪	೧೧
೪	---	ಬಾಳೆ ಹೊನ್ನೂರು (ತೆಲುಗು)	೦೫	೦೯	೧೧	೦೨
೫	---	ಬಾಳೆಹೊನ್ನೂರು (ಮಲೆಯಾಳಿ)	೦೩	೦೮	೦೭	೧೫
೬	ಒಟ್ಟು		೬೨	೧೩೯	೧೩೧	೨೭೦

ಜನಸಂಖ್ಯೆ ಮಾಹಿತಿ ಕೋಷ್ಟಕ - ೪

ತರೀಕೆರೆ ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಮತ್ತು ಲಿಂಗವಾರು ವಯೋಗುಂಪು

ಕ್ರಸಂ	ಗ್ರಾಮ	ಒಟ್ಟು ಕುಟುಂಬಗಳು	ವಯೋಗುಂಪು																	
			೦ - ೧೪			೧೫ - ೨೯			೩೦ - ೪೪			೪೫ - ೫೯			೬೦ ಮೇಲ್ಪಟ್ಟು			ಒಟ್ಟು ಜನಸಂಖ್ಯೆ		
			ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ
೧	ತರೀಕೆರೆ (ತಿಮ್ಮಯ್ಯನಬೀದಿ)	೧೫	೮	೭	೧೫	೬	೭	೧೩	೭	೬	೧೩	೮	೭	೧೫	೧	೧	೨	೩೦	೨೮	೫೮
೨	ಜಯಪುರ (ತಣಿಗೆಬೈಲು)	೭	೩	೨	೫	೫	೬	೧೧	೩	೪	೭	೩	೨	೫	೨	೧	೩	೧೬	೧೫	೩೧
೩	ರಂಗೇನಹಳ್ಳಿ	೧	-	-	-	೧	೧	೨	-	೧	೧	೧	-	೧	-	-	-	೨	೨	೪
೪	ಅಜ್ಜಂಪುರ	೧೦	೭	೫	೧೨	೯	೮	೧೭	೧೩	೭	೨೦	೨	೨	೪	೨	೨	೪	೩೩	೨೪	೫೭
೫	ಮಂಡರವಳ್ಳಿ	೨	-	-	-	೩	೪	೭	-	-	-	೧	೨	೩	-	-	-	೪	೬	೧೦
೬	ಬಾವಿಕೆರೆ	೧	-	-	-	೧	-	೧	-	-	-	೧	೧	೨	-	-	-	೨	೧	೩
೭	ಲಕ್ಕವಳ್ಳಿ	೧೭	೬	೭	೧೩	೯	೧೦	೧೯	೧೧	೯	೨೦	೪	೭	೧೧	೪	೪	೮	೩೪	೩೭	೭೧
೮	ಎ. ರಂಗಾಪುರ	೧೨	೨೦	೧೨	೩೨	೧೧	೧೦	೨೧	೧೭	೧೫	೩೨	೬	೮	೧೪	೪	೪	೮	೫೮	೪೯	೧೦೭
೯	ಕೋಡಿಕ್ಯಾಂಪ್	೩೨	೨೩	೨೧	೪೩	೩೭	೨೭	೬೪	೩೫	೩೨	೬೭	೧೩	೧೧	೨೪	೪	೮	೧೨	೧೧೨	೯೯	೨೧೧
೧೦	ಉಪ್ಪಾರಬೀರನಹಳ್ಳಿ	೪೪	೧೮	೨೪	೪೨	೬೪	೩೯	೧೦೩	೪೧	೪೦	೮೧	೧೫	೧೯	೩೪	೪	೧೧	೧೫	೧೪೨	೧೩೩	೨೭೫
	ಒಟ್ಟು	೧೪೧	೮೫	೭೮	೧೬೨	೧೪೬	೧೧೨	೨೫೮	೧೨೭	೧೧೪	೨೪೧	೫೪	೫೯	೧೧೩	೨೧	೩೧	೫೨	೪೩೩	೩೯೪	೮೨೭

ಜನಸಂಖ್ಯೆ ಮಾಹಿತಿ ಕೋಷ್ಟಕ – ೪

ಚಿಕ್ಕಮಗಳೂರು ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಮತ್ತು ಲಿಂಗವಾರು ವಯೋಗುಂಪು

ಕ್ರ.ಸಂ	ಗ್ರಾಮ	ಒಟ್ಟು ಕುಟುಂಬಗಳು	ವಯೋಗುಂಪು																	
			೦ – ೧೪			೧೫ – ೨೯			೩೦ – ೪೪			೪೫ – ೫೯			೬೦ ಮೇಲ್ಪಟ್ಟು			ಒಟ್ಟು ಜನಸಂಖ್ಯೆ		
			ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ
೧	ಚಿಕ್ಕಮಗಳೂರು – ೧	೫	೨	೨	೪	೪	೬	೧೦	೧	೨	೩	೩	೩	೬	–	–	–	೧೦	೧೩	೨೩
೨	ರಾಮನಹಳ್ಳಿ	೧	–	–	–	೧	–	೧	–	೧	೧	೧	–	೧	–	–	–	೨	೧	೩
೩	ಅರಳುಗುಪ್ಪೆ	೨	–	–	–	೨	೧	೩	೧	೨	೩	೩	೨	೫	–	–	–	೬	೫	೧೧
೪	ಚಿಕ್ಕಮಗಳೂರು – ೨	೩೪	೩೩	೧೬	೪೯	೧೮	೨೬	೪೪	೧೬	೨೧	೩೭	೨೫	೨೭	೫೨	೩	೫	೮	೯೫	೯೫	೧೯೦
	ಒಟ್ಟು	೪೨	೩೫	೧೮	೫೩	೨೫	೩೩	೫೮	೧೮	೨೬	೪೪	೩೨	೩೨	೬೪	೩	೫	೮	೧೧೩	೧೧೪	೨೨೭

ಜನಸಂಖ್ಯೆ ಮಾಹಿತಿ ಕೋಷ್ಟಕ – ೪

ಮೂಡಿಗೆರೆ ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಮತ್ತು ಲಿಂಗವಾರು ವಯೋಗುಂಪು

ಕ್ರಸಂ	ಗ್ರಾಮ	ಒಟ್ಟು ಕುಟುಂಬಗಳು	ವಯೋಗುಂಪು: ೦ – ೧೪			೧೫ – ೨೯			೩೦ – ೪೪			೪೫ – ೫೯			೬೦ ಮೇಲ್ಪಟ್ಟು			ಒಟ್ಟು ಜನಸಂಖ್ಯೆ		
			ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ
೧	ಆಲ್ದೂರು	೪೨	೧೩	೨೧	೩೪	೧೮	೧೯	೩೭	೪೧	೪೩	೮೪	೭	೯	೧೬	೫	೭	೧೨	೮೭	೯೬	೧೮೩
೨	ಹಲಸಿನಮನೆ	೪	೫	೨	೭	೧	೧	೨	೨	೩	೫	–	೨	೨	೧	–	೧	೯	೮	೧೭
೩	ಜನ್ನಾಪುರ	೭	೨	೩	೫	೧	೫	೬	೨	೬	೮	೧	೨	೩	೧	೧	೨	೭	೧೭	೨೪
೪	ತೋರಣಮಾವು	೨೦	೬	೫	೧೧	೧೨	೮	೨೦	೧೭	೧೬	೩೩	೭	೧೫	೨೨	೧	೩	೪	೪೩	೪೭	೯೦
೫	ಮಡೇನೇರಲು	೧೯	೫	೭	೧೨	೧೩	೧೧	೨೪	೧೨	೧೨	೨೪	೨	೩	೫	೧	೩	೪	೩೩	೩೬	೬೯
೬	ಮೂಡಿಗೆರೆ	೧	–	–	–	–	–	–	೧	೧	೨	೧	೧	೨	–	೧	೧	೨	೩	೫
೭	ದಾಸರಹಳ್ಳಿ	೪	೩	೧	೪	೪	೨	೬	೩	೩	೬	೨	೨	೪	೧	–	೧	೧೩	೮	೨೧
೮	ಬಣಕಲ್	೩	೧	೨	೩	೧	೨	೩	೨	೨	೪	೧	೨	೩	೧	೧	೨	೬	೯	೧೫
೯	ಗುಡ್ಡಟ್ಟಿ	೨	೧	೧	೨	೧	೧	೨	–	೧	೧	೧	೧	೨	೧	೧	೨	೪	೫	೯
೧೦	ಬಿಳಗುಳ	೭	೨	೨	೪	೫	೭	೧೨	೩	೪	೭	೧	೨	೩	೨	೧	೩	೧೩	೧೬	೨೯
೧೧	ಬಾನಳ್ಳಿ	೧೦	೩	೩	೬	೭	೫	೧೨	೧೦	೧೨	೨೨	೪	೧	೫	೨	೨	೪	೨೬	೨೩	೪೯
೧೨	ಬಿಳಗುಳ ಆಶ್ರಯಕಾಲೋನಿ	೪	೧	೧	೨	೧	೩	೪	೧	೨	೩	೧	೧	೨	೧	೧	೨	೫	೮	೧೩
	ಒಟ್ಟು	೧೨೩	೪೨	೪೮	೯೦	೬೪	೬೪	೧೨೮	೯೪	೧೦೫	೧೯೯	೨೮	೪೧	೬೯	೧೭	೨೧	೩೮	೨೪೮	೨೭೬	೫೨೪

ಜನಸಂಖ್ಯೆ ಮಾಹಿತಿ ಕೋಷ್ಟಕ – ೪

ನರಸಿಂಹರಾಜಪುರ ತಾಲೂಕಿನ ಮೇದ ಸಮುದಾಯದ ಗ್ರಾಮವಾರು ಮತ್ತು ಲಿಂಗವಾರು ವಯೋಗುಂಪು

ಕ್ರಸಂ	ಗ್ರಾಮ	ಒಟ್ಟು ಕುಟುಂಬಗಳು	ವಯೋಗುಂಪು																	
			೦ – ೧೪			೧೫ – ೨೯			೩೦ – ೪೪			೪೫ – ೫೯			೬೦ ಮೇಲ್ಪಟ್ಟು			ಒಟ್ಟು ಜನಸಂಖ್ಯೆ		
			ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ
೧	ನರಸಿಂಹರಾಜಪುರ	೪೯	೨೧	೧೪	೩೫	೫೨	೫೧	೧೦೩	೨೭	೨೯	೫೬	೮	೬	೧೪	೩	೩	೬	೧೧೧	೧೦೩	೨೧೪
೨	ತೆಟ್ಟಿಕೊಪ್ಪ	೨	೧	೩	೪	೧	–	೧	೧	೩	೪	೧	–	೧	–	–	–	೪	೬	೧೦
೩	ಲಿಂಗಾಪುರ	೩	–	೧	೧	೪	೨	೬	೧	೧	೨	೨	–	೨	–	–	–	೭	೪	೧೧
೪	ಬಾಳೆಹೊನ್ನೂರು – ೧	೫	೧	೨	೩	೨	೪	೬	೨	೪	೬	೪	೧	೫	–	–	–	೯	೧೧	೨೦
೫	ಬಾಳೆಹೊನ್ನೂರು – ೨	೩	–	–	–	೪	೨	೬	೨	೨	೪	–	೧	೧	೨	೧	೩	೮	೭	೧೫
	ಒಟ್ಟು	೬೨	೨೩	೨೦	೪೩	೬೩	೫೯	೧೨೨	೩೩	೩೯	೭೨	೧೫	೮	೨೩	೫	೪	೯	೧೩೯	೧೩೧	೨೭೦

ಚಿಕ್ಕಮಗಳೂರು ಜಿಲ್ಲಾ ವಿವಿಧ ತಾಲ್ಲೂಕುಗಳ ಶಿಕ್ಷಣದ ಶೇಕಡಾವಾರು ಮಾಹಿತಿ ಕೋಷ್ಟಕ – ೫

ಕ್ರಸಂ	ತಾಲ್ಲೂಕು	ಜನಸಂಖ್ಯೆ	೧–೭	೮–೧೦	೧೧–೧೨	ಪದವಿ	ಸ್ನಾತಕೋತ್ತರ ಪದವಿ	ಇತರೆ	ಒಟ್ಟು
೧	ತರೀಕೆರೆ	೮೨೭	೧೫೫ ೧೮.೭೪%	೧೩೯ ೧೬.೮೦%	೪೪ ೫.೩೨%	೧೪ ೧.೬೯%	೧ ೦.೧೨%	೨೬ ೩.೧೪%	೩೭೯ ೪೫.೮೨%
೨	ಚಿಕ್ಕಮಗಳೂರು	೨೦೭	೨೪ ೧೧.೫೯%	೩೮ ೧೮.೩೫%	೨೨ ೧೦.೬೨%	೭ ೩.೩೮%	–	೫ ೨.೪೧%	೯೬ ೪೬.೩೭%
೩	ಮೂಡಿಗೆರೆ	೫೨೪	೧೪೩ ೨೭.೨೯%	೮೩ ೧೫.೮೩%	೩೬ ೬.೮೭%	೧೫ ೨.೮೬%	೭ ೧.೩೩%	೩ ೦.೫೭%	೨೮೭ ೫೪.೭೭%
೪	ನರಸಿಂಹರಾಜಪುರ	೨೭೦	೯೧ ೩೩.೭೦%	೫೫ ೨೦.೩೭%	೨೮ ೧೦.೩೭%	೮ ೨.೯೬%	೩ ೧.೧೧%	೪ ೧.೪೮%	೧೮೯ ೭೦%
ಒಟ್ಟು		೧೮೨೮	೪೧೩ ೨೨.೫೯%	೩೧೫ ೧೭.೨೩%	೧೩೦ ೭.೧೧%	೪೪ ೨.೪೦%	೧೧ ೦.೬೦%	೩೮ ೨.೦೭%	೯೫೧ ೫೨.೦೨%

ತರೀಕೆರೆ ತಾಲ್ಲೂಕಿನ ಮೇದ ಸಮುದಾಯದ ಗ್ರಾಮವಾರು ವೃತ್ತಿ ಮತ್ತು ಶೈಕ್ಷಣಿಕ ಮಾಹಿತಿ ಕೋಷ್ಟಕ - ೬

ಕ್ರ ಸಂ	ಗ್ರಾಮ	ಕುಟುಂಬಗಳ ಸಂಖ್ಯೆ	ಅಕ್ಷರಸ್ಥರು/ಅನಕ್ಷರಸ್ಥರು						ವೃತ್ತಿ				ಒಟ್ಟು ಜನಸಂಖ್ಯೆ				ಶೈಕ್ಷಣಿಕ ಮಟ್ಟ																			
			ಗಂಡು		ಹೆಣ್ಣು		ಮಗು ೦-೫		ಕುಲಕಸುಬು	ಕೃಷಿ	ಇತರೆ	ಓದು	ಗ	ಹೆ	ಒ	ವಿಧವೆ	೧ರಿಂದ೭		೮ರಿಂದ೧೦		೧೧ರಿಂದ೧೨		ಪದವಿ		ಸ್ನಾತಕೋತ್ತರ		ಎಂ ಬಿ ಎ		ಎಂ ಬಿ ಬಿ		ಎಂ ಟೆಕ್		ಡಿಪ್ಲೋಮ		ಟಿಸಿಹೆಚ್	
			ಅಕ್ಷರಸ್ಥ	ಅನಕ್ಷರಸ್ಥ	ಅಕ್ಷರಸ್ಥ	ಅನಕ್ಷರಸ್ಥ	ಗ	ಹೆ									ಗ	ಹೆ	ಗ	ಹೆ	ಗ	ಹೆ	ಗ	ಹೆ	ಗ	ಹೆ	ಗ	ಹೆ	ಗ	ಹೆ	ಗ	ಹೆ	ಗ	ಹೆ	ಗ	ಹೆ
೧	ತರೀಕೆರೆ (ತಿಮ್ಮಯ್ಯನಬೀದಿ)	೧೫	೨೨	೫	೧೫	೭	೫	೪	೪೯	೨	೫	೩೯	೩೦	೨೮	೫೮	-	೧೨	೮	೭	೨	೨	೪	೧	-	-	-	-	-	-	-	-	-	-	-	-	೧
೨	ಜಯಪುರ (ತಣಿಗೆಬೈಲು)	೭	೧೧	೨	೮	೪	೨	೪	೨೯	೧	೩	೬	೧೬	೧೫	೩೧	-	೨	೪	೭	೪	೨	-	-	-	-	-	-	-	-	-	-	-	-	-	-	-
೩	ರಂಗೇನಹಳ್ಳಿ	೧	೨	-	೨	-	-	-	೨	-	೨	೧	೨	೨	೪	-	೧	೧	೧	೧	-	-	-	-	-	-	-	-	-	-	-	-	-	-	-	-
೪	ಅಜ್ಜಂಪುರ	೧೦	೨೧	೭	೧೬	೮	೩	೨	೫೭	೨	೩	೧೨	೩೩	೨೪	೫೭	-	೧೫	೩	೩	೨	೨	೨	-	-	-	-	-	-	-	-	-	-	-	-	-	-
೫	ಮಂಡರವಳ್ಳಿ	೨	೩	-	೩	-	೨	೨	೮	-	೧	೧	೪	೬	೧೦	-	೧	೧	೨	೧	-	೧	-	-	-	-	-	-	-	-	-	-	-	-	-	-
೬	ಬಾವಿಕೆರೆ	೧	೧	-	೨	-	-	-	೨	-	-	೧	೨	೧	೩	-	೧	೨	-	೧	-	-	-	-	-	-	-	-	-	-	-	-	-	-	-	-
೭	ಲಕ್ಕವಳ್ಳಿ	೧೭	೨೩	೮	೨೭	೭	೩	೩	೬೭	-	೬	೧೬	೩೪	೩೭	೭೧	-	೧೧	೨	೧೦	೨	೨	೨	-	-	-	-	-	೧	-	-	-	-	-	-	-	೧
೮	ಎ. ರಂಗಾಪುರ	೧೨	೩೩	೧೦	೩೧	೧೦	೧೫	೮	೧೦೭	-	೨	೧೩	೫೮	೪೯	೧೦೭	-	೧೭	೧೩	೧೬	೧೩	-	೨	-	೧	-	-	-	-	-	-	-	-	-	-	-	೩
೯	ಕೋಡಿಕ್ಯಾಂಪ್	೩೨	೬೧	೩೩	೬೩	೨೩	೧೮	೧೩	೧೯೮	-	೪	೪೧	೧೧೨	೯೯	೨೧೧	೩	೧೮	೪	೨೬	೪	೧೧	೨	೪	೨	-	-	-	-	-	-	-	-	-	-	೨	-
೧೦	ಉಪ್ಪಾರ ಬೀರನಹಳ್ಳಿ	೪೪	೯೫	೪೩	೬೮	೪೫	೪	೨೦	೨೧೭	-	೫	೭೩	೧೪೨	೧೩೩	೨೭೫	-	೩೧	೮	೨೯	೮	೧೧	೨	೮	೨	-	-	-	-	-	-	-	-	-	-	೧೬	-
	ಒಟ್ಟು	೧೪೧	೨೭೨	೧೦೮	೨೩೫	೧೦೪	೫೨	೫೬	೭೩೬	೫	೩೧	೨೦೩	೪೩೩	೩೯೪	೮೨೭	೩	೧೦೯	೪೬	೧೦೧	೩೮	೩೦	೧೫	೧೩	೫	-	-	-	೧	-	-	-	-	-	-	೧೮	೫

ಚಿಕ್ಕಮಗಳೂರು ತಾಲ್ಲೂಕಿನ ಮೇದ ಸಮುದಾಯದ ಗ್ರಾಮವಾರು ವೃತ್ತಿ ಮತ್ತು ಶೈಕ್ಷಣಿಕ ಮಾಹಿತಿ ಕೋಷ್ಟಕ - ೬

ಕ್ರ ಸಂ	ಗ್ರಾಮ	ಕುಟುಂಬಗಳ ಸಂಖ್ಯೆ	ಅಕ್ಷರಸ್ಥರು/ಅನಕ್ಷರಸ್ಥರು						ವೃತ್ತಿ				ಒಟ್ಟು ಜನಸಂಖ್ಯೆ				ಶೈಕ್ಷಣಿಕ ಮಟ್ಟ																			
			ಗಂಡು		ಹೆಣ್ಣು		ಮಗು ೦-೫										೧ರಿಂದ೭		೮ರಿಂದ೧೦		೧೧ರಿಂದ೧		ಪದವಿ		ಸ್ನಾತಕೆ		ಎಂ ಬಿ		ಎಂ ಬಿ		ಎಂ		ಡಿಪ್ಲೋ		ಟಿಹೆಚ್	
			ಅಕ್ಷರಸ್ಥರು	ಅನಕ್ಷರಸ್ಥರು	ಅಕ್ಷರಸ್ಥರು	ಅನಕ್ಷರಸ್ಥರು	ಗ	ಹೆ	ಕೂಲಿಕೆಲಸ	ನೌಕರಿ	ಇತರೆ	ಓದು	ಗ	ಹೆ	ಒ	ಲಿಂಗಾನು	ಗ	ಹೆ	ಗ	ಹೆ	ಗ	ಹೆ	ಗ	ಹೆ	ಗ	ಹೆ	ಗ	ಹೆ	ಗ	ಹೆ	ಗ	ಹೆ	ಗ	ಹೆ	ಗ	ಹೆ
೧	ಚಿಕ್ಕಮಗಳೂರು ಟೌನ್(ಕನ್ನಡ)	೫	೪	೪	೫	೬	೨	೨	೬	೫	೪	೮	೧೦	೧೩	೨೩	-	೨	-	೨	-	-	೧	-	೨	-	-	-	-	-	೧	-	-	-	-	-	೧
೨	ರಾಮನಹಳ್ಳಿ	೧	೨	-	೧	-	-	-	-	೧	೧	-	೨	೧	೩	-	-	-	೧	೧	-	-	೧	-	-	-	-	-	-	-	-	-		-	-	-
೩	ಅರಳುಗುಪ್ಪೆ	೨	೬	-	೫	-	-	-	೬	-	೩	-	೬	೫	೧೧	-	೩	೨	೨	೨	೧	೧	-	-	-	-	-	-	-	-	-	-	-	-	-	-
೪	ಚಿಕ್ಕಮಗಳೂರು ಟೌನ್ (ತೆಲುಗು)	೩೪	೩೭	೩೬	೨೯	೩೩	೧೩	೨೨	೧೩೬	೭	೧೮	೫೭	೮೬	೮೪	೧೭೦	೧	೬	೧೧	೧೯	೧೧	೭	೯	೨	೨	-	-	-	-	-	೧	-	-	೩	೨	-	-
	ಒಟ್ಟು	೪೨	೪೯	೪೦	೪೦	೩೯	೧೫	೨೪	೧೪೮	##	೨೬	೬೫	೧೦೪	೧೦೩	೨೦೭	೧	೧೧	೧೩	೨೪	೧೪	೮	೧೧	೩	೪	-	-	-	-	-	೨	-	-	೩	೨	-	೧

ಮೂಡಿಗೆರೆ ತಾಲ್ಲೂಕಿನ ಮೇದ ಸಮುದಾಯದ ಗ್ರಾಮವಾರು ವೃತ್ತಿ ಮತ್ತು ಶೈಕ್ಷಣಿಕ ಮಾಹಿತಿ ಕೋಷ್ಟಕ - ೬

ಕ್ರ ಸಂ	ಗ್ರಾಮ	ಕುಟುಂಬಗಳ ಸಂಖ್ಯೆ	ಅಕ್ಷರಸ್ಥರು/ಅನಕ್ಷರಸ್ಥರು ಗಂಡು ಅಕ್ಷರಸ್ಥ	ಗಂಡು ಅನಕ್ಷರಸ್ಥ	ಹೆಣ್ಣು ಅಕ್ಷರಸ್ಥ	ಹೆಣ್ಣು ಅನಕ್ಷರಸ್ಥ	ಮಗು ೦-೫ ಗ	ಮಗು ೦-೫ ಹೆ	ವೃತ್ತಿ ಕುಲಕಸುಬು	ಕೃಷಿ	ಇತರೆ	ಓದು	ಒಟ್ಟು ಜನಸಂಖ್ಯೆ ಗ	ಹೆ	ಒ	ಅಂಗ	ಶೈಕ್ಷಣಿಕ ಮಟ್ಟ ೧ರಿಂದ೭ ಗ	೧ರಿಂದ೭ ಹೆ	೮ರಿಂದ೧೦ ಗ	೮ರಿಂದ೧೦ ಹೆ	೧೧ರಿಂದ೧೨ ಗ	೧೧ರಿಂದ೧೨ ಹೆ	ಪದವಿ ಗ	ಪದವಿ ಹೆ	ಸ್ನಾತಕ ಗ	ಸ್ನಾತಕ ಹೆ	ಎಂ ಬಿ ಗ	ಎಂ ಬಿ ಹೆ	ಎಂ ಬಿ ಗ	ಎಂ ಬಿ ಹೆ	ಎಂ ಗ	ಎಂ ಹೆ	ಡಿಪ್ಲೋ ಗ	ಡಿಪ್ಲೋ ಹೆ	ಟಿಸಿಹೆಚ್ ಗ	ಟಿಸಿಹೆಚ್ ಹೆ
೧	ಆಲ್ದೂರು	೪೨	೬೪	೧೨	೫೭	೨೭	೮	೧೫	೧೭೦	##	೯	೭೮	೮೪	೯೯	೧೮೩	-	೩೩	೨೮	೧೮	೧೬	೭	೬	೩	೩	೩	೪	-	-	-	-	-	-	-	-	-	-
೨	ಹಲಸಿನಮನೆ	೪	೪	-	೪	೨	೫	೨	೧೬	೧	೨	೭	೯	೮	೧೭	-	೧	೨	೨	೧	೧	೧	-	-	-	-	-	-	-	-	-	-	-	-	-	-
೩	ಜನ್ನಾಪುರ	೭	೩	೨	೯	೫	೨	೩	೨೨	೨	೧	೮	೭	೧೭	೨೪	-	೨	೩	೧	೧	೧	೨	-	-	-	-	-	-	-	-	-	-	-	-	೩	-
೪	ತೋರಣಮಾವು	೨೦	೨೮	೧೧	೨೬	೧೮	೪	೩	೮೫	೪	೪	೩೩	೪೩	೪೭	೯೦	-	೧೭	೧೮	೬	೮	೪	೨	೧	-	-	-	-	-	-	-	-	-	-	-	-	-
೫	ಮಡೇನೇರಲು	೧೯	೨೧	೮	೧೫	೧೫	೪	೬	೬೭	೨	೧	೨೧	೩೩	೩೬	೬೯	-	೯	೪	೮	೩	೧	೧	೩	-	-	-	-	-	-	-	-	-	-	-	-	-
೬	ಮೂಡಿಗೆರೆ	೧	೨	-	೩	-	-	-	-	೧	೨	-	೨	೩	೫	-	-	-	-	೧	-	೨	೨	-	-	-	-	-	-	-	-	-	-	-	-	-
೭	ದಾಸರಹಳ್ಳಿ	೪	೪	೬	೩	೪	೩	೧	೨೦	೧	-	೫	೧೩	೮	೨೧	-	೨	೩	೨	೨	-	೧	-	-	-	-	-	-	-	-	-	-	-	-	-	-
೮	ಬಾಣಕಲ್	೩	೨	೩	೨	೫	೧	೨	೧೫	೨	೪	೩	೬	೯	೧೫	-	೧	೧	೧	೧	-	೧	-	-	-	-	-	-	-	-	-	-	-	-	-	-
೯	ಗುಡ್ಡಟ್ಟಿ	೨	೧	೨	೧	೩	೧	೧	೬	೧	೨	೨	೪	೫	೯	-	-	೧	-	೧	-	-	೧	-	-	-	-	-	-	-	-	-	-	-	-	-
೧೦	ಬಿಳಗುಳ	೭	೮	೩	೬	೮	೨	೨	೨೯	-	೨	೭	೧೩	೧೬	೨೯	೨	೫	೨	೨	೧	೧	-	-	-	-	-	-	-	-	-	-	-	-	-	-	-
೧೧	ಬಾನಳ್ಳಿ	೧೦	೧೭	೬	೧೨	೮	೩	೩	೪೪	೨	೩	೧೩	೨೬	೨೩	೪೯	-	೫	೩	೭	೧	೪	೧	೧	೧	-	-	-	-	-	-	-	-	-	-	-	-
೧೨	ಬಿಳಗುಳ ಆಶ್ರಯಕಾಲೋನಿ	೪	೩	೧	೫	೨	೧	೧	೧೩	-	೩	೩	೫	೮	೧೩	-	೨	೧	೧	-	-	-	-	-	-	-	-	-	-	-	-	-	-	-	-	-
	ಒಟ್ಟು	೧೨೩	೧೫೭	೫೪	೧೪೩	೯೭	೩೪	೩೯	೪೮೭	##	೩೩	೧೮೦	೨೪೫	೨೭೯	೫೨೪	೨	೭೭	೬೬	೪೮	೩೬	೧೯	೧೭	೧೧	೪	-	-	-	-	-	-	-	-	-	-	೩	-

ನರಸಿಂಹರಾಜಪುರ ತಾಲ್ಲೂಕಿನ ಮೇದ ಸಮುದಾಯದ ಗ್ರಾಮವಾರು ವೃತ್ತಿ ಮತ್ತು ಶೈಕ್ಷಣಿಕ ಮಾಹಿತಿ ಕೋಷ್ಟಕ - ೬

ಕ್ರ ಸಂ	ಗ್ರಾಮ	ಕುಟುಂಬಗಳ ಸಂಖ್ಯೆ	ಅಕ್ಷರಸ್ಥರು/ಅನಕ್ಷರಸ್ಥರು						ವೃತ್ತಿ				ಒಟ್ಟು ಜನಸಂಖ್ಯೆ				ಶೈಕ್ಷಣಿಕ ಮಟ್ಟ																			
			ಗಂಡು		ಹೆಣ್ಣು		ಮಗು ೦-೫										೧ರಿಂದ೭		೮ರಿಂದ೧೦		೧೧ರಿಂದ೧		ಪದವಿ		ಸ್ನಾತಕೆ		ಇತರೆ		ಎಂ ಬಿ		ಎಂ		ಡಿಪ್ಲೋ		ಟಿಸಿಹೆಚ್	
			ಅಕ್ಷರಸ್ಥ	ಅನಕ್ಷರಸ್ಥ	ಅಕ್ಷರಸ್ಥ	ಅನಕ್ಷರಸ್ಥ	ಗ	ಹೆ	ಕುಲಕಸುಬು	ಕೃಷಿ	ಇತರೆ	ಓದು	ಗ	ಹೆ	ಒ	ಅಂಗವಿ	ಗ	ಹೆ	ಗ	ಹೆ	ಗ	ಹೆ	ಗ	ಹೆ	ಗ	ಹೆ	ಗ	ಹೆ	ಗ	ಹೆ	ಗ	ಹೆ	ಗ	ಹೆ	ಗ	ಹೆ
೧	ನರಸಿಂಹರಾಜಪುರ	೪೯	೭೩	೧೯	೬೫	೧೭	೧೯	೧೧	೨೦೨	##	೧೨	೨೩	೧೧೧	೧೦೩	೨೧೪	-	೨೮	೪೦	೧೯	೨೭	೧೬	೯	೩	೪	೩	-	೪	-	-	-	-	-	-	-	-	-
೨	ಶೆಟ್ಟಿಕೊಪ್ಪ	೨	೪	-	೬	-	-	-	೧೦	-	೨	೪	೪	೬	೧೦	-	೨	೪	-	೨	೧	-	೧	-	-	-	-	-	-	-	-	-	-	-	-	-
೩	ಲಿಂಗಾಪುರ	೩	೪	೩	೩	೧	-	-	೧೧	-	-	೨	೭	೪	೧೧	-	೨	೩	೧	-	೧	-	-	-	-	-	-	-	-	-	-	-	-	-	-	-
೪	ಬಾಳೆಹೊನ್ನೂರು (ತೆಲುಗು)	೫	೭	೨	೯	೩	-	-	೨೦	-	೨	೩	೯	೧೧	೨೦	-	೪	೧	೩	-	-	೧	-	-	-	-	-	-	-	-	-	-	-	-	-	-
೫	ಬಾಳೆಹೊನ್ನೂರು (ಮಲೆಯಾಳಿ ಭಾಷೆ)	೩	೫	೩	೫	೨	-	-	-	-	೧೫	-	೮	೭	೧೫	-	೨	೫	೩	-	-	-	-	-	-	-	-	-	-	-	-	-	-	-	-	-
	ಒಟ್ಟು	೬೨	೯೩	೨೭	೮೮	೨೩	೧೯	೧೧	೨೪೩	##	೩೧	೩೨	೧೩೯	೧೩೧	೨೭೦	೦	೩೮	೫೩	೨೬	೨೯	೧೮	೧೦	೪	೪	-	-	೪	-	-	-	-	-	-	-	-	-

ತರೀಕೆರೆ ತಾಲ್ಲೂಕಿನ ಮೇದ ಬುಡಕಟ್ಟಿನ ಕುಟುಂಬವಾರು ಪಶುಸಂಪತ್ತು, ಮನೆಗಳ ಮಾದರಿ, ಮನೆ, ನಿವೇಶನ, ಸೌಲಭ್ಯಗಳ ಮಾಹಿತಿ ಕೋಷ್ಟಕ – ೭

ಕ್ರ.ಸಂ	ನೆಲೆಗಳು	ಕುಟುಂಬ	ಪಶು ಸಂಪತ್ತು						ಮನೆಗಳ ಮಾದರಿ						ನಿವೇಶನ		ಮನೆ		ಸೌಲಭ್ಯಗಳು				
			ಎತ್ತು	ಹಸು	ಎಮ್ಮೆ	ಕೋಳಿ	ಕುರಿ	ಆಡು	ಗುಡಾರ	ಗುಡಿಸಲು	ಹೆಂಚು	ಜನತಾ	ಬಾಡಿಗೆ	ಆರ್.ಸಿ.ಸಿ	ಸ್ವಂತದ್ದು	ಸರ್ಕಾರದ್ದು	ಸ್ವಂತದ್ದು	ಸರ್ಕಾರದ್ದು	ರೇಷನ್‌ಕಾರ್ಡ್	ವಿಧವಾ	ಅಂಗವಿಕಲ	ವೃದ್ಧಾಪ್ಯ	ವಿದ್ಯುದ್ದೀಪ
೧	ತರೀಕೆರೆ	೧೫	೪	೨	೩	೧೫	೩	೨	೧	೧	೧೧	೧	೧	೧	–	೧	–	೧	೧೩	೨	–	೨	೩೭
೨	ಜಯಪುರ	೭	೬	೮	೪	೭	–	೮	೩	೨	೨	–	–	–	–	–	–	–	೧೧	೧	–	೩	೫
೩	ರಂಗೇನಹಳ್ಳಿ	೧	–	೧	–	೩	–	–	–	–	೧	–	–	–	೧	–	–	–	೨	–	–	–	೧
೪	ಅಜ್ಜಂಪುರ	೧೦	೨	೨	–	–	–	–	–	–	೭	೧	೨	–	–	೧	೭	೧	೧೭	–	–	೪	–
೫	ಮಂಡರವಳ್ಳಿ	೨	೨	೬	–	೧೨	–	–	–	–	೨	–	–	–	–	೧	–	೧	೭	೧	–	–	೧
೬	ಬಾವಿಕೆರೆ	೧	–	೧	–	೫	–	–	–	–	೧	–	–	–	–	–	–	–	೨	–	–	–	೧
೭	ಲಕ್ಕವಳ್ಳಿ	೧೭	೬	೧೭	–	೧೦	–	–	–	–	೪	೧೩	–	–	೪	೧೩	೪	೧೩	೧೯	೩	೧	೧	೧೫
೮	ಎ. ರಂಗಾಪುರ	೧೨	–	೨	೨	೧೨	–	–	೩	–	೨೩	೩	೩	–	೨೬	೩	೨೩	೩	೬೪	೮	೧	೪	೩೮
೯	ಕೋಡಿಕ್ಯಾಂಪ್	೩೨	–	೪	೧	೨೫	–	–	೩	–	೨೩	೩	೩	–	೨೬	೩	೨೩	೩	೬೪	೮	೧	೪	೬೯
೧೦	ಉಪ್ಪಾರ ಬೀರನಹಳ್ಳಿ	೪೪	೮	೩೦	೧೫	೪೦	೧೨	೧೦	೭	೩	೩೦	೪	–	–	೪	೪	೪೦	೪	೧೦೩	೧೧	೨	೪	೬೯
ಒಟ್ಟು		**೧೪೧**	**೨೮**	**೭೩**	**೨೫**	**೧೨೯**	**೧೫**	**೨೦**	**೧೭**	**೬**	**೧೦೪**	**೨೫**	**೯**	**೧**	**೬೧**	**೨೬**	**೯೭**	**೨೬**	**೩೦೨**	**೩೪**	**೫**	**೨೨**	**೨೩೬**

ಚಿಕ್ಕಮಗಳೂರು ತಾಲ್ಲೂಕಿನ ಮೇದ ಬುಡಕಟ್ಟಿನ ಕುಟುಂಬವಾರು ಪಶುಸಂಪತ್ತು, ಮನೆಗಳ ಮಾದರಿ, ಮನೆ, ನಿವೇಶನ, ಸೌಲಭ್ಯಗಳ ಮಾಹಿತಿ ಕೋಷ್ಟಕ – ೭																							
ಕ್ರ.ಸಂ	ನೆಲೆಗಳು	ಕುಟುಂಬ	ಪಶು ಸಂಪತ್ತು						ಮನೆಗಳ ಮಾದರಿ						ನಿವೇಶನ		ಮನೆ		ಸೌಲಭ್ಯಗಳು				
			ಎತ್ತು	ಆಕಳು	ಎಮ್ಮೆ	ಕೋಳಿ	ಕುರಿ	ಆಡು	ಗುಡಾರ	ಗುಡಿಸಲು	ಹೆಂಚು	ಜನತಾ	ಬಾಡಿಗೆ	ಆರ್.ಸಿ.ಸಿ	ಸ್ವಂತದ್ದು	ಸರ್ಕಾರದ್ದು	ಸ್ವಂತದ್ದು	ಸರ್ಕಾರದ್ದು	ಓಟಿನಕಾರ್ಡ	ವಿದವಾ	ಅಂಗವಿಕಲ	ವೃಧ್ಧಾಪ್ಯ	ಶಿಷ್ಯವೇತನ
೧	ಚಿಕ್ಕಮಗಳೂರು (ಕನ್ನಡ ಭಾಷಿಕ)	೫	–	–	–	೫	–	–	–	–	೪	–	–	೧	೨	–	೫	–	೧೭	–	–	–	೮
೨	ರಾಮನಹಳ್ಳಿ	೧	೨	೧	–	೧೦	–	–	–	–	೧	–	–	–	೧	–	೧	–	೩	–	–	–	–
೩.	ಅರಳುಗುಪ್ಪೆ	೨	೨	೪	೨	೧೨	–	–	–	–	೨	–	–	–	–	–	೨	–	೧೧	–	–	–	–
೪	ಚಿಕ್ಕಮಗಳೂರು (ತೆಲುಗು ಭಾಷಿಕ)	೩೪	೪	೬	೪	೪	–	–	–	–	೨೫	೪	೨	೩	೪	೬	೨೫	೪	೧೪೨	೩	–	೫	೫೭
	ಒಟ್ಟು	**೪೨**	**೮**	**೧೧**	**೬**	**೩೧**	**೦**	**೦**	**೦**	**೦**	**೩೨**	**೪**	**೨**	**೪**	**೭**	**೬**	**೩೩**	**೪**	**೧೭೩**	**೩**	**೦**	**೫**	**೬೪**

ಕ್ರ.ಸಂ	ನೆಲೆಗಳು	ಕುಟುಂಬ	ಪಶು ಸಂಪತ್ತು						ಮನೆಗಳ ಮಾದರಿ						ನಿವೇಶನ		ಮನೆ		ಸೌಲಭ್ಯಗಳು				
			ಎತ್ತು	ಆಕಳು	ಎಮ್ಮೆ	ಕೋಳಿ	ಕುರಿ	ಆಡು	ಗುಡಾರ	ಗುಡಿಸಲು	ಹೆಂಚು	ಜನತಾ	ಬಾಡಿಗೆ	ಆರ್.ಸಿ.ಸಿ	ಸ್ವಂತದ್ದು	ಸರ್ಕಾರದ್ದು	ಸ್ವಂತದ್ದು	ಸರ್ಕಾರದ್ದು	ರೇಷನಕಾರ್ಡ	ಪಡದಾ	ಅಂಗವಿಕಲ	ಡ್ರಾಸ್ಟೌ	ಟೆಲಿವಿಶನ
೧	ಆಲ್ದೂರು	೪೨	೧೦	೧೫	೩	೪೫	–	೫	–	–	೩೬	೩	೨	೧	೪	೬	೩೯	೩	೩೭	೩	೧	೧೨	೬೮
೨	ಹಲಸಿನಮನೆ	೪	೨	೨	–	೬	–	–	–	–	೨	೨	–	–	–	–	೨	೨	೮	–	–	೧	೮
೩	ಜನ್ನಾಪುರ	೭	೨	೬	೧	೧೫	–	–	–	–	೩	೨	–	೨	–	–	೫	೨	೧೬	–	–	೨	೮
೪	ತೋರಣಮಾವು	೨೦	೧೨	೩೦	೫	೭೫	–	–	–	–	೧೫	೫	–	–	–	–	೧೫	೫	೭೨	೬	೧	೪	೩೧
೫	ಮಡೇನೇರಲು	೧೯	೮	೩೦	೪	೧೦೦	–	–	–	–	೧೧	೮	–	–	–	೨	೧೧	೮	೫೪	೬	೧	೪	೨೦
೬	ಮೂಡಿಗೆರೆ	೧	–	–	–	–	–	–	–	–	೧	–	–	–	–	೧	೧	–	೫	–	–	೧	–
೭	ದಾಸರಹಳ್ಳಿ	೪	–	೨	–	೮	–	–	–	–	೨	೨	–	–	೧	೧	೨	೨	೧೫	–	–	೧	೩
೮	ಬಣಕಲ್	೩	–	–	–	೬	–	–	–	–	೨	–	–	೧	–	೧	೩	–	೧೧	–	–	–	೨
೯	ಗುಡ್ಡಟ್ಟಿ	೨	೨	೬	೨	೨	–	–	–	–	೧	–	–	೧	೧	೧	೧	೧	೭	೧	–	೭	೬
೧೦	ಬಿಳಗುಳ	೭	–	೨	–	೧೦	–	–	–	–	೮	೨	–	–	೧	೩	೮	೨	೨೩	೨	–	೭	೬
೧೧	ಬಾನಳ್ಳಿ	೧೦	೪	೮	೨	೧೫	–	–	–	–	೭	೩	–	–	೨	೩	೭	೩	೪೨	೧	–	೩	೯
೧೨	ಬಿಳಗುಳ (ಆಶ್ರಯಕಾಲೋನಿ)	೪	–	–	–	೧೫	–	–	–	–	–	೪	–	–	–	–	–	೪	೧೧	೧	–	೧	೩
	ಒಟ್ಟು	೧೨೩	೩೪	೮೩	೧೩	೨೪೧	೦	೫	೦	೦	೬೭	೨೦	೨	೩	೪	೬	೯೪	೨೦	೩೦೧	೯	೨	೨೫	೧೩೫

Table caption: ಮೂಡಿಗೆರೆ ತಾಲ್ಲೂಕಿನ ಮೇದ ಬುಡಕಟ್ಟಿನ ಕುಟುಂಬವಾರು ಪಶುಸಂಪತ್ತು, ಮನೆಗಳ ಮಾದರಿ, ಮನೆ, ನಿವೇಶನ, ಸೌಲಭ್ಯಗಳ ಮಾಹಿತಿ ಕೋಷ್ಟಕ – ೭

ನರಸಿಂಹರಾಜಪುರ ತಾಲ್ಲೂಕಿನ ಮೇದ ಬುಡಕಟ್ಟಿನ ಕುಟುಂಬವಾರು ಪಶುಸಂಪತ್ತು, ಮನೆಗಳ ಮಾದರಿ, ಮನೆ, ನಿವೇಶನ, ಸೌಲಭ್ಯಗಳ ಮಾಹಿತಿ ಕೋಷ್ಟಕ – ೭

ಕ್ರ.ಸಂ	ನೆಲೆಗಳು	ಕುಟುಂಬ	ಪಶು ಸಂಪತ್ತು						ಮನೆಗಳ ಮಾದರಿ						ನಿವೇಶನ		ಮನೆ		ಸೌಲಭ್ಯಗಳು				
			ಎತ್ತು	ಆಕಳು	ಎಮ್ಮೆ	ಕೋಳಿ	ಕುರಿ	ಆಡು	ಗುಡಾರ	ಗುಡಿಸಲು	ಹೆಂಚು	ಜನತಾ	ಬಾಡಿಗೆ	ಆರ್.ಸಿ.ಸಿ	ಸ್ವಂತದ್ದು	ಸರ್ಕಾರದ್ದು	ಸ್ವಂತದ್ದು	ಸರ್ಕಾರದ್ದು	ಓಟಿನಕಾರ್ಡ	ವಿದವಾ	ಅಂಗವಿಕಲ	ವೃಧ್ಧಾಪ್ಯ	ಶಿಷ್ಯವೇತನ
೧	ನರಸಿಂಹರಾಜಪುರ	೪೯	೧೮	೧೨	–	೧೨೦	–	೧೫	–	–	೪೫	೭	–	೪	೨	೯	೪೦	೯	೧೮೦	೩	೧	೩	೨೩
೨	ಶೆಟ್ಟಿಕೊಪ್ಪ	೨	–	೭	–	೫	–	–	–	–	೧	೧	–	–	೧	೧	೧	೧	೬	–	–	–	೪
೩	ಲಿಂಗಾಪುರ	೩	–	–	–	೩	–	೨೧	–	–	–	೨	೧	–	–	–	–	೨	೯	–	–	–	೨
೪	ಬಾಳೆಹೊನ್ನೂರು (ತೆಲುಗು ಭಾಷಿಕರು)	೫	–	–	–	೨	–	–	–	–	೨	೨	೧	–	–	೧	೨	೨	೧೮	–	–	–	೩
೫	ಬಾಳೆಹೊನ್ನೂರು (ಮಲೆಯಾಳ ಭಾಷಿಕರು)	೩	–	–	–	೩	–	–	–	–	೩	–	–	–	–	–	೩	–	೧೫	–	–	–	–
	ಒಟ್ಟು	೬೨	೧೮	೧೯	೦	೧೩೩	೦	೩೬	೦	೦	೫೧	೧೨	೨	೪	೩	೧೧	೪೬	೧೪	೨೨೮	೩	೧	೩	೩೨

ತರೀಕರೆ ತಾಲೂಕಿನ ಮೇದ ಬುಡಕಟ್ಟಿನ ಭೂ ಹಿಡುವಳಿಗಳ ಮಾಹಿತಿ ಕೋಷ್ಟಕ – ೮

ಭೂಹಿಡುವಳಿಗಳು

ಕ್ರಸಂ	ನೆಲೆಗಳು	ಕುಟುಂಬ	೦ರಿಂದ೨ ಎಕರೆ	೨ಕ್ಕೂ ಹೆಚ್ಚು ೪ಕ್ಕೂ ಕಡಿಮೆ	೪ಕ್ಕೂ ಹೆಚ್ಚು ೬ಕ್ಕೂ ಕಡಿಮೆ	೬ಕ್ಕೂ ಹೆಚ್ಚು ೧೦ಕ್ಕೂ ಕಡಿಮೆ	೧೦ಕ್ಕೂ ಹೆಚ್ಚು ೧೫ಕ್ಕೂ ಕಡಿಮೆ	೧೫ಕ್ಕೂ ಹೆಚ್ಚು
೧	ತರೀಕರೆ (ತಿಮ್ಮಯ್ಯನಬೀದಿ)	೧೫	೨	–	–	–	–	–
೨	ಜಯಪುರ (ತನಿಗೆಬ್ಯೆಲು)	೭	೨	೧	–	–	–	–
೩	ರಂಗೇನಹಳ್ಳಿ	೧	–	–	–	–	–	–
೪	ಅಜ್ಜಂಪುರ	೧೦	೨	–	೧	–	–	–
೫	ಮಂಡರವಳ್ಳಿ	೨	–	೧	–	–	–	–
೬	ಬಾವಿಕೆರೆ	೧	೧	–	–	–	–	–
೭	ಲಕ್ಕವಳ್ಳಿ	೧೭	೨	೧	–	–	–	–
೮	ಎ. ರಂಗಾಪುರ	೧೨	೧	–	–	–	–	–
೯	ಕೋಡಿಕ್ಯಾಂಪ್	೩೨	೫	–	–	–	–	–
೧೦	ಉಪ್ಪಾರ ಬೀರನಹಳ್ಳಿ	೪೪	೬	–	–	–	–	–
	ಒಟ್ಟು	೧೪೧	೨೧	೩	೧	–	–	–

ಚಿಕ್ಕಮಗಳೂರು ತಾಲ್ಲೂಕಿನ ಮೇದ ಬುಡಕಟ್ಟಿನ ಭೂಹಿಡುವಳಿಗಳ ಮಾಹಿತಿ ಕೋಷ್ಟಕ – ೮

ಭೂಹಿಡುವಳಿಗಳು

ಕ್ರಸಂ	ನೆಲೆಗಳು	ಕುಟುಂಬ	೦ರಿಂದ೨ ಎಕರೆ	೨ಕ್ಕೂ ಹೆಚ್ಚು ೪ಕ್ಕೂ ಕಡಿಮೆ	೪ಕ್ಕೂ ಹೆಚ್ಚು ೬ಕ್ಕೂ ಕಡಿಮೆ	೬ಕ್ಕೂ ಹೆಚ್ಚು ೧೦ಕ್ಕೂ ಕಡಿಮೆ	೧೦ಕ್ಕೂ ಹೆಚ್ಚು ೧೫ಕ್ಕೂ ಕಡಿಮೆ	೧೫ಕ್ಕೂ ಹೆಚ್ಚು
೧	ಚಿಕ್ಕಮಗಳೂರು ಟೌನ್(ಕನ್ನಡ ಬಾಷಿಕರು)	೫	೧	–	–	–	–	–
೨	ರಾಮನಹಳ್ಳಿ	೧	–	೧	–	–	–	–
೩	ಅರಳುಗುಪ್ಪೆ	೨	೧	೧	–	–	–	–
೪	ಚಿಕ್ಕಮಗಳೂರು ಟೌನ್ (ತೆಲುಗು ಭಾಷಿಕರು)	೩೪	–	–	–	–	೧	–
	ಒಟ್ಟು	೪೨	೨	೨	–	–	೧	–

ಮೂಡಿಗೆರೆ ತಾಲ್ಲೂಕಿನ ಮೇದ ಬುಡಕಟ್ಟಿನ ಭೂಹಿಡುವಳಿಗಳ ಮಾಹಿತಿ ಕೋಷ್ಟಕ – ೮

ಭೂಹಿಡುವಳಿಗಳು

ಕ್ರಸಂ	ನೆಲೆಗಳು	ಕುಟುಂಬ	೦ರಿಂದ೨ ಎಕರೆ	೨ಕ್ಕೂ ಹೆಚ್ಚು ೪ಕ್ಕೂ ಕಡಿಮೆ	೪ಕ್ಕೂ ಹೆಚ್ಚು ೬ಕ್ಕೂ ಕಡಿಮೆ	೬ಕ್ಕೂ ಹೆಚ್ಚು ೧೦ಕ್ಕೂ ಕಡಿಮೆ	೧೦ಕ್ಕೂ ಹೆಚ್ಚು ೧೫ಕ್ಕೂ ಕಡಿಮೆ
೧	ಆಲ್ದೂರು	೪೨	೨೭	–	–	–	–

೨	ಹಲಸಿನಮನೆ	೪	೫	–	–	–	–
೩	ಜನ್ನಾಪುರ	೭	೫	–	–	–	–
೪	ತೋರಣಮಾವು	೨೦	೧೩	೩	–	–	–
೫	ಮಡೇನೇರಲು	೧೯	೧೫	೩	–	–	–
೬	ಮೂಡಿಗೆರೆ	೧	–	–	–	–	–
೭	ದಾಸರಹಳ್ಳಿ	೪	೨	–	–	–	–
೮	ಬಣಕಲ್	೩	–	–	–	–	–
೯	ಗುಡ್ಡಟ್ಟಿ	೨	೧	–	–	–	–
೧೦	ಬಿಳಗುಳ	೭	–	–	–	–	–
೧೧	ಬಾನಳ್ಳಿ	೧೦	೩	೨	–	–	–
೧೨	ಬಿಳಗೋಳ (ಆಶ್ರಯಕಾಲೋನಿ	೪	–		–	–	–
	ಒಟ್ಟು	೧೨೩	೭೧	೮	–	–	–

ನರಸಿಂಹರಾಜಪುರ ತಾಲ್ಲೂಕಿನ ಮೇದ ಬುಡಕಟ್ಟಿನ ಭೂಹಿಡುವಳಿಗಳ ಮಾಹಿತಿ ಕೋಷ್ಟಕ – ೮

ಭೂಹಿಡುವಳಿಗಳು

ಕ್ರಸಂ	ನೆಲೆಗಳು	ಕುಟುಂಬ	೦ರಿಂದ೨ ಎಕರೆ	೨ಕ್ಕೂ ಹೆಚ್ಚು ೪ಕ್ಕೂ ಕಡಿಮೆ	೪ಕ್ಕೂ ಹೆಚ್ಚು ೬ಕ್ಕೂ ಕಡಿಮೆ	೬ಕ್ಕೂ ಹೆಚ್ಚು ೧೦ಕ್ಕೂ ಕಡಿಮೆ	೧೦ಕ್ಕೂ ಹೆಚ್ಚು ೧೫ಕ್ಕೂ ಕಡಿಮೆ	೧೫ಕ್ಕೂ ಹೆಚ್ಚು
೧	ನರಸಿಂಹರಾಜಪುರ	೪೯	೨೬	–	೨	–	–	–
೨	ಶೆಟ್ಟಿಕೊಪ್ಪ	೨	–	೧	–	–	–	–
೩	ಲಿಂಗಾಪುರ	೩	–	–	–	–	–	–
೪	ಬಾಳೆಹೊನ್ನೂರು–೧	೫	೧	–	–	–	–	–
೫	ಬಾಳೆಹೊನ್ನೂರು–೨	೩	–	–	–	–	–	–
	ಒಟ್ಟು	೬೨	೨೭	೧	೨	–	–	–

ಚಿಕ್ಕಮಗಳೂರು ಜಿಲ್ಲೆ ತಾಲೂಕಾವಾರು ಸೂಚನಾದಾರರ ಮಾತೃಭಾಷೆಯ ಹಂಚಿಕೆಯ ವಿವರ ಕೋಷ್ಟಕ–೯

ಕ್ರಸಂ	ಮಾತೃಭಾಷೆ	ತರೀಕೆರೆ	ಚಿಕ್ಕಮಗಳೂರು	ಮೂಡಿಗೆರೆ	ನರಸಿಂಹರಾಜಪುರ	ಒಟ್ಟು ಮತ್ತು ಶೇಕಡಾವಾರು
೧	ಕನ್ನಡ	೨೩೪	೩೭	೩೯೩	೨೩೫	೮೯೯ ೪೯.೧೭%
೨	ತೆಲುಗು	೩೧೮	೧೭೦	೧೩೧	೨೦	೬೩೯ ೩೪.೯೫%
೩	ತಮಿಳು	೨೭೫	--	--	--	೨೭೫ ೧೫.೦೪%
೪	ಮಲೆಯಾಳಂ	--	--	--	೧೫	೧೫ ೦.೮೨%
	ಒಟ್ಟು	೮೨೭	೨೦೭	೫೨೪	೨೭೦	೧೮೨೮ ೧೦೦%

ಚಿಕ್ಕಮಗಳೂರು ಜಿಲ್ಲಾ ತಾಲೂಕುವಾರು ಮೇದರ ಕುಲ, ಬಳಿ, ಬೆಡಗುಗಳ ಮಾಹಿತಿ ಕೋಷ್ಟಕ–೧೦

ಕ್ರ ಸಂ	ತಾಲೂಕುಗಳು	ಕನ್ನಡ ಭಾಷಿಕ ಮೇದರು ಕುಲ, ಬೆಡಗು, ಬಳಿಗಳು	ತೆಲುಗು ಭಾಷಿಕ ಮೇದರು ಕುಲ, ಬೆಡಗು, ಬಳಿಗಳು	ತಮಿಳು ಭಾಷಿಕ ಮೇದರು ಕುಲ, ಬೆಡಗು, ಬಳಿಗಳು	ಮಲಯಾಳಿ ಭಾಷಿಕ ಮೇದರು ಕುಲ, ಬೆಡಗು, ಬಳಿಗಳು
೧	ತರೀಕೆರೆ	ಕಸ್ಲೆ, ಕುರುಬಗುಲ, ದವಳೆ, ಕಕ್ಕೆಕುಲ, ಉಡುಗುಲ, ಸತ್ತೆಕುಲ, ಹಾಲುಗುಲ, ಚಾಯಿನ್ನರು	ತಮಿಳೈನೆವಾಲು, ಕಣಿಗೆಳ್ಳೆನೆವಾಲು, ಮಿಥುಗವಾಲು, ಕಂಚಮೋಲು, ಎಕ್ಕಮೋಲು, ಬೋರುನವಾಲು, ಕಾಂಗೆವಾಲು, ಪಾಂತಕೊಟ್ಟವೊಲು, ಪೋತರವಾಲು, ಹೇರಕಂಕೇವಾಲು, ದಮನೆವಾಲು, ಪೊಂಬೀಡಿವಾಲು, ಪೋದಲವಾಲು, ಉರೇವಾಲು, ಕಂಚಂವಾಲು, ವಾಸಂವಾಲು	ಕೊರಮ್	---
೨	ಚಿಕ್ಕಮಗಳೂರು	ಹಾಲುಗುಲ, ಹಾವುಗುಲ, ಕಚ್‌ಕುಲ	________do________	---	---
೩	ಮೂಡಿಗೆರೆ	ಹಾಲುಗುಲ, ಹಾವುಗುಲ,	ತಮಿಳೈನೆವಾಲು,	---	---

		ಕುಕ್ಕುಲ, ಕಚ್‌ಕುಲ, ಬೆಣ್ಣೆಕುಲ, ಬೆಳ್ಳಿಕುಲ, ನಾಗರಕುಲ, ಉಡುಗುಲ, ಮುತ್ತುಗಕುಲ	ಕಣಿಗೆಳೈನೆವಾಲು, ಕಂಚಮೊಲು ಪೋಂಬಿಡಿವಾಲು		
೪	ನರಸಿಂಹರಾಜಪುರ	ಚಾಯಿನ್ನರು, ಉಡುಗುಲ, ಕಸ್ಲೆ, ಕುರುಬಗುಲ, ದೌಳೆ, ಕಕ್ಕುಲ, ಸತ್ತೆಕುಲ, ಹಾಲುಗುಲ	ತಮಿಳೈನೆವಾಲು, ಕಣಿಗೆಳೈನೆವಾಲು, ಕನ್ನಿಗರಮೋಲು	---	ಕವರರ್

ಚಿಕ್ಕಮಗಳೂರು ಜಿಲ್ಲಾ ತಾಲೂಕುವಾರು ಮೇದ ಬುಡಕಟ್ಟಿನ ಸೂಚನಾದಾರರ ವೈವಾಹಿಕ ಸ್ಥಾನಮಾನ ಮತ್ತು ಅವಿಭಕ್ತ ಕುಟುಂಬದ ಮಾಹಿತಿ ಕೋಷ್ಟಕ-೧೧

ಕ್ರ.ಸಂ	ವೈವಾಹಿಕ ಸ್ಥಾನಮಾನ ಹಾಗೂ ಅವಿಭಕ್ತ ಕುಟುಂಬ	ತರೀಕೆರೆ	ಚಿಕ್ಕಮಗಳೂರು	ಮೂಡಿಗೆರೆ	ನರಸಿಂಹರಾಜಪುರ	ಒಟ್ಟು
೧	ಅವಿವಾಹಿತರು	೪೦	೧೨	೬೦	೪೩	೧೮೫
೨	ವಿವಾಹಿತರು	೧೧೩	೪೮	೮೪	೫೩	೨೯೮
೩	ವಿಚ್ಛೇದಿತರು/ಪರಿತ್ಯಜನೆ	---	---	---	---	---
೪	ವಿಧುವೆ/ವಿಧುರ	೨೯	೦೩	೨೦	೦೩	೨೫
೫	ಅವಿಭಕ್ತ ಕುಟುಂಬ	೧೦	೦೮	೦೪	೦೩	೨೫
ಒಟ್ಟು		೧೯೧	೭೧	೧೯೮	೧೦೨	೫೬೩

ಚಿಕ್ಕಮಗಳೂರು ಜಿಲ್ಲಾ ತಾಲೂಕುವಾರು ಕುಟುಂಬಗಳ ರಾಜಕೀಯ ಆಸಕ್ತಿ ಮಾಹಿತಿ ಕೋಷ್ಟಕ-೧೨

ಕ್ರ ಸಂ	ಆಸಕ್ತಿಯ ಕ್ಷೇತ್ರಗಳು	ತರೀಕೆರೆ	ಚಿಕ್ಕಮಗಳೂರು	ಮೂಡಿಗೆರೆ	ನರಸಿಂಹರಾಜಪುರ	ಒಟ್ಟು	ಶೇಕಡಾವಾರು
೧	ಮತ ಚಲಾವಣೆ ಮುಖಾಂತರ ಭಾಗವಹಿಸುವುದು	೧೪೨	೪೨	೧೨೦	೬೨	೩೬೬	೯೮.೧೨%
೨	ಪಕ್ಷದ ಕಾರ್ಯಕರ್ತರಾಗಿ	೧೫	೦೪	೧೨	೦೭	೩೮	೧೦.೧೮%
೩	ಪಕ್ಷದ ಸದಸ್ಯರಾಗಿ	೧೬	೧೦	೨೨	೧೬	೬೪	೧೭.೧೫%
೪	ಸಂಘಟಕರಾಗಿ/ಮುಂದಾಳುಗಳಾಗಿ	೦೬	೦೩	೦೭	೦೮	೨೪	೬.೪೩%
೫	ಸ್ಪರ್ಧಿಗಳಾಗಿ	೦೫	೦೨	೦೭	೦೬	೨೦	೫.೩೬%

ಸೂಚನಾದಾರರ ಆದಾಯದ ಮೂಲದ ಮಾಹಿತಿ ಕೋಷ್ಟಕ–೧೩

ಕ್ರ ಸಂ	ಆದಾಯದ ಮೂಲ	ಆವೃತ್ತ	ಶೇಕಡಾವಾರು
೧	ಬಿದಿರಿನ ಕೆಲಸ	೧೬೫೬/೧೮೪೪	೮೯.೬೧%
೨	ವ್ಯಾಪಾರ	೧೧೨/೧೮೪೪	೬.೦೬%
೩	ವ್ಯವಸಾಯ	೫೨೪/೧೮೪೪	೨೮.೩೫%
೪	ಖಾಸಗಿ ಕೆಲಸ	೭೨/೧೮೪೪	೩.೮೯%
೫	ಸರ್ಕಾರಿ ಕೆಲಸ	೭೨/೧೮೪೪	೮.೮೨%
೬	ಕೂಲಿ	೧೬೩/೧೮೪೪	೮.೮೨%
೭	ಹೈನುಗಾರಿಕೆ	೨೫೩/೧೮೪೪	೧೩.೬೯%
೮	ಇತರೆ	೧೨೧/೧೮೪೪	೬.೫೪%

ಕುಟುಂಬದ ಮಾಸಿಕ ಆರ್ಥಿಕ ಮಾಹಿತಿ ಕೋಷ್ಟಕ–೧೪

ಕ್ರ ಸಂ	ಆರ್ಥಿಕ (ರೂಗಳಲ್ಲಿ)	ಆವೃತ್ತಿ	ಶೇಕಡವಾರು
೧	೨,೦೦೦ಕ್ಕಿಂತ ಕಡಿಮೆ	೨೩೬	೬೩.೭೭%
೨	೨,೦೦೧–೪,೦೦೦	೨೭	೭.೨೩%
೩	೪,೦೦೧–೬,೦೦೦	೧೫	೪.೦೨%
೪	೬,೦೦೧–೮,೦೦೦	೧೪	೩.೭೫%
೫	೮,೦೦೧–೧೦,೦೦೦	೬೪	೧೭.೧೫%
೬	೧೦,೦೦೦ಕ್ಕಿಂತ ಹೆಚ್ಚು	೧೭	೪.೫೫%

ಸೂಚನಾದಾರರ ಕುಟುಂಬದ ಮಾಹಿತಿ ಕೋಷ್ಟಕ–೧೫

ಕ್ರ ಸಂ	ವಾರ್ಷಿಕ ಆರ್ಥಿಕತೆ	ಆವೃತ್ತಿ	ಶೇಕಡಾವಾರು
೧	೧೦,೦೦೦–೨೦,೦೦೦	೨೩೧	೬೧.೯೩%
೨	೨೦,೦೦೦–೩೦,೦೦೦	೨೭	೭.೨೩%
೩	೩೦,೦೦೦–೪೦,೦೦೦	೧೬	೪.೨೮%
೪	೪೦,೦೦೦–೫೦,೦೦೦	೧೧	೨.೯೪%
೫	೫೦,೦೦೦–೬೦,೦೦೦	೦೮	೨.೧೪%
೬	೬೦,೦೦೦–೭೦,೦೦೦	೦೫	೧.೩೪%
೭	೭೦,೦೦೦–೮೦,೦೦೦	೧೫	೪.೦೨%
೮	೮೦,೦೦೦–೯೦,೦೦೦	೧೬	೪.೨೮%
೯	೯೦,೦೦೦–೧,೦೦,೦೦೦	೪೧	೧೦.೯೯%
೧೦	೧,೦೦,೦೦೦ಕ್ಕಿಂತ ಹೆಚ್ಚು	೩	೦.೮೦%
	ಒಟ್ಟು	೩೭೩	೧೦೦.೦೦%

ಕುಟುಂಬವಾರು ಮೇದಾರಿಕೆ ವೃತ್ತಿಯ ತೃಪ್ತಿ ಮತ್ತು ವೃತ್ತಿ ಬದಲಾವಣೆಯ ಮಾಹಿತಿ ಕೋಷ್ಟಕ–೧೬

ಕ್ರ ಸಂ	ಮೇದಾರಿಕೆ ವೃತ್ತಿ, ತೃಪ್ತಿಯ ವಿವರ	ಆವೃತ್ತಿ	ಶೇಕಡಾವಾರು	ವೃತ್ತಿ ಬದಲಾವಣೆ ವಿವರ	ಆವೃತ್ತಿ	ಶೇಕಡಾವಾರು
೧	ತೃಪ್ತಿಯಿಲ್ಲ	೩೦೫	೮೧.೭೬%	ಬದಲಾವಣೆ ಬಯಸುತ್ತೇವೆ	೨೫೬	೬೮.೬೩%
೨	ಸಾಧಾರಣ	೩೭	೯.೯೧%	ಬದಲಾವಣೆ ಬಯಸುವುದಿಲ್ಲ	೯೮	೨೬.೨೭%
೩	ತೃಪ್ತಿಯಿದೆ	೩೧	೮.೩೧%	ತಟಸ್ಥ	೧೯	೫.೦೯%
೪	ಒಟ್ಟು	೩೭೩	೧೦೦%	ಒಟ್ಟು	೩೭೩	೧೦೦%

ಸೂಚನಾದಾರರು ಸಾಲ ಮಾಡಲು ಕಾರಣಗಳ ಮಾಹಿತಿ ಕೋಷ್ಟಕ-೧೭

ಕ್ರ ಸಂ	ಸಾಲ ಮಾಡಲು ಕಾರಣಗಳು	ಆವೃತ್ತಿ	ಶೇಕಡಾವಾರು
೧	ವಿವಾಹದ ಖರ್ಚಿಗಾಗಿ	೧೧೮	೩೧.೬೩%
೨	ವರದಕ್ಷಿಣೆ ಕೊಡುವ ಸಲುವಾಗಿ	೭೩	೧೯.೫೭%
೩	ಮನೆಕಟ್ಟಲು/ಕೊಳ್ಳಲು ಮುಂತಾದವುಗಳಿಗಾಗಿ	೩೬	೯.೬೫%
೪	ಜಮೀನು/ಸೈಟುಕೊಳ್ಳಲು	೨೪	೬.೪೩%
೫	ಮಕ್ಕಳ ವಿದ್ಯಾಭ್ಯಾಸಕ್ಕಾಗಿ	೬೫	೧೭.೪೨%
೬	ಅನಾರೋಗ್ಯಕ್ಕಾಗಿ	೪೮	೧೨.೮೬%
೭	ಹಬ್ಬ-ಹರಿದಿನಗಳ ಆಚರಣೆಗಾಗಿ	೩೨	೮.೫೭%
೮	ಉತ್ತರ ಕ್ರಿಯೆಗಾಗಿ	೨೨	೫.೮೯%
೯	ಸೀಮಂತ/ನಾಮಕರಣಕ್ಕಾಗಿ	೫೭	೧೫.೨೮%
೧೦	ಕೃಷಿ ಅಭಿವೃದ್ಧಿಗಾಗಿ	೪೮	೧೨.೮೬%
೧೧	ವಾಹನ ಖರೀದಿಗಾಗಿ	೦೩	೦.೮೦%
೧೨	ಪಶುಸಂಗೋಪನೆಗಾಗಿ	೨೧	೫.೬೩%
೧೩	ಸಾಲ ತೀರಿಸಲು	೭೭	೨೦.೬೪%
೧೪	ಬೆಲೆ ಬಾಳುವ ವಸ್ತು ಖರೀದಿಸಲು	೩೧	೮.೩೧%

ಕುಟುಂಬವಾರು ಪಡೆದಿರುವ ಸಾಲದ ಮೂಲದ ಮಾಹಿತಿ ಕೋಷ್ಟಕ-೧೮

ಕ್ರ ಸಂ	ಸಾಲದ ಮೂಲ	ಆವೃತ್ತಿ	ಶೇಕಡಾವಾರು
೧	ರಾಷ್ಟ್ರೀಕೃತ ಬ್ಯಾಂಕ್	೩೯	೧೦.೪೫%
೨	ಖಾಸಗಿ ಬ್ಯಾಂಕ್	೭೨	೧೯.೩೦
೩	ಸಹಕಾರ ಬ್ಯಾಂಕ್	೧೨೮	೩೪.೩೧%
೪	ಸ್ವ-ಸಹಾಯ ಸಂಘ	೨೧೮	೫೮.೪೪%
೫	ಲೇವಾದೇವಿಗಾರರು/ಗಿರವಿರಯವರು	೬೨	೧೬.೬೨%
೬	ನೆರೆಹೊರೆಯವರು	೪೨	೧೧.೨೬%
೭	ಬಂಧುಗಳು	೨೨	೫.೮೯%
೮	ಕೆಲಸ ಮಾಡುವಲ್ಲಿ ಮಾಲೀಕರು	೩೫	೯.೩೮%

ಸೂಚನಾದಾರರ ಕುಟುಂಬದ ಮಾಹಿತಿ ಕೋಷ್ಟಕ–೧೫

ಕ್ರ ಸಂ	ವಾರ್ಷಿಕ ಆರ್ಥಿಕತೆ	ಆವೃತ್ತಿ	ಶೇಕಡಾವಾರು
೧	೧೦,೦೦೦–೨೦,೦೦೦	೨೩೧	೬೧.೯೩%
೨	೨೦,೦೦೦–೩೦,೦೦೦	೨೭	೭.೨೩%
೩	೩೦,೦೦೦–೪೦,೦೦೦	೧೬	೪.೨೮%
೪	೪೦,೦೦೦–೫೦,೦೦೦	೧೧	೨.೯೪%
೫	೫೦,೦೦೦–೬೦,೦೦೦	೦೮	೨.೧೪%
೬	೬೦,೦೦೦–೭೦,೦೦೦	೦೫	೧.೩೪%
೭	೭೦,೦೦೦–೮೦,೦೦೦	೧೫	೪.೦೨%
೮	೮೦,೦೦೦–೯೦,೦೦೦	೧೬	೪.೨೮%
೯	೯೦,೦೦೦–೧,೦೦,೦೦೦	೪೧	೧೦.೯೯%
೧೦	೧,೦೦,೦೦೦ಕ್ಕಿಂತ ಹೆಚ್ಚು	೩	೦.೮೦%
	ಒಟ್ಟು	೩೭೩	೧೦೦.೦೦%

ಕುಟುಂಬವಾರು ಮೇದಾರಿಕೆ ವೃತ್ತಿಯ ತೃಪ್ತಿ ಮತ್ತು ವೃತ್ತಿ ಬದಲಾವಣೆಯ ಮಾಹಿತಿ ಕೋಷ್ಟಕ–೧೬

ಕ್ರ ಸಂ	ಮೇದಾರಿಕೆ ವೃತ್ತಿ, ತೃಪ್ತಿಯ ವಿವರ	ಆವೃತ್ತಿ	ಶೇಕಡಾವಾರು	ವೃತ್ತಿ ಬದಲಾವಣೆ ವಿವರ	ಆವೃತ್ತಿ	ಶೇಕಡಾವಾರು
೧	ತೃಪ್ತಿಯಿಲ್ಲ	೩೦೫	೮೧.೭೬%	ಬದಲಾವಣೆ ಬಯಸುತ್ತೇವೆ	೨೫೬	೬೮.೬೩%
೨	ಸಾಧಾರಣ	೩೭	೯.೯೧%	ಬದಲಾವಣೆ ಬಯಸುವುದಿಲ್ಲ	೯೮	೨೬.೨೭%
೩	ತೃಪ್ತಿಯಿದೆ	೩೧	೮.೩೧%	ತಟಸ್ಥ	೧೯	೫.೦೯%
೪	ಒಟ್ಟು	೩೭೩	೧೦೦%	ಒಟ್ಟು	೩೭೩	೧೦೦%

ಸೂಚನಾದಾರರು ಸಾಲ ಮಾಡಲು ಕಾರಣಗಳ ಮಾಹಿತಿ ಕೋಷ್ಟಕ-೧೭

ಕ್ರ ಸಂ	ಸಾಲ ಮಾಡಲು ಕಾರಣಗಳು	ಆವೃತ್ತಿ	ಶೇಕಡಾವಾರು
೧	ವಿವಾಹದ ಖರ್ಚಿಗಾಗಿ	೧೧೮	೩೧.೬೩%
೨	ವರದಕ್ಷಿಣೆ ಕೊಡುವ ಸಲುವಾಗಿ	೭೩	೧೯.೫೭%
೩	ಮನೆಕಟ್ಟಲು/ಕೊಳ್ಳಲು ಮುಂತಾದವುಗಳಿಗಾಗಿ	೩೬	೯.೬೫%
೪	ಜಮೀನು/ಸೈಟುಕೊಳ್ಳಲು	೨೪	೬.೪೩%
೫	ಮಕ್ಕಳ ವಿದ್ಯಾಭ್ಯಾಸಕ್ಕಾಗಿ	೬೫	೧೭.೪೨%
೬	ಅನಾರೋಗ್ಯಕ್ಕಾಗಿ	೪೮	೧೨.೮೬%
೭	ಹಬ್ಬ-ಹರಿದಿನಗಳ ಆಚರಣೆಗಾಗಿ	೩೨	೮.೫೭%
೮	ಉತ್ತರ ಕ್ರಿಯೆಗಾಗಿ	೨೨	೫.೮೯%
೯	ಸೀಮಂತ/ನಾಮಕರಣಕ್ಕಾಗಿ	೫೭	೧೫.೨೮%
೧೦	ಕೃಷಿ ಅಭಿವೃದ್ಧಿಗಾಗಿ	೪೮	೧೨.೮೬%
೧೧	ವಾಹನ ಖರೀದಿಗಾಗಿ	೦೩	೦.೮೦%
೧೨	ಪಶುಸಂಗೋಪನೆಗಾಗಿ	೨೧	೫.೬೩%
೧೩	ಸಾಲ ತೀರಿಸಲು	೭೭	೨೦.೬೪%
೧೪	ಬೆಲೆ ಬಾಳುವ ವಸ್ತು ಖರೀದಿಸಲು	೩೧	೮.೩೧%

ಕುಟುಂಬವಾರು ಪಡೆದಿರುವ ಸಾಲದ ಮೂಲದ ಮಾಹಿತಿ ಕೋಷ್ಟಕ-೧೮

ಕ್ರ ಸಂ	ಸಾಲದ ಮೂಲ	ಆವೃತ್ತಿ	ಶೇಕಡಾವಾರು
೧	ರಾಷ್ಟ್ರೀಕೃತ ಬ್ಯಾಂಕ್	೩೯	೧೦.೪೫%
೨	ಖಾಸಗಿ ಬ್ಯಾಂಕ್	೭೨	೧೯.೩೦
೩	ಸಹಕಾರ ಬ್ಯಾಂಕ್	೧೨೮	೩೪.೩೧%
೪	ಸ್ವ-ಸಹಾಯ ಸಂಘ	೨೧೮	೫೮.೪೪%
೫	ಲೇವಾದೇವಿಗಾರರು/ಗಿರವಿರಯವರು	೬೨	೧೬.೬೨%
೬	ನೆರೆಹೊರೆಯವರು	೪೨	೧೧.೨೬%
೭	ಬಂಧುಗಳು	೨೨	೫.೮೯%
೮	ಕೆಲಸ ಮಾಡುವಲ್ಲಿ ಮಾಲೀಕರು	೩೫	೯.೩೮%

೯	ಸ್ನೇಹಿತರುಗಳು	೪೪	೧೧.೭೯%
೧೦	ಲ್ಯಾಂಪ್ಸ್ ಸೊಸೈಟಿ	೧೮೦	೪೮.೨೫%
೧೧	ರಬ್ಬರ್ ಬೋರ್ಡ್	೦೪	೧.೦೭%

ಸೂಚನಾದಾರರು ಸಾಲವನ್ನು ತೀರಿಸುವ ಮಾಹಿತಿ ಕೋಷ್ಟಕ-೧೯

ಕ್ರ ಸಂ	ಸಾಲ ಹಿಂತಿರುಗಿಸುವ ಸ್ವರೂಪ	ಆವೃತ್ತಿ	ಶೇಕಡವಾರು
೧	ದುಡಿಮೆಯಿಂದ	೩೭೩	೧೦೦%
೨	ಬೆಲೆ ಬಾಳುವ ವಸ್ತುಗಳನ್ನು ಮಾರುವುದು	೧೮೧	೪೮.೫೨%
೩	ಆಮೀನು/ಮನೆಯನ್ನು ಮಾರುವುದು	೬೫	೧೭.೪೨%
೪	ಸಾಲವನ್ನು ಮಾಡುವುದು	೩೧೮	೮೫.೨೫%

ಸೂಚನಾದಾರರದ ಉಳಿತಾಯದ ಮಾಹಿತಿ ಕೋಷ್ಟಕ – ೨೦

ಉಳಿತಾಯದ ಮೂಲದ ವಿವರ	ಆವೃತ್ತಿ (n-373)	ಶೇಕಡವಾರು
ಬ್ಯಾಂಕ್	೧೩೨	೩೫.೩೮
ಅಂಚೆಕಛೇರಿ	೩೬	೯.೬೫
ಸಣ್ಣ ಉಳಿತಾಯ ಪತ್ರ	೬೧	೧೬.೩೫
ಜೀವ ವಿಮೆ	೧೫೮	೪೨.೩೫
ಭವಿಷ್ಯ ನಿಧಿ	೭೯	೨೧.೧೭
ಷೇರು ಪತ್ರ	೦೩	೦.೮೦
ಚೀಟಿ/ಫಂಡ್	೬೭	೧೭.೯೬
ಸ್ವ-ಸಹಾಯ ಸಂಘ	೨೧೨	೫೬.೮೩
ಮನೆಯಲ್ಲಿಯೇ	೬೪	೧೭.೧೫

ಮೇದ ಮಹಿಳೆಯರು ತೆಗೆದುಕೊಳ್ಳುವ ನಿರ್ಣಯಗಳ ಮಾಹಿತಿ ಕೋಷ್ಟಕ – ೨೧

ಕ್ರ.ಸಂ	ನಿರ್ಣಯ ತೆಗೆದುಕೊಳ್ಳುವ ಅಂಶಗಳು	ಆವೃತ್ತಿ	ಶೇಕಡವಾರು
೦೧	ವಿವಾಹವಾಗ ಬಯಸುವ ಹೆಣ್ಣಿನ ಅಭಿಪ್ರಾಯ	೬೧೮/೯೧೫	೬೭.೫೪
೦೨	ಕುಟುಂಬದಲ್ಲಿನ ವಿವಾಹವನ್ನು ಗೊತ್ತುಪಡಿಸುವಲ್ಲಿ	೭೦೩/೯೧೫	೭೬.೮೩
೦೩	ಸ್ಥಿರಾಸ್ತಿ ಹಾಗೂ ಚರಾಸ್ತಿ ವಿಷಯದಲ್ಲಿ	೬೭೭/೯೧೫	೭೩.೯೮
೦೪	ಮಕ್ಕಳ ವಿದ್ಯಾಭ್ಯಾಸ ವಿಷಯದಲ್ಲಿ	೬೮೧/೯೧೫	೭೪.೪೨
೦೫	ಕುಟುಂಬದ ಒಟ್ಟು ತೀರ್ಮಾನದಲ್ಲಿ	೬೫೩/೯೧೫	೭೧.೩೬
೦೬	ಉಳಿತಾಯದ ತೀರ್ಮಾನ ತೆಗೆದುಕೊಳ್ಳುವಾಗ	೭೦೯/೯೧೫	೭೭.೪೮
೦೭	ಸಾಲವನ್ನು ಮಾಡುವಾಗ	೫೫೨/೯೧೫	೬೦.೩೨
೦೮	ರಾಜಕೀಯ ಪ್ರತಿನಿಧೀಕರಣ ನಿರ್ಣಯಿಸುವಾಗ	೩೪೭/೯೧೫	೩೭.೯೨

ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಾಕ್ಷರತೆ : ಪರಿಶಿಷ್ಟ ಪಂಗಡ – ೨೦೦೧

ಜಿಲ್ಲೆ	ಪ್ರದೇಶ	ಸಾಕ್ಷರತಾ ಪ್ರಮಾಣ		
		ಒಟ್ಟು	ಪುರುಷರು	ಮಹಿಳೆಯರು
ಚಿಕ್ಕಮಗಳೂರು	ಒಟ್ಟು	೫೮.೮	೬೮.೨	೪೯.೪
	ಗ್ರಾಮೀಣ	೫೬.೯	೬೬.೪	೪೭.೪
	ನಗರ	೭೭.೫	೮೪.೫	೬೯.೮

ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ಬುಡಕಟ್ಟು ಜನಸಂಖ್ಯೆ, ಸಾಕ್ಷರತೆ ಹಾಗೂ ದುಡಿಮೆಗಾರ ವಿವರ

ಕ್ರ.ಸಂ	ಜಿಲ್ಲೆ	ಒಟ್ಟು ಗ್ರಾಮೀಣ ನಗರ	ಬುಡಕಟ್ಟು ಕುಟುಂಬಗಳು	ಒಟ್ಟು ಬುಡಕಟ್ಟು ಜನಸಂಖ್ಯೆ			ಬುಡಕಟ್ಟು ಜನಸಂಖ್ಯೆ (ವಯೋಗುಂಪುಗಳಲ್ಲಿ) (೦–೬ ವರ್ಷ)		
				ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು
೧	೨	೩	೪	೫	೬	೭	೮	೯	೧೦
೧	ಚಿಕ್ಕಮಗಳೂರು	ಒಟ್ಟು	೫,೩೭೪	೨೬,೫೩೪	೧೩,೪೪೬	೧೩,೦೮೮	೪,೩೨೩	೨,೧೫೮	೨,೧೬೫
		ಗ್ರಾಮೀಣ	೪,೯೫೯	೨೪,೫೫೩	೧೨,೪೧೧	೧೨,೧೪೨	೩,೯೯೮	೧,೯೯೦	೨,೦೦೮
		ನಗರ	೪೧೫	೧,೯೮೧	೧,೦೨೫	೯೪೬	೩೨೫	೧೬೮	೧೫೭

ಚಿಕ್ಕಮಗಳೂರು ಜಿಲ್ಲಾವಾರು ಗ್ರಾಮೀಣ ಮತ್ತು ನಗರ ಸ್ತ್ರೀ-ಪುರುಷರ ಸಾಕ್ಷರತೆಯ ಮಾಹಿತಿ ಕೋಷ್ಟಕ

ಕ್ರ.ಸಂ	ಜಿಲ್ಲೆ	ಒಟ್ಟು ಗ್ರಾಮೀಣ ನಗರ	ಬುಡಕಟ್ಟು ಕುಟುಂಬಗಳು	ಒಟ್ಟು ಬುಡಕಟ್ಟು ಜನಸಂಖ್ಯೆ			ಶೇಕಡವಾರು ಸಾಕ್ಷರತೆ		
				ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು
೧	ಚಿಕ್ಕಮಗಳೂರು	ಒಟ್ಟು	೩೭೩	೧,೮೪೮	೯೩೩ ೫೦.೪೮%	೯೧೫ ೪೯.೫೧%	೧೦೫೯ ೫೭.೩೦%	೫೭೩ ೬೧.೪೧%	೪೮೬ ೫೨.೦೯%
		ಗ್ರಾಮೀಣ	೧೩೯ ೩೭.೨೬%	೧೧೪೪ ೬೧.೯೦%	೫೭೧ ೪೯.೯೧%	೫೭೩ ೫೦.೦೮%	೭೫೪ ೬೫.೯೦%	೪೦೧ ೭೦.೨೨%	೩೫೩ ೬೧.೬೦%
		ನಗರ	೨೩೪ ೬೨.೭೩%	೭೦೪ ೩೮.೦೯%	೩೬೨ ೫೧.೪೨%	೩೪೨ ೪೮.೫೭%	೩೦೫ ೪೩.೩೨%	೧೭೨ ೪೭.೫೧%	೧೩೩ ೩೮.೮೮%

ಕೋಷ್ಟಕ : ಸಾಕ್ಷರತೆ ಜನಗಣತಿ ಮಾಹಿತಿ: ೨೦೦೧

ಕ್ರ.ಸಂ	ವಿವರಗಳು	ಒಟ್ಟು	ಮಹಿಳೆಯರು	ಪುರುಷರು
೧	ರಾಜ್ಯದ ಒಟ್ಟು ಜನಸಂಖ್ಯೆ	ಶೇ ೬೭.೦೪	೫೭.೪೫	೭೬.೨೯
೨	ಪರಿಶಿಷ್ಟ ಜಾತಿ	ಶೇ ೫೨.೯೦	೪೧.೭	೬೩.೮
೩	ಅಂತರ : ಪರಿಶಿಷ್ಟ ಜಾತಿ (೧-೨)	-೧೪.೧೪	-೧೫.೭೫	-೧೨.೪೯
೪	ಅಂತರ : ಪರಿಶಿಷ್ಟ ಪಂಗಡ (೧-೩)	-೧೮.೭೪	-೨೦.೮೫	-೧೬.೫೯



ಮೇದರ ಕುಲದೇವತೆ ಶ್ರೀ ಅಂತರಘಟ್ಟಮ್ಮ, ನರಸಿಂಹರಾಜಪುರ



ಶ್ರೀ ರೇಣುಕಾ ಯಲ್ಲಮ್ಮ ದೇವಿಯ ಜಾತ್ರೋತ್ಸವ ಪೂಜೆ, ಬೆಂಗಳೂರು




ಶ್ರೀ ಅಂತರಘಟ್ಟಮ್ಮನಿಗೆ ಫಲಾಮೃತ ಸೇವೆ



ಚೌಡಿಹರಕೆ, ನರಸಿಂಹರಾಜಪುರ



ಏಳು ಮಕ್ಕಳ ಚೌಡಿ ಪರಿವಾರಕ್ಕೆ ಪೂಜೆ



ಭೂತಪ್ಪನಿಗೆ ಚೆರಿಗೆ ಅರ್ಪಣೆ



ಮೊರಮುಟ್ಟಿಸುವ (ಋತುಮತಿ) ಶಾಸ್ತ್ರ



ಮೇದರ ಮದ್ಲಿಂಗ ಶಾಸ್ತ್ರ




ಕಂಕಣಕಟ್ಟುವ ಶಾಸ್ತ್ರದಲ್ಲಿ ಪಾಲ್ಗೊಂಡ ಮೇದ ಮಹಿಳೆಯರು



ಬಯಕೆಶಾಸ್ತ್ರ



ಮೇದರ ನಾಮಕರಣಶಾಸ್ತ್ರ



ಬಿದಿರು ಕಡಿಯುತ್ತಿರುವ ಮೇದ



ಕಟ್ಟೆರೋಗ ಸೂಚಕವಾಗಿ ಬಿದಿರು ಹೂ ಬಿಟ್ಟಿರುವುದು



ಬಿದಿರು ಕಡಿದು ಊಟ ಮಾಡುತ್ತಿರುವ ಮೇದರು



ಕಾಡಿನಿಂದ ಬಿದಿರನ್ನು ಹೊತ್ತು ತರುತ್ತಿರುವ ಮೇದರು



ಮೇದಾರಿಕೆಯಲ್ಲಿ ತೊಡಗಿರುವ ಮೇದರು, ಮೂಡಿಗೆರೆ



ಕಾಡಿನ ಅಂಚಿನ ಮೇದರ ನೆಲೆ, ಉಡೇವು



ಮೇದಾರಿಕೆಯಲ್ಲಿ ತೊಡಗಿರುವ ಮೇದರು, ತರೀಕೆರೆ



ಕೊಂಗ ಹೆಣೆಯುತ್ತಿರುವ ಮೇದರ ವೃದ್ಧೆ, ಆಲ್ದೂರು



ಮೇದರ ಸಂದರ್ಶನದಲ್ಲಿ ಸಂಶೋಧಕರು, ನರಸಿಂಹರಾಜಪುರ



ಬಿದಿರಿನ ಉತ್ಪನ್ನಗಳೊಂದಿಗೆ ಮೇದರು, ನರಸಿಂಹರಾಜಪುರ



ಸಂತೆಯಲ್ಲಿ ಬಿದಿರಿನ ಉತ್ಪನ್ನಗಳ ಮಾರಾಟದಲ್ಲಿ ಮೇದರು, ಭದ್ರಾವತಿ



ಮೇದರ ಕರಕುಶಲತೆಯಿಂದ ತಯಾರಾದ ಬಿದಿರಿನ ಉತ್ಪನ್ನಗಳು



ಮಾರಾಟಕ್ಕಿಟ್ಟಿರುವ ಹಣ್ಣು, ಕಾಯಿ ಬುಟ್ಟಿ, ಹುಲಿಗಿ



ಬಿದಿರಿನ ಚಾಪೆಯ ಗೋಡೆ



ಅಲಂಕಾರಿಕ ಮೇಲ್ಹಾವಣೆಯಲ್ಲಿ ಬಳಕೆಯಾಗಿರುವ ಬಿದಿರು, ಭುವನ ವಿಜಯ, ಕನ್ನಡ ವಿ. ವಿ. ಹಂಪಿ



ಮೇದರ ಓಣಿಯಲ್ಲಿ ಮೇದಾರಿಕೆ, ಎ. ರಂಗಾಪುರ, ತರೀಕೆರೆ



ತಮಿಳು ಮೇದರು ಬಳಸುವ ಮೇದಾರಿಕೆಯ ಹತಾರಗಳು, ಉಪ್ಪಾರ ಬೀರನಹಳ್ಳಿ, ಲಕ್ಕವಳ್ಳಿ



ಮೆಂತೆ ಬಳಿದ ಮೊರಗಳು, ಬಿಳಗುಳ ಆಶ್ರಯ ಕಾಲೋನಿ, ಮೂಡಿಗೆರೆ




ಮೊರದ ಪೆಂಡಿ ಕಟ್ಟುತ್ತಿರುವ ಮೇದರು



ಬಿದಿರಿನ ಉತ್ಪನ್ನಗಳ ಮಾರಾಟ, ಚಿಕ್ಕಮಗಳೂರು



ಮೊಲದ ಸೋಬೇಟೆಯ ಪೂರ್ವ ಸಿದ್ಧತೆ, ದುರ್ಗೀಗೆರೆ



ಮೊಲದ ಶಿಕಾರಿಗೆ ಬಳಸುತ್ತಿದ್ದ ಸೆಣಬಿನ ಬಲೆ



ತಂತಿ ಬಲೆಯಿಂದ ಮೊಲ ಶಿಕಾರಿ, ನರಸಿಂಹರಾಜಪುರ



ರಾತ್ರಿ ವೇಳೆ 'ಸೀರೆ ಬೇಟೆ'ಯಿಂದ ಸೊಸಲು ಮೀನು ಹಿಡಿಯುತ್ತಿರುವುದು, ನರಸಿಂಹರಾಜಪುರ



ಭದ್ರಾ ಡ್ಯಾಂ ಹಿನ್ನೀರಿನ ಸೀರೆ ಬೇಟೆ ಮೀನು, ನರಸಿಂಹರಾಜಪುರ



